ದೀಪಾವಳಿ ಸಂಚಿಕೆ

ನವಂಬರ
೧೯೪೦

ಪಂಡಿತ ತಾರಾನಾಥರು, ಆಲೂರ ವೆಂಕಟರಾಯರು, ದೊರೆಸ್ವಾಮಿ ಅಯ್ಯಂಗಾರ್, ಪ್ರೊ. ವಿ. ಜಿ. ಕುಲಕರ್ಣಿ, ಪ್ರೊ. ಕುಂದಣಗಾರ್, ಪ್ರೊ. ಎನ್. ಎಂ. ಕುಲಕರ್ಣಿ, 'ಅಂಬಿಕಾತನಯದತ್ತ' ವಿ. ಸೀತಾರಾಮಯ್ಯ, ಸಾಲಿ ರಾಮಚಂದ್ರರಾಯರು, 'ಶ್ರೀರಂಗ', ಕೋ. ಶಿ. ಕಾರಂತ, ಕುಡ್ಲಿ ವಾಸುದೇವ ಶೆಣೈ, ಎನ್. ಕೆ. ಕುಲಕರ್ಣಿ.

ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆಯೆಚ್ಚಸೇರಿ ೩—೦—೦ ..... ವ್ಹಿ. ಪಿ. ಯಿಂದ ೩–೫–೦ ..... ಬಿಡಿಸಂಚಿಕೆಗೆ ೪ ಆಣೆ,

ಸಂಪಾದಕರು :

ಪಾಟೀಲ ಮಾಧವರಾಯರು ಬೆಟಗೇರಿ ಕೃಷ್ಣಶರ್ಮರು

೩ನೆಯ ವರ್ಷ	ನವ್ಹಂಬರ್ ೧೯೪೦	೭ನೆಯ ಸಂಚಿಕೆ

ಮುಖ್ಯವಿಷಯಗಳ ಪರಿವಿಡಿ

ಕನ್ನಡದ ದೀಪವದು ಕಾಣದಿಹುದು! (ಕವನ) ..	'ಕಾವ್ಯಾನಂದ'	೩೩೯
ಸಂಪಾದಕೀಯ	ಸಂಪಾದಕರು	೩೪೦
ಮಂಗನ ಮಲ್ಲಿನಾಥತನ	ಶ್ರೀ. 'ಮಲ್ಲಿನಾಥ'	೩೪೧
ಕರ್ನಾಟಕತ್ವವೇ ನಮ್ಮ ದೀಪಸ್ತಂಭ (ಪ್ರಬಂಧ)	ಶ್ರೀ. ಆಲೂರಿ ವೆಂಕಟರಾಯರು, ಎಲ್.ಎಲ್. ಬಿ.	೩೪೩
ಲಕ್ಷ್ಮೀಪತಿ (ವಿಚಾರಪ್ರಜೋದಕ ಪ್ರಬಂಧ)	ಶ್ರೀ. ದೊರೆಸ್ವಾಮಿ ಅಯ್ಯಂಗಾರ್, ಎಂ.ಎ.,ಬಿ.ಎಲ್.	೩೪೪
ದಿವಾಳಿಯ ದಶಮಗ್ರಹ (ಏಕಾಂಕ ನಾಟಕ)	ಶ್ರೀ. ಎನ್. ಕೆ. ಕುಲಕರ್ಣಿ, ಎಂ. ಎ., ಬಿ. ಟಿ.	೩೪೭
ಸ್ತ್ರೀ ಪ್ರಸಾಧನ (ಅಲಂಕಾರ ವಿಚಾರ)	ಪ್ರೊ. ಕೆ. ಜಿ. ಕುಂದಣಗಾರ, ಎಂ. ಎ.	೩೫೪
ಹಿಂದುಮುಂದಿನೆಣಿಕೆಯೇಕೆ? (ಕವನ)	ಶ್ರೀ. ಮೊಗೇರಿ ಗೋಪಾಲಕೃಷ್ಣ ಅಡಿಗ	೩೫೮
ತರ್ಕತಂತ್ರ (ಹರಟೆ)	ಪ್ರೊ. ಎನ್. ಎಂ. ಕುಲಕರ್ಣಿ, ಎಂ. ಎ.	೩೫೯
ಮದುವೆ, ಮದುಮಕ್ಕಳು, ಮದುಬಾಳು (ವಿ. ಪ್ರ. ಪ್ರ.) ..	ಶ್ರೀ. ಜೋಗಳೇಕರ್ ಪಾಂಡುರಂಗರಾಯರು, ಬಿ,ಎ.	೩೬೩
ಸಾರಾಸಾರ ವಿಚಾರ (ಕವನ)..	ಶ್ರೀ. 'ಶ್ರೀಧರ' ಪುಣೆ	೩೬೯
ಸಾರಸ್ವತರೂ ಕರ್ನಾಟಕವೂ (ವಿವೇಚನಾತ್ಮಕ ಲೇಖ) ..	ಶ್ರೀ. ತಲಜೇರಿ ರಂಗರಾಯರು, ಬಿ.ಎ, ಎಲ್.ಎಲ್.ಬಿ.	೩೭೦
ಬೆಳವೀರಾಯರು (ವ್ಯಕ್ತಿಪರಿಚಯ)	ಶ್ರೀ. ಚಿಕ್ಕೊಡಿ ಅನಂತರಾಯರು	೩೭೩
ದೀಪಾವಳಿ ಕ್ಷೌರ (ವಿನೋದ ಪ್ರಬಂಧ)	ಶ್ರೀ. ಕೈ. ರಾಜಾರಾಯರು, ಬಿ. ಎ.	೩೭೫
ಶಿವನಯನ ಲೀಲೆ (ಕವನ)	ಶ್ರೀ. 'ಅಂಬಿಕಾತನಯದತ್ತ'	೩೭೬
ನೀನಾರೆ? (ಕವನ)	ಶ್ರೀ. ವಿ. ಸೀತಾರಾಮಯ್ಯನವರು, ಎಂ. ಎ.	೩೭೭
ಅವರ್ಣನೀಯ ಅರ್ವಾಚೀನ ಸೌಂದರ್ಯ (ವಿಮರ್ಶಾತ್ಮಕ) ..	ಪ್ರೊ. ವಿ. ಜಿ. ಕುಲಕರ್ಣಿ, ಎಂ. ಎ., ಎಲ್.ಎಲ್. ಬಿ.	೩೭೭
ಸಂಗೀತ ಮೇಷ್ಟ್ರು (ಪ್ರಹಸನ)	ಶ್ರೀ. ಕುಡ್ಪಿ ವಾಸುದೇವ ಶೆಣೈ, ಮಂಗಳೂರು	೩೮೦
ವೆಸ್ಟ್ ಮಿನ್‌ಸ್ಟರ್ ಸ್ಯಾಟ್ಯೂಟ್ (ರಾಜಕೀಯ)	ಶ್ರೀ. ಗು. ಕೃ. ವಾಳ್ವೇಕರ್, ಬಿ. ಎ., ಎಲ್.ಎಲ್. ಬಿ.	೩೮೩
ಬಾಳಿನ ದೀಪಾವಳಿ (ಹಗಲುಗನಸು)	ಶ್ರೀ. ಗು. ಭೀ. ಜೋಶಿ, ಎಂ. ಎ., ಬಿ. ಟಿ.	೩೮೫
ಜಟ ಮತ್ತು ಹಟ (ಹರಟೆ)	ಪ್ರೋ. ಆರ್. ವ್ಹಿ. ಜಾಗೀರದಾರ್. ಎಂ ಎ. (ಲಂಡನ್)	೩೮೯
ರಸಿಕತೆ (ಸ್ವಬಂಧ)	ಶ್ರೀ. ಎಂ. ವಿ. ಸೀತಾರಾಮಯ್ಯ, ಎಂ. ಎ.	೪೦೧
ವಿಲಯವಹ್ನಿ ಜ್ವಾಲೆ (ಕವನ)	ಶ್ರೀ. ಸಾಲಿ ರಾಮಂಜಂಡ್ರರಾಯರು	೪೦೪
ಸಂತಾನ ಸಂಯಮಿ (ವಿನೋದ ಕಥೆ)	ಶ್ರೀ. ಕೆ. ಟಿ. ಪುರಾಣಿಕ, ಬಿ. ಎ., ಬಿ. ಟಿ.	೪೦೫
ನಮ್ಮ ಅವಸ್ಥೆ (ಪರಿಸ್ಥಿತಿ ವಿಮರ್ಶೆ)	ಪಂಡಿತ ತಾರಾನಾಥರಾಯರು	೪೧೧
ಪುಳ್ಳಂಗಾಯುಂಜೆ (ಹರಟೆ)	ಶ್ರೀ. ಕೆ. ವಿ. ರಾಘವಾಚಾರ್ಯ, ಎಂ. ಎ.	೪೧೩
ಸ್ನಾನದ ಸಮಸ್ಯೆ (ಹರಟೆ)	ಶ್ರೀ. ಕುಲಕರ್ಣಿ ಶೇಷಗಿರಿರಾಯರು	೪೧೭
ಜಂಭದ ಜಾನಕಿ (ಏಕಾಂಕ ನಾಟಕ)	ಶ್ರೀ. ಕೋ. ಶಿವರಾಮ ಕಾರಂತ	೪೧೯
ನಮ್ಮ ಹಬ್ಬಗಳು (ಸಮಾಜ ವಿಮರ್ಶೆ)	ಶ್ರೀ. ವಿದರಕುಂದಿ ವೆಂಕಟರಾಯರು	೪೨೬
ನಾಲ್ಕೂ ನಿಟ್ಟಿನ ನೋಟ	'ನಿರೀಕ್ಷಕರು'	೪೨೯



೩ನೆಯ ವರ್ಷ | ನವ್ಹೆಂಬರ್ ೧೯೪೦ | ೩ನೆಯ ಸಂಚಿಕೆ

ಕನ್ನಡದ ದೀಪವದು ಕಾಣದಿಹುದು!

ಕನ್ನಡಕಂದ—ಕಾವ್ಯಾನಂದ

★

೧

ಭಾರತಿಯ ಮನೆಯಲ್ಲಿ ಲಕ್ಷದೀಪಗಳಿಂದು
ನಕ್ಷತ್ರಗಳ ತೆರದಿ ಹೊಳೆಯುತಿಹುವು!
ಪ್ರತಿದೀಪವೂ ತನ್ನ ಸ್ವಾತ್ಮತೇಜವ ಹರಡಿ,
ಹಚ್ಚಿದರ ಬೆಳ್ಜಸವ ಚೆಲ್ಲುತಿಹುವು!

೨

ಮೂಲೆ-ಮೂಲೆಗಳಿಂದ ಕೋಣೆ-ಕೋಣೆಗಳಿಂದ
ಚೈತನ್ಯಜ್ಯೋತಿಯಾ ಬೆಳಕು ಹರಿದು,
ರುಗರುಗಿಸಿ ಹೊಳೆಯುತಿದೆ ಭಾರತಾಂಬೆಯ ಮನೆಯು
ಮುಸುಕಿರ್ದ್ದ ಕತ್ತಲೆಯ ತೆರೆಯು ಸರಿದು!

೩

ಮನೆಯೆಲ್ಲ ಥಳಥಳಿಪ ದೀಪಗಳ ದೀಪ್ತಿಯಲಿ,
ಮಿಂಚುಗಳು ಮೂಡುವಾ ತಾಣವಹುದು!
ಮೂಲೆಗಳು ಬೆಳಗಿದರು ನಡುಮನೆಯು ಕತ್ತಲೆಯು,
ಕನ್ನಡದ ದೀಪವದು ಕಾಣದಿಹುದು!

೪

ಹಿಂದುಗಳ ನಾಡಿನಲಿ ಗೂಡಾರಗಟ್ಟಿರ್ದ
ಗಾಢ ಕತ್ತಲೆಯೆಲ್ಲ ಸರಿದು ಹರಿದು,
ಒಂದೆ ತಾಣದಿ ನೆಲಸಿಕೆಂಬಂತೆ ಕಾಣುತಿದೆ—
ಕನ್ನಡದ ಸಿರಿಮನೆಯು ಕಪ್ಪು—ಕರಿದು!

೫

ಮಿಂಚುಹುಟ್ಟುವ ನಾಡು ಮನಸು ಮಾಡಿದಡೊಮ್ಮೆ
ಬ್ರಹ್ಮಾಂಡವನ್ನೆಲ್ಲ ಬೆಳಗಬಹುದು!
ಕನ್ನಡದ ಸಿರಿಬೆಳಗು ಮುಸ್ಸೀರುಗಳ ದಾಟಿ
ನಿಟ್ಟುನಿಟ್ಟಿನ ನಾಡ ತೊಳಗಬಹುದು!

೬

ಮಂಗಳೂರಿನ ಮಣ್ಣ ಹಣತೆಯನು ಹದಗೊಳಿಸಿ,
ಮೈಸೂರ ಸಿರಿಗಂಧದೆಣ್ಣೆಯೆರೆದು—
ರಾಯಚೂರಿನ ಹತ್ತಿಯಲಿ ಬತ್ತಿಯನಿಗೊಳಿಸಿ,
ಧಾರವಾಡದ ಕೆಚ್ಚು ಕಿಡ್ಡಿ ಕೊರೆದು—

೭

ಕನ್ನಡದ ಹೊಂದೀನಿಗೆಯ ಹಚ್ಚಲಿನ್ನೊಮ್ಮೆ—
ಬಸವ ವಿದ್ಯಾರಣ್ಯ ಹುಟ್ಟಿಬರಲಿ!
ಕನ್ನಡದ ವೈರಿಗಳ ಮೆಟ್ಟಿ ಕನ್ನಡನಾಡ
ಚಿನ್ನ-ರನ್ನದ ಗುಡಿಯ ಕಟ್ಟಿಬರಲಿ!

೮

ಕನ್ನಡದ ಬತ್ತಿಯೆಳಿಗಿಡಿದ ಮಂಕನು ತೆಗೆಯೆ,
ನನ್ನ ಕಾಯವು ಚಾಚುಗಡ್ಡಿಯಾಗಿರಲಿ!
ಭಾರತಿಯ ದೀವಳಿಗೆಯಲ್ಲಿ ಸಿರಿಗನ್ನಡದ
ಜ್ಯೋತಿಯದು ತೇಜಸ್ಸಿನೊಡ್ಡಿಯಾಗಿರಲಿ!

ಸಂಪಾದಕರ ಪ್ರಾರ್ಥನೆ

ಜಯಂತಿ ಇದೀಗ ಮೂರನೆಯ ದೀವಳಿಗೆಯ ಕಾಣಿಕೆಯನ್ನು ಕನ್ನಡಜನತೆಗೆ ಒಪ್ಪಿಸಿ, ಅಸಮಾಧಾನದಲ್ಲಿಯೆ ಸಮಾಧಾನ ಪಡುತ್ತಲಿದೆ. ದೀವಳಿಗೆಯ ಹಬ್ಬದ ಸಮಯದಲ್ಲಿಯೆ ಈ ಕಾಣಿಕೆ ಸಲ್ಲಿಸಿ ಕರ್ತವ್ಯಪಾಲಿಸಬೇಕೆಂದು ತುಂಬ ಹವಣಿಸಿದುದಾಯಿತು, ಸಾಧ್ಯವಾಗಲಿಲ್ಲ; ಅದಕ್ಕಾಗಿ ಅಸಮಾಧಾನ. ವಿಲಂಬವಾದರೂ ಅಡ್ಡಿಯಿಲ್ಲ, ಒಳ್ಳೊಳ್ಳೆಯ ಲೇಖಕರ ವಿಚಾರಪ್ರಪೂರ್ಣ ಲೇಖನಗಳನ್ನು ಸಂಚಯಿಸಿ ಕೊಡಲಿಕ್ಕಾಯಿತಲ್ಲ— ಎಂದು ಸಮಾಧಾನ. ಯುದ್ಧದ ಮಹರ್ಘತೆಯ ಮೂಲಕ, ಈ ಸಲ ವಿಶೇಷಸಂಚಿಕೆ ಹೊರಡಿಸಬೇಕೋ ಬಾರದೋ ಎಂಬ ವಿಚಾರದಲ್ಲಿರುವಾಗಲೆ, ದೀವಳಿಗೆ ಹತ್ತಿರಕ್ಕೇ ಬಂದು ಬಿಟ್ಟಿತು. ಅದು ತೀರ ಬಳಿಸಾರಿಬಂದಾಗಲೆ, ವಿಶೇಷಸಂಚಿಕೆ ಹೊರಡಿಸಲೆಬೇಕೆಂಬ ವಿಚಾರ ಗಟ್ಟಿಮುಟ್ಟಾಯಿತು. ಇದ್ದ ಸ್ವಲ್ಪ ಅವಧಿಯನ್ನೆ ಉಪಯೋಗ ಮಾಡಿಕೊಂಡು, ದೀವಳಿಗೆಯ ಸಂಚಿಕೆಗೆ ಲೇಖನ ಕಳುಹಬೇಕೆಂದು—ಜಯಂತಿಯ ಬಗೆಗೆ ವಿಶ್ವಾಸವಿಟ್ಟಿರುವ ಕನ್ನಡನಾಡಿನ—ವಿದ್ವಾಂಸ ಲೇಖಕರಿಗೆಲ್ಲ ಕಾಗದ ಬರೆದಾಯಿತು. ಅವರೆಲ್ಲ ನಮ್ಮ ಬಿನ್ನಹ ಮನ್ನಿಸಿ ಲೇಖನ ಕಳುಹಿದರಾದರೂ, ಮುದ್ರಣಾಲಯದವರ ಅನುಕೂಲತೆಗೆ ಸರಿಯಾಗಿ ಲೇಖನಗಳು ಒದಗಲಿಲ್ಲ. ಮುಂದೆ ಕೂಡ, ಮುದ್ರಣದ ಕೆಲಸಕ್ಕೆ ವಿಲಂಬವಾಗಬಾರದೆಂದೇ ಪ್ರತಿಯೊಂದು ಲೇಖನವಲ್ಲಿಯೂ ಚಿತ್ರ ಬರೆಯಿಸಿ ಪಡಿಯಚ್ಚು ಮಾಡಿಸಲಿಕ್ಕೆ ಸಾಧ್ಯವಾಗಲಿಲ್ಲ. ಆದರೂ ವಿಲಂಬವೇನೋ ಆಗಿಯೆ ಆಯಿತು. ಜಯಂತಿಯ ಒಳ್ಳೆಯ ಕಾರ್ಯದ ಕಡೆಗೇ ನೋಡುತ್ತಲಿದ್ದ ಕನ್ನಡಲೋಕವು, ಅದರ ಸಮಯನಿಯಮಾತಿಕ್ರಮಣದೋಷವನ್ನು, ವಿಶ್ವಾಸವಿಟ್ಟು ಕ್ಷಮಿಸಬೇಕಾಗಿ ಪ್ರಾರ್ಥಿಸುವೆವು.

* * *

ಈ ಸಂಚಿಕೆಯ ಲೇಖನಗಳು

ಕನ್ನಡನಾಡಿನ ಎಲ್ಲ ಭಾಗದ ಲೇಖಕರೂ ಈ ಸಂಚಿಕೆಯಚ್ಚಿನ್ಸ್ವಾರಸ್ಯವನ್ನು ಹೆಚ್ಚಿಸಲು ನೆರವಿತ್ತಿರುವರು. ಪ್ರತಿಯೊಂದು ಲೇಖನವೂ ಓದುಗರ ಎದೆಯಲ್ಲಿ ಒಂದು ಹೊಸ ವಿಚಾರದ ದೀವಿಗೆಯನ್ನು ಬೆಳಗಿಸದಿರದೆಂಬುದನ್ನು, ಓದಿನೋಡಿಯೆ ಮನವರಿಕೆ ಮಾಡಿಕೊಳ್ಳಬೇಕು. ಹಿರಿಯರಾದ ಆಲೂರ ವೆಂಕಟರಾಯರು, ಪಂಡಿತ ತಾರಾನಾಥರು, ಶ್ರೀಮಾನ್ ದೊರೆಸ್ವಾಮಿಐಯಂಗಾರ್ಯರು, ಶ್ರೀ. ಜೋಗಳೇಕರ್ ಪಾಂಡುರಂಗರಾಯರು ಇವರೆಲ್ಲರ ಲೇಖನಗಳು ಬುದ್ಧಿಗೆ ಪೌಷ್ಟಿಕ ಅನ್ನವನ್ನೊದವಿಸುವುವು. ಪ್ರೊ. ಕುಂದಣಗಾರ, ಪ್ರೊ. ವಿ. ಜಿ. ಕುಲಕರ್ಣಿ, ಶ್ರೀ. ವಾಳವೇಕರ್, ಶ್ರೀ. ತಲ್ಲೂರಂಗರಾಯರು, ಶ್ರೀ. ಬಿದರಕುಂದಿ ವೆಂಕಟರಾಯರು ಇವರ ಲೇಖನಗಳು, ಕನ್ನಡನಾಡಿನ ಬೇರೆಬೇರೆ ಬಾಳಿನ ವಿಷಯಗಳನ್ನು ತೋರಿಸುತ್ತಿರುವುವು. ಶ್ರೀ. ಎಂ. ವಿ. ಸೀತಾರಾಮಯ್ಯ, ಶ್ರೀ. ಕೆ. ರಾಘವಾಚಾರ್ಯ, ಪ್ರೊ. ಎನ್. ಎಂ. ಕುಲಕರ್ಣಿ, ಇವರ ಹರಟೆಗಳು, ನಗೆಯನ್ನರಳಿಸುತ್ತ ಬಗೆಯನ್ನು ತಿದ್ದುವಂತಹವಿರುವುದು. ಪ್ರಹಸನ-ನಿಕಾಂಕ ನಾಟಕಗಳನ್ನು ಬರೆದು ಸಲ್ಲಿಸಿದ ಶ್ರೀ. ಎನ್. ಕುಲಕರ್ಣಿ, ಶ್ರೀ. ಕಾರಂತ, ಶ್ರೀ. ಕುಡ್ಪಿ ವಾಸುದೇವ ಶೆಣೈ ಇವರ ಕಲೆಯ ಕುಸುರಿಂತೂ ಕನ್ನಡಿಗರ ನೆಚ್ಚಿಕೆಗೆ ಮೊದಲಿನಿಂದ ಪಾತ್ರವಾದುದೆ ಇದೆ. ಶ್ರೀ. ಕೆ. ರಾಜಾರಾವ್ ಶ್ರೀ. ಪುರಾಣಿಕ ಶ್ರೀ. ಎಸ್. ಜಿ. ಕೆ. ಅವರ ವಿನೋದ ಕಥಾ-ಪ್ರಬಂಧಗಳು, ಮನಸ್ಸು ರಂಜಿಸದೆ ಇರವು. ಕವನಗಳನ್ನು ಸಲ್ಲಿಸಿದ 'ಅಂಬಿಕಾತನಯದತ್ತ' 'ಶ್ರೀಧರ', 'ವಿ. ಸಿ.' ಶ್ರೀ. ಅಡಿಗ, ಶ್ರೀ. ಸಾಲಿ ಅವರ ವಿಷಯದಲ್ಲಂತೂ ಬೇರೆಯಾಗಿ ಹೇಳಲೆ ಬೇಕಿಲ್ಲ. ಮೊದಲನೆಯ ಕವನ ಬರೆದ 'ಕಾಕಾ ನಂದ' ಅವರು ತರುಣಕವಿಗಳು; ನೈಸರ್ಗಿಕಮ್ ಕರ್ನಾಟಕದವರ ಅವರ ಕವನ ಪ್ರತಿಯೊಬ್ಬ ಕನ್ನಡಿಗನ ಹೃದಯವನ್ನೂ ಕೆಣಕಿ ಕೆರಳಿದಿರದು. ಶ್ರೀಮಾನ್ ಬೆಳವಿಯವರ ಜೀವನಚಿತ್ರವನ್ನು ಒದಗಿಸಿ ಕೊಟ್ಟು ಶ್ರೀ. ಚಿಕ್ಕೋಡಿ ಅನಂತರಾಯರ ಲೇಖನಕೌಶಲವೂ ಕನ್ನಡಿಗರಿಗೆ ಚೆನ್ನಾಗಿ ಗೊತ್ತು. ಇವರಿಗೆಲ್ಲ ನಮ್ಮ ಕೃತಜ್ಞತೆಯ ನಂಗಳು. ಈ ಲೇಖಕರಲ್ಲದೆ, ನಮ್ಮ ಬಿನ್ನವನ್ನುಮನ್ನಿಸಿ, ಇನ್ನು ಕೆಲವು ಮಹನೀಯ ಲೇಖನಗಳೂ ವಿಶೇಷಸಂಚಿಕೆಗೇ ಬಂದಿವೆ. ಸಮಯಾಭಾವದ ಮೂಲಕ ಸಂಚಿಕೆಯಲ್ಲಿ ಅವನ್ನು ಪ್ರಕಟಿಸಲಿಕ್ಕಾಲಿಲ್ಲ. ಲೇಖನ ಪ್ರಕಟವಾಗದೆ ಇದ್ದ ಲೇಕರು ಇನ್ನಾವ ವಿವರೀತವನ್ನೂ ಭಾವಿಸ ನಮ್ಮ ಅನಾನುಕೂಲತೆಯ ಕಾರಣವೇ ಅರಿತು, ನಮ್ಮನ್ನು ಕ್ಷಮಿಸಬೇಕೆಂದು ಬೇಡಿಕೊಳ್ಳುವೆವು.

ದೀವಳಿಗೆ

★

ನೂರೆಂಟು ದೇವರನ ಮಾರಿನಿಂತವರಾರೊ!
ಶಾರದಾದೇವಿ ಸಿರಿದೇವಿ!
ಶಾರದಾದೇವಿ ಸಿರಿದೇವಿ ತರುತಿರಲಿ—
ನೂರು ದೀವಳಿಗಿ ನಮಗಾಗಿ!

* * *

ಚಿತ್ರಕಾರರು

ಈ ಸಂಚಿಕೆಯ ಮುಖಚಿತ್ರ ಬರೆದವರು, ಕಲಬುರ್ಗೆಯ ಕಲಾವಿದರಾದ ಶ್ರೀ. ಆಳಂದೀಕರರು. ಸಂದರ್ಭಚಿತ್ರಗಳನ್ನು ಬರೆದುಕೊಟ್ಟವರು ಬೆಳಗಾಂವಿಯ ರೇಖಾಚಿತ್ರ ವಿಶಾರದರಾದ ಹುಪ್ಪಾರ ಗೋಪಾಲರಾಯರು. ಹೈದರಾಬಾದಿನ ಬಾಬಲಿಯವರೂ ಶ್ರೀ. ಅಪ್ಪಾಜಪ್ಪಯವರೂ ಈ ಸಂಚಿಕೆಗಾಗಿ ಚಿತ್ರಬರೆದು ಕೊಟ್ಟಿದ್ದಾರೆ. ಇವರೆಲ್ಲರಿಗೂ ಹೃತ್‌ಪೂರ್ವಕ ಅಭಿನಂದನೆಗಳು.

* * *

ಜಯಂತಿಯ ಹಾರೈಸಿಕೆ

ಹೊಸ ವರ್ಷದ ದೀವಳಿಗೆ, ವರ್ಷದುದ್ದಕ್ಕೂ ಕನ್ನಡಿಗರ ಬಾಳಿನ ಬೆಳಕಾಗಲಿ; ಆ ಬೆಳಕಿನಲ್ಲಿ ಅವರು ತಮ್ಮ ನಿಚ್ಚಳವಾದ ಆದರ್ಶವನ್ನು ಕಂಡುಕೊಳ್ಳಲಿ. ಆ ಆದರ್ಶದ ಸಾಧನೆಗಾಗಿ ಹೊಸ ವರ್ಷ ಒಳ್ಳೆಯ ಅಮೃತಾವಕಾಶವನ್ನು ಒದಗಿಸಿ ಕೊಡಲಿ! ಸಿರಿಗನ್ನಡಂಗೆಲ್ಗೆ!

—ಸಂಪಾದಕರು

ಕತ್ತಲೆಯ ಹಬ್ಬ

'ಸಪ್ಯದ ರಾಜಕೀಯ ವಾತಾವರಣದ ಸಲು ಗಿ, ಈ ಸಲದ ದೀಪಾವಳಿಯಲ್ಲಿ ದೀಪೋತ್ಸವ ನ್ನು ಬೆಳಗಿಸಬಾರದೆಂದು ಇಲ್ಲಿಯ ವ್ಯಾಪಾರಿ ಂಘದವರು ನಿರ್ಣಯಿಸಿದ್ದಾರೆ' ಎಂದು ಳಗಾವಿಯ ಸುದ್ದಿಯನ್ನು ಓದಿ ಮಂಗರಾಯ ಗೆ ಆತ್ಯಾಶ್ಚರ್ಯವಾಗಿದೆ. ರಾಜಕೀಯ ವಾತಾ ರಣಕ್ಕೆ ಕತ್ತಲೆಯೆ ದ್ಯೋತಕವಾಗುವಂತಹ ಸಂಗ ಬಂದಿದೆಯೆ? ಇತ್ತಿತ್ತಲಾಗಿ ವಿಮಾನ ಾಳಗಳಿಂದ ಎಚ್ಚರಿಕೆಗಾಗಿ ನಗರಗಳಲ್ಲಿ ಕತ್ತಲೆ ಮಾಡುವುದು ಸಂಪ್ರದಾಯವಾಗಿದೆ. ಬೆಳಗಾಂ ಯ ವ್ಯಾಪಾರಿಸಂಘಕ್ಕೆ, ರಾಜಕೀಯ ವಾತಾ ರಣವು ವಿಮಾನದಾಳಿಯಾಗಿ ಪರಿಣಮಿಸಿದೆಯೆ? ೋಗಲಿ. ರಾಜಕೀಯ ವಾತಾವರಣವೆಂದರೆ ರ್ನಾಟಕದಲ್ಲಿಯೂ ವಾತಾವರಣವಿರಬಹುದೆ? ಥವಾ-ಶಾಂತಂ ಪಾಪಂ-ಬೆಳಗಾಂವಿ ಕರ್ನಾ ಟಕವೆಂದು ಇನ್ನೂ ನಿರ್ಣಯವೆ ಆಗಿಲ್ಲ. ಇನ್ನು ನ್ನು ಇಡಿಯ ದೇಶದ ರಾಜಕೀಯ ಪರಿಸ್ಥಿತಿ ರಬಹುದೆ? ಆದರ ಕತ್ತಲೆ ಬೆಳಗಾಂವಿಗೆಯೆ ಖಡಿಮಕೊಳ್ಳಲು ಕಾರಣವೇನು? ಅಥವಾ-ಇತ್ತ ನ್ನಡವೂ ಅಲ್ಲ, ಇತ್ತ ಮರಾಠಿಯೂ ಅಲ್ಲ— ಡಕಾಗಿ ಬೆಳಗಾಂವಿಯಲ್ಲಿಯೆ ಕತ್ತಲೆಯ ರಾಜ್ಯ ರಬಹುದೆ? ಅಥವಾ-ಒಳಬೆಳಕಿನ ಮುಂಪಾಳು ನವ ಇಂದಿನ ಕಾಲದಲ್ಲಿ, ಹೊರಬೆಳಕಿನ ಯೋಜನವೇನು—ಎಂದು ವ್ಯಾಪಾರಿಸಂಘ ರ ವಿಚಾರವಿರಬಹುದೆ? ಅಥವಾ—

ಯಾರಿಗೆ ಗೊತ್ತು | ಬನಿಯಾ ಗತ್ತು
ಮುಂಗಪುರಂದರವಿಠಲನ ಹೊರತು?|

* * *

ಮುಂಗರಾಯನ ದೀಪೋತ್ಸವ

ಮುಂಗರಾಯನಾದರೂ ಬೇರೆ ಕಾರಣಗಳಿಗಾಗಿ ದೀಪೋತ್ಸವವನ್ನು ಮಾಡಬಾರದೆಂದಿದ್ದಾನೆ. ಹಿಂದು-ಯುದ್ಧದ ಕಾಲದಲ್ಲಿ ಎಣ್ಣೆಯ ದುರುಪಯೋಗ, ಆದರೇನು? ಇಂತಹ ವಿಷಯದಲ್ಲಿ ಮುಂಗರಾಯನಂತಹ ಸಾರ್ವಜನಿಕ ವಿಭೂತಿಯು ನಿರುಪಾಯನಾಗಬೇಕಾಗಿದೆ. ಸ್ವತಃ ಮುಂಗರಾಯರು ದೀಪೋತ್ಸವವನ್ನು ಮಾಡದಿದ್ದರೂ ಅವರ ನಿಮಿತ್ತವಾಗಿ ಸಾಲುಸಾಲಾಗಿ ದೀಪಮಾಲೆ ಕಾಣುವುದು. ಈ ದೀಪ ಒಳಗಿನ ದೀಪ. ಮುಂಗರಾಯನಿಗಾಗಿ ಅನೇಕರಿಗೆ ಹೊಟ್ಟೆಯೊಳಗೆ ತಾಪವಿದೆ, ಇನ್ನೂ ಅನೇಕರಿಗೆ ಉರಿ ಇದೆ. ಈ ಆಂತರ್ಜ್ವಾಲಾಮಾಲೆ ಸಾಲುಸಾಲಾಗಿ ನಿಂತಿದೆ, ನಿಲ್ಲುತ್ತಲಿದೆ. ಅನೇಕರಿಗೆ ಇಂತಹ ಒಳಗಿನ ಬೆಳಕನ್ನು ಕೊಟ್ಟು, ಎಣ್ಣೆ ಇಲ್ಲದ ಅಮರಜ್ಯೋತಿರ್ಮಾಲೆಯನ್ನು ನಿಲ್ಲಿಸಲು ನಿಮಿತ್ತನಾದುದಕ್ಕೆ ಮುಂಗರಾಯನು, ಹಲ್ಲುಕಿರಿದು ಮತ್ತಿಷ್ಟು ಬೆಳಕನ್ನು ಕೂಡಿಸಿ, ದೀಪೋತ್ಸವವನ್ನು ನೆರವೇರಿಸುವಂಥಾತ್ಮನಾಗಿದ್ದಾನೆ.

* * *

ಮುಂಗ-ಮಹಾಸಭೆ

ಹಿಂದುಸ್ತಾನದ ಎಲ್ಲ ಜಾತಿಗಳಂತೆ ಮುಂಗರಾಯನೂ ತನ್ನ ಜಾತಿಯವರದೊಂದು ವಿಶೇಷ ಮಹಾಸಭಾಧಿವೇಶನವನ್ನು ನೆರೆಯಿಸಿದ್ದನೆಂದು ತಿಳುಹಿಸಲು ತುಂಬಾ ಸಂತೋಷವೆನಿಸುತ್ತದೆ. ಅರ್ಥಾತ್, ಕೆಳಗಿನ ನೊತ್ತುವಳಿಗಳು ಆ ಅಧಿವೇಶನದಲ್ಲಿ ಸರ್ವಾನುಮತದಿಂದ ಸ್ವೀಕೃತವಾದುವು:—

(೧) ಬ್ರಿಟಿಶರ ಯುದ್ಧನೀತಿಯಲ್ಲಿ ಈ ಮುಂಗ-ಮಹಾಸಭೆಯ ಸಂಪೂರ್ಣ ನಂಬುಗೆ ಮತ್ತು ಸಹಾನುಭೂತಿ ಇವೆ; ಆದರೆ,

(೨) ಬ್ರಿಟಿಷರು ಮುಂಗಗಳ ಆನುಕರಣ ಸ್ವಾತಂತ್ರ್ಯವನ್ನು, ತತ್ವದಲ್ಲಿಯೆ ಆಗಲಿ ಒಪ್ಪಬೇಕೆಂದು ಈ ಅಧಿವೇಶನದ ಹಟವಿದೆ; ಹಾಗೆ ಮಾಡಿದಲ್ಲಿ,

(೩) ಸೈನ್ಯದಲ್ಲಿ ಮುಂಗಜಾತಿಯದೆ ಒಂದು ರೆಜಿಮೆಂಟನ್ನು ತಯಾರು ಮಾಡಬೇಕು, ರಾಮಾಯಣಕಾಲದಿಂದಲೂ ಮುಂಗಗಳು ತಮ್ಮ ಶೌರ್ಯವನ್ನು ತೋರಿಸಿವೆ; ಇದಲ್ಲದೆ,

(೪) ವಿಮಾನದಳ, ತೋಪುದಳ ಮುಂತಾದ ಸೈನ್ಯದ ಅನೇಕ ವಿಭಾಗಗಳಲ್ಲಿ ಮುಂಗಗಳಿಗೆ ಪ್ರಮಾಣಬದ್ಧ ಪ್ರಾತಿನಿಧ್ಯ ದೊರೆಯಬೇಕು; ಕೊನೆಗೆ—

(೫) ಮುಂಗಗಳನ್ನು 'ಹಿಂದುಳಿದ ಜಾತಿ' ಎಂದು ತಿಳಿದು, ರಣಾಂಗಣದಲ್ಲಿ ಅವರಿಗೆ ಯಾವಾಗಲೂ ಹಿಂದಿನ ಸ್ಥಾನವನ್ನು ಕೊಡಬೇಕು!

* * *

ಮುಂಗತಂತ್ರದ ಮಾರ್ಮಿಕ ಕತೆ

ಒಂದಾನೊಂದು ಊರಲ್ಲಿ ಒಬ್ಬ ಭಾವಿಕ ಮನುಷ್ಯನಿದ್ದ. ಒಂದು ರಾತ್ರಿ ಕನಸಿನಲ್ಲಿ ಸಾಕ್ಷಾತ್ ಯಮರಾಜನು ಅವನಿಗೆ ದರ್ಶನವಂ ಕೊಟ್ಟು ಇಂತು ಹೇಳುವಂತಹನಾದ:—
'ಮಾನವಾ, ನಾಳೆ ಈ ಊರಿಗೆ ಒಂದು ಪಿಡುಗು ಬರುವುದಿದೆ. ಆದಕ್ಕೆ ಯೋಗ್ಯ ಪ್ರತೀಕಾರ ಮಾಡಿದರೆ ಯಥಾಸಮಯ ನನ್ನ ಲೋಕಕ್ಕೆ ಬರುವಿ; ಇಲ್ಲವಾದರೆ ನಾಳೆಯೆ ಬರುವಿ; ನೀನು ಭಾವಿಕನೆಂದು ನಿನಗೆ ಮುಂಚೆಯೆ ಸೂಚನೆ ಕೊಟ್ಟಿದ್ದೇನೆ.' ಆಗ ಭಾವಿಕನೆನ್ನುತ್ತಾನಲ್ಲ—'ಯಮರಾಜ, ಪಿಡುಗೇ ಆಗಲಿ, ಸಹಜವೇ ಆಗಲಿ, ಸಾವು ಕಿಟ್ಟುದು. ನಾನು ಎಲ್ಲರಿಗೆ ಅಮರತ್ವದ ಉಪದೇಶ ಮಾಡುವವನಿದ್ದೇನೆ. ಪಿಡುಗಿಗೆ ಪ್ರತೀಕಾರ ಮಾಡುವುದಿಲ್ಲ, ಆದನ್ನು ಪ್ರತಿಭಟಿಸುವೆ' ಎಂದನು. ಆಗ ಧರ್ಮರಾಜನು ನಕ್ಕು 'ಸಾವು ಕಿಟ್ಟುದೆಂದೇ ನಾಳೆ ಸಾಯಬೇಡ ಎಂದು ನಿನಗೆ ಹೇಳುವೆ' ಎಂದನು. ಆದಕ್ಕೆ ಮಾನವನೆನ್ನುತ್ತಾನೆ—'ಕೆಟ್ಟುದಾದ ಸಾವಿನ ವಿರುದ್ಧ ಪ್ರಚಾರಮಾಡುವ ಹಕ್ಕು ಅಮರತ್ವವಾದಿಯಾದ ಮಾನವನಿಗಿದೆ!' ಯಮನು ನಕ್ಕನು, ತಲೆ ಅಲ್ಲಾಡಿಸಿದನು, ಮಾಯವಾದನು. ಇತ್ತ ಭಾವಿಕ ಮಾನವನು ಪ್ರಚಾರಕ್ಕೆಂದು ತಿರುಗಾಡುವಾಗ, ಪಿಡುಗಿಗೆ ಆಕೃತಿಯಾಗಿ—

ಅಥವಾ ಸ್ವಾತಂತ್ರ್ಯದ ಹಕ್ಕಿಗಾಗಿ ಸತ್ತವನ ವಿಷಯ ಮಾತನಾಡಿ ಫಲವೇನು? ಸಾವು ಬಿಟ್ಟಿಲ್ಲವಲ್ಲ!

ಸ್ವಾತಂತ್ರ್ಯ ಬೇಡಿದರೆ ಸಿಗ್ತದೆ ಸಾವು!
ಅದಕಾಗಿ ಬರಿನಿದ್ದೆ ಮಾಡೋಣು ನಾವು!

ಕರ್ನಾಟಕತ್ವವೇ ನಮ್ಮ ದೀಪಸ್ತಂಭ

ಶ್ರೀ. ಆಲೂರ ವೆಂಕಟರಾಯರು, ಧಾರವಾಡ

ಕರ್ನಾಟಕತ್ವವೆಂಬುದು ಸಂಕುಚಿತವಿಚಾರದ ಕುನ್ನಿ ಎಂಬುದಾಗಿ ಹೇಳ್ವು ತಿಳಿಗೆಟ್ಟ ಕನ್ನಡಿಗರು ಹಲವು ಜನರು; ಹೀಗೆ ಎನ್ನಲು ಅವರನ್ನು ಪ್ರೇರಿಸಿ ತಮ್ಮ ಸ್ವಾರ್ಥ ಸಾಧಿಸಿಕೊಳ್ಳುವ ಪರಪ್ರಾಂತೀಯರೂ ಹಲವು ಜನರು. ಅಂತಹ ಜನರೆಲ್ಲ ಕರ್ನಾಟಕತ್ವದ ಬಗ್ಗೆ ಸರಿಯಾದ ತಿಳಿವಳಿಕೆ ಮೂಡಿಕೊಳ್ಳಬೇಕಾದುದು ಅನಿವಾರ್ಯ!

ಕರ್ನಾಟಕದ ಉದ್ಧಾರಕ್ಕೆ ಕರ್ನಾಟಕತ್ವವೇ ನಮ್ಮ ದೀಪಸ್ತಂಭ. ವ್ಯಾಪಕವಾದ ರಾಷ್ಟ್ರೀಯತ್ವಕ್ಕೆ ಅವಿರುದ್ಧವಾದ ಮತ್ತು ಪೋಷಕವಾದ ಕರ್ನಾಟಕ ಭಾವನೆಯೇ ಕರ್ನಾಟಕತ್ವ. ಕರ್ನಾಟಕತ್ವದ ಕಲ್ಪನೆ ಹೊರಟು ಮೂವತ್ತು ವರುಷಗಳಾಗಿ ಹೋಗಿದ್ದರೂ, ಅದರ ನಿಜವಾದ, ಸ್ಪಷ್ಟವಾದ ಮತ್ತು ಪೂರ್ಣವಾದ ಕಲ್ಪನೆಯು ಮುಖಂಡರೆನ್ನಿಸಿಕೊಳ್ಳುವವರಲ್ಲಿ ಕೂಡ ಅನೇಕರಿಗೆ ಇಲ್ಲದಿರುವುದು ಕರ್ನಾಟಕದ ದುರ್ದೈವವೆಂದೇ ಎನ್ನಬೇಕು. ಕೆಲವರಿಗೆ ಕರ್ನಾಟಕತ್ವವು ಸಂಕುಚಿತವಾದ ಭಾವನೆಯಾಗಿ ತೋರುತ್ತದೆ. ಮತ್ತೆ ಕೆಲವರಿಗೆ ಅದು ರಾಷ್ಟ್ರೀಯತ್ವಕ್ಕೆ ವಿರೋಧಕವಾದ ಭಾವನೆಯೆಂದೆನ್ನಿಸುತ್ತದೆ. ಕೆಲವರಿಗೆ ಅದರಲ್ಲಿ, ಭಾಷಾದ್ವೇಷವು ಕಾಣುತ್ತದೆ. ಹಲವರಿಗೆ ಅದರ ಮೂಲವು ಇತಿಹಾಸದ ಸುಳ್ಳುಸ್ಮೃತಿಯಲ್ಲಿ ಇರುವುದಾಗಿ ತೋರುತ್ತದೆ. ಹೀಗೆ, ಅನೇಕರಲ್ಲಿ ಅನೇಕ ತರದ ತಪ್ಪುಕಲ್ಪನೆಗಳು ಇರುತ್ತವೆ. ಆದಕಾರಣ, ಕರ್ನಾಟಕತ್ವದ ನಿಜವಾದ ಸ್ವರೂಪವೇನು, ಅದರ ವ್ಯಾಪ್ತಿ ಎಷ್ಟು, ಅದಕ್ಕೆ ಮರ್ಯಾದೆ ಯಾವುದು ಇವೇ ಮುಂತಾದ ಸಂಗತಿಗಳನ್ನು ಅತಿ ಸಂಕ್ಷೇಪವಾಗಿ ಸೂಚಿಸುವುದೇ ಈ ಲೇಖನದ ಉದ್ದೇಶವು.

ನಾವು ಮೇಲೆ ಹೇಳಿದಂತೆ ಕರ್ನಾಟಕತ್ವಕ್ಕೂ ರಾಷ್ಟ್ರೀಯತ್ವಕ್ಕೂ ವಿರೋಧವು ಇಲ್ಲ. ರಾಷ್ಟ್ರೀಯತ್ವಕ್ಕೆ ವಿರುದ್ಧವಾದ ಕರ್ನಾಟಕತ್ವವು ಕರ್ನಾಟಕತ್ವವೇ ಅಲ್ಲ. ಹಾಗೆ ಅದು ವಿರುದ್ಧವಾಗಿದೆಯೆಂದು ಯಾರಾದರೂ ತೋರಿಸಿಕೊಟ್ಟರೆ, ಕರ್ನಾಟಕತ್ವವನ್ನು ಬಿಟ್ಟುಕೊಡಲು ಕನ್ನಡಿಗರು ಯಾವಾಗಲೂ ಸಿದ್ಧ. ಇಷ್ಟೂ ವಿಚಾರಿ, ಮತ್ತೆಮತ್ತೆ ಕರ್ನಾಟಕತ್ವವೆಂಬುದು ರಾಷ್ಟ್ರೀಯತ್ವಕ್ಕೆ ವಿರುದ್ಧವಾದ ಜಳವಳಿಯೆಂದು ಯಾರಾದರೂ ಅನ್ನುತ್ತ ನಡೆದರೆ, ಅದಕ್ಕೆ ಉಪಾಯವಿಲ್ಲ. ಕರ್ನಾಟಕದಲ್ಲಿ ನಿಂತುಕೊಂಡು ಯಾರು ಸಾರ್ವಜನಿಕ ಕಾರ್ಯಮಾಡಬೇಕೆನ್ನುತ್ತಾರೋ ಅವರಿಗಾಗಿ ಮಾತ್ರ, ಈ ಕರ್ನಾಟಕತ್ವದ ಜಳವಳಿ ಮುಖ್ಯತಃ ಇರುವುದಲ್ಲದೆ, ಎಲ್ಲರಿಗಾಗಿ ಅಲ್ಲವೆಂಬುದನ್ನು ಮೊದಲು ನೆನಪಿನಲ್ಲಿಡಬೇಕು. ಇಡಿ ಹಿಂದುಸ್ಥಾನವನ್ನೇ ತಮ್ಮ ಕಾರ್ಯರಂಗವನ್ನಾಗಿ ಇಟ್ಟುಕೊಂಡವರ ಸಲುವಾಗಿಯಾಗಲಿ ಅಥವಾ ಇಡಿ ವಿಶ್ವವನ್ನೇ ತಮ್ಮ ಕಾರ್ಯರಂಗವನ್ನಾಗಿ ಇಟ್ಟುಕೊಂಡವರ ಸಲುವಾಗಿಯಾಗಲಿ ಈ ಜಳವಳಿಯು ಮುಖ್ಯತಃ ಇರುವುದಿಲ್ಲ. ಲೊ. ಟಿಳಕ, ಮಿ. ಗಾಂಧಿ, ಮಹರ್ಷಿ ರವೀಂದ್ರನಾಥ ಠಾಕೂರ ಅಂಡ್ರೂಜ ಮುಂತಾದ ಮಹಾವ್ಯಕ್ತಿಗಳು ಹಾಗೆ ವಿಸ್ತಾರವಾದ ಕ್ಷೇತ್ರವನ್ನಿಟ್ಟುಕೊಂಡವರು. ಅಂಥವರಿಂದ ಸಹಸಾ ಕರ್ನಾಟಕಕ್ಕೇ ಆಗಲಿ, ವಿಕ್ಕಾವ ಪ್ರಾಂತಕ್ಕೇ ಆಗಲಿ, ಅಕಲ್ಯಾಣವಾಗುವ ಕೃತ್ಯಗಳು ಬಹುಶಃ ಆಗುವುದಿಲ್ಲ. ವಿಕ್ಕವರೆಲ್ಲವರಿಗೂ-ಅವರು ರಾಜಕಾರಣದಲ್ಲಿಯೆ ಕಾರ್ಯಮಾಡಲಿ; ಧರ್ಮಕ್ಷೇತ್ರದಲ್ಲಿಯೆ ಕಾರ್ಯ ಮಾಡಲಿ; ವಾಙ್ಮಯ, ಕಲೆ, ಇತಿಹಾಸ, ವ್ಯಾಪಾರ, ಸಮಾಜ ಮುಂತಾದ ಯಾವ ವಿಷಯವನ್ನೇ ಕೈಕೊಂಡಿರಲಿ— ಅವರೆಲ್ಲರಿಗೂ ಕರ್ನಾಟಕತ್ವವೇ ದೀಪಸ್ತಂಭವು. ಅದನ್ನು ಸದಾ ಕಣ್ಣು ಮುಂದೆ ಇಟ್ಟುಕೊಳ್ಳದೆ ಕೆಲಸ ಮಾಡುವವನು ನಿಜವಾದ ಕೆಲಸಗಾರನಲ್ಲ. ಅದನ್ನು ಕಣ್ಣು ಮುಂದೆ ಇಟ್ಟುಕೊಂಡಿರುವೆವೆಂದು ಬಾಯಿಯಿಂದ ಸುಳ್ಳು ಹೇಳಿ, ಒಳಗಿಂದೊಳಗೆ ವಂಚನೆ ಮಾಡುವ ಮುಖಂಡರು ಮುಖಂಡರಲ್ಲ. ಅಂಥವರ ಕೈಯಲ್ಲಿ ಕರ್ನಾಟಕದ ಮುಖಂಡತ್ವವಿರುವ ವರೆಗೆ ಕರ್ನಾಟಕದ ಉದ್ಧಾರವು ಎಂದಿಗೂ ಆಗದು.

ಕರ್ನಾಟಕತ್ವವು ಸಾಕಷ್ಟು ಹಬ್ಬದಿರುವುದಕ್ಕೆ ಮುಖ್ಯವಾಗಿ ಅದರ ಬಗ್ಗೆ ಇರುವ ಅಜ್ಞಾನ, ವಿಪರೀತಜ್ಞಾನ, ಸಂದೇಹ, ಭ್ರಮೆ, ಮೋಹ, ತಪ್ಪುತಿಳಿವಳಿಕೆ ಇವೇ ಮುಂತಾದುವುಗಳೇ ಮುಖ್ಯ ಕಾರಣ.

ಕರ್ನಾಟಕ ದೇಶದಲ್ಲಿ ನಾನಾತರದ ಸ್ವಭಾವದ ಮತ್ತು ಅಭಿರುಚಿಯುಳ್ಳ ಜನರು ಇರುತ್ತಾರೆ. ಈ ಪ್ರಾಂತದಲ್ಲಿ ಮುಸಲ್ಮಾನಿ, ಮರಾಠಿ, ತುಳು, ಕೊಂಕಣಿ, ಕೊಡಗು, ತೆಲುಗು, ತಮಿಳು ಮುಂತಾದ ಅನೇಕ ಭಾಷೆಗಳನ್ನಾಡುವ ಅಲ್ಪಸಂಖ್ಯಾಕ ಜನರು ವಾಸಿಸುತ್ತಾರೆ. ಅವರೆಲ್ಲರೂ ಕರ್ನಾಟಕತ್ವವನ್ನು ಎತ್ತಿ ಹಿಡಿಯಬೇಕೆಂಬುದು ಅನ್ಯಾಯವಲ್ಲವೇ ಎಂದು ಕೆಲವರು ಆಕ್ಷೇಪಿಸಬಹುದು. ಕರ್ನಾಟಕತ್ವಕ್ಕೂ ಈ ಭಾಷೆಗಳಿಗೂ ದ್ವೇಷವಿಲ್ಲ.

ಕರ್ನಾಟಕವು ನಾನಾ ಧರ್ಮಗಳಿಗೆ ಆಶ್ರಯ ಕೊಟ್ಟಂತೆ ಈ ಭಾಷಾಬಂಧುಗಳಿಗೂ ಆಶ್ರಯ ಕೊಟ್ಟಿರುತ್ತದೆ–ಕೊಡುತ್ತದೆ; ಆದರೆ ಸಾರ್ವಜನಿಕ ಕಾರ್ಯಗಳಲ್ಲಿ ಕರ್ನಾಟಕದ ಬಹುಜನ ಭಾಷೆಯಾದ ಕನ್ನಡಕ್ಕೆ ಪಟ್ಟವಿರಬೇಕೆಂದು ಮಾತ್ರವೇ ಅಪೇಕ್ಷಿಸುತ್ತದೆ. ಆ ಭಾಷಾಬಂಧುಗಳು ಕರ್ನಾಟಕತ್ವದೊಡನೆ ತಾದಾತ್ಮ್ಯವನ್ನು ಹೊಂದಿ, ಅದರ ಚಳವಳಿಗಳಲ್ಲಿಯೂ ಭಾಗ ತೆಗೆದುಕೊಳ್ಳಬೇಕೆಂದು ಅದು ಆಗ್ರಹ ಮಾಡುತ್ತದೆ. ಇದರಲ್ಲಿ ಅನ್ಯಾಯ ವಿದೆಯೆ? ಆದಕಾರಣ, ಕರ್ನಾಟಕದಲ್ಲಿ ವಾಸಿಸುವ ಯಾವತ್ತು ಭಾಷಾಬಂಧುಗಳು, ಕರ್ನಾಟಕತ್ವವನ್ನೇ ತಮ್ಮ ದೀಪಸ್ತಂಭವಾಗಿ ಇಟ್ಟುಕೊಳ್ಳಲು ಅಡ್ಡಿ ಏನಿದೆ? ಆದೇ ಮೇರೆಗೆ ಹಿಂದೀ, ಸಂಸ್ಕೃತ ಮುಂತಾದ ರಾಷ್ಟ್ರಭಾಷೆಗಳ ವಿಚಾರ. ಹಿಂದೀ ಭಾಷೆಯು ಹಿಂದುಸ್ತಾನದ ಬಹುಜನ ಭಾಷೆ. ಸಂಸ್ಕೃತವು ಇಡಿ ಹಿಂದುಸ್ತಾನದ ವಿದ್ವಜ್ಜನರ ಭಾಷೆಯಾಗಿತ್ತು; ಪುನಃ ಆಗ ಬರುವುದು. ಅವಕ್ಕೂ ಕರ್ನಾಟಕತ್ವಕ್ಕೂ ವಿರೋಧವೆಲ್ಲಿಯದು? ಕನ್ನಡದ ಮೇಲ್ಕಾಣಿಸಿದ ಪಟ್ಟವನ್ನು ಕಸಿದುಕೊಳ್ಳಲಿಕ್ಕೆ ಬಂದರೆ ಮಾತ್ರ ಕನ್ನಡಿಗರು ಕೇಳುವವರಲ್ಲ. ಆ ಭಾಷೆಯನ್ನು ಎತ್ತಿ ಹಿಡಿಯುವವರು ಕರ್ನಾಟಕತ್ವವನ್ನು ನಿಜವಾಗಿ ಎತ್ತಿಹಿಡಿಯುತ್ತಾರೋ ಇಲ್ಲವೋ ಎಂಬುದಕ್ಕೆ ಒಂದೇ ಒಂದು ಒರೆಗಲ್ಲು. ಅದಾವುದೆಂದರೆ: ಕರ್ನಾಟಕವು ಕೈಕೊಂಡ ನಾಡಹಬ್ಬ, ಸಾಹಿತ್ಯೋತ್ಸವ ಮುಂತಾದ ಕಾರ್ಯಗಳಲ್ಲಿ ಮನಃಪೂರ್ವಕವಾಗಿ ಅವರು ಬೆರೆತುಹೋಗುತ್ತಾರೋ ಇಲ್ಲವೋ ಎಂಬುದನ್ನು ನೋಡುವುದು. ಕನ್ನಡಸಾಹಿತ್ಯ, ರಾಜಕಾರಣ, ಇತಿಹಾಸ ಮುಂತಾದುವುಗಳ ಏಳ್ಗೆಯನ್ನು ನೋಡದೆ ಇದ್ದವರು ಮಾತ್ರ ಕರ್ನಾಟಕದ ಹಿತವನ್ನು ಬಯಸುವವರಲ್ಲವೆಂದು ಧಾರಾಳವಾಗಿ ತಿಳಿಯಲು ಪ್ರತ್ಯವಾಯವಿಲ್ಲ.

ಕರ್ನಾಟಕದಲ್ಲಿ ಕೆಲವರಿಗೆ ತಮ್ಮ ಪಟ್ಟಣ, ತಮ್ಮ ಜಿಲ್ಲೆ ಇವು ಆದ ಕೂಡಲೆ ಒಮ್ಮೆಲೆ ಹಿಂದುಸ್ತಾನವೇ ಕಾಣುತ್ತದೆ. ನಡುವೆ ಅವರ ಕಣ್ಣಿಗೆ ಕರ್ನಾಟಕವೇ ಕಾಣುವುದಿಲ್ಲ. ಕಂಡರೂ ಚುನಾವಣಿಗಳ ಮಟ್ಟಿಗೆ ಮಾತ್ರ. ಹಾಗೆಯೇ ಕೆಲವರಿಗೆ ತಮ್ಮ ಉಪಭಾಷೆಯೂ ದೊಡನೆ ಒಮ್ಮೆಲೆ ರಾಷ್ಟ್ರಭಾಷೆಯೇ ಕಾಣುತ್ತದೆ. ನಡುವಿನ ಕನ್ನಡ ಭಾಷೆ ಕಾಣುವುದೇ ಇಲ್ಲ. ಹೀಗಾಗುವುದಕ್ಕೆ ಕರ್ನಾಟಕತ್ವದ ನಿಜವಾದ ಕಲ್ಪನೆ ಇಲ್ಲದಿರುವುದೇ ಅಥವಾ ಕಲ್ಪನೆ ಇದ್ದರೂ ಅದರ ಕಡೆಗೆ ಬೇಕೆಂದು ದುರ್ಲಕ್ಷ್ಯ ಮಾಡುವುದೇ ಕಾರಣ.

ಕೆಲವು ರಾಜಕಾರಣಿಗಳಿಗೆ ಕರ್ನಾಟಕತ್ವವೆಂದೊಡನೆ ತಲೆಶೂಲಿ. ಅವರಿಗೆ ಬೇಕು ವ್ಯಾಪಕವಾದ ಆ ರಾಷ್ಟ್ರೀಯತ್ವ. ಇಂಥವರಿಗೆ ಕರ್ನಾಟಕತ್ವದ ನಿಜವಾದ ಕಲ್ಪನೆಯೂ ಇಲ್ಲ, ರಾಷ್ಟ್ರೀಯತ್ವದ ನಿಜವಾದ ಕಲ್ಪನೆಯೂ ಇಲ್ಲವೆಂದೇ ನಾವು ಹೇಳುತ್ತೇವೆ. ನಿಜವಾದ ರಾಷ್ಟ್ರೀಯನು ಕರ್ನಾಟಕತ್ವವನ್ನು ಎಂದಿಗೂ ಹೀಯಾಳಿಸಲಾರನು. ಏಕೆಂದರೆ, ರಾಜಕಾರಣದಲ್ಲಿಯೂ ಕರ್ನಾಟಕತ್ವವೇ ನಮ್ಮ ದೀಪಸ್ತಂಭವಾಗಿರುತ್ತದೆ. ಹಿಂದುಸ್ತಾನಕ್ಕೆ ಅನ್ವಯಿಸುವ ವಿಶಾಲತತ್ತ್ವಗಳನ್ನು ಕರ್ನಾಟಕ ದೃಷ್ಟಿಯಿಂದ ವಿಚಾರಮಾಡಿ, ಕರ್ನಾಟಕಕ್ಕೆ ತಕ್ಕಂತೆ ಅವುಗಳನ್ನು ಅನ್ವಯಿಸಿಕೊಳ್ಳುವುದೇ ಕರ್ನಾಟಕತ್ವ. ರಾಜಕಾರಣದಲ್ಲಿಯ ಮುಖಂಡರಿಗೆ ಆ ದೃಷ್ಟಿಯು ಬಂದಾಗ ಮಾತ್ರವೇ ಕರ್ನಾಟಕದ ಉದ್ಧಾರ.

ಒಟ್ಟಿಗೆ ಹೇಳುವುದೇನೆಂದರೆ: ಕರ್ನಾಟಕತ್ವದ ಕಲ್ಪನೆಯು ಅತ್ಯಂತ ವಿಶಾಲವಾದ ಕಲ್ಪನೆಯು. ಸಂಕೃದ್ದರ್ಶನಕ್ಕೆ ಕೆಲವರಿಗೆ ತೋರುವಂತೆ ಅದು ಸಂಕುಚಿತವಾದ ಕಲ್ಪನೆಯೂ ಅಲ್ಲ; ರಾಷ್ಟ್ರೀಯತ್ವ ವಿರೋಧವಾದ ಕಲ್ಪನೆಯೂ ಅಲ್ಲ. ಈ ದೃಷ್ಟಿಯಿಂದ ವಿಚಾರಮಾಡಿ ನೋಡಿದರೆ, ಕರ್ನಾಟಕವು ಧರ್ಮ, ರಾಜಕಾರಣ, ವಾಙ್ಮಯ, ವ್ಯಾಪಾರ, ಕಲೆ, ಇತಿಹಾಸ ಮುಂತಾದ ಯಾವತ್ತೂ ಕ್ಷೇತ್ರಗಳಲ್ಲಿ ಎಷ್ಟರಮಟ್ಟಿಗೆ ಹಿಂದುಳಿದಿದೆಯೆಂಬುದು ಗೊತ್ತಾಗದೆ ಇರದು. ಆದಕಾರಣವೇ, ನಾವು ಹೇಳುವುದು: ಕರ್ನಾಟಕತ್ವವೇ ಸದಾ ನಮ್ಮ ಕಣ್ಣೆದುರಿನ ದೀಪಸ್ತಂಭವಾಗಿರಬೇಕೆಂದು.

ಹಿಂದುಸ್ತಾನದ ಶ್ರೇಷ್ಠತರಗತಿಯ ವಿಮಾಸಂಸ್ಥೆಗಳಲ್ಲಿ ಒಂದಾದ

ದಿ ಏಶಿಯಾಟಿಕ್ ಗವ್ಹರ್ನ್‌ಮೆಂಟ್ ಸೆಕ್ಯೂರಿಟಿ

ಲೈಫ್ ಅಶ್ಯೂರನ್ಸ್ ಕಂಪನಿ, ಲಿ. ಬೆಂಗಳೂರು

ಇದುವರೆಗೆ ರೂ. ೨,೫೦,೦೦೦,೦೦ ವಿಮಾಕಾರ್ಯ ಮಾಡಿದೆ. ★ ೨೫,೦೦೦ ಸಂಸಾರಗಳಿಗೆ ವಿಮಾರಕ್ಷಣೆ ದೊರಕಿಸಿದೆ.

ಕಡಿಮೆದರದ ಹಪ್ತೆಯ ಮೇಲೆ ವಿಮಾ ಇಳಿಸಬಹುದು.

ಏಶಿಯಾಟಿಕ್ ಕಂಪನಿಯ ಪ್ರಗತಿಯು ಕನ್ನಡಿಗರು ಹೆಮ್ಮೆ ಪಡತಕ್ಕದ್ದಾಗಿದೆ. ವಿಮೆ ಇಳಿಸಲು ಸುರಕ್ಷಿತವಾದ, ಭದ್ರವಾದ ಮೈಸೂರಿನ ವಿಮಾ ಸಂಸ್ಥೆ. ಹೆಚ್ಚಿನ ವಿವರಕ್ಕೆ ಬರೆಯಿರಿ.

ಏಜನ್ಸಿ ಸುಪರಿಂಟಿಂಡಂಟ್,

ಏಶಿಯಾಟಿಕ್ ಲೈಫ್ ಆಫೀಸ್, ಧಾರವಾಡ.

ಲಕ್ಷ್ಮೀಪತಿ

ಶ್ರೀ. ಮುಂ. ಅ. ದೊರೆಸ್ವಾಮಿಅಯ್ಯಂಗಾರ್
ಎಂ.ಎ., ಬಿ.ಎಲ್.

★

ಲಕ್ಷ್ಮೀಪತಿಯಾರು ? 'ನಾರಾಯಣನು' ಎಂದು ಹಸುಗೂಸುಗಳು ಸಹ ಉತ್ತರಕೊಡುವುವು. ಲಕ್ಷ್ಮಿ ಯಾರು? 'ಧನಾಭಿಮಾನ ದೇವತೆ' ಎಂದು ಉತ್ತರ ಹೊರಡುತ್ತದೆ. 'ಸಕಲ ವಿಧವಾದ ಧನವೂ ಲಕ್ಷ್ಮಿಯ ರೂಪವೇ ಆಗಿದೆ' ಎಂದು ಸಹ ಉತ್ತರ ಹೇಳಬಹುದು. ಹಣ–ಕಾಸು–ಒಡವೆ ವಸ್ತು–ಮನೆ– ಮಠ–ಭೂಮಿ–ಕಾಣಿ–ಹಸುಕರು– ಉಡುಗೆ–ತೊಡಿಗೆ- ವಾಹನ ವೊದಲಾಗಿ ಬೆಲೆಯುಳ್ಳ ಸಕಲ ಪದಾರ್ಥಗಳೂ ಲಕ್ಷ್ಮಿಯ ಅಂಶವೇ ಆಗಿವೆ. **ಸ್ವತ್ತು** ಅಥವಾ **ಆಸ್ತಿ** ಎಂಬ ಪದದಿಂದ ನಿರ್ವಚಿತವಾಗತಕ್ಕ ಸಕಲ ಪದಾರ್ಥಗಳೂ ಲಕ್ಷ್ಮಿಯ ರೂಪವಾಗಿವೆ. ಹಾಗಾದರೆ ಲೋಕದಲ್ಲಿ ಸ್ವತ್ತುಳ್ಳವರೆಲ್ಲರೂ ನಾರಾಯಣಾಂಶಸಂಪನ್ನರೇ?

'ಧನವಂತರೆಲ್ಲರೂ ಲಕ್ಷ್ಮೀಪತಿಗಳೇ ಸರಿ' ಎಂದು ಹೇಳತಕ್ಕವರು ಇರುವರು. ಸರ್ವಜನರೂ ಕಾಂಚನಪತಿಗಳನ್ನಾಶ್ರಯಿಸುವುದಕ್ಕೂ ಹಣಗಾರರನ್ನು ಒಲಯಿಸುವುದಕ್ಕೂ ಕಾರಣವೇನು? ಧನಿಕರಿಂದ ಕೂಲಿ, ಸಂಬಳ, ಸನ್ಮಾನ, ದಾನ ಮುಂತಾದ ರೂಪದಲ್ಲಿ ಪಡೆಯಬಹುದಾದ ದ್ರವ್ಯಲಾಭದ ಆಶೆಯು ಮಾತ್ರವೇ ಇದಕ್ಕೆ ಕಾರಣವಾಗಿರಬಹುದೇ? ಅದು ನಿಜವಾದರೆ ಲೋಕದ ನೀತಿವ್ಯವಸ್ಥೆಗೆ ನೆಲೆಯೇ ಇಲ್ಲವಾದೀತೆಂದು ಕೆಲವರು ವಾದಿಸುವರು. ಕುಲ, ಶೀಲ, ವಿದ್ಯೆ, ಗುಣ, ಬುದ್ಧಿ, ದೇಹಬಲ, ಆರೋಗ್ಯ ಮುಂತಾದ ಸಕಲ ಶ್ರೇಷ್ಠಾಂಶಗಳಲ್ಲೂ ಅಧಿಕರಾದವರುಗಳು, ತಮಗಿಂತಲೂ ಕೀಳರಾಗಿರತಕ್ಕ ಧನಿಕರ ಹಸಾದಕ್ಕೆ ಹಮ್ಮೈಸುತ್ತಿರುವುದು ನ್ಯಾಯವೇ? ಧನಲಾಭದ ಪ್ರತ್ಯಾಶೆಗಾಗಿ ಇವರು ನೀಚರನ್ನು ಒಲಯಿಸಬೇಕಾದರೆ ಲೋಕದಲ್ಲಿ ಉನ್ನತ ಧ್ಯೇಯಗಳು ಹೇಗೆ ನಿಲ್ಲುವುವು? ಇಂತಹ ಶೋಚನೀಯ ಸ್ಥಿತಿಯನ್ನು ಜಗದಾದಿಯಿಂದ ಹಿಡಿದು ಇದುವರೆಗೂ ಪರಮಾತ್ಮನಾದರೂ ಹೇಗೆ ಸಹಿಸಿರುವನು? ಜನಲೋಕದಲ್ಲಿ ಈ ವರೆಗೆ ಆಗಿಹೋಗಿರುವ ಅಸಂಖ್ಯಾತ ಅವತಾರಗಳೂ, ಮುನಿಗಳೂ, ಸಿದ್ಧರೂ, ಯೋಗಿಗಳೂ, ಪ್ರತಿಭಾಶಾಲಿಗಳೂ ಹೇಗೆ ಇದನ್ನು ನಿವಾರಿಸಲಾರದೆ ಹೋದರು? ಇವರೆಲ್ಲರೂ ಈ ಸ್ಥಿತಿಯನ್ನು ಒಪ್ಪಿರಬೇಕಾದರೆ, ಧನಿಕರಲ್ಲಿ ಸಕಲವಿಧವಾದ ದೃಷ್ಟವಾದ ಅವಗುಣಗಳನ್ನೂ ಮೆಟ್ಟತಕ್ಕ ಒಂದು ಅಪೂರ್ವ ಗುಣವು–ಒಂದು ಅನಾದೃಶ ಮಹಿಮಾಂಶವು–ಇದ್ದೇ ತೀರಬೇಕು. ಇವರಲ್ಲಿ ನಾರಾಯಣಾಂಶವು ಇರುವುದರಿಂದಲೇ ಸಕಲರೂ ಇವರನ್ನು ಪೂಜಿಸುತ್ತಲೂ, ಇವರ ಸೇವೆ ಮಾಡಿ ತನ್ಮೂಲಕ ತಮ್ಮ ಜೀವನವನ್ನು ಸಾಗಿಸುತ್ತಲೂ ಬರುತ್ತಿರುವರು. ಇವರಲ್ಲಿ ನಾರಾಯಣಾಂಶವು ಇಲ್ಲದೆ ಹೋಗಿದ್ದರೆ, ಲೋಕದ ಬಾಹ್ಯವ್ಯವಹಾರದ ದೃಷ್ಟಿಯಿಂದ ಕುಲ-ಶೀಲಾದಿಗಳಲ್ಲಿ ಇವರು ನೀಚರಾಗಿದ್ದರೂ ಇವರಿಗೆ ಲಕ್ಷ್ಮಿಯು ಕೈಸೇರುವುದಕ್ಕಾದರೂ ಕಾರಣವೇನು? ಇದಕ್ಕೆ ಇವರ ಪೂರ್ವಜನ್ಮ ಸುಕೃತವು ಕಾರಣವೆಂದರೆ—"ಆ ಸುಕೃತವು ಇವರನ್ನು ನಾರಾಯಣಾಂಶಸಂಭೂತರನ್ನಾಗಿ ಮಾಡಿದೆ ಎಂದರಿಯಬೇಕು. ಹಾಗಿಲ್ಲವಾದರೆ ಸಂಪತ್ತನ್ನು ಕಲ್ಪಿಸಿದ ಈ ಸುಕೃತವು ಕುಲ, ಶೀಲ, ವಿದ್ಯಾ, ಬುದ್ಧಿಗಳಲ್ಲೂ ಇವರಿಗೆ ಔನ್ನತ್ಯವನ್ನು ಕಲ್ಪಿಸುತ್ತಿದ್ದಿತು. ಆದುದರಿಂದ ಧನಿಕರು ಹೆಂಗುಸರಾಗಲಿ, ಮಕ್ಕಳಾಗಲಿ, ಮೂಢರಾಗಲಿ, ಅವಿವೇಕಿಗಳಾಗಲಿ, ನೀಚಕುಲದವರಾಗಲಿ, ಪಾಪಕರ್ಮಿಗಳಾಗಲಿ ಸಕಲರೂ ಅವರಲ್ಲಿರುವ ನಾರಾಯಣನಿಗೋಸ್ಕರ ಅವರನ್ನು ಪೂಜಿಸಬೇಕು.

ಹೀಗೆ ಧನವು ಲಕ್ಷ್ಮ್ಯಂಶವೆಂದು ಹೇಳಿದೊಡನೆಯೇ, ಧನಿಕರ ಪೂಜೆಯೆಂಬುದು ಆ ಸಿದ್ಧಾಂತಕ್ಕೆ ತರ್ಕಬದ್ಧವಾದ ಸಾರಾಂಶವಾಗಿ ತಲೆಗೆ ಕಟ್ಟುತ್ತದೆ.

ಈ ಸಾರಾಂಶವನ್ನು ಅಂಗೀಕರಿಸಲಾರದೆ ಹೋದೆವಾದರೆ ಏನು ಮಾಡಬೇಕು?

ಈ ಸಿದ್ಧಾಂತವನ್ನೇ ನಿರಾಕರಿಸಿಬಿಟ್ಟರೆ ತಜ್ಜನ್ಯ ಸಾರಾಂಶವು ನಿರ್ನಾಮವಾಗುವುದು. ಅದರೆ ಆಸ್ತಿಕರಾದ ಹಿಂದುಗಳು 'ಹೀಗೆ ಮಾಡಲಾರರು. ಹಾಗೆ ಮಾಡಹೋಗುವುದು ಸಕಲ ಪುರಾಣವಚನಗಳಿಗೂ ವಿರುದ್ಧಾಚರಣೆಯಾಗುವುದು. ಅಲ್ಲದೆ ಹಾಗೆ ಮಾಡುವುದು ಲೋಕತಂತ್ರದ ದೃಷ್ಟಿಯಿಂದಲೂ ಅಸಾಧುವೇ ಸರಿ. ಕಾರ್ಯತಃ ಲೋಕದಲ್ಲಿ ಬಹುಮಂದಿ ಜನರು ಕೆಲಮಂದಿ ಧನಿಕರ ಸೇವಕರಾಗಿ ಜೀವಿಸುವುದು ಅಪರಿಹಾರ್ಯವಾಗಿರುವುದರಿಂದ, ಈ ಸಿದ್ಧಾಂತವಿಲ್ಲದಿದ್ದರೆ ಲೋಕದಲ್ಲಿ ನೀತಿಗೂ ಧರ್ಮಕ್ಕೂ ವ್ಯವಸ್ಥೆಯೇ ಇಲ್ಲವಾಗುವುದು. **ಭಕ್ತಿಮಹಗಳಲ್ಲೆಲ್ಲಾ, ಜೀವಾತ್ಮನು ಲಕ್ಷ್ಮಿಯನ್ನು ಮುಂದಿಟ್ಟುಕೊಂಡೇ ಭಗವಂತನನ್ನು ಸಾಕ್ಷಾತ್ಕಾರ ಮಾಡಬೇಕೆಂಬ ಅಭಿಪ್ರಾಯವಿದೆ.** ಲಕ್ಷ್ಮಿಯು ಜೀವಾತ್ಮನಿಗೂ ಪರಮಾತ್ಮನಿಗೂ **ಪುರುಷಕಾರ** ಎಂದರೆ ಮಧ್ಯಸ್ಥಿಕೆ ಮಾಡುತ್ತ, ಜೀವಾತ್ಮನಿಗೆ ಭಗವಂತನ ಕೃಪೆಯನ್ನು ದೊರೆಕಿಸಿ ಕೊಡತಕ್ಕ ಸಾಧನವಾಗಿರುವಳು. ರಾಮಾನುಜ ಮತದಲ್ಲಿ ಲಕ್ಷ್ಮಿಯ ಸ್ಥಾನವು ಮತ್ತೂ ಮುಂದುವರಿದಿರುವುದು. ಭಗವಂತನ ತರುವಾಯ ಲಕ್ಷ್ಮಿಯೇ ಈ ಮತದ ಪ್ರಕಾರ ಲೋಕಕ್ಕೆ ಆದಿಗುರುವಾಗಿರುವಳು.

ಲೋಕದಲ್ಲಿ ಅಧಿಕಾರ, ಒಡೆತನ, ಈಶತ್ವ ಇವುಗಳಿಗೆ ಧನವೇ ಆಧಾರವಾಗಿದೆ. ನಮ್ಮಲ್ಲಿ ಐಶ್ವರ್ಯ ಎಂದರೆ ಒಡೆತನ ಎಂದು ಯೌಗಿಕವಾಗಿ ಅರ್ಥವಾದರೂ, ರೂಢಿಯಲ್ಲಿ ಧನಿಕತ್ವ ಎಂದು ಅರ್ಥವುಂಟಾಗಿದೆ. ಅಧಿಕಾರಗಳಲ್ಲಿ ರಾಜಾಧಿಕಾರವು ಸರ್ವಶ್ರೇಷ್ಠವಾಗಿದೆ. ರಾಜಭೋಗ ಎಂದರೆ ಅತ್ಯಂತವಾದ ಸಂಪತ್ತಿನ ಭೋಗವೆಂಬ ಭಾವನೆಯುಂಟಾಗಿದೆ. 'ರಾಜನಿಗೆ ಬಡತನವೇ?' ಎಂದು ನಾಣ್ಣುಡಿಯು ಪ್ರಶ್ನೆಮಾಡುತ್ತಿದೆ. ಲೋಕದಲ್ಲಿ ರಾಜನೂ ಸರಕಾರವೂ ಏತಕ್ಕಾಗಿ ಇರುವರು? ದೇಶದಲ್ಲಿರುವ ಧನಿಕರ ಸ್ವತ್ತನ್ನು ಸಂರಕ್ಷಿಸುವುದೇ ಇವರ ಮುಖ್ಯ ಕೆಲಸವಾಗಿದೆ. ಅಧಿಕಾರಸಂಸ್ಥೆಯಾದ ಸರಕಾರವು, ಧನಿಕರನ್ನು

ದಿವಾಳಿಯ ದಶಮಗ್ರಹ

(ಏಕಾಂಕ ನಾಟಕ)

ಶ್ರೀ. ಎನ್. ಕೆ. ಕುಲಕರ್ಣಿ,
ಎಂ. ಎ., ಬಿ. ಟಿ.

★

ಪಾತ್ರಗಳು :

ಹುಚ್ಚರಾಯ :- ಯತ್ನಕ್ಕಿಂತ ದೈವಕ್ಕೆ, ಧರ್ಮಕ್ಕಿಂತ ಪತ್ನಿಗೆ ಅಧೀನನಾದ, ಅರುವತ್ತು ವರುಷಕ್ಕೆ ಸವಿಾಪಿಸಿದ ಪೆನ್‌ಶನ್‌ದಾರ ಸಬ್‌ರಜಿಸ್ಟ್ರಾರ್.

ಲಕ್ಷುಂಬಾಯಿ :- ಹುಚ್ಚರಾಯನ ಎರಡನೆಯ ಧರ್ಮಪತ್ನಿ—ಸುಮಾರು ನಾಲ್ವತ್ತು ವರುಷದವಳು.

ವತ್ಸಲಾ :- ರಾಯರ ಅಚ್ಚಿಯ ಚಿಕ್ಕಮಗಳು.

ಶಕುಂತಲಾ :- ರಾಯರ ಇನ್ನೊಬ್ಬ ಮಗಳು.

ಅಳಿಯದೇವರು :- ರಾಯರ ಕಿರಿಯ ಅಳಿಯ.

ಗುಂಡೂ :- ರಾಯರ ಒಬ್ಬನೇ ಮಗ—ಒಲ್ಪವಯಸ್ಸಿನ ಹೊಸ್ತಿಲ ಮೇಲೆ ನಿಂತಂತೆ—೧೭ ವರುಷ ವಯಸ್ಸು.

★

[ರಾಯರ—ಕಾಮದಾರರಿಗೆ ತಕ್ಕಂತೆ ಅಚ್ಚುಕಟ್ಟಾದ—ಮನೆಯ ನಡುಮನೆಯಲ್ಲಿ, ರಾಯರು ವಿಚಾರಭರದ ಏರಾಟ ಹೆಚ್ಚಾದಂತೆ, ಭರಭರಾಟಿಯಿಂದ ಶತಪಥಹಾಕುತ್ತಿರುವರು. ಕೆಲನಿಮಿಷ ರಂಗಭೂಮಿ ಸ್ತಬ್ಧವಾಗಿದ್ದು ರಾಯರ ಹೆಜ್ಜೆಯ ಸಪ್ಪಳದ ಹೊರತು ಬೇರೆ ಏನೂ ಕೇಳಬರುವುದಿಲ್ಲ. ಆನೆಲೆ, ಲಕ್ಷುಂಬಾಯಿ ಒಂದು ಕೈಯಲ್ಲಿ ಉರುಳೀಗಡ್ಡೆಗಳನ್ನೂ ಇನ್ನೊಂದು ಕೈಯಲ್ಲಿ ಈಳಿಗೆಯನ್ನೂ ಹಿಡಿದುಕೊಂಡು ಪ್ರವೇಶಿಸಿ, ಪಲ್ಲೆ ಹೆಚ್ಚತೊಡಗುವಳು. ರಾಯರು ಲಕ್ಷ್ಯವಿಲ್ಲದೆ ಶತಪಥ ನಡೆಸಿದುದನ್ನು ನೋಡಿ—]

ಲಕ್ಷುಂಬಾಯಿ :— ಹೊರಗ ಮಳಿ ಇಲ್ಲಾ, ಛಳಿ ಇಲ್ಲಾ; ಹೋಗಬೇಕು ತಿರುಗಾಡಲಿಕ್ಕೆ; ಪೆನ್‌ಶನ್ ಆದರ ತಿರುಗಾಡಲಿಕ್ಕೆ ಸುದ್ದಾ ಹೋಗಬಾರದೇನೊ! ಹೊತ್ತು ಮುಳುಗಿದರೂ ಮನಿಯೊಳಗಽ—

ಹುಚ್ಚರಾಯ :— ಇನ್ನು ಮನೀ ಬಿಟ್ಟು ಹೊರಗೆ ಬೀಳೋದು ಅಂದರ ಒಮ್ಮೇ. ನಾನೂ ಅದೇ ಹಾದಿ ನೋಡತೀನಿ!

ಲಕ್ಷುಂಬಾಯಿ :— ಥಣ್ಣಗ ನಾನೇ ಎಲ್ಲಿಯಾದರೂ ತೀರ್ಥಯಾತ್ರಿಗೆ ಹೊರಟುಬಿಡತೀನಿ.

ಹುಚ್ಚರಾಯ :— ನೀನು ಯಾಕ..ನಾನೇ ಎಲ್ಲಿಯಾದರೂ ದೇಶಾಂತರಕ್ಕೆ ಹೋಗಿಬಿಡತೀನಿ. ನೀನು ಮನೆಯಲ್ಲಿಯೆ ಇರು, ಹೆಣ್ಣುಮಕ್ಕಳಿಗೆಲ್ಲಾ ಅಳಿಯತನ ಮಾಡಿಸಿಗೋತಽ!

ಲಕ್ಷುಂಬಾಯಿ :— ಯಾಕದು, ಸುಮ್ಮನೆ ನಾನೇ ಹೋಗಿಬಿಡತೀನಿ; ನೀವೇ ಇರ್ರಿ ಸುಖದಿಂದ, ತಿಂಗಳಾ ಒಬ್ಬರ ಖರ್ಚು ಕಡಿಮಿ ಆಯಿತು ಅಂತ. (ಸಿಟ್ಟಿನಿಂದ ಪಲ್ಲೆ ಹೆಚ್ಚುತ್ತ) ಮುಖ್ಯ ನನ್ನ ಸಸೀಬ ಖೊಟ್ಟಿ ಅದ, ಅದಕ್ಕೆ ಯಾರೇನು ಮಾಡೋದು! ಅದಕ್ಕನೇ ಎರಡನೇ ಸಂಬಂಧ ಅಂದರ, ಕಸಕ್ಕಿಂತ ಕಡೀ ಅಂಬೋದು. ಮೊದಲನೆಯವಳ ಹೆಣ್ಣುಮಕ್ಕಳಿಗೆ ಮಾತ್ರ ಒಬ್ಬೊಬ್ಬರಿಗೆ ಐದೈದು ವರ್ಷ ಅಳಿಯತನ ಮಾಡಿಸಿದಿರಿ. (ಕಣ್ಣೀರೊರಸಿಕೊಳ್ಳುತ್ತ) ಈಗ ಇರುವಾಕಿ ಒಬ್ಬ ಕಡೆಯ ಮಗಳಿಗೆ, ಒಂದು ವರುಷ ಅಳಿಯತನ ಮಾಡಿಸಲಿಕ್ಕೆ ಮೈಮೇಲೆ ಮುಗಿಲು ಕಡಿದುಕೊಂಡು ಬಿದ್ದ ಹಾಂಗ ಮಾಡತೀರಿ. ಆಗಲಿ, ಅದಕ್ಕೇನು ಮಾಡೋದು!

ಹುಚ್ಚರಾಯ :— ಹೂನಽ ಹೂನಽ ಹೂಂ, ಹೂಂ, ಹೂಂ! ಒಮ್ಮೆ ಹೂಂ ಅಂತಂದರ ಆಲ್ಲೇನದು? ಮತ್ತೂ ಮತ್ತೂ ಅದೇ ಮಾತು, ಅದೇ ಕಥಿ.

ಲಕ್ಷುಂಬಾಯಿ :— ಅದೇ; ಇಷ್ಟೊಂದು ಕಣ್ಣೀರು ಶವಾಳಕ ಬಂದಮ್ಯಾಲೆ, ನಿರ್ವಾಹವಿಲ್ಲದೆ ಅನ್ನೋದು ಹೂಂ ಅಂತ—ಹೆಂಡತಿಯ ಹೆಸರು ತಗೊಂಡ ಹಾಂಗ! ಇಂಥಾ ಪರಿಯಿಂದ ಹೂಂ ಅನಿಸಿಗೊಂಡರ ಆಗೋದಾರಽ ಏನು?

ಹುಚ್ಚರಾಯ :— ಇಲ್ಲಽ ಮಾರಾಯಳ, ಆಗದೀ ಹೃತ್ಪೂರ್ವಕವಾಗಿ ಹೇಳತೀನಿ..ಹೂಂ! ಆಯಿತಿಲ್ಲೋ? ಹೂಂ! ಇನ್ನಾರೆ ಸುಮ್ಮನಾಗತೀಯಿಲ್ಲೊ?

ಲಕ್ಷುಂಬಾಯಿ :— ಹೂಂ—ಹಾಂಗೇ ಸೈ....ಸುಸೂತ್ರ ಒಳಗೇ ವಲ್ಯಾ ಪೆಚ್ಚಿಗೋತಽ ಕೂಡತೀನಿ; ಮಾತಾಡಿದರ ಮೈಮ್ಯಾಲ ಬರತ್ತಿದ್ದರ—

ಹುಚ್ಚರಾಯ :— (ನಿರಾಶೆಯಿಂದ ಕೈಚೆಲ್ಲಿ) ಇನ್ನ ಯಾವ ರೀತಿ ನಿನ್ನ ಸಮಾಧಾನ ಮಾಡಬೇಕೋ ತಿಳಿಯದಂತೆ ಆಗೇದ. ಮುಪ್ಪಿನ ಕಾಲಕ್ಕ ಮೂರು ಮಂದಿ ಹೆಂಡರ ಕೈಯೊಳಗಿಂದಽ ಆ ದಶರಥಾ ಹ್ಯಾಂಗಾದರೂ ಪಾರಾದನೋ ಮಾರಾಯಾ!

ಲಕ್ಷುಂಬಾಯಿ :— ನಿಮ್ಮ ಹಾಂಗ ಅಂವಾ ಅಳೀತನಾ ಮಾಡಿಸಲಿಕ್ಕೆ ಒಲ್ಲೆ ಅಂತಿದ್ದಿಲ್ಲಾ!

ಹುಚ್ಚರಾಯ :—ಅಂತೇ ಇದ್ದ ಮಕ್ಕಳ್ನ ಅಡವಿಗೆ ಕಳಿಸೋ ಹೊತ್ತು ಬಂತು ಅವನಿಗೆ.

ಲಕ್ಷುಂಬಾಯಿ :— ಹೆಂಡತಿನ್ನ ಕಂಡರ ವರಾ ವರಾ ಅಂತ ಕೂಣದಾಡತಿದ್ದನಂತ ಆ ಮಾರಾಯಾ!

ಹುಚ್ಚರಾಯ :— ಏನಽ ಮಾರಾಯಿತಿ, ನಿನ್ನಂಥಾಕಿ ಒಬ್ಬ ಳಿದ್ದರ ಹೇಳತಿದ್ದೆ ಅಂವಗ.

ಲಕ್ಷುಂಬಾಯಿ :— ನನ್ನಂಥಾಕಿ ಇದ್ದರ ಅವನ ಪುಣ್ಯಾ! ನಿಮಗೇ ಸಿಗಬೇಕಾಗಿತ್ತು ಆ ಕೈಕಯಿಗಾ ಅಂಥಾಕಿ, ಉರಿಸಿ ಒಲೀ ತುಂಬಿಸಲಿಕ್ಕೆ !

ಹುಚ್ಚರಾಯ :— (ಒಮ್ಮೆಲೆ ಖೊಳ್ಳನೆ ನಗುತ್ತ) ಇಕಾ, ಹೀಂಗ ಬೇಕಾದಷ್ಟು ಮಾತಾಡು. ಆದರ ಸಿಟ್ಟಿಗೆ ಬರಬ್ಯಾಡಾ. ಅಲ್ಲಾ, ಸುಳ್ಳೇ ನೀನೂ ಮನಸ್ಸಿಗೆ ತಾಪ ಮಾಡಿಕೋತೀ; ನನಗೂ ತಾಪ ಕೊಡತೀ!

ಲಕ್ಷುಂಬಾಯಿ :— ಆಗಲಿ, ಹಾಂಗಾದರ ಅಷ್ಟು ನಾ ತಾಸ ಕೊಡತಿದ್ದರ..ಒಳಗೇ ಹೋಗಿ ಪಲ್ಯಾ ಹೆಚ್ಚಿಗೋತೀನಿ !

ಹುಚ್ಚರಾಯ :— ಚೇಳಿನ ಕೊಂಡಿ!.... ಅಲ್ಲಽ ಪಲ್ಯಾ ಯಾವುದು ಮಾಡತೀದೀ?

ಲಕ್ಷುಂಬಾಯಿ :— ಏನು ಭಾಳ ಮನಿತುಂಬಾ ಪಲ್ಯಾ ತಂದು ಹಾಕೀರಿ..ಹೇಳೋ ಹಾಂಗಿಲ್ಲಾ. ತಿರಗಾ ಮುರಗಾ ಒಂದು ಉಳ್ಳಾಗಡ್ಡಿ, ಒಂದು ಚವಳೀಕಾಯಿ !

ಹುಚ್ಚರಾಯ :—ಹಾಂಗಾದರ ಚವಳೀಕಾಯಿ ಪಲ್ಯಾ ಮಾಡಬೇಕು?

ಲಕ್ಷುಂಬಾಯಿ :— ಮನಿಯೊಳಗ ಕೂತವರು ಅರಿಸಿ ಕೊಟ್ಟರ ಮಾಡತೀನಿ. ಆದರ ನೀವ್ಯಾಕ ನೆರವು ಆದೀರಿ ಹೆಂಗಸರಿಗೆ—

ಹುಚ್ಚರಾಯ :— ನನ್ನ ಕರ್ಮ! ಮತ್ತ ಮನಿಗೆ ಬಂದ ಪೆಣ್ಣುಮಕ್ಕಳೂ ಅಂದರ .. ಬೇಗಂ ಸಾಹೇಬರೇನು? ಅವರು ಒಂದೂ ಕೆಲಸಾ ಮಾಡಬಾರದೇನು ತೌರಮನಿಯೊಳಗ?

ಲಕ್ಷುಂಬಾಯಿ :— ಯಾ ಕಷ್ಟ ಆಡಿಕೊಳ್ಳೋದು ನನ್ನ ಪೆಣ್ಣುಮಕ್ಕಳಿಗೆ? (ದುಃಖ ತುಂಬಿ) ಪಾಪಾ, ಅತ್ತೀಮನಿಯೊಳಗ ಮೈಮುರಿ ದುಡಿದೂ, ಮತ್ತೂ ಇಲ್ಲಿಯೂ ದುಡೀ ಅಂತೀರಲ್ಲ; ಎಂತಹ ಕಟುಕ ಮನಸ್ಸು ನಿಮ್ಮದು?

ಹುಚ್ಚರಾಯ :— ನೀನು ಕಲಿಸಿ ಇಟ್ಟ ಆಚಾರ್ಯನೆ ಇದೆಲ್ಲಾ! (ಒಳಗಿನಿಂದ ವತ್ಸಲೆ ಪ್ರವೇಶಿಸುವಳು)

ವತ್ಸಲಾ :—ಏವ್ವಾ, ಇವೊತ್ತು ನಿನ್ನ ಜರದ ಸೀರೀ ಉಟ್ಟು ಕೊಳ್ಳಲೇನು?

ಲಕ್ಷುಂಬಾಯಿ :— ಹೂಂ. ಉಟ್ಟುಕೊ; ಆದರ ಜೋಕೆ ಆಂ! ಎಲ್ಲೆಯಾದರೂ ಕೊಕ್ಕಿಗೆ ಸಿಕ್ಕೀತು. ನೀ ಜೋ ಕಿಂದ ಉಟ್ಟುಕೊಂಡರ ನಿನಗೇ ಕೊಡತೀನಿ ಆ ಸೀರೀ!

ಹುಚ್ಚರಾಯ :—ಹೂಂ. ನಿನಗೇ ಕೊಡತಾಳೆ..ಈ ಮನೀನ್ನ ನಿನ್ನ ಹೆಸರ್ಲೆ ಬರೆದು ಕೊಡತಾಳೆ!

ವತ್ಸಲಾ :— (ಸಿಡುಕಿನಿಂದ) ಏವ್ವಾ, ನೋಡಿದೇನವ್ವಾ! ಒಂದು ಸೀರಿ ಕೊಡತೀನಿ ಅಂದರ ಇಷ್ಟು ಗಡತರ ಮೈಮೇಲೆ ಬರತಾನ; ಸೇಕಿಗೆ ಮಾತ್ರ ಕಂಟಮಟಾ ವಸಾ ಮಾಡಿಸಿ ಕೊಟ್ಟಾ. ಹಾಂಗ ನೋಡಿದರ ನನಗ ಒಂದು ಬೆಂಡೋಲೀ ಸುದ್ದಾ ಇನ್ನೂ ಕೊಟ್ಟಿಲ್ಲಾ!

ಲಕ್ಷುಂಬಾಯಿ :— ನಿನ್ನ ತೌಡು ಹಾಕಿ ಕೊಂಡಾರವಾ; ಅವರಿಗೆ ಅಚ್ಚೇದ ಮಕ್ಕಳು ಅಂದರೆ ಅವರೇ!

ವತ್ಸಲಾ :— ನಾನು ಮಾತ್ರ ತುಚ್ಛದ ಮಗಳು....ಅಂತೀ ಕಳವೂಟದಲ್ಲಿ ಸೆಟಗೊಂಡು ಕೂತರೆ, ಇವರಿಗೆ ಒಂದು ಫೋನೋ-ಗ್ರಾಫ್ ಸುದ್ದಾ ಕೊಡಿಸಲಿಲ್ಲಾ!

ಲಕ್ಷುಂಬಾಯಿ :— ನನ್ನ ಖೊಟ್ಟಿ ನಶೀಬಾ. ಯಾವ ಕಾಲ್ಗುಣದ ಮೇಲೆ ಹುಟ್ಟಿದಿಯೊ ಏನೊ!....ಕಡಿಯ ಅಳಿಯ ಅಂದರ ಹನ್ನೆರಡು ತಿಂಗಳೂ ಮನಿಯಲ್ಲಿಯೆ ಇಟ್ಟುಕೊಂಡು ಅಳಿಯತನ ಮಾಡತಾರೆ. ಮನಿಯಲ್ಲಿ ಅಳಿಯಂದಿರು ಮಕ್ಕಳೂ ಅಂತಿದ್ದರೆ, ಎಲ್ಲಾ ಛಂದ!

ಹುಚ್ಚರಾಯ:— ಈ ಅಳಿಯಂದಿರಿಗೆ ಮಾಡಿಮಾಡಿಯೇ ನನ್ನ ತಲಿ ಬೆಳ್ಳಗಾಯಿತು! ಪೆನ್‌ಶನ್ ಆದಮೇಲೆ ಆದರೂ, ತಲಿಯ ಮೇಲೆ ಒಂದೆರಡು ಎಳಿ ಚಂಡಿಕೆ ಉಳಿಯಲೀ ಅಂತ ನಮ್ಮ ಇಚ್ಛಾ!

ಲಕ್ಷುಂಬಾಯಿ:— ಹೌದು, ಈಗೇ ಸುರುವಾಗೇದೇನೋ ಈ ವೈರಾಗ್ಯ!

ಹುಚ್ಚರಾಯ:— ಅಲ್ಲಽ, ಆವಾಗ ಸಿಗತಿತ್ತು, ಹ್ಯಾಂಗ.. ಮೇಲೆ ಮುಷ್ಟೀ ಫಂಡು? ಈಗೇನದ ಮುಂಗೈಗೆ ಚಂಡು! ಪೆನ್‌ಶನ್ ಆದ ಕಾಮದಾರರು ಅಂದರ, ಓದಿಬಿಟ್ಟ ವರ್ತಮಾನಪತ್ರ ಇದ್ದಹಾಂಗ. ಕಂಡರ ಸಾವಿರ ಸರ್ತೆ ಸಲಾಮು ಹೊಡೆಯೊ ಸಿಪಾಯರು, ಈಗ ಕಣ್ಣೆತ್ತಿ ಕೂಡಾ ನೋಡೋದಿಲ್ಲ. ನಾವೇ ಕೈಮುಗಿದರೂ, ತಿರುಗಿ ಆದರೂ ಕೈ ಮುಗೀತಾರೊ ಇಲ್ಲೋ ಸಂಶಯ.

ಲಕ್ಷುಂಬಾಯಿ:— ಸಾಕು ಹೋಗ್ರಿ, ಬರೇ ನಿಮ್ಮ ರಗಳೇ ರಾಮಾಯಣನೇ ಆಯಿತು....ಅಲ್ಲಾ ನಾಳೇ ನೀರತುಂಬೋ ಹಬ್ಬಾ; ಜೀಗರಿಗೆ ಪತ್ರಾನಾದರೂ ಹಾಕೀರೊ ಇಲ್ಲೊ?

ಹುಚ್ಚರಾಯ— ಹಾಕೀನಿ ಮಾರಾಯಳಽ, ಹಾಕೀನಿ. ನಿನ್ನ ಮುಂದ ಯಾರ ಆಟ ನಡೀತಽದ?

ಲಕ್ಷುಂಬಾಯಿ:— ಪತ್ರಾ ಹಾಕಿದ್ದರ ಮತ್ತ ಇವೊತ್ತೇ ಬರೋದು; ಟೇಸನ್ನಕಾದರೂ ಹೋಗತೀರೊ?

ಹುಚ್ಚರಾಯ:— ತಪಾಸಣಿಗೆ ಬರೋ ಮೇಲಧಿಕಾರಿಗಳಿಗಿಂತಾ ಎಗಿಲಾದರು ಬಿಡು, ಈ ಅಳಿಯಂದಿರಂಬುವರು! ನಾನು ಸಬ್ಬರಜಿಸ್ಟರ್ ಇದ್ದಾಗ ಸುದ್ದಾ ಒಬ್ಬ ಆಫೀಸರ್ ಜನರಿಗೂ ಜೀ ಅಂತಿದ್ದಿಲ್ಲಾ....ಅದೂ ಹೋಗಲಿ, ಇಷ್ಟು ಮಾಡಿಸಿಕೊಂಡರೂ

ಒಬ್ಬ ಅಳಿಯಂದಿರೂ ನಮ್ಮ ಸಿಫಾರಸು ಮಾಡೋದಿಲ್ಲಾ. ಈ ಅಳಿಯಂದಿರ ವರ್ಜೀ ಹಿಡಿಯೋದಂದರ ಅಗದೀ 'ಥ್ಯಾಂಕಲೆಸ್ ಟಾಸ್ಕ್' ನೋಡು. ಬಾಗಿಲಿಗೆ ಅನಿಸುವ ಅಗಳಿಗೆ ಅಳಿಯ ಅಂದ ಕೂಡಲೆ, ಅದೂ ಕೂಡಾ ನೆಟಿದು ನಿಲ್ಲತಕದಂತೆ !

ವತ್ಸಲಾ:— ಹೌದಪಾ, ನೀಯೇನು ಅಳಿಯನಾಗಿದ್ದರಲಿಲ್ಲ ವೇನು ?

ಹುಚ್ಚರಾಯ:— ಕೇಳು ಆಕಿನ್ನ !

ಲಕ್ಷುಂಬಾಯಿ:— ಏನು ಕೇಳೋದು ನನ್ನ. ಎಲ್ಲಾ ನನ್ನ ಉಪಗಾರಕ್ಕೇ ಮಾಡೋಹಾಂಗ ಮಾಡತಾರ. ನನಗೊಬ್ಬಳಿಗೇ ಮಕ್ಕಳು—ಅಳಿಯಂದಿರು, ತಮಗಲ್ಲೇನೊ !.....ವಚ್ಚಾ ; ನೀ ಸುಸೂತ್ರ ನಿಮ್ಮ ಮನೀಗೆ ಹೋಗಿ ಬಿಡವ್ವಾ—ಇವರ ಕಡಿಂದ ನೀವು ಅಳಿಯತನ ಮಾಡಿಸಿಗೊಳ್ಳೂದೂ ಬ್ಯಾಡಾ; ಅನಿಸಿಗೊಳ್ಳೂದೂ ಬ್ಯಾಡಾ ! (ವತ್ಸಲೆ ಒಳಗೆ ಹೋಗುವಳು. ಲಕ್ಷುಂಬಾಯಿಯು ಸಿಟ್ಟಿನಿಂದ ದುಡುದುಡನೆ ಒಳಗೆ ಹೋಗುವಾಗ, ಹುಚ್ಚರಾಯನು ಅವಳನ್ನು ಅಡ್ಡ ತರುಬಿ)

ಹುಚ್ಚರಾಯ :— ಹೌದಕ — ಬಂತೇ ಸಿಟ್ಟು, ತಡೆ ಇಲ್ಲದ! ದೇವರು ಈ ಹೆಂಗಸರಿಗೆ ಮೈಯೊಳಗ ಸಿಟ್ಟು, ಕಣ್ಣೊಳಗ ನೀರು ಇವೇ ಎರಡು ದಯಪಾಲಿಸಿದನೋ ಏನೋ !....ಅಲ್ಲಕ ಕೂಡ ಬಾ ಇಲ್ಲೆ. (ಅವಳನ್ನು ಕೈ ಹಿಡಿದು ಕೂಡಿಸಿ) ಒಟ್ಟು ನಿನ್ನ ವಾಸನಾನಾರೇ ಏನದಕ ಹೇಳಿ ಬಿಡು ಒಂಧಪಾ. ಕೊರಳೊಳಗ ತಾಳಾ ಹಾಕಿ, ದಾಸಕೂಟದ ಮೆಂಬರ್ ಆಗೋ ತನಕಾ ಸರ್ತಿ.. ನೀನು ಹೇಳಿದಂತೇ ಹೆಜ್ಜೀ ಹಾಕತೀನಿ.

ವತ್ಸಲಾ :— (ಗಾಬರಿಗೊಂಡು ಧಾವಿಸುತ್ತ, ಒಂದು ತಾರಿನ ಪಾಕೀಟನ್ನೂ ಜೊತೆಗೆ ಸಹಿಯ ಫಾರ್ಮನ್ನೂ ಹಿಡಿದುಕೊಂಡು ಪ್ರವೇಶಿಸಿದಳು.) ಅಪ್ಪಾ, ಇದು ನೋಡು ತಾರು. ಜೊರಗೆ ಪೋಸ್ಟಮನ್ ತಂದುಕೊಟ್ಟ!

ಹುಚ್ಚರಾಯ:— (ಫಾರ್ಮಿನ ಮೇಲೆ ಸಹಿ ಮಾಡುವನು.)

ಲಕ್ಷುಂಬಾಯಿ— (ಚಡಪಡಿಕೆಯಿಂದ ಮುಳುಗುವ ಹಡಗದಂತೆ ಹೊಯ್ದಾಡುತ್ತ) ತಾರು ಯಾಕ ಬಂದಿದ್ದೀತಕ ನಮ್ಮವ್ವಾ ಸುಡ್ಲಿ ! ಥೂ, ನಮ್ಮವ್ವಾ, ಹಬ್ಬದಾಗ ಇದೇನೂ ಅಂತೀನಿ ಅವಲಕ್ಷಣ! (ಗಂಡನಿಗೆ ಆರ್ತತೆಯಿಂದ) ಮೇಲೆ ಕ್ಷೇಮ ಸಮಾಚಾರ ಅದಕನೊ ಇಲ್ಲೊ? ಎಲ್ಲಿಂದ ಬಂದಿದ ತಾರು? ಸೇಕೂ ಅವರು ನೆಟ್ಟಗಿದ್ದಾರಂತ ಹೌದಲ್ಲೊ? ಹೀಂಗ್ಯಾಕ ಸುಮ್ಮನೆ ನಿಂತಿರಿ? ಹೇಳಬಾರದರೇ ಭಡವಾನೆ!

ಹುಚ್ಚರಾಯ :— ವತ್ಸಲಾ, ಭಡವಾನೇ ಇದನ್ನ ಹೊರಗ ಪೋಸ್ಟಮನ್ನನಿಗೆ ಕೊಟ್ಟು ಬಾ. (ನಗುತ್ತ ಲಕ್ಷುಂಬಾಯಿಗೆ) ತಾರೂ ಅಂದರ ಅನಾಹುತನೇ ಇರಬೇಕೂ ಅಂತ ಈ ಹೆಂಗಸರ ಹಟ !

ಲಕ್ಷುಂಬಾಯಿ:— ಎಲ್ಲಿಯ ಹಟಾ ಬರತಕದ ವರ್ಣಾಗ? ಕ್ಷೇಮಸಮಾಚಾರ ಅದಕನೊ ಇಲ್ಲೊ ಹೇಳಬಾರದರೇ ಭಡವಾನೆ?

ಹುಚ್ಚರಾಯ :— ನಮ್ಮ ಕ್ಷೇಮಸಮಾಚಾರ ತಗೊಳ್ಳಿಲಿಕ್ಕೇನೇ ಬರುವವರಿದ್ದಾರೆ. ಐದನೆಯ ಬಾಣಂತಿತನಕ್ಕೆ ನಿನ್ನ ಹಿರಿಯ ಮಗಳು ಇಂದೇ ಬರುವವಳಂತ !

ಲಕ್ಷುಂಬಾಯಿ:— (ನಗುತ್ತ) ಅಯ್ಯ ಯ್ಯಾ! ಎಂದ ? (ಉಲ್ಲಾಸದಿಂದ ಮುಖ ಅರಳುವುದು) ಆಕಿ ಒಬ್ಬಾಕಿ ಇಲ್ಲಾ ಅಂತ ಚಡಪಡಿಕಿ ಆಗಿತ್ತು !

ಹುಚ್ಚರಾಯ :— ಹೌದು, ದುಷ್ಕಾಲ ಒಂದೇ ಆಗಿತ್ತೂ ಅಂತ ನನಗೂ ಚಡಪಡಿಕಿ ಆಗಿತ್ತು. ಆಯಿತು, ಅದಕ್ಕ ಕುಂದಣಾ ಕೂಡಿಸಿದ ಹಾಂಗ, ಅಧಿಕ ಮಾಸ ಒಂದೂ ಆದಂತಾಯಿತೂ ಅಂತ ಸಮಾಧಾನ ಅನಿಸಿತು ನೋಡು!.... ಸರಕಾರ ಈ ವಿಷಯಕ್ಕ ಯಾಕ ಕಿವಿಮುಚ್ಚಿಕೊಂಡು ಕೂತಕದ ಅಂತೇನಿ ಕಾರಕೂನರು ಲಂಚಾ ತಿನಬಾರದೂ ಅಂತ ಕಾಯಿದೆ ಮಾಡೋ ಸರಕಾರ, ಅಳಿಯಂದಿರು ಮಾವಂದಿರ ಸುಲಿಗೀ ಮಾಡಬಾರದೂ ಅಂತ ಮಾಶ್ರ. ಕಾಯಿದೆ ಮಾಡಬಾರದೇನೊ! ಆದ್ಯಾಕ ಮಾಡಬಾರದೂ ಅಂತೀನಿ!....ಹುಶ್, ಏನು ಮಾಡಲಿ, ನನ್ನ ನಶೀಬ! ಸರಕಾರದ ಮಾತು ಒತ್ತಟ್ಟಿಗಿರಲಿ; ಹದಿನೆಂಟು ಮಂದಿ ಹೆಣ್ಣು ಮಕ್ಕಳನ ನನ್ನ ಒಂದೇ ಒಂದು ಹೊಟ್ಟೆಯಿಂದ ಹುಟ್ಟಿಸಿದ ಆ ಬ್ರಹ್ಮನಿಗಾದರೂ ತಲೀ ಅದಕನೊ ಇಲ್ಲೋ ಅಂತೀನಿ....ತಲೆಗೊಂದೊಂದು ವಿಚಾರ ಮಾಡಿಯೆ ಈ ಹಿಂಡು ಜನರನ್ನ ನನ್ನ ಕೊರಳಿಗೆ ಕಟ್ಟಿದನೊ ಯಾರಿಗೆ ಗೊತ್ತು ? .. ಅಥವಾ ಈ ಹದಿನೆಂಟು ಮಂದಿ ಹೆಣ್ಣು ಮಕ್ಕಳನ ಹಡೆಯಬೇಕಾದರೆ ನನ್ನ ತಲೀನಕ ಕಟ್ಟಿತ್ತೋ ಏನೋ !

ಲಕ್ಷುಂಬಾಯಿ :— ಹದಿನೆಂಟು ಹೆಣ್ಣುಮಕ್ಕಳೋ ಏನು ಏವತ್ತೋ ? ಹುಟ್ಟಿದ ಹೆಣ್ಣುಮಕ್ಕಳ ಸಂಖ್ಯೆ ಕೂಡ ತಿಳಿಯದಷ್ಟು ತಲೀಕಟ್ಟು ಹೋಯಿತೋ ಏನು ?.... ವತ್ಸಲಾ, ಒಳಗೆ ಬಾ. ಹೆಂಗಸರಿಗೆ ಆಡಿಗಿಯ ಮನಿಯೆ ಸೌಖ್ಯ. (ಎನ್ನುತ್ತ ತಾನೊಬ್ಬಳೆ ಹೋಗುವಳು.)

ಹುಚ್ಚರಾಯ :— ಹದಿನೆಂಟು ಇಲ್ಲಾ..ಒಂಬತ್ತು!

ವತ್ಸಲಾ :— ಅಪ್ಪಾ, ನಮ್ಮಂಧವರು ಹುಟ್ಟಿ ನಿನಗೆ ಇಷ್ಟೊಂದು ಕಷ್ಟ. ಮದುವೆಯಾಗುವ ಮೊದಲು ಹಡೆದವರಿಗಷ್ಟೇ ಭಾರ; ಮದುವೆಯಾದ ಮೇಲೆ, ಮದುವೆಯಾದವರಿಗೆ ಹಡೆದವರಿಗೆ ಕೂಡಿಯೆ ಭಾರ !

ಹುಚ್ಚರಾಯ :— ಹಡೆದ ಮೇಲಂತೂ ಹೊರಸಿಗೂ ಭಾರ!

ವತ್ಸಲಾ :—ಅಪ್ಪಾ ನನ್ನ ಮದಿವೀ ಮಾಡೋದರ ಬದಲಾಗಿ, ನನಗೆ ಉಚ್ಚಶಿಕ್ಷಣ ಕೊಟ್ಟಿದ್ದರ—

ಹುಚ್ಚರಾಯ — ಇಷ್ಟೊತ್ತಿಗೆ ತ್ರಿಶಂಕು ವಿನ ಸ್ವರ್ಗ ಸಿಗುತ್ತಿತ್ತು. ಯಾಕಂದರೆ ಬೆಳೆದ ಹುಡಿಗಿನ್ನ ಮನೆಯಲ್ಲಿಟ್ಟು ಕೊಂಡಾನಕ ಅಂತ ಬ್ರಾಹ್ಮಣ ಸಮಾಜದವರು ನನ್ನನ್ನ ಭೂಮಿಯಾ ಬಿಟ್ಟು ಮೇಲಕ್ಕೆ ಏರಿಸಿ ಬಿಡುತ್ತಿದ್ದರು. ಮೇಲೆ ಹೋದ ಮೇಲೆ, ಎಲ್ಲ ಹೆಣ್ಣುಮಕ್ಕಳ ಮದುವೆ ಮಾಡದೆ ವಾಸನಾ ಹಿಡಿದು ಬಂದೀನೀ ಅಂತ ಕೆಳಗೆ ಎಟ್ಟಿಬಿಡುತ್ತಿದ್ದರು.

ವತ್ಸಲಾ :— ನಾನು ಕಲಿತಿದ್ದರೆ, ನನ್ನ ಒಬ್ಬಳ ಹೊಟ್ಟೆಯನ್ನಾದರೂ ತುಂಬಿಕೊಂಡು, ಯಾವುದಾದರೊಂದು ಶಾಲೆಯ ಮಾಸ್ತರಿಣಿ ಆಗಿರುತ್ತಿದ್ದೆ! ಕಲಿತ ಗಂಡಸರು ಕೆಲಸವಿಲ್ಲದೆ ಕೂಡುವ ಹಾಂಗ್ಗೆ, ಕಲಿತ ಹೆಂಗಸರು ಮಾತ್ರ ಕೈಯಲ್ಲಿ ಕೆಲಸವಿಲ್ಲದೆ ಮನೆಯಲ್ಲಿ ಕೂಡುವ ಪ್ರಸಂಗ ಇಲ್ಲ!

ಹುಚ್ಚರಾಯ :— ನಿನಗೆ ಹಾಗೆ ಕಲಿಸಿದ್ದೇ ತಂದರೆ ಸಬ್‌ರಜಿಸ್ಟ್ರರರ ಮಗಳು ಬಹಳ ಕಲಿತಳೂ ಅಂತ—

ವತ್ಸಲಾ :— ನಿಜವಾಗಿಯೂ ನಿಮಗೆ ಮರ್ಯಾದೆ ಸಿಗುತ್ತಿತ್ತು!

ಹುಚ್ಚರಾಯ:— ಇಲ್ಲಾ, ನನ್ನ ನೆತ್ತೀ ಕುಕ್ಕಿಬಿಡುತ್ತಿತ್ತು.. ಈ ಹಾಳಿಯ ಹೆಣ್ಣಿನಂತಹ ಹಳೆಯ ಸಮಾಜ!

ವತ್ಸಲಾ :— ಹೆಂಗಸಿನ ಗೋಳು ಅಂದರೆ—

ಹುಚ್ಚರಾಯ :— ಹೆಣ್ಣು ಹಡೆದವರ ಗೋಳು ನೆನೆದರೆ, ತಲೆ ಕೆಟ್ಟು ಕಾದು ಕಾದು ಸಿಡಿದು, ಸಾವಿರ ಹೋಳು ಆಗುವಷ್ಟು ಸಂತಾಪ ತಗತಕದ! ಮಗ ಹುಟ್ಟಿದರೆ ಮನೆ ಉದ್ಧಾರ; ಮಗಳು ಹುಟ್ಟಿದಳೂ ಅಂದರ ಮನೆಯ ಸರ್ವಸ್ವವೂ ಭದ್ರ! ಮದುವೆ ಆಗುವವರೆಗೂ ಅಲ್ಪನಯಿಸಾ ಅಂತ ಇವರ್ನ ಸಂರಕ್ಷಣೆಮಾಡಬೇಕು. ಮದುವೆಯಾದ ಮೇಲೆ, ಮಗಳೂ ಅಳಿಯ ಇಬ್ಬರೂ ಅಲ್ಪವಯಿಸಾ ಅಂತ ಮನೆಯಲ್ಲಿಟ್ಟುಕೊಂಡು ಸಂರಕ್ಷಣೆಮಾಡಬೇಕು! ತಂದೆ ಸಂರಕ್ಷಣೆ ಮಾಡಿದಾ ಅಂತ ಉಪಕಾರ ಹಿಡಿತಾರೇನು ಈ ಹೆಣ್ಣುಮಕ್ಕಳು? 'ನಿಮ್ಮ ಹೆಸರು ಬೇಡಾ' ಅಂತ ಮತ್ತೊಂದು ಹೆಸರು, ಅಡ್ಡಹೆಸರು ಇಟ್ಟುಕೊಂಡು ಹೋಗತಾರೆ. ಇವ್ವಾದರೂ ನಮಗೆ ಕಾಳಜೀ ತಪ್ಪಿತೂ ಅಂತ ಇಲ್ಲಾ. ವರಿಷ್ಠ ಅಧಿಕಾರಿಗಳ ಮರ್ಜೀ ಕಾಯುವಂತೆ, ಈ ಅರಿಷ್ಟ ಅಳಿಯಂದಿರ ಕೈಕಾಲು ತೊಳೆದು,ಎರಡೆರಡೂ ಕೈಯಿಂದ ಸುರಿಯ ಬೇಕು ಅವರ ಪಾದತೀರ್ಥ. ಮೇಲೆ ಮತ್ತೆ ಅಳಿಯ ದೇವರಂತೆ! ಯುಗಕ್ಕೊಮ್ಮೆ ಅವತರಿಸುವ ಆ ಪರಮಾತ್ಮಾ ಈ ಕಲಿಯುಗದೊಳಗ ಅಳಿಯಂದಿರ ಅವತಾರ ಧರಿಸಿ ಭೂಮಿಗಿಳಿದದ್ದೆ ಖರೇ ಆದರೆ, ಬೇಗನೆ ಅವನನ್ನ ಸ್ವರ್ಗಕ್ಕಟ್ಟೋದೆ ಗುಣಾ ಕಾಣಿಸತಕದ.

ವತ್ಸಲಾ :— (ಕಣ್ಣೀರು ಒರಸಿಕೊಳ್ಳುತ್ತ) ಅಪ್ಪಾ, ನನಗ ಬೇಕಾದಷ್ಟು ಕೆಡಕು ಮಾತಾಡು; ಅವ್ವ ಒಳಗೆ ಹೋದಳೂ ಅಂತ, ಮಾಡಿಕೊಂಡವನ್ನ ಅಡಿಕೊಳ್ಳಬ್ಯಾಡಾ! ನನ್ನ ಕೆಟ್ಟ ನಸೀಬದ ಕಾಲಾಗ, ಅವರು ಯಾಕೆ ಅನಿಸಿಕೊಳ್ಳಬೇಕು..ಸುಳ್ಳ ಸುಳ್ಳೇ?.....ಭೂಮಿಯ ಮೇಲೆ ಹೆಣ್ಣಾಗಿ ಹುಟ್ಟಿದ ನನ್ನದೇ ದೊಡ್ಡ ಅಪರಾಧ ಐಗೇದ!

ಹುಚ್ಚರಾಯ :— ಅರ್ಥಾತ್ ನಿನ್ನ ಹಡೆದ ನನ್ನದೇ ಮಹಾ ಅಪರಾಧ. ನಾನು ಮದುವೆಯಾಗುವ ಮೊದಲೇ ಯಾವ ಸ್ವಾಮಿಗಳೂ ತಾಯಿ ಕೊಡುವವರು ಇದ್ದಿದ್ದಿಲ್ಲ....ತಣ್ಣಗೆ ಇಸ್ಕೂ ಮೇಲೆ ಅವರೂ ತಾಯಿ ಸಿಗತಕದೇನೊ ನೋಡತೀನಿ!.. (ಸ್ವಗತ) ಇನ್ನೆಲ್ಲಿಯ ತಾಯಿ; ನನಗೆ ಸಿಗೋದು ನನ್ನ ಕರ್ಮಫಲ! (ಒಳಗಿನಿಂದ ಲಕ್ಷುಂಬಾಯಿ ಪ್ರವೇಶಿಸುವುದಕ್ಕೂ ವಿರುದ್ಧದಿಕ್ಕಿನಿಂದ ಶಕುಂತಲೆ ಪ್ರವೇಶಿಸುವುದಕ್ಕೂ ಮೇಳವಾಗುವುದು. ಲಕ್ಷುಂಬಾಯಿ ನೋಡಿದವಳೆ ಸಂಭ್ರಮದಿಂದ ಬಾಯಿತೆರೆಯುವಳು. ಹುಚ್ಚರಾಯ ಬೆಪ್ಪಾಗಿ ನಿಲ್ಲುವನು.)

ಲಕ್ಷುಂಬಾಯಿ :— ಅಯ್ಯಯ್ಯಾ! ಯಾವಾಗ ಬಂದೀ? ಛಲೋ ಆಯಿತು ಬಿಡು ನಮ್ಮವ್ವಾ; ಎಲ್ಲಾರೂ ಹಬ್ಬಕ್ಕ ಕೂಡಿದ್ಹಾಂ ಆಯಿತು! ನಿಮ್ಮಕ್ಕನೂ ಒಬ್ಬಾಕಿ ಅನಾಯಾಸಕ ಹಡಿಯಲಿಕ್ಕೆ ಬರುವಾಕಿ ಇದ್ದಾಳ!

ಶಕುಂತಲಾ :— ಅವ್ವಾ, ಹೊರಗೆ ಟಾಂಗಾದಂವ ನಿಂತಾನ; ಅವನಿಗೊಂದು ಚಾರಣೇ ಕೊಡಬೇಕಾಗಿತ್ತು!

ಲಕ್ಷುಂಬಾಯಿ :— (ಹುಚ್ಚರಾಯನಿಗೆ) ಕೇಳಿಸಲಿಲ್ಲೇನ?

ಹುಚ್ಚರಾಯ :— (ಪುಟದುಬಿದ್ದವನಂತೆ) ಅಂ?

ಲಕ್ಷುಂಬಾಯಿ :— ಟೊಂಕದೊಳಗ ಚಾರಣೇ ಅವ ಏನು?

ಹುಚ್ಚರಾಯ:— ಚಿಲ್ಲರೆ ಇಲ್ಲಾ, ನೂರು ರೂಪಾಯಿ ನೋಟು ಅದಕ!

ಲಕ್ಷುಂಬಾಯಿ :— (ಸಿಡುಕಿನಿಂದ) ನೂರು ರೂಪಾಯಿಯಾದೂ, ಮೂರು ರೂಪಾಯಿಯಾದೂ! ವತ್ಸಲಾ, ಒಳಗ ನನ್ನ ಟ್ರಂಕಿನೊಳಗ ನಾಲ್ಕಾಣೆ ಅವಕ ನೋಡು, ಕೊಡುಹೋಗು! **(ಕೊರಳೊಳಗಿನ ಕೀಲಿಕೈಸರ ಕೊಡುವಳು.)**

ಹುಚ್ಚರಾಯ :— (ಕೀಸರಿಟ್ಟು, ಶಕುಂತಲೆಗೆ) ತಾವು ಯಾಕ ಬಂದಿದ್ದೀರಿ?

ಶಕುಂತಲೆ :— ಏನೋಪಾ, ಈ ಸಾರೆ ಖರ್ಚು ಬಹಳ ಬಂದಿತಂತ; ಅದಕ್ಕೇ ಒಂದು ತಿಂಗಳು ಮುನೀ ತೆಗೆದುಬಿಟ್ಟರು!

ಹುಚ್ಚರಾಯ :— ಅದರ ಜೊತೆಗೆ ಮೂರು ಅಕ್ಷರಗಳನ್ನೂ ತೆಗೆದುಬಿಟ್ಟರೇನು?—

ಲಕ್ಷುಂಬಾಯಿ :— ನೀವೂ?

ಹುಚ್ಚರಾಯ :— ನೀ ಬಂದೆಯಿಲ್ಲೊ ಅಡ್ಡ?

ಗುಂಡೂ:— (ಆರ್ಭಟಿಯಿಂದ) ಅಪ್ಪಾ, ಇವೊತ್ತಿನಿಂದ ನಾನು ಪೇಟೆಯೊಳಗ ಸಾಮಾನು ತಗೊಂಡು ಬರಲಿಕ್ಕೆ ಹೋಗೋದೇ ಇಲ್ಲಾ!

ಹುಚ್ಚರಾಯ :— ಯಾಕೋ? ನಿನಗೇನಾಯಿತು, ಅಂಗಡಿಕಾರರಿಗೇನಾಯಿತು?

ಗುಂಡೂ :— ದೀಪಾವಳಿ ಬಂದದೆ. ಎಲ್ಲರೂ ಹಿಂದಿನ ಪಾಕೀ ಚುಕ್ತಾ ಮಾಡಿ, ಮುಂದಿನ ಸಾಮಾನು ಒಯ್ಯರಿ-ಅಂತಾರ.

ಹುಚ್ಚರಾಯ :— ಸದ್ಯಕ್ಕೆ ಕೆರಾಣಿ ಮತ್ತು ಕಾಳಿನ ಸಾಮಾನ ಅದು..ತಗೊಂಡು ಬಾ!

ಗುಂಡೂ:— ಅವರಂತೂ ಮೊದಲ ಕೊಡೋದಿಲ್ಲಾ ಅಂತಾರ!

ಹುಚ್ಚರಾಯ :— ಏನಾದರೂ ಸ್ವಲ್ಪ ಸಮಾಧಾನ ಹೇಳಿ ತಗೊಂಡು ಬಾರೋ!

ಗುಂಡೂ :— ನೀನೇ ಹೋಗು ಬೇಕಾದರ. ಮೊದಲು ತಲೀ ಕಟ್ಟು ಉದ್ದರೀ ಮಾಡೋದು; ಆ ಮ್ಯಾಲೆ ಗೋಳಾಡೂದು! ಅಂದಕ ಎಲ್ಲಾ ನಿನಗ ಮ ಯ್ಯಾ ದೀ ಕೊಟ್ಟ ಹಾಂಗ ಈಗ ಕೊಡೋದಿಲ್ಲಾ ಅಂಬೋದು ನಿನಗ ಗೊತ್ತೀ ಇಲ್ಲ. ನೋಡಿ ದಲ್ಲೆಲ್ಲಾ ಬರೇ ಉದ್ದರಿ-ಉದ್ದರಿ! ಅಸ್ತ ಅಂದರ ನಿಮ್ಮಪ್ಪ ಬರೇ ಉದ್ದರೀನೇ ಮಾಡ್ಯಾನೇನೋ ಅಂತ ಕೇಳತಾರ ಎಲ್ಲಾರೂ!

ಹುಚ್ಚರಾಯ :— ಮಕ್ಕಳು! ಐದುಸಾವಿರ ರೂಪಾಯಿಗೆ ಲಾಯಿಫ್ ಇನ್ಸುರನ್ಸ್ ಇಳಿಸೀನಿ ಅಂಬೋದು ಅವರಿಗೇನು ಗೊತ್ತು?

ಗುಂಡೂ :— ಏನತ್ತು ಸಾವಿರ ಗಳಿಸಿದರೂ ನಮ್ಮ ಪಾಲಿಗೆ ಮಾತ್ರ ಐದು ಸಾವಿರ ಲಾಯಿಫ್ ಇನ್ಸುರನ್ಸ್ ಮಾತ್ರ!

ಹುಚ್ಚರಾಯ :— ಅದ್ಯಾಕೋ, ಅದರ ಜೊತೆಗೆ—

ಗುಂಡೂ :— ಅದರ ಜೊತೆಗೆ ಹತ್ತು ಸಾವಿರ ರೂಪಾಯಿ ಸಾಲ. ಬರೇ ಹೆಣ್ಣುಮಕ್ಕಳಿಗೆ ಮಾಡೋದರೊಳಗ, ಇದ್ದ ಒಬ್ಬ ಗಂಡಸ ಮಗನ್ನ ಕಸದೊಳಗಿನ ಕರದ ಹಾಂಗ ಮರೆತ್ಬಿಟ್ಟಿ!

ಹುಚ್ಚರಾಯ :— ಎಷ್ಟು ಮಾತಾಡತೀಯೊ ಗುಂಡ್ಯಾ, ಹದಿನೆಂಟು ವರುಷಕ್ಕೆ ಇನ್ನೂ ಒಂದು ವರುಷ ಕಡಿಮಿ ಅದ!

ಗುಂಡೂ :— ಅಂತೇ ಈಗ ಲಾ ದ ರೂ ಸ್ವಲ್ಪ ಎಚ್ಚರ ತೊಗೋತೀನಿ!

ಲಕ್ಷುಂಬಾಯಿ :— ಯಾಕೋ, ನಾಲಿಗಿ ಬಸಳ ಉದ್ದ ಹೋಗಲಿಕ್ಕೆ ಹತ್ತಿತು? ಮುತ್ತೊಂದು ಓದು ಇಲ್ಲಾ, ಬರಹ ಇಲ್ಲಾ. ಏರಿಯರಿಗೆ ಬೇ ಕಾ ದ ಹಾಂಗ ತಿರುಗಿ ಮಾತಾಡೋದೊಂದು ಕಲತೀದಿ. ಹಬ್ಬಾ ಹುಣ್ಣಿವಿಗೆ—ಮನೆಯಿಂದ ಮೇಲೆ—ನಾಲ್ಕು ಮಂದೀ ಮಕ್ಕಳೂ ಬರುವವರೇ. ನನ್ನ ಜೀವಮಾನ ಇರೋ ತನಕಾ ಬರತಾರ; ನಾಳೆ ನಾನೇ ಹೋದೆನಂದರ, ನಿನ್ನ ಮನಿಯ ಹೊಸ್ತಿಲದೊಳಗ ಕಾಲು ಸಹಾ ಹಾಕೋದಿಲ್ಲಾ..ಯಾರೂ!

ಗುಂಡೂ :— ನೀನಸ?

ಲಕ್ಷುಂಬಾಯಿ :— ಸಾಕು, ಬಾಯಿಮುಚ್ಚು; ರೊಕ್ಕ ಕೊಡುವರು ಕೊಡತಾರ, ಬಂದಿಷ್ಟು ಈಡಾಗಿ ಸಾಮಾನು ತರಲಿಕ್ಕೆ ಏನಾಗತದೊ ನಿನಗ ಧಾಡಿ?

ಹುಚ್ಚರಾಯ :— ಉದ್ದರೀ ಅನ್ನಲಿಕ್ಕೆ ಎಷ್ಟಾದರೂ ಅದನೊ?

ಗುಂಡೂ :— ಎಷ್ಟೆಂದರೇನು? ಕೆ ರಾ ಣಿ ಯ ದು ಎಪ್ಪತ್ತು ರೂಪಾಯಿ; ಕಾಸಿನಗಡಿಂದು ನೂ ರಾ ಹ ತ್ತು, ಸ್ಟೇಶನರಿ ಐವತ್ತಾರು; ಕಾಪಡ ದುಕಾನದ್ದ ನೂರಾಎಂಭತ್ತೈದು; ಸಿಂಪಿಗೇರವನದು ಇಪ್ಪತ್ತೈದು; ಹಾಲ -ವಸರಿನವರದು ಹದಿನೆಂಟು; ಪೇರ್‌ಕಟಿಂಗ್ ಸಲೂನಿನದು ಐದುರೂಪಾಯಿ—

ಹುಚ್ಚರಾಯ :— ಅಯೆ ಬಾಗ್ಯಾ, ಬಾಯಿಮುಚ್ಚು! ಪೇರ್‌ಕಟಿಂಗ್ ಉದ್ದರೀ ನಿನ್ನದೊ ನನ್ನದೊ?... ನಾಲ್ಕು ವರುಷ ಆಯಿತು, ಒಂದು ಮ್ಯಾಟ್ರಿಕ್ಸ್ ಆಗೋಣ ಆಗವೊಲ್ಲದು...ಮತ್ತೆ ನಾತಾಡಲಿಕ್ಕೆ ಬರತಾನ. ಹೆಂಗಸರ ಮದಿವೆ ಆಯಿತು, ಗಂಡು ಹುಡುಗರಿಗೆ ಹದಿನೆಂಟು ವಯಸ್ಸಾಯಿತು ಅಂದರ, ಹಡೆದವರ ಜವಾಬುದಾರೀ ತಪ್ಪಿತು. ನಾನು ಆಸ್ತೀ ಮಾಡಿಟ್ಟೀ ಹೋಗ ಬೇಕೂ ಅಂತ ಕಾಯದೆ ಇಲ್ಲಾ!

ಗುಂಡೂ :— ಮುತ್ತ ಸಾಲಾ?

ಹುಚ್ಚರಾಯ :— ಮುಂದಿನ ವರುಷ ಇನ್ಸ್ಯೂರನ್ಸ್ ಡ್ಯೂ ಆಗತದ. ಎಲ್ಲಾರ ಸಾಲಾ ಮುಟ್ಟಿಸಿ, ಈ ಸಂಸಾರದಿಂದ ಈ ಜೀವನ ವ್ಯವಹಾರದಿಂದ ಒನ್ಮೆ ಪರ್ಮ ಹರಕೊಂಡು ಬಿಡತೀನಿ!

ಶಕುಂತಲೆ :— ಅವ್ವಾ, ಸುಸೂತ್ರ ನಾನು ತಿರುಗಿ ಹೋಗಿ ಬಿಡತೀನಿ. ನಾನೇನೊ ಉಮೇದದಿಂದ ಬಂದಿದ್ದೆ; ಆದರೆ ಬಂದ ಕೂಡಲೆ ಮಂಗಳಾರತೀನೆ ಆಯಿತು!

ಲಕ್ಷುಂಬಾಯಿ :— ಅವರ ಮಾತು ತೊಗೊಂಡು ಏನು ಮಾಡತೀದಿ? ಇತ್ತಿತ್ತಲಾಗ ಅವರ ತಲೀ ಸ್ವಲ್ಪ ನಾದುರಸ್ತ ಆಗೇದ; ಪೆನ್‌ಶನ್ ಆದಾಗಿನಿಂದ!

ಹುಚ್ಚರಾಯ :— ಅಲ್ಲಾ ನನ್ನ ಹೆಣ್ಣುಮಕ್ಕಳನ ದರ್ಮಾರ್ಧ ಕೊಟ್ಟೀನೀ ಅಂತ ತಿಳಕೊಂಡಾರೋ ಏನು ಈ ಅಳಿಯಂದಿರೆಂಬು ವವರು? ಒಬ್ಬೊಬ್ಬರಿಗೆ ಎರಡೆರಡು ಮೂರು ಮೂರು ಸಾವಿರ ವರದಕ್ಷಿಣಿ ಕೊಟ್ಟೂ, ಇಷ್ಟು ಕಾಡಿಸೋದು ಅಂದರ! ಧರ್ಮಪತ್ನಿ ಅಂದರ ಧರ್ಮಾರ್ಧ ಗೃಹಿಣೀ ಅಂತ ತಿಳಿದಾರ. ಧರ್ಮಪತ್ನಿಯ ತವರುಮನೆ ಅಂದರ ಧರ್ಮಾರ್ಧ ಬೋರ್ಡಿಂಗಾ, ಲಾಜಿಂಗಾ ಅಂತ ಇವರ ಉದಾತ್ತ ಕಲ್ಪನೆ! ಧರ್ಮೇಚ ಅರ್ಥೇಚ. ಮಾವನ್ನ ಭದ್ರ ಮಾಡತೀನಿ—ಅಂತ ಅಗ್ನಿ ಸಾಕ್ಷಿ ಆಣೀವಮಾಡಿದ ಹಾಂಗ ಕಾಣತದದ!

ಲಕ್ಷುಂಬಾಯಿ :— ಇವೊತ್ತು ಸಂಜೆಗೇ ಬಂದು ಕೂತಾರು; ಮೊದಲು ಸಾಮಾನು ತರಿಸೋ ವ್ಯವಸ್ಥಾ ಮಾಡಿರಿ!

ಹುಚ್ಚರಾಯ :— ನನ್ನ ತಲೀ ಅಂತೂ ಕೆಟ್ಟೀ ಹೋಗೇದ! ಇದಕ್ಕೆ ನಿನ್ನ ಸಮ್ಮತಿ ಕೂಡಾ ಸಿಕ್ಕತದ!

ಲಕ್ಷುಂಬಾಯಿ :— ಹೋಗೊ ಗುಂಡ್ಯಾ, ಮೊ ದ ಲು ಸಾಮಾನು ತಗೊಂಡು ಬಾ!

ಗುಂಡೂ :— ಅಳಿಯಂದಿರಿಗೆ ದೀಪಾವಳಿ; ಮಾ ವ ಯ್ಯ ಗೆ ಮಾತ್ರ ದಿವಾಳಿ!

ಹುಚ್ಚರಾಯ :— ಇಂತಹ ಜಾಮಾತರು ಗಂಟುಬಿದ್ದಮೇಲೆ.

ಗುಂಡೂ :— ಒಬ್ಬರಲ್ಲದ ಹಾಂಗ ಒಂಬತ್ತು ಮಂದಿ—ಒಂಬತ್ತು ಗ್ರಹಗಳ ಹಾಂಗ!

ಹುಚ್ಚರಾಯ :— ಒಂದು ನವಗ್ರಹ ಯಂತ್ರಾ ಮಾಡಿಸತೀನಿ. ಅದನ್ನ ನೋಡಿದ ಕೂ ಡ ಲೆ ಒಂದೊಂದನ ಗ್ರಹಾ ಸಿಡಿದು ಹೋಗಬೇಕು!

ಗುಂಡೂ :— ಬೇಗರು ಬರುವ ಮೊದಲೇ, ಮನೀ ಬದಲೀ ಮಾಡಿಬಿಡೋದು ಒಳ್ಳೆ ತಂತ್ರ ಕಾಣತದದ!

ಶಕುಂತಲೆ :— ಒಂದಪಳು ನಾನೊಬ್ಬಳೇ. ಅವರೇನೂ ಬರೋದಿಲ್ಲಾ, ಅಷ್ಟು ಯಾಕೆ ಆಡಿಕೊಳ್ಳೋದು? ಮದುವೆಯಾಗಿ ಮೂರುವರುಷ ಆದರೂ ಒಂದು ಜೋಡು ಬೆಂಡೋಲಿಯ

ಹೊರತಾಗಿ ಮತ್ತೇನೂ ಕಾಣಲಿಲ್ಲ. ಅದೇ, ವಚ್ಚಿಗೆ ಮಾತ್ರ ಎರಡೆರಡು ಜೋಡು ಬಿಲ್ವಾರ ಮಾಡಿಸಲಿಕ್ಕೆ ಬಂತು!

ವತ್ಸಲಾ.— ಹೌದವ್ವಾ, ನಿನ್ನ ಪಾಂಗ ನನಗ ವಜ್ರದ ಮೂಗುಬಟ್ಟು ಕೊಟ್ಟಾರೇನು? ನಿನ್ನ ಹಾಂಗ ನನಗ ಬನಾರಸಿನ ಪತ್ಯಲಾ ಕೊಟ್ಟಾರೇನು?

ಹುಚ್ಚರಾಯ:— ಆ ವಜ್ರದ ಮೂಗುಬಟ್ಟು ತಾ, ಅರಿದು ಕೊಂಡಾದರೂ ಕುಡೀತೀನಿ....ಅಥವಾ ಇಂದೇ ಬನಾರಸ ಯಾತ್ರೆಗೆ ಹೊರಟು ಬಿಡತೀನಿ ಕೈಯೊಳಗ ತಾಳಾ ತೊಗೊಂಡು!

ಗುಂಡೂ:— (ಯಾರವರು?....ಎಂದು ಒಳಗೆ ಹೋಗಿ, ಒಂದು ಪತ್ರ ತೆಗೆದುಕೊಂಡು ಬರುವನು.) ಇದು ನೋಡು ಅಪ್ಪಾ, ಕಿಲ್ಲೇದ್ಸ್ಕರವಾಡಿಯಿಂದ ಹಿರಿಯ ಅಳಿಯಂದಿರು ಬರುವವರಂತ!

ಹುಚ್ಚರಾಯ:— (ಗಾಬರಿಗೊಂಡು ಪಿಡುಕಿನಿಂದ) ಹೂಂ! ಸುಸ್ವಾಗತವಮ್' ಅಂತ ಖಂಬಾ ನಿಲ್ಲಿಸು ಮನಿಯ ಮುಂದ.

ಗುಂಡೂ:— ಏನ್ caution ಅಂತ ಹಚ್ಚಲ್ಯೊ? ಬರೋ ಕಾರಣಾ ಆದರೂ ನೋಡಿದಿಯಾ? ಏನೋ, ಆಪಲಯ್ಯ ಜೈನೀ ಪ್ರಮಾಣೇ— ಸ್ವೇಚ್ಛಾ ಪ್ರವಾಸದ ತಿಕೀಟು ತೊಗೊಂಡು ಬರುವವರಿದ್ದಾರಂತೆ!

ಹುಚ್ಚರಾಯ:— ಹೂಂ, ಇಲ್ಲಿ ಊಟಾ ಮಾಡಲಿಕ್ಕೆ ಇಚ್ಛಾ ಭೋಜನಾ, ತಿರುಗಾಡಲಿಕ್ಕೆ ಸ್ವೇಚ್ಛಾಪ್ರವಾಸ. (ಚಿಕ್ಕ ಅಳಿಯನು ಒಳ್ಳೇ ಜಂಭದಿಂದ ಬರುವನು. ಹವಮಾಲನು ಗುಡ್ಡ ಎತ್ತರ ಸಾಮಾನು ತಂದು ಇಟ್ಟು ಹೋಗುವನು. ಅಳಿಯ ಅವನಿಗೆ ರೊಕ್ಕ ಕೊಟ್ಟು ಕಳಿಸುವನು. ಹೆಣ್ಣು ಮಕ್ಕಳೆಲ್ಲ ಒಳಗೆ ಹೋಗುವರು.)

ಅಳಿಯ:— (ಹೆಂಡತಿ ನೋಡುತ್ತ ಒಳಗೆ ಹೋಗುತ್ತಿರಲು, ಅವಳು ಬರಬೇಕೆಂಬ ಕುತೂಹಲದಿಂದ ಜೇಕರಿಸುತ್ತ ನಿಲ್ಲುವನು. ಗುಂಡೂ ಈ ಸಂಚ್ಗೆ ನೋಡಿ ಒಳಗೆ ಹೋಗುವನು. ಮಾವಯ್ಯ ಕ್ಷಣ ಹೊತ್ತು ಸುಮ್ಮನೆ ನಿಲ್ಲುವನು. ಅಳಿಯನೂ ಸುಮ್ಮನೆ ನಿಲ್ಲುವನು.)

ಹುಚ್ಚರಾಯ:— (ಎಷ್ಟೋ ಹೊತ್ತಾದ ಮೇಲೆ) ಓ-ಓ-ಓಹೊ! ಬಂದಿರೇನು; ಹ-ಹ-ಹ- ಸಂತೋಷ (ಕೆಟ್ಟ ಮೋರೆ ಮಾಡಿ) ಬಹಾಳ ಸಂತೋಷ—ಬಹಾಳಾ ಸಂತೋಷ!..... (ಎನ್ನುತ್ತ ಅಡುಗೆಯ ಮನೆಯ ಹಾದಿ ಹಿಡಿಯುವನು.) ವತ್ಸಲಾಬಾಯಿಯಾ, ಕೈಕಾಲು ತೊಳಕೊಳ್ಳಲಿಕ್ಕೆ ನೀರು ಕೊಡವ್ವಾ! (ಹೋಗುವನು.)

ವತ್ಸಲಾ:— (ಪ್ರವೇಶಿಸಿ, ನಾಚಿ ಒಂದು ಮೂಲೆಗೆ ನಿಲ್ಲುವಳು.)

ಅಳಿಯ:— (ಒಳ್ಳೆಯ ದರ್ಪದಿಂದ) ಇವೊತ್ತು ಯಾರು ಬರತಾರಂಬೋದು ಗೊತ್ತಿತ್ತೋ ಇಲ್ಲೋ?

ವತ್ಸಲಾ:— ಹೂಂ! (ಮತ್ತೆ ನಾಚಿ)

ಅಳಿಯ:— ನಾನು ಗಾಡೀಗೆ ಬರತೀನೀ ಅಂಬೋದು ಗೊತ್ತಿತ್ತೋ ಇಲ್ಲೋ?

ವತ್ಸಲಾ:— ಗೊತ್ತಿತ್ತು!

ಅಳಿಯ:— ಗಾಡಿ ಎಷ್ಟೊತ್ತಿಗೆ ಬರತಕದ ಅಂಬೋದ್ದು ಗೊತ್ತಿತ್ತೋ ಇಲ್ಲೋ?

ವತ್ಸಲಾ:— ಏನದೂ ಸುತ್ತು ಸುತ್ತಾಡಿ ಕೇಳೋದು; ಯಾರು ಬರಬೇಕು ಸ್ಟೇಶನ್ನಿಗೆ?

ಅಳಿಯ:— ಯಾಕೆ, ನಿಮ್ಮಪ್ಪನ (ಒಳಗೆ ಲಕ್ಷ್ಯ ಹೋಗಿ ಎಚ್ಚರು ಬಂದಂತಾಗಿ, ಧ್ವನಿ ಸ್ವಲ್ಪ ಸಣ್ಣಾಗಿ ಮಾಡಿ) ನಿಮ್ಮಪ್ಪನ ಕಾಲು ಕುಂಟುಬಿದ್ದಿದ್ದವೇನು?

ವತ್ಸಲಾ:— ನಮ್ಮಪ್ಪನ್ನ ಅಡಿಕೊಳ್ಳೋದು ನಿಮಗೇನ ಕಾರಣಿಲ್ಲಾ!

ಅಳಿಯ:— ಹೂಂ! ಅಂದರ? ನಾ ಯಾರು ಅಂಬೋದು ಗೊತ್ತದಕನೋ ಇಲ್ಲೋ ನಿಮ್ಮಪ್ಪಗ?

ವತ್ಸಲಾ:— ಎಲ್ಲಾ ಗೊತ್ತದಕ; ನೀವು ಸುಳ್ಳೇ ಅವನ ತಲೀ ಕೆಡಿಸಬೇಡ್ರಿ!

ಅಳಿಯ:— ನನಗಿಂತಾ ನಿಮ್ಮಪ್ಪನೇ ಹೆಚ್ಚೇನು ನಿನಗೆ! ಅಲ್ಲಾ, ನಾನು ಒಳಗೆ ಬರುತ್ತಲೇ ಒಂದು ನಮಸ್ಕಾರ ಕೂಡಾ ಮಾಡಲಿಲ್ಲಾ. ಇದು public insult ಅಂತ ನಾನು ಯಾಕ ತಿಳಕೊಳ್ಳಬಾರದು? ಕಾಯಿದೇಸೀರ್ ನಿಮ್ಮಪ್ಪನ ಮೇಲೆ ಖಟ್ಲೆ ಹಾಕಲಿಕ್ಕೆ ಬರತಕದೆ. ಇವೊತ್ತು ಸಂಜೆಯ ಮುಂದೆ ನನ್ನ ಎಂಟು ಹತ್ತು ಫ್ರೆಂಡ್ಸ್ ಬರುವವರು ಇದ್ದಾರೆ ಮತ್ತೆ! (ವತ್ಸಲೆ ಆಶ್ಚರ್ಯದಿಂದ ಗಾಬರಿಯಾಗಿ—'ಅಂ?' ಎನ್ನುವಳು.) ಅವರಿಗೂ ಇದೇ ರೀತಿಯ ಅಪಮಾನ ಆದರೆ, ನಾನು ರೀತೀಪ್ರಕಾರ ಸ್ಟೆಪ್ಸ್ ತಗೋಬೇಕಾಗತಕದ — ಅಂತ ಹೇಳು! ಅವರಲ್ಲಿ ಒಬ್ಬಿಬ್ಬರು ಕ್ರಿಶ್ಚನ್ಸ್, ಒಬ್ಬಿಬ್ಬರು ಮುಹಮಡನ್ಸ್ ಇದ್ದಾರೆ; ಮತ್ತ ಮುಹಮಡನ್ಸ್ ಅಂತ ಪಾಕಿಸ್ತಾನ ಮಾಡೋ ಕಾರಣಿಲ್ಲಾ. ನಮ್ಮೆಲ್ಲರಿಗೂ ಕೂಡಿಯೇ ಊಟಕ್ಕೆ ಹಾಕಬೇಕು. ನಡುವೆ ಒಂದುದಿವಸ non-vegetarian food ಸಹ ಮಾಡಬೇಕಾಗಬಹುದು. ಮೊದಲೇ ಈಗಲೇ ವಾರ್ನಿಂಗ್ ಕೊಟ್ಟಿರತೇನೆ. ಹಿಂದಾಗಡೆ ನಾಲ್ಕು ಮಂದಿಯೊಳಗ ನೀನು ಏನಾದರೂ ಕಂಯ್ಕುಂಯ್ ಮಾಡಿದರೆ ನೋಡು ಮತ್ತ!

ವತ್ಸಲಾ:— ನಮ್ಮಪ್ಪ ಅಂದರ ಏನಂತ ಮಾಡೀರಿ ನೀವು?

ಅಳಿಯ:— Damn it; ಮಾವನಂದ್ರೇನು? ಅಳಿಯಂದೇವರು most obediently—

ವತ್ಸಲಾ:— ಸಾಕು, ಮಾವನ ಮನೆ ಅಂದರೇನು ಖಾನಾವಳೀ ಅಲ್ಲಾ!

ಅಳಿಯ:— ಅಂ! ಇದೇನು ಮೈ ಮೇಲೆ ಎಚ್ಚರಾದರೂ ಅದಕನೊ ಇಲ್ಲೊ?

ವತ್ಸಲಾ:— ಮೊದಲೇ ಎಚ್ಚರ ತಗೊಳ್ಳಿರಿ!

ಅಳಿಯ:— ಇದು ನೋಡು, ಮೊದಲೇ ಎಚ್ಚರುಕೊಟ್ಟಿರತೀನಿ! ಕಳವೂಟದೊಳಗಿನ ಗ್ರಾಮೊಫೋನು ಈಗಲಾದರೂ ಕೊಡು ಅನ್ನು! ಬೇಕಾದರೆ ಅಳಿಯತನದ್ದು ಕಳವೂಟದ್ದು ಕೂಡಿಯೇ ಒಂದು ರೇಡಿಯೋ ಕೊಟ್ಟುಬಿಡೂ ಅನ್ನು. (ಸುತ್ತಲೂ ನೋಡಿ—)

ಇದೇನಿದು ವ್ಯವಸ್ಥೆ? ಶಿಸ್ತಾಗಿ ಒಂದು ಫರ್‌ನೀಚರ್ ಸುದ್ದಾ ಇಲ್ಲಾ. ಇದೇನು ಜಮುಖಾನಿ, ಇದೇನು ಹರಕು ಲೋಡು? ನಮ್ಮ ಫ್ರೆಂಡ್ಸ್ ಬಂದರೆ ನಿಮ್ಮಪ್ಪನ ಶಿಸ್ತು ನೋಡಿ, ನನ್ನ ಕಿಮ್ಮತ್ತು ಕಟ್ಯಾರು.

ವತ್ಸಲಾ:— ಇಲ್ಲಿ ಯಾರೂ ಬರೋ ಕಾರಣಾನೇ ಇಲ್ಲಾ!

ಅಳಿಯ:— Hold your tongue! ಹೆಂಗಸರು ತಾರಮನಿಗೆ ಬಂದಕೂಡಲೆ, ಇಲಿ ಗೂಡಿನೊಳಗೆ ಸೇರಿದಂತೆ ಆಗತಕ್ಕಲ್ಲ? ಹೆಚ್ಚೂಕಡಿಮೆ ಮಾತಾಡಿದ್ದೇ ಆದರೆ, ರೀತೀಪ್ರಕಾರ ಸ್ಟೆಪ್ಸ್ ತೊಗೊಂಡೇ ಬಿಡತೀನಿ ನೋಡು!

(ಹುಚ್ಚರಾಯನು ಸಿಟ್ಟಿಗೆದ್ದು ಬರುವನು. ಅವನ ಕೈಹಿಡಿದು ಜಗ್ಗುತ್ತ ಲಕ್ಷುಂಬಾಯಿ ಬರುವಳು.)

ಹುಚ್ಚರಾಯ:— ನೀವು steps ಇಳಿದೇ ಬಿಡ್ರೀ ಅಂತೀನಿ, ಕೊಸ್ತ್ರಲ ಕೆಳಗ. ನಮ್ಮಮನೀ ಅಂದರ ನಿರುದ್ಯೋಗಿ ಅಳಿಯಂದಿರ ನಿರ್ವಾರ್ಥ ವಿಶ್ರಾಂತಿಗೃಹ ಅಲ್ಲ!

ಅಳಿಯ:— ನಿಮ್ಮ ಮಗಳ್ನ ನನಗೆ ಕೊಟ್ಟೀರಿ. ನೆನಪು ಆದಽನೊ ಇಲ್ಲೊ?

ಹುಚ್ಚರಾಯ:—ಎಲ್ಲಾ ನೆನಪು ಅದ! ನೀವೂ ನೆನಪು ಇಡರಿ ನಾನು ನಿಮ್ಮ ಮಾವಾ, ಒಬ್ಬಮಾನವಾ— ಅಂಬೋದನ್ನ!.... ಜಗತ್ತಿನೊಳಗ revolution ಇಲ್ಲದೆ evolution ಆಗೋದಿಲ್ಲ! ಬಂದಿಸ ಬಾಯಿಸತ್ತ ಮಾವ ನಾನಲ್ಲ. ಮಗಳನ್ನು ಹಡೆದರೂ ಮಾನವನಾದ ಮಾವ ನಾನು!

ಅಳಿಯ:— ನಾನು ಅಳಿಯದೇವರು!

ಹುಚ್ಚರಾಯ:— ನೀವು ದಶಮಗ್ರಹ. ನಿಮ್ಮಂತಹ ಗ್ರಹಗಳು ಕೂಡಿಯೆ ನನ್ನು ಮನೆ ಈ ವ್ಯವಸ್ಥೆಗೆ ಬಂದಿತು. ನಿಮ್ಮ ಅಳಿಯತನ ನಿಮ್ಮ ಗೆಳೆಯರ ಮನೆಯಲ್ಲಿಯೆ ಆಗಲಿ! ದಿನಾ ಒಂದು ಪಕ್ವಾನ್ನ ಆಗಲಿ; ದಿನಾ ಒಂದು ಫಾಕಿಸ್ತಾನ ಆಗಲಿ. ಒಂದು ದಿನ ಬೇಕಾದರೆ ನಾನೂ ಬರತೀನಿ ಮಾಸಲೆ ನೋಡಲಿಕ್ಕೆ!

ಲಕ್ಷುಂಬಾಯಿ:— ಹುಚ್ಚ ಹಿಡೀತೋ ಏನೋ ಇವರಿಗೆ! ನಿನ್ನೆನಿಂದಲೂ ತಲ್ಲೆಗೆ ಸ್ವಲ್ಪ ತ್ರಾಸ ಆದ ಹಾಗೆ ಮಾಡಲಿಕ್ಕೆ ಹತ್ತ್ಯಾರ! ಯಾವಗಾಲಾದರೂ ಒಮ್ಮೊಮ್ಮೆ ಹೀಗೆ ನನ್ನಿ ಕೂಡಿದ ಹಾಗೆ ಮಾಡತಾರ. ಇವರಿಗೆ ಅದೊಂದು ರೋಗವೇ ಆದೆ.... ತಾವು ಏನೂ ತಪ್ಪು ತಿಳಿದುಕೊಳ್ಳಬಾರದು!

ಹುಚ್ಚರಾಯ:— ನನ್ನ ತಲೀ ನನ್ನ ಹೆಗಲ ಮೇಲೆಯೆ ಅದೆ!

ಅಳಿಯ:— ನಿಮ್ಮ ಮಗಳ್ನ ನಿಮ್ಮ ಮನೆಯಲ್ಲಿಯೇ ಇಟ್ಟುಕೊಂಡು ಬಿಡಿರಿ ಹಾಗಾದರೆ; ನಾನು ಹೊರಡತೇನೆ.

ಹುಚ್ಚರಾಯ:— (ನಗುತ್ತ) ಹ—ಹ—ಹ! ನನ್ನ ಹೆಗಲ ಮೇಲೆ ನನ್ನ ತಲೆಯ ಭಾರ! ತಲೆಯ ಮೇಲೆ ನನ್ನ ಮಗಳ ಭಾರ. ಇಷ್ಟೇ ಹೌದಲ್ಲೋ ಶಿಕ್ಷೆ! ಈ ಶಿಕ್ಷೆ ನೀವು ಮೊದಲೇ ಕೊಟ್ಟು ಬಿಟ್ಟಿದ್ದರೆ ನಾನಿನ್ನೂ ಎಷ್ಟೋ ದುಡ್ಡು ಉಳಿಸುತ್ತಿದ್ದೆ!.....

ಎಲ್ಲಕ್ಕಿಂತ ಆಗ್ಗ! ಎಲ್ಲಕ್ಕಿಂತ ಉತ್ತಮ!
ಮಿಕ್ಕ ಬ್ಲೇಡುಗಳಿಗಿಂತ ತಿಚ್ಚುಕಟ್ಟಾದ ಹೆಚ್ಚಿನ ಕೆಲಸ!



ಈ ಆಣೆಗೆ ೧೦ ಬ್ಲೇಡು!

ನಾನು ಹಡೆದ ಮಗಳು. ನನ್ನ ಮನೆಯಲ್ಲಿಯೆ ಇರಲಿ. ಅವಳಿಗೆ ಶಿಕ್ಷಣ ಕೊಡುವೆ; ಅವಳಿಗೆ ಉಚ್ಚಶಿಕ್ಷಣ ಕೊಡುವೆ. ತನ್ನ ಹೊಟ್ಟೆಯನ್ನು ತಾನೇ ತುಂಬಿಕೊಳ್ಳಲಿ. ಜಗತ್ತು ಮುಂದೆ ಬರಬೇಕಾದರೆ ಪ್ರತಿಭಟನೆ, ಪ್ರತಿಕ್ರಾಂತಿ ಬೇಕೇಬೇಕು!

ಅಳಿಯ:— ಅವಳ ಒಪ್ಪಿಗೆಯಿದೆಯಷ್ಟೆ?

ಲಕ್ಷುಂಬಾಯಿ:— (ಕಣ್ಣೀರು ಒರಸಿಕೊಳ್ಳುತ್ತ) ಪುಣ್ಯಾ ಕಟ್ಟಿಕೊಳ್ರಿ. ನನ್ನ ಮಗಳಿಗೆ ವನವಾಸ ತರಬೇಡ್ರಿ!

ಹುಚ್ಚರಾಯ:— (ಯಾವುದನ್ನೂ ಲಕ್ಷ್ಯಕ್ಕೆ ತರದೆ) ಅವಳ ಅಪ್ಪನ ಒಪ್ಪಿಗೆಯದೆ. ನೀವು ಮುಂದೆ ಸಾಗಿರಿ!

ಲಕ್ಷುಂಬಾಯಿ:— ನಡುನೀರಿನಲ್ಲಿ ಮುಳುಗಿಸಿ ಹೋಗಬೇಡ್ರಿ. ಅವರಿಗೆ ಹುಚ್ಚು ಹಿಡಿದದೆ. ನನ್ನ ಮೋರೆ ನೋಡಿರಿ, ಮಗಳ ಮೋರೆ ನೋಡಿರಿ!

ಹುಚ್ಚರಾಯ:— ಹ—ಹ! ನನ್ನ ಮೋರೆ ಸ್ವಲ್ಪ ನೆಟ್ಟಗೆ ನೋಡಿರಿ. ನಾನು ಹುಚ್ಚರಾಯ — ಅಂತ ಹುಚ್ಚು ಹಿಡಿದಿದೆಯೇನು ನನಗೆ? ಸಮಾಜದ ಹುಚ್ಚುನಡತೆ ನೋಡಿ ಈಗ ಅನಿಸತಕದೆ..ನನಗೆ ಎಂಥಾ ಹುಚ್ಚು ಹಿಡಿದಿತ್ತು ಅವಾಗಽ.. ಅಂತ.

ಅಳಿಯ:— Good bye.

ಹುಚ್ಚರಾಯ:— ನಮಸ್ಕಾರ. ಹೋಗಿ ಬರ್ರಿ, ಅಥವಾ ಬರಲೇ ಬ್ಯಾಡ್ರಿ!

(ಅಳಿಯ ಸಾಮಾನು ಕಟ್ಟಹತ್ತುವನು. ವತ್ಸಲಾ ಅಳುತ್ತ ಅವನ ಕಾಲಿಗೆ ಬೀಳುವಳು. ಲಕ್ಷುಂಬಾಯಿ ಒಮ್ಮೆ ಗಂಡನ ಮೋರೆ, ಒಮ್ಮೆ ಅಳಿಯನ ಮೋರೆ ನೋಡುತ್ತ ನಿಂತುಬಿಡುವಳು. ಹುಚ್ಚರಾಯ ಒಳಗಿನಿಂದ ಒಂದು ಜೋಡು ತಾಳ ತಂದು ಬಾರಿಸುತ್ತ ಬರುವನು. ಗುಂಡೂ ಚಹಾದ ಕಪ್ಪು ಬಸಿ ತಂದು—' ಜಹಾ ತಗೊಳ್ಳಿರಿ ' ಅನ್ನುತ್ತ ಇದನ್ನು ನೋಡಿ, ನಲಕ್ಕಪ್ಪಳಿಸಿ ಗಾಬರಿಗೊಂಡು ನಿಲ್ಲುವನು.)

—ತೆರೆ.

ಸ್ತ್ರೀ-ಪ್ರಸಾಧನ

★

'ಹೊಸಕಾಲದ ಹೆಂಗುಸರೆಲ್ಲ ಒಡವೆ-ಬೆಡಗುಗಳಿಗೆ ಮೆಚ್ಚಿದ್ದಾರೆ' ಎಂದು ಸಂಪ್ರದಾಯವಂತರು ಹೀಯಾಳಿಸಿ ನುಡಿಯುವುದೊಂದು ಈಗ ರೂಢಿಯಾಗಿಬಿಟ್ಟಿದೆ. ಆದರೆ ಒಡವೆಯನ್ನೂ ಬೆಡಗನ್ನೂ ಬಯಸದ ತರುಣಿಯರು ಯಾವ ಕಾಲದಲ್ಲಿಲ್ಲ, ಯಾವ ಕುಲದಲ್ಲಿಲ್ಲ? ಹಿಂದಿನ ಕಾಲದವರಷ್ಟು ಒಡವೆಯ ಸಡಗರ, ಬೆಡಗುಗಾರಿಕೆ ಇಂದು ಎಲ್ಲಿದೆ?

★

ಪ್ರೊ. ಕೆ. ಜಿ. ಕುಂದಣಗಾರ,
ಎಂ ಎ. ಕೊಲ್ಲಾಪುರ

ಕನ್ನಡದಲ್ಲಿ ಸುಂದರ ಸ್ತ್ರೀವಾಚಕ ಶಬ್ದಗಳು ಅನೇಕವಾಗಿವೆ. ನೀರೆ, ಒಯ್ಯಾರಿ, ಮಾನಿನಿ, ಸುದತಿ, ವಿಲಾಸವತಿ, ಲೀಲಾವತಿ, ಗಾಡಿಕಾತಿ, ಒನಪುಗಾತಿ, ನಾಗವೇಣಿ, ಫುಲ್ಲವೇಣಿ, ಫಣಿವೇಣಿ, ತಳೋದರಿ, ಕೋಮಲಾಂಗಿ, ಸುಂದರಿ, ಸಿಂಗಾರಿ-ಮೊದಲಾದ ಶಬ್ದಗಳು ಪ್ರಮುಖವಾಗಿ ಆ ಅರ್ಥವನ್ನು ಸೂಚಿಸುತ್ತವೆ. ಇವುಗಳಲ್ಲಿ ನೀರೆ, ನಾಗವೇಣಿ, ಫುಲ್ಲವೇಣಿ, ಕೋಮಲಾಂಗಿ, ತಳೋದರಿ, ಸುಂದರಿ ಎಂಬ ಪದಗಳು ಸ್ವಾಭಾವಿಕ ಸೌಂದರ್ಯವನ್ನು ಸೂಚಿಸುತ್ತವೆ. ಸ್ತ್ರೀಯರಲ್ಲಿ ಸ್ವಾಭಾವಿಕ ಸೌಂದರ್ಯವಿದ್ದರೂ ಅದನ್ನು ಅಭಿವೃದ್ಧಿಗೊಳಿಸಲು ಸಹಾಯವಾಗಬೇಕೆಂದು, ಪ್ರಸಾಧನ ಕಾರ್ಯವನ್ನು ಇಟ್ಟುಕೊಂಡಿರುವರು ಅವುಗಳ ಜೊತೆಗೆ ಒನಪು, ಒಯ್ಯಾರ, ವಿಲಾಸ, ವಿಭ್ರಮ, ಹಾವ, ಭಾವ, ಮುಂತಾದ ಗುಣಗಳ ಅನುಕೂಲತೆಯೂ ಬೇಕಾಗುತ್ತದೆ. ಅದಕ್ಕೆಂದು ಒಯ್ಯಾರಿ, ಗಾಡಿಕಾತಿ, ಒನಪುಗಾತಿ, ವಿಲಾಸವತಿ, ಸಿಂಗಾರಿ ಎಂಬ ಪದಗಳು ವ್ಯವಹಾರದಲ್ಲಿ ಒಂದಿವೆ. ಇವುಗಳಲ್ಲಿ ಪ್ರಸಾಧನವನ್ನನುಲಕ್ಷಿಸಿ ಸಿಂಗಾರಿ, ಸಿಂಗಾರವ್ವ ಎಂಬ ಪದಗಳನ್ನು ಮುಂದಿಟ್ಟುಕೊಂಡು, ಅಲಂಕ್ರಿಯಾರಚನೆಯನ್ನು ಪರಿಶೀಲಿಸುವ.

'ಪದಿನಾರಲ್ಲವಲಂಕ್ರಿಯಾರಚನೆ, ಮೂವತ್ತಾರು ನೇರ್ಪಟ್ಟುವು!' ಎಂದು ರನ್ನನು ಗದಾಯುದ್ಧದಲ್ಲಿಯೂ ಅಜಿತಪುರಾಣದಲ್ಲಿಯೂ ನುಡಿದಿದ್ದಾನೆ. ಅಲ್ಲಿ ಈ ಮಾತು ಸ್ತ್ರೀಯರಿಗೂ ಸರಸ್ವತಿಗೂ ಅನ್ವಯಿಸುವಂತೆ ಹೇಳಲಾಗಿದೆ. ಸ್ತ್ರೀಯರ ಅಲಂಕಾರಗಳು ಪದಿನಾರು. ಅವಾವುವೆಂದರೆ **ಸ್ನಾನ, ವಿಲೇಪನ, ವಸ್ತ್ರ, ಶಿರೋಭೂಷಣ, ತಿಲಕ, ಕಜ್ಜಲ, ನಾಸಾಭೂಷಣ, ಮಂಕರಪತ್ರ, ಕುಂಡಲ, ಹಾರ, ಕೇಯೂರ, ಮಣಿಭೂಷಣ, ಅಂಗುಲೀಯಕ, ಕಾಂಚೀದಾಮ, ನೂಪುರ, ಅಲಕ್ತಕ.** ಆದರೆ ಸರಸ್ವತಿಗೆ—ಕಾವ್ಯಗಳಲ್ಲಿ ಕಂಡುಬರುವ ಉಪಮೆ, ಉತ್ಪ್ರೇಕ್ಷಾದಿ—ಮೂವತ್ತಾರು ಅಲಂಕಾರಗಳೆಂದು ಅತನ ಅಭಿಪ್ರಾಯ. ಹೀಗೆಂದರೆ ರನ್ನನಿಗಿಂತ ಪೂರ್ವದಲ್ಲಿಯೇ ಸ್ತ್ರೀಯರು ಅಲಂಕಾರಶರಣರಾಗಿದ್ದಂತೆ ಪುರಾಣಗಳಿಂದಲೂ, ಕಾವ್ಯಗಳಿಂದಲೂ ತಿಳಿದುಬರುತ್ತದೆ. ಪುರುಷರಲ್ಲಿಯೂ ಅದು ಕೆಲಮಟ್ಟಿಗೆ ಕಂಡುಬಂದರೂ, ಅದು ಪ್ರಾಮುಖ್ಯವಾಗಿ ಸ್ತ್ರೀಯರಲ್ಲಿದೆ. ಮಿಕ್ಕ ಜೀವಕೋಟಿಯಲ್ಲಿ ಇದು ಸಾಮಾನ್ಯವಾಗಿರುವಂತೆ ತೋರುವುದಿಲ್ಲ. ಯಾಕೆಂದರೆ, ಪಶುಪಕ್ಷ್ಯಾದಿಗಳಲ್ಲಿ ಹೆಣ್ಣು ಪ್ರಾಣಿಗಳು ಅಂದವಾಗಿದ್ದು ಗಂಡುಪ್ರಾಣಿಗಳು ಮಾತ್ರ ಅಂದವಾಗಿರುವುದು ಕಂಡುಬರುತ್ತದೆ. ಆದುದರಿಂದ ಪ್ರಾಣಿಕೋಟಿಯಲ್ಲಿ ಮನುಷ್ಯವರ್ಗವನ್ನು ಎಂಗಡಿಸಲು ಇದೊಂದು ಸಾಧನವಾಯಿತು. 'ಹಾಗಾದರೆ ಅಲಂಕಾರದ ಉದ್ದೇಶವಾದರೂ ಏನು?' ಎಂದು ಕೇಳುವುದಾದರೆ ಅದು ನಯನಾಕರ್ಷಣವಿದ್ಯೆಯೆಂದು ಸ್ಥೂಲವಾಗಿ ಹೇಳಬಹುದು. ವ್ಯವಹಾರದಲ್ಲಿಯೂ ಸ್ತ್ರೀಯರ ಅಲಂಕಾರವು ನಯನಾಕರ್ಷಣವೆಂದೇ ಕಂಡುಬಂದಿದೆ. ತೋಳಬಾಪುರಿ—ಕಂಠಭೂಷಣಗಳು ಸ್ತ್ರೀ-ಪುರುಷರ ಕಣ್ಣಿಗೆ ಬೀಳಬೇಕೆಂದು ಅವುಗಳನ್ನು ಧರಿಸಿದ ಸ್ತ್ರೀಯರು, ಮೇಲಿಂದ ಮೇಲೆ ಸೆರಗನ್ನು ಜಾರಿಸಿ, ಮತ್ತೆ ಹೊದ್ದುಕೊಳ್ಳುವುದನ್ನು ನಿತ್ಯವೂ ಕಾಣಬಹುದು. ಅಂದವಾದ ಕುಪ್ಪಸವನ್ನು ತೋರುವ ನೆವದಿಂದಲೂ ಸ್ತ್ರೀಯರು ಹೀಗೆ ನಟಿಸುವುದುಂಟು. ನೂರು ರೂಪಾಯಿಯ ಪೀತಾಂಬರವನ್ನು ತಂದುಕೊಡುವಾಗ, ನಾಲ್ಕಾಣೆ ಬೆಲೆಬಾಳುವ ಕುಪ್ಪಸವನ್ನು ಅದರ ಜೊತೆಗೆ ಕೊಡಬೇಕೆಂದು ಹಿರಿಯರು ಹೇಳುತ್ತಿರುವಲ್ಲಿ ಇದೇ ಸತ್ಯಾಂಶವಿದೆ. ಅದರಿಂದ ಅವರು ತಮ್ಮ ಕುಪ್ಪಸವನ್ನು ಮುಚ್ಚಿಕೊಳ್ಳುವಾಗ, ತಮ್ಮ ಅಂಗಾಂಗಗಳನ್ನು ಮುಚ್ಚಿಕೊಳ್ಳುವರೆಂದು ಅವರ ಅಭಿಪ್ರಾಯ. ಹೀಗಿದೆ ಸ್ತ್ರೀಯರಲ್ಲಿ ಅಲಂಕಾರದ ವಿಚಾರ.

ಇನ್ನುಮೇಲೆ ಅಲಂಕ್ರಿಯಾರಚನೆಯ ಬೇರೆ ಬೇರೆ ವಿಭಾಗಗಳನ್ನು ವಿವೇಚಿಸುವ: ಪುರಾತನ ಕಾಲದಲ್ಲಿ ಅಂತಃಪುರದೊಳಗಿನ ಸ್ತ್ರೀಯರ ಪ್ರಸಾಧನಕಾರ್ಯವನ್ನು ವಾರವಿಲಾಸಿನಿಯರು ಮಾಡುತ್ತಿದ್ದಂತೆ ತಿಳಿದುಬಂದಿದೆ. ವಾರವಿಲಾಸಿನಿಯರು ಕೇಶರಚನೆಯಲ್ಲಿ, ವಸ್ತ್ರವಿರಚನೆಯಲ್ಲಿ, ವಿಲೇಪನ ಕ್ರಿಯೆಯಲ್ಲಿ ಚತುರೆ

ರು–ಹೊಸಬಗೆಯನ್ನು ತೋರುವವರು–ಎಂದು ಅವರನ್ನು ಈ ಕಾರ್ಯದಲ್ಲಿ ನಿಯೋಜಿಸುತ್ತಿದ್ದರು. ಈ ಸಂಪ್ರದಾಯವು ಇಗಲಾದರೂ ಕೆಲಕೆಲವು ಅರಸುಮನೆತನಗಳಲ್ಲಿ ಇದ್ದಂತೆ ತಿಳಿದು ಬರುತ್ತದೆ. ಈ ಸಂದರ್ಭದಲ್ಲಿ ಕಾವ್ಯಗಳಲ್ಲಿ ಕಂಡುಬರುವ ವರ್ಣನೆಗಳಿಗಿಂತ ಚಿತ್ರಗಳೂ, ಗುಡಿಗಳಲ್ಲಿ ಮತ್ತು ಗುಡಿಗಳ ಮೇಲೆ ಕೊರೆದ ಕಲ್ಲೊಂಬೆಗಳೂ ಹೆಚ್ಚಾಗಿ ಸಹಾಯಕವಾಗುತ್ತವೆ. ಗುಡಿಗಳಲ್ಲಿ ಕಾಣುವ ಕಲ್ಲೊಂಬೆಗಳಲ್ಲಿ ತೋರುವ ಕೇಶರಚನೆಯು ಅನೇಕ ರೀತಿಯಾಗಿದ್ದುದು ಕಂಡುಬರುತ್ತದೆ. ಈ ಕಾರ್ಯಕ್ಕಾಗಿ ದರ್ಪಣವನ್ನು ಸಾಮಾನ್ಯವಾಗಿ ಎಲ್ಲರೂ ಉಪಯೋಗಿಸುತ್ತಿದ್ದಂತೆ ಕಂಡುಬರುತ್ತದೆ. ಅದು ಅಂದಕ್ಕಾಗಿ ದೀರ್ಘವರ್ತುಲಾಕೃತಿಯಾಗಿ ಇರುವುದು ಅವರ ಸೌಂದರ್ಯಾಭಿರುಚಿಯು. ಹಣಿಗೆಯು ಮಾತ್ರ ಸಾಮಾನ್ಯವಾಗಿ ಪುರಾತನಕಾಲದಿಂದ ಈ ವರೆಗೆ ಒಂದೇ ರೂಪಿನಲ್ಲಿದೆ. ಬೈತಲೆಯು ನಟ್ಟನಡುವೆ ಇರುವುದಾದರೂ, ಬೇಲೂರ ಚೆನ್ನಕೇಶವ ದೇವಾಲಯದ ಮೇಲಿರುವ ಒಂದು ಮದನಕೈಗೊಂಬೆಯಲ್ಲಿ ಓರೆಯಾಗಿದೆ. ಮುಡಿಕಟ್ಟುವುದರಲ್ಲಿಯೂ ವೈವಿಧ್ಯವಿದೆ. ಅದು **ಬಿಡುಮುಡಿ, ಎಳಲ್ಮುಡಿ, ಸೋರ್ಮುಡಿ, ಜೋಲ್ಮುಡಿ, ಸಡಿಲ್ಮುಡಿ, ಬಳಲ್ಮುಡಿ, ಪೂಮುಡಿ, ಬಂಬಲ್ಮುಡಿ** ಎಂದು ಅನೇಕ ರೀತಿಯಾಗಿದ್ದಂತೆ ಕಾವ್ಯಗಳಿಂದ ತಿಳಿದು ಬರುವುದಾದರೂ, ಈಗಿನ ಕನ್ನಿಕೆಯರಿಗೆ ಸಾಮಾನ್ಯವಾದ ಬಿಡುಮುಡಿಯೂ, ಪೂಮುಡಿಯೂ, ಕೇರಳೀಯರ ಜೋಲ್ಮುಡಿ–ಸಡಿಲ್ಮುಡಿ–ಬಳಲ್ಮುಡಿಗಳೂ, ಕೇಶಬಾಹುಲ್ಯದಿಂದ ಕಂಡುಬರುವ ಬಂಬಲ್ಮುಡಿಯೂ, ಹೂಗಳ ದುಂಡುದಂಡೆಯಿಂದ ಅಲಂಕೃತವಾದ ಪೂಮುಡಿಯೂ ಈಗ ಅನೇಕ ರೀತಿಯಾಗಿ ಕಟ್ಟುತ್ತಿರುವ ಮುಡಿಯ ರೂಪುಗಳೂ ಆ ದೇವಾಲಯದ ಕಲ್ಲೊಂಬೆಗಳಲ್ಲಿ ಕಂಡುಬರುತ್ತವೆ. ಜೇಳಿನ ಕೆಂಡೆ ತಿರುಹಿದಂತೆ ಕಟ್ಟಿದ ಮುಡಿಯೂ ಅಲ್ಲಿ ಕಾಣಲಾಗಿದೆ. ಇದುರಿಂದ ಆಧುನಿಕರು ಕಟ್ಟುತ್ತಿರುವ—ನಮಗೆ ಹೊಸದೆಂದು ಕಾಣುವ—ಮುಡಿಯ ರೂಪಗಳಲ್ಲಿ ಹೊಸತನವಾವುದೂ ಇಲ್ಲವೆಂದು ಹೇಳಬಹುದು. ಕೂದಲುಗಳ ತಿರುಪು, ಕೆನ್ನೆಯ ಮೇಲಿನ ಸುತ್ತ ಕಿವಿ ಮುಚ್ಚುವ ಕುರುಳೋಳಿಗಳ ಒನಪು ಮಾತ್ರ ಅಲ್ಲಿ ಕಾಣಲಾಗಿಲ್ಲ. ಕೂದಲುಗಳು ವೆಗ್ಗಳವಾಗಿ ಬೆಳೆದು, ಮುಡಿಯಿಂದ ಅವಯವರೆಗೆ ಹೋಗಿದ್ದರೆ ಅದೊಂದು ಬೆಡಗು ಎಂಬ ಭಾವನೆ ಇದ್ದಿತು. ಇದಕ್ಕೆ ಉದಾಹರಣೆಯೆಂದು ಕೆಳಗಿನ ಪದ್ಯವನ್ನು ನೋಡಬಹುದು:

ಮುದಿ ಬಿಟ್ಟು ಬಂದು ಪಸರಿಸಿ
ಮಡಗಾಲ್ಗಳಿದಿರೆ ಮೃಗಾಕ್ಷಿ ನಿಂದೀಕ್ಷಿಸುತ-||
ಪೆಡೆಯೊಳ್ ಪೊಲ್ತಳ್ ನೀಲದ
ನಿಡುಗಂಬದೊಳಮರ್ದ ಪೊನ್ನ ಪೊಸಪುತ್ತಳಿಯಂ ||

ಮಹಾದೇವಿಯಕ್ಕನು ಉಡುತಡಿಯಿಂದ ಹೊರಟಾಗ, ಅವಳ ಉದ್ದವಾದ ಕೂದಲು ಅವಳ ಅಂಗಾಂಗಳನ್ನು ವಸ್ತ್ರದಂತೆ ಮುಚ್ಚಿಕೊಂಡಿದ್ದುವಂತೆ.

ಸ್ತ್ರೀಯರ ವಸ್ತ್ರವನ್ನು ಕವಿಗಳು ದುಗುಲವೆಂದು ಹೇಳಿದ್ದಾರೆ. 'ದುಗುಲಮನುಟ್ಟು ತೊಟ್ಟು ಪೊಸ ಮು ಕ್ತನೆ ಚಂದನದಣ್ಪ ನಿಕ್ಕಿ'—ಅದು ಪುರಾತನಕಾಲದಲ್ಲಿ ಈಗಿನಂತೆ ಧರಿಸಲ್ಪಡುತ್ತಿರಲಿಲ್ಲವೆಂದು, ಚಿತ್ರಗಳಿಂದ ಮತ್ತು ಕಲ್ಲೊಂಬೆಗಳಿಂದ ತಿಳಿದುಬರುತ್ತದೆ. ನಡುವಿನಿಂದ ಮೊಣಕಾಲ ವರೆಗೆ ಅದನ್ನು ಧರಿಸುತ್ತಿದ್ದರು. ಆಭರಣಗಳಿಂದ, ತುಂಬಿದ ಅವಯವಗಳನ್ನು ಮುಚ್ಚಲು ಪ್ರಯತ್ನಿಸುತ್ತಿದ್ದರು. ಈಗಲೂ ಸಹ್ಯಾದ್ರಿಯ ಮೇಲೆ ವಾಸಿಸುತ್ತಿರುವ ಮಲಪರು ಉಟ್ಟುಕೊಂಡ ಸೀರೆಯಿಂದ, ಪುರಾತನ ಸೀರೆಯ ಕಲ್ಪನೆಯು ಮನದಟ್ಟಾಗಬಹುದು. ಪುರುಷರು ಉಟ್ಟುಕೊಳ್ಳುವ ವಸ್ತ್ರಕ್ಕೂ 'ಸೀರೆ'ಯೆಂಬ ಹೆಸರಿದ್ದಿತು. ಈ ಶಬ್ದಕ್ಕೆ ಹೆಂಗುಸರು ಉಟ್ಟುಕೊಳ್ಳುವ ವಸ್ತ್ರವೆಂದು ವಿಶಿಷ್ಟ ಅರ್ಥ ಯಾವಾಗಲೊ ಬಂದಿದೆ. ಆ ವಸ್ತ್ರವು ನಾಗರಿಕತೆಯ ವಿಚಾರಾಂತರದಿಂದ ಉದ್ದವಾಗುತ್ತ, ಹದಿನೆಂಟು ಮೊಳಕ್ಕೆಬಂದು ನಿಂತಿದೆ ಈಗ. ಅದರ ಬಣ್ಣ ಚಿತ್ರ-ವಿಚಿತ್ರವಾಗಿದೆ; ಅಂಚೂ ಚಿತ್ರ-ವಿಚಿತ್ರ; ನೆರಿಗೂ ಚಿತ್ರ-ವಿಚಿತ್ರ. ಅದನ್ನು ಉಟ್ಟುಕೊಳ್ಳುವ ಪದ್ಧತಿಯೂ ಹೊಸತು. ಕಚ್ಚೆಯಿಲ್ಲದೆ ಧರಿಸುವುದು ದ್ರಾವಿಡಪದ್ಧತಿ, ಮುಂದಣ ಹಿಂದಣ ಕಚ್ಚೆಯಿಂದ ಉಟ್ಟುಕೊಳ್ಳುವುದು ಕೊಂಕಣಪದ್ಧತಿ--ಎಂದು ಸ್ಥೂಲವಾಗಿ ಹೇಳಬಹುದು. ತಲೆಯ ಮೇಲೆ ನೆರಿಗೂ ಹೊದ್ದುಕೊಳ್ಳುವ ಪದ್ಧತಿಯು ಉತ್ತರದಿಂದ ಬಂದಂತೆ ತೋರುತ್ತದೆ. ಅದರೂ 'ತಲೆ ತೆಗೆದು ನಿಂತಿರುವಳು' ಎಂಬ ಪದಸಮುಚ್ಚಯದಲ್ಲಿ ಹೊಸ ಅರ್ಥ ಗರ್ಭಿತವಾಗಿದೆ. ಕುಪ್ಪಸವನ್ನು ಧರಿಸುತ್ತಿರಲಿಲ್ಲ; ಅದಕ್ಕೆ ಬದಲಾಗಿ ಒಂದು ವಸ್ತ್ರವನ್ನು ಎದೆಗೆ ಕಟ್ಟಿಕೊಳ್ಳುತ್ತಿದ್ದರು.

ಮೇಲ್ತರಗತಿಯ

ಹಳುಕು (Concentrated) ಬಣ್ಣಗಳು

- ಬರೆಯುವ ಮಸಿಗಳು
- ಟೈಪಿಸ್ಟ್‌ರಾಯಿಟಿಂಗ್ ರಿಬನ್ನುಗಳು
- ಸಾಬೂನುಗಳು
- ನಿತಾಯಿಗಳು

ಇವುಗಳನ್ನೆಲ್ಲ ತಯಾರಿಸುವುದಕ್ಕೆ ಬಳಸುವ ಬಣ್ಣಗಳು.
ವಿಶೇಷವಿವರಗಳಿಗಾಗಿ ಇಂಗ್ಲಿಷ್ ಭಾಷೆಯಲ್ಲಿ ಬರೆದು ಕೇಳಿಕೊಳ್ಳಿರಿ.

ಕ್ರಿಯಾಗ್ ಲಿಮಿಟೆಡ್,
ಪೋ. ಬಾ. ನಂ. ೨೧೦, ಮುಂಬಯಿ.

ಡೋಂಗರೆ ಅವರ ಬಾಲಾಮೃತವು

ಸೊರಗಿ ಕಡ್ಡಿಯಂತಾಗಿ ನಿರ್ಬಲರಾದ

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಆದು ಒಂದೊಂದು ಸಲ ಭುಜದ ಮೇಲಿಂದಲೂ ಹಾಯ್ದು ಬರುತ್ತಿದ್ದಿತು. ಅದಕ್ಕೆ 'ಮೇಲುದು' ಎಂದು ಹೆಸರು.

'ಮುಯ್ಯಂ ಬಳಸಿದ ಮೇಲುದು ಕುಚಮಂ ಬಿಗಿದಿರೆ'

ಇಲ್ಲಿ ಹೇಳಿದ 'ಮೇಲುದು' ಶಬ್ದವನ್ನು, ನಾವು ಈಗಲೂ ಮುದುವೆಯ ಕಾಲಕ್ಕೆ ಬಳಸುವ 'ಮೇಲುದು ಸೀರೆ' ಎಂಬ ಶಬ್ದ-ಸಮುಚ್ಚಯದಲ್ಲಿ ಕಾಣುತ್ತೇವೆ. ಅದು ವ್ಯವಹಾರದಲ್ಲಿಲ್ಲ, ಅಳಿದು ಹೋಗಿದೆ. 'ಮೇಲುದು' ಈಗಿನ ಪಾಶ್ಚಾತ್ಯ ಸ್ತ್ರೀಯರು ಧರಿಸುವ, ಎದೆಯನ್ನು ಪೂರ್ತಿ ಮುಚ್ಚುವ, ಎರಡೂ ಭುಜಗಳ ಮೇಲಿಂದ ಹಾಯ್ದುಹೋಗುವ ಪಟ್ಟಿಗಳುಳ್ಳ ಕುಪ್ಪಸವೆಂದು ಹೇಳಬಹುದು. (ಕನ್ನಡಿಯರು ಅವಕ್ಕೆ 'ಬಾಡಿ' ಎನ್ನುತ್ತಾರೆ) ಇದನ್ನು ಒಳ ಅಂಗಿಯಂತೆ ಉಪಯೋಗಿಸುತ್ತಾರೆ. ಇತ್ತಿತ್ತಲಾಗಿ ಇದನ್ನು ಸಮ್ಮ ಸ್ತ್ರೀಯರೂ—ಹೆಚ್ಚಾಗಿ ಸುಶಿಕ್ಷಿತ ಸ್ತ್ರೀಯರು—ಉಪಯೋಗಿಸ ಹತ್ತಿದ್ದಾರೆ. ಕುಪ್ಪಸವು ಬಹಳ ರೂಪಾಂತರಗೊಂಡಿದೆ. ಆರಂಭದಲ್ಲಿ ಅದರ ತೋಳುಗಳು ಮೊಳಕೈಯವರೆಗೆ (ಮಹಾರಾಷ್ಟ್ರ ದೇಶದಲ್ಲಿ ಅವು ಮುಂಗೈವರೆಗೆ), ಬರುಬರುತ್ತ ಅವುರಿ ಕಿದಾಗುತ್ತ ಹೋಗಿ, ಈಗ ಭುಜದ ತೀರ ಸಮೀಪಕ್ಕೆ ಬಂದಿವೆ. ಗಂಟಿಕ್ಕುವ ಕುಪ್ಪಸವು ಗುಂಡಿಯ ಕುಪ್ಪಸವಾಗಿದೆ. ಅದು ಮುಂದೆ ಪೋಲಕೆ, ಬ್ಲಾವುಜ್, ಸ್ಲೀವ್ಲೆಸ್ (ತೋಳಿಲ್ಲದುದು) ಎಂದು ಮಾರ್ಪಡುತ್ತ ಬಂದಿದೆ. ಈ ಸಂದರ್ಭದಲ್ಲಿ ಚಲಚ್ಚಿತ್ರನಟಿಗಳ ಕುಪ್ಪಸಗಳು ಆದರ್ಶವಾಗಿವೆ. ನಟಿಗಳೇ ವಸ್ತ್ರಪ್ರಾವರಣದಲ್ಲಿ ಯುಕ್ತ ಸ್ಥಿತಿಲಕರು.

ಹಣೆಯ ಮೇಲಿನ ತಿಲಕವು ಕೆಂಪು, ಸಾದುಗಪ್ಪು, ನೀಲಿ, ಕಿರಮುಂಜಿ, ಹಸುರು ಎಂದೂ; ಅಡ್ಡ, ಉದ್ದ, ಚಂದ್ರಕೋರ, ದೊಡ್ಡ ಬೊಟ್ಟು, ಸಣ್ಣ ಬೊಟ್ಟು ಎಂದೂ ಅನೇಕರೂಪವಾಗಿದ್ದು, ಇತ್ತಿತ್ತ ಒಂದೇ ರೂಪಕ್ಕಿಳಿದಿದೆ. ಅದು ಸಣ್ಣದಾದ ಬೊಟ್ಟು. ಒಂದೊಂದು ಸಲ ಅದನ್ನು ಕಾಣಲು ಸೂಕ್ಷ್ಮದರ್ಶಕ ಯಂತ್ರವನ್ನು ಸಹ ಉಪಯೋಗಿಸಬಹುದೋ ಏನೋ! ತಿಲಕವು ಸೌಭಾಗ್ಯಸೂಚಕವಾಗಿದ್ದರೆ ಅದರ ಆಕಾರವು ಹೇಗಿರಬೇಕು? ಅದು ಎಷ್ಟು ದೊಡ್ಡದಾಗಿರಬೇಕು? ಅದರ ಬಣ್ಣವು ಯಾವುದಾಗಿರಬೇಕು?—ಎಂಬ ಬಗ್ಗೆ ಮಹಿಳಾಮಹಾಸಭೆಯಲ್ಲಿ ಬಹು ದೊಡ್ಡವಾದವಿವಾದವಾಗಿ, ಕೊನೆಗೆ ಸಭಾಪತಿಗಳು ಅದು ಯಥೇಷ್ಟವೆಂದು ನಿರ್ಣಯವಿತ್ತರೆಂದು ನಾರದರು ಸುದ್ದೀ ತಂದಂತೆ ಆಚಾರ್ಯರು ಪುರಾಣದಲ್ಲಿ ಹೇಳಿದರು. ಕುಂಕುಮವು ಸೌಭಾಗ್ಯಸೂಚಕವಲ್ಲವೆಂದೂ, ಹಾಗಿದ್ದರೆ ಕನ್ನಿಕೆಯರು ಕುಂಕುಮಹಚ್ಚಿಕೊಳ್ಳುತ್ತಿದ್ದಿಲ್ಲವೆಂದೂ, ವಿಧವೆಯರು ವಾದಿಸಿ ತಿಲಕವಿಟ್ಟುಕೊಳ್ಳುತ್ತಿರುವರೆಂದು ಇತ್ತೀಚೆಗೆ ಸುದ್ದಿಬಂದಿದೆ. 'ಏನೇ ಇರಲಿ, ನಮ್ಮ ತಿಲಕದಮೇಲೆ ಪುರುಷರ ಕಣ್ಣೇಕೆ?' ಎಂದು ಮಹಿಳೆಯರು ತಾಪಪಡುವುದೂ ಕಂಡುಬಂದಿದೆ.

ಕಣ್ಣಿಗೆ ಕಾಡಿಗೆ ಹಚ್ಚಿಕೊಳ್ಳುವುದೂ ಒಂದು ಸೌಂದರ್ಯದ ಲಕ್ಷಣವೆಂದು ನಮ್ಮ ಮಹಿಳೆಯರ ಭಾವನೆ. ಅದರಿಂದ ಕಣ್ಣುಗಳು ಕಪ್ಪಾಗಿ 'ಮಸೃಣಕಟಾಕ್ಷದಿಂ ಕುಮುದದೊಳ್ಳಿಸಳಂ ಕರೆವಂತೆ ಆಗುತ್ತವೆಂದೂ 'ಭ್ರೂವಲನಂ ಕಟಾಕ್ಷವಲನಂ ಚೆಲ್ವಾಗು'ತ್ತವೆಯೆಂದೂ ಕವಿಗಳು ವರ್ಣಿಸುತ್ತಾರೆ. ಕಣ್ಣುಗಳು ಅಂಜನದಿಂದ ಕಪ್ಪಾಗಿ, ಕುಮುದಸತ್ಪಲೋಜನೆಯರೆಂದು ಹೊಗಳಿಸಿಕೊಳ್ಳುವ ಉತ್ಸುಕತೆ ಸ್ತ್ರೀಯರಲ್ಲಿ.

ಕೆನ್ನೆಯ ಮೇಲೆ ಮಕರಪತ್ರವನ್ನು ಚಿತ್ರಿಸಿಕೊಳ್ಳುವ ಪದ್ಧತಿಯಿತ್ತು ಹಿಂದೆ. ನಾಗರಿಕತೆಯು ಬದಲಾಗುತ್ತ ನಡೆದಂತೆ ಅದರಲ್ಲಿಯೂ ಬದಲಾವಣೆಯಾಗಹತ್ತಿತು. ಮಕರಪತ್ರದ ಸ್ಥಾನವನ್ನು ಅರಿಸಿಣವು ಆಕ್ರಮಿಸಿತು. ಕಾಲಾಂತರದಲ್ಲಿ ಪತ್ರಭಂಗವು (ಮಕರಪತ್ರವು) ಹರಿದ್ರಾಲೇಪನಕ್ಕೆ ಇಳಿದಂತೆ, ಅದು ಈಗ ಜೆಂಬುಡಿಗೆ (Powder) ಇಳಿದಿದೆ. ಅದರಲ್ಲಿ ಅರಿಸಿಣಕ್ಕಿಂತಲೂ ಹೆಚ್ಚಿನ ಗುಣಗಳಿವೆಯಂತೆ. ಆದರಿಂದ ಮೈ ಲಿಯ ಕಲೆಗಳು ಮುಚ್ಚುತ್ತವೆ. ತೊಳೆದ ಕೆಂಡದಂತಹ ಮೈಬಣ್ಣವು ಅರಿಸಿನದಿಂದ ಹಸುರು ಕಾಣುವುದು; ಆದರೆ ಇದರಿಂದ (ಇದನ್ನು ದಟ್ಟಾಗಿ ತೊಡೆಯುವುದರಿಂದ) ನಯವಾಗಿ ಗೌರವರ್ಣವಾಗುತ್ತದೆಯಂತೆ. ಪೀಚ್ ಎಂಬ ಹಣ್ಣಿನ ಮೇಲೆ ಕಂಡುಬರುವ ಸ್ವಾಭಾವಿಕ ನಯ, ನಸುಬಿಳಿಯ ಕಾಂತಿ, ಆದೇ ಪಕ್ವವಾಗುತ್ತಿರುವಲ್ಲಿ ಕಂಡುಬರುವ ಸೊಬಗು—ಇವುಗಳನ್ನು ಈ ಜೆಂಬುಡಿಯು ಮುಖಕ್ಕೆ ತಂದೊಡ್ಡುತ್ತದೆ. ಕೆನ್ನೆಯಮೇಲೆ ಇಲ್ಲದ ಮತ್ತು ಎಂದೂ ಕಾಣಲಸದಳವಾದ

ಆರಕ್ಕತೆಯನ್ನು, ಚೆಂಬುಡಿಯ ಸಹಾಯಂದಿಂದ ಸುಲಭವಾಗಿ ತೋರಿಸಬಹುದು. ಆದುದರಿಂದ ಪಾಶ್ಚಾತ್ಯರಿಂದ ನಮ್ಮ ಸ್ತ್ರೀಯರು ದೊರಕಿಸಿದ ಹದಿನಾಲ್ಕು ರತ್ನಗಳಲ್ಲಿ ಇದು ಎರಡನೆಯದು. ತುಟಿಯು ಸ್ವಾಭಾವಿಕವಾಗಿ ತೊಂಡೆಯ ಹಣ್ಣಿನಂತೆಯೋ ಹವಳದಂತೆಯೋ ಕೆಂಪು ಬಣ್ಣದ್ದೆಂದು ಕವಿಗಳು ವರ್ಣಿಸಿದ್ದಾರೆ. ಆದು ಹಾಗಿರದಿದ್ದರೆ ವೀಳ್ಯವೆಲ್ಲಬಹುದೆಂಬ ಸುಧಾರಣೆಯನ್ನು ಇಟ್ಟುಕೊಂಡಿದ್ದಾರೆ. ಆದರೆ ಅದರಿಂದ ಹಲ್ಲುಗಳಿಗೆ ಬಾಧೆಯಾಗಬಹುದೆಂಬ ಭೀತಿಯಿಂದ, ಪಾಶ್ಚಿಮಾತ್ಯರು ತುಟಿಬಣ್ಣನ್ನಿಟ್ಟುಕೊಂಡಿದ್ದಾರೆ. ಆದನ್ನು ಪೌರ್ವಾತ್ಯ-ಸ್ತ್ರೀಯರೂ ಉಪಯೋಗಿಸಹತ್ತಿದ್ದಾರೆ. ಕೆಂಪಾದ ಬಾಯ್ದೆರೆಗಳಿಂದ ನಗುವುದನ್ನು ಕವಿಗಳು 'ನಗೆಮೊಗದಿಂ ಮುಗುಳ್ನಗೆ ತುಳುಂಕೆ' ಎಂದು ವರ್ಣಿಸುತ್ತಾರೆ.

ಕರ್ಣಕುಂಡಲಗಳೂ ಒಂದು ಶೋಭೆಯನ್ನುಂಟುಮಾಡುತ್ತವೆ. ಅವುಗಳಿಗೆ ತೊಡಕಿಸಿದ ಲೋಲಕಗಳು ಅಧವಾ ಓಲೆಗಳು, ಮುಖದ ನಸುತೂಕದಿಂದ ಸಹ ಅತ್ತಲೂ ಇತ್ತಲೂ ಬಹಳವಾಗಿ ತೂಗುವಂತಿರಬೇಕು. ಅವುಗಳ ಕಾಂತಿಯು ಕೆನ್ನೆಯ ಮೇಲೆ ಪಸರಿಸಬೇಕು. 'ಮಿಸುಗುವೋಲೆಯ ತೂಕವಿ ತೋರೆ ನೃತ್ಯಮುಂ' ಎಂದು ಕವಿಗಳು ವರ್ಣಿಸುವಂತಿರುವ ಲೋಲಕಗಳನ್ನು ಈಗ ತರುಣಿಯರು ಧರಿಸಹತ್ತಿದ್ದಾರೆ. ಇಲ್ಲಿಯೂ ನಟಿಗಳು ಆದರ್ಶರಾಗಿದ್ದಾರೆ. ಅವರು ಧರಿಸುತ್ತಿರುವ ಲೋಲಕಗಳು ಅನೇಕ ರೂಪದುವಾಗಿವೆ. ಈ ಅಲಂಕಾರದ ಮಾದರಿಯು ಪಾಶ್ಚಿಮಾತ್ಯರಿಂದ ಇತ್ತಿತ್ತಲು ಪ್ರಚುರವಾಯಿತು.

ಅಲಂಕಾರಗಳನ್ನು ಧರಿಸುವ ಪದ್ಧತಿಯು ಕಾಲಕಾಲಕ್ಕೆ ಬದಲಾಗುತ್ತ, ಸುವರ್ಣಲೇಶದಿಂದ ಅವು ಕೊರಗುತ್ತ ಬಡವಾಗಹತ್ತಿವೆ. ಗಟ್ಟಿಬಳೆ, ಕಡಗ, ಹರಡೆಕಂಕಣ, ತೋಡಿ, ತೋಳಬಂದಿ, ಸರಿಗೆ. ಡಾಬು ಮುಂತಾದ ಆಭರಣಗಳು ಇಪ್ಪತ್ತು ವರ್ಷಗಳಲ್ಲಿಯೆ ಕಾಣದಾಗಿವೆ. ಪುರಾತನಕಾಲದಲ್ಲಿ ಸ್ತ್ರೀಯರ ಆಭರಣಗಳಿಗೆ ಬೀಸತ್ತು ಒಬ್ಬ ವರ್ತಕನು, ಒಂದು ಗುಂಡುಕಲ್ಲಿಗೆ ಬಂಗಾರದ ಕವಚ ಹಾಕಿಸಿ, ಬಂಗಾರದ ಸರಪಣಿಯಿಂದ ಕೊರಳೊಳಗೆ ಹಾಕಿಕೊಳ್ಳುವಂತೆ ಹೊಸ ಆಭರಣ ಮಾಡಿಸಿ ಕೊಟ್ಟನಂತೆ. ಹೆಂಡತಿಯು ಗಂಡನ ಪ್ರೀತಿಗೆ ಮೆಚ್ಚಿ, ನಾನಾತರದ ಪಕ್ವಾನ್ನಗಳನ್ನು ಮಾಡಿ, ಆ ಆಭರಣವನ್ನು ಧರಿಸಿಕೊಂಡು ಉಣ್ಣಬಡಿಸುವಾಗ, ಆದು ತೂಗಿ ತೂಗಿ ಎದೆಯ ಮೇಲೆ ಅಪ್ಪಳಿಸುವಾಗ ಉಂಟಾಗುವ ವೇದನೆಯನ್ನೂ ಉತ್ಸಾಹದಲ್ಲಿ ಗಣನೆಗೆ ತರಲಿಲ್ಲವಂತೆ. ಮಾತ್ರ ಮರುದಿನ ಅವಳಿಗೆ ಏಳಲು ಬಾರದಷ್ಟು ವ್ಯಥೆಯಾದುದರಿಂದ, ಆ ಹೊಸ ಆಭರಣವನ್ನು ತನ್ನ ಗೆಳತಿಯರಿಗೆ ತೋರಿಸಲು ಮಾತ್ರ ಇಟ್ಟಿದ್ದಳಂತೆ; ಮೈಮೇಲೆ ಧರಿಸುತ್ತಿರಲಿಲ್ಲ. ಈಗೀಗ ಪೂರ್ವದ ದಪ್ಪನಾದ ಆಭರಣಗಳೆಲ್ಲ ಹೋಗಿ, ಜಸ್ತಿಗಾದ ದಾರದಂತೆ ದಪ್ಪಾದ ಬಂಗಾರದ ಬಳೆಗಳು (ಬಿಲ್ಲವರ) ಅವರಿಗೆ ಸೇರಹತ್ತಿವೆ. ಅವುಗಳ ಮೇಲೆ ಮುತ್ತಿನ ಸಾಲೂ ಒಮ್ಮೊಮ್ಮೆ ಕಾಣಬಹುದು. ಕೊರಳ ಹಾರಗಳಲ್ಲಿಯೂ ಬದಲಾವಣೆಯಾಗಿದೆ. ಟೀಕೆಗಳು ಅದೃಶ್ಯವಾಗಿವೆ. ಅವುಗಳ ಸ್ಥಳವನ್ನು ಎಕ್ಕಸರ, ಬಳುಳಾಹಾರ, ಚಪಲಾಹಾರ ಮುಂತಾದ ಆಭರಣಗಳು ಆಕ್ರಮಿಸಿವೆ. ಮೂಗುತಿಯು ಮೂರ್ಪಡುತ್ತ ನತ್ತು ಆಗಿ, ಮೂಗುಬೊಟ್ಟು ಆಗಿ, ಈಗ ವಿಂಚಿಕೆಯಾಗಿದೆ. ಅಂತೂ ಒಂದಿಲ್ಲೊಂದು ತರದ 'ಭೂಷಣಕಾಂತಿಯಿಂ ತಟಿತ್ಪ್ರಸರಮನೆತ್ತಲುಂ ಪಸರಿಸು ತಿರ್ಪರಾ ಜವ್ವನೆಯರು' ಎಂದು ಕವಿಗಳು ವರ್ಣಿಸುತ್ತಿರುವಂತೆ ಸಾಗಿದೆ ಸ್ತ್ರೀಯರ ಅಲಂಕಾರ.

ಇವುಗಳ ಜೊತೆಗೆ ಕುರುಳ ಓಲಾಟ, ಹುಬ್ಬಿನ ಕುಣಿದಾಟ, ಕಡೆಗಣ್ಣಿನ ಕುಡಿನೋಟ, ಜೆಂದುಟಿಯಿಂದ ಮುಗುಳ್ನಗೆಯಾಟ, ಬೆರಳುಗಳ ನಲಿದಾಟ, ಬಾಹುಲತೆಗಳ ಅಲೆದಾಟ, ಅಂಗಲತೆಯ ಒಲೆದಾಟ ಮುಂತಾದ ಒನವು ಒಯ್ಯಾರಗಳು ಸೌಂದರ್ಯಕ್ಕೆ ಸಹಾಯವಾಗಿ, ಎಲ್ಲರ ನೋಟಗಳನ್ನು ಸೆಳೆದುಕೊಳ್ಳುವ ಸಾಧನಗಳು. ಆದುದರಿಂದಲೇ ಕಾಮನು ಸ್ತ್ರೀಯರ ಪ್ರಸಾಧನದ ಸಹಾಯದಿಂದ ಹರಿ-ಹರ-ಬ್ರಹ್ಮಾದಿಗಳನ್ನು ಗೆದ್ದನೆಂದು ಕವಿಗಳು ವರ್ಣಿಸುತ್ತಾರೆ.

" ಹರಿಯುರದಲ್ಲಿ ಗೋಹವಧುವಿಂ ಮದನಂ ವಿಜಯಪ್ರಶಸ್ತಿಯಂ ।
ಬರೆಯಿಸಿದಂ; ಹರಂಗರುಣಲೋಚನಮುಂ ಪಡೆದಂ ಲಲಾಟದೋಳ್ ॥
ಗಿರಿಜೆಯ ಪಾದಯಾವಕದೆ ಮಾಡಿಸಿದಂ ಮೊಗವಿಟ್ಟು ದೇವಸೌಂ-।
ದರಿಗೆ ಸರೋಜಗರ್ಭನನೆನಲ್ ಪೆರರಂ ಕೊರಚಾಡಿ ಕಾಡನೇ? ॥

ಆದುದರಿಂದ ಸ್ತ್ರೀಸೌಂದರ್ಯಪ್ರಸಾಧನಕಾರ್ಯಗಳಲ್ಲಿ ಇಷ್ಟು ಅಗಾಧವಾದ ಪ್ರಭಾವವಿದೆ. ಪ್ರಾಚೀನ ಪ್ರಸಾಧನಕಾರ್ಯಗಳ ಕಾಲಮಾನಕ್ಕೆ ಸರಿಯಾಗಿ ಈಗ ಮಾರ್ಪಾಡುಗೊಂಡಿವೆ. ಗಳನ್ನು ಜರಿಯುವುದು ಒಳಿತಲ್ಲ. ಒಂದುವೇಳೆ ತಪ್ಪಿ ಎಚ್ಚರಿಕೆ. ಮಾನಿನಿಯರಾದ ನಾಗವೇಣಿಯರನ್ನು ಕೆರಳಿ ದೀತು. ನಾಗವೇಣಿಯಲ್ಲಿ ನಾಗಪ್ಪನ ಸುಟ್ಟಿದೆ, ರಭಸವಿದೆ, ತೀರಿಸಿಕೊಳ್ಳಲು ವಿಷವಿದೆ.

AUSTIN 7 for SALE

★

○ New Paint, Hood and Battery.
○ In Perfect Running Order.
○ Rs. 500 or near offer.

Apply to: MANAGER
Karnatak Printing Works,
Dharwar.

ಹಿಂದುಮುಂದಿನೆಣಿಕೆಯೇಕೆ ?

ಶ್ರೀ. ಎಂ. ಗೋಪಾಲಕೃಷ್ಣ ಅಡಿಗ

★

೧

ಹಿಂದುಮುಂದಿನೆಣಿಕೆಯೇಕೆ
ಇಂದಿನಮೃತದೂಟಿಯಿರಲು ?
ಅದನು ಸವಿಯಬಾರದೆ ?
ಅದುವೆ ಮುದವ ತಾರದೆ ?

೨

ಚಿಂತೆಗಿಲ್ಲ ಆದಿ-ಅಂತ !
ಅದರ ಬದುಕು ಚಿರ ಅಶಾಂತ !
ಸಂತಸವೋ ಬರಿಯ ಪಂತ—
ಅದನು ಹಿಡಿಯಬಾರದೆ ?

೩

ಜಗವಿದೊಂದು ಚಕ್ರವ್ಯೂಹ,
ಬಗೆಗೆ ಅದನು ಹೋಗುವ ಮೋಹ,
ಅದನು ಹೊಗಲು ದುಡಿವೆನೆ ?
ಕುಗಿಲ ಹೂವ ಮುಡಿವೆನೆ ?
ಹೊಗುವ ಠಾವೆ ಮುಗಿವ ಠಾವು !
ಇದುವೆ ನೋಡು ಹುಟ್ಟು-ಸಾವು.
ಅದರೊಳೇಕೆ ತೊಳಲುವೆ ?
ತೊಳಲಿ ತೊಳಲಿ ಬಳಲುವೆ ?

೪

ನೀನು ಬಂದೆ ಎತ್ತಲಿಂದ ?
ತಂದುದೇನು ? ಒಡಲನೊಂದ !
ಬಿಡಿಸಲಾರದದರ ಬಂಧ !
ಅದಕೆ ಕೊರಗುತಿರುವರೆ ?
ಬೇಡಿ ಕಾಡಿ ಪಡೆದುದಲ್ಲ,
ಬೇಡವೆನಲು ಬಿಡುವುದಲ್ಲ,
ಅದಕೆ ಸೊರಗುತಿರುವರೆ ?

೫

ಬಂದ ಬಾಳು ಬರಿದು ಕಂದ !
ತಂದಬಾಳೆ ಅಂದ—ಚೆಂದ !
ಇದನ್ನುತರಲು ಸಾಗದಿರಲು
ಅದರ ಭಾರ ವಿಧಾರಿ ಬರಲು
ಯಾರ ತಪ್ಪು—ಯಾರ ತಪ್ಪು ?
ನಿನ್ನದಲ್ಲ—ಒಪ್ಪು, ಒಪ್ಪು !

೬

ಅದನು ನಚ್ಚಿ ಇದನು ಮೆಚ್ಚಿ,
ಅವರಿವರೊಳು ಪ್ರೇಮವ ಹೆಚ್ಚಿ,
ಮೂರು ದಿನದ ಸರಸ ಹಾಸ !
ಬಳಿಕ ತಿಳಿವುದದರ ಮೋಸ :
ಪ್ರೇಮವೊಂದು ಆಕಾಶ !
ಒಂದು ಅಂಧವಿಶ್ವಾಸ !

೭

ಹಿಂದುಮುಂದಿನೆಣಿಕೆಯೇಕೆ
ಇಂದಿನಮೃತದೂಟಿಯಿರಲು ?
ಅದನ್ನು ಸವಿಯಬಾರದೆ ?
ಅದುವೆ ಮುದವ ತಾರದೆ ?

೮

ಮನುಜ ಕುಲಕೆ ಹಿಂದು ಮುಂದಿ-
ನೆಣಿಕೆ-ಬಂಧನಿಕೆ ಹಿಡಿದು,
ಸಮನಿಸಿಹುದು ಶಕ್ತಿಹಾನಿ;
ಅವುರುತಿಹುದು ಚಿತ್ತಗ್ಲಾನಿ !
ನೊಂದಹೃದಯದಂಧವಾಣಿ,
ನಿರುತಿಹುದು ಮುಗಿಲಿನೇಣಿ;
ಹಿಡಿತ ಸಡಿಲಿ ಬಿದ್ದುಕೆಳಗೆ
ಮಿಡುಕುತಿಹುದು ಗಳಿಗೆ-ಗಳಿಗೆ !

೯

ಬುದ್ಧಿ ಬರಿಯ ಮುದ್ಕ—ಅದರ
ವಿದ್ಯೆ—ಆತ್ಮವಂಚನೆ !
ಶ್ರದ್ಧೆಯೊಂದೆ ಹೃದ್ಯವದರ
ಸಿದ್ಧಿಯೇ ವಿವೇಚನೆ !
ನಂಬು ನಂಬು ! ಹಿಂದು ಮುಂದಿ-
ನಂಬಕೇಳು ಬಾಳಿನಿಂದ;
ಜಂಭಸಾಕು—ನಂಬಬೇಕು !
ಇಂದಿನಂದ—ಆನಂದ !

೧೦

ನಾನು ನೀನು—ನಿನು ನಿನು ?
ಕಡಲಿನೊಡಲ ವಿಶಾನು ವಿಶಾನು !
ತಡಿಯ ಕಡೆಯೆ ನಮ್ಮ ಕಣ್ಣು !
ಅಲ್ಲಿ ಬೆಳಿವುದಾಶೆ ಹಣ್ಣು !
ವಿಶಾನುಗಾರನೊಂದು ಬರವ
ಕಾವುದೆಮ್ಮ ಹಣಿಯಬರಿಹ !
ಅದನು ವಿಧಾರಲಾರೆವು !
ವಿಧಾರಿ ಬಾಳಲಾರೆವು !
ಇರವು ನನ್ನದೆಂಬ ಜಂಭ
ಬರಿಯೆ ಮಾತಿನುರುವಲು !
ಇರವು ನಿನ್ನದಲ್ಲ ಹುಂಬ !
ಅದುವೆ ಸಾವಿನೆರವಲು !

೧೧

ಹಿಂದುಮುಂದಿನೆಣಿಕೆಯೇಕೆ
ಇಂದಿನಮೃತದೂಟಿಯಿರಲು ?
ಅದನು ಸವಿಯಬಾರದೆ ?
ಅದುವೆ ಮುದವ ತಾರದೆ !

ತರ್ಕತರಂಗ

(ಹರಟೆ)

ತರ್ಕಶಾಸ್ತ್ರವನೋದಿ ಟಗರುಗಾಳಿಗನನ್ನಾಡುವ ವಕೀಲರ ಮಾತಿನ ಸೋಲು-ಗೆಲವುಗಳಿಂದ, ಇಂದು ಸತ್ಯದ ಸಂಶೋಧನೆಯಾಗುತ್ತಲಿದೆ; ನ್ಯಾಯಾನ್ಯಾಯದ ನಿರ್ಣಯವಾಗುತ್ತಿದೆ. ಆದರೆ ಈ ಟಗರುಗಾಳಿಗದಲ್ಲಿ ಹೊರಡುವ ಸತ್ಯದ, ನ್ಯಾಯಾನ್ಯಾಯ ನಿರ್ಣಯದ ಸ್ಥಾನವಾವುದು?

★

ಪ್ರೊ. ಎನ್. ಎಂ. ಕುಲಕರ್ಣಿ, ಎಂ. ಎ., ಬನಾರಸ್ ಹಿಂದೂ ಯುನಿವರ್ಸಿಟಿ

"ಸತ್ಯಕ್ಕೆ ಸಾವಿಲ್ಲವಯ್ಯಾ!"

"ಎಂದರೆ ಸತ್ಯ ಬದುಕುವುದು ಹೇಗೆ, ಸ್ವಾವಿಸಾ?"

ಈ ಪ್ರಶ್ನೆಯನ್ನು ಕೇಳಿದವರು ನಮ್ಮ ತರ್ಕಶಾಸ್ತ್ರಪ್ರವೀಣ ಸ್ನೇಹಿತರೊಬ್ಬರು. ಯಾವ ಮಾತನ್ನು ಹೇಳಿದರೂ ಅವರು ಅದನ್ನು ನಿಮಿತ್ತಮಾತ್ರವಾಗಿ ಸ್ವೀಕರಿಸುತ್ತಿರಲಿಲ್ಲ. ನಮ್ಮ ಸ್ನೇಹಿತರು ಶಾಬ್ದಿಕ ಪಟುಗಳು. ಅವರಿಗೆ "೨+೨=೪" ಎಂದು ಹೇಳಿದರೆ, ಅದನ್ನು ಸ್ವೀಕರಿಸುವಾಗ ಕೂಡ ಯಾವುದೋ ಒಂದು ಉಪಕಾರಮಾಡಿದವರಂತೆ ಅದನ್ನು ಸಂಬುವಂತಹರು. ಕೇವಲ ಆಂತರ್ಗತ ತರ್ಕ ಸರಣಿಯಿಂದ ಅವರು ಸಮಾಧಾನ ಹೊಂದುತ್ತಿರಲಿಲ್ಲ. ಎಲ್ಲ 'ಪಕ್ಷ' ಗಳನ್ನೂ ವಿಶದವಾಗಿ ವಿಂಗಡಿಸಿ ಇಟ್ಟ ಮೇಲೆಯೇ ಯಾವುದಾದರೊಂದು ಅಭಿಪ್ರಾಯವನ್ನಾಗಲಿ, ಮಾತನ್ನಾಗಲಿ ಸ್ವೀಕರಿಸುತ್ತಿದ್ದರು. ಈ ವೈಶಿಷ್ಟ್ಯವನ್ನರಿತ ನಾನು, ಮೇಲೆ ಕೇಳಿದ ಅವರ ಪ್ರಶ್ನೆಗೆ ಮರುಪ್ರಶ್ನೆಯನ್ನು ಕೇಳಿದೆ. ಅದಕ್ಕೆ ಕೊಟ್ಟ ಅವರ ಉತ್ತರವು ಅವರ ಮನೋವೃತ್ತಿಯನ್ನು ವ್ಯಕ್ತಮಾಡಿತು. ಆ ವೃತ್ತಿಯು ಕೆಲವೊಂದು ದೃಷ್ಟಿಯಿಂದ ನನಗೆ ವಿಚಿತ್ರವಾಗಿ ಕಂಡುಬಂದಿತು. ಅವರು ತಮ್ಮ ಪ್ರಶ್ನೆಯನ್ನು ಈ ರೀತಿ ತಿಳಿಸಿ ಸಮರ್ಥನೆ ಮಾಡಿಕೊಂಡರು:

"ಗೀತೆಯಲ್ಲಿ 'ಜಾತಸ್ಯ ಹಿ ಧ್ರುವೋ ಮೃತ್ಯುಃ ಧ್ರುವೋ ಜನ್ಮ ಮೃತಸ್ಯಚ' ಎಂದು ಹೇಳಿದೆ. ಎಂದಮೇಲೆ ಹುಟ್ಟಿದುದಕ್ಕೆ ಮರಣವುಂಟು; ಮರಣಹೊಂದಿದುದಕ್ಕೆ ಹುಟ್ಟು ಕಟ್ಟಿಟ್ಟದ್ದೇ. ಅದರಂತೆ ಸತ್ಯವು ಸಾವಿಲ್ಲದುದಾದರೆ, ಅದಕ್ಕೆ ಹುಟ್ಟೂ ಇಲ್ಲದಂತಾಯಿತು. ಆತ ಏವ ಹುಟ್ಟಿಲ್ಲದುದು ಬದುಕಲಿಕ್ಕೂ ಸಾಧ್ಯವಿಲ್ಲ. ಅಂತಿಯೇ ಸಾವಿಲ್ಲದ ಸತ್ಯಕ್ಕೆ ಜನ್ಮವೂ ಇಲ್ಲ. ಆ ಕಾರಣದಿಂದ.."

ಇನ್ನೂ ಎಷ್ಟೊಂದು ತರ್ಕ-ವಿತರ್ಕತಂತ್ರದಿಂದ ತಮ್ಮ ಅಭಿಪ್ರಾಯವನ್ನು-ನಮ್ಮ ಸ್ನೇಹಿತರು - ಸ್ಥಿರಪಡಿಸುತ್ತಿದ್ದರೋ ಗೊತ್ತಿಲ್ಲ. ಆಷ್ಟಕ್ಕೇ ನಾನು 'ತಿಳಿಯಿತು ನಿಮ್ಮ ಅರ್ಥ' ಎಂದು ಹೇಳಿದೆ; ಮತ್ತು ಈ ಅವರ ವಿಚಿತ್ರದೃಷ್ಟಿಯ ನಾವೀನ್ಯವನ್ನು ಕುರಿತು ವಿಚಾರಿಸುತ್ತ ಕುಳಿತೆ. ಸತ್ಯವು ತರ್ಕತಂತ್ರದಿಂದ ಸಾಧ್ಯವಾಗಿರಬಹುದಾದ ವಸ್ತುವಾದರೆ, ನಿಜವಾಗಿಯೂ ನಮ್ಮ ಸ್ನೇಹಿತರು 'ನಿಜವ ಕಂಡವರು' ಎಂದು ಹೇಳಬೇಕಾಯಿತು. ಆದರೆ ಆಧುನಿಕ ಕನ್ನಡ ಕವಿಗಳೊಬ್ಬರು 'ನಿಜವ ಕಂಡವರಿಲ್ಲ' ಎಂದು ಹಾಡಿದುದು ನೆನಪಾಯಿತು. "ಸತ್ಯವು ಕೇವಲ ಬುದ್ಧಿಜನ್ಯ ವಸ್ತುವೋ? ಅಂತಃಕರಣಗಳ ತಾಕಲಾಟದಿಂದ ಜೆದರಿ ಹೊರಬಿದ್ದ ಗುಟ್ಟೋ? ಅಥವಾ ಇವೆರಡೂ ರೀತಿಗಳಿಗೂ ವಿಶಿಷ್ಟವಾದ ಇನ್ನಾವ ಸಾಧನದಿಂದಾದರೂ ಸಾಧ್ಯವಾಗಬಹುದಾದ ವಸ್ತುವೋ?" ಎಂಬ ಪ್ರಶ್ನೆಗಳ ಸಂದಣಿಯಲ್ಲಿ, ದಾರಿತಪ್ಪಿದವನಂತೆ ಹುಡುಕುತ್ತ ಕುಳಿತೆ. ಇಂತಹ ಸಮಯದಲ್ಲಿ ಅನೇಕ ಮಹನೀಯರ ವಿಚಾರಗಳು ಮನದೆದುರು ವಿಂಚಿ ಹೊಳೆದು ಹೋಗುತ್ತಿದ್ದುವು. ಆದರೆ ಒಂದಾದರೂ ಪ್ರಕೃತ ಸಮಸ್ಯೆಯ ಮೇಲೆ ಬೆಳಕನ್ನು ಹಾಕಲಿಲ್ಲ. 'ತರ್ಕದ ಕೊರೆತಕೆ ಹೃದಯವ ಕೊರೆದು ಗೊತ್ತಿಲ್ಲ' ಎಂದು ಒರ್ವ ಆಂಗ್ಲ-ಕವಿಯು ಹಾಡಿದ್ದಾನೆ. ಇದು ನಿಜವಿದ್ದಲ್ಲಿ ಸತ್ಯವನ್ನು ತರ್ಕ-ತಂತ್ರದಿಂದ ಸುತ್ತಲು ಶಕ್ಯವಿಲ್ಲ. ಆದರೂ ತರ್ಕತಂತ್ರದಿಂದ ಸತ್ಯದ ತೋರಿಕೆಯನ್ನು (apparent truth) ಹೆಣೆಯಲು ಸಾಧ್ಯವಿದೆಯೆಂದು ಕಂಡುಬಂತು. ಇದಕ್ಕೆ ನಮ್ಮ ಸ್ನೇಹಿತರ ಪ್ರಶ್ನೆಯೇ ಸಾಕ್ಷಿ. ಬದುಕುವುದಕ್ಕೆ ಸಾವಿನ ಆವಶ್ಯಕತೆ ಇದೆಯೆಂದು ಅವರು ಸಾಧಿಸಿದುದು ಈ ಸತ್ಯದ ತೋರಿಕೆಗೆ ಉದಾಹರಣೆ. ಈ ತೋರಿಕೆಯ ಸತ್ಯವೇ ನಮ್ಮ ಸರ್ವ ವ್ಯಾವಹಾರಿಕ ಪ್ರಸಂಗಗಳಲ್ಲಿ ಸತ್ಯದ ಸ್ಥಾನವನ್ನು ಪಡೆದು ಮೆರೆಯುತ್ತಿದೆ, ಏಕೆಂದರೆ ನಮ್ಮ ವ್ಯಾವಹಾರಿಕ ಜ್ಞಾನವೆಲ್ಲ ವಸ್ತುಗಳ ತೋರಿಕೆಯ ಮೇಲೆಯೆ ಅವಲಂಬಿಸಿದೆ. ವಸ್ತುಗಳ ಬಾಹ್ಯರೂಪವೇ ನಮ್ಮ ಜ್ಞಾನದ ತಳಹದಿ. 'ನಿಜವ ಕಂಡವರಿಲ್ಲ' ಎಂದರೆ ಸತ್ಯವು ಈ ಬಾಹ್ಯರೂಪಕ್ಕೆ (ತೋರಿಕೆಗೆ) ಬಾಹ್ಯವಾಗಿದೆಯೆಂದು ಹೇಳಿದಂತೆ. ಬಾಹ್ಯದ ಬಾಹ್ಯವಾಗಿರುವ ಸತ್ಯಕ್ಕೆ ಸಾವಿಲ್ಲವೆಂದು ಹೇಳಬಹುದು. ಏಕೆಂದರೆ ಅದು ಬದುಕಿರುವುದೆಂದು ಸಾಧಿಸುವುದು ತರ್ಕಬಾಹ್ಯವಾದ ವಿಷಯ....

ಈ ಪ್ರಕಾರದ ವಿಚಾರಸರಣಿಯನ್ನು ಅನುಸರಿಸುತ್ತ ಹೋದಂತೆ ನನಗೆ, ಕೆಲವೊಂದು ಸಂಗತಿಗಳು ನೆನಪಿಗೆ ಬಂದುವು. ತರ್ಕತಂತ್ರದಿಂದ ಸತ್ಯದ ತೋರಿಕೆಯನ್ನು ಸಾಧಿಸಲು ಶಕ್ಯವಿದ್ದರೆ, ಅದೇ

JOIN

THE INDIAN PROGRESSIVE
INSURANCE COMPANY Ltd.,
Laxmi Road, Poona 2

And Ensure Success and Prosperity. **THE BEST** Company among all younger Companies as regards Financial Stability and Steady Progress. Most Scientific and Profitable Schemes of Life Insurance and Attractive Terms for Capable Agents.

CALL FOR PARTICULARS :—

Secretaries.

ಸಾಧನದಿಂದ ವ್ಯಾವಹಾರಿಕ ಬುದ್ಧಿಪ್ರಯೋಜನವನ್ನೂ ಉಂಟು ಮಾಡಲು ಶಕ್ಯವಿದೆಯೆಂದು ತೋರಿತು. ಯಾವ ತರ್ಕಶಾಸ್ತ್ರ ಬಲದಿಂದ ನಮ್ಮ ಸ್ನೇಹಿತರು 'ಸತ್ಯವು ಬದುಕಲು ಸಾಧ್ಯವಿಲ್ಲ' ಎಂದು ಸಾಧಿಸಿದ್ದರೋ, ಅದೇ ಶಸ್ತ್ರದಿಂದ ಸತ್ಯದ ಅಸ್ತಿತ್ವವನ್ನು ಸ್ಥಾಪಿಸುವುದಕ್ಕೂ ಶಕ್ಯವಿದೆಯೆಂದು ಒಬ್ಬ ಮುಸಲ್ಮಾನ್ ಫಕೀರನ ನ್ಯಾಯನಿರ್ಣಯದ ರೀತಿಯಿಂದ ಕಂಡುಬಂದಿತು. ಈ ಫಕೀರನ ವಿಷಯದಲ್ಲಿ ಆರಬ್ಬೀ ಭಾಷೆಯಲ್ಲಿರುವ ಕೆಲವು ದಂತಕಥೆಗಳು, ನಮ್ಮಿಬ್ಬರಿದ್ದ ಸಮಸ್ಯೆಯ ವಿಷಯದಲ್ಲಿ ಬೆಳಕನ್ನು ತೋರಿದುವು. ಇವನ ಬುದ್ಧಿವೈಶಿಷ್ಟ್ಯವು ನಮ್ಮ ಸ್ನೇಹಿತರ ಶಾಬ್ದಿಕ ಪಟುತ್ವದಂತೆಯೇ ಮನನೀಯವಾಗಿದೆ. ಇವನಾದರೂ ನಮ್ಮ ಸ್ನೇಹಿತರಂತೆ ತರ್ಕತಂತ್ರದ ಬಲದಿಂದ ಸತ್ಯವನ್ನು ಸುಳ್ಳನ್ನಾಗಿಯೂ, ಸುಳ್ಳನ್ನು ಸತ್ಯವನ್ನಾಗಿಯೂ ಸಾಧಿಸಿದ್ದಾನೆ. ನ್ಯಾಯನಿರ್ಣಯವನ್ನೇ ತನ್ನ ಉದ್ಯೋಗವನ್ನಾಗಿಟ್ಟುಕೊಂಡ ಈ ಫಕೀರನ ವಿಚಾರವೃತ್ತಿಯು, ನಮ್ಮ ಆಧುನಿಕ ವಕೀಲ ಬಾಂಧವರ ಮನೋವೃತ್ತಿಯನ್ನು ವ್ಯಕ್ತಗೊಳಿಸುತ್ತದೆ. ಫಕೀರನಿಗೊದಗಿದ ಕೆಲವೊಂದು ಪ್ರಸಂಗಗಳನ್ನೂ, ಆ ಪ್ರಸಂಗಗಳಲ್ಲಿ ಅವನು ವ್ಯಕ್ತಮಾಡಿದ ಬುದ್ಧಿಚಾಪಲ್ಯವನ್ನೂ ಆವಲೋಕಿಸಿದರೆ "ಸತ್ಯಕ್ಕೆ ಸಾವುಂಟಿಯ್ಯಾ!" ಎಂದು ಧಾರಾಳವಾಗಿ ಹೇಳಬಹುದು.

ಒಮ್ಮೆ ಫಕೀರನ ಗೆಳೆಯರು ಕುದುರೆಯ ಜೂಜಾಟವನ್ನು ನೆರವೇರಿಸಿದ್ದರು. ಎಲ್ಲರಿಗೂ ಸ್ಪರ್ಧೆಯಲ್ಲಿ ಭಾಗವಹಿಸಲು ಸಾಧ್ಯವಿದ್ದುದರಿಂದ, ಫಕೀರನೂ ತನ್ನ ಹೆಸರನ್ನು ಕೊಟ್ಟನು. ಜೂಜಿನ ವೇಳೆ ಸಮೀಪಿಸಿದಾಗ ಫಕೀರನು, ತನ್ನ ಎತ್ತನ್ನು ಹತ್ತಿಕೊಂಡು ಸ್ಪರ್ಧೆಯ ಸ್ಥಾನಕ್ಕೆ ಹೊರಟನು. ದಾರಿಯಲ್ಲಿ ಗೆಳೆಯರು ಹಾಸ್ಯ ಮಾಡುತ್ತ 'ಕುದುರೆಯ ಕೂಡ ಎತ್ತು ಓಡಲು ಸಾಧ್ಯವಿದೆಯೆ?' ಎಂದು ಕೇಳಿದರು. ಫಕೀರನು ಈ ರೀತಿ ಹೇಳಿದ: "ಈ ಎತ್ತು ಚಿಕ್ಕಕರುವಿದ್ದಾಗ ಗಾಳಿಯಂತೆ ಓಡುತ್ತಿತ್ತು. ಈಗಂತೂ ಬೆಳೆದು ಎತ್ತಾಗಿದೆ. ಎಂದಮೇಲೆ, ಕುದುರೆಗಳನ್ನು ಸೋಲಿಸುವುದು ಏನು ದುಸ್ತರ ಇದಕ್ಕೆ?"

ಇದು ನಿರುತ್ತರ ಪ್ರಶ್ನೆ. ಇಲ್ಲಿ ಸತ್ಯದ ತೋರಿಕೆಯಿದೆ; ತರ್ಕತಂತ್ರವಿದೆ; ಶಾಬ್ದಿಕ ಚಾಪಲ್ಯವಿದೆ. ಆರು ತಿಂಗಳ ಕರುವು ಗಾಳಿಯಂತೆ ಓಡುತ್ತಿದ್ದರೆ, ನಾಲ್ಕು ವರ್ಷದ ಎತ್ತು ಗಾಳಿಗಿಂತ ವಿಪರೀತ ಓಡಬೇಕಾಯಿತಲ್ಲವೇ? ಇದು ಕೇವಲ ಗಣಿತಜ್ಞಾನದಿಂದ ತಿಳಿದು ಬರುತ್ತದೆ. ಇದರಲ್ಲಿ ಸತ್ಯದ ತೋರಿಕೆಯು ಸಂಪೂರ್ಣವಾಗಿದೆ. ಸಾಧಾರಣವಾಗಿ ಇಂತಹ ಸತ್ಯವನ್ನು ಸುಳ್ಳನ್ನಾಗಿ ಮಾಡುವುದು ಕಷ್ಟಸಾಧ್ಯ, ಏಕೆಂದರೆ ಇದು ಸುಳ್ಳಿನಿಂದ ಬಂದ ಸತ್ಯ. ಆದರೂ 'ನಿಜವ ಕಂಡವರಿಗೆ' ಕರು ಬೆಳೆದು ಎತ್ತಾಗುತ್ತ ನಡೆದಂತೆಲ್ಲ ಓಟವು ಇಳಿಯುತ್ತದೆಂಬುದನ್ನು ಬೇರೆಯಾಗಿ ಹೇಳಬೇಕಾಗಿಲ್ಲ.

ಇನ್ನೊಂದು ಸಲ ಆ ಫಕೀರನು ಒಂದು ತೋಟದಲ್ಲಿ ಹೊಕ್ಕು ಜೇಬಿನಲ್ಲಿ ಅನೇಕ ಗಜ್ಜರಿ-ಗೆಣಸುಗಳನ್ನು ತುಂಬುತ್ತಿದ್ದಾಗ ತೋಟಿಗನು "ಇದೇನು ನಡೆಯಿಸಿರುವೆ?" ಎಂದು ಕೇಳಿದ. ಯಾವ ಉತ್ತರವನ್ನೂ ಕಾಣದವನಾಗಿ ಫಕೀರನು "ದೊಡ್ಡದೊಂದು ಬಿರುಗಾಳಿ ಬೀಸುತ್ತ ನನ್ನನ್ನು ಇಲ್ಲಿ ತಂದು ಚೆಲ್ಲಿದೆ" ಎಂದು ಹೇಳಿದ. "ಇವೆಲ್ಲ ಗಜ್ಜರಿ-ಗೆಣಸುಗಳನ್ನು ಯಾರು ಕಿತ್ತಿದ್ದು?" ಎಂದು ಕೇಳಿದ ಕೂಡಲೇ, ಫಕೀರನು ಅನುಮಾನಿಸದೆ ಹೇಳಿದ "ನನ್ನನ್ನೇ ಎತ್ತಿಕೊಂಡು ತಂದ ಗಾಳಿಗೆ ಗಜ್ಜರಿ-ಗೆಣಸು ಕಿತ್ತಲಿಕ್ಕೆ ಏನು ಕಷ್ಟ?" ಎಂದು. ಆದರೂ ತೋಟಿಗ ತನ್ನ ಪ್ರಥಮ ಪ್ರಶ್ನೆಯ ತಪ್ಪನ್ನು ಕಾಣದೆ ತುಂಬಾ 'ಕ್ರಾಸ್' ಮಾಡಿದ: "ಆದರೆ ಗಜ್ಜರಿ-ಗೆಣಸನ್ನು ನಿನ್ನ ಜೇಬಿನಲ್ಲಿ ಹಾಕಿದವರಾರು?" ಈ ಪ್ರಶ್ನೆಗೆ ಫಕೀರನು "ನಾನೂ ಅದೇ ಪ್ರಶ್ನೆಯನ್ನೇ ವಿಚಾರಿಸುತ್ತಿದ್ದೆ" ಎಂದು ಹೇಳಿದ. ಸರಿ, ತರ್ಕತಂತ್ರವು ತೋಟಿಗನನ್ನು ಬಲವಾಗಿ ಸೋಲಿಸಿತು. ತೋಟಿಗನು ಮೊದಲೇ 'ಗಾಳಿಯು ನಿನ್ನನ್ನು ಎತ್ತಲು ಸಾಧ್ಯವೇ?' ಎಂದು ಕೇಳದುದರಿಂದ, ಆ ವಿಷಯವು ಸಾಧ್ಯವಿದೆಯೆಂದು ಇಟ್ಟುಕೊಂಡಂತಾಯಿತು. ಈ 'ಪೂರ್ವಪಕ್ಷ'ದಿಂದ ಫಕೀರನ 'ಉತ್ತರಪಕ್ಷ'ವು ನಿರಾಯಾಸವಾಗಿ ಸಾಧಿಸಿತು. ತರ್ಕಶಾಸ್ತ್ರವು ಇಲ್ಲಿ ತನ್ನ ಶಕ್ತಿಯನ್ನೂ, ಸತ್ಯಶೋಧನೆಯ ಬಗೆಗಿರುವ ತನ್ನ ದೌರ್ಬಲ್ಯವನ್ನೂ ಕೂಡಿಯೆ ವ್ಯಕ್ತಪಡಿಸುತ್ತದೆ. ತೋಟಿಗನು ನಿರುತ್ತರನಾಗಲಿಕ್ಕೇ ಬೇಕಾಯಿತು. ಫಕೀರನ ಉತ್ತರವು ಸುಳ್ಳಿದ್ದರೂ, ಅದು ಹಾಗಿದ್ದುದು ತಿಳಿದಿದ್ದರೂ, ತೋಟಿಗನು ಈ ಪ್ರಸಂಗದಲ್ಲಿ ನಿರುತ್ತರನೂ, ನಿರುಪಾಯನೂ ಆಗಲೇ ಬೇಕಾಯಿತು. ಹೀಗಿದೆ ತರ್ಕತಂತ್ರದ ಮಹಿಮೆ!

ಮತ್ತೊಮ್ಮೆ ಫಕೀರನು ತನ್ನ ಏಣಿಯನ್ನು ಒಂದು ಹಣ್ಣಿನ ತೋಟದ ಸುತ್ತುಬಳಸಿನ ಗೋಡೆಗೆ ಇಟ್ಟು, ಮೇಲೆ ಹತ್ತಿ,

ಪಣಿಯನ್ನು ಎತ್ತಿ, ಪುನಃ ತೋಟದ ಒಳಗೆ ಇಳಿಯುವವನಿದ್ದ. ಹೀಗೆ ಕಾಲಕ್ಕೆ ತೋಟಿಗ ಯಾರವರು..ಗೋಡೆಯಮೇಲೆ? ಏನು ಮಾಡುತ್ತಿದ್ದೀಯಾ?' ಎಂದು ಕೇಳಿದ. ಫಕೀರನು 'ಏಣಿಯನ್ನು ಪಡೆಯಲಕ್ಕೆ ಬಂದಿದ್ದೇನೆ' ಎಂದು ಹೇಳಿದ. 'ಗೋಡೆಯನ್ನೇಕೆ ಹತ್ತಿದ್ದೀಯೆ?' ತೋಟಿಗ ಪುನಃ ಪ್ರಶ್ನೆ ಮಾಡಿದ. 'ಏಣಿಯು ಇಟ್ಟಿಯಾಗಿದೆಯೋ ಇಲ್ಲವೋ ಎಂದು ಪರೀಕ್ಷಿಸಲಿಕ್ಕೆ! ಮುರುಕು-ದಡಾರ್ಧಗಳನ್ನು ಮಾರುವುದು ಪ್ರಾಮಾಣಿಕತನವಲ್ಲ' ಫಕೀರ ಉತ್ತರವಿತ್ತ. ಸರಿ, ಫಕೀರನು ಪ್ರಾಮಾಣಿಕನಾಗಿದ್ದುದಲ್ಲದೆ ಧೈರ್ಯ ಕಾಣಿಸುವಂತಹ ಸುಳ್ಳನ್ನೂ ಹೇಳಿಬಿಟ್ಟ!

ಈ ರೀತಿಯ ಮನೋವೃತ್ತಿಯು, ಒಂದು ಬಗೆಯ ಆಶಾವಾದದ ಹುಳಹದಿಯಾಗಿದೆಯೆಂದು ಹೇಳಬಹುದು. ಏಕೆಂದರೆ 'ಎಂತಹ ವಿಪತ್ತಿನ ಪ್ರಸಂಗವಿದ್ದರೂ ಆದರಿಂದ ದೂರವಾಗುವುದಕ್ಕೆ ಮಾರ್ಗವುದಾದರೂ ಒಂದು ಉಪಾಯವು ಇದ್ದೇ ಇರುತ್ತದೆ' ಎಂಬ ಗೃಹಿಕೆಯನ್ನು ಈ ರೀತಿಯ ತರ್ಕತಂತ್ರವು ಸಾರುತ್ತದೆ. 'ತರ್ಕದ ಕೊರೆತಕ್ಕೆ ಹೃದಯ ಕೊರೆದು ಗೊತ್ತಿಲ್ಲ' ಎಂದು ಹೇಳಿದ ಕವಿಯು ಸತ್ಯವನ್ನೇ ಹೇಳಿದ್ದಾನೆ. ಆದರೆ ಬಿಕ್ಕಟ್ಟಿನಿಂದ ಬಿಡುಗಡೆ ಮಾಗಲಿಕ್ಕೆ ಅಂತಃಕರಣಗಳ ಸಹಾಯವು ಬಲಹೀನವಾದದ್ದೆಂ-ಬುದು ಭಿಕ್ಷುಕರಿಗೂ, ದಾನ-ಧರ್ಮದ ಮೇಲೆ ಅವಲಂಬಿಸಿರುವ ಜೀವಿಗಳಿಗೂ ಗೊತ್ತಿದ್ದ ವಿಷಯವೆ ಅಲ್ಲವೇ? ಮೇಲಿನ ಫಕೀರನ ಉದಾಹರಣೆಯಲ್ಲಿ, ಫಕೀರನು ತೋಟಿಗನ ಅಂತಃಕರಣಕ್ಕೆ 'ಏಣಿಯನ್ನಿಡಲಿಕ್ಕೆ' ಹವಣಿಸಿದ್ದರೆ, ಅವನಿಗೆ ಏನಾಗುತ್ತಿತ್ತೆಂಬು-ದನ್ನು ಊಹಿಸುವುದು ಕಠಿನವಲ್ಲ. "ಅಯ್ಯಾ, ನನಗೆ ಹಣ್ಣು-ಗಳನ್ನುವ ಬಲವಾದ ಇಚ್ಛೆಯಾಗಿದೆ; ಕೊಳ್ಳಲಿಕ್ಕೆ ದುಡ್ಡಿಲ್ಲ. ಕಾರಣ ನಾಲ್ಕಾರು ಹಣ್ಣುಗಳನ್ನು ದಯೆಮಾಡುವೆಯಾ? ನಿನಗೆ ಪುಣ್ಯ ಬರುತ್ತದೆ..." ಇತ್ಯಾದಿಯಾಗಿ ಫಕೀರನು ಮಾತಿಗೆ ತೊಡಗಲು ಮಾಡಿದ್ದರೆ, ತೋಟಿಗನ ಉತ್ತರ ಏನು ಬರುತ್ತಿತ್ತು ಎನುಗೆ ಗೊತ್ತಿದೆ. ಅಂತೆಯೇ 'ತರ್ಕದ ಕೊರೆತಕ್ಕೆ' ತೋಟಿಗನ ಹೃದಯ ಕೊರೆಯದಿದ್ದರೂ, ಫಕೀರನ ತರ್ಕತಂತ್ರಜಾಲದಲ್ಲಿ ಸಿಕ್ಕಿ ಅವನ ಬುದ್ಧಿಯು ದಿಙ್ಮೂಢವಾಗಿ ಬೆಪ್ಪಾಯಿತು; ಮತ್ತು ಫಕೀರನು ನಿರಾಯಾಸವಾಗಿ ಪಾರಾದನು.

ತರ್ಕಬದ್ಧವಾದ ಮನೋವೃತ್ತಿಗೆ ಜೀವನದ ದುರಂತಗಳು ತಪ್ಪಿಸಿ ತಟ್ಟುವುದಿಲ್ಲ. ಈ ಸತ್ಯವನ್ನು ಕುರಿತಾಗಿಯೆ ಒಂದು ಆಂಗ್ಲನುಡಿಯು ಹೀಗೆ ಹೇಳುತ್ತದೆ: "Life is a comedy to those who think, and a tragedy to those who feel." ಇಂತಹ ಮನೋವೃತ್ತಿಗೆ, ಜೀವನದ ಪ್ರಸಂಗಗಳೆಲ್ಲವೂ ಬುದ್ಧಿಯನ್ನು ಹದನಗೊಳಿಸಲಿಕ್ಕೆಂದಿರುವ ಸಾಣೆಯಕಲ್ಲಾಗಿ ಪರಿಣಮಿಸುತ್ತವೆ. ಆಶಾವಾದವು ಬಹಳವಾಗಿ ಬುದ್ಧಿಚಾಪಲ್ಯದ ಪರಿಣಾಮವು; ಬುದ್ಧಿಚಾಪಲ್ಯವು ತರ್ಕತಂತ್ರಕ್ಕೆ ಸಾಧನವಾಗಿದೆ. ಫಕೀರನ ಇನ್ನೊಂದು ಪ್ರಸಂಗದಲ್ಲಿ ಇದನ್ನು ಕಾಣಬಹುದು:

ಒಮ್ಮೆ ಫಕೀರನು ಪ್ರಯಾಣಕ್ಕೆ ಹೊರಟಾಗ, ಒಂದು ನದಿಯನ್ನು ದಾಟಬೇಕಾಯಿತು. ಅಂಬಿಗನು ದಂಡೆಯಮೇಲೆ ಇಲ್ಲದುದರಿಂದ; ತಾನೇ ದೋಣಿಯನ್ನು ಹತ್ತಿದ. ಅದೇ ಕಾಲಕ್ಕೆ ಬೇರೆ ಪ್ರಯಾಣಿಕರೂ ಅಲ್ಲಿಗೆ ಬಂದರು. ಫಕೀರನು ತಾನೇ ಅಂಬಿಗನಾಗಿ, ಹತ್ತು ಜನ ಪ್ರಯಾಣಿಕರನ್ನು, ತಲೆಗೊಂದಾಣೆಯಂತೆ ಕರಾರು ಮಾಡಿ ದೋಣಿಯಲ್ಲಿ ಕೂಡಿಸಿಕೊಂಡು ನದಿಗುಲ್ಲಿ ಹೊರಟ. ಆಚೆಯ ದಂಡೆಯನ್ನು ಮುಟ್ಟಿದಾಗ ಪ್ರವಾಸಿಕರು ಒಂಬತ್ತೇ ಜನರಿದ್ದರು. ಅವರೆಲ್ಲರೂ ಇನ್ನೊಬ್ಬ ನದಿಯಲ್ಲಿ ಮುಳುಗಿದನೆಂದು ಕುಟ್ಟಿಕೊಂಡು ಅಳುತ್ತ, ದೊಡ್ಡದೊಂದು ಗದ್ದಲವನ್ನೇ ಎಬ್ಬಿಸಿದರು. ಆಗ ಫಕೀರನು ಅವರಿಗೆ ಸಮಾಧಾನ ಹೇಳಿದ: "ಅದಾವ ದುರ್ಘಟ ಪ್ರಸಂಗವೆಂದು ಅಳುತ್ತಿರುವಿರಿ ನೀವೆಲ್ಲಾ? ಹತ್ತಾಣೆ ಬದಲು ಒಂಬತ್ತಾಣೆ ಕೊಟ್ಟುಬಿಡಿರಿ, ಲೆಕ್ಕ ಸರಿಯಾಗುತ್ತದೆ!"

ತರ್ಕದ ಲೆಕ್ಕ ಸರಿಯಾಯಿತು. ಅಲ್ಲದೆ ತನ್ನ ದುಡ್ಡಿನಲ್ಲಿ ಒಂದಾಣೆ ಬಿಟ್ಟುಕೊಟ್ಟನೆಂಬ ಉದಾರತನವನ್ನು ಫಕೀರನು ಪ್ರಯಾಣಿಕರಿಗೆ ತೋರಿಸಿಕೊಟ್ಟ. ಆದರೆ ನದಿಯಲ್ಲಿ ಮುಳುಗಿದ ಪ್ರಯಾಣಿಕನ ಲೆಕ್ಕ? ಅದು ಚಿತ್ರಗುಪ್ತರದೇ ಆಗಿಹೋಯಿತು. ಜೀವನದ ಬಿಕ್ಕಟ್ಟಿನಲ್ಲಿ, ಫಕೀರನ ಬುದ್ಧಿಚಾಪಲ್ಯವು ಒಂದು ವಿಶಿಷ್ಟ ಸ್ಥಾನವುಳ್ಳದ್ದು. ಅದು ಸಾಧ್ಯಸೃಷ್ಟಿಯಲ್ಲಿದೆಯೆಂಬುದಕ್ಕೆ ಅವನ ಉದಾಹರಣೆಯೇ ಸಾಕ್ಷಿಯಾಗಿದೆ. ವಿಪತ್ತು ಎಷ್ಟೇ ಕತ್ತಲಾದ ವಾತಾವರಣವಾದರೂ, ಈ ಮನೋವೃತ್ತಿಯ ಕಿರಣವು ದಾರಿ ತೋರುವುದಾಗಿದೆ. ಜೀವನದ ಕಷ್ಟ-ನಷ್ಟಗಳ ಸಂದಣಿಯಿಂದ ದೂರವಾಗಬೇಕಾದರೆ, ಈ ವೃತ್ತಿಯು ಸಾಧನೆಯು ಅವಶ್ಯವಾಗಿದೆ. ಸಾಧಾರಣವಾಗಿ ಹೇಳಬೇಕೆಂದರೆ ಮಾನವನ ದುಃಖಗಳೆಲ್ಲವೂ

ವೀರಪ್ಪ ಶಿವಪ್ಪ ಅರಬಳ್ಳಿ, ರಬಕವಿ

ಬಣ್ಣದ ನೂಲು ಮತ್ತು ಇರಕಲ್

ನಮೂನೆಯ ರಬಕವಿ ಸೀರೆಯ ವ್ಯಾಪಾರಿಗಳು.

ನಮ್ಮಲ್ಲಿ ಕೈಮಗ್ಗಗಳ ಮೇಲೆ ಇರಕಲ್, ಧನವಡೀ ಮತ್ತು ನಾರಾಯಣಪೇಟೆ ಅಂಚಿನ ಉತ್ತಮ ಮತ್ತು ಬಣ್ಣದ ಪಾಕ್ಕಿಯ ಸೀರೆಗಳು ಯೋಗ್ಯಬೆಲೆಗೆ ಸಿಕ್ಕುತ್ತವೆ.

ಅಜ್ಞಾನದಿಂದ ಹೆಚ್ಚುತ್ತವೆ; ಅವು ಅಂತಃಕರಣವನ್ನು ಭೇದಿಸಿದಾಗ ಮಾತ್ರ ನಿಜವಾದ ನೋವನ್ನುಂಟುಮಾಡುತ್ತವೆ. ತರ್ಕ-ತಂತ್ರ ಚಾಪಲ್ಯದಿಂದ ಅನೇಕ ಬಿಕ್ಕಟ್ಟುಗಳಿಂದ ದೂರವಾಗಬಹುದು. ಫಕೀರನಂತಹ ಮನೋವೃತ್ತಿಯುಳ್ಳ ಇನ್ನೊಬ್ಬ ನ್ಯಾಯಾಧೀಶನ ನ್ಯಾಯ-ನಿರ್ಣಯದ ಉದಾಹರಣೆಯೊಂದನ್ನು ಕೊಟ್ಟು, ಹರಟೆಯನ್ನು ಸಬ್ಯ ಮುಗಿಸುತ್ತೇನೆ.

ಒಂದಾನೊಂದು ಕಾಲದಲ್ಲಿ ಒಬ್ಬ ಅರಬನ ಹೆಂಡತಿಯು ನ್ಯಾಯಾಧೀಶನ ಬಳಿ ಬಂದು, ಒಬ್ಬನ ಮೇಲೆ ತನ್ನ ಗಂಡನನ್ನು ಖೂನು ಮಾಡಿದ ಆರೋಪವನ್ನು ಹೊರಿಸಿ ದೂರುಹೇಳಿದಳು. ನ್ಯಾಯಾಧೀಶನು ಆಕೆಳಿಗೆ, ಈ ಆರೋಪಕ್ಕಾಗಿ ತಕ್ಕ ಪ್ರಮಾಣಗಳನ್ನು ತೋರಿಸಲು ಹೇಳಿದನು. ಆಗ ಹೆಂಗುಸು :

" ಜೀಯಾ, ನನ್ನ ಗಂಡನು ಒಂದು ಎತ್ತರವಾದ ಗಿಡದ ನೆರಳಿನಲ್ಲಿ ಕುಳಿತುಕೊಂಡಿದ್ದ. ಆ ಕಾಲಕ್ಕೆ ಈ ಆರೋಪಿಯು ಅದೇ ಗಿಡವನ್ನು ಏರಿದ್ದ. ಕೊಲ್ಲಬೇಕೆಂಬ ಉದ್ದೇಶದಿಂದಲೋ ಏನೋ, ಇವನು ಗಿಡದ ಮೇಲಿನಿಂದ ನನ್ನ ಗಂಡನ ಮೇಲೆ ಬಿದ್ದುಬಿಟ್ಟ. ಅದೇ ಕಾರಣವಾಗಿ ನನ್ನ ಗಂಡ ಮೃತನಾದ. ನಮ್ಮ ಜಾತಿಯ ನಿಯಮದಂತೆ ಈ ಆರೋಪಿಯ ಜೀವವು ಈಗ ನನ್ನದಾಗಿದೆ. ಕಾರಣ ಇವನನ್ನು ಗಲ್ಲಿಗೇರಿಸಬೇಕು. ಕೊಂದ ಜೀವದ ಋಣವನ್ನು ಇವನು ತನ್ನ ಜೀವವನ್ನೇ ಕೊಟ್ಟು ತೀರಿಸಬೇಕು " ಎಂಬದಾಗಿ ಹೇಳಿದಳು.

ನ್ಯಾಯಾಧೀಶನು ತುಂಬಾ ಕಷ್ಟಕ್ಕೆ ಸಿಕ್ಕಿಬಿದ್ದ. ಗಿಡದಿಂದ ಬಿದ್ದವನು ಕಾಲುತಪ್ಪಿ, ಜೋಲಿತಪ್ಪಿ ಬಿದ್ದಿರಬಹುದು. ಕೊಲ್ಲಬೇಕೆಂಬ ಇಚ್ಛೆಯೇ ಇದ್ದರೆ, ಆರೋಪಿಗೆ ನೂರಾರು ಬೇರೆ ಸಾಧನಗಳಿದ್ದುವು. ಅಲ್ಲದೆ ತನ್ನ ಶತ್ರುವನ್ನು ಈ ರೀತಿ ಕೊಲ್ಲುವುದರಲ್ಲಿ ತನ್ನ ಜೀವಕ್ಕೇ ಅಪಾಯವಿದ್ದಿತು. ಎತ್ತರವಾದ ಗಿಡದಿಂದ ಬಿದ್ದು, ಗಲ್ಲಿಗೇರುವುದಕ್ಕೇ ಉಳಿದುಕೊಂಡಿರಬಹುದೇ ಇವನು? ಬದುಕಿ ಉಳಿದುದಕ್ಕೆ ಕಾರಣ ಸುದೈವವೇ ಹೊರತಾಗಿ ಬೇರೆ ಅಲ್ಲ! ಆರೋಪಿಯು ನಿರ್ದೋಷಿಯೆಂದೇನೋ ನ್ಯಾಯಾಧೀಶನಿಗೆ ಪೂರ್ಣವಾಗಿ ನಂಬಿಗೆಯಾಯಿತು. ಆದರೆ ಹೆಂಗುಸು 'ಅನಾಗರಿಕ' ಳಿದ್ದು. ತನ್ನ ' ಜಾತಿ 'ಯ ನಿಯಮದಂತೆ ಆರೋಪಿಯ ಜೀವಕ್ಕೇ ಗಂಟುಬಿದ್ದಿದ್ದಳು. ನ್ಯಾಯಾಧೀಶ ಹೇಳಿದ :

" ನಿನ್ನ ಗಂಡನ ಮೃತ್ಯುವಿಗೆ ಕಾರಣನಾದ ಇವನಿಂದ ನಿನಗೆ ಕೆಲವು ಹಣ ಕೊಡಿಸುತ್ತೇನೆ. ಅಷ್ಟರ ಮೇಲೆ ಸಂತುಷ್ಟಳಾಗು ! "

" ಅದಾಗದು ಜೀಯಾ, ನನಗೆ ಇವನ ಜೀವ ಹೋಗುವ ತನಕ ಸ್ವಾಸ್ಥ್ಯವಿಲ್ಲ. ನಮ್ಮ ಜಾತಿಯ ನಿಯಮದಂತೆ ಇವನು ಸಾಯಲಿಕ್ಕೇ ಬೇಕು."

" ನೀನೆನ್ನುವುದು ಸಮಂಜಸವಾಗಿದೆ. ಆರೋಪಿಯ ಜೀವನ್ನು ನ್ಯಾಯಾಧೀಶನ ಕೈಯಲ್ಲಿದೆ. ಅದರಂತೆಯೆ ನಾನಾದರೂ ನಿನ್ನ ' ಜಾತಿ 'ಯ ನಿಯಮದಂತೆ ಇವನ ಜೀವವನ್ನು ನಿನಗೇ ಕೊಡಿಸುತ್ತೇನೆ. ಆದರೆ ಇವನ ಜೀವ ತೆಗೆದುಕೊಳ್ಳುವ ಸಾಧನವು ನನ್ನ ಅಧಿಕಾರದಲ್ಲಿದೆ. ಆದುದರಿಂದ ನನ್ನ ತೀರ್ಪು ಹೀಗಿದೆ : ನಿನ್ನ ಗಂಡ ಸತ್ತ ಗಿಡದ ಬುಡದಲ್ಲಿ ಈ ಆರೋಪಿ ಕುಳಿತುಕೊಳ್ಳಲಿ. ನೀನೇ ಆ ಗಿಡವನ್ನು ಏರಿ, ಇವನ ಮೇಲೆ ಬಿದ್ದು ಅವನನ್ನು ಕೊಲ್ಲು. ಇದರಿಂದ ನಿನ್ನ ' ಜಾತಿ 'ಯ ನಿಯಮ ಪಾಲನೆದಂತಾಗುವುದು. ಇದು ಬೇಡವಾಗಿದ್ದರೆ, ನಿನಗೆ ಹಣ ಕೊಡಿಸುವೆನು. ಇದರಲ್ಲಿ ನಿನಗೆ ಯಾವ ನ್ಯಾಯಬೇಕು ? "

ಈ ಪ್ರಶ್ನೆಗೆ ಹೆಂಗುಸು ಏನು ಉತ್ತರ ಕೊಟ್ಟಳು ಎಂಬುದನ್ನು ನಾವು ಕೇಳಬೇಕಾಗಿಲ್ಲ. ಎತ್ತರವಾದ ಗಿಡದ ಮೇಲಿಂದ ಕೆಳಕ್ಕೆ ಬೀಳುವುದು ಹೆಂಗುಸಿಗೆ ಬೇಕಾಗಿರಲಿಲ್ಲ. ಹಣವನ್ನು ತೆಗೆದುಕೊಂಡು ಮನೆಗೆ ಹೋದಳು.

ಈ ಉದಾಹರಣೆಯನ್ನು ಆವಲೋಕಿಸಿದಾಗ "ನಮ್ಮ ಆಧುನಿಕ ನ್ಯಾಯಾಧೀಶರು ಇಂತಹ ' ಕಾಯಿದೆ 'ಗಳನ್ನು ' ಬಜಾವಣೇ' ಮಾಡುವಾಗ ಏನುಮಾಡಬಹುದು?" ಎಂಬ ಪ್ರಶ್ನೆ ಬಂತು. ಆದರೂ ಮೇಲ್ಕಂಡ ನ್ಯಾಯಾಧೀಶನು ನಿರಾಯಾಸವಾಗಿ ' ನ್ಯಾಯ 'ವನ್ನು ಮಾಡಿಬಿಟ್ಟ. ಇಂತಹ ಬುದ್ಧಿಗೂ ನಾವು ತಲೆತೂಗಬೇಕಾಗುತ್ತದೆ. ' ಮುಯ್ಯಿಗೆ ಮುಯ್ಯಿ ' ಎಂಬ ನುಡಿಯನ್ನು ಅಕ್ಷರಶಃ ಅನುಪಾಲಿಸಿದ ಈ ನ್ಯಾಯಾಧೀಶನ ತರ್ಕತಂತ್ರವು ನಿಜವಾಗಿಯೂ ಮನನೀಯವಾಗಿದೆ. ಇದರಿಂದ ಸತ್ಯಶೋಧನೆಯು ಆಗದಿದ್ದರೂ, ' ನ್ಯಾಯ 'ವು ದೊರಕುತ್ತದೆಂದು ನಿರ್ವಿವಾದವಾಗಿ ಹೇಳಬಹುದು. ' ಸಾವಿಲ್ಲದ ಸತ್ಯಬದುಕುವುದು ಹೇಗೆ? ' ಎಂದು ಪ್ರಶ್ನೆಮಾಡಿದ ನಮ್ಮ ತರ್ಕಪ್ರವೀಣ ಸ್ನೇಹಿತರು, ಇಷ್ಟೆಲ್ಲ ಹರಟೆ ಕೊಚ್ಚಲಿಕ್ಕೆ ಕಾರಣೀಭೂತರಾಗಿದ್ದುದರಿಂದ, ಅವರಿಗೆ ನನ್ನ ಅನಂತ ಧನ್ಯವಾದಗಳು. ನಮಸ್ತೇ !

ಮುದ್ದನ ಮಾತು

★

' ಆನಂದಕಂದ 'ರ ಕಾವ್ಯಸಂಗ್ರಹ

ಶ್ರೀ. 'ಶ್ರೀನಿವಾಸ'ರ ವಿಮರ್ಶಾತ್ಮಕ ಮುನ್ನುಡಿಯಿದೆ.

ಬೆಲೆ ೦-೬-೦.

ಬೇಕಾದವರು ಜಯಂತಿ ಕಾರ್ಯಾಲಯಕ್ಕೆ ಬರೆಯಿರಿ !



ಮದುವೆ, ★ ಮದು-ಮಕ್ಕಳು, ★ ★ ಮದು-ಬಾಳು! ★

ಶ್ರೀ. ಜೋಗಳೇಕರ ಪಾಂಡುರಂಗರಾಯರು,
ಬಿ. ಎ., ಎಸ್. ಟಿ. ಸಿ.

ದೀಪಾವಳಿಯ ಹಬ್ಬ ಮುಗಿದೊಡನೆ, ಕನ್ಯಾ-ವರರನ್ನು ಹುಡುಕುವ ಹಿರಿಯರಿಗೆ ಮೈತುಂಬ ಕೆಲಸ. ಕನ್ಯೆಗೆ ವರನೂ ವರನಿಗೆ ಕನ್ಯೆಯೂ ಆವಶ್ಯಕವಾಗಿ ಬೇಕಾಗಿದ್ದಾರೆಯೆ?—ಎಂಬ ಕಲ್ಪನೆ ಯಾರಿಗೂ ಇರದು. ಆದರೂ ವರುಷವರುಷವೂ, ಕನ್ಯಾ-ವರರ ಗಂಟುಗಳನ್ನು ಬಿಗಿಯುವ ಯಂತ್ರ ತನ್ನ ಬಿಗಿತದ ಕೆಲಸ ನಡೆಯಿಸಿಯೆ ಇರುವುದು!

★



ರಂಗನಾಥನನ್ನು ಒಂದಿಲ್ಲೊಂದು ನೆಪದಿಂದ ತಪ್ಪಿಸಿ, ರಮಾಕಾಂತನ ಪ್ರಣಯಾರಾಧನೆಗೆ ಅಣಿಯಾದಳು ಮೂಢ ಮಾಲತಿ!

ಮದುವೆಯಾ ಬಿಗಿತಕ್ಕೆ! ಹೃದಯದಾ ಹುರಿಬೇಕು!
ಹೃದಯವಿರದಿರುವ ಮದುಮಕ್ಕಳಾ ಬಾಳು—
ಹದಗೇಡಿಯೆಂದ ಮರ್ಮಜ್ಞ ॥

ಮಿಸಮತೆಯ ತಳಹದಿಯ ಮೇಲೆ ಅತ್ತಿತ್ತ ಹೊಯ್ದಾಡುವ ನಮ್ಮ ಸಮಾಜಮಂದಿರದಲ್ಲಿ ಬಾಳು ಎಂಬುದೇ ಒಂದು ಸಮಸ್ಯೆಯಾಗಿದೆ. ಜೀವನವೆಂದರೆ ಸ್ಪರ್ಧೆ, ಮೇಲಾಟ, ಎಳೆದಾಟ ಎಂದು ಮುಂತಾಗಿ ವಿಜ್ಞಾನವು ಸಾರುವುದು. ಬಾಳಲಿಕ್ಕೆ ತಕ್ಕವರು ಬಾಳುವರು, ಉಳಿದವರು ಅಳಿಯುವರು; ಇದೊಂದು ನಿಸರ್ಗನಿಯಮ. ಜೀವವಿಜ್ಞಾನದಲ್ಲಿ (Biology) ಸೃಷ್ಟಿಯ ಕಠೋರ ನಿಯಮಗಳು ಬಿಡುವಿಲ್ಲದೆ ಆಳುವವು. ಆದರೆ ಸಮಾಜವಿಜ್ಞಾನದ (Sociology) ಕ್ಷೇತ್ರದಲ್ಲಿ ನಿಸರ್ಗನಿಯಮಗಳ ಅನಿಯಂತ್ರಿತ ಆಡಳಿತ ಕಂಡುಬರುವುದಿಲ್ಲ. ಮಾನವನು ತನ್ನ ವಿಶಿಷ್ಟವಾದ ಮನೋವೇಧಕದ ಮೂಲಕ ಪ್ರಕೃತಿಗೆ (Nature) ಕೆಲಮಟ್ಟಿಗೆ ವಿಧೇಯನಾಗಿ ಬಾಳಿದರೂ; ತನ್ನ ಬುದ್ಧಿ, ಭಾವನೆ, ದೇಹ ಈ ಅಂಗತ್ರಯದ ಬೇಡಿಕೆಗಳಿಗೆ ಅನುಗುಣವಾಗಿ, ಒಳಹೊಂಗಿನ ಪ್ರಕೃತಿಯಲ್ಲಿ ತಕ್ಕ ವಿಕೃತಿಯನ್ನುಂಟುಮಾಡುತ್ತಿರುವನು. ಇದುಕಾರಣ ಮಾನವಸಮಾಜದಲ್ಲಿ ನಿಸರ್ಗನಿಯಮಗಳ ಜೊತೆಗೆ ಮಾನವನಿರ್ಮಿತ ಭಾವನಾತ್ಮಕ ಕಟ್ಟುಗಳೂ ಮಾನವ ಜೀವನವನ್ನು ನಿಯಮಿಸುತ್ತಿರುವುವು. ವಿವಾಹ, ಜಾತಿ ಮೊದಲಾದ ಸಂಸ್ಥೆಗಳು ಮಾನವನ ಬೇರೆ ಬೇರೆ ಸಾಮಾಜಿಕ ಅವಸ್ಥೆಗಳಲ್ಲಿ, ಅವನ ಬುದ್ಧಿ-ಭಾವನೆಗಳ ಹಸಿವಿನಿಂದ ಉತ್ಪ್ರೇಕ್ಷಿತವಾದುವುಗಳಲ್ಲದೆ, ಕಾಲ್ಪನಿಕ ದೇವರ ಪೂರ್ವಸಂಕಲ್ಪದಿಂದಲ್ಲ. ತಾನು ನಿರ್ಮಿಸಿದ ಸಂಸ್ಥೆಗಳು ಸುವ್ಯವಸ್ಥಿತವಾಗಿ ಸಾಗಬೇಕಾಗಿ

ಅವನು ಕಾಲಕಾಲಕ್ಕೆ ತಕ್ಕ ನಿರ್ಬಂಧಗಳನ್ನುಂಟುಮಾಡಿರುವನು, ಮತ್ತು ಅವುಗಳಿಗೆ ತಕ್ಕ ತಾತ್ತ್ವಿಕ ಹಿನ್ನೆಲೆಯನ್ನೂ ಪೂರಯಿಸಿರುವನು. ಸಮ್ಮ ಶ್ರುತಿ-ಸ್ಮೃತಿ ಮೊದಲಾದುವುಗಳು, ಉಳಿದವರ ಧರ್ಮಶಾಸ್ತ್ರಗಳು ಎಲ್ಲವೂ ಮಾನವಕೃತಿಗಳು. ಮಾನವೀಯ ಬುದ್ಧಿ-ಭಾವನೆಗಳಿಗೆ ತೋಚಿದ ಒಂದು ಆದರ್ಶವನ್ನು ತಲುಪಲು ಅನುಕೂಲವಾದ ಕಟ್ಟುಗಳಿಗೆ ಧರ್ಮವೆಂದೆನ್ನಬಹುದು.

ಧರ್ಮಕ್ಕೆ ಎರಡು ಮಗ್ಗಲುಗಳು. 'ಸತ್ಯ ಮಾತಾಡು, ಕಳವು ಮಾಡಬೇಡ' ಮುಂತಾದ ಕಟ್ಟುಗಳು ಶಾಶ್ವತನಾದ ಅಂಗದಲ್ಲಿ ಬರುವುವು. ಇವು ಎಲ್ಲ ಕಾಲಗಳಲ್ಲಿ, ಎಲ್ಲ ದೇಶಗಳಲ್ಲಿ ಸರ್ವ-ಮಾನ್ಯವಾಗುವುವು. ಆದರೆ, ಧರ್ಮದ ಅಥವಾ ನೀತಿಯ ತಾತ್ಕಾಲಿಕ ಇಲ್ಲವೆ ಅಶಾಶ್ವತ ಭಾಗವೂ ಒಂದು ಇರುವುದು. ಇದರಲ್ಲಿ ತಾತ್ಕಾಲಿಕ ನಿರ್ಬಂಧಗಳು ಮಾತ್ರ ಕಂಡುಬರುವುವು: 'ವಿಧವೆಯರು ಮತ್ತೆ ಮದುವೆಯಾಗಬಾರದು, ವಿಧುರರು ಮಾತ್ರ ಬೇಕಾದಷ್ಟು ಸಲ ಮದುವೆಯಾಗಬಹುದು; ಸ್ತ್ರೀ-ಶೂದ್ರಾದಿಗಳಿಗೆ ವೇದಾಧಿಕಾರವಿಲ್ಲ' ಇವೇ ಮೊದಲಾದ ಪಕ್ಷಪಾತ ಪೂರ್ಣ ವಚನಗಳು, ಆಗಿನ ಕಾಲದ ವಿಶಿಷ್ಟ ಪರಿಸ್ಥಿತಿಗೆ ಕದಾಚಿತ್ ಆವಶ್ಯಕವಾದ ನಿರ್ಬಂಧಗಳು. ಇವು ತ್ರಿಕಾಲಾಬಾಧಿತ ಮತ್ತು ಸರ್ವ-ಮಾನ್ಯವಾಗಲಾರವು. ಅಂತೆಯೇ ಕಾಲಕಾಲಕ್ಕೆ ಬೇರೆ ಬೇರೆ ಸ್ಮೃತಿಗಳಾಗಿವೆ. ಧರ್ಮಶಾಸ್ತ್ರದ ಪರಿವರ್ತನಶೀಲ ಭಾಗವು ಇದೇ. ಇದರಲ್ಲಿ ಕಾಲಕ್ಕೆ ಸಲ್ಲುವಂತೆ ಮಾರ್ಪಾಡುಗಳನ್ನು ಮಾಡುವ ಸಂಪೂರ್ಣ ಅಧಿಕಾರವು ಪ್ರತಿಯೊಂದು ಪೀಳಿಗೆಗೆ ಇದ್ದೇ ಇರುವುದು. ಇಷ್ಟೇ ಅಲ್ಲ, ಕಾಲಮಾನಕ್ಕನುಸರಿಸಿ ತಕ್ಕ ಪರಿವರ್ತನವನ್ನು ಮಾಡದೆ ಹೋದರೆ, ಸಮಾಜವು ಬೆಳೆಯದೆ ನಿಶ್ಚಯವಾಗಿ ಅಳಿದುಹೋಗುವುದೆಂಬುದು ಸ್ಪಷ್ಟವಾದ ಮಾತು. ಆದರೆ, ಇಂತಹ ಸ್ಪಷ್ಟ ಸಂಗತಿಯು ರೂಢಿಮೂಢರಿಗೆ ಕಾಣದಾಗಿ ಪರಂಪರಾಗತ ಜಾತಿ, ವಿವಾಹ ಮೊದಲಾದ ಸಂಸ್ಥೆಗಳಲ್ಲಿ ತಮಗೆ ಬೇಕಾದ ಹೆಚ್ಚುಕಡಿಮೆ ಮಾಡಲಿಕ್ಕೆ ಎಳ್ಳಷ್ಟೂ ಅಧಿಕಾರವಿರಲ್ಲವೆಂದು ಈ ರೂಢಿಯುದಾಸರು ತಿಳಿಯುವರು. ಹಳಬರ ಈ ರೂಢಿದಾಸ್ಯದಿಂದಲೇ ಜೀವನದ ಜೊತೆಗೆ ವಿವಾಹವೂ ಹೊಸಬರಿಗೆ ಒಂದು ಸಮಸ್ಯೆಯಾಯಿತು.

ನಮ್ಮ ಹಿಂದಿನ ಹಿರಿಯರಿಗೆ ಮದುವೆ ಮಾಡುವುದು ಎಲ್ಲಿಗೆ ಸುಣ್ಣಹಚ್ಚುವಷ್ಟು ಹಗುರಾಗಿದ್ದಿತು. ಆಗಿನ ಮದುಮಕ್ಕಳು ಚಿಕ್ಕವರು; ಮದುಮಗಳಿಗೆ ಇನ್ನೂ ಜೆನ್ನಾಗಿ ಕಿರಿಗೆ ಉಡಲು ಕೂಡ ಬರುತ್ತಿದ್ದಿಲ್ಲ; ಮದುಮಗನ ಟೊಂಕದ ಮೇಲೆ ಇನ್ನೂ ದಡಿಯ ದೋತರ ಗಟ್ಟಿಯಾಗಿ ನಿಲ್ಲುತ್ತಿದ್ದಿಲ್ಲ—ಎಂದ ಮೇಲೆ, ಮದುವೆಗಾಗಿ ಈ ತಿಳಿಗೇಡಿ ಮಕ್ಕಳ ಸಮ್ಮತಿಯು ಏತಕ್ಕೆ ಬೇಕು? ವರಪಕ್ಷದ ಪುರೋಹಿತನು ವಧೂಪರಿಕ್ಷೆಮಾಡಿ, ಕುಮಾರಿಯ ಕಣ್ಣು, ಮೂಗು ಇದ್ದಲ್ಲಿಯೆ ಇವೆಯೆಂದು ಹೇಳಿಬಿಟ್ಟರೆ ಮುಗಿಯಿತು..ವಧೂಪರೀಕ್ಷೆ. 'ವರಕುಮಾರನು ಹೇಗೆ ಇದ್ದಾನೆ?' ಎಂಬ ಜಿಜ್ಞಾಸೆ ವಧೂಪಕ್ಷಕ್ಕೆ ಎಂದೂ ಇರಲಿಲ್ಲ. 'ಮದುಮಗನು ಹೇಗೆ ಇದ್ದಾನೆ?' ಎಂದು ಕೇಳುವುದೆಂದರೆ, ಎಂತಹ ಅಸಂಬದ್ಧ ಪ್ರಶ್ನೆಯದು! ಮದುಮಗನೆಂದ ಮೇಲೆ ಅವನು ಮದನರಾಯನೆ! ಅವನು ಹೇಗೇ ಇರಲಿ; ಮದುವೆಯ ಪ್ರೀತಿಯಲ್ಲಿ ಪರದಕ್ಷಿಣೆ ಮತ್ತು ಕನ್ಯಾಶುಲ್ಕ ಈ ವಿಷಯದಲ್ಲಿ ಮಾತ್ರ ಕತೆ ಮುಗಿಯುವುದೊಂದೇ ತಡ, ಆಯಿತೇ ಶುಭಮಂಗಳ ಸಾವಧಾನ!

ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕ ಸ್ಥಿತ್ಯಂತರಗಳ ಮೂಲಕ ಮದುವೆ ಮಾಡುವುದು ಇತ್ತೀಚೆಗೆ ಕಠಿನವಾಗತೊಡಗಿದೆ. ವಿದ್ಯಾರ್ಜನ, ದ್ರವ್ಯಾರ್ಜನ, ಶಾರದಾ ಕಾಯಿದೆ ಮುಂತಾದುವುಗಳ ಮೂಲಕ ಸನಾತನಿಗಳ ಮನೆತನಗಳಲ್ಲಿ ಕೂಡ ಫ್ಯಾಧವಿವಾಹವು ಪ್ರಚಾರದಲ್ಲಿ ಬಂದಿದೆ. ಬರಿಯ ಗುಪ್ತ ಹಿರಿಯರ ಮೆಚ್ಚುಗೆಯಿಂದ ಮದುವೆ ಗೊತ್ತಾಗುವ ಕಾಲವು ಈಗ ಉಳಿದಿಲ್ಲ. ಪ್ರಣಯವಿವಾಹಕ್ಕೆ ನಮ್ಮ ಸಮಾಜದಲ್ಲಿ ಇನ್ನೂ ಸಾಕಷ್ಟು ಅವಕಾಶ ಸಿಕ್ಕಿಲ್ಲ. ಎಲ್ಲಿಯೋ ಕೆಲವು ಜನ ತರುಣ-ತರುಣಿಯರು ಒಬ್ಬರೊಬ್ಬರನ್ನು ಮೆಚ್ಚಿ, ಹಿರಿಯರ ಮಾಧ್ಯಮವಿಲ್ಲದೆಯೆ, ಅಪರೂಪವಾಗಿ ಪ್ರಣಯವಿವಾಹವಾಗಿ ಕೊಳ್ಳುವರು. ಸದ್ಯಕ್ಕೆ ಸಾಧಾರಣವಾಗಿ ಪ್ರಚಾರದಲ್ಲಿರುವ ಅರ್ಧಾತ್ ಮೇಳಣ ಮತ್ತು ಮಧ್ಯಮವರ್ಗಗಳಲ್ಲಿ—ವಿವಾಹದ ಮಾದರಿಗಳು, ತುಸು ಹೆಚ್ಚುಕಡಿಮೆ ಈ ಕೆಳಗೆ ಬಣ್ಣಿಸಿದಂತೆ ಇವೆ.

* * *

ರಂಗನಾಥನು ವಿದ್ಯಾಲಯದ (College) ಕೊನೆಯ ವರ್ಷದಲ್ಲಿ ಇದ್ದಾತ. ಬೇಗನೆ ಪದವೀಧರನಾಗಿ, ಉದ್ಯೋಗದಲ್ಲಿ ತೊಡಗಿ, ಒಂದು ಮಾದರಿಯ ಮದುವೆ ಮಾಡಿಕೊಳ್ಳಬೇಕೆಂಬ ಸಂವಿಗನಸಿನಲ್ಲಿದ್ದಾನೆ. ಮುಖದ ಸ್ವಾಭಾವಿಕವಾದ ತಿಳಿಗಪ್ಪು ಕಾಂತಿಯನ್ನು ಮುಖಜೋರ್ಣದ ಬೆಳ್ಪಿನಿಂದ ಹೊದಿಸಿ, ಜೆಂಡು ಜೆಂದದ ಬಟ್ಟೆಯನ್ನುಟ್ಟು, ಕುಂತಲಕೌಮುದಿಯ ಸೌಗಂಧವನ್ನು ಸುತ್ತಲೂ ಬೀರುವ—ಹೆಗಲಮೇಲಿನಿಂದ ಇಳಿಬಿದ್ದ ಹೆಳೆ ನೊಡನೆ ಲೀಲೆಮಾಡುತ್ತ, ಪಕ್ಕದಲ್ಲಿ ಸುಳಿದಾಡುವ ವಿದ್ಯಾರ್ಥಿನಿಗಳೆಡೆಗೆ ಅರ್ಥಾತ್ ಪ್ರಣಯಾರ್ಥಿಗಳೆಡೆಗೆ ಕಡೆಗಣ್ಣಿನ ಮದನ ಬಾಣಗಳನ್ನು ಬಿಡುತ್ತ ಕೃತ್ರಿಮಲಾಲಿತ್ಯದಿಂದ ವಿದ್ಯಾಲಯದಲ್ಲಿ ಕೆಲಸವಿಲ್ಲದೆ ಅತ್ತಿತ್ತ ನೆರೆದಾಡುವ—ಮಾಲತಿಯ ಪಾಣಿಯನ್ನು ಗ್ರಹಿಸಬೇಕೆಂಬ ಹಂಬಲು ರಂಗನಾಥನಿಗೆ. ಅವಳಿಗಾಗಿ ಅವನು ಮಿತಿಮೀರಿ ವೆಚ್ಚಮಾಡತೊಡಗಿದ. ಟೆನಿಸ್, ಬ್ಯಾಡ್ಮಿನ್‌ಟನ್ ಗಳಲ್ಲಿ ಅವಳ ಜೊತೆಗಾರನಾಗುವ ಸ್ವರ್ಗಸುಖವನ್ನೂ ಪಡೆದ. ಇವನು ಅತ್ಯಾಗ್ರಹದಿಂದ ಅರ್ಪಿಸಿದ ಮಧುಪಾನವನ್ನು ಹಲವು ಸಲ ಉಪಾಯಗಾಣದೆ ಸ್ವೀಕರಿಸಿ, ಒಣ ಶಿಷ್ಟಾಚಾರದ ಸವಿಮಾತಿನಿಂದ ಇವನ ಜೊಳ್ಳು ಮನೋರಥವನ್ನು ಉತ್ತೇಜಿಸುವಂತೆ ನಟಿಸಿರುವಳು ಮಾಲತಿ. ಆದರೆ, ಅವಳ ಉಪಾಸ್ಯನಾಯಕನು ರಮಾಕಾಂತನು. ಹೆಚ್ಚಿನ ಶಿಕ್ಷಣಕ್ಕಾಗಿ ಜರ್ಮನಿಗೆ ಹೋಗಲು ಸಜ್ಜಾಗಿರುವನು ರಮಾಕಾಂತ. ಇವನ ಸಹಧರ್ಮಚಾರಿಣಿಯಾಗಿ ಆದರ್ಶ ದಾಂಪತ್ಯಜೀವನದ ತಿಳಲನ್ನು ಉಣ್ಣುವ ಬಯಕೆ ಮಾಲತಿಗೆ. ನಿಜವಾದ ಮನಸ್ಸಿನಿಂದ ತನ್ನನ್ನು ಆರಾಧಿಸುವ ರಂಗನಾಥನನ್ನು ಒಂದಿಲ್ಲೊಂದು ನೆಪದಿಂದ ತಪ್ಪಿಸಿ, ಜರ್ಮನ್ ಕುಮಾರಿಯನ್ನು ಮದುವೆಯಾಗಬೇಕೆಂಬ ಆಕಾಂಕ್ಷೆ

ೀಡಾದ ರಮಾಕಾಂತನ ಪ್ರಣಯಾರಾಧನೆಗೆ ಅಣಿಯಾದಳು ಮೂಢಮಾಲತಿ. ಮಾಲತಿಯನ್ನು ಹೇಗೆ ತಪ್ಪಿಸಬೇಕೆಂಬ ಮಸ್ಯೆ ರಮಾಕಾಂತನಿಗೆ; ರಂಗನಾಥನ ಪ್ರಣಯೋಪಾಸನೆ ುಂದ ಹೇಗೆ ಬಿಡುಗಡೆ ಹೊಂದಬೇಕೆನ್ನುವ ಸಮಸ್ಯೆ ಮಾಲತಿಗೆ. ಾಲತಿ-ರಮಾಕಾಂತರ ಪ್ರಣಯಸಂಧಾನವನ್ನು ಹೇಗೆ ಕೆಡಿಸ ೀಕೆನ್ನುವ ಸಮಸ್ಯೆ ರಂಗನಾಥನಿಗೆ.

ಮಾಲತಿಗೆ ಯಾವ ಆಶ್ವಾಸನವನ್ನೂ ಕೊಡದೆ ಜರ್ಮನಿಗೆ ೂರಟು ಹೋದ ರಮಾಕಾಂತ. ರಂಗನಾಥನ ಮತನದಾರೀ (Aristocratic) ನಡೆವಳಿಯನ್ನು ನೋಡಿ, ಇವನೊಬ್ಬ ಕ್ಷ್ಮೀಪುತ್ರನಿರಬಹುದೆಂದು ನಂಬಿ, ರಮಾಕಾಂತನ ವಿಷಯದಲ್ಲಿ ರಾಶಿ ಹೊಂದಿದ ಮಾಲತಿ ರಂಗನಾಥನೊಂದಿಗೆ ಸಲುಗೆ ಹೆಚ್ಚು ಳೆಯಿಸಲಾರಂಭಿಸಿದಳು. ಮೇಲಾಗಿ ಇಂಟರಿನಲ್ಲಿ ಅವಳು ರಡುಸಲ ಎಡಹಿದಳು. ಇತ್ತ ರಂಗನಾಥನೂ ಪದನೀಧರ ಾಗುವ ಪ್ರಯತ್ನದಲ್ಲಿ ಒಂದು ಸಲ ಮುಕ್ಕರಿಸಿದ. ಅತ್ತ ಂಗನಾಥನ ಮನೆಯಲ್ಲಿ ರಾಧಾಬಾಯಿ, ಮಾಧವರಾಯರು–ಅವನ ಾಯ್ತಂದೆಗಳು– ಅದಷ್ಟು ಬೇಗ ರಂಗನಾಥನ ಮದುವೆಮಾಡಿ ಡಬೇಕೆಂಬುದಾಗಿ ಅವಸರಮಾಡತೊಡಗಿದರು. ಮಧ್ಯಾಹ್ನದ ಹಾಪಾನ ನಡೆದ ಸಮಯದಲ್ಲಿ ಒಮ್ಮೆ ಮಾಧವರಾಯರು ೂನೆಯ ಎಚ್ಚರಿಕೆ ಕೊಟ್ಟರು :—" ರಂಗ್ಯಾ, ನಾಳೆ ಮುತಾಲೀಕ ೀಸಾಯರು ತಮ್ಮ ಮಗಳ್ನ ಕರಕೊಂಡು ಬರತೇನೀ ಅಂತ ತ್ತಾ ಬರದಾರ. ಗೋವಿಂದರಾಯರ ಮನೀಯೊಳಗ ಇಳೀತಾ- ವರು. ಇಷ್ಟು ದಿವಸ ಮಾಡಿದ್ಹಾಂಗ ನಾಳೆ ಮಾಡಬ್ಯಾಡ ುತ್ತ. 'ಆಕಿ ಕಪ್ಪು ಇದ್ದಾಳ. ಈಕಿ ಕಲ್ಯಾಕೀನಽ ಇಲ್ಲ. ಕಿಗೆ ಪೆಟಿಗೀನಽ ಬಾರಿಸಲಿಕ್ಕೆ ಬರೂದಿಲ್ಲ. ಈಕಿ ಗಿಡ್ಡ ಇದ್ದಾಳ!' ಹೀಂಗೆಲ್ಲಾ ಒಂದಿಲ್ಲೊಂದು ಹೆಸರಿಟಗೋತಽ–ಬಂದ ನ್ಯಾ ಎಲ್ಲಾ ಹಿಂದಕ್ಕುಟ್ಟೀದಿ ಇಷ್ಟು ದಿನಾ! ಇನ್ನ ಇಂಥಾ ುಂಗಾಟಾ ನಡೀಗೊಡ್ಲಿಕ್ಕಿಲ್ಲ ನಾ. ಮದಿವೀ ಕಾಣ್ದೇ ಹೋದೀ ನಾಳೆ! ಏನಪಾ– ಅಂಥಾ ವಿದ್ಯಾವಂತನಾರೆ ಇದ್ದೀದ್ಯಾ? ಸ್ತಿನರಽ ದೊಡ್ಡದಽ? ಯಾವ ಜಲದ ಮ್ಯಾಲಪಾ ಅಡ್ಡಾಡ್ತಾ ಸಟಿಯೋದು ಈಗಿನ ಹುಡುಗ್ರು ನೀವು? ಗಂಜೀ ಅರಿವಿ ಲೆಕ್ಕಾ ೊಡೋ ಯೊಗ್ಯತಿ ಇಲ್ಲ ನಿಮಗ; ಬರೇ ದಿ ಮಾಕು. ನೀ ಿದ್ದಕs ಪರೀಕ್ಷಾ ಸಾಮಾಸ್ ಆಕ್ಕೊತಽ ಹೋದ್ರ, ಎಷ್ಟಂತ ಪೂರೈಸಬೇಕು ನಿನಗ ದುಡ್ಡು? ಅದೇನಿಲ್ಲ, ನಾಳೇನು ಹುಡಿಗಿ ುತಽದ ನೋಡು; ಅದನ್ನ ಒಲ್ಲೇ ಅನ್ನೋ ಹಾಂಗಿಲ್ಲ. ಸಾಧಾರಣ ಇದ್ದಾಳ ನಾಕುಮಂದೀ ಹಾಂಗ. ನಾಕ್ಕೆದೆತ್ತಾನೂ ಕಲ್ಯಾಳಂತ ುಂಗ್ರೇಜೀ; ಸಾಕ್ಮತ್ತ. ನೀನರ ಏನು ಎಂ. ಎ., ಪಿ. ಎಚ್. ಡಿ. ದಾಂವ? ಸುಮ್ನಽ ಹೂಂ ಅನ್ನು. ನಿನ್ನ ವ್ಯಾಲ ಅಕ್ಕೀಕಾಳು ಂಗಿದು ನಾವೊಮ್ಮೆ ಪಾರಾಗಬೇಕಂತೇವಿ. ಮುಂದ ನಿನ್ನ ವಿದ್ಯಾಭ್ಯಾಸಕ್ಕ ಏನಾದರೂ ಸ್ವಲ್ಪ ಕೊಡೋ ಹಾಂಗೂ ಇದ್ದಾನ ನಿನ್ನ ಮಾವ. ನಾಳೆ ಬಂದು ನೌಕರೀ ನಿವುಕರೀನೂ ಹಚ್ಚಿ ಕೊಟ್ಟಾನು. ಆ ಮಾಲತೀ ಬೆನ್ನು ಹತ್ತೀದೀ ಅಂತ..ನೀನು ಇತ್ತೀಚೆಗೆ. ಎಲ್ಲಾ ಬಿಟ್ಟು ಆಕೀ ಹುಚ್ಚು ಯಾಕ ಪಿಡೀತು ನಿನಗ? ಆಕಿನ್ನ ನೀ ಮಾಡಿಕೊಂಡ್ರ ಹಕ್ಕಾಹಗಲ್ನ್ಯಾಗಽ ಮಾರಿ ಬಂದಾಳು ಪ್ಲಾಟ್ಯಾಗಿಟ್ಟು ನಿನ್ನ! ಕೇಳೇನಿ ಆಕೇದೆಲ್ಲಾ ಕೀರ್ತೀ ನಾನು! ನಮ್ಮ ಮನೆತನದಾಗ ಅಂಥಾವೆಲ್ಲಾ ಒಂದು ಗಳಿಗಿ ಪೂರೈಸಲಿಕ್ಕಿಲ್ಲ. ಏನು ಹೇಳ್ತೇನಿ? ಹೂಂ ಅಂದೀ ಇರು ಮನ್ಯಾಗ; ಇಲ್ದಿದ್ರ ದಾರೀ ಹಿಡಿ! ಹೊರಗ ಹಾಕೇ ಎರಡನೇ ಕೆಲಸ. ನಾ ಬಿಟ್ಟಪ್ಪಲ್ಲ. ಏನ್ ಹೇಳ್ತೇನಿ!! " ರಾಧಾಬಾಯಿಯವರೂ ಗಂಡನ ಎಚ್ಚರು ನುಡಿಯನ್ನೇ ಕೊಂಚ ಮೃದುಭಾಷೆಯಲ್ಲಿ ಪ್ರತಿಧ್ವನಿಸಿದರು. ಮುತಾಲಿಕದೇಸಾಯರ ಲಲಿತೆ ಜೆನ್ನಾಗಿರುವಳೆಂಬುದಾಗಿ ರಂಗನಾಥನ ಅಕ್ಕ–ತಂಗೆಂದಿರು ಆಶ್ವಾಸನಕೊಟ್ಟರು.

ಮಾರನೆಯ ದಿನ ಎಚ್ಚರುಗೊಂಡ ರಂಗನಾಥನು, ವಧೂ-ಪರೀಕ್ಷೆಯ ನಾಟಕವನ್ನು ಹಿರಿಯರ ಅಪೇಕ್ಷೆಯ ಮೇರೆಗೆ ಸುಖಾಂತವಾಗಿ ಮುಗಿಸಿದ. ಕೊಂಚ ಅರೆದಾಟವಾಗಿ ವರದಕ್ಷಿಣೆ, ವರೋಪಚಾರ ಬಗೆಹರಿದುವು. 'ರಂಗನಾಥನಿಗಾಗಿ ಮಾಡಿದ ವೆಚ್ಚದ ಕೊಂಚಭಾಗವನ್ನಾದರೂ ತುಂಬಿಕೊಂಡಂತಾಯಿತು' ಎಂಬ ಸಮಾಧಾನ ಮಾಧವರಾಯರಿಗೆ;ಬೀಗಿತ್ತಿಯಾಗಿ ಮೆರೆಯುವ ತನ್ನ ಸವಿಗನಸು ನನಸಾಗುವ ಸಮಯಬಂದಿತೆಂದು ಹಿರಿಹಿರಿ ಹಿಗ್ಗಿದರು ರಾಧಾಬಾಯಿಯವರು; ರಂಗಣ್ಣನ ಹೆಂಡತಿಯಮೇಲೆ 'ನಾದಿನೀಕ್ಷಾಹಿ'ಯನ್ನು ನಡೆಯಿಸುವ ಸುಸಂಧಿ ಸಿಕ್ಕುವುದೆಂದು ಆನಂದಭರಿತರಾದರು ಯಮುನಾ–ಗೋದಾವರಿಯರು.

* * *

ರಂಗನಾಥನು ಚತುರ್ಭುಜನಾದ. ಗೃಹಪ್ರವೇಶ! ಲಲಿತೆಯ ಮೇಲೆ ರಾಧಾಬಾಯಿಯವರು ತಮ್ಮ ಅರ್ಧ ವಸ್ತ್ರ-ಒಡವೆಗಳನ್ನು ಹಾಕಿದ್ದರು. ಆನಂದವೇ ಆನಂದ. ಊರಲ್ಲಿ ಹೊಸ ಸೊಸೆಯನ್ನು ಯಾರಿಗೆ ತೋರಿಸಲಿ, ಯಾರಿಗೆ ಬಿಡಲಿ..ಹೀಗಾಗಿ ಹೋಯಿತು ರಾಧಾಬಾಯಿಯವರಿಗೆ. ಕಂಡವರ ಮುಂದೆ ಹೆಜ್ಜೆಹೆಜ್ಜೆಗೆ ಸೊಸೆಯ ಗುಣವರ್ಣನೆ. ಯಮುನಾ–ಗೋದಾವರಿಯರೂ ತಮ್ಮ 'ವಹಿನಿ (ಅತ್ತಿಗೆ)ಯ ಸಂಗಡ ಭಗಿನೀ' ಪ್ರೇಮದಿಂದ ನಡೆಯುವರು. ಸೊಸೆಗೆ ಹೆಚ್ಚು ಕೆಲಸ ಹಚ್ಚಬೇಡಿರೆಂದು ಮಾವ ನವರು ಮತ್ತೆ ಮತ್ತೆ ಹೇಳುತ್ತಿದ್ದರು. ಮನೆತನದ ಪೂರ್ವ-ಪುಣ್ಯದಿಂದ ಲಲಿತೆಗೆ ನಾಲ್ಕುತಿಂಗಳೂ ಹೋದುವು. ಮನೆತುಂಬ ಹಿಡಿಸಲಾರದಷ್ಟು ಆನಂದ. ವಿಜೃಂಭಣೆಯಿಂದ ಬೇಗನೆ ಸೀಮಂತವೂ ಆಯಿತು. ರಂಗನಾಥನ ಅಜ್ಜಿಯು, ಅವನು ಗಡ್ಡ ಮಾಡಿಕೊಳ್ಳಬಾರದೆಂದು ಮತ್ತೆ ಮತ್ತೆ ಉಪದೇಶಿಸುತ್ತಿದ್ದಳು. ಕ್ಷಿಪ್ರದಲ್ಲಿಯೆ ಮರಿಮಗನನ್ನು ಕಂಡು, ಪೂರ್ಣಸಮಾಧಾನದಿಂದ ತಾನು ಕಣ್ಣು ಮುಚ್ಚುವೆನೆಂದು ಅನ್ನುವಳು–ಗಂಗಾಭಾಗೀರಥೀ ಲಕ್ಷ್ಮೀಬಾಯಿ.

* * *

ಅತ್ತ ಮಾಲತಿಯ ವಿದ್ಯಾಭ್ಯಾಸವು ಮಧ್ಯದಲ್ಲಿಯೆ ಅರ್ಧಾತ್ ಇಂಟರಿನಲ್ಲಿರುವಾಗಲೆ ಮುಕ್ತಾಯಗೊಂಡಿತು. ಕನಿಷ್ಠ ಒಬ್ಬ ಐ.ಸಿ.ಎಸ್., ಕುಮಾರನನ್ನಾದರೂ ಮದುವೆಯಾಗಲೆಂದು ಹವಣಿಸಿದಳು ಮಾಲತಿ. ಆದರೆ ಅಂತಹ ಯಾವ ಕುಮಾರನೂ ಅವಳನ್ನು

ಓರಿಯೆಂಟಲ್

ಗೌ. ಸೆಕ್ಯುರಿಟಿ ಲೈಫ್ ಇನ್ಶುರನ್ಸ್ ಕಂ., ಲಿ.

ಮುಖ್ಯ ಕಚೇರಿ: ಮುಂಬಯಿ

—ಂಃಃಂ—

ವಿವೇಚನಾಶೀಲರಾದ ಸಾವಿರಾರು ಜನ ಸುಶಿಕ್ಷಿತರು, ತಮ್ಮ ಮುಪ್ಪಿನ ಕಾಲದಲ್ಲಿ ತಮಗಾಗಿಯೂ, ಇಲ್ಲವೆ ತಮ್ಮ ನಂತರ ತಮ್ಮ ಅವಲಂಬಿತ ಕುಟುಂಬಕ್ಕಾಗಿಯೂ ಆರ್ಥಿಕ-ಸ್ವಾತಂತ್ರ್ಯದ ಅಡಿಗಲ್ಲನ್ನು ಹಾಕಿ ಇರಿಸುತ್ತಿರುವರು.

ಎಂದರೆ

ಪ್ರತಿವರ್ಷವೂ ಸಾವಿರಾರು ಜನರು 'ಓರಿಯೆಂಟಲ್'ನಲ್ಲಿ ತಮ್ಮ ಜೀವವಿಮೆ ಮಾಡುತ್ತಿರುವರು.

ತಡಮಾಡಬೇಡಿರಿ! ಕೂಡಲೆ ನೀವೂ ಒಂದು 'ಓರಿಯೆಂಟಲ್' ಪಾಲಿಸಿ ಕೊಳ್ಳಿರಿ!

ವಿಶೇಷ ಸಂಗತಿಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ಟಿ. ಅಥಣಿಕರ್,
ತಳಕವಾಡಿ, ಬೆಳಗಾಂವಿ.

ಸ್ವೀಕರಿಸಲಿಲ್ಲ. ಕೊನೆಗೆ ಮಧ್ಯಮವರ್ಗದ—ಕೊಂಚ ಆಸ್ತಿಯುಳ್ಳ ಒಬ್ಬ ಪದವೀಧರನನ್ನು ಮದುವೆಯಾದಳು. ಮಾಲತಿಯ ನಿರಾಶೆಗೆ ಮಿತಿಯಿರಲಿಲ್ಲ. ಗಂಡನಿಗೆ ಸಣ್ಣ ಸಂಬಳದ ಕೆಲಸ ಸಿಕ್ಕಿತು. ಮನೆ ಮಾಡಿ ಸಂಸಾರಮಾಡತೊಡಗಿದರು. ಅಡಿಗೆ ಮಾಡುವ ಅಭ್ಯಾಸವೇ ಇರಲಿಲ್ಲ ಮಾಲತಿಗೆ. ಆರಂಭಗಲ್ಲಿ ಇಂಟರ್‌ಪರೀಕ್ಷೆಗೆ ಕೂಡುವ ನೆಪ ಮುಂದೆ ಮಾಡಿದಳು ಮಾಲತಿ. ಅಭ್ಯಾಸದಲ್ಲಿ ತೊಡಗಿದವಳು ಅಡಿಗೆ ಮಾಡುವುದುಂಟೇ? ಪಕ್ಕದ ಊಟದ ಮನೆಯಿಂದ ಡಬ್ಬಿಯೊಳಗಿಂದ ಊಟಬರಹತ್ತಿತು. ಪರೀಕ್ಷೆಗೆ ಕುಳಿತು ಬಂದರೂ ಮತ್ತೂ ಅದೇ ಮಾತು. "ಇನ್ನು ಸಾಕು ನಿನ್ನ ಪರೀಕ್ಷೆ" ಎಂದ ವಸಂತ—ಮಾಲತಿಯಗಂಡ. ಮನೆಗೆಲಸ ಮಾಡಿ 'ಸುಗೃಹಿಣಿ' ಆಗಬೇಕೆಂದು ಅವಳಿಗೆ ಅವನ ಉಪದೇಶ, ಅಲ್ಲ ಒತ್ತಾಯ. ಅಡಿಗೆಯವನನ್ನು ಇಡುವ ಸಾಮರ್ಥ್ಯವಿಲ್ಲದವನು ತನ್ನನ್ನು ಮದುವೆಯಾಗುವ ಗೊಡವೆಗೆ ಹೋಗಬಾರದಿದ್ದಿತೆಂದು ಮಾಲತಿಯ ಉತ್ತರ. ಮಾಲತಿಯು ದೊಡ್ಡವರ ಮಗಳು. ಅವಳ ಜೊತೆಯಲ್ಲಿ—ಅವಳು ಒಬ್ಬಳೆ ಮಗಳಾದುದರಿಂದ—ದೊಡ್ಡ ಆಸ್ತಿ ಬರಬಹುದೆಂಬ ನಂಬುಗೆಯಿಂದ, ತಾನು ಅವಳನ್ನು ಮದುವೆಯಾದುದೆಂದು ಹೇಳಿದ ವಸಂತ. ನೆಚ್ಚಿದೆಮ್ಮೆ ಕೋಣವನ್ನು ಈಯಿತು! ಮಾಲತಿಯು ಆಸ್ತಿಯನ್ನೂ ತರಲಿಲ್ಲ; ವಸಂತನಿಗೆ ದೊಡ್ಡ ಸಂಬಳವೂ ಸಿಕ್ಕುಲಿಲ್ಲ. ಇಬ್ಬರಿಗೂ ನಿರಾಶೆ. ಹಾಗೂ ಹೀಗೂ ಗುದ್ದಾಡುತ್ತ ಬಾಳ್ವೆ ಸಾಗಿಸಿದರು. ಒಂದು ದಿನ ಮನೆಯಲ್ಲಿ ಊಟ, ಇನ್ನೊಂದು ದಿನ ಊಟದ ಮನೆಯಲ್ಲಿ ಬಮ್ಮೆ ಚಹಾ ಬಿಸ್ಕೀಟಿನ ಮೇಲೆ ಉದಾರನಿರ್ವಾಹ. ನಿರಾಶೆಯ ಕಗ್ಗತ್ತಲೆ! ಹಾಳು ಬಾಳು!!

ಇತ್ತ ರಂಗನಾಥನು ಗೃಹಸ್ಥಾಶ್ರಮದ ಪ್ರಥಮಫಲವನ್ನು ಅರ್ಥಾತ್ ತನ್ನ ಮೊದಲನೆಯ ಮಗನನ್ನು ಆಡಿಸುತ್ತ ಕುಳ್ಳಿದ್ದಾನೆ—ತನ್ನ ಕೋಣೆಯಲ್ಲಿ. ಎಷ್ಟು ಹುಡುಕಿದರೂ ಅವನಿಗೆ ಕೆಲಸ ಸಿಕ್ಕಲೊಲ್ಲದು. ಆರ್ಥಿಕ ಬಿಕ್ಕಟ್ಟಿನಿಂದ ಮಾಧವರಾಯರು ದಿಕ್ಕುತಪ್ಪಿರುವರು. ಮಾಧವರಾಯರು ಕೋಣೆಯಲ್ಲಿ ಬಂದು ಕೊನೆಯ ಎಚ್ಚರಿಕೆಯನ್ನು ಗದ್ದರಿಸಿದರು :— "ಏನಪಾ, ನೀನು ಉದ್ದಕಽ ಆರ್ಜಿಮಾಡಿಕೋತಽ ಕೂತುಬಿಟ್ಟಿ. 'ಅಂವಾ ಕೆಲಸಾ ಕೊಡಸ್ತಾನ; ಇಂವಾ ಕೆಲಸಾ ಕೊಡಸ್ತಾನ' ಅಂತ ಹೇಳೇ ಹೇಳ್ಕ. ಒಬ್ಬನೂ ಕೊಡಸಲಿಲ್ಲಲಾ ಕೆಲಸಾ ನಿನಗ! ಇದು ಎಷ್ಟುದಿನಾ ನಡೀಬೇಕು ಹಿಂಗಽ? ಪ್ರಪಂಚ ಅರೇ ಬೆಳೀಲಿಕ್ಕೆ ಹತ್ಯಾ. ಮನೆತನ ಸಾಗಿಸೋರು ಯಾರು? ಸಾಲಾ ಮೂಲಾ ಮಾಡಿ ನಿನಗ ಕಲಿಸಿದೆ. ನೀ ನೋಡಿದರ ಒಂದು ಕಾಸು ಗಳಿಸೋಹಾಂಗಿಲ್ಲ. ಒಬ್ಬ ಮಗನ ತಂದೆಯಾದಿ ಈಗ; ಇನ್ನೂ ನಿನ್ನಕಾಲಮ್ಯಾಲ ನೀ ನಿಂದ್ರಬಾರ್ದೂ ಅಂದ್ರ ಏನದು? ನಿನ್ನ ಮಾವನ ಕಡಿಗಾದರೂ ಹೋಗು. ಕವಿಶಾಶನರ್ ಕಚೇರಿಯೊಳಗ ಇದ್ದಾನಂವ. ಅವನ ಕೈಕಾಲು ಕಟ್ಟಿಗೊ! ಎಲ್ಲ್ಯಾರ ಒಂದು ಕಾರಕೂನಿಕೀನರಽ ಕೊಡಸತಾನ. ಅಂತೂ ನಿನ್ನ ಹಾದೀ ನೀ ಹಿಡಿ ಇನ್ನ!" ಎಂದು ಮುಂತಾಗಿ ಮಾತಾಡಿ, ಮಾಧವರಾಯರು ಹೋದರು. ರಾಧಾಬಾಯಿಯವರೂ ಇತ್ತೀಚೆಗೆ ಯಮುನಾ–ಗೋದಾವರಿಯರ ಹೇಳಿಕೆಯಿಂದ ಲಲಿತೆಯಮೇಲೆ 'ಅತ್ತೀಶಾಹಿ'ಯನ್ನು ನಡೆಯಿಸಲಾರಂಭಿಸಿದರು. ಯಮುನಾ–ಗೋದಾವರಿಯವರಂತೂ, ತವರುಮನೆಯಲ್ಲಿ ಕಾಲಿಟ್ಟಂದಿನಿಂದ ಅತ್ತೆಯ ಮನೆಗೆ ಮರಳುವವರೆಗೂ, ಲಲಿತೆಯನ್ನು ಕಾಯಾ—ವಾಚಾ—ಮನಸಾ ಪೀಡಿಸುವ ವ್ರತವನ್ನು ಒಳ್ಳೇ ನಿಷ್ಠೆಯಿಂದ ಪಾಲಿಸುತ್ತಿದ್ದರು. ಜೀವಕ್ಕೆ ಬೇಸತ್ತ ರಂಗನಾಥ, ಚಿಲ್ಲೋ ಕೆಲಸ ಸಿಕ್ಕು ಗಳಿಸಲಾರಂಭಿಸಿದ ಮೇಲೆಯೆ ಮದುವೆಯಾಗಿದ್ದರೆ ಎಷ್ಟು ಒಳ್ಳೆಯದಾಗುತ್ತಿದ್ದಿತು? ಭಂಗಬಟ್ಟು ಉಂಬುವ ಪ್ರಸಂಗವು ತನ್ನ ಮೇಲೆ ಬರುತ್ತಿರಲಿಲ್ಲ. ಆರ್ಥಿಕ ಪಾರತಂತ್ರ್ಯದಲ್ಲಿ ಮದುವೆಯಾಗಿ ಗತಿಗೆಟ್ಟದ್ದಕ್ಕಾಗಿ ಅನುತಾಪ ರಂಗನಾಥನಿಗೆ. ಹೆಂಡತಿಯನ್ನು ಕಟ್ಟಿಕೊಂಡು ಹೊರಬಿದ್ದನು.. ದಿಕ್ಕುತಪ್ಪಿದ ರಂಗನಾಥ. ನಿರಾಶೆಯ ಅಂಧಕಾರ! ಹಾಳು ಮದುಬಾಳು!!

* * *

ಪಿ. ಎಚ್. ಡಿ. ಪದವೀಧರನಾಗಿ ರಮಾಕಾಂತನು ಜರ್ಮನಿಯಿಂದ ಮರಳಿದ. ಬರುವಾಗ ಒಬ್ಬ ಜರ್ಮನ್ ಕುಮಾರಿಕೆಯನ್ನೂ ತಂದ. ಆತ್ತಿತ್ತ ಪ್ರಯತ್ನಮಾಡಿ ಪಂಜಾಬದಲ್ಲಿ ಒತ್ತಟ್ಟಿಗೆ ಕೆಲಸ ದೊರಕಿಸಿದ. ಜರ್ಮನ್ ಯುವತಿಯನ್ನು ವಿವಾಹ ಮಾಡಿಕೊಂಡದ್ದಕ್ಕಾಗಿ ಅವನ ಮನೆಯ ಜನರು ಸಂತಾಪ ಗೊಂಡರು. ತಾಯಿಯಂತೂ ಎದೆಯೊಡೆದುಕೊಂಡಳು. ಅವನಿಗಾಗಿ ಮನೆಯವರಿಗೆ ಆರುಸಾವಿರದ ಸಾಲವಾಗಿದ್ದಿತು. ಅದನ್ನು ತೀರಿಸು

ಪವರಾರು? ಮನೆಯವರೊಡನೆ. ಜಗಳವಾಡಿ ರಮಾಕಾಂತನು ಅಮೃತಸರಕ್ಕೆ ತೆರಳಿದನು. ಹಲವಾರು ತಿಂಗಳು ಮಧುಚಂದ್ರಾವಧಿಯ (Honey Moon) ಬೆಳುದಿಂಗಳಲ್ಲಿ, ಅದ್ಭುತರಮ್ಯ ದಾಂಪತ್ಯ ಸುಖದಲ್ಲಿ ನಲಿದಾಡಿದ ರಮಾಕಾಂತ. ಆದರೆ, ಪಂಜಾಬದ ವಿಷಮ ಹವೆ 'ಲ್ಯೂಸೀ'ಗೆ—ಅವನ ಅರ್ಧಾಂಗಿಗೆ—ಸರಿಹೋಗದಾಯಿತು. ಮಸೂರಿಯಲ್ಲಿ ಒಂದು 'ವಸಂತನಿಲಯ' ನೋಡಿದ ರಮಾಕಾಂತ. ಮಸೂರಿ ಬಿಟ್ಟು ಅಮೃತಸರಕ್ಕೆ ಬಾರದಾದಳು ಲ್ಯೂಸಿ. ರಮಾಕಾಂತನ ಸಂಬಳವೆಲ್ಲ ಡಾಯಿತಾಸಾಹೇಬರಿಗೆ ವೆಚ್ಚವಾಗಹತ್ತಿತು. ಹನ್ನೆರಡೂ ತಿಂಗಳು ಮಸೂರಿಯಲ್ಲಿ ಅವಳನ್ನು ಇಡುವುದು ತನಗೆ ಶಕ್ಯವಿಲ್ಲವೆಂದು ರಮಾಕಾಂತನು ಗುಣುಗುಟ್ಟಿದ.'ಇಷ್ಟು ವೆಚ್ಚಮಾಡುವ ಯೋಗ್ಯತೆ ಇಲ್ಲದವನು ತನ್ನನ್ನು ಮದುವೆ ಏಕೆ ಆದ?' ಎಂದು ಕೇಳಿದಳು ಲ್ಯೂಸಿ. ಕ್ಷಿಪ್ರದಲ್ಲಿ ಇಬ್ಬರೂ ಜಗಳವಾಡಿದರು. ನ್ಯಾಯಾಧೀಶರು ಲ್ಯೂಸೀಗೆ ಘಟಸ್ಫೋಟವನ್ನು ಕೊಡಿಸಿದ್ದಲ್ಲದೆ, ಅವಳಿಗೆ ತಿಂಗಳೊಂದಕ್ಕೆ ರಮಾಕಾಂತನು ೧೦೦ ರೂಪಾಯಿ ಕೊಡಬೇಕಾಗಿ ಆಜ್ಞಾಪಿಸಿದರು. ಆದರ್ಶವಿವಾಹದ ಆದರ್ಶ ಮುಕ್ತಾಯವಾಯಿತು. ರಮಾಕಾಂತನಿಗೆ ತುಂಬಾ ನಿರಾಶೆ. ಹಾಳು ಮದುಬಾಳು!

* * *

ತಂದೆಯ ಮನೆ ಬಿಟ್ಟ ರಂಗನಾಥನು, ತನ್ನ ಹೆಂಡತಿಯನ್ನೂ, ಚಿಕ್ಕಮಗುವನ್ನೂ ಮಾವನ ಮನೆಯಲ್ಲಿ ಬಿಟ್ಟ. ಮಾವನಿಂದ ಕೆಲಸ ಸಿಕ್ಕುವ ಆಶೆ ತೋರಲಿಲ್ಲ. ಅವನು ತಾನೊಬ್ಬನೆ ಮುಂಬಯಿಗೆ ಹೋಗಿ, ಒಬ್ಬ ಗೆಳೆಯನ ಆಶ್ರಯದಿಂದ ಒಬ್ಬ ವರ್ತಕನ ದಲಾಲಿಯ ಅಂಗಡಿಯಲ್ಲಿ ಕೆಲಸ ದೊರಕಿಸಿದ. ಹೆಂಡತಿಯನ್ನೂ ಆದಷ್ಟು ಬೇಗನೆ ಕರೆದೊಯ್ಯಬೇಕೆಂದು ಒತ್ತಾಯ ಪಡಿಸುತ್ತಿದ್ದರು..ಅವನ ಮಾವನವರು. ಕೂಡಲೆ ಮುಂಬೈಗೆ ಬರುವ ತನ್ನ ಗೆಳೆಯನೊಬ್ಬನ ಸಂಗಡ ತನ್ನ ಸತಿ-ಸುತರನ್ನು ತರಿಸಿಕೊಂಡು, ಬಡತನದ ರೀತಿಯಲ್ಲಿ ಹಾಗೂ ಹೀಗೂ—ಅಂತೂ ಸ್ವಾವಲಂಬಿಯಾಗಿ—ಕಾಲಕಳೆಯ ಹತ್ತಿದ ರಂಗನಾಥ. ಹಂಗಿನ ಮನೆಯಲ್ಲಿ ಆಡಿದ್ದನ್ನು ಆಡಿಸಿಕೊಂಡು ಅಪಮಾನವನ್ನು ನುಂಗಿ ಬಾಳುವುದಕ್ಕೂ, ತನ್ನ ಶ್ರಮದಿಂದ ಗಳಿಸಿದ ಅನ್ನವನ್ನು ಯಾವ ನೊಬ್ಬನ ಹಂಗಿಲ್ಲದೆ ತಿನ್ನುವುದಕ್ಕೂ ಎಂತಹ ಆಜ-ಗಜಾಂತರ ವಿರುವುದೆಂಬದು ಅವನಿಗೆ ಚೆನ್ನಾಗಿ ತಿಳಿಯಿತು. ಲಲಿತೆ ಇದ್ದುದರಲ್ಲಿ ಮನೆಗೆಲಸವನ್ನು ಜಾಣ್ಮೆಯಿಂದ ಸಾಗಿಸುತ್ತಿದ್ದಳು. ಮೊದಲು ಮೊದಲು ಅವಳ ವಿಷಯದಲ್ಲಿ ಕೊಂಚ ಉದಾಸೀನನಾಗಿದ್ದ ರಂಗಣ್ಣ; ಯಾಕೆಂದರೆ ಅವಳು ಸುತಿಕ್ಷ್ಣತಳಿದ್ದಿಲ್ಲ. ಬರಬರುತ್ತ ಪಾಲಿಗೆ ಬಂದದ್ದನ್ನೇ ಪಾವನ ಮಾಡಿಕೊಳ್ಳುವ ಬುದ್ಧಿ ಕಲಿತ ರಂಗನಾಥ. ರಂಗನಾಥನ ಬೀಡಾರದ ಬಳಿಯಲ್ಲಿಯೆ ಅವನ ತಂಗಿ ಗೋದಾವರಿಯೂ ಬಂದು ಇರಹತ್ತಿದಳು. ಹತ್ತಿರದಲ್ಲಿ ತಂಗಿ ಬಂದಳೆಂದು ಹಿಗ್ಗಿದ ರಂಗನಾಥ. ಆದರೆ, ಗೋದಾವರಿಯು ಹಿಂದಿನ ಕುನಸನ್ನು ಇನ್ನೂ ಮರೆತಿದ್ದಿಲ್ಲ. 'ನಾದನಿಶಾಹಿ'ಯನ್ನು ಮೆರಸುವ ಹುಚ್ಚನ್ನು ಅವಳು ಇನ್ನೂ ಬಿಟ್ಟಿದ್ದಿಲ್ಲ. ಕಂಡ-ಕಂಡವರ ಮುಂದೆ ತನ್ನ ಅಣ್ಣನನ್ನು ಹಾಗೂ ಅವನ ಹೆಂಡತಿಯನ್ನು ಕುರಿತು ಯಥೇಚ್ಛ ನಿಂದೆಮಾಡುವುದೇ ಅವಳ ಜೀವನದ ಹೆಗ್ಗುರಿಯಾಯಿತು. ಪರಾವಲಂಬಿಯಾಗಿ ತಂದೆಯ ಮನೆಯಲ್ಲಿರುವಾಗ ತಮ್ಮನ್ನು ಕಾಡಿಸಿದುದು ಸಾಲದಾಗಿಯೋ, ತಮ್ಮಷ್ಟಕ್ಕೆ ನಾವು ಸ್ವಂತ ಶ್ರಮದಿಂದ ಸ್ವಾವಲಂಬಿಗಳಾಗಿ ಅನುಭವಿಸುವ ತಮ್ಮ ಸಂಸಾರಸುಖದಲ್ಲಿ ಕಸಗೂಡಿಸಲಿಕ್ಕೆ ಈ ರಾಕ್ಷಸಿಯು ಇಲ್ಲಿ ಏಕೆ ಬಂದಳೆಂದು ಎನಿಸಿಬಿಟ್ಟಿತು ಲಲಿತಾ-ರಂಗನಾಥರಿಗೆ. ಅತ್ತ ರಂಗನಾಥನ ತಾಯಿಯು, ಯಮುನಾ-ಗೋದಾವರಿಯರ ಮಾತುಕೇಳಿ, ಇದ್ದ ಬಿದ್ದ ಮಾಧವರಾಯರ ಸ್ವಾರ್ಜಿತ ಆಸ್ತಿಯನ್ನೆಲ್ಲ ಜಾಮಾತದ್ವಯರಿಗೆ ಸಲ್ಲುವಂತೆ ಮೃತ್ಯುಪತ್ರ ಮಾಡಿಸಿದಳು..ಅರಿವುಮರೆವಿನ ಮಾಧವರಾಯರಿಂದ. ತನಗೆ ಆಸ್ತಿ ಸಿಕ್ಕಲಿಲ್ಲೆಂಬ ವಿಷಾದಕ್ಕಿಂತ ತನಗೆ ಜನ್ಮಕೊಟ್ಟ ತಾಯ್ತಂದೆಗಳೂ, ಒಡಹುಟ್ಟಿದ ಅಕ್ಕತಂಗಿಯಂದಿರೂ ಕಂಡರಾಗದ ವೈರಿಗಳಂತೆ ತನ್ನನ್ನು ಕಾಣುವುರೆಂಬುದರ ಖೇದವು ಅವನಿಗೆ ಹೆಚ್ಚು ವ್ಯಥೆಯನ್ನುಂಟುಮಾಡಿತು. ಒಟ್ಟಿನಲ್ಲಿ 'ತಮ್ಮವರಿಗಿಂತ ಪರರೆ ಹತ್ತಿರದವರಾಗುವರು ಈ ಸಂಸಾರದಲ್ಲಿ..ಮಾನವನಿಗೆ' ಎಂದು ಕೊಂಡ ರಂಗನಾಥ. ಬುದ್ಧಿಕಳೆದುಕೊಂಡು ಮದುವೆಯಾದ; ಮದುವೆಯಾಗಿ ಬುದ್ಧಿಗಲಿತ. ಮಾಲತಿಯ ಶೋಕಾಂತ ಜೀವನವನ್ನು ಕೇಳಿ ಅವಳು ತನ್ನ ಹೆಂಡತಿ ಆಗದಿದ್ದುದೆ ಕ್ಷೇಮವಾಯ್ತೆಂದ ಮನಸ್ಸಿನಲ್ಲಿ. ರಮಾಕಾಂತನ ರಮ್ಯವಿವಾಹದ ಶೋಕಾಂತ ನಾಟಕವನ್ನು ಕೇಳಿ, ಒಂದು ತೆರದ ಸಮಾಧಾನ-

Phosph-Aura

Phospho-Gold Tonic

THE IDEAL TONIC



Ideally suited to combat conditions of lowered body vitality, neurasthenia nerve depletion, mental and physical fatigue, lessitude, premature senility and in all conditions where a dependable Nervine Tonic is desired.

Descriptive literature free on Request.
PRICE Rs. 3-8. Packing & Postage Extra.

Distributors:

ROY & COMPANY

176 Princess Street
BOMBAY 2.

ESTD. 1889

ವೆನಿಸಿತು ಮಾಲತಿಗೆ. ರಮಾಕಾಂತನು ಘಟಸ್ಫೋಟದ ವಿಷಾದಕರ ಘಟನೆಯಾದ ಒಂದು ವರ್ಷದ ತರುವಾಯ, ಒಬ್ಬ ಸುಶಿಕ್ಷಿತ ಭಾರತೀಯ ಮಹಿಳೆಯನ್ನು ಮದುವೆಯಾಗಿ, ಇದ್ದುದರಲ್ಲಿ ಸುಖದಿಂದ ಬಾಳಬೇಕೆಂದು ಮನಸ್ಸು ಮಾಡಿದ.

* * *

ರಂಗನಾಥ, ಮಾಲತಿ, ರಮಾಕಾಂತ ಇವರು ನಮ್ಮ ಸಮಾಜದಲ್ಲಿ ಕಂಡುಬರುವ ಬಗೆಬಗೆಯ ತರುಣ-ತರುಣಿಯರ ಪ್ರಾತಿನಿಧಿಕ ಮಾದರಿಗಳಾಗಿದ್ದಾರೆ. ಇವುಗಳಂತೆ ಇನ್ನೂ ಎಷ್ಟೋ ಮಾದರಿಗಳನ್ನು ಉದಾಹರಿಸಬಹುದಾಗಿದೆ. ಆದರೆ ಈ ಚಿಕ್ಕ ಪ್ರಬಂಧದಲ್ಲಿ ಅವುಗಳಿಗೆ ಅನುವಿಲ್ಲ. ಇವುಗಳ ಮೇಲಿಂದ ನಮ್ಮ ವಿವಾಹೋನ್ಮುಖ ತರುಣ-ತರುಣಿಯರಿಗೆ ಸಾಕಷ್ಟು ಬೋಧೆ ದೊರೆಯಬಹುದಾಗಿದೆ. ರಂಗನಾಥ, ಮಾಲತಿ, ರಮಾಕಾಂತ ಮೊದಲಾದವರಿಗೆ ಮದು-ಬಾಳಿನಲ್ಲಿ ನಿರಾಶೆ ಯಾಕೆ ಉಂಟಾಯಿತು? ಅವರ ನಿಜವೈರಿಗಳಾರು? ರೂಢಿರಾಕ್ಷಸನನ್ನಂತೂ ನಾವು ಮರೆಯುವಂತಿಲ್ಲ. ಆರ್ಥಿಕ ಪರಾವಲಂಬನದಲ್ಲಿ ಸ್ವಾರ್ಥಪರಾಯಣರಾಗಿ, ರಂಗನಾಥನನ್ನು ಮದುವೆಗಾಗಿ ಒತ್ತಾಯಪಡಿಸಿದ ಅವನ ತಾಯ್ತಂದೆಗಳು ಅವನ ಘಾತಕರೇ ಹೊರತು ಹಿತಚಿಂತಕರಲ್ಲ. ಸ್ವಾವಲಂಬಿಗಳಲ್ಲದ ಕಿರಿಯರನ್ನು ಗೃಹಸ್ಥಾಶ್ರಮದಲ್ಲಿ ದೂಡಿ, ತಾವು ಪೇಚಾಡುವುದಲ್ಲದೆ ಕಿರಿಯರನ್ನು ಕಡೆಗೂ ದುಃಖಮಯ ದಾಂಪತ್ಯಜೀವನಕ್ಕೆ ತುತ್ತುಮಾಡುವ ದುಶ್ಚಟವನ್ನು ನಮ್ಮ ಶಿಷ್ಟ ಹಿರಿಯರು ಆದಷ್ಟು ಬೇಗನೆ ಬಿಟ್ಟುಕೊಡುವುದು ಒಳ್ಳೆಯದಲ್ಲವೆ? ತರುಣರಿಗೆ ಮದುವೆಮಾಡುವವರೆಗೆ ನಮ್ಮ ಹಿರಿಯರ ಪ್ರೇಮುಗಂಗೆ ಹೊರಸೂಸಿ ಹರಿಯುವಳು. ಮದುವೆಯಾದೊಡನೆ ದೃಶ್ಯಾಂತರ (Transfer Scene); ಇಂತಹ ಉಸಾಬರಿಗೆ ಹಿರಿಯರು ಯಾಕೆ ಹೋಗುವರೋ ತಿಳಿಯದು!

ಹಿರಿಯರು ತರುಣರ ಮದುವೆಯ ವಿಷಯದಲ್ಲಿ ಮಾಡುವ ವಿಘಾತಕವಾದ ಅವಸರದ ಜೊತೆಗೆ, ನಮ್ಮ ಯುವಕ-ಯುವತಿಯರ ಪತನದಾರೀ ಆಕಾಂಕ್ಷೆಗಳೇ ಅವರ ನಿರಾಶಾಮಯ ಜೀವನಕ್ಕೆ ಮುಖ್ಯವಾಗಿ ಹೊಣೆಯಾಗಿವೆ. ಮದುಬಾಳಿನಲ್ಲಿ ತಮ್ಮ ಪಾಲುಗಾರರು ಯಾರು ಇರಬೇಕೆಂಬುದರ ಬಗೆಗೆ ಅದ್ಭುತರಮ್ಯ ಕಲ್ಪನೆ ಇರುವುದು ವಿವಾಹೋನ್ಮುಖರಿಗೆ. ಆದರೆ ತಾನು ಯಾರು?—ಎಂಬುದನ್ನು ಮಾತ್ರ ಅಂತರ್ಮುಖರಾಗಿ ಅವರೆಂದೂ ಗಮನಿಸುವುದಿಲ್ಲ. ಶೇಕ್ಸ್‌ಪೀಯರನ ಪೋರ್ಸಿಯಾ, ಭವಭೂತಿಯ ಮಾಲತಿ ಮುಂತಾದ ರಮ್ಯವ್ಯಕ್ತಿಗಳನ್ನು ಕಣ್ಮುಂದೆ ಇಟ್ಟುಕೊಂಡು, ಸತ್ಯಸೃಷ್ಟಿಯ ಕಹಿ ವಾಸ್ತವತೆಯನ್ನು ಕಾಣದೆ ಹೋಗುವರು ಅವರು. 'ನೋಡಿದಾಕ್ಷಣ ಪ್ರೇಮ (Love at first Sight)' ಎಂಬ ವಿಘಾತುಕರೀತಿಯನ್ನು ಇತ್ತೀಚೆಗಿನ ಪ್ರಬುದ್ಧ ಪುರೋಗಾಮಿ ಯುವಕ-ಯುವತಿಯರು ಬಿಟ್ಟುಕೊಟ್ಟಿದ್ದಾರೆ. ಬಹಿರುಪಾಧಿಗಳನ್ನು ಅವಲಂಬಿಸುವ ಮಾಯಿಕಪ್ರೇಮದಲ್ಲಿ ಹುರುಳಿಲ್ಲವೆಂದು ಮನಗಂಡಿರುವರು ಅವರು. ತನ್ನ ತಾನರಿತು, ತನಗೆ ಸಲ್ಲುವ ಜೀವನದ ಜೊತೆಗಾತಿ-ಜೊತೆಗಾರನನ್ನು ಆರಿಸುವ ವಿವೇಕವು ಉದಯಿಸಬೇಕು ನಮ್ಮ ಯುವಕ-ಯುವತಿಯಲ್ಲಿ. ನಿತ್ಯದ ಅನುದ್ಭುತ ಜೀವನದಲ್ಲಿಯೂ ರಮ್ಯತೆಯನ್ನು ಪಡೆಯಬಹುದಾಗಿದೆ. ಸಾಮಾನ್ಯದಲ್ಲಿ ಅಸಾಮಾನ್ಯತೆಯನ್ನು ಕಾಣಬಹುದಾಗಿದೆ. ಜೀವನದಲ್ಲಿ ಪ್ರತಿಯೊಬ್ಬನಿಗೂ ತನ್ನದೆಂಬುವ ತಾತ್ತ್ವಿಕ ಗುರಿ ಮತ್ತು ಆದಕ್ಕೆ ಹೊಂದುವ ನೈತಿಕ ಹಿನ್ನೆಲೆಯು ಬೇಕು; ಎಂದರೆ ಮಾತ್ರ ಪತಿ-ಪತಿಯರಲ್ಲಿ ಈಗ ಎಲ್ಲೆಲ್ಲಿಯೂ ಕಂಡುಬರುವ ಸ್ಪರ್ಧೆ ಮಾಯವಾಗಿ, ಅವರಲ್ಲಿ ನಿಜವಾದ ತಾದಾತ್ಮ್ಯತೆ ಉಂಟಾಗುವುದು. ಹೀಗಾಗದೆ ಹೋದಲ್ಲಿ ದಾಂಪತ್ಯಜೀವನ ಕಗ್ಗುತ್ತಲೆಯ ರಾತ್ರಿಯಾಗದಿರದು.

ಪತಿಯೆ ಮೇಗೆಂಬ ಪತಿ, | ಪತಿಯೆ ಮೇಗೆಂಬ ಪತಿ |
ಜೊತೆಗೂಡೆ ಬಾಳು ದೀಪಕ್ಕೆ, ಹೀಗಿರದ
ಜೊತೆಯು ' ಜೊತೆ'ಯೆಂಡ ಮರ್ಮಜ್ಞ ॥

ಸಾಧನ ಮುದ್ರಣಾಲಯದ ಸುಂದರ ಪ್ರಕಟನೆಗಳು

ಮೈಸೂರು ವಿದ್ಯಾಪಾತೆಯವರಿಂದ ಮುಂಜೂರಾಗಿದೆ.
T.B.C. No. 162 of 39-40.

ವರ್ಧಾಯಾತ್ರೆ: ಲೇ. ಶ್ರೀ. ಎಸ್. ಕೃಷ್ಣಶರ್ಮ. ಬೆಲೆ ೧-೦-೦

ಅಭಿಪ್ರಾಯಗಳು

೧) ಈ ಪುಸ್ತಕವನ್ನು ಗಾಂಧೀಜಿಯವರ ಸತ್ಯಶೋಧನೆ, ಜವಾಹರಲಾಲರ ಆತ್ಮಕಥೆ, ಪಟ್ಟಾಭಿಯವರ ಕಾಂಗ್ರೆಸ್ ಇತಿಹಾಸ ಇವುಗಳೊಡನೆ ಓದಿ ನೋಡಬೇಕು.
—ವಿಶ್ವಕರ್ನಾಟಕ: ಶ್ರೀ. ತಿ. ತಾ. ಶರ್ಮನ್.

೨) WARDHA YATRA is a new departure in Kannada Literature. —*Indian P.E.N.*

ಇದೇ ಲೇಖಕರ **ಹರ್ಣಕುಟಿ** ಅಚ್ಚಿನಲ್ಲಿದೆ.

ಭಾರತೀಯ ಕಥಾವಳಿ

ಭಾರತದಲ್ಲಿರುವ ಸುಪ್ರಸಿದ್ಧ ಭಾಷೆಗಳಿಂದ ಆಯ್ದು ಉತ್ತಮವಾದ ಕಥೆಗಳ ಸಂಗ್ರಹದ ಹೊಸಯೋಜನೆ. ಅಖಿಲಭಾರತದ ಸಾಂಸ್ಕೃತಿಕ ತಿಳುವಳಿಕೆಗೆ ತುಂಬ ಅವಶ್ಯವಾದ ಸಂಗ್ರಹ. ಪ್ರತಿ ಮನೆಮನೆಗೂ ಇರಬೇಕಾದ ಅತ್ಯವಶ್ಯ ಸಾಹಿತ್ಯ.

೧. ತೆಲುಗಿನ ಕತೆಗಳು .. ೦-೮-೦
೨. ಅಸಾಮೀ ಕತೆಗಳು .. ೦-೮-೦

ಉಳಿದ ಕತೆಗಳ ಸಂಗ್ರಹಗಳಾದರೂ ಬೇಗ ಪ್ರಕಟಿಸಲ್ಪಡುವುವು.

ದೊರೆಯುವ ಸ್ಥಳ:— **ಸಾಧನ ಮುದ್ರಣಾಲಯ, ಧಾರವಾಡ**

ಸಾರಾಸಾರ ವಿಚಾರ

ಶ್ರೀ. 'ಶ್ರೀಧರ' ಪುಣೆ

ಗಂಡುಜನ್ಮ

ಸಾರಾಸಾರ ವಿಚಾರ ಮಾಡಿದರೆ
ಗಂಡುಜನ್ಮವೇ ಭಾಳ ಸುಖಾ !
ಮುಂದೀ ಮನ್ಯಾಗ ಯಾರು ದುಡೀಬೇಕು?
ಹೆಣ್ಣು ಜನ್ಮ ಬೀಳೂ ತನಕಾ !

ಸಾಲಿಗ್ಹೋಗ್ತೀನಂತ ಸ್ಲೇಟು-ಪುಸ್ತಕಾ
ಗೆಳೆಯರ ಮನಿಸಂದಿಗೆ ಒಗೆದು,
ಫುಟ್‌ಬಾಲ್ ಚೆಂಡು, ಕ್ರಿಕೆಟ್ಟು ಆಡೂದೆ
ಸುಖಾ ಸೋದಾ-ಟೀಮನ್ ಕುಡಿದು!

ಹೊಸಾ, ಹಕ್ಕಿಯಂತೆ ಹೊಸಾ ಡ್ರೆಸ್ಸು ನೂಡಿ
ಮಿಂಚಿನ್ಹಾಂಗ ಕಾಲೇಜ್ದಾಗ-
ಸುಳಿದುಸುಳಿದು ಮೆರದಾಡುವ ಭಾಗ್ಯಕ
ಬರತಕ್ಕದವ್ವ ಗಂಡ್ಸಾದಾಂವಗ !

ಜರೀ ರುಮಾಲಾ ತಲಿಗೆ ಸುತ್ತಿಕೊಂಡು
ತಿರುವುತ ಬಡಿಗೀ ಕೈಯೊಳಗ-
ದಿನಕ್ಕೊಂದು ಸಾರೆ ಕಚೇರಿ ನೋಡಿದರ
ಸವಿದುತ್ತು ಬೀಳ್‌ತಕ್ಕದ ಬಾಯಾಗ !

ಹರೆಯದ ಹೆಣ್ಣು ನೋಡಿ ಮದುವೀ ಮಾಡಿಕೊಂಡ್ರ
ಮಕ್ಕಳಾಗತಾವ ಆಡಲಾಕ !
ಗಂಡ್ಸಿನ ಜನ್ಮದ ಸುಖಾ ಸುಖಾ ನೋಡು
ಪೇಟೀ ಸ್ವರಾ ಹಚ್ಚಿ ಹಾಡಲಾಕ !

ಅಡಿಗಿ ಒಲಿಯ ಮುಂದ ಹೊಗೀ ತಿಂದುತಿಂದು,
ಕರಿಯದಾಗತಕ್ಕದ ಕೆಂಪುಮುಖಾ !
ಬಿಳಿಯ ಬೀಡಿ ಹೊಗಿ ಜಗ್ಗಿ ಸೇದಿದರ,
ಕೆಂಪಗಾಗತಕ್ಕದ ಕರಿಯ ಮುಖಾ !

ಹೆಂಡತಿ ಸತ್ತರ ಮದಿವಿಯಾಗುತಕ್ಕದ
ಗಂಡ್ಸಿನ ಹೆಣ ಉರಿಯುವ ತನಕಾ
ಗಂಡ್ಸಿನ ಜನ್ಮದ ಸುಖಾ ಹ್ಯಾಂಗ ನಾನು
ಹೇಳಲೆವ್ವ ಹೆಣ್ಣಿನ ದುಃಖಾ !

ಹೆಣ್ಣುಜನ್ಮ

ಸಾರಾಸಾರ ವಿಚಾರ ಮಾಡಿದರೆ
ಹೆಣ್ಣು ಜನ್ಮನೇ ಬಲು ಸೊಗಸಾ !
ಹಣಿಗೆಕುಂಕುಮಾ ಹಚ್ಚಿಮೆರಿಯಬೇಕು;
ಬೂದಿ ಇದ್ದಲಿಯು ಏನು ಹಸಾ ?

ಕರಿದು ಚಂದ್ರಕಳಿ ಸೀರಿ ಉಟ್ಟುಕೊಂಡು
ಮೆರಿಯುತ ಇರಬೇಕು ಊರೆಲ್ಲಾ !
ಸರಿಗಿ-ವಂಕಿ ಇಟ್ಟು ಹೊರಗ ಸುಳಿದರಕ
ಹೊರಳಿ ನೋಡುತಕ್ಕದ ಊರೆಲ್ಲಾ !

ಗಣಿತ-ಭೂಮಿತೀ ಘೋಕುಹಾಕಬೇಕು;
ಕಣ್ಣು ಹೋಗಿ ಸಾಯುವ ತನಕಾ !
ಬೆಂಕೀ ಹಚ್ಚು ತಾ ಗಂಡಿನ ಜನ್ಮಕ
ದುಡಿಯ ಬೇಕು ಮಡಿಯುವ ತನಕಾ!

ಅಲಂಕಾರ ಎಂದರೇನು ಗಂಡಸಿಗೆ ?
ಮೂರು ಎಳೀದೊಂದು ಜನಿವಾರಾ !
ಹತ್ತು ಜನ್ಮಗಳ ಪುಣ್ಯವಿದ್ದರೇನೊ-
ಸಿಗತಕ್ಕದ ಸೊಂಟಕ ಉಡುದಾರಾ !

ಹಸಿಬಿಸಿ ಅನ್ನಾ ಕುಚ್ಚಿ ಎಲಿಯ ಮ್ಯಾಗ
ಬಡಿಸಿ ಗಂಡಗೊಂದು ಒಣಭಕ್ಕರಿ,
ಕಾಲಮ್ಯಾಲ ಕಾಲುಹಾಕಿ ಕೂತುಕೊಂಡು
ಕೊಚ್ಚತಾರ ಊರ ಉಸಾಬರಿ !

ಹೆಣ್ಣುಜನ್ಮವಿದು ನೆರಳಿನೊಳಗಣ ನೋಡು
ಚಿಕ್ಕತನದಿ ತಂದೀ ನೆರಳು ;
ಹರೇತನಕ ಪತಿರಾಜ ಹಿಂದೀತಾನ
ತನ್ನ ಜೀವಛತ್ರದ ನೆರಳು !

ಮಡದಿಯೆಂದರೊಂದು ಮಂಗಳಸೂತ್ರಾ,
ಪುರುಷಗಿಲ್ಲ ಒಂದೇ ಸರಿಗಿ !
ಹೆಚ್ಚು ಹೆಂಡರನ ಮಾಡಿಕೊಂದರಕ
ಗಂಡ ಆಗತಾನ ಕಸಬರಿಗಿ !

ಮಾನವಜನ್ಮ

ಸಾರಾಸಾರ ವಿಚಾರ ಮಾಡಿದರೆ
ಮಾನವ ಜನ್ಮವೆ ಬಲು ಹಿರಿದು ;
ಹೆಣ್ಣು-ಗಂಡಿನಾ ಜಗಳ ಹೂಡಿದರೆ
ಗಂಟ್ಲು ಬಾಯಿ ಬರಿ ಒಣಗುವದು !

ಹೆಣ್ಣು ಗಂಡು ಇವು ದೇಹದ ಮಾದರಿ,
ಆತ್ಮನಿಗಿದು ಮುಟ್ಟುವದಿಲ್ಲಾ !
ಸುಖ-ದುಃಖಗಳಿವು ತಮ್ಮ ಮನಸಿನಾಗ,
ತಿಳಿದು ನೋಡು ನೀ ಹಗಲೆಲ್ಲಾ !

ಹುಟ್ಟುಕೊಡುವದಿದು ದೈವದ ಕೈಯಾಗ,
ಹಿಗ್ಗು ಪಡಿಯುವದೆ ನಮ್ಮವಶಾ !
ಹುಟ್ಟುಗುರುಡನಿಗೆ ಯಾವ ಕಣ್ಣಿನಲಿ
ಪ್ರೀತಿಯೆಂಬುವದೆ ಬರಿಯ ಕಸಾ !

ಜೋಡು ಕಣ್ಣಿನ್ಹಾಂಗ ದೇವ ಮಾಡಿದಾನೆ
ಗಂಡು-ಹೆಣ್ಣು ದೇವರ ಕಣ್ಣಾ !
ಒಂದಕೊಂದು ಇವು ಹೊಂದಿಕೊಂಡರಕ
ತೋರಬಹುದು ಬೆಳಕಿನ ಬಣ್ಣಾ !

ಗಂಡಸಾದರಕ ಗಂಡು ಆಗಬೇಕು ;
ವೀರನಾಗಬೇಕು ಜಗದಾಗ !
ಹೆಂಗಸು ಆದರ ಹೃದಯ ಪಡಿಯಬೇಕು
ನಲವು ಬೀರಬೇಕು ಜಗದೊಳಗ !

ತಂದಿಯಿಲ್ಲದಲೆ ಬಳಲುವವರಿಗೆಲ್ಲಾ
ತಂದಿಯಾಗಬೇಕು ಕಾಹಾಡಿ !
ತಾಯಿಯಿಲ್ಲದಲೆ ತೊಳಲುವವರಿಗೆಲ್ಲಾ
ತಾಯಿಯಾಗಬೇಕು ಮುದ್ದಾಡಿ !

ಹಿಗ್ಗುವಡಿಯಬೇಕು ಹಿಗ್ಗುಹರಡಬೇಕು
ಬಾಳ್ವೆಮಾಡಬೇಕು ಚೆಂದಾಗಿ ;
ಮಾನವ ಜನುಮಕ ಬಂದಮ್ಯಾಲ ಒಮ್ಮೆ
ಶ್ರೀಧರಕವನವಿ ಒಂದಾಗಿ !

ಸಾರಸ್ವತರೂ ಕರ್ನಾಟಕವೂ

(ಪರಿಸ್ಥಿತಿವಿಮರ್ಶೆ)

ಸಾರಸ್ವತರಿಗೆ ಸಂಕಟಕಾಲದಲ್ಲಿ ಇರಲು ನೆಲೆಯನಿತ್ತು ಉಪಕಾರ ಮಾಡಿದುದು ಕನ್ನಡನಾಡು. ಕಷ್ಟಕಾಲದಲ್ಲಿ ಆಶ್ರಯಪಡೆದು, ಅನೇಕ ತಲೆಗಳಿಂದಲೂ ಇಲ್ಲಿಯೆ ಬದುಕಿ ಬಾಳಿದ—ಇನ್ನೆಲ್ಲಿಯೂ ಹೋಗಲಿರದ—ಸಾರಸ್ವತರು, ಕನ್ನಡಿಗರೇ ಆಗಿ ಕನ್ನಡನಾಡಿನ ಸೇವೆಯನ್ನೆ ನಿಷ್ಠೆಯಿಂದ ಮಾಡಬೇಕಾಗಿಲ್ಲವೆ?

ಶ್ರೀ. ಶಲಚೇರಿ ರಂಗರಾಯರು ಬಿ. ಎ., ಎಲ್‌ಎಲ್. ಬಿ. ಮಂಗಳೂರು *

ಧಾರವಾಡದ ಸಾರಸ್ವತಪುರದಲ್ಲಿಯ ಭವ್ಯ ಕಟ್ಟಡಗಳನ್ನು ನೋಡುವಾಗ, ಯಾವ ಸಾರಸ್ವತನಿಗೆ ಅಭಿಮಾನವೂ ಆನಂದವೂ ಆಗಲಾರದು? ಕರ್ನಾಟಕದ ಕಡಲಕಡೆಯ ಬಡನಾಡಿನಲ್ಲಿ ನೆಲಸಿದ್ದ ನಮ್ಮ ಜನರು, ಪಶ್ಚಿಮಘಟ್ಟ ದಾಟಿ ಧಾರವಾಡದಂತಹ ಕೇಂದ್ರದಲ್ಲೂ ತಮ್ಮ ವರ್ಚಸ್ಸನ್ನು ಬೀರಿ, ಸಮಾಜದಲ್ಲಿ ಒಂದು ಶ್ರೇಷ್ಠಸ್ಥಾನವನ್ನು ಪಡೆದಿರುವ ವಿಷಯವು ಯಾವ ಸಾರಸ್ವತನ ಮನಸ್ಸನ್ನು ಆನಂದಿಸಲಿಕ್ಕಿಲ್ಲ?

ಕರ್ನಾಟಕದಲ್ಲಿ ಸಾರಸ್ವತರಿಗೆ ವಿಶಿಷ್ಟಸ್ಥಾನವೂ ನಾಡಿನ ಮುಂದಾಳುತನದ ಸುವರ್ಣಸಂಧಿಯೂ ಇದೆಯೆಂದರೆ ಅತಿಶಯೋಕ್ತಿಯಾಗಲಾರದು. ನಮ್ಮ ಪಡುವಣ ತೀರವು ಅಲ್ಲಿಯ ಜನರಿಗೆ ಜೀವನಸಾಧನಗಳನ್ನು ಪೂರಯಿಸುವಷ್ಟು ಫಲವತ್ತಲ್ಲ; ಆ ಕಾರಣದಿಂದಲೊ ಏನೊ, ಅಲ್ಲಿಯ ಜನರು ಸಾಧಾರಣವಾಗಿ ಘಟ್ಟಗಳ ಮೇಲಿನ ಜನರಿಗಿಂತ ತೀಕ್ಷ್ಣಬುದ್ಧಿಯುಳ್ಳವರು, ಹಾಗೂ ಸಾಹಸಿಗಳು. ಮಹಾರಾಷ್ಟ್ರದಲ್ಲಿ ಕೂಡ ದೇಶದ ಬೌದ್ಧಿಕ (intellectual) ಕಾರ್ಯಗಳಲ್ಲಿ ಮುಂದುವರಿದ ಚಿತ್ಪಾವನರು, ಕರ್ಹಾಡೆಯರು ಮೂಲತಃ ಪಶ್ಚಿಮ ಕರಾವಳಿಯವರು. ಅವರು ಮಹಾರಾಷ್ಟ್ರದಲ್ಲೆಲ್ಲಾ ಹರಡಿದುದರಿಂದ, ಅವರ ಬುದ್ಧಿಶಕ್ತಿಯ ಲಾಭವು ಅಖಿಲ ಮಹಾರಾಷ್ಟ್ರಕ್ಕೆ ದೊರೆಯಿತಲ್ಲದೆ ಮಹಾರಾಷ್ಟ್ರದ ಸಾಂಸ್ಕೃತಿಕ ಏಕೀಕರಣವು ಸುಲಭ ಸಾಧ್ಯವಾಯಿತು.

ಆದರೆ, ದುರ್ದೈವಿ ಕರ್ನಾಟಕದಲ್ಲಿ ಈ ರೀತಿ ಸಮುದ್ರತೀರದ ಜನರು ಘಟ್ಟಗಳ ಮೇಲಿನ ಪ್ರದೇಶದಲ್ಲಿ ಹೋಗಿ ನೆಲಸಿದುದು ಕಂಡುಬರುವುದಿಲ್ಲ. ಇದರಿಂದಾಗಿ, ಸಮುದ್ರತೀರದ ಜನರ ಜುರುಕುಬುದ್ಧಿಯ ಲಾಭವು ಕರ್ನಾಟಕಕ್ಕೆ ದೊರಕದಂತಾಯಿತು ಮಾತ್ರವಲ್ಲದೆ, ಘಟ್ಟದ ಕೆಳಗಿನ ಜಾತಿಗಳೂ ಮೇಲಿನ ಜಾತಿಗಳೂ ಬೇರೆ ಬೇರೆಯೇ ಉಳಿದುವು. ನಮ್ಮ ಜನರ ಪರಸ್ಪರ ಸಂಸರ್ಗ—ಸಂಬಂಧಗಳು ಬಹುತರ ಜಾತಿಯ ಮೇಲೆಯೇ ಹೊಂದಿಕೊಂಡಿರುವುದರಿಂದ 'ಕನ್ನಡ ನಾಡು ಒಂದೇ' ಎಂಬ ಭಾವನೆಯು ಜನಸಾಮಾನ್ಯರಲ್ಲಿ ನೆಲೆಗೊಳ್ಳುವ ಮುಖ್ಯ ಸಾಧನವು ಇಲ್ಲದಂತಾಯಿತು. ರಾಜಕೀಯ ವಿಭಾಗದಿಂದುಂಟಾದ ದುಷ್ಪರಿಣಾಮಗಳು ಈ ಸಾಮಾಜಿಕ ಭಿನ್ನತೆಯಿಂದ ಇನ್ನಷ್ಟೂ ಹೆಚ್ಚಾಗಿವೆ.

ಕರ್ನಾಟಕದ ಈಗಿನ ಪರಿಸ್ಥಿತಿಯಲ್ಲಿ, ಉಪಹಾರ ಗೃಹಗಳನ್ನಿಡುವ ಉಡುಪಿಯ ಬ್ರಾಹ್ಮಣರನ್ನು ಬಿಟ್ಟರೆ, ಕರ್ನಾಟಕದ ಎಲ್ಲ ಪಟ್ಟಣಗಳಲ್ಲಿ ಕಂಡುಬರುವವರೆಂದರೆ ಸಾರಸ್ವತರು ಮಾತ್ರ. ಉಡುಪಿಯ ಬ್ರಾಹ್ಮಣರು ಶಾಶ್ವತವಾಗಿ ಘಟ್ಟದ ಮೇಲಿನ ಊರುಗಳಲ್ಲಿ ನೆಲಸದಿರುವುದರಿಂದ, ಹಾಗೂ ಬೇರೆ ಉದ್ಯೋಗಗಳನ್ನು ಕೈಕೊಳ್ಳದಿರುವುದರಿಂದ, ಸಮಾಜದ ವಿಶಿಷ್ಟವಾದ (need) ಆಗತ್ಯವನ್ನು ಅವರು ಪೂರಯಿಸಿದರೂ, ಸಾಂಸ್ಕೃತಿಕ ಜೀವನದಲ್ಲಿ ಅವರಿಗೆ ಎಡೆಯಿಲ್ಲ.

ಆದರೆ, ಸಾರಸ್ವತರು ಘಟ್ಟಗಳ ಕೆಳಗೂ ಮೇಲೂ ಕಂಡುಬರುವರು, ಹಾಗೂ ವಿದ್ಯೆಯಲ್ಲಿ ಇತರ ಜಾತಿಗಳಿಗಿಂತ ತುಂಬ ಮುಂದುವರಿದಿರುವರು; ಅಲ್ಲದೆ ತೀಕ್ಷ್ಣ ಬುದ್ಧಿಯವರೆಂದು ಹೆಸರು ಪಡೆದಿರುವರು. ಈ ಕಾರಣಗಳಿಂದ ಕರ್ನಾಟಕದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಜೀವನದಲ್ಲಿ ಮುಂದಾಳುತನವನ್ನು ವಹಿಸುವ ಯೋಗ್ಯತೆಯು ಇರುವುದು ಅವರಲ್ಲಿಯೇ ಎಂದರೆ ತಪ್ಪಾಗದು.

ಈ ಪರಿಸ್ಥಿತಿಯ ಉಪಯೋಗವನ್ನು ಸಾರಸ್ವತರೂ ಇತರರೂ ಯಾವ ರೀತಿಯಲ್ಲಿ ಮಾಡಿಕೊಂಡಿರುವರು? ಧಾರವಾಡ ಕಡೆಯ

---

* ಈ ಲೇಖಕರು ಮಂಗಳೂರಿನ ಪ್ರತಿಷ್ಠಿತ ಸಾರಸ್ವತ ಮನೆತನವೊಂದರಲ್ಲಿ ಹುಟ್ಟಿ ಬಳೆದವರು. ಅಲ್ಲಿಯೆ ವಕೀಲಿಯನ್ನು ಮಾಡುತ್ತಿರುವರಲ್ಲದೆ, ಮಂಗಳೂರಿನ ಹಲವು ಸಾಮಾಜಿಕ ಕಾರ್ಯದಲ್ಲಿ ಇವರ ಆಸಕ್ತಿವಿರುವುದು. ಅಸಹಕಾರಿತೆಯ ಸ್ವಾತಂತ್ರ್ಯಸಮರದಲ್ಲಿ ಸೆರೆಮನೆಯ ಸುಖವನ್ನೂ ಅನುಭವಿಸಿದವರು. ಕನ್ನಡನಾಡಿನ ಸರ್ವತೋಮುಖ ಪ್ರಗತಿಗಾಗಿ ತುಂಬ ವಿಚಾರಮಾಡುವವರು.

—ಸಂ. ಜಯಂತಿ

ಸಾರಸ್ವತರ ಜೀವನವನ್ನು ಪರಿಶೀಲಿಸಿದರೆ ನಮಗೆ ಒಂದು ವಿಷಯವು ಸ್ಪಷ್ಟವಾಗಿ ಕಂಡುಬರುವುದು. ಅಲ್ಲಿಯ ಸಾರಸ್ವತರು ವಿದ್ಯೆ, ರೂಪು, ಉಡುಪು, ಜೀವನಕ್ರಮ ಈ ವಿಷಯಗಳಲ್ಲಿ ಪ್ರಗತಿ ಹೊಂದಿದುದು ಇತರ ಜಾತಿಗಳ ಹೊಗಳಿಕೆ ಪ್ರಶಂಸೆಗಳ ವಿಷಯವಾಗಿರುತ್ತದೆಯೇನೋ ಸರಿ. ಆದರೆ, ಅವರೊಳಗೂ ಇತರ ಜಾತಿಗಳೊಳಗೂ ಇರುವ ಸಂಬಂಧದಲ್ಲಿ ಆತ್ಮೀಯತೆಯು ಕಂಡು ಬರುವುದಿಲ್ಲ. ಇತರ ಜಾತಿಯವರೊಡನೆ ಹೊಕ್ಕುಬಳಕೆಯಿಂದಿರದೆ, ತಮ್ಮದೇ ಪ್ರತ್ಯೇಕ ಕಾರ್ಯಕ್ಷೇತ್ರವನ್ನು ಕಲ್ಪಿಸಿಕೊಂಡು, ಇಂಗ್ಲೀಷ್ ಜನರು ಹಿಂದುಸ್ಥಾನದಲ್ಲಿ ವರ್ತಿಸುವ ತೆರದಲ್ಲಿ ಸಾರಸ್ವತರ ಜೀವನಕ್ರಮವು ಸಾಗುತ್ತಲಿದೆ.

ಸಾರಸ್ವತರ ಈ ರೀತಿಯ ವರ್ತನೆಯ ಕಾರಣಗಳನ್ನು ಶೋಧಿಸಿದರೆ ಎರಡು ವಿಷಯಗಳು ತೋರಿಬರುವುವು. ಮೊದಲನೆಯದಾಗಿ ತಾವು ಕನ್ನಡಿಗರಲ್ಲವೆಂಬ ಭಾವನೆಯು ಕೆಲಮಟ್ಟಿಗೆ ಸಾರಸ್ವತರಲ್ಲಿ ಹಬ್ಬಿದೆ; ಈ ಭಾವನೆಯು ಎಷ್ಟರ ಮಟ್ಟಿಗೆ ಸರಿಯಾದುದೆಂಬುದನ್ನು ವಿಚಾರಿಸೋಣ.

ಸಾರಸ್ವತರ ತಾಯ್ನುಡಿ ಕೊಂಕಣಿ ಎಂಬುದೇನೋ ನಿಜ. ಅದು ಮರಾಟಿಯ ವರ್ಗಕ್ಕೆ ಸೇರಿದುದು. ಆದರೆ ಸಾರಸ್ವತರಿಗೂ ಮಹಾರಾಷ್ಟ್ರಕ್ಕೂ ಇತಿಹಾಸದೃಷ್ಟಿಯಿಂದ ನೋಡಿದರೆ ಯಾವುದೇ ರೀತಿಯ ಸಾಂಸ್ಕೃತಿಕ ಸಂಬಂಧವಿಲ್ಲ. ಸಾರಸ್ವತರ ಹಿರಿಯರು ಮಹಾರಾಷ್ಟ್ರದಲ್ಲಿ ಎಂದೂ ಇದ್ದವರಲ್ಲ; ಇತಿಹಾಸ ಕಾಲದ ಆದಿಯಲ್ಲಿ ಉತ್ತರ ಹಿಂದುಸ್ಥಾನದಿಂದ ಬಂದು ಗೋವೆಯಲ್ಲಿ ನೆಲಸಿದವರು. ಆ ಕಾಲದಲ್ಲಿ ಗೋವೆಯು ಕನ್ನಡ ರಾಜರಿಂದ ಆಳಲ್ಪಡುತ್ತಿತ್ತು; ಹಾಗೂ ಅಲ್ಲಿಯ ಸಂಸ್ಕೃತಿಯು ಮಹಾರಾಷ್ಟ್ರದ ಸಂಸ್ಕೃತಿಗಿಂತ ಬಹಳ ಮಟ್ಟಿಗೆ ಬೇರೆ ಇತ್ತು. ಅಲ್ಲಿಂದ ಮುಂದೆ ಪೋರ್ತುಗೀಜರ ಕಾಲದಲ್ಲಿ ಮತಾಂತರವನ್ನು ತಪ್ಪಿಸಲು ಪಲಾಯನಗೈದು, ಕರ್ನಾಟಕದ ಸಮುದ್ರತೀರದ ಭಾಗಕ್ಕೆ ಬಂದರು. ಧರ್ಮರಕ್ಷಣೆಗಾಗಿ ಮನೆ-ಮಾರು ಬಿಟ್ಟಾಗ, ನಮಗೆ ಆಶ್ರಯಕೊಟ್ಟದ್ದು ಕನ್ನಡನಾಡು. ಆ ಉಪಕಾರವನ್ನು ನಮ್ಮ ಹಿರಿಯರು ಮರೆಯಲಿಲ್ಲ. ತಮ್ಮ ಬುದ್ಧಿಚಾತುರ್ಯವನ್ನು ಅವರು ಕನ್ನಡನಾಡಿನ ಏಳಿಗೆಗಾಗಿಯೇ ವ್ಯಯಿಸಿದರು. ಕನ್ನಡಿಗರೊಡನೆ ಬೆರೆತು ಕನ್ನಡಿಗರಾಗಿಯೇ ಬಾಳಿದರು. ನಮ್ಮ ರೀತಿ, ನೀತಿ, ಆಚಾರ, ವಿಚಾರ ಎಲ್ಲವೂ ಕನ್ನಡವಾಯಿತು. ನಮ್ಮ ಪೂರ್ವಜರ ಹೆಸರುಗಳನ್ನು ನೋಡಿದರೆ, ನಾವು ಎಷ್ಟರ ಮಟ್ಟಿಗೆ ಸಂಪೂರ್ಣ ಕನ್ನಡಿಗರಾಗಿದ್ದೇವೆಯೆಂಬುದು ಸ್ಪಷ್ಟವಾಗುವುದು. ಕಷ್ಟಕಾಲದಲ್ಲಿ ಆಶ್ರಯಕೊಟ್ಟ ಕನ್ನಡಮಾತೆಯ ಉಪಕಾರವನ್ನು, ನಮ್ಮ ಹಿರಿಯರು ಕನ್ನಡ ಸಂಸ್ಕೃತಿಯ ಜ್ಯೋತಿಯನ್ನು ಬೆಳಗಿಸಿ ಸಲ್ಲಿಸಿದರು.

ನಮ್ಮ ಹಿರಿಯರು ಕನ್ನಡನಾಡಿಗೆ ಬಂದಾಗ ಸಮುದ್ರತೀರದ ಕರ್ನಾಟಕವನ್ನು ಇಕ್ಕೇರಿ ನಾಯಕರು ಆಳುತ್ತಿದ್ದರು. ಅವರ ಆಸ್ಥಾನದಲ್ಲಿ ಸಾರಸ್ವತರಿಗೆ ಬಹಳ ಗೌರವವಿತ್ತು; ಅಲ್ಲದೆ ನಾಡಿನ ದೊಡ್ಡ ಹುದ್ದೆಗಳು ಸಾರಸ್ವತರ ಕೈಯಲ್ಲಿಯೆ ಇದ್ದುವು. ಇದೇ ಪರಿಸ್ಥಿತಿಯು ಮೊನ್ನೆಯವರೆಗೂ ಇದ್ದಿತು; ಹಾಗೂ ನಾಡಿನ ಮುಂದಾಳುತನವು ಬಹುತರವಾಗಿ ನಮ್ಮಲ್ಲಿಯೆ ಇತ್ತು. ಈ ಉಚ್ಚ ಸ್ಥಾನವು ಲಭಿಸಿದುದು ಬಲಾತ್ಕಾರ ಅಥವಾ ಮೋಸದಿಂದಲ್ಲ; ಜನರೊಡನೆ ಸಮರಸರಾಗಿದ್ದು ಅವರ ಸೇವೆಗೈದುದರಿಂದ.

ಆಧುನಿಕ ಇತಿಹಾಸದಲ್ಲೂ ಸಾರಸ್ವತರು ಕನ್ನಡ ಸಂಸ್ಕೃತಿಗಾಗಿ ಮಾಡಿದ ಕೆಲಸವು ಉಜ್ವಲವಾದುದಾಗಿದೆ. ಧಾರವಾಡ ಕಡೆಯಲ್ಲಿ ಮೊದಲಿದ್ದ ಮರಾಟಿಯ ಬದಲು ಕನ್ನಡವನ್ನು ಜಾರಿಗೆ ತರಲು ಪ್ರಯತ್ನಪಟ್ಟವರಲ್ಲಿ ಪ್ರಮುಖರು, ಸಾರಸ್ವತರಾದ **ಶಾಮರಾವ ವಿಠ್ಠಲರವರು.** ಕರ್ನಾಟಕದ ಜೀವಾಳವಾದ ಏಕೀಕರಣಮಂತ್ರವನ್ನು ಮೊದಲಾಗಿ ಸಾರಿದವರು, ಸಾರಸ್ವತರಾದ **ಬೆನಗಲ್ಲ ರಾಮರಾಯರು.** ಹರಿಜನರಂತಹ ಪತಿತೋದ್ಧಾರದ ಕೆಲಸವನ್ನು ಕರ್ನಾಟಕದಲ್ಲಿ ವ್ಯಾಪಾರಂಭದಲ್ಲಿಯೆ ಕೈಕೊಂಡವರು, ಸಾರಸ್ವತ ಕುಡುವುಮುಲ **ರಂಗರಾಯರು.** ಕೊಂಗ್ರೆಸಿನಲ್ಲಿ ತನು-ಮನ-ಧನದಿಂದ ದುಡಿದು ಸರ್ವಸ್ವವನ್ನು ಕಳಕೊಂಡ ಧುರೀಣರಲ್ಲಿ ಅಗ್ರಗಣ್ಯರು, ಸಾರಸ್ವತ **ಕಾರ್ನಾಡು ಸದಾಶಿವರಾಯರು.** ಸಾಹಿತ್ಯಕ್ಕೆ ಹೊಸ ಹುರುಪುಕೊಟ್ಟು ಹೊಸದಾರಿ ತೋರಿದವರಲ್ಲಿ, ಸಾರಸ್ವತರಾದ **ಪಂಜೆ ಮಂಗೇಶರಾಯರ** ಹೆಸರನ್ನು ಯಾರೂ ಮರೆಯುವಂತಿಲ್ಲ. ಈ ರೀತಿ ಇನ್ನೆಷ್ಟೋ ದೃಷ್ಟಾಂತಗಳನ್ನು ಕೊಡಬಹುದು. ಒಟ್ಟಾರೆ ಹೇಳುವುದಿದ್ದರೆ, ಸಾರ್ವಜನಿಕ ಕಾರ್ಯದಲ್ಲಿ ಇತರ ಯಾವ ಜಾತಿಗಳಿಗಿಂತಲೂ ಸಾರಸ್ವತರು ಹೆಚ್ಚಾಗಿ ದುಡಿದಿರುವರು. ಇಂತಹ ಉಜ್ವಲ ಪರಂಪರೆಯಿದ್ದರೂ ತಾವು ಕನ್ನಡಿಗರಲ್ಲವೆಂಬ ಭಾವನೆಯು ಸಾರಸ್ವತರ ದೃಷ್ಟಿಕೋನದೆದುರು ಪಸರಿಸಿರುವುದರಿಂದ, ಅವರು ಮಾಡುವ ಸಾರ್ವಜನಿಕ ಕಾರ್ಯಗಳ ಯಶಸ್ವಿತೆಯು ದುರ್ಗಮವೂ ಕಠಿನವೂ ಆಗಿದೆ. ಕಷ್ಟಕಾಲದಲ್ಲಿ ಕರ್ನಾಟಕದ ಆಶ್ರಯಪಡೆದು, ಅದರ ಸರ್ವತೋಮುಖ ಸೇವೆಗೈದವರ ವಂಶಜರಾದ ನಾವು, ಈಗ ಕನ್ನಡಿಗರಲ್ಲವೆಂಬಂತೆ ವರ್ತಿಸುವುದು ಪಿತೃದ್ರೋಹವಲ್ಲವೇ? ಅದೇ ರೀತಿ ಕರ್ನಾಟಕದ ಪ್ರಗತಿಗೆ ಬಹುಮಟ್ಟಿಗೆ ಕಾರಣರಾದ ಸಾರಸ್ವತರನ್ನು ತಮ್ಮವರಲ್ಲವೆಂದೆಣಿಸುವುದು ತೀರ ಕೃತಘ್ನತೆಯಲ್ಲವೇ? ಸಾರಸ್ವತರು ಕನ್ನಡಿಗರಲ್ಲವೆಂಬ ಭಾವನೆಯನ್ನು ಸಾರಸ್ವತರೂ ಇತರರೂ ತ್ಯಜಿಸಬೇಕು. ಹಾಗಾದಾಗಲೇ ದ್ವೇಷಾಸೂಯೆಗಳು ತೊಲಗಿ ಪ್ರಗತಿಯು ಸಾಧ್ಯವಾಗುವುದು.

ಧಾರವಾಡ ಕಡೆಯ ಸಾರಸ್ವತರೊಂದಿಗೆ ವಿಚಾರಿಸಿದರೆ ಸಾಧಾರಣವಾಗಿ ಇತರ ಜಾತಿಗಳ ವರ್ತನೆಯ ವಿಷಯದಲ್ಲಿ ಈ ರೀತಿ ಹೇಳುತ್ತಾರೆ: "ಇಲ್ಲಿಯ ಜನರು ನಮ್ಮನ್ನು ತಮ್ಮವರೇ ಎಂದು ಎಣಿಸುವುದಿಲ್ಲ. ನಾವು ಪರಕೀಯರೆಂದೂ, ಬರಿಯೆ ಹಣಮಾಡಲು ಇಲ್ಲಿ ಬಂದವರೆಂದೂ ಅವರ ಭಾವನೆ. ನಮ್ಮ ಉತ್ತಮಸ್ಥಿತಿಯನ್ನು ಕಂಡು ಅವರಿಗೆ ಹೊಟ್ಟೆಕಿಚ್ಚು. ಈ ಪರಿಸ್ಥಿತಿಯಲ್ಲಿ ನಾವು ಪ್ರತ್ಯೇಕವಾಗಿದ್ದು ನಮ್ಮ ಏಳಿಗೆಯನ್ನಷ್ಟೇ ಸಾಧಿಸುವುದು ಒಳಿತಲ್ಲವೇ? ಹಾಗೆ ಮಾಡದಿದ್ದರೆ, ನಾವು ನಿರ್ನಾಮವಾಗುವೆವು!"

ಈ ಭಾವನೆಯು ಎಷ್ಟರ ಮಟ್ಟಿಗೆ ಸಕಾರಣವಾದದ್ದು ಎಂಬು ದನ್ನು ತಿಳಿದುಕೊಳ್ಳಬೇಕು. ಸಾರಸ್ವತರು ಕರ್ನಾಟಕದ ಎಲ್ಲ ಭಾಗಗಳಲ್ಲೂ ತೀರ ಅಲ್ಪ ಸಂಖ್ಯಾಕರು; ಹಾಗೂ ಅವರಲ್ಲಿ ದೊಡ್ಡ ಜಮೀನುದಾರರೂ ಧನಿಕರೂ ಇಲ್ಲ. ಕೇವಲ ಬುದ್ಧಿಬಲದಿಂದಲೇ ಸಮಾಜದಲ್ಲಿ ಅನುಕರಣೀಯಸ್ಥಾನವನ್ನು ಪಡೆದವರು. ಈ ಕಾರಣಗಳಿಂದಾಗಿ ಅವರಲ್ಲಿ ಸಮಾನತೆಯೂ ಪರಸ್ಪರ ಸಹಾಯಕ ಬುದ್ಧಿಯೂ ಐಕ್ಯವೂ ಕಂಡುಬರುವುದು. ಸಾರಸ್ವತರ ಸ್ಪರ್ಧಿಗೆ ಇದು ಅವಶ್ಯವಾದುದು. ಮೇರೆ ಮೀರದಿದ್ದರೆ, ಜಾತಿಯ ಒಕ್ಕಟ್ಟು ನಾಡಿಗೆ ಹಾನಿಕಾರಕವಾಗಲಾರದು.

ತನಗಿಂತ ಉತ್ತಮಸ್ಥಿತಿಯಲ್ಲಿದ್ದವನನ್ನು ಕುರಿತು ಮತ್ಸರ ಪಡುವುದು ಮನುಷ್ಯಸ್ವಭಾವಕ್ಕೆ ಸಹಜವಾದುದು. ಅದು ವ್ಯಕ್ತಿಗಳಲ್ಲಿದ್ದಂತೆ ಸಮಾಜದಲ್ಲೂ ಕಂಡುಬರುವುದು. ಮತ್ಸರವು ಹಲವು ಸಾರೆ ದ್ವೇಷದಲ್ಲಿ ಮಾರ್ಪಾಡು ಹೊಂದುವುದುಂಟು. ಮನುಷ್ಯ ಸ್ವಭಾವದ ಈ ಲಕ್ಷಣಕ್ಕೆ ಸಾರಸ್ವತರು ಬಲಿಯಾಗುವ ಸಂಭವವಿದೆ. ಈ ಪರಿಸ್ಥಿತಿಯು ಧಾರವಾಡದ ಕಡೆ ಮಾತ್ರವೇ ಅಲ್ಲ; ಸಾರಸ್ವತರು ಬಹಳ ಕಾಲದಿಂದ ವಾಸ್ತವಿಸಿದ್ದು, ಅವರು ಪರಕೀಯರೆಂದೆಣಿಸಲು ಅಸ್ಪದವೇ ಇಲ್ಲದ ಮಂಗಳೂರು–ಕಾರವಾರಗಳಲ್ಲೂ ಬಲವಾಗಿ ಕಂಡುಬರುವುದು.

ಜಾತಿ-ಜಾತಿಗಳಲ್ಲಿ ಮಾತ್ಸರ್ಯ, ದ್ವೇಷಗಳು ನಾಡಿನ ಮುನ್ನಡೆಯಲ್ಲಿ ದೊಡ್ಡ ತೊಡಕು; ಅವುಗಳ ನಿರ್ಮೂಲವು ಎಲ್ಲರ ಕರ್ತವ್ಯ. ಎಲ್ಲ ಜಾತಿಗಳಲ್ಲಿ ವಿಚಾರಶೀಲರೂ ವಿವೇಕಿಗಳೂ ಇಂತಹ ಕ್ಷುದ್ರಭಾವನೆಗಳಿಗೆ ಎಡೆಕೊಡದೆ, ಪರಸ್ಪರ ಸೌಹಾರ್ದದ ವಾತಾವರಣವನ್ನು ನಿರ್ಮಿಸಬೇಕು. ಈ ವಿಷಯದಲ್ಲಿ ಸಾರಸ್ವತರು ತಮ್ಮ ಕರ್ತವ್ಯವನ್ನು ಮಾಡಿರುವರೇ? ಇತರ ಜಾತಿಗಳು ನಮ್ಮ ಮೇಲೆ ಪ್ರಯೋಗಿಸುವ ಅಸೂಯೆ-ದ್ವೇಷಗಳು ಹೋಗಬೇಕಾದರೆ, ನಾವು ಅವರಲ್ಲಿಯೂ ವಿಚಾರಶೀಲರೂ ವಿವೇಕಿಗಳೂ ಆದವರ ಪ್ರೀತಿಯನ್ನಾದರೂ ಸಂಪಾದಿಸಬೇಡವೇ? ಆದರೆ, ಅವರೊಡನೆ ಯಾವ ಕೆಲಸದಲ್ಲೂ ಸೇವೆ ಬೇರೆಯೇ ಪ್ರತ್ಯೇಕ ಕಾರ್ಯಕ್ಷೇತ್ರವನ್ನಿಟ್ಟುಕೊಂಡರೆ, ಪ್ರೀತಿ-ವಿಶ್ವಾಸಗಳು ಹೇಗೆ ಹುಟ್ಟಬೇಕು? ಆತ್ಮೀಯತೆಯಿಲ್ಲದೆ ಪ್ರೀತಿ-ವಿಶ್ವಾಸಗಳು ಹುಟ್ಟಲಾರವು. ನಮ್ಮ ಪರಕೀಯ ತನದ ಅಜ್ಞಾನದಿಂದ ನಾವು ಇತರ ಜಾತಿಗಳಲ್ಲಿ ವಿಚಾರವಂತರಾದವರ ಮನಸ್ಸಿನಲ್ಲೂ ನಮ್ಮ ವಿಷಯಕ್ಕೆ ಅನಾದರ ಹುಟ್ಟುವಂತೆ ಮಾಡುತ್ತಿದ್ದೇವೆ.

ಇದು ನಮಗೆಯೇ ಘಾತುಕವು. ಯಾಕೆಂದರೆ, ನಾವು ಎಲ್ಲಾ ಕಡೆಗಳಲ್ಲಿಯೂ ಅಲ್ಪಸಂಖ್ಯಾಕರು. ಮುಸಲ್ಮಾನರಂತಹ ದೊಡ್ಡ ಅಲ್ಪಸಂಖ್ಯಾಕರಂತೆ ನಮಗೆ ರಾಜಾಶ್ರಯವು ಸಿಕ್ಕುವಂತಿಲ್ಲ, ಹಾಗೂ ಪಾಕಿಸ್ತಾನದಂತೆ ನಾವು ಒಂದು ಸ್ವತಂತ್ರ ನಾಡನ್ನೂ ಸಾಧ್ಯವಿಲ್ಲ. ಅವರಂತೆಯೆ ದೇಶದ ಮುನ್ನಡೆಯನ್ನು ನಿಲ್ಲಿಸುವಷ್ಟು ಜನಬಲವೂ ನಮ್ಮಲ್ಲಿಲ್ಲ. ಕೆಲವು ವರ್ಷಗಳ ಕೆಳಗಿನ ವರೆಗೆ ಇತರ ಜಾತಿಗಳು ವಿದ್ಯೆಯಲ್ಲಿ ಹಿಂದುಳಿದುದರಿಂದ, ಸರಕಾರೀ ಉದ್ಯೋಗಗಳಂತಹ ಕೆಲವು ಕ್ಷೇತ್ರಗಳಲ್ಲಿ ಸ್ಪರ್ಧೆ ಇಲ್ಲದೆ ಸ್ಥಾನಗಳು ದೊರೆತುವು. ಆದರೆ, ಈಗ ಬಹುತರ ಎಲ್ಲಾ ಜಾತಿಗಳೂ ವಿದ್ಯೆಯಲ್ಲಿ ಮುಂದೆ ಬರುತ್ತಾ ಇವೆ. ಸರಕಾರದ ಆಶ್ರಯವು ಲಭಿಸುವುದು ಅವರಿಗಲ್ಲದೆ ನಮಗಲ್ಲ.

ಧನಬಲವಾಗಲಿ, ಬಹುಜನಬಲವಾಗಲಿ, ರಾಜಾಶ್ರಯವಾಗಲಿ ಈ ಮೂರರ ಪೈಕಿ ಒಂದಾದರೂ ನಮ್ಮಲ್ಲಿದ್ದರೆ, ಬಹುಜನ ಸಮಾಜದ ಭಾವನೆಗಳನ್ನು ದುರ್ಲಕ್ಷ್ಯಿಸಿಯೂ ಸಾರಸ್ವತರು ಬಾಳಬಹುದಿತ್ತು. ಆದರೆ, ಆ ಮೂರೂ ಇಲ್ಲದ ಈಗಿನ ಪರಿಸ್ಥಿತಿಯಲ್ಲಿ ಬಹುಜನಸಮಾಜದ ಸಹಾನುಭೂತಿಯನ್ನು ಸಂಪಾದಿಸಿಕೊಳ್ಳದಿದ್ದರೆ ನಾವು ಅಧೋಗತಿಗಿಳಿಯಬೇಕಾಗುವುದು. ನಾವು ಕನ್ನಡಿಗರಲ್ಲವೆಂಬಂತೆ ವರ್ತಿಸಿದರೆ ನಮಗೆ ಇತರ ಸಹಾನುಭೂತಿಯು ಹೇಗೆ ಸಿಗಬೇಕು? ಕೇವಲ ಸ್ವಾರ್ಥದ ದೃಷ್ಟಿಯಿಂದ ನೋಡಿದರೂ ನಾವು ನಮ್ಮ ಕನ್ನಡತನವನ್ನು ಅರಿತುಕೊಂಡು, ಇತರರೊಡನೆ ಆತ್ಮೀಯತೆಯಿಂದ ನಡಕೊಳ್ಳುವುದು ನಮ್ಮ ಆದ್ಯಕರ್ತವ್ಯವಾಗಿದೆ.

ಸಾರಸ್ವತರು ಧನದ ಅಥವಾ ಬೇರೆ ಯಾವುದೇ ತರದ ಬಲಾತ್ಕಾರದಿಂದ ಹಾಗೂ ಮೋಸದಿಂದ ಮೇಲೆ ಬಂದವರಲ್ಲ; ಅವರು ಪ್ರಗತಿಹೊಂದಿದುದು ಕೇವಲ ಅವರ ಬುದ್ಧಿಶಕ್ತಿಯಿಂದ. ಸಾರಸ್ವತರ ಸಮಾಜಸೇವೆಯು ಉಜ್ವಲವಾದದ್ದು. ಇದನ್ನು ಮರೆಯದೆ ಇತರ ಜಾತಿಯವರು ಸಾರಸ್ವತರೊಡನೆ ಸಹಾನುಭೂತಿಯಿಂದ ನಡೆದುಕೊಂಡರೆ, ಸಾರಸ್ವತರಿಂದ ಈವರೆಗಿನದಕ್ಕಿಂತ ಎಷ್ಟೋ ಹೆಚ್ಚಾಗಿ ಸಾರ್ವಜನಿಕ ಕಾರ್ಯವಾಗಬಹುದು.

ಇತರ ಬಹುಸಂಖ್ಯಾಕ ಜಾತಿಯವರ ಸಹಾನುಭೂತಿಯಿಂದಲ್ಲದೆ ತಮ್ಮ ಪ್ರಗತಿಪರ ಜೀವನವು ಸರ್ವಥಾ ಸಾಧ್ಯವಿಲ್ಲವೆಂಬುದನ್ನು ಸಾರಸ್ವತರು ಮರೆಯದೆ, ಕನ್ನಡ ಸಂಸ್ಕೃತಿಯು ಹಿರಿಯರ ಕಾಲದಿಂದ ತಮ್ಮ ನಾಡಿಗಳಲ್ಲಿ ಹರಿಯುತ್ತ್ತಿದೆಂಬುದನ್ನು ನೆನಪಿನಲ್ಲಿಟ್ಟುಕೊಂಡು "ತನುಕನ್ನಡ ಮನಕನ್ನಡ"ವಾಗಿ ವರ್ತಿಸಿದರೆ, ಸ್ವಹಿತವನ್ನೂ ನಾಡಿನ ಹಿತವನ್ನೂ ಸಾಧಿಸಬಹುದು.

ಹರಿದು ಹಂಚಿಹೋದ ಕನ್ನಡನಾಡು ಈಗ ಉದಯೋನ್ಮುಖವಾಗುತ್ತಲಿದೆ. ತನ್ನನ್ನು ಅರಿತುಕೊಂಡ ಕರ್ನಾಟಕದಲ್ಲಿ ನಾಡು, ನುಡಿ, ಸಂಸ್ಕೃತಿಗಳ ವಿಷಯದಲ್ಲಿ ನವಜಾಗೃತಿಯು ಎಲ್ಲೆಡೆಯಲ್ಲೂ ಹಬ್ಬಿದೆ. ನಾಡಿನ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಿ, ಕನ್ನಡನಾಡಿನ ಎಲ್ಲ ಜನರ ಪ್ರೀತಿ-ವಿಶ್ವಾಸಗಳನ್ನು ಸಂಪಾದಿಸುವ ಸುವರ್ಣಸಂಧಿಯು ಸಾರಸ್ವತರಿಗುಂಟು. ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ನೆಲಸಿರುವುದರಿಂದ, ಚಟುವಟಿಕೆಗಳನ್ನು ಕೇಂದ್ರೀಕರಿಸಿ, ಅಖಿಲಕರ್ನಾಟಕದ ಮುನ್ನಡೆಯನ್ನು ಸಾಧಿಸಿ ತನ್ಮೂಲಕ ನಾಡಿನ ಮುಂದಾಳುತನಕ್ಕೆ ಮುಟ್ಟುವ ಸೌಕರ್ಯವು ಸಾರಸ್ವತರಿಗಿದ್ದಷ್ಟು ಬೇರೆ ಯಾರಿಗೂ ಇಲ್ಲ.

ಈ ಕಾರ್ಯಗಳನ್ನು, ತಮ್ಮ ಕರ್ನಾಟಕತ್ವವನ್ನು ತಿಳಿದುಕೊಂಡು ಸಾರಸ್ವತರು ಮಾಡಬೇಕು. ಸಾರಸ್ವತರ ಕರ್ನಾಟಕತ್ವವನ್ನು ಸ್ವೀಕರಿಸಿ ಇತರರು ಪ್ರೀತಿ-ವಿಶ್ವಾಸಗಳಿಂದ ಅವನ್ನು ಅವರ ಕಡೆಯಿಂದ ಮಾಡಿಸಬೇಕು. ಹಾಗಾದಾಗಲೆ ನಾಡಿನ ಕಲ್ಯಾಣವು ಕೈಗೂಡುವುದು.

ಶ್ರೀಮಾನ್

ಬೆಳವಿ ರಾಯರು

ಶ್ರೀ. ಚಿಕ್ಕೋಡಿ ಅನಂತರಾಯರು, ಬೆಳಗಾಂವಿ

★

ಬೆಳಗಾಂವಿಯ ಎಲ್ಲ ಪಕ್ಷ-ಪಂಗಡಗಳ ಬಾಯಲ್ಲಿಯೂ ಇರುವ ಬೆಳವಿ ದತ್ತಾತ್ರೇಯ ರಾಯರ ಬಾಳಿನ ತಿರುಳೇನು? ಅವರ ದೊಡ್ಡಿತೆ ಗುಡಿಗಟ್ಟಿನಿಂತುದು ಯಾವ ತಳಹದಿಯ ಮೇಲೆ? ಅವರಲ್ಲಿರುವ ಕನ್ನಡತ್ವ ಯಾವ ಬಗೆಯದಿದೆ?— ಇದನ್ನೆಲ್ಲ ನಾವು ತಿಳಿದುಕೊಳ್ಳಲೇಬೇಕು!

★

ಬೆಳಗಾಂವಿಯ ಸಾರ್ವಜನಿಕ ಜೀವನದಲ್ಲಿ ಬೆಳಗುತ್ತಿರುವ ವ್ಯಕ್ತಿ-ವಿಶೇಷಗಳನ್ನು ಎಣಿಕೆಮಾಡುವಾಗ, ಶ್ರೀಮಾನ್ ಬೆಳವಿ ರಾಯರ ಹೆಸರು ಮೊದಲಾಗಿ—ಮುಂದಾಗಿ—ಕಿರುಬೆಂಕಿ ಮೇಲೆ ಕುಣಿದಾಡುತ್ತದೆ. "ಕರ್ನಾಟಕದ ಗವ್ಹರ್ನರ್"ರೆಂದು, ಲೋಕಮಾನ್ಯ ಟಿಳಕರಂತಹ ಮಹಾ ಧುರೀಣರಿಂದಲೂ ಹೊಗಳಿಸಿಕೊಳ್ಳಬೇಕಾದರೆ ಬೆಳವೀರಾಯರಲ್ಲಿ ಅಂತಹ ಅಸಾಧಾರಣವಾದ ಗುಣಗಣವು ಮನೆಮಾಡಿಕೊಂಡಿರಬೇಕೆಂಬುದು ಯಾರಿಗಾದರೂ ಸಹಜವಾಗಿಯೇ ಹೊಳೆಯುವಂತಿದೆ. ನಿಷ್ಣಾತ ವಕೀಲರೆಂದು, ನುರಿತ ರಾಜಕಾರಣಿಗಳೆಂದು, ಅದ್ಭುತ ಧೈರ್ಯಶಾಲಿಗಳಾದ ಪ್ರಜಾಪ್ರತಿನಿಧಿಗಳೆಂದು, ಇವೆಲ್ಲಕ್ಕೂ ಹೆಚ್ಚಾಗಿ ಸರಲವೃತ್ತಿಯ ಶ್ರೇಷ್ಠ ಸಜ್ಜನರೆಂದು ಬೆಳವಿಯವರು ಅಖಂಡವಾದ ಕೀರ್ತಿಯನ್ನು ಗಳಿಸಿದ್ದಾರೆ. ಮುಂಬೈ ಕರ್ನಾಟಕದ ಮನೆಮನೆಗಳಲ್ಲಿಯೂ ಮೊಳಗುತ್ತಿರಬಹುದಾದ—ಬೆಳಗಾಂವಿಯ—ಎಡೆಯೋ ಮೂರೋ ಹೆಸರುಗಳಲ್ಲಿ "ಬೆಳವೀರಾಯರು" ಎಂಬುದೇ ಅಗ್ರಪೂಜೆಯ ಮಾನವನ್ನು ಪಡೆದಿದೆ. ಟಿಳಕರ ಶಿಷ್ಯತ್ವದಿಂದ, ಮುಂಬೈ ಕಾನೂನುಮಂಡಲದಲ್ಲಿ ಸಾರ್ಥವಾಗಿ ಸಫಲವಾಗಿ ಜರುಗಿಸಿದ ಅವರ ಪ್ರತಿನಿಧಿತ್ವದಿಂದ, ಬೆಳವಿ ದತ್ತರಾಯರು ಮಹಾರಾಷ್ಟ್ರದ ಮೆಚ್ಚಿಕೆ-ಮನ್ನಣೆಗಳನ್ನೂ ಪಡೆದಿದ್ದಾರೆ. ಏಳು ವರ್ಷಗಳವರೆಗೆ ಅಖಿಲಭಾರತೀಯ ಕಾನೂನು ಮಂಡಲದಲ್ಲಿ ಮುಂಬೈ-ಕರ್ನಾಟಕದ (ಜೊತೆಗೆ ಮಹಾರಾಷ್ಟ್ರದ ಕೊಂಕಣಪಟ್ಟಿಯ) ಪ್ರತಿನಿಧಿಗಳಾಗಿ, ಮೋತೀಲಾಲರ ಸ್ವರಾಜ್ಯಪಕ್ಷದ ಯೋದ್ಧರ ಗುಂಪಿನಲ್ಲಿಯೂ ಮಿಂಚಿದ್ದಾರೆ. ಇಂತು, ಬೆಳವೀರಾಯರು

ಶ್ರೀಮಾನ್ ಬೆಳವಿರಾಯರು

★

ಬೆಳಗಾಂವಿಯ ಬೆಳಕನ್ನು ದಿಲ್ಲಿಯವರೆಗೂ ಬಿತ್ತರಿಸಿ ಬಂದ ಮಹನೀಯರಾಗಿದ್ದಾರೆ.

ದತ್ತಾತ್ರೇಯ ವೆಂಕಟೇಶ ಬೆಳವಿಯವರು, ಚಿಕ್ಕೋಡಿ ತಾಲೂಕಿನೊಳಗಿನ ಕೃಷ್ಣಾತೀರದ ಎಡೂರು ಕ್ಷೇತ್ರದಲ್ಲಿ ತಾ॥ ೧೬-೧೧-೧೮೮೬ನೆಯ ದಿನ ಜನ್ಮವೆತ್ತಿದರು. ಹುಕ್ಕೇರಿ ತಾಲೂಕಿನೊಳಗಿನ ಬೆಳವಿಯೆಂಬುದೇ ಇವರ ಊರು. ಇವರ ತಂದೆಯವರಾದ ವೆಂಕಣ್ಣಭಟ್ಟರು ಅಲ್ಲಿಯ ಜೋಯಿಸರು. ನಮ್ಮಿತ್ತ ಕಡೆಯ ಪದ್ಧತಿಯಂತೆ ಇವರ ಊರಿನ ಹೆಸರೇ ಮುಂದೆ ಇವರ ಅಡ್ಡಹೆಸರಾಯಿತು. ಆಗಿನ ಕಾಲದ ಆಯ್ಯನವರ ಸಾಲೆ ಅಥವಾ "ಪಂತೋಜಿಗಳ ಗಾಂವಠೀ ಶಾಲೆ"ಯಲ್ಲಿಯೇ ಕನ್ನಡ ಮೂರನೆಯ ಈಯತ್ತೆಯನ್ನು ರಾಯರು ಮುಗಿಸಿದರು. "ನಮ್ಮ ಕಾಲದಲ್ಲಿ ಈಗಿನಂತೆ ಸ್ಲೇಟು-ಪೆನ್ಸಿಲುಗಳೇನೂ ಇದ್ದಿಲ್ಲ; ಹಲಗೆ-ಬಳಪಗಳೇ ಆಂದಿನ ನಮ್ಮ ಲೇಖನಸಾಹಿತ್ಯಗಳಾಗಿದ್ದುವು" ಎಂಬುದಾಗಿ ಬೆಳವೀರಾಯರು ಹೇಳುತ್ತಾರೆ. ಮೂರು ಈಯತ್ತೆಗಳೇನೋ ಮುಗಿದುವು. ಆದರೆ ನಾಲ್ಕನೆಯ ಈಯತ್ತೆಯ ಶಿಕ್ಷಣವು ಬೆಳವಿಯಂತಹ ಹಳ್ಳಿಯಲ್ಲಿ ಆಂದಿನ ಕಾಲಕ್ಕೆ ಅಸಾಧ್ಯವಿದ್ದುದರಿಂದ, ಅವರು ಎಡೂರಿನ ಬಳಿಯಲ್ಲಿಯೆ ಇರುವ (ತಿತೋಳಿಯವರ) ಅಂಕಲಿಯ ಕನ್ನಡ ಶಾಲೆಗೆ ಹೋದರು. ತಮ್ಮ ವಯಸ್ಸಿನ ಹದಿನೈದನೆಯ ವರ್ಷದಲ್ಲಿ ಎಂದರೆ ೧೮೮೧ರಲ್ಲಿ,

ಬೆಳವಿಯವರು ಅಂಕಲಿಯ ಶಾಲೆಯಿಂದಲೇ ಕನ್ನಡ ಮುಲ್ಕೀ ಪರೀಕ್ಷೆಯಲ್ಲಿ ಪಾಸಾದರು. ಈ ಮುಲ್ಕೀ ಪರೀಕ್ಷೆಗೆ ಇಂದು ಪ್ರಾಪ್ತವಾಗಿರುವ ಹೀನ-ದೀನ ಸ್ಥಿತಿಯನ್ನು ಕಂಡರೆ "ಬೆಳವಿಯವರಂತಹವರೂ ಈ ಪರೀಕ್ಷೆಗೆ ಕುಳಿತಿದ್ದರೆ?" ಎಂಬುದಾಗಿ ಹೊಸ ಹುಡುಗರು ವಿಸ್ಮಯಪಡುವಂತಿದೆ.

ಮುಲ್ಕೀ ಪರೀಕ್ಷೆಯಾದ ಬಳಿಕ, ಟ್ರೇನಿಂಗ್ ಕಾಲೇಜಿಗೆ ಹೋಗಿ ಮಾಸ್ತರರಾಗಿ ಮರಳಿ ಬರುವುದೇ ಬೆಳವಿಯವರಂತಹ ಬಡ ವಿದ್ಯಾರ್ಥಿಗಳಿಗೆ ಆಗ ರಾಜಮಾರ್ಗವಾಗಿತ್ತು. ಕಾಲೇಜಿಗೆ ಹೋಗಲು ಅವರು ಸಮ್ಮತಿಯನ್ನೂ ಬರೆದು ಕೊಟ್ಟಿದ್ದರು. ಆದರೆ ಇಂತಹ ಲೋಕೋತ್ತರ ವ್ಯಕ್ತಿಯು "ಸಾಲೀ ಬರಸೂ" ವರ್ಗಕ್ಕೆ ಸೇರಿ, ಒಂದು ರೀತಿಯಿಂದ ಮೂಲೆಗುಂಪಾಗುವುದು ವಿಧಿಲಿಖಿತವಾಗಿರಲಿಲ್ಲ. ಟ್ರೇನಿಂಗ್ ಕಾಲೇಜಿನ ಕರೆಯನ್ನೇ ಎದುರುನೋಡುತ್ತ ಅಂಕಲಿಯಲ್ಲಿದ್ದ ಬೆಳವೀರಾಯರಿಗೆ, ಕರ್ಮ-ಧರ್ಮ ಸಂಯೋಗದಿಂದ ರಾವಬಹಾದ್ದೂರ್ ರಾವಜಿ ಬಾಳಾಜಿ ಕರಂದೀಕರರ ದರ್ಶನವು ಲಭಿಸಿತು. ಎಜ್ಯುಕೇಶನಲ್ ಇನ್ಸ್-ಪೆಕ್ಟರರಾಗಿದ್ದ ಕರಂದೀಕರರು ಅಂಕಲಿಯ ಶಾಲೆಗೆ ಬಂದಾಗ, ಅಲ್ಲಿಯ ಹೆಡ್‌ಮಾಸ್ಟರರು "ಬಹಳ ಬುದ್ಧಿವಂತ ಹುಡುಗ" ಎಂಬುದಾಗಿ ಬೆಳವಿಯವರ ಪರಿಚಯ ಮಾಡಿಕೊಟ್ಟರು. ಕರಂದೀಕರರು ಇಂಗ್ಲಿಷು ಕಲಿಯುವಂತೆ ಇವರನ್ನು ಪ್ರೋತ್ಸಾಹಿಸಿದರು. ಹೀಗೆ ಬೆಳವಿಯವರಲ್ಲಿ ಇಂಗ್ಲಿಷ್ ಶಿಕ್ಷಣದ ಮಹತ್ಕಾಂಕ್ಷೆಯನ್ನು ಮೊಳೆಯಿಸಿದ್ದುದರಿಂದ ಕರಂದೀಕರರೇ ಇವರ ಗುರುಗಳಾದಂತಾಯಿತು. ಮುಂದೆ ಈ ಗುರುಗಳಿಗೆ, ಬೇರೊಂದು ಕಾರ್ಯ-ಕ್ಷೇತ್ರದಲ್ಲಿ 'ಶಿಷ್ಯಾದಿಚ್ಛೇತ್ ಪರಾಜಯಮ್' ಎಂಬ ಉಕ್ತಿಯ ನೆನಪಾಯಿತೆಂಬುದನ್ನೂ ನಾವು ಕಾಣುತ್ತೇವೆ.

ಇಂಗ್ಲಿಷ್ ಶಿಕ್ಷಣಕ್ಕಾಗಿ ಗಲಗಲಿ ನೆಯ ಮಾರ್ಫ್ ತಿಂಗಳಲ್ಲಿ ಬೆಳಗಾಂವಿಗೆ ಬಂದಬಳಿಕ, ಅವರ ಕಷ್ಟತರವಾದ ವಿದ್ಯಾರ್ಥಿ-ಜೀವನವು ಪ್ರಾರಂಭವಾಯಿತು; ವಾಡಾನ್ನವನ್ನುಂಡು ಓದಬೇಕಾಯಿತು. ಬಡಹುಡುಗರಿಗೆ ವಿದ್ಯಾರ್ಥಿವೃತ್ತಿಯಲ್ಲಿ ಹುರುಪು ಹುಟ್ಟುವುದಕ್ಕೆ ಬೆಳವಿಯವರ ಉದಾಹರಣೆಯನ್ನೇ ಕೊಡುವ ಪರಿಪಾಠವುಂಟಾಗಿದೆ: "ಬೆಳವಿ ವಕೀಲರನ್ನು ನೋಡಿರಿ; ಅವರಾದರೂ ಎಷ್ಟು ಬಡವರಿದ್ದರು! ಮ್ಯುನಿಸೀಪಾಲಿಟಿಯ ಕಂದೀಲಿನ ಬೆಳಕಿಗೆ ಕುಳಿತು ಅಭ್ಯಾಸ ಮಾಡಿದವರು. ಈಗ ಅದೇ ಬೆಳವಿಯವರು ಲಕ್ಷಾಧೀಶರಾಗಿದ್ದಾರೆ. ನೀವೂ ಎದೆಗುಂದದೆ ಅಭ್ಯಾಸ ಮಾಡಿರಿ!" ಎಂಬ ನುಡಿಮುತ್ತುಗಳನ್ನು ಈ ಭಾಗದೊಳಗಿನ ಬಹುಶಃ ಎಲ್ಲ ಬಡಹುಡುಗರೂ ತಮ್ಮ ಹಿರಿಯರಿಂದಲೊ, ಹಿತಚಿಂತಕರಿಂದಲೊ ಕೇಳಿಯೇ ಕೇಳಿದ್ದಾರೆ. ಬೆಳವಿಯಿಂದ ಬೆಳಗಾಂವಿಗೆ ಬರುವುದೇ ಆಗಲಿ, ಬಿಡುವಿನ ಕಾಲಕ್ಕೆ ಮನೆಗೆ ಹೋಗುವುದೇ ಆಗಲಿ; ೪ ಮೂವತ್ತೈದು ಮೈಲುಗಳ ದಾರಿಯನ್ನು ಕಾಲ್ನಡಿಗೆಯಿಂದಲೇ ಚಿಕ್ಕ ಬೆಳವಿಯವರು ಕ್ರಮಿಸುತ್ತಿದ್ದರೆಂಬುದನ್ನು ಮನದಂದರೆ ಬೆಳವಿಯವರ ಅಂದಿನ ಆರ್ಥಿಕ ಪರಿಸ್ಥಿತಿಯ ಚಿತ್ರವು ಕಣ್ಣಿಗೆ ಕಟ್ಟಿದಂತಾಗುತ್ತದೆ. ಇಷ್ಟೆಲ್ಲ ಕಷ್ಟ-ನಿಷ್ಠುರಗಳನ್ನು ಸಹಿಸಬೇಕಾಗಿ ಬಂದರೂ ಆದರಿಂದ ಆಸಿವಿಸಿಗೊಳ್ಳದೆ, ನಾಲ್ಕು ವರ್ಷಗಳವರೆಗೆ ಬೆಳಗಾಂವಿಯಲ್ಲಿ ನಿಂತು ಮ್ಯಾಟ್ರಿಕ್ಯುಲೇಶನ್ನಿಗೆ ಬೇಕಾದ ವಿದ್ಯೆಯನ್ನು ದಾಟಿ, ಉಚ್ಚಶಿಕ್ಷಣಕ್ಕಾಗಿ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಪ್ರವೇಶವಾಡಿದರು. ಮೂರು ದಿನಗಳಮಟ್ಟಿಗೆ ಫರ್ಗ್ಯುಸನ್ ಕಾಲೇಜಿನಲ್ಲಿಯೂ ಇದ್ದರಂತೆ. ಬೆಳಗಾಂವಿಯಲ್ಲಿದ್ದಾಗ ಮೊದಲಿನ ಮೂರು ಈಯತ್ತೆಗಳನ್ನು ಕೈ. ವಾ. ಸಂಗಪ್ಪ ಮುಲ್ಲಪ್ಪ ಅಂಕಲೆ ಯವರು ಹೆಡ್‌ಮಾಸ್ತರರಾಗಿದ್ದ ಲ್ಯಾಂಗ್ಲೋ ವ್ಹರ್ನ್ಯಾಕ್ಯೂಲರ್ ಶಾಲೆಯಲ್ಲಿ, ಮುಂದಿನ ನಾಲ್ಕು ಈಯತ್ತೆಗಳನ್ನು ಸರದಾರ್ಸ್ ಹೈಸ್ಕೂಲಿನಲ್ಲಿ ಓದಿ ಮುಗಿಸಿದರು.

ಕಾಲೇಜಿನಲ್ಲಿ ಮಾತ್ರ ಬೆಳವಿಯವರ ಕಷ್ಟವೇ ಕಡಿದುಹೋಯಿತೆಂದು ಹೇಳಬಹುದು. ಸಿರಿ-ಸರಸತಿಯರಲ್ಲಿ ಸಖ್ಯವು ಕಡಿಮೆಯೆಂದು ಆಗಾಗ ಹೇಳುವುದುಂಟು. ಆದರೆ ಸರಸತಿಯ ಆರಾಧನೆಯಲ್ಲಿ ಘೋರವಾದ ತಪಸ್ಸನ್ನೇ ಆಚರಿಸಿದ್ದ ದತ್ತರಾಯರಿಗೆ ಸರಸತಿಯೊಡನೆ ಸಿರಿಯೂ ಒಲಿದು ಬಂದಳು. ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ೭ ಡಿಯ ಇಲಾಖೆಯಲ್ಲಿಯೇ ಎರಡನೆಯ ನಂಬರು ಪಡೆದ ಮೂಲಕ, ಮತ್ತು ಕಾಲೇಜಿನಲ್ಲಿಯೂ ಉತ್ತಮ ತರಗತಿಯಲ್ಲಿ ತೇರ್ಗಡೆಯಾಗುತ್ತಿದ್ದ ಮೂಲಕ—ಇವರ ಮೇಲೆ ಶಿಷ್ಯವೃತ್ತಿಗಳ ಹಾಗೂ ಪಾರಿತೋಷಕಗಳ ಮಳೆಯೇ ಸುರಿಯಿತು. ಹರಜೀವನದಾಸ ಮಾಧವದಾಸ ಶಿಷ್ಯವೃತ್ತಿ, ಆಪ್ಟೆ ಪಾರಿತೋಷಕ ಮೊದಲಾದ ಹಲವು ಮೆಚ್ಚುಗಳನ್ನು ಪಡೆದು, ೧೮೮೪ ರಲ್ಲಿ ಬಿ. ಎ. ಪರೀಕ್ಷೆಯಲ್ಲಿಯೂ ಮೇಲ್ತರಗತಿಯನ್ನು ಹೊಂದಿ ಡೆಕ್ಕನ್ ಕಾಲೇಜಿನ ಫೆಲೋ ಆದರು. ಫೆಲೋತನದಲ್ಲಿ ಎಂ. ಎ. ಪರೀಕ್ಷೆಗೆ ಓದುವುದರ ಜೊತೆಗೆ ಪ್ರಿನ್ಸಿಪಾಲ್ ಕ್ಲಾಸಿಗೆ ಸಂಸ್ಕೃತದ ಪಾಠ ಹೇಳುತ್ತಿದ್ದರು. ಆದರೆ ಇಂಗ್ಲಿಷ್ ಶಿಕ್ಷಣದ ಮಹತ್ತ್ವಾಕಾಂಕ್ಷೆಯ ಮೂಲಕ "ಬೆಳವಿ ಮಾಸ್ತರ" ರಾಗುವುದು ತಪ್ಪಿದಂತೆ, ವಕೀಲವೃತ್ತಿಯ ಹಿರಿಯಾಶೆಯಿಂದ "ಪ್ರೊ. ಬೆಳವಿ" ಯಾಗುವುದೂ ತಪ್ಪಿತು. ಇವರ ಸಂಗಡಿಗರಾಗಿದ್ದ ದಿವಂಗತ ಕರಿಗುದರಿ ನಾರಾಯಣರಾಯರು, ಬೆಟಗೇರಿ ಜೀವಣರಾಯರೇ ಮೊದಲಾದವರು, ಇವರಿಗಿಂತ ಒಂದು ವರ್ಷ ಮುಂಚಿತವಾಗಿಯೆ ಎಲ್‌ಎಲ್. ಬಿ. ಗೆ ಹೋಗಿದ್ದುದರಿಂದ, ಇವರೂ ತಮ್ಮ ಫೆಲೋತನವನ್ನು ಒಂದು ವರ್ಷಕ್ಕೇ ಬಿಟ್ಟು ಕೊಟ್ಟು, ಮುಂಬಯಿಯ ಲಾ ಕಾಲೇಜನ್ನು ಸೇರಿದರು. ಅಲ್ಲಿಯೂ ಶ್ರೇಷ್ಠತರಗತಿಯಲ್ಲಿಯೇ ಉತ್ತೀರ್ಣರಾಗಿ, ಹಿಂದೂ ಧರ್ಮ-ಶಾಸ್ತ್ರದ ವಿಷಯದಲ್ಲಿ ತೋರಿಸಿದ ಪ್ರಾವೀಣ್ಯಕ್ಕೆ ಪಾರಿತೋಷಕವನ್ನೂ ಪಡೆದರು.

ಇಷ್ಟೊಂದು ನಿಷ್ಠೆಯಿಂದ ಸಾಧನೆ ನಡೆಯಿಸಿದವರಿಗೆ ಸಿದ್ಧಿಯೂ ದೊರಕಲೆ ಬೇಕಷ್ಟೇ? ೧೮೮೫ರಲ್ಲಿ ವಕೀಲರಾಗಿ ಬೆಳಗಾಂವಿಗೆ ಬಂದು ನೆಲಸಿದ ಬೆಳವಿಯವರು, ಈಗ ಅರ್ಧ ಶತಮಾನದವರೆಗೂ ಆ ವೃತ್ತಿಯೊಳಗಿನ ತನ್ನ ನೇಲ್ಮಟ್ಟವನ್ನು ಕಾಯ್ದುಕೊಂಡು ಬಂದಿದ್ದಾರೆ. ವಕೀಲರಾದ ಬೆಳವಿಯವರು ಮುಂದೆ ಊರ ಹಿರಿಯರಾದರು; ನಗರಾಧ್ಯಕ್ಷರಾದರು; ಕೌನ್ಸಿಲರರಾದರು; ಲೋಕ-

ಯಕರಾದರು; ಎಲ್ಲ ಆದರು. ಆದರೆ ಇವೆಲ್ಲವುಗಳಲ್ಲಿಯೂ
ಲಿಯೇ ಇವರ ಮುಖ್ಯ ಅಧಿಷ್ಠಾನ. 'ನಕ್ರಃ ಸ್ವಸ್ಥಾನಮಾ-
ಸ್ಯ ಗಜೇಂದ್ರಮಪಿಕರ್ಷತಿ' ಎಂದು ಹೇಳುವುದಿಲ್ಲವೆ?
ಗೆ ಬೆಳವಿಯವರಿಗೆ ವಕೀಲಿಯು ಸ್ವಸ್ಥಾನ. ದೈವಭಕ್ತರು
ತ್ಯೈಕಲ್ಯಾದಿಗಳನ್ನಾಚರಿಸುವಷ್ಟು ಪರಮನಿಷ್ಠೆಯಿಂದಲೇ
ರು ವಕೀಲವೃತ್ತಿಯನ್ನಾಚರಿಸುತ್ತಿದ್ದಾರೆ. ಪಕ್ಷಕಾರನ
ಕದ್ದಮೆಯನ್ನು ಒಮ್ಮೆ ವಹಿಸಿಕೊಂಡರೆಂದರೆ ತೀರಿತು;
ನ್ನು ಯಶಸ್ವಿಯಾಗಿ ಕೊನೆಗಾಣಿಸಲು ಶಕ್ಯವಾದ ಪ್ರಯತ್ನ
ಲ್ಲ ಬೆಳವಿಯವರಿಂದ ನಡೆದೇ ನಡೆಯುವುವೆಂಬ ವಿಶ್ವಾಸವು
ಕಾರ ಪ್ರಪಂಚದಲ್ಲಿ ಬೇರೂರಿ ಬಿಟ್ಟಿದೆ. ಬೆಳವಿಯವರೇ ತಮಗೆ
ಲರಾಗಿ ದೊರೆಯಬೇಕೆಂದು ಒಂದೇ ವ್ಯಾಜ್ಯದೊಳಗಿನ
ಯ ಪಕ್ಷಗಳೂ ಆತುರರಾಗಿರುವುದುಂಟು. ಇವರು ವಕೀಲ
ಗಿ ದೊರೆತರೆ ತಮ್ಮ ಪಕ್ಷವು ಗೆದ್ದಿತೆಂದೇ ಇಬ್ಬರಿಗೂ ನಂಬಿಕೆ!
ಮ್ಮ ಕಕ್ಷಿಗಾರನ ಕಾಗದಪತ್ರಗಳನ್ನೆಲ್ಲ ಆಸ್ಥೆಯಿಂದ
ಕೊಂಡು, ಪ್ರತಿಪಕ್ಷದವರು ಯೋಜಿಸಬಹುದಾದ ಪೇಚುಗಳ
ಲ್ಲ ಮುಂಗಣ್ಣಿನಿಂದ ಕಂಡುಕೊಂಡು, ಕೋರ್ಟಿಗೆ ಹೋಗುವ
ದಲು ತಮ್ಮ ಪ್ರತಿಪಾದನೆಯ ಪೂರ್ವಸಿದ್ಧತೆಗಳನ್ನೆಲ್ಲ ಪರಿಶ್ರಮ
ಟ್ಟು ಅಳವಡಿಸಿಕೊಳ್ಳುವುದು ಬೆಳವಿಯವರ ನಿತ್ಯನಿಯಮವಾಗಿದೆ.
ದಿನ ಹೊಸ ವಕೀಲರಲ್ಲಿ ಪರಿಶ್ರಮವ್ಯತ್ಯಯವು ಕಡಿಮೆಯೆಂದು
ಹುಗುಟ್ಟುವಂತೆ ಬೆಳವಿಯವರ ಬಗ್ಗೆ ಆಡಿದುದನ್ನು ಯಾರೂ
ರಲಿಕ್ಕಿಲ್ಲ. ತಮ್ಮ ಪಕ್ಷಕಾರನ ಪರವಾಗಿ ವಾದಿಸುತ್ತಿರು
ಗ ಅವರು ಪ್ರತಿಪಕ್ಷದ ವಕೀಲರಿಗೂ ಸೊಪ್ಪುಹಾಕಿಲ್ಲ;
ಯಾಧೀಶರ ಮುಖವತ್ತನ್ನೂ ಲೆಕ್ಕಿಸಿಲ್ಲ. ಮೊಕದ್ದಮೆಯ
ವು ನಡೆಯುತ್ತಿರುವಾಗ ತೂಕಡಿಸುತ್ತಿರುವ ನ್ಯಾಯಾಧೀಶ
ಕುರಿತು "ನಿಮಗೆ ಖಟ್ಲೆ ಕೇಳಿಕೊಳ್ಳುವುದಕ್ಕಾಗಿ ಸಂಬಳ
ಡುತ್ತಾರೆ; ತೂಕಡಿಸುವುದಕ್ಕಲ್ಲ" ಎಂದು ಇವರು ಖಂಡ-
ಾಗಿ ಹೇಳಿದ ಉದಾಹರಣೆಗಳೂ ಉಂಟಂತೆ. ಎ.ಮಾಂಟ್‌ಗಾ-
ಯೆಂಬ ಕಲೆಕ್ಟರರಿಗೆ "ನೀವು ಜನತೆಯ ನೌಕರರಿದ್ದೀರಿ
.is we who pay you)" ಎಂದು ಹೇಳಿದರು. ಮತ್ತೊಬ್ಬ
ಯಾಧೀಶರಿಗೆ "The Law is an ass; but administrators of law should not be asses. (ಕಾಯಿದೆ
ನೋ ಕತ್ತೆಯಂತಿರಬಹುದು; ಆದರೆ ನ್ಯಾಯನಿರ್ಣಾಯಕರು
ಕ್ರ ಕತ್ತೆಗಳಾಗಬಾರದು)" ಎಂದು ಹೇಳಿದ್ದರು.
ಅಲ್ಯಾಕ್‌ರೆಂಬ ಸಾಹೇಬರು ಬೆಳಗಾಂವಿಯಲ್ಲಿ ಅಸಿಸ್ಟಂಟ್
ರಾಗಿರುವಾಗ, ೧೯೦೪ರಲ್ಲಿ ಅವರ ಕೋರ್ಟಿನಲ್ಲಿ ಬೆಳವಿಯವರು
ತ್ತಿ ತಾಲೂಕಿನ ಯಾವನೋ ಒಬ್ಬ ಕುಲಕರ್ಣಿಯ ಕೇಸು
ಸುತ್ತಿದ್ದರು. ಸಾಕ್ಷಿದಾರರಿಗೆ ಇವರು ಪ್ರಶ್ನೆಗಳನ್ನು ಕೇಳುತ್ತಿ
ಾಗ ಸಾಹೇಬರು ಆ ಪ್ರಶ್ನೋತ್ತರಗಳನ್ನು ಬರೆದುಕೊಳ್ಳದೆ
ವಿಯವರಿಗೆ ಸುಮ್ಮನೆ 'Go on, Go on' ಎನ್ನುತ್ತಿದ್ದರು.
ವು ನನ್ನ ಪ್ರಶ್ನೆಗಳನ್ನು ಬರೆದುಕೊಂಡು, ಅವುಗಳನ್ನು ನಿಯಮ-
ಮ್ಯ ಮಾಡಿರುವ ಬಗ್ಗೆ ನಿರ್ಣಯವನ್ನೂ ಬರೆಯದೆ ಇದ್ದ
ದಲ್ಲಿ ನಾನು ಮುಂದಿನ ಪ್ರಶ್ನೆಗಳನ್ನು ಕೇಳುವುದೇ ಇಲ್ಲ" ಎಂದು
ಬೆಳವಿಯವರು ಹೇಳಿಬಿಟ್ಟರು. ಆಯಿತು; ಸಾಹೇಬರ ಪಿತ್ತವು
ನೆತ್ತಿಗೇರಿತು. ನೀವು ಕೋರ್ಟಿನ ಅವಮಾನ ಮಾಡಿರುವುದರಿಂದ
ನಿಮ್ಮಮೇಲೆ ಪ್ರಕರಣ ನಡೆಯಿಸುತ್ತೇನೆಂದು ಸಾಹೇಬರು ಹೇಳಿದ
ಕೂಡಲೆ, ಇವರು ತಮ್ಮ ಕೈಯೊಳಗಿನ ಖಟ್ಲೆಯ ಕಾಗದಗಳನ್ನು
ಕೆಳಗಿಟ್ಟು ಕುಳಿತುಕೊಂಡೇ ಬಿಟ್ಟರು. ಅಲ್ಯಾಕರು ಕೋರ್ಟಿನ
ಅವಮಾನದ ಬಗ್ಗೆ ಬೆಳವಿಯವರಿಗೆ ಎರಡಾಣೆಯ ದಂಡವನ್ನು
ವಿಧಿಸಿದರು. ಬೆಳವಿಯವರು ಹಾಯಕೋರ್ಟಿನವರೆಗೂ ಪ್ರಕರಣ
ವನ್ನೊಯ್ದು ಅಲ್ಲಿ ನಿರ್ದೋಷಿಗಳೆಂದು ತೀರ್ಮಾನಹೊಂದಿದರಲ್ಲದೆ,
ಇವರ ಮೊಕದ್ದಮೆಯು ಮಹತ್ವಪೂರ್ಣವಾದುದೆಂದು
ಲಾ ರಿಪೋರ್ಟರಿನಲ್ಲಿ ಪ್ರಸಿದ್ಧಿಯನ್ನು ಪಡೆಯಿತು.

ಈ ರೀತಿಯಾಗಿ ವಕೀಲವೃತ್ತಿಯಲ್ಲಿ ತಾದಾತ್ಮ್ಯಹೊಂದಿದ
ಬೆಳವಿಯವರಿಗೆ ಗಾಂಧಿಯವರು ಸಾರಿದ ವಕೀಲಿಯ ಬಹಿಷ್ಕಾರವು
ರುಚಿಸಲಿಲ್ಲವೆಂಬುದು ಸಹಜವೇ ಇದೆ. ಅಸಹಕಾರದ ಆರಂಭ
ದಲ್ಲೇನೋ ಇವರು ಒಂದು ತಿಂಗಳ ವರೆಗೆ ವಕೀಲಿಯನ್ನು
ಬಿಟ್ಟಿದ್ದರು. ಆದರೇನು? ಇವರ ಮೊಕದ್ದಮೆಗಳನ್ನೆಲ್ಲ ಬೇರೆ
ವಕೀಲರು ಹಂಚಿಕೊಂಡು ಬಿಟ್ಟರು. ಬಹಿಷ್ಕಾರವು ಪರಿಣಾಮ
ಕಾರಿಯೆಂದು ಬೆಳವಿಯವರಿಗೆ ತೋರಲಿಲ್ಲ; ಮತ್ತೆ ವಕೀಲಿಯನ್ನು
ಪ್ರಾರಂಭಿಸಿದರು. ಮುಂದೆ ನಾಗಪುರದ ಕಾಂಗ್ರೆಸ್ಸಿನ ಕಾಲಕ್ಕೆ
ವಕೀಲಿಯಬಹಿಷ್ಕಾರವು ವ್ಯವಹಾರ್ಯವಲ್ಲವೆಂಬುದಾಗಿ ಚಕ್ರವರ್ತಿ
ರಾಜಗೋಪಾಲಾಚಾರ್ಯರಿಗೆ ಎದುರುವಾದಿಸಿದರು. ಆದರೆ

ಡಾಕ್ಟರ್ ಪಿ. ಸಿ. ರಾಯರು ಕೊಂಡಾಡಿದ

ರುಚಿಕರ ಮತ್ತು ಪಾಚಕ ವನಸ್ಪತಿಜನ್ಯ

ರಜಿಸ್ಟರ್ಡ್ ಚಮನ ಬಾ.ಕಿ. ೪ ಆ.

CHAMAN

ಇದರಿಂದ ಹಸಿವೆಯಾಗಿ ಪಚನ-
ಶಕ್ತಿಯು ಬೆಳೆಯುತ್ತದೆ; ಮತ್ತು ದುರ್ಘಟಿ
ಅಜೀರ್ಣವನ್ನು ಗುಣಪಡಿಸುತ್ತದೆ.

ಇದಲ್ಲದೆ ಥಂಡಿಯಿಂದ ಹೊಟ್ಟೆನೋಯೋಣ,
ಅಪಚನ, ಕೆಮ್ಮು, ದಮ್ಮು, ಕಫ
ಮುಂತಾದುವುಗಳ ಮೇಲೆ

ಚಮನವು

ಅತ್ಯಂತ ಗುಣಕಾರಿಯಾಗಿದೆ.

ಸ್ಟಾರ್ ಕಂಪನಿ, ಬೆಳಗಾಂವಿ

ಆಗ ಅಲ್ಲಿ ಇವರ ಮಾತು ನೋತಿತು. ಇಪ್ಪತ್ತು ವರ್ಷಗಳ ಅನುಭವವನ್ನುಂಡ ಬಳಿಕ ಗಾಂಧಿಯವರು ಕಾಲೇಜು-ಕೋರ್ಟು-ಕೌನ್ಸಿಲುಗಳ ಬಹಿಷ್ಕಾರದ ವ್ಯವಹಾರ್ಯತೆಯ ವಿಷಯಕ್ಕೆ ಇಂದೇನು ಹೇಳಬಹುದೆಂಬುದು, ಇತ್ತಿತ್ತಲಾಗಿನ ಅವರ ಬರೆಹ-ಭಾಷಣಗಳನ್ನೋದಿದವರಿಗೆ ಚೆನ್ನಾಗಿಯೇ ಮನವರಿಕೆಯಾಗಿದೆ.

ಏಕನಿಷ್ಠೆಯಿಂದ ಸಾಗಿದ ಬೆಳವಿಯವರ ವಕೀಲ ವ್ಯವಸಾಯವೇ ಅವರ ನಿಷ್ಕಾಂಚನತ್ವವನ್ನು ನಿರ್ಮಿಸಿ, (ಬಡ ಹಿಂದುಸ್ತಾನದ ದೃಷ್ಟಿಯಿಂದ ನೋಡಿದರೆ) ಇಂದಿಗೆ ಅವರನ್ನು ಗಜಾಂತಲಕ್ಷ್ಮಿಯ ಅಧಿಪತಿಗಳನ್ನಾಗಿ ಮಾಡಿದೆ. ಬೆಳಗಾಂವಿಯಂತಹ ಸ್ಥಳದಲ್ಲಿ ತಿಂಗಳಿಗೆ ಎರಡೆರಡು ಸಾವಿರ ರೂಪಾಯಿಗಳ ವರೆಗೂ ಇವರಿಗೆ ಪ್ರಾಪ್ತಿಯಾಗಿದೆ. ಈಗ ಸುಮಾರು ಹದಿನೈದು ವರ್ಷಗಳಿಂದಲೂ ಬೆಳಗಾಂವಿಯ ವಕೀಲಸಂಘಕ್ಕೆ ಅಧ್ಯಕ್ಷರಾಗಿದ್ದಾರೆ.

ಇವರು ಮೊದಲಿನಿಂದಲೂ ಟಿಳಕಭಕ್ತರು; ಕಾಂಗ್ರೆಸ್ ಭಕ್ತರು. ೧೯೪೪ರಲ್ಲಿ ಎಂದರೆ ವಕೀಲರಾಗಿ ಬಂದ ಮರು-ವರ್ಷವೇ, ಮದರಾಸಿನಲ್ಲಿ ವೆಬ್‌ಸಾಹೇಬರ ಅಧ್ಯಕ್ಷತೆಯಲ್ಲಿ ಕೂಡಿದ ಕಾಂಗ್ರೆಸ್ ಅಧಿವೇಶನಕ್ಕೆ ಹೋಗಿದ್ದರು. ಇತಿಹಾಸ ಪ್ರಸಿದ್ಧವಾಗಿರುವ ಸುರತ ಕಾಂಗ್ರೆಸ್ಸಿಗೂ ಹೋಗಿದ್ದರು. ಆಗಿನ ಕಾಲಕ್ಕೆ ಕೂಡುತ್ತಿದ್ದ ಮುಂಬೈ ಇಲಾಖೆಯ ಪ್ರಾಂತಿಕ ಪರಿಷತ್ತುಗಳಿಗೂ ತಪ್ಪದೆ ಹೋಗುತ್ತಿದ್ದರು. ಸಾತಾರೆಯಲ್ಲಿ ೧೯೧೫ರಲ್ಲಿ ಕೂಡಿದ ಪ್ರಾಂತಿಕ ಪರಿಷತ್ತಿಗೆ ಅಧ್ಯಕ್ಷರಾಗಿದ್ದರು. ಮುಂದೆ ಎರಡು ವರ್ಷಗಳಿಗೆ, ಖಾಪರ್ಡೆಯವರ ಅಧ್ಯಕ್ಷತೆಯಲ್ಲಿ ಬೆಳಗಾಂವಿಯಲ್ಲಿಯೇ ಪರಿಷತ್ತು ಕೂಡಿದಾಗ, ಬೆಳವಿಯವರೇ ಸ್ವಾಗತಾಧ್ಯಕ್ಷರಿದ್ದರು. ನಲವತ್ತೈದು ವರ್ಷಗಳ ಹಿಂದೆ ೧೯೨೫ರಲ್ಲಿ, ಇದೇ ಬೆಳಗಾಂವಿಯಲ್ಲಿ ವಾಚ್ಛಾ ಸಾಹೇಬರ ಅಧ್ಯಕ್ಷತೆಯಲ್ಲಿ ಪರಿಷತ್ತು ಕೂಡಿದಾಗ ಇವರು ಸ್ವಯಂಸೇವಕರ ಕಪ್ತಾನರಾಗಿ ಕೆಲಸಮಾಡಿದ್ದಾರೆ. ಪೇಣದಲ್ಲಿ ಕೂಡಿದ ಜಿಲ್ಲಾ ಪರಿಷತ್ತಿಗೆ ಅಧ್ಯಕ್ಷರಾಗಿದ್ದರು. ನಮ್ಮ ಜಿಲ್ಲಾ ಕಾಂಗ್ರೆಸ್ ಕಮಿಟಿಗಂತೂ ೧೯೩೨ರ ವರೆಗೂ ಅಧ್ಯಕ್ಷರಿದ್ದರು. ಶಾಸನ-ಭಂಗದ ಆಂದೋಲನವು ನಡೆದಾಗ, ಸರಕಾರದವರು ಬೆಳಗಾಂವಿಯೊಂದನ್ನೆಳಿದು ಕರ್ನಾಟಕದೊಳಗಿನ ಬೇರೆ ಕಾಂಗ್ರೆಸ್ ಕಮಿಟಿಗಳೆಲ್ಲ ಕಟ್ಟಳೆಗೆಟ್ಟ ಸಂಸ್ಥೆಗಳೆಂದು ಸಾರಿದರು. ಬೆಳಗಾಂವಿಯ ಕಮಿಟಿಯೂ ಅದೇ ಗತಿಯನ್ನು ಹೊಂದುವುದು ತುಂಬ ಸಂಭವನೀಯವಿದ್ದಿತು. "ಕಾಂಗ್ರೆಸ್ ಕಮಿಟಿಯು ಕಟ್ಟಳೆಗೆಟ್ಟ ಸಂಸ್ಥೆಯೆಂದು ಸರಕಾರದವರು ಸಾರಿದರೂ ನಾನದರ ಅಧ್ಯಕ್ಷತೆಯನ್ನು ಬಿಡುವುದಿಲ್ಲ. ಇದಕ್ಕಾಗಿ ಸೆರೆಮನೆಯನ್ನು ಸೇರಬೇಕಾಗಿ ಬಂದರೂ ನಾನದಕ್ಕೆ ಸಿದ್ಧನಿರುವೆ" ಎಂಬುದಾಗಿ ಬೆಳವಿಯವರು ಘೋಷಿಸಿದರು. ಸರಕಾರದವರು ಮಾತ್ರ ಬೆಳಗಾಂವಿ ಕಮಿಟಿಯ ಗೋಜಿಗೇ ಹೋಗಲಿಲ್ಲ. ಹೀಗೆ ಬೆಳವಿಯವರು ಸೆರೆಮನೆಯನ್ನು ಸೇರುವ ಸಿದ್ಧತೆಯನ್ನು ತೋರಿಸಿದ ಕೂಡಲೆ ಸೆರೆಮನೆಯೇ ಹೆದರಿ ಹಿಂಜರಿದಂತಾಯಿತು.

ಕಾಂಗ್ರೆಸ್ ಕಮಿಟಿಯಂತೆ ಬೇರೆ ಸ್ಥಾನಿಕ ಸಂಸ್ಥೆಗಳಲ್ಲಿಯೂ ಇವರ ಪ್ರಭಾವವು ಕಂಡುಬಂದಿದೆ. ಹನ್ನೆರಡು ವರ್ಷಗಳವ ಮ್ಯುನಿಸಿಪಾಲಿಟಿಯ ಸದಸ್ಯರಿದ್ದರು. ೧೯೧೬ರಿಂದ ೧೯೨ ವರೆಗಂತೂ ನಗರಾಧ್ಯಕ್ಷರಾಗಿದ್ದರು. ಮ್ಯುನಿಸಿಪಾಲಿಟಿ ಬಾವಿಗಳಲ್ಲಿ, ಧರ್ಮಶಾಲೆಗಳೇ ಮೊದಲಾದ ಸಾರ್ವಜನಿಕ ಗಳಲ್ಲಿ ಅಸ್ಪೃಶ್ಯರಿಗೂ ಮುಕ್ತದ್ವಾರವುಂಟಾದದ್ದು ಇ ಅಧ್ಯಕ್ಷತ್ವದ ಅವಧಿಯಲ್ಲಿಯೇ. ಹರಿಜನೋದ್ಧಾರದ ಆಂದೋ ಲನವು ಪ್ರಾರಂಭವಾಗುವುದಕ್ಕಿಂತ ಹನ್ನೆರಡು ವರ್ಷಗಳ ಹಿಂ ಮಾತಿದು. ನಿಸ್ಪೃಹತೆ, ನಿಃಪಕ್ಷಪಾತ ಮತ್ತು ನಿಯಮಿತಕ್ಷ ಕಾರಭಾರದ ವಿಷಯದಲ್ಲಿ ಇವರ ನಗರಾಧ್ಯಕ್ಷತೆಯು ಬಳ ಹೆಸರು ಪಡೆದಿದೆ. ಲೋಕಲ್‌ಬೋರ್ಡು, ಅರ್ಬನ್‌ಬ್ಯಾಂಕ್ ನೆಂಟ್ರಲ್‌ಬ್ಯಾಂಕು, ಸಾರ್ವಜನಿಕ ವಾಚನಾಲಯ, ಸೋಷ್ ಕ್ಲಬ್, ಮಹಿಲಾವಿದ್ಯಾಲಯ ಇವೇ ಮೊದಲಾದ ಸಂ ಗಳಲ್ಲಿಯೂ ಪ್ರಮುಖರಾಗಿ ಕಾರ್ಯಮಾಡಿದ್ದಾರೆ. ಸೋಷ್ ಕ್ಲಬ್ಬಿನ ಇಂದಿನ ಸುಂದರವಾದ ಕಟ್ಟಡವು ಇವರ ಪ್ರಯತ್ನ ಫಲವೆಂದೇ ಹೇಳಬೇಕು. ಸಾರ್ವಜನಿಕ ವಾಚನಾಲಯಕ್ಕೆ ಅ ಅನೇಕ ವರ್ಷಗಳಿಂದ ಅಧ್ಯಕ್ಷರಾಗಿ, ಅದನ್ನು ಅದೆಸ್ಟೊ ಊರ್ಜಿತ ವಸ್ಥೆಗೆ ತಂದಿದ್ದಾರೆ. ಭವ್ಯವಾದ ಗೋಪುರವನ್ನುಳ್ಳ ಪ್ರಶಸ್ತವಾದ ಕಟ್ಟಡವು, ಬೆಳಗಾಂವಿಯ ಪಟ್ಟಣಕ್ಕೇ ಭೂಷ ವನ್ನುಂಟು ಮಾಡಿದೆ. ಹೆಣ್ಣುಮಕ್ಕಳ ಹಾಯ್‌ಸ್ಕೂ ಶಿಕ್ಷಣಕ್ಕಾಗಿ ಬೆಳಗಾಂವಿಯಲ್ಲಿ ಸ್ವತಂತ್ರವಾದ ವ್ಯವಸ್ಥೆಯ ಇಲ್ಲದಿರುವ ಹೊತ್ತಿನಲ್ಲಿ, ಮಹಿಲಾ ವಿದ್ಯಾಲಯದ ಸಂಸ್ಥಾಪಕ ಯಲ್ಲಿ ಮುಖ್ಯ ಸಹಾಯಕರಾಗಿ, ಇಂದಿಗೂ ಅದಕ್ಕೆ ಆಧಾರಸ್ತಂಭ ರಾಗಿದ್ದಾರೆ.

ಸಾರ್ವಜನಿಕ ಜೀವನದಲ್ಲಿ ಬೆಳವಿರಾಯರ ಕೀರ್ತಿಯ ಕಳ ವೆಂದರೆ ಅವರ ಕಾನೂನುಮಂಡಲದ ಸದಸ್ಯತ್ವವೇ ಸರಿ. ಸರಕಾ ದಲ್ಲಿ ವರ್ಚಸ್ಸು ಬೆಳೆಯುವುದಕ್ಕೆ, ಜನತೆಯ ವಿಶ್ವಾಸ-ಗೌರ ಗಳು ದೊರೆಯುವುದಕ್ಕೆ, ಪರಪ್ರಾಂತಗಳಲ್ಲಿಯೂ ಇವರು ಹೆಸರ ವಾಸಿಯಾಗುವುದಕ್ಕೆ ಈ ಸದಸ್ಯತ್ವವೇ ಸಾಧನವಾಗಿದೆ. ಕಾಲಕ್ಕೆ ಮುಂಬೈ ಕಾನೂನುಮಂಡಲದಲ್ಲಿ ದಕ್ಷಿಣ ಭಾಗದ ಪ್ರತಿನಿಧಿಗಳಾಗಿದ್ದ ಬೆಳಗಾಂವಿಯ ನಾಲ್ವರು ವಕೀಲರು, ೧೯೧೯ ಮಾರ್ಚ್ ತಿಂಗಳಲ್ಲಿ ತೀರಿಕೊಂಡದ್ದರಿಂದ, ಅದೇ ಮೇ ತಿಂಗಳ್ಲ ನಡೆದ ಉಪಚುನಾವಣೆಯಲ್ಲಿ ಬೆಳವಿಯವರು ಜಯಶಾಲಿಗಳಾದರು ಧಾರವಾಡದ ರೊದ್ದ ಶ್ರೀನಿವಾಸರಾಯರೇ ಮೊದಲಾ ಆರು ಜನರು ಆಗ ಇವರಿಗೆ ಪ್ರತಿಸ್ಪರ್ಧಿಗಳಾಗಿದ್ದರು. ಮುಂ ಮರುವರ್ಷವೇ ನಡೆದ ಸಾರ್ವತ್ರಿಕ ಚುನಾವಣೆಯ ರಾವಬಹಾದ್ದೂರ್ ಕರಂದೀಕರರು ಪ್ರತಿಸ್ಪರ್ಧಿಗಳಾಗಿದ್ದರು ಇವರು ಶಿಕ್ಷಣಖಾತೆಯೊಳಗಿನ ನೌಕರಿಯಿಂದ ನಿವೃತ್ತಿಯನ್ನು ಪಡೆದು, ಈ ಚುನಾವಣೆಗೆ ನಿಂತಿದ್ದರು. ಕರಂದೀಕರರು ಬೆಳ ಯವರಿಗೆ ಗುರುಸ್ಥಾನದಲ್ಲಿದ್ದರೆಂಬುದನ್ನು ನಾವು ಹಿಂದೆಯೆ ಕಂಡುಕೊಂಡಿದ್ದೇವೆ. ಆದುದರಿಂದ ಅಂದಿನ ಚುನಾವಣೆಯ

ದುಬೆಯ ಕೃಷ್ಣಾರ್ಜುನ ಯುದ್ಧವೇ ಆಗಿತ್ತು. ಈ ಯುದ್ಧ
ಅರ್ಜುನನೇ ಗೆದ್ದ; ಕೃಷ್ಣನು ಬಿದ್ದ! ೧೯೩೫ರ ಚುನಾವಣೆ
ಲ್ಲಿ ಸರ್ ಸಿದ್ದಪ್ಪ ಕಂಬಳಿಯವರು ಎದುರಾಳಿಗಳಾಗಿದ್ದರೂ
ದುಸಿರಿಯು ಬೆಳವಿಯವರನ್ನೇ ವರಿಸಿದಳು. ೧೯೩೭ರ ಚುನಾ-
ಗಳು ನಡೆಯುವ ಮುನ್ನವೇ ಮಾಂಟೆಗ್ಯೂ-ಚೆಮ್ಸ್‌ಫರ್ಡ್
ಧಾರಣೆಗಳ ಉದಯವಾಗಿತ್ತು. ಪ್ರಾಂತಿಕ ಕಾನೂನು-
ಂಡಲದ ಕಾರ್ಯಕಲಾಪವನ್ನೆಲ್ಲ ಅರಿತುನುರಿತವರಾದ ಬೆಳವಿ
ವರು, ದಿಲ್ಲಿ ಅಸೆಂಬ್ಲಿಯ ಚುನಾವಣೆಗೆ ನಿಲ್ಲಬೇಕೆಂದು ಟಿಳಕರ
ನಾಕ್ರ್ಯಾಟಿಕ್ ಪಕ್ಷದವರು ನಿರ್ಧರಿಸಿದ್ದರು. ಅಷ್ಟರಲ್ಲಿ
ಳಕರ ನಿಧನವಾಯಿತು. ಗಾಂಧಿಯವರ ಅಸಹಕಾರದ ಆಣತಿ-
ನ್ನೊಪ್ಪಿ ಬೆಳವಿಯವರು ತಮ್ಮ ಹುರಿಯಾಳ್ತನವನ್ನು ಹಿಂದೆಗೆ
ು. ಕಾಂಗ್ರೆಸ್ಸಿನವರು ಕೌನ್ಸಿಲ್ ಬಹಿಷ್ಕಾರವನ್ನು ರದ್ದುಪಡಿಸಿದ
ಕ, ಪಂಡಿತ ಮೋತಿಲಾಲರ ನೇತೃತ್ವದಲ್ಲಿ ಕಾನೂನುಮಂಡಲ
ಳಗಿನ ಹೋರಾಟಕ್ಕೆ ಸ್ವರಾಜ್ಯಪಕ್ಷವು ಸಿದ್ಧವಾಗಲು, ೧೯೨೩
ಮತ್ತೆ ಬೆಳವಿಯವರನ್ನೇ ಚುನಾವಣೆಗೆ ನಿಲ್ಲಿಸಿದರು. ಆಗ
ಲಕರ್ಣಿ ಕರವೀರಪ್ಪನವರನ್ನು ಸೋಲಿಸಿ ಅರಿಸಿಬಂದರು.
ಅವರಲ್ಲಿ ಹುಲಕೋಟಿಯವರನ್ನೆದುರಿಸಿ ಹೋರಾಡಿದ ಚುನಾ-
ಯಂತೂ ಬಹಳ ತುರಸಿನದಾಗಿತ್ತು. ಇದರಲ್ಲಿಯೂ ಬೆಳವಿ
ವರೇ ಗೆದ್ದರು.

ಮುಂಬೈ ಕೌನ್ಸಿಲಿನ ಸದಸ್ಯರಾಗಿರುವಾಗ ಅಲ್ಲಿಯ ಕಾರ್ಯ-
ಾಪಗಳಲ್ಲಿ ಟಿಳಕರ ಸಲಹೆಯಂತೆಯೇ ವರ್ತಿಸುತ್ತಿದ್ದರು.
ಗಳಲ್ಲಿ ಲೋಕಮಾನ್ಯರು ಮಂಡಾಲೆಯಿಂದ ಬಿಡುಗಡೆಯಾಗಿ
ದಬಳಿಕ, ಬೆಳವಿಯವರು ಒಂದುದಿನ ಅವರ ಭೆಟ್ಟಿಗೆಂದು
ೀದರು. ಟಿಳಕರ ಮನೆಯಿಂದ ಹೊರಬಿದ್ದು ಬರುವಾಗ,
ಯೇ ಸುಳಿದಾಡುತ್ತಿದ್ದ ಗುಪ್ತಪೋಲೀಸನೊಬ್ಬನು ಇವರ
ರು-ದೆಸೆಗಳನ್ನೆಲ್ಲ ಬರೆದುಕೊಂಡನು. ಮುಂದೆ ಕೆಲವೇ ದಿನ-
ಲ್ಲಿ, ಬೆಳಗಾಂವಿಯ ಕಲೆಕ್ಟರರಾದ ಬ್ಯಾವುನಾರಿಂದ ಬೆಳವಿಯವ
ಕರೆಬಂದಿತು. "ಟಿಳಕರು ಸರಕಾರದ ಶತ್ರುಗಳಾಗಿರುವುದ
ದ, ಅವರ ಸಂದರ್ಶನಕ್ಕೆ ತಮ್ಮಂಥವರಾರೂ ಹೋಗಬಾರದೆಂದು
ಕಾರದ ಇಚ್ಛೆಯಿರುವದೆಂಬುದು ತಮಗೆ ಗೊತ್ತಿಲ್ಲವೆ?" ಎಂದು
ವೇಬರು ಕೇಳಿದರು. "ಸರಕಾರದ ಇಚ್ಛೆಯನ್ನು ನಾನು
ಾ ಒಲ್ಲೆ, ಆದರೆ ನಾನು ಮಾತ್ರ ಟಿಳಕರ ಭೆಟ್ಟಿಗೆ ಹೋಗತಕ್ಕ
ೇ; ಅವರ ಸಲಹೆಯನ್ನು ಪಡೆಯತಕ್ಕವನೇ. ಬೇಕಾದರೆ
ಕಾದವರು 'ಟಿಳಕರಿಗೆ ಭೆಟ್ಟಿಯಾಗುವರೂ ಬಂದು
ರಾಧ' ಎಂಬುದಾಗಿ ಪೀನಲ್‌ಕೋಡಿನಲ್ಲಿ ತಿದ್ದುಪಡಿ ಮಾಡಲಿ"
ಬುದಾಗಿ ಬೆಳವಿಯವರು ಗಂಡುತ್ತರವನ್ನಿತ್ತರು. ಟಿಳಕರ
ಬಂಧವಾಗಿ ಇವರು ಲಾರ್ಡ್ (ಆಗಿನ ಸರ್ ಬಾರ್ಜಾ)
ಯಿಡರಿಗೆ ಕೊಟ್ಟ ಉತ್ತರವೂ ಎಂದಿಗೂ ಮರೆಯದಂತಹದೇ
ು. ಹಿಂದುಸ್ಥಾನದ ಹಿತವಿರೋಧಿಗಳೆಂಬುದಾಗಿ ಸಾಕಷ್ಟು
ಪ್ರಸಿದ್ಧಿಯನ್ನು ಪಡೆದಿರುವ ಈ ಸಾಹೇಬರು, ಟಿಳಕರ ನಿಧನದ
ಲಕ್ಕೆ ಮುಂಬಯಿಯ ಗವರ್ನರರಾಗಿದ್ದರು. ಗವರ್ನರರೆಂದ
ಬಳಿಕ ಆಗಿನ ಕಾನೂನುಮಂಡಲಕ್ಕೂ ಅವರೇ ಅಧ್ಯಕ್ಷರು.
ಟಿಳಕರಾದರೂ ಹಿಂದೊಮ್ಮೆ ಆ ಕಾನೂನು ಮಂಡಲದ ಸದಸ್ಯರೇ
ಆಗಿದ್ದುದರಿಂದ, ಅವರ ನಿಧನದ ಬಗೆಗೆ ಅನುತಾಪವನ್ನು ಸೂಚಿಸುವ
ಗೊತ್ತುವಳಿಯನ್ನು ಬೆಳವಿಯವರು ಗವರ್ನರಾಧ್ಯಕ್ಷರೆಡೆಗೆ
ಕಳುಹಿದರು. ಟಿಳಕರಿಗೆ ಯಾರೂ ಭೆಟ್ಟಿಯಾಗಬಾರದೆಂಬ ಧೋರಣೆ
ಯಿಂದ ಸಾಗಿದ್ದ ಸರಕಾರಕ್ಕೆ ಸೂತ್ರಧಾರಿಗಳಂತಿದ್ದ ಗವರ್ನರರು
ಟಿಳಕರ ನಾಮನಿರ್ದೇಶವುಳ್ಳ ಗೊತ್ತುವಳಿಯನ್ನು ಕೌನ್ಸಿಲಿನಲ್ಲಿ
ಬರಗೊಡುವರೆ? ಅವರು ಬೆಳವೀರಾಯರನ್ನು ಚೇಂಬರಿನಲ್ಲಿ ಕರೆದು
ಸವಿಮಾತಿನ ಸಕ್ಕರೆಯನ್ನೇ ಸುರಿಸಿ ನೋಡಿದರು. "ಟಿಳಕರ
ವಿಷಯಕ್ಕೆ ನನಗೂ ಆದರವಿದೆ. ಅಂತೆಯೆ ನಾನು ಚೌಪಾಟಿಯಂತಹ
ಸಾರ್ವಜನಿಕ ಸ್ಥಳದಲ್ಲಿ ಅವರ ದಹನವಿಧಿಯಾಗುವುದಕ್ಕೆ ಸಮ್ಮತಿ
ಯನ್ನಿತ್ತೆ. ಆದರೆ ನಿಮ್ಮ ಗೊತ್ತುವಳಿಯನ್ನು ಕೌನ್ಸಿಲಿನಲ್ಲಿ
ಹೇಗೆ ಮಂಡಿಸಲಿಕ್ಕೆ ಬಂದೀತು?" ಎಂದು ಕೇಳಿದರು. ಬೆಳವಿ
ಯವರು ತಮ್ಮ ಭೂಮಿಯಿಂದ ಸ್ವಲ್ಪವೂ ಚಲಿಸಲಿಲ್ಲ. ಕೊನೆಗೆ
ಲಾಯಿಡ್‌ಸಾಹೇಬರು "ನಿಯಮದಂತೆ ಅವಶ್ಯವಿರುವ ಅವಧಿ
ಯಷ್ಟು ಮುಂಚಿತವಾಗಿಯೇ ಈ ಗೊತ್ತುವಳಿಯ ಪೂರ್ವ-
ಸೂಚನೆಯು ಬಂದಿಲ್ಲವಾದ್ದರಿಂದ, ಇದು ನಿಯಮಬಾಹ್ಯ"
ಎಂದು ಸಾರಿದರು. "ಯುವರಾಜನು ಟಿಳಕರನ್ನು ಕರೆದೊಯ್ಯುವ
ಮೊದಲು, ಅತನೇನೂ ಅವರಿಗೆ ಇಂತಿಷ್ಟು ಅವಧಿಯ ನೋಟೀಸು
ಕೊಡಲಿಲ್ಲ; ಆದುದರಿಂದ ಟಿಳಕರೂ ತಮ್ಮ ನಿಧನವು ಇಂಥ ದಿವಸವೇ

ತಲೆನೋವು, ನೆಗಡಿ, ಕಾಲರಾ,
ಉರಿ ಮುಂತಾದ ಶಾರೀರಿಕ
ರೋಗಗಳ ಮೇಲೆ

"ರಜಿಸ್ಟರ್ಡ್"

ನೀಲಗಿರಿ ಅರ್ಕ
NILGIR ARK

ಪ್ರತಿ ಒಂದು ಹನಿ ಗುಣದ ಪ್ರಭಾವ
ತೋರಿಸುತ್ತದೆ.

ಬಾಟಲಿ ಕಿಮ್ಮತ್ತು ೪ ಆಣೆ.

ಸ್ಟಾರ್ ಕಂಪನಿ, ಬೆಳಗಾಂವಿ

ಆಗುವುದೆಂದು ಜನರಿಗೆ ನೋಟೀಸು ಕೊಡಲಿಲ್ಲ. ಹಾಗೆ ತಮ್ಮ ನಿಧನದ ನೋಟೀಸನ್ನು ಅದರು ಮುಂಚಿತವಾಗಿಯೇ ಕೊಟ್ಟಿದ್ದರೆ ನಾನಾದರೂ ನಿರ್ದಿಷ್ಟ ಅವಧಿಯೊಳಗಾಗಿಯೇ ನನ್ನ ಗೊತ್ತು-ವಳಿಯ ನೋಟೀಸನ್ನೂ ನಿಮಗೆ ಕಳುಹಿಸುತ್ತಿದ್ದೆ ! ನೋಟೀಸು ಕೊಡದೆ ಟಿಳಕರನ್ನೊಯ್ದ ಯಮಧರ್ಮನಿಗೇನು ಮಾಡುವುದಿದೆ?" ಎಂದು ಬೆಳವಿಯವರು ತಿರುಗಿ ಕೇಳಿದರು.

ಲಾರ್ಡ್ ವಿಲಿಂಗ್ಡನ್ನರ ನೀರು ಇಳಿಸಿದ ಕಥೆಯೂ ಇದೇ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ. ಈ ದೊರೆಗಳು ಗವ್ಹರ್ನರರಾಗಿರುವಾಗ, ಸೊಲ್ಲಾಪುರದಲ್ಲಿ ಒಮ್ಮೆ ಭಾಷಣ ಮಾಡುತ್ತ "ಇತ್ತಿತ್ತಲಾಗಿ ಜನರ ತಲೆಯೇ ಕೆಟ್ಟು ಹೋಗಿದೆ. (People have lost their head)" ಎಂದು ಹೇಳಿದರು. ಬೆಳವಿಯವರು ಬೆಳಗಾಂವಿಯ ಹನುಮಂತ ಗುಡಿಯಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ವಿಲಿಂಗ್ಡನ್ನರ ವಿಧಾನವನ್ನು ಖಂಡಿಸುತ್ತ "ಜನತೆಯ ತಲೆಯೇನೂ ಕೆಟ್ಟಿಲ್ಲ; ತಮ್ಮ ತಲೆಯೇ ಕೆಟ್ಟಿದೆಯೋ ಹೇಗೆಂಬುದನ್ನು ಗವ್ಹರ್ನರರು ಸರ್ಜನ್ ಜನರಲ್‌ರಿಂದ ಪರೀಕ್ಷೆ ಮಾಡಿಸಿಕೊಳ್ಳಬೇಕು. ಕೌನ್ಸಿಲಿನಲ್ಲಿ ಅವರು ನನ್ನನ್ನು ಯಾವಾಗಲೂ 'my friend mr. Belvi' ಎಂದು ಸಂಬೋಧಿಸುತ್ತಾರೆ. ಈ ಮಿತ್ರತ್ವದ ಅಧಿಕಾರದಿಂದಲೇ ನಾನವರಿಗೆ ಸಲಹೆ ಕೊಡುತ್ತಿದ್ದೇನೆ" ಎಂದು ನುಡಿದರು. ವೋಲೀಸುವರದಿಗಾರರ ಲೆಕ್ಕಣಿಕೆಯ ಮಾರ್ಗವಾಗಿ ಈ ನುಡಿಗಳು ಲಾಟ ಸಾಹೇಬರ ಕಿವಿಯವರೆಗೂ ಪ್ರವಾಸ ಮಾಡಿದುವು. ಮುಂದೆ ವಿಲಿಂಗ್ಡನ್ನರು ಬೆಳಗಾಂವಿಗೆ ಬಂದರು. ಆಗ ಬೆಳವಿಯವರು ನಗರಾಧ್ಯಕ್ಷರು. ಶಳಕವಾಡಿಯ ವಿಸ್ತರಣವನ್ನು ನಿರೀಕ್ಷಿಸಲು ಗವ್ಹರ್ನರರೂ ಬೆಳವಿಯವರೂ ಕೂಡಿಯೇ ಹೋದರು. **ಧೂಮೆ**ಯವರ ಬಂಗಲೆಯ ಆವರಣದಲ್ಲಿ ವಿಲಿಂಗ್ಡನ್ನರು "ನನ್ನ ತಲೆ ಕೆಟ್ಟಿಲ್ಲವೆಂಬುದನ್ನು ನಿಮಗೆ ಮನಗಾಣಿಸುವುದಕ್ಕಾಗಿಯೇ ನಾನು ಬೆಳಗಾಂವಿಗೆ ಬಂದಿದ್ದೇನೆ, ಬೆಳವಿಯವರೆ!" ಎಂದರು. ತಾವು ಸಭೆಯಲ್ಲಾಡಿದ ಮಾತುಗಳ ಕುನುಸು ಹಿಡಿದು ವಿಲಿಂಗ್ಡನ್ನರು ಹೀಗೆಂದುದನ್ನು ಕೇಳಿದೊಡನೆ "ಸರಿ, ಹಾಗಾದರೆ; ಈ ನಿಮ್ಮ ಕೈಕೆಳಗಿನ ನೌಕರರಾಗಿರುವ ಕಲೆಕ್ಟರ್ ಕಮಿಶನರರನ್ನು ಆಚೆಗೆ ಕಳುಹಿಸಿರಿ; ಎಂದರೆ ನಿಮ್ಮೊಬ್ಬರಿಗೇ ಏನು ಉತ್ತರ ಹೇಳಬೇಕೋ ಹೇಳುತ್ತೇನೆ. ನಿಮ್ಮ ನೌಕರರೆದುರಿಸಲ್ಲಿಯೇ ನಿಮಗೆ ಹೆಚ್ಚು ಕಡಿಮೆ ಮಾತಾಡುವ ಮನಸ್ಸು ನನಗಿಲ್ಲ" ಎಂದರು. ಬೆಳವಿಯವರ ಬಲುಹು-ಬಿಗುಹುಗಳನ್ನು ಕಂಡು ಸಾಹೇಬರು ಬೆಪ್ಪಾಗಿ ಹೋದರು. 'ಶೇಷಂ ಹಾಸ್ಯೇನ ಪೂರಯೇತ್' ಎಂದಂದು ಸುಮ್ಮನೆ ನಕ್ಕುಬಿಟ್ಟರು. ಮಾತು ಬಂದಾಗ ಸೋತು ಹೋದವನೇ ಜಾಣ !

* * *

ಕೊಲ್ಲಾಪುರದ ಶಾಹೂಛತ್ರಪತಿಗಳ ಆಡಳಿತದ ವಿಷಯಕ್ಕೆ ಬೆಳವಿರಾಯರು ಸಾರ್ವಜನಿಕ ಸಭೆಯಲ್ಲಾಡಿದ ನ್ಯಾಯನಿಷ್ಠುರ ನುಡಿಗಳಿಂದ ಇಡಿಯೆ ಇಲಾಖೆಯಲ್ಲಿಯೂ, ನೆರೆಹೊರೆಯ ಸಂಸ್ಥಾನಗಳಲ್ಲಿಯೂ ಅನೇಕ ದಿನಗಳ ವರೆಗೆ ಉಲ್ಲೋಲಕಲ್ಲೋಲವೆ ಗಿತ್ತು. ರಾಜರು ಮಹಾರಾಜರುಗಳ ಮನೋವಿರುದ್ಧ ಪಿಟ್ಟೆಂದು ಬಾಯಿಬಿಡುವುದು ಕೂಡ ಮಹಾಸಾಹಸದ ಕೃ ವೆಂಬುದು ಇಂದಿಗೂ ಕಂಡುಬರುತ್ತಿರುವಾಗ, ಇಪ್ಪತ್ತು ವರ್ಷ ಹಿಂದೆ, ತುಂಬಿದ ಸಭೆಯಲ್ಲಿ ಮುಚ್ಚುಮರೆಯಿಲ್ಲದೆ ಮಹಾ ರನ್ನು ಟೀಕಿಸಿದ ಬೆಳವಿಯವರ ಮನೋಧೈರ್ಯವು ಅ ದ್ಭು ವಾದುದೇ ಸರಿ. ಅನೇಕಾನೇಕ ಸಭೆ-ಸಮ್ಮೇಲನಗಳಿಗೆ ಅಧ್ಯ ರಾದಂತೆ ಬೆಳವಿಯವರು ಕೊಲ್ಲಾಪುರ ಸಂಸ್ಥಾನದ ಕುಲಕ ಯರ ಅಥವಾ ಶಾನುಭೋಗರ ಪರಿಷತ್ತಿಗೂ ಅಧ್ಯಕ್ಷರಾಗಿದ್ದ ಆಗ ಅಲ್ಲಿಯ ಕುಲಕರ್ಣಿಗಳಿಗೆ ಪರಿಪರಿಯಿಂದ ಪೀಕೆ ಬಂದಿದ್ದುದರಿಂದ, ಸಂಸ್ಥಾನದ ಸೀಮೆಯಲ್ಲಿ ಪರಿಷತ್ತು ಕೂ ವುದು ಕೂಡ ಅಸಾಧ್ಯವಾಗಿ, ಆ ಸೀಮೆಗೆ ಸವಿಾಪದಲ್ಲಿ ಇರುವ ಸಂಕೇಶ್ವರದಲ್ಲಿ ಅವರು ಸಭೆಗೂಡಿದ್ದರು. ಬೆಳವಿಯ ಅಧ್ಯಕ್ಷಸ್ಥಾನದಿಂದ ಆಪ್ಪಣೆಕೊಡಿಸಿದ ಭಾಷಣದಲ್ಲಿ " man's life is safe, no man's wife is safe no mans property is safe in the kingdom Kolhapur. ಕೊಲ್ಲಾಪುರ ಸಂಸ್ಥಾನದಲ್ಲಿ ಯಾರೊಬ್ಬರ ಜೀವಿತಗಳೂ ಸುರಕ್ಷಿತವಾಗಿಲ್ಲ, ಯಾರೊಬ್ಬರ ಹೆಂಡತಿ ಸುರಕ್ಷಿತವಾಗಿಲ್ಲ" ಎಂಬುದಾಗಿ 'ಒಂದು ಕಡತ ಎರಡು ತುಂ ಎಂಬಂತಹ ಮಾತುಗಳನ್ನಾಡಿದರು. ಆಯಿತು; ಎಲ್ಲಿ ನೋಡಿ ಕಲಕಲವು ಕೇಳಬರತೊಡಗಿತು. ಹಿಂದುಸ್ತಾನ ಸರಕಾ ಪೊಲಿಟಿಕಲ್ ಖಾತೆಯ ವರೆಗೂ ದೂರು ಹೋದುದರಿ ಬೆಳಗಾಂವಿಯ ಕಲೆಕ್ಟರರಾದ **ಮ್ಯಾಗ್ರಿಗಾರರು** ಬೆಳವಿಯವರ ಕರೆಯಿಸಿ 'ಹೀಗೇಕೆ ಮಾತಾಡಿದಿರಿ?' ಎಂದು ಕೇಳಿದರು. ಆ ನಡೆಯುವಷ್ಟರಲ್ಲಿಯೆ ಅತ್ತ ನಾಗಪುರದಲ್ಲಿ ಒಂದು ಸಭೆ ಕೂಡಿದಾಗ, ಸ್ವತಃ **ಶಾಹೂಮಹಾರಾಜರೇ** ಬೆಳವಿಯವ ಉತ್ತರರೂಪವಾಗಿ ಹೀಗೆ ನುಡಿದಿದ್ದರು: "ನಾ ಮ ಬೆಳವಿಯವರು ನನ್ನ ಆಡಳಿತದ ಮೇಲೆ ಟೀಕೆ ಮಾಡಿದ ಅವರು ಹೇಳಿದಂತೆಯೇ ನಮ್ಮ ಸಂಸ್ಥಾನದ ಪರಿಸ್ಥಿತಿಯಿರಬಹು ಆದರೆ ಈ ಪರಿಸ್ಥಿತಿಗೆ ನಾನುತ್ತರಿಹೊಣೆಗಾರನಲ್ಲ; ನನ್ನ ಸಂಸ ದೊಳಗಿನ ಕುಲಕರ್ಣಿಗಳೇ ಹೊಣೆಗಾರರು." ಎಂ ಮಹಾರಾಜರ ಈ ಭಾಷಣವು ಮುಂಬಯಿಯ 'ಇಂದು ಪ್ರಕಾ ದಲ್ಲಿ ಆಚ್ಚಾಗಿ ಬಂದಿತ್ತು. ಮ್ಯಾಗ್ರಿಗಾರರ ಬಳಿಗೆ ಹೋಗುವ ಬೆಳವಿಯವರು ಈ ವೃತ್ತಪತ್ರದ ತುಣುಕನ್ನು ಜೇಬಿನಲ್ಲಿ ಇ ಕೊಂಡೇ ಹೋಗಿದ್ದರು. ಕಲೆಕ್ಟರರು ವಿಷಯವನ್ನು ಪ್ರಸ್ತಾಪಿ ಕೂಡಲೆ ಅದನ್ನು ಅವರ ಮೋರೆಗೆ ಹಿಡಿದು "ಸ್ವತಃಮಹಾರಾ ನನ್ನ ಟೀಕೆಯನ್ನು ಒಪ್ಪಿಕೊಂಡಿದ್ದಾರೆ; ಎಂದಬಳಿಕ ನೀವೆ ಕೇಳುತ್ತೀರಿ?" ಎಂದರು. ಮುಂದೆ ಮಹಾರಾಜರು ಮುಂಬ ಯಲ್ಲಿ ದೊಡ್ಡ ದೊಡ್ಡ ಕಾಯಿದೆ ಪಂಡಿತರ ಸಲಹೆ ಪಡೆದರೆಂ ಬೆಳವಿಯವರನ್ನು ಕಟ್ಟಳೆಗೀಡು ಮಾಡುವರೆಂದೂ ಸುದ್ದಿಯೆದ್ದಿ ಆದರೆ ಖಟ್ಲೆಯೇನೂ ಆಗಲಿಲ್ಲ. ಗುಡುಗಿನ ಆರ್ಭಟವೇನ ಬಹಳವಾಯಿತು; ಮಳೆಯೇ ಬೀಳಲಿಲ್ಲ !

ಬ್ರಿಟಿಶ್ ಸೀಮೆಯೊಳಗಿನ ಕುಲಕರ್ಣಿಯರಿಗೆ ಅನ್ಯಾಯವಾಗದಂತೆ, ಅವರ ಉಂಬಳಿಗಳು ರದ್ದಾಗದಂತೆ, ಬೆಳವಿಯವರು ಮುಂಬಯಿ ಕಾನೂನು ಮಂಡಲದಲ್ಲಿ ಬಹಳ ದಕ್ಷತೆ ವಹಿಸಿದರು. ಕೌನ್ಸಿಲಿನೊಳಗಿನ ಇವರ ಬೇರೆ ಕಾರ್ಯಗಳಲ್ಲಿ ಅಸ್ಪೃಶ್ಯತಾ ನಿವಾರಣೆ (ಸಾರ್ವಜನಿಕ ಸ್ಥಳಗಳಲ್ಲಿ ಅವರಿಗೆ ಅನಿರ್ಬಂಧವಾಗಿ ಪ್ರವೇಶಕೊಡುವುದು), ಬೆಳಗಾಂವಿಯ ಕೋರ್ಟುಗಳಿಂದ ಜ್ಯೂರಿ ಪದ್ಧತಿಯನ್ನು ಕಿತ್ತುಹಾಕಬೇಕೆಂಬ ಯೋಜನೆಗೆ ವಿರೋಧ ಮೊದಲಾದುವುಗಳು ಮುಖ್ಯವೆಂದು ಹೇಳಬಹುದು. ಮುಂಬೈ ಕರ್ನಾಟಕದಲ್ಲಿ ಮಹಾವಿದ್ಯಾಲಯವೊಂದೂ ಇಲ್ಲದಿರುವಾಗ, ಆ ಕೊರತೆಯನ್ನು ಹೋಗಲಾಡಿಸಲು **ಕರ್ನಾಟಕ ಆರ್ಟ್ಸ್ ಕಾಲೇಜಿನ** ಸ್ಥಾಪನೆಗೈಯುವ ಎತ್ತುಗಡೆಯಲ್ಲಿ, ಕೌನ್ಸಿಲಿನ ಒಳಗೂ ಹೊರಗೂ ಸಶಯವಾಗಿಯೇ ದುಡಿದರು. ಕಾಲೇಜನ್ನು ಸ್ಥಾಪಿಸಬೇಕಾದರೆ ಕರ್ನಾಟಕದ ಜನತೆಯು ಎರಡು ಲಕ್ಷ ರೂಪಾಯಿಗಳನ್ನು ಕೂಡಿಸಿ ಕೊಡಬೇಕೆಂದು ಸರಕಾರದವರು ಕರಾರು ಹಾಕಲು, ಬೆಳಗಾಂವಿ ಜಿಲ್ಲೆಯ ಪಾಲಿನ ಹೊಣೆಯನ್ನು ಇವರೇ ಹೊತ್ತರು. ಸ್ವತಃ ಎರಡು ಸಾವಿರ ರೂಪಾಯಿಗಳನ್ನು ಕೊಟ್ಟರು. (ಬೇರೆ ಬೇರೆ ಸಂಸ್ಥೆಗಳಿಗೆಲ್ಲ ಇವರು ಇಂದಿನವರೆಗೆ ಇಪ್ಪತ್ತು ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಿಗೆ ಧನಸಹಾಯ ಮಾಡಿದ್ದಾರೆ.) ಜಿಲ್ಲೆಯನ್ನೆಲ್ಲ ಸುತ್ತಿ, ನಿರ್ದಿಷ್ಟವಾದುದಕ್ಕಿಂತ ಮೂರುಸಾವಿರ ರೂಪಾಯಿಗಳನ್ನು ಹೆಚ್ಚಾಗಿ ಸಂಗ್ರಹಿಸಿದರು. ಈ ಹೆಚ್ಚಿನ ಹಣದ ಬಡ್ಡಿಯಲ್ಲಿಯೇ ಈಗ ಕರ್ನಾಟಕ ಕಾಲೇಜಿನ "**ವಿದ್ಯಾರಣ್ಯ ಪಾರಿತೋಷಕ**"ವನ್ನು ಕೊಡಲಾಗುತ್ತಿದೆ.

ಕರ್ನಾಟಕತ್ವಕ್ಕೆ **ಪೋಷಕ**ವಾದ ಇವರ ಬೇರೆ ಕೊಡುಗೆಗಳನ್ನೂ ಇದೇ ಸಂದರ್ಭದಲ್ಲಿ ಅವಲೋಕಿಸಬಹುದು. **ಕರ್ನಾಟಕ ವಿದ್ಯಾವರ್ಧಕ ಸಂಘ**ಕ್ಕೆ ನಾನೂರು ರೂಪಾಯಿಗಳ, **ಸಂಯುಕ್ತ ಕರ್ನಾಟಕ**ಕ್ಕೆ ಸಾವಿರ ರೂಪಾಯಿಗಳ ಸಹಾಯ ಮಾಡಿದ್ದಾರೆ. ಬೆಳಗಾಂವಿಯಲ್ಲಿ ಹೊರಡಿಸಲಾಗಿದ್ದ **ಕರ್ನಾಟಕ ಮಿತ್ರ, ಕರ್ನಾಟಕವೃತ್ತ** ವಾರಪತ್ರಿಕೆಗಳಿಗೂ ಇವರಿಂದ ಧನಸಹಾಯವಾಗಿದೆ. ವರ್ತಮಾನಪತ್ರಗಳಿಗೆ ಇವರು ಕೊಟ್ಟಿರುವ ಧನಸಹಾಯವು, ಮುಂದಿನ ಚುನಾವಣೆಗಳೇ ಮೊದಲಾದ ಪ್ರಸಂಗಗಳಲ್ಲಿ ಅವುಗಳಿಂದ ಪ್ರಚಾರದ ಲಾಭವನ್ನು ಪಡೆಯಲು ತೊಡಗಿಸಿದ ಬಂಡವಾಳವಲ್ಲ; ಅಥವಾ ರಾಜಕಾರಣಾತ್ಮಕ ದಾನರೂಪದ ಲಂಚವಲ್ಲವೆಂಬುದು ಮೊನ್ನಿನ ಕೌನ್ಸಿಲ್ ಚುನಾವಣೆಯ ಕಾಲಕ್ಕೆ ಕಂಡುಹೋಗಿದೆ. ಬೆಳಗಾಂವಿಯಲ್ಲಿ ಕೂಡಿದ ಐದೂ ಸಾಹಿತ್ಯ ಸಮ್ಮೇಲನಗಳಿಗೆ (ಮೂರು ಸ್ಥಾಂತಿಕ ಮತ್ತು ಎರಡು ಜಿಲ್ಲಾ ಸಮ್ಮೇಲನಗಳು) ದುಡ್ಡು ಕೊಟ್ಟಿದ್ದಾರೆ. ೧೯೩೫ ರ ಸಾಹಿತ್ಯ-ಸಮ್ಮೇಲನದ ಅಧಿವೇಶನವು ಬೆಳಗಾಂವಿಯ ಶಿವಾಸಂದ ನಾಟ್ಯಶಾಲೆಯಲ್ಲಿ ಸಾಗಿರುವಾಗ, ಶ್ರೀ. ಉತ್ತಂಗಿ ಚೆನ್ನಪ್ಪನವರು ಸರ್ವಜ್ಞ ಕವಿಯ ಗ್ರಂಥವನ್ನು ಸಂಪಾದಿಸಿ ಪ್ರಕಟಿಸುವ ವಿಷಯದಲ್ಲಿ ವಹಿಸಿದ ಶ್ರದ್ಧೆ-ಶ್ರಮಗಳನ್ನು ಕಂಡುಕೇಳಿ, ಅವರಿಗೆ ಬೆಳವಿರಾಯರು ಅಲ್ಲಿಂದಲ್ಲಿಯೇ ನೂರು ರೂಪಾಯಿಗಳನ್ನು ಕೊಟ್ಟು ಗೌರವಿಸಿದ ಸಂಗತಿಯನ್ನು ಕನ್ನಡಿಗರು ಮರೆತಿರಲಿಕ್ಕಿಲ್ಲ. ಬರಿಯೆ ಧನದಿಂದಲ್ಲದೆ ತನು-ಮನಗಳಿಂದಲೂ ಇವರು ಕರ್ನಾಟಕತ್ವಕ್ಕೆ ನೆರವಾದ ಉದಾಹರಣೆಗಳು ಹೇರಳವಾಗಿವೆ. ೧೯೨೯ರಲ್ಲಿ ಬೆಳಗಾಂವಿಯಲ್ಲಿ ಕೂಡಿದ ಕರ್ನಾಟಕ ಏಕೀಕರಣ ಪರಿಷತ್ತಿಗೆ ಸ್ವಾಗತಾಧ್ಯಕ್ಷರಾಗಿದ್ದರು. ಹಿಂದೊಮ್ಮೆ ಬೆಳಗಾಂವಿಗೆ ಗವರ್ನರರು ಬಂದಾಗ, ಏಕೀಕರಣವು ಕರ್ನಾಟಕದ ಜೀವಾಳದ ವಿಷಯವಾಗಿರುವುದೆಂಬದನ್ನು ಅವರಿಗೆ ತಿಳಿಸಿಬಂದರು. ಬಳ್ಳಾರಿಯನ್ನು ಆಂಧ್ರರು ತಮ್ಮ ವಿಶ್ವವಿದ್ಯಾನಿಲಯದಲ್ಲಿ ಸೆಳೆದುಕೊಳ್ಳುತ್ತಿದ್ದ ಹೊತ್ತಿಗೆ, ಕನ್ನಡಿಗರ ಪರವಾಗಿ ಮದರಾಸಿನವರೆಗೂ ಹೋಗಿ ಹೋರಾಡಿ ಬಂದರು. ಹದಿನಾಲ್ಕು ವರ್ಷಗಳ ಹಿಂದೆ ನವರಾತ್ರಿಯು ಕರ್ನಾಟಕದ ನಾಡಹಬ್ಬವಾಗಿ ಪರಿಣಮಿಸಿದಂದಿನಿಂದಲೂ ಪ್ರತಿವರ್ಷ ಆದರಲ್ಲಿ ಆಸ್ಥೆಯಿಂದ ಭಾಗವಹಿಸುತ್ತ ಪ್ರೋತ್ಸಾಹಿಸುತ್ತ ಬಂದಿದ್ದಾರೆ. ಬೆಳಗಾಂವಿಯ ಕರ್ನಾಟಕ ಸಂಘವು ಹುಟ್ಟಿದಂದಿನಿಂದ ಮೊನ್ನೆಮೊನ್ನೆಯವರೆಗೂ ಅಧ್ಯಕ್ಷರಾಗಿದ್ದರು.

ಬೆಳವಿಯವರು ಮರಾಟಿಯ ಪಕ್ಷಪಾತಿಗಳು ಅಥವಾ ಕನ್ನಡದ ವಿಷಯಕ್ಕೆ ಉದಾಸೀನರೆಂಬುದಾಗಿ ಕೆಲವೆಡೆಗಳಲ್ಲಿ ಹರಡಿರುವ ತಿಳಿವಳಿಕೆಯು ಎಷ್ಟೊಂದು ತಪ್ಪೆಂಬುದು ಇದರಿಂದ ತಿಳಿದುಬರುವಂತಿದೆ. ಕನ್ನಡ-ಮರಾಟಿ ವಾದದ ವಿಷಯದಲ್ಲಿ ಇವರು ಸಮನ್ವಯವಾದಿಗಳೆಂಬುದು ನಿಜ. ಬೆಳಗಾಂವಿಯ ಪಟ್ಟಣದಲ್ಲಿ ಉಭಯ ಭಾಷೆಗಳೂ ಪ್ರಚಾರದಲ್ಲಿರುವುದರಿಂದ, ಒಂದು ಭಾಷೆಯ

ಗಜಕರ್ಣ, ಹುರುಕು, ತದ್ದು ಮುಂತಾದ
ತ್ವಚರೋಗದಿಂದ ಪೀಡಿತರಾದ
ಜನರಿಗೆ
ರಜಿಸ್ಟರ್ಡ್
ಗೋವಾ ಮುಲಾಮು
GOA OINTMENT
ಗುಣ ಬಾರದಿದ್ದಲ್ಲಿ
ಹಣ ತಿರುಗಿ ಕೊಡುವ ಗ್ಯಾರಂಟಿಯಿಂದ
ಮಾರಲ್ಪಡುತ್ತದೆ.
ಬಾಟಲಿ ಕಿಮ್ಮತ್ತು ೪ ಆಣೆ.
ಸ್ಟಾರ್ ಕಂಪನಿ ಬೆಳಗಾಂವಿ

ಜನರು ಇನ್ನೊಂದು ಭಾಷೆಯವರನ್ನು ಹೊಡೆದೋಡಿಸುವ ಪ್ರಯತ್ನ ಮಾಡಬಾರದೆಂದು ಇವರ ಅಭಿಪ್ರಾಯವಿದೆ. ಇಲ್ಲಿ ಮರಾಟಿಯ ಪ್ರಚಾರವಿರುವುದರಿಂದ ಇದು ಮಹಾರಾಷ್ಟ್ರದ ಭಾಗವೆಂದು ಯಾರಾದರೂ ವಾದಿಸಿದರೆ ಅದನ್ನು ತಾವು ಸಹಿಸಲಾರೆವೆಂದೂ ಸ್ಪಷ್ಟವಾಗಿ ಹೇಳಿದ್ದಾರೆ. "ಎದ್ದರೆ ಕನ್ನಡ ಕುಳಿತರೆ ಕನ್ನಡ" ಎಂಬ ಜ್ವಲತ್‌ಕನ್ನಡಿಗರೇನೂ ಇವರಲ್ಲ; ಬೆಳವಿರಾಯರ ತಲೆಮಾರಿನವರಲ್ಲಿ ಅಂತಹ ಕನ್ನಡಿಗರು ಎಷ್ಟು ಜನ ಹೊರಡಬಹುದು? ಆದರೆ ಮಹಾರಾಷ್ಟ್ರೀಯರ ನ್ಯೂನಾತಿರೇಕಗಳನ್ನು, ಅವರ ಮುಖಂಡರಾದ ಕೇಳಕರರು ಅಣೆಯುವರೇ ಮೊದಲಾದವರ ಸಮ್ಮುಖದಲ್ಲಿ ಬಿಚ್ಚಿ ಹೇಳುವ ವಿಷಯದಲ್ಲಿ, ಯಾವ ಉರಿಗನ್ನಡಿಗನೂ ಬೆಳವಿಯವರನ್ನು ಸರಿಗಟ್ಟಿಲ್ಲ. ಮಹಾರಾಷ್ಟ್ರೀಯರ ಆಕ್ರಮಣವು ಅತಿರೇಕವಾದಾಗಲೆಲ್ಲ ಅದನ್ನಿವರು ಕಠೋರವಾಗಿ ಟೀಕಿಸಿದ್ದಾರೆ. "ನಿಮ್ಮ ಸಂಘ-ಸಂಸ್ಥೆಗಳಿಗೆ ದುಡ್ಡು ಬೇಕಾದಾಗಲೆಲ್ಲ ನೇರವಾಗಿ ಬೆಳಗಾಂವಿ-ಧಾರವಾಡಗಳಿಗೇ ಬಂದು ದಾಳಿಯಿಡುತ್ತೀರಿ; ಬೇರೆ ಯಾವ ದಿಕ್ಕುಗಳೆ ನಿಮಗಿಲ್ಲವೆ?" ಎಂದು ಅವರನ್ನು ಮೂದಲಿಸಿದ್ದಾರೆ. ಕರ್ನಾಟಕ ಆಯುರ್ವೇದ ವಿದ್ಯಾಪೀಠದ ಸಂಸ್ಥಾಪಕರಾದ ಕಂಕಣವಾಡಿ ಬಸಪ್ಪನವರು, ತಮ್ಮ ಸಂಸ್ಥೆಗೆ ಮಹಾರಾಷ್ಟ್ರದಿಂದ ಒಂದೆರಡು ಸಾವಿರ ರೂಪಾಯಿಗಳನ್ನು ಸಂಗ್ರಹಿಸಿಕೊಂಡು ಬರಲು, ಬೆಳವಿಯವರು "ಇಂದಿನ ವರೆಗೆ ಮಹಾರಾಷ್ಟ್ರದವರೇ ಕರ್ನಾಟಕದಿಂದ ಬೇಕಾದಷ್ಟು ಹಣ ಸೆಳೆದೊಯ್ಯುತ್ತಿದ್ದರು. ಕರ್ನಾಟಕದ ಸಂಸ್ಥೆಗೆ ಮಹಾರಾಷ್ಟ್ರದಿಂದ ಹಣ ದೊರಕಿಸಿದವರಲ್ಲಿ ಬಸಪ್ಪನವರೇ ಮೊದಲಿಗರು. ಇವರನ್ನು ಎಷ್ಟು ಅಭಿನಂದಿಸಿದರೂ ಕಡಿಮೆ!" ಎಂದು ಸಭೆಯಲ್ಲಿ ಸಾರಿದರು.

ಮೊನ್ನೆಯ ಕೌನ್ಸಿಲ್ ಚುನಾವಣೆಯಲ್ಲಿ ಬೆಳವಿಯವರು ಕಾಂಗ್ರೆಸ್ಸಿನ ವಿರುದ್ಧವಾಗಿ ನಿಂತುದರಿಂದ ಹಲವರು ಕಾಂಗ್ರೆಸ್ಸಿಗರು ಅವರ ಮೇಲೆ ಕೋಪಿಸಿಕೊಂಡಿದ್ದಾರೆ. ಈ ಚುನಾವಣೆಯ ಸೆಕೆಯಿಂದ ಕಾವ್ರಗೊಂಡ ವಾತಾವರಣವು ಇನ್ನೂ ಬಿಸಿಯಾಗಿಯೇ ಇರುವುದರಿಂದ, ಇದರ ವಿಷಯಕ್ಕೆ ನಿಚ್ಚಳವಾಗಿ ಬರೆಯುವುದು ಈಗಲೇ ಸಾಧ್ಯವಿಲ್ಲದಂತಾಗಿದೆ. "Belvi knows no defeat- ಅಪಜಯವನ್ನು ಬೆಳವಿಯವರು ಅರಿತೇ ಇಲ್ಲ" ಎಂಬ ವಾಕ್ಯವು ಮೊನ್ನೆಯ ಚುನಾವಣೆಯಲ್ಲಿ ಮತ್ತೆ ಸಿದ್ಧವಾದಂತಾಗಿದೆ. ಕಾಂಗ್ರೆಸ್ಸಿನ ಟಿಕೆಟ್ಟು ಇಲ್ಲದಿದ್ದರೂ ಅದರ ಸ್ಪಿರಿಟ್ಟು ಮಾತ್ರ ಈಗ ಅರ್ಧಶತಮಾನದಿಂದಲೂ ಬೆಳವಿಯವರಲ್ಲಿ ಸಂಪೂರ್ಣವಾಗಿ ತುಂಬಿಕೊಂಡಿರುವುದೆಂಬ ಭಾವನೆಯಿಂದಲೇ, ಅನೇಕಾನೇಕ ಮಿತ್ರರಾರರು ಅವರಿಗೆ ಬೆಂಬಲವಿತ್ತು ಜಯಶಾಲಿಗಳನ್ನಾಗಿ ಮಾಡಿದರು. ಕಮ್ಯೂನಲ್ ಅವಾರ್ಡಿನಂತಹ ಅತಿ ಮಹತ್ತ್ವದ ವಿಷಯದಲ್ಲಿಯೂ ಕಾಂಗ್ರೆಸ್ಸಿನೊಡನೆ ತಮ್ಮ ಮತಭೇದವನ್ನು ಬಹಿರಂಗವಾಗಿ ಸಾರುವುದಲ್ಲದೆ, ಆ ವಿಷಯದಲ್ಲಿ ಕಾಂಗ್ರೆಸ್ಸಿನ ವಿರುದ್ಧವಾಗಿ ಪ್ರಚಾರಕಾರ್ಯವನ್ನೇ ಕೈಕೊಂಡಿದ್ದ ಅಣೆಯವರು, ಆರು ವರ್ಷಗಳ ಹಿಂದೆ ದಿಲ್ಲಿಯ ಅಸೆಂಬ್ಲಿಯ ಆಯ್ಕೆಗೆ ನಿಂತಕೂಡಲೆ, ಮಹಾತ್ಮಾ ಗಾಂಧಿಯವರು ಮಾಧವರಾಯರ ದೀರ್ಘಕಾಲದ ಕಾಂಗ್ರೆಸ್ ನಿಷ್ಠೆಯನ್ನೂ ಅವರ ಪ್ರಾಮಾಣಿಕ ಮತಭೇದವನ್ನೂ ಮನದಂದು ಕಾಂಗ್ರೆಸ್ಸಿನವರು ಅಣೆಯವರನ್ನು ವಿರೋಧಿಸಲಾಗದೆಂದು ವಿಧಿಸಲಿಲ್ಲವೆ? ಅದೇ ರೀತಿ ಬೆಳವಿಯವರಿಗೂ ವಿರೋಧ ಮಾಡದೆ ಇದ್ದಿದ್ದರೆ ಒಳಿತಾಗುತ್ತಿದ್ದಿತೆಂದು ಕೆಲವರಾದರೂ ಕಾಂಗ್ರೆಸ್ ಭಕ್ತರು ಭಾವಿಸಿರಲಿಕ್ಕೆ ಸಾಕು. ಮೇಲಾಗಿ, ಬೆಳವಿಯವರ ಚುನಾವಣೆಯಲ್ಲಿ ವಿವಾದನೀಯ ವಿಷಯವಾಗಿದ್ದ ಟೆನೆನ್ಸಿ ಆಕ್ಟು ಸದೋಷವಾಗಿಯೇ ಇರುವುದೆಂಬುದನ್ನು ಕೆಲವು ಕಾಂಗ್ರೆಸ್ ಮುಖಂಡರೂ ತಮ್ಮ ಪ್ರಕಟನೆಗಳಲ್ಲಿ ಅಪ್ರತ್ಯಕ್ಷವಾಗಿ ಒಪ್ಪಿಕೊಂಡು ಬಿಟ್ಟಿದ್ದರು. ಚುನಾವಣೆಯ ಪ್ರಚಾರಕಾಲದಲ್ಲಿ ಒಬ್ಬಾನೊಬ್ಬ ಕಾಂಗ್ರೆಸ್ ಕಾರ್ಯಕರ್ತರು "ಇಂದಿನ ವರೆಗೆ ಕಾಂಗ್ರೆಸ್ಸಿನ ಹೆಸರಿನಿಂದಲೇ ಲಾಭ ಪಡೆದ ಬೆಳವಿಯವರು, ಈಗ ಕಾಂಗ್ರೆಸ್ಸಿಗೆ ವಿರೋಧ ಮಾಡುವುದು ತರವಲ್ಲ" ಎಂದರು. ಇದರ ಪರಿಣಾಮವು ಇವರು ಬಯಸಿದುದಕ್ಕಿಂತ ವಿಪರೀತವೇ ಆಯಿತು. "ಕಾಂಗ್ರೆಸ್ಸು ಇದೀಗ ತಾನೆ ಬಲಶಾಲಿಯಾಗಿದೆ. ಕೈಯಲ್ಲಿ



ಲೋಕಪ್ರಸಿದ್ಧವಾದ 'ವಿಟ್ನೊ' ಅವರ ವಜ್ರಯುಕ್ತವಾದ
೧೪ ಕ್ಯಾರೆಟ್ ಬಂಗಾರದ ಕವಚವುಳ್ಳ ಲಿವರ್ ರಿಸ್ಟ್‌ವಾಚ್!

ವರ್ತುಲ, ಚೌಕು ಅಥವಾ ದೀರ್ಘವರ್ತುಲಾಕಾರದ 'ವಿಟ್ನೋಜ್' ವಾಚ್		೭–೧೫–೦
ವರ್ತುಲಾಕಾರದ ಕ್ರೋಮಿಯಂ ಕವಚದ	ರಿಸ್ಟ್‌ವಾಚ್	೭–೧೫–೦
ನಂ. ೫ ಟೊನೊ ರಾವುಂಡ್ ಗ್ಲಾಸಿನ ಬಂಗಾರದ	,,	೬–೧೫–೦
E–7 ಕ್ರೋಮಿಯಂ ಕವಚದ ವರ್ತುಲಾಕಾರದ	,,	೪–೧೨–೦
D–4 ಬಂಗಾರಕವಚದ ವರ್ತುಲಾಕಾರದ ಲಿವ್ಹರ್‌ರಿಸ್ಟ್	,,	೫–೧೫–೦
F–2 ಲಿವ್ಹರ್ ಪಾಕೆಟ್ ವಾಚ್	,,	೩– ೦–೦

ಸರಿಯಾದ ಸಮಯ ತೋರಿಸುವ ಲಿವ್ಹರ್, ಚಿಕ್ಕ ಗಾತ್ರ, ಹೊಸಮಾದರಿ, ಐದು ವರ್ಷಗಳ ಗ್ಯಾರಂಟಿ. ಒಂದು ಸಲ ಕರೆದು ಅನುಭವ ಪಡೆಯಿರಿ. ಅಂಚೆಯ ವೆಚ್ಚಕ್ಕಾಗಿ ೦–೯–೦ ಪ್ರತ್ಯೇಕ.

Western Watch Co. (J), Matunga, Bombay–19.

ಹಿಡಿದ ಯಾವುದೇ ಕೆಲ್ಲನ್ನು ಕೂಡ ಕಲ್ಲೇಶ್ವರನನ್ನಾಗಿ ಮಾಡ ಬಲ್ಲಂತಹ ಕರ್ತುಮ್ ಅಕರ್ತುಮ್ ಅಥವಾ ಅನ್ಯಥಾಕರ್ತುಮ್ ಶಕ್ತಿಯೂ ಅದಕ್ಕೆ ಈಗ ಪ್ರಾಪ್ತವಾಗಿರಬಹುದು. ಆದರೆ ಮೂವತ್ತು ವರ್ಷಗಳ ಹಿಂದೆ ಈ ಸ್ಥಿತಿಯಿದ್ದಿತೆ? ತನ್ನ ಹೆಸರಿನಲ್ಲಿ ಶುನಾವಣೆಗೆ ನಿಲ್ಲಲು ಯೋಗ್ಯತಾವಂತ ಹುರಿಯಾಳುಗಳು ಕೂಡ ಕಾಂಗ್ರೆಸ್ಸಿಗೆ ದೊರೆಯದೆ ಇದ್ದ ಕಾಲವೂ ಒಮ್ಮೆ ಇದ್ದಿತಷ್ಟೆ? ಅಂತಹ ಹೊತ್ತಿನಲ್ಲಿಯೂ ಕಾಂಗ್ರೆಸ್ಸಿಗೆ ಬೆಂಬಲವಾಗಿದ್ದ ಬೆಳವಿ ರಾಯರ ಬಗೆಗೆ ಹೀಗೆಲ್ಲ ಆಡಿಕೊಳ್ಳಬಹುದೆ?" ಎಂದು ಅನೇಕಾನೇಕ ಜನರು ಕಾಂಗ್ರೆಸ್ಸಿನ ಆ ಕಾರ್ಯಕರ್ತರ ಮೇಲೆ ಖಿತಗೊಂಡರು. ಬೆಳವಿಯವರು ಮಾತ್ರ ಯಾವ ಪ್ರಕಟನೆಗಳಿಗೂ ಪ್ರತಿಪ್ರಕಟನೆಗಳ ರೂಪದಿಂದ ಉತ್ತರಕೊಡುವ ಗೋಜಿಗೆ ಹೋಗದೆ, ತಮ್ಮ ಪ್ರಚಾರವನ್ನು ಶಾಂತವಾಗಿ ಸತತವಾಗಿ ಸಾಗಿಸಿದ್ದರು. ಮುಕ್ಕಾಲು ಶತಮಾನದ ವಯಸ್ಸಾಗಿರುವ ಇಂತಹ ಮುಪ್ಪಿನಲ್ಲಿ (ಮುಪ್ಪಿನವರೆಂದ ಬಗ್ಗೆ ಬೆಳವಿಯವರು ಕ್ಷಮಿಸಬೇಕು!) ಬಿಟ್ಟೂಬಿಡದೆ ಆರುಸಾವಿರ ಮೈಲುಗಳ ಪ್ರವಾಸಮಾಡಿ, ಮತಗಳನ್ನು ಸಂಗ್ರಹಿಸಿದ ಸಂಗತಿಯನ್ನು ಕೂಡರೆ ಇವರ ಜಿಗುಟು ಗೊತ್ತಾಗುತ್ತದೆ.

ಮೇಲೆ ಹೇಳಿದ ಅಲ್ಪಸ್ವಲ್ಪರಾಜಕೀಯ ಮತಭೇದಗಳು ಇತ್ತಿತ್ತಲಾಗಿ ಕೊಂಚಮಟ್ಟಿಗೆ ಕಾಣಿಸಿಕೊಂಡಿದ್ದರೂ, ಬೆಳವಿಯವರ ಬಗೆಗೆ ಬೆಳಗಾಂವಿಯಲ್ಲಿ ಕಂಡುಬರುವ ಸಾರ್ವತ್ರಿಕ ಆದರಭಾವವು ಳ್ಳಿಸ್ಪಾದರೂ ಕಡಿಮೆಯಾಗಿಲ್ಲ. ಸರಲತೆ ಮತ್ತು ಪ್ರಾಮಾಣಿಕತೆ ಇವು ಬೆಳವಿಯವರ ಶ್ರೇಷ್ಠ ಸದ್ಗುಣಗಳಾಗಿವೆ. ಕಪಟಪೆಂಬುದು ಇವರ ಸನಿಯಕ್ಕೆ ಸುಳಿಯದ ವಿಷಯ. ಒಳಗೆ ಇರುವುದೊಂದು ಬೇರೆ, ಹೊರಗೆ ನಟನೆ ಮಾಡುವುದೊಂದು ಬೇರೆ–ಎಂಬ ವೃತ್ತಿಯು ಇವರದಲ್ಲ. ಏಕವಚನಿಗಳಿವರು; ಕೊಟ್ಟ ಮಾತನ್ನು ಮುರಿದು ಗೊತ್ತಿಲ್ಲ. ಒಮ್ಮೆ ಒಂದು ಮಾತನ್ನು ಹಿಡಿದರೆಂದರೆ ಅದನ್ನು ಬಿಡಿಸಲು ಬ್ರಹ್ಮದೇವನು ಬಂದರೂ ಆಗದ ಕೆಲಸ. ನಿಯಮಿತತನವು ಇವರ ಜೀವನದಲ್ಲಿ ಅತ್ಯಂತ ನಿಷ್ಠೆಯಿಂದ ಬೆಳಸಿಕೊಂಡು ಬಂದ ಗುಣ. ಸಾಲಗಾರ್ತಿಮದ ಮೇಲಿನ ತುಲಸೀದಲವು ತಪ್ಪಿದರೂ ತಪ್ಪೀತು; ಆದರೆ ನಿತ್ಯವೂ ನಸುಕಿನಲ್ಲಿಯ ಇವರ ಐದಾರು ಮೈಲಿನ ನಡಿಗೆಯು ತಪ್ಪಲಾರದು. ಯಾವ ಹೊತ್ತಿನಲ್ಲಿ ಯಾವ ಕೆಲಸವು ನಿಯಮಿತವಾಗಿರುವುದೋ ಅದು ಆಗಲೇಬೇಕು. ಪಕ್ಷಕಾರರು ಬಂದು ಕುಳಿತಿರುವ ಹೊತ್ತಿನಲ್ಲಿ, ಇವರೊಂದಿಗೆ ಎಷ್ಟೇಮಹತ್ವದ ರಾಜಕೀಯ ವಿಷಯವಿದ್ದರೂ ಅದರ ಚರ್ಚೆ ನಡೆಯಲಾಗದು. ಕಾಳುಹರಟೆಯಂತೂ ಎಂದಿಗೂ ಯಾವಾಗಲೂ ಇಲ್ಲ. ಬೆಳಗಾಂವಿಯಲ್ಲಿ ಜರುಗುವ ಬಹುಶಃ ಎಲ್ಲ ಸಭೆ-ಸಮಾರಂಭಗಳ ಅಧ್ಯಕ್ಷತ್ವದ ಜವಾಬ್ದಾರಿಕೆಯನ್ನೇ ಬೆಳವಿಯವರಿಗೆ ಕೊಟ್ಟಂತಿರುವುದಷ್ಟೆ! ರಾತ್ರಿ ಎಂಟು ಗಂಟೆಯೊಳಗಾಗಿ ಸಭೆಯು ಮುಗಿಯಬೇಕೆಂದರೆ ಮುಗಿಯಲೇ ಬೇಕು. ಇಷ್ಟೊಂದು ನಿಯಮಿತತನದಿಂದ ಜೀವನವು ಸಾಗಿದ ಬಳಿಕ, ಇಂದಿನ ಇಳಿವಯಸ್ಸಿನಲ್ಲಿಯೂ ಇವರ ಶರೀರ-ಸಂಪತ್ತು ಸುದೃಢವಾಗಿರುವುದು ಆಚ್ಚರಿಯೇನೂ ಅಲ್ಲ.

ಕೌಟುಂಬಿಕ ವಿಷಯದಲ್ಲಿಯೂ ಬೆಳವಿಯವರು ಭಾಗ್ಯಶಾಲಿಗಳಾಗಿದ್ದಾರೆ. ನಾಲ್ವರು ಗಂಡುಮಕ್ಕಳು; ಎಂಟು ಜನ ಹೆಣ್ಣು ಮಕ್ಕಳು. ಹಿರಿಯ ಮಗ ವೆಂಕಟರಾಯರು ಬೆಳಗಾಂವಿಯಲ್ಲಿಯೇ ವಕೀಲರಾಗಿದ್ದಾರೆ. ಬಾಳಾಸಾಹೇಬರು ಮುಂಬಯಿ ಹಾಯ್-ಕೋರ್ಟಿನಲ್ಲಿ ವಕೀಲಿ ಮಾಡುತ್ತಾರೆ. ವಿಷ್ಣುಪಂತರು ಬೆಳಗಾಂವಿಯಲ್ಲಿ ಡಾಕ್ಟರರಾಗಿದ್ದಾರೆ. ಎಲ್ಲಕ್ಕೂ ಚಿಕ್ಕವನು ಇನ್ನೂ ಚಿಕ್ಕವನು; ಇನ್ನೂ ಕಾಲೇಜಿನಲ್ಲಿ ಓದುತ್ತಿದ್ದಾನೆ. ಮದುವೆಯಾಗಿರುವ ಆರು ಜನ ಹೆಣ್ಣುಮಕ್ಕಳೂ ಸುಸ್ಥಳಗಳಲ್ಲಿದ್ದಾರೆ. "ಪುತ್ರೈಃ ನಪ್ತೃಭಿಃ ಮೋದಮಾನಾ ಸ್ವೇಗೃಹೇ" ಎಂಬ ವೇದೋಕ್ತ ಆಶೀರ್ವಾದವು ವೃದ್ಧ ಬೆಳವಿ ದಂಪತಿಗಳ ವಿಷಯದಲ್ಲಿ ಸಂಪೂರ್ಣವಾಗಿ ಸಾರ್ಥವಾಗಿದೆ. ಮನೆತುಂಬ ಮೊಮ್ಮಕ್ಕಳು ನಕ್ಕು ಕೆಲೆದು ನಲಿದಾಡುತ್ತಿವೆ. ಸಿರಿ, ಸರಸತಿ, ಸಂತತಿ ಈ ಮೂರೂ ವಿಷಯಗಳಲ್ಲಿ ಇಷ್ಟೊಂದು ದೈವಶಾಲಿಗಳಾಗಿರುವ ದಂಪತಿಗಳು ಅಪರೂಪವೆಂದೇ ಹೇಳಬಹುದು.

ಬರಿಯೆ ಬೆಳಗಾಂವಿಗಷ್ಟೇ ಅಲ್ಲದೆ, ಇಡಿಯೆ ಕನ್ನಡ ನಾಡಿಗೇ ಭೂಷಣಪ್ರಾಯರಾಗಿರುವ ಬೆಳವೀರಾಯರಿಗೆ ಪರಮಾತ್ಮನು ಉದಂಡವಾದ ಆಯುರಾರೋಗ್ಯವನ್ನು ದಯೆಪಾಲಿಸಿ, ನಾಡಿನ ಏಳ್ಗೆಯ ಕಾರ್ಯಗಳು ಅವರಿಂದ ಇನ್ನೂ ಹೆಚ್ಚುಹೆಚ್ಚಾಗಿಯೇ ನೆರವೇರುವಂತೆ ಕರುಣಿಸಲೆಂಬುದೇ ಕನ್ನಡಿಗರ ಹಾರೈಕೆ.

ಧನ್ವಂತರಿ ಕಾರ್ಯಾಲಯ, ಅಂಕೋಲಾ
ಉತ್ತರ ಕನ್ನಡ ಇವರ
ರಜಿಸ್ಟರ್ಡ್
ಅರ್ಧಾಂಗವಾಯು
ಹೊನ್ನಿ ಎಣ್ಣೆ
ಮತ್ತು
ವಾತಾರಿ ತೊಪ್ಪಲ
ಅರ್ಧಿಕವಾಯು, ಕೈ-ಕಾಲು-ಮೋರೆ ನಡುಗುವುದು, ಪಕ್ಷವಾತ, ಸಂಧಿವಾತ ಮುಂತಾದ ರೋಗಿಗಳಿಗೆ ಖಂಡಿತ ಗುಣವಾಗುವುದು.
ಬಾ. ಬೆ. ೧ ರೂ. ★ ತೊ. ಬೆ. ೧೦ ಆಣೆ.
ಸ್ಟಾರ್ ಕಂಪನಿ, ಬೆಳಗಾಂವ

ದೀಪಾವಳೀ ಕ್ಷೌರ

ಶ್ರೀ. ಕೈವಾರ್ ರಾಜಾರಾವ್, ಬಿ. ಎ.

★

ಜರ್ಮನ್ ಷೆವಿಂಗ್ ಸಲೂನಿನ ಮುನಿಸಾಮಿಯ ಕಡೆಯಿಂದ ಕ್ರಾಪ್ ಕಟ್ ಮಾಡಿಸಿಕೊಳ್ಳ ಬೇಕೆಂದು ಹೋದರೆ, ದುರದೃಷ್ಟದಿಂದ ರಾಮಯ್ಯನ ಕೈಯಲ್ಲಿ ತಲೆಕೊಡಬೇಕಾಯಿತು. ರಾಮಯ್ಯನ ಕ್ಷೌರದ ಸುಖ ಆತನ ರೇಗ್ಸುರಿಗೆ ತಲೆಕೊಟ್ಟವರಿಗೆ ಚೆನ್ನಾಗಿ ಗೊತ್ತು!

★

ಲವದುವೆಯಾದ ವರ್ಷ; ಮೊದಲ ದೀಪಾವಳಿ; ಮಾವನವರಿಂದ ಆಹ್ವಾನ ಬಂದು ಎಂಟು ದಿನವಾಯಿತು. ಉತ್ತರ ಬರೆದಿರಲಿಲ್ಲ. ಮಗಳ ಕೈಲಿ ಬರೆಯಿಸಿದ ಜ್ಞಾಪಕಪತ್ರ ನಿನ್ನೆ ಮುಟ್ಟಿತು. ನಾಳೆಯ ಬೆಳಗಿನ ರೈಲಿನಲ್ಲಿ ಹೊರಟು ಬರುವುದಾಗಿ ಬರೆದಿದ್ದೇನೆ.

* * *

ಈ ದಿನ ಬೆಳಗಿನಿಂದ ಅದೇ ಯೋಚನೆ: 'ಅತ್ತೆಯ ಮನೆಗೆ ಮೊದಲನೆಯ ಸಲ ಹೋಗುವುದು. ಏನಾದರೂ ಅಪೂರ್ವವಾದ—ಬೆಲೆಬಾಳುವ—ಸಾಮಾನನ್ನು ತೆಗೆದುಕೊಂಡು ಹೋಗಿ ನನ್ನ ಪ್ರೇಯಸಿಗೆ ಕೊಡಬೇಕು. ಏನು ಕೊಡಲಿ . . ? ಅಲ್ಲಿ ಹೇಗೆ ನಡೆದುಕೊಳ್ಳಬೇಕು . . ? ನಡೆ-ನುಡಿ, ಬಟ್ಟೆ-ಬರೆ, ಆಚಾರ-ವ್ಯವಹಾರ ಇತ್ಯಾದಿಗಳೆಲ್ಲದರಲ್ಲಿಯೂ, ಅಳಿಯ ಅತ್ತೆಯ ಮನೆಗೆ ಮೊದಲನೆಯ ಸಲ ಹೋದಾಗ ಅವರಿಗೆ ಯಾವ ಅಭಿಪ್ರಾಯಗಳನ್ನು ಹುಟ್ಟಿಸುವನೋ, ಅದು ಶಾಶ್ವತವಾಗಿ ನಿಂತುಬಿಡುವುದೆಂದು ಬಲ್ಲವರು ಹೇಳುತ್ತಾರೆ. ಅದುದರಿಂದ ನಾನು ಎಷ್ಟು ಬುದ್ಧಿವಂತನಾಗಿ ನಡೆದುಕೊಂಡರೆ ಅಷ್ಟು ಉತ್ತಮ' . . . . ಇತ್ಯಾದಿ ಇತ್ಯಾದಿ ಯಾಗಿ ಯೋಜನೆ ಮಾಡುತ್ತಾ ಕುಳಿತುಕೊಂಡಿರಲು, ಎದುರಿಗಿದ್ದ ಕನ್ನಡಿಯ ಕಡೆ ನನ್ನ ದೃಷ್ಟಿ ಹೋಯಿತು. 'ಆಹಾ! ಇದೇನು ಅವಸ್ಥೆ! ನಾನು ಕ್ರಾಪ್ ಕಟ್ ಮಾಡಿಸಿಕೊಂಡು ಎಷ್ಟು ದಿನವಾಯಿತು. ಕ್ಷೌರ ಮಾಡಿಕೊಂಡು ಎಷ್ಟು ದಿನವಾಯಿತು'—ಎಂದು ನನ್ನ ಮುಖವನ್ನು ನೋಡಿ ನನಗೇ ಬೇಸರವಾಯಿತು.

ವಿಚಾರಮಾಡಿ ನೋಡಿದರೆ ಕ್ರಾಪ್ ಮಾಡಿಸಿಕೊಂಡು ಸುಮಾರು ಒಂದು ತಿಂಗಳಾಗಿರಬಹುದು. ಮುಖಕ್ಷೌರ ಮಾಡಿಕೊಂಡು ೨-೩ ದಿವಸಗಳಾಗಿರಬಹುದು. ಇದೇನು ಅಷ್ಟು ಹೆಚ್ಚಿನದಲ್ಲವೆಂದು ನೀವು ಹೇಳಬಹುದು. ಇತರ ಸಮಯಗಳಲ್ಲಾಗಿದ್ದರೆ ನಾನೂ ಹಾಗೆಯೇ ಹೇಳುತ್ತಿದ್ದೆ. ಆದರೆ ನಾಳೆ ನಾನು ಅತ್ತೆಯ ಮನೆಗೆ, ಅದೂ ಮೊದಲನೆಯ ಸಾರಿ, ಹೊರಡುವವನಾದುದರಿಂದ ಹಾಗೆ ಹೇಳಲಾರೆ. ಅದೂ ಅಲ್ಲದೆ ಹಿಂದಿನ ಕಾಲದಿಂದ ಈಚೀಚಿನ ವರೆಗೂ ಗಂಡುಸರು ಹೆಂಗುಸರಿಗೆ ಮಾಡುತ್ತಿರುವ ಒಂದು ಅನ್ಯಾಯವನ್ನು ಈ ಸಂದರ್ಭದಲ್ಲಿ ನಿಮಗೆ ತಿಳಿಸಿದರೆ ಅದು ತಪ್ಪಾಗಲಾರದು. ನಮ್ಮಲ್ಲಿ ಮೊದಲಿನಿಂದಲೂ ಹಬ್ಬದ ದಿನ ಕ್ಷೌರಕ್ಕೆ ಅವಕಾಶವಿಲ್ಲ. ಅವಕಾಶವಿರಲಿ 'ಇದೇನು ಹಬ್ಬದ ದಿವಸ ಹಾಳು ಅವಾಚ್ಯಶಬ್ದ' ಎಂದು ಬಾಯಿ ಮುಚ್ಚಿಸಿ ಬಿಡುತ್ತಾರೆ. ನಿಜವಾಗಿಯೂ ವಿಚಾರಮಾಡಿ ನೋಡಿದರೆ ಕ್ಷೌರ ವೆಂಬುದು ಹಬ್ಬದ ದಿನ ಅತ್ಯವಶ್ಯವಾದ ಕರ್ಮ. ಅದರ ಸತ್ಯತೆಯನ್ನು ಪರೀಕ್ಷಿಸಬೇಕಾದರೆ ನಿಮ್ಮ ನಿಮ್ಮ ಸೌಭಾಗ್ಯವತಿಯರನ್ನು ಕೇಳಿ. ಹಬ್ಬದ ದಿನ ಹರ್ಷವಾಗಿ ಹೊಸ ಸೀರೆಯುಟ್ಟು, ಜಡೆ ಹೆಣೆದು, ತುರುಬು ಕಟ್ಟಿ, ಹೂ ಮುಡಿದು, ತಾಂಬೂಲವನ್ನು ಸವಿಯುತ್ತಾ ತನ್ನ ಪ್ರಾಣಕಾಂತನ ಬಳಿಗೆ ಬರುವ ಯುವತಿಗೆ ಗಂಡನ ಮುಳ್ಳುಗಡ್ಡ—ಮೀಸೆಗಳು ಎಂತಹ ನಿರಾಶೆಯನ್ನು ತಾನೇ ಉಂಟುಮಾಡದಿರವು! ಅಂತೂ ರೈಲು ಬೆಳಗಿನ ಒಂಭತ್ತೂ ಘಂಟೆಗೆ ಹೊರಡುವುದಿದ್ದುದರಿಂದ ಬೆಳಿಗ್ಗೆ ಬೇಗನೆದ್ದು, ಕ್ರಾಪ್ ಕಟ್ ಮಾಡಿಸಿಕೊಂಡು, ಲಕ್ಷಣವಾಗಿ ಮುಖಕ್ಷೌರ ಮಾಡಿಸಿಕೊಂಡೇ ಹೊರಡುವುದೆಂದು ಗೊತ್ತುಮಾಡಿದೆ.

ನಮ್ಮೂರಿನಲ್ಲಿ ಷೇವಿಂಗ್ ಸೆಲೂನುಗಳಿಗೇನೂ ಕೊರತೆಯಿಲ್ಲ. ಯಾವ ಒಂದು ಮನೆ ಖಾಲಿ ಬಿದ್ದರೂ ಕೆಳಭಾಗಕ್ಕೆ ಕ್ಷೌರಿಕನೂ, ಮಹಡಿಗೆ ಲಾಡ್ಜ್ವೇಕೇಟರೂ ತಕ್ಷಣವೇ ಉಮೇದವಾರರಾಗಿ ಬಹುತ್ತಾರೆ. ಆದರೂ ನಮ್ಮ ಮನೆಯ ಹತ್ತಿರವಿರುವ "ಜರ್ಮನ್ ಷೇವಿಂಗ್ ಸೆಲೂನು" ಬಹು ಪ್ರಸಿದ್ಧವಾದ ಸೆಲೂನು. ಆದರ ಪ್ರಸಿದ್ಧಿಗೆ ಅನೇಕ ಕಾರಣಗಳಿವೆ. ಅಲ್ಲಿಯ ಯಜಮಾನನಾದ ಮುನಿಸಾಮಿ ಹಿಂದಿನ ದೊಡ್ಡ ಯುದ್ಧದಲ್ಲಿ ಜರ್ಮನರ ಸೆರೆಯಾಳಾಗಿದ್ದು ಆಲ್ಲೇ, ಜೈಲಿನಲ್ಲಿ, ಕ್ಷೌರವಿದ್ಯೆ ಕಲಿತನಂತೆ. ಆದರ ಕುರುಹೇ ಜರ್ಮನ್ ಷೇವಿಂಗ್ ಸೆಲೂನಿನ ಹೆಸರು. ಅದು ಅವನಿಗೆ ದೊಡ್ಡ ಹೆಮ್ಮೆ. ಅಲ್ಲದೆ ಅವನು ತನ್ನ ಕೆಲಸದಲ್ಲಿ ನಿಜವಾಗಿಯೂ ಗಟ್ಟಿಗ. ಮುನಿಸಾಮಿ ಸೆಲೂನನ್ನಿಟ್ಟಮೇಲೆ, ತನ್ನ ಸಹಾಯಕ್ಕೆಂದು ಅನಸಭಾವ ಮೈದುನನನ್ನಿಟ್ಟುಕೊಂಡಿದ್ದನು. ಆದರೆ ಅವನು ಕೆಲಸವನ್ನು ಕಲಿತಕೂಡಲೆ ಭಾವನಿಂದ ಓಡಿಹೋಗಿ ಬೇರೆ ಊರಲ್ಲಿ ಸೆಲೂನನ್ನಿಟ್ಟು ಚೆನ್ನಾಗಿ ಸಂಪಾದನೆ ಮಾಡುತ್ತಿದ್ದಾನಂತೆ. ಈಗಲೂ ಜೊತೆಗೆ ಮುನಿಸಾಮಿ ರಾಮಯ್ಯನನ್ನಿಟ್ಟುಕೊಂಡಿದ್ದಾನೆ. ಆದರೆ ರಾಮಯ್ಯ ಇನ್ನೂ ಹೊಸಬ. ಅಲ್ಲಿಗೆ ಬರುವವರು ಎಲ್ಲಾ ಮುನಿಸಾಮಿ ಕೈಯಿಂದಲೆ ಕ್ಷೌರಮಾಡಿಸಿಕೊಳ್ಳಬೇಕೆಂದು ಆಶೆಪಡುತ್ತಾರೆ. ನನಗೂ ಅಷ್ಟೇ.

ಬೆಳಿಗ್ಗೆ ಏಳುವ ಹೊತ್ತಿಗೆ ಆರುಘಂಟೆ ಹೊಡೆದಿತ್ತು. ಏಳುತ್ತಲೇ ಅವಸರವಸರವಾಗಿ ಆ ಷೇವಿಂಗ್ ಸೆಲೂನಿನ ಕಡೆ ಹೊರಟೆ. ಇನ್ನೇನು ನಾನು ಆ ಸೆಲೂನಿನ ಮೆಟ್ಟಿಲನ್ನು ಹತ್ತಬೇಕೆನ್ನುವಷ್ಟರಲ್ಲಿ, ಇನ್ನೊಬ್ಬನು ಬಲಗಡೆಯಿಂದ ಬಂದು ನನಗಿಂತ ಒಂದು ಹೆಜ್ಜೆ ಮುಂದಾದನು. ನಾನೂ ಕಾಲನ್ನು ಜೋರುಮಾಡಿದೆ. ಆದರೂ ಸೆಲೂನಿನ ಒಳಗೆ ಹೋಗುವಾಗ

ಅವಸದೇ ಒಂದು ಹೆಜ್ಜೆ ಮುಂದು. ಒಂದು ಹೆಜ್ಜೆಯಾದರೇನು, ಒಂದು ಮೈಲಿಯಾದರೇನು, ಎಲ್ಲಾ ಒಂದೇ. ಅವನದೇ ಮೊದಲ ನೆಯ ಸರದಿ. ಅವಸರಕ್ಕೆ ಆಗುವುದೇ ಹೀಗೆ.

ನಾವು ಸೇಲೂನಿನೊಳಕ್ಕೆ ಹೋದಾಗ ಎರಡು ಕುರ್ಚಿಗಳೂ ಭರ್ತಿಯಾಗಿದ್ದುವು. ಮುನಿಸಾಮಿ ಒಬ್ಬರಿಗೆ ಸೋಪನ್ನು ಹಚ್ಚುತ್ತಿದ್ದ; ರಾಮಯ್ಯ ಮತ್ತೊಬ್ಬರಿಗೆ ಕ್ಷೌರ ಮುಗಿಸಿ, ಕ್ರಾಪ್‌ಬಾಚುತ್ತಿದ್ದ. ನನಗಿಂತ ಮುಂದೆ ಬಂದವನು, ರಾಮಯ್ಯನ ಕೆಲಸ ಮುಗಿಯುತ್ತ ಬಂದುದರಿಂದ ಅವನ ಕುರ್ಚಿಯ ಮೇಲೆ ಕೂಡುವನೆಂದೂ,ನನಗೆ ಮುನಿಸಾಮಿಯ ಕುರ್ಚಿ ಸಿಕ್ಕುವುದೆಂದೂ ಮನಸ್ಸಿನಲ್ಲಿಯೇ ಗುಣಾಕಾರಹಾಕಿಕೊಂಡು ಸಂತೋಷಪಟ್ಟೆ.

ಆಷ್ಟರಲ್ಲಿ ಎರಡನೆಯ ಕುರ್ಚಿಯ ಮೇಲೆ ಕುಳಿತಿದ್ದವರು ಬಾಚಿಸಿಕೊಂಡು, ಕನ್ನಡಿಯನ್ನು ನೋಡಿಕೊಳ್ಳುತ್ತಾ, ಅವರ ವಿಾಸೆಯು ಕಟ್ ಸರಿಯಾಗಿಲ್ಲವೆಂದು ಆಕ್ಷೇಪಿಸಿದರು. ಕೂಡಲೆ ಮುನಿಸಾಮಿ ತನ್ನ ಕೆಲಸವನ್ನು ರಾಮಯ್ಯನಿಗೊಪ್ಪಿಸಿ, ಅವರ ವಿಾಸೆ ಸರಿಮಾಡಲು ಬಂದನು. ಅವನು ಪುನಃ ತನ್ನ ಕುರ್ಚಿಗೆ ಹೋಗದೆ ಎಲ್ಲಿ ನಿಂತುಬಿಡುವನೋ ಎಂದು ನನ್ನ ಮನಸ್ಸು ತಲ್ಲಣಿಸುತ್ತಿತ್ತು. ಹೆದರಿದವನ ಮೇಲೆ ತಾನೇ ಕಪ್ಪೆಹಾರುವುದು? ನನ್ನ ದುರದೃಷ್ಟಕ್ಕೆ ಸರಿಯಾಗಿ ಮುನಿಸಾಮಿ ಅಲ್ಲೇ ನಿಂತ. ಕುರ್ಚಿಯ ಮೇಲಿದ್ದವರ ವಿಾಸೆ ಸರಿಮಾಡಿ, ಅವರನ್ನು ಎಬ್ಬಿಸಿ 'ಸಾರ್' ಎನ್ನುತ್ತಲೇ, ನನಗಿಂತ ಒಂದು ಹೆಜ್ಜೆ ಮುಂದೆ ಬಂದು ಮೊದಲನೆಯ ಸರದಿಯನ್ನು ಸಂಪಾದಿಸಿದ್ದ ಗೆಳೆಯ ಅಲ್ಲಿಗೆ ಹೋಗಿ ಕುಳಿತ. ನನಗೆ ನಿರಾಶೆಯಾಯಿತು. ಅಲ್ಲಿ ಕುಳಿತು ಕಾಯುವುದೂ ಸ್ವಲ್ಪ ಬೇಜಾರೆನಿಸಿತು. ಹೊರಗೆ ಹೋಗಿ ಬೇರೆ ಇನ್ನೊಬ್ಬನು ಒಳಗೆ ಬರುವ ವರೆಗೆ ಹೊರಗೆ ನಿಂತಿದ್ದು, ನನಗೆ ರಾಮಯ್ಯನ ಸರದಿ ತಪ್ಪುವಂತೆ ಮಾಡಿಕೊಂಡು ಒಳಗೆ ಬರೋಣವೆಂದುಕೊಂಡು, ಸ್ವಲ್ಪ ಹೊರಗೆ ಕಾಲಿಟ್ಟೆ. ನಾನು ಏಳುತ್ತಲೇ "ಏಕೆ ಸ್ವಾಮಿ! ಐದು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ, ಕುಳಿತುಕೊಳ್ಳಿ" ಎಂದ ರಾಮಯ್ಯ. ನಾನು "ಈಗ ಬರುತ್ತೇನೆ" ಎಂದು ಹೇಳಿ ಹೊರಗೆ ಬಂದೆ.

ಹೊರಗೆ ಬರುವುದೇ ತಡ, ಎಲ್ಲಿ ಕಾದಿದ್ದನೋ ನನ್ನ ಮಿತ್ರ ನಾಣಿ; "ಏನೋ! ಇನ್ನೂ ಈ ಊರಲ್ಲೇ ಇದ್ದೀಯಾ. ಮಾವ ನವಳು ಕಾಗದ ಗೀಗದ ಬರೆದಿರಲಿಲ್ಲವೇ?" ಅಂತ ಮಾತಿಗೆ ಶುರುಮಾಡಿ, ಚಾಕದಪರೆಗೂ ಕರೆದುಕೊಂಡು ಹೋಗಿ ವಾಪಸು ಕಳುಹಿಸಿದ. ಅವಸರವಸರವಾಗಿ ನಾನು ಸೇಲೂನಿನೊಳಕ್ಕೆ ಬರುವಾಗ, ಎರಡು ಕುರ್ಚಿಗಳನೇಲೆ ಇಬ್ಬರೂ, ಬೆಂಚಿನಮೇಲೆ ಸರದಿ ಕಾಯುತ್ತಿದ್ದ ಇಬ್ಬರೂ ಕುಳಿತಿದ್ದರು.

ಷೇವಿಂಗ್ ಸೇಲೂನಿನಲ್ಲಿ ಕುಳಿತು ಕಾಯುವ ಬೇಜಾರಿನ ಕೆಲಸದಂತಹ ಕೆಲಸ ಮತ್ತೆ ಬೇರೊಂದಿಲ್ಲ. ಅಕ್ಕಪಕ್ಕಗಳಲ್ಲಿ ನನ್ನಹಾಗೆಯೇ ಕಾಯುತ್ತಾ ಇರುವ, ಬೇಸರವನ್ನು ಸೂಚಿಸುವ ಜೋತುಬಿದ್ದ ಮುಖಗಳು. ಮೂರು ನಾಲ್ಕು ವಾರಗಳ ಹಿಂದಿನ, ಅಲ್ಲಲ್ಲಿ ಹರಿದುಹೋದ ಕೊಳೆಕೊಳೆಯಾದ 'ಪ್ರಜಾಮತ' 'ವೃತ್ತಾಂತಪತ್ರಿಕೆ'ಗಳು (ಷೇವಿಂಗ್ ಸೆಲೂನುಗಳಿಗೂ ಈ ಪತ್ರಿಕೆಗಳಿಗೂ ಏನೋ ನಿಕಟವಾದ ಸಂಬಂಧವಿರಬೇಕು; ಯಾವ ಸೆಲೂನಿನಲ್ಲಿ ನೋಡಿದರೂ ಈ ಪತ್ರಿಕೆಗಳು—ಈ ಪತ್ರಿಕೆಗಳು ಮಾತ್ರವೇ—ಕಾಣಬರುತ್ತವೆ). ಸೆಲೂನಿನ ಅಲಂಕಾರವೇ ಒಂದು ವಿಚಿತ್ರತರದ ಅಲಂಕಾರ. ಗೋಡೆಗಳ ಮೇಲೆ ಅದೇನು ಚಿತ್ರ ಪಟಗಳು! ವಿನೋಲಿಯ, ಲಕ್ಸ್, ಪ್ಯಾರಿಸ್ ಬೋಕೆ—ಮೊದಲಾದ ಸೋಪುಗಳ ಪ್ರಕಟನೆಯ ಸುಂದರಮುಖಿಯರ ಚಿತ್ರಗಳಿಗೆ ಅಂದವಾದ ಕಟ್ಟನ್ನು ಹಾಕಿಸಿ ತೂಗುಹಾಕಿದ್ದಾರೆ. ಕೆಲವು ವಿಚಿತ್ರತರವಾದ ಯುದ್ಧದೃಶ್ಯಗಳು; ಪ್ರಾಣಿಬೇಟೆಯ ದೃಶ್ಯಗಳು; ಹಿಂದಿನ ಕಾಲದ ದೊರೆಸಾನಿಯರ ಚಿತ್ರಗಳು; ಕ್ಷೌರಮಾಡುತ್ತಿರುವ, ಮಾಡಿಸಿಕೊಳ್ಳುತ್ತಿರುವವರ ವಕ್ರವಾದ ಮುಖಭಂಗಿಯನ್ನು ತೋರಿಸುವ ಚಿತ್ರಗಳು. ಇನ್ನೊಂದು ದಿಕ್ಕಿನಲ್ಲಿ ಒಂದು ಬೀರು; ಅದರಲ್ಲಿ ಒಂದು ಕಡೆ ಖಾಲಿ ಸೋಪಿನ ಪೆಟ್ಟಿಗೆಗಳನ್ನು, ಯುರೋಪಿಯನ್ ಅಂಗಡಿಗಳಲ್ಲಿ ಮಾರಾಟಕ್ಕೆ ಜೋಡಿಸಿಟ್ಟಿರುವಂತೆ ಆಕರ್ಷಣೀಯವಾಗಿ ಜೋಡಿಸಿಟ್ಟಿದ್ದಾರೆ. ಇನ್ನೊಂದು ಕಡೆ ಹಾಗೇ ಜೋಡಿಸಿಟ್ಟಿರುವ ಫೇಸ್‌ಪೌಡರಿನ ಖಾಲೀಡಬ್ಬಿಗಳು. ಅದರ ಕೆಳಮಾಡಿನಲ್ಲಿ ವಿವಿಧ ವಿಚಿತ್ರವಾದ ಸ್ವದೇಶ-ವಿದೇಶಗಳ ಸುಗಂಧದೆಣ್ಣೆಗಳ ಸೀಸೆಗಳು. ಆಲ್ಲಲ್ಲಿ ಒಂದೊಂದು ಬ್ರುಷ್ಷು, ರೇಜರ್, ಗಾಜಿನ ಕಪ್ಪುಗಳು— ಈ ಅಲಂಕಾರಗಳನ್ನೆಲ್ಲಾ ನೋಡಿ ನೋಡಿ ನಾಕಾಯಿತು.

ರಹಸ್ಯಾತ್ಮಕ ಕಳಾಶಾಸ್ತ್ರ

೬೪ ರಹಸ್ಯ ಚಿತ್ರಪಟಗಳು ಸಹ ರೂ. ೧. ಇದರಲ್ಲಿ ಸ್ತ್ರೀ-

ಪುರುಷರನ್ನು ಪ್ರೀತಿಸುವ ರಹಸ್ಯಗಳನ್ನು, ಮುದ್ದಿಡುವ ವಿಧವರಗಳು, ಆಲಿಂಗನ ಮಾಡುವ ರೀತಿಗಳು, ಕನ್ನೆಯರ ಪ್ರೇಮ ಮತ್ತು ಸಂಯೋಗಕಾಲದ ಮರ್ಮಗಳು, ಇನ್ನೂ ಶೃಂಗಾರ ರಹಸ್ಯಗಳು ನಕ್ಷೆಗಳು ಸಹ ಹೇಳಿದೆ. ಬಹಿರಂಗವಾಗಿ ಇಂಥ ಪುಸ್ತಕವು ಯಾರಿಂದಲೂ ಪ್ರಜುರಿಸಲ್ಪಡಲಿಲ್ಲ. ೨೬೪ ಪುಟಗಳುಳ್ಳ ದೊಡ್ಡ ರಹಸ್ಯ ಕನ್ನಡ ಪುಸ್ತಕ; ಕ್ರಯ ೧ ರೂ. ಪೋಸ್ಟೇಜ್ ೫ ಆಣೆ.

ಸರಸ್ವತಿ ಬುಕ್ ಡಿಪೋ,
ಆರುಣಾಚಲ ನೊಡಲಿ ಬೀದಿ, ಜಿ. ಟಿ. ಮದರಾಸು.

ರಜಿಸ್ಟರ್ ಲೀವರ್ ಇಲ್ಲವೆಂದು ತಿಳಿಯಪಡಿಸುವವರಿಗೆ ಹಣ ಪರತ

ಕೆಂಪುಗಳು ಕೆತ್ತಲ್ಪಟ್ಟ ರಜಿಸ್ಟರ್ ಲೀವರ್, ರೋಲ್ಡ್‌ಗೋಲ್ಡ್ ಪ್ಲೇಟ್, ರಿಸ್ಟು ಗಡಿಯಾರ ದೃಢವಾದದ್ದು ಮತ್ತು ಅಂದವಾದದ್ದು. ೫ ಸಂವತ್ಸರ ಗ್ಯಾರಂಟಿ ಸಹಾ ಬೆಲೆ ರೂ. ೫-೮-೦.

ರಾಜನ್ ವಾಚ್ ಕಂಪೆನಿ,
೨೭ ನೆಯ ಬೀಟಾ ಜಿ. ಹಿ. ಬಿ. ಮದರಾಸು.

ಆಹೊತ್ತಿಗೆ ಘಂಟೆ ಎಷ್ಟಾಗಿತ್ತೋ ಕಾಣೆ; ಸಾಮಾನ್ಯವಾಗಿ ಯಾವ ಸೇಲೂನುಗಳಲ್ಲೂ ಗಡಿಯಾರಗಳನ್ನಿಟ್ಟಿರುವುದಿಲ್ಲ. ಅಲ್ಲಿ ಅನ್ಯಾಯವಾಗಿ ವ್ಯಯವಾಗುವ ಕಾಲದ ಅರಿವು ಯಾರಿಗಾದರೂ ಉಂಟಾದರೆ, ಅವರು ಪುನಃ ಸೆಲೂನಿನ ಕಡೆ ತಲೆಯಿಡುವುದಿಲ್ಲ ವೆಂದು ತಿಳಿದು ಅಲ್ಲಿ ಗಡಿಯಾರಗಳನ್ನಿಡುವುದಿಲ್ಲ ವೆಂದು ತೋರುತ್ತೆ. ಒಂದೊಂದು ಕಡೆ ಕ್ಷೌರಿಕರು ತಮ್ಮ ದೊಡ್ಡಿಸ್ತಿಕೆಯನ್ನು ತೋರಿಸಿಕೊಳ್ಳುವುದಕ್ಕಾಗಿ ಕೈಗಡಿಯಾರಗಳನ್ನು ಹಾಕಿಕೊಂಡಿರುವುದುಂಟು. ಆದರೆ ಅವು ಘಂಟೆಗಳಷ್ಟಾದರೂ ಹಿಂದಿರುತ್ತವೆ. ಆಲ್ಲಿ ಗಡಿಯಾರವಿಲ್ಲ. ನನಗೆ ರೈಲಿಗೆ ಹೋಗುವ ಅವಸರ. ಕಡೆಗೆ ಬೇಜಾರಾಗಿ ನಾನೇ ಮನೆಯಲ್ಲಿ ಮುಖಕ್ಷೌರ ಮಾಡಿಕೊಂಡು ಹೊರಟುಹೋಗೋಣವೆಂದುಕೊಂಡು ಏಳುವಷ್ಟರಲ್ಲಿ 'ಸಾರ್' ಎಂದ ಸದ್ದಾಯಿತು. ನನ್ನದೇ ಮುಂದಿನ ಸರದಿ.

ಅಂತೂ ನನ್ನ ಸರದಿ ಬಂತು. ಕಡೆಗೂ ರಾಮಯ್ಯನ ಕುರ್ಚಿಯೇ ಗಂಟು ಬಿತ್ತು. ನಿರ್ವಾಹವಿಲ್ಲದೆ ಹೋಗಿ ಕುರ್ಚಿಯ ಮೇಲೆ ಕುಳಿತುಕೊಂಡು, ರಾಮಯ್ಯನಿಗೇ ತಲೆ ಕೊಟ್ಟದ್ದಾಯಿತು. ಅವಸರಕ್ಕೆ ಎಲ್ಲಾ ಹಾಗೆಯೇ ಆಗುವುದು. ನನಗೆ ಅವಸರವಾಗಿದೆಯೆಂದೂ ಊರಿಗೆ ಹೋಗಬೇಕೆಂದೂ ಜಾಗ್ರತೆ ಕ್ಷೌರಮಾಡಿ ಮುಗಿಸಬೇಕೆಂದೂ ಅವನ ಕಿವಿಯಲ್ಲುಸುರಿದೆ. ಯಾವುದೋ ಜ್ಞಾನದಲ್ಲಿದ್ದ ಅವನಿಗೆ ಇದು ಕೇಳಿಸಿರಲಾರದು. ಅಂತೂ ಅವನು ಯಾವ ಮಾತನ್ನೂ ಆಡಲಿಲ್ಲ. ಮಾತಿಲ್ಲದೆ ತಲೆಯನ್ನೆಲ್ಲಾ ಕೆದರಿ, ಕೂದಲು ಎಷ್ಟು ಬೆಳೆದಿದೆಯೆಂದು ಪರೀಕ್ಷೆ ಮಾಡಿದನು. ಒಂದು ಟವಲನ್ನು ಮೈಕುಂಬ ಹೊದಿಸಿ, ಅದರ ಕೊನೆಯನ್ನು ಷರಟಿನ ಕಾಲರಿನೊಳಕ್ಕೆ ತನ್ನ ಬೆರಳುಗಳಿಂದ ಅದುಮಿ ಹುದುಗಿಸಿದನು. ಕೂದಲಿನೊಳಕ್ಕೆ ಬೆರಳುಗಳನ್ನು ಜೆನ್ನಾಗಿ ಕೂರಿಸಿ, ಕೂದಲನ್ನು ಎಳೆಯುತ್ತಾ 'ಕ್ರಾಪ್ ಕಟ್ ಮಾಡಲೇ ಸಾರಾ?' ಎಂದ. ಅಷ್ಟು ಹೊತ್ತಿಗೆ ನನ್ನ ಮನಸ್ಸು ಬದಲಾಗಿದ್ದಿತು. ನಾನೇನೋ ಕ್ರಾಪ್ ಮಾಡಿಸಿಕೊಳ್ಳಬೇಕೆಂದೇ ಬಂದದ್ದು. ಆದರೆ ಆಗಲೇ ಬಹಳ ಹೊತ್ತಾಗಿರಬಹುದೆಂಬು ನನಗೆ ಭಾಸವಾಗುತ್ತಿತ್ತು. ರೈಲಿಗೆ ಹೋಗಬೇಕು, ಇಷ್ಟಲ್ಲದೆ ನನಗೆ ಮುನಿಸ್ವಾಮಿಯ ಕೈಲಿ ಕ್ಷೌರ ಮಾಡಿಸಿಕೊಳ್ಳುವ ಆಶೆ ಬೇರೆ ನಿರಾಶೆಯಾಗಿತ್ತು. ಆದ್ದರಿಂದ ಕ್ರಾಪ್ ಕಟ್ ಬೇಡ; ಬರೀ ಮುಖಕ್ಷೌರವೇ ಸಾಕು' ಎಂದು ಹೇಳಿದೆ. ರಾಮಯ್ಯ ಸುಮ್ಮನಿರದೆ "ಆಗಿನ 'ಸ್ಟೈಲಿಗೆ' ಇದು ಬಹಳ ಉದ್ದ ಸಾರ್. ಈಗೆಲ್ಲಾ 'ಷಾರ್ಟ್‌ಕಟ್' 'ಸಮ್ಮರ್ ಕ್ರಾಪ್' ಮಾಡಿಸಿಕೊಳ್ಳೋದೇ ಸ್ಟೈಲಾಗಿದೆ" ಎಂದು ರೇಗಿಸಿದ. ನಾನು ರೇಗಿ 'ಹೇಳಿದಷ್ಟು ಮಾಡಯ್ಯ' ಎನ್ನಲು, ಸುಮ್ಮನಾಗಿ 'ಬ್ರಷ್' ನ ಕಡೆಗೆ ಕೈಹಾಕಿದ.

ಬ್ರಷ್‌ನ್ನು ನೀರಿನಲ್ಲದ್ದಿ ಸೋಪಿನ ಮೇಲೆ ಉಜ್ಜಿದುದಾಯಿತು. ಒಂದು ಕಡೆಯ ಗಲ್ಲಕ್ಕೆ ಜೆನ್ನಾಗಿ ತಿಕ್ಕಿ ಸೋಪು ಹಚ್ಚಿದ. ಇನ್ನೇನು, ಇನ್ನೊಂದು ಗಲ್ಲಕ್ಕೆ ಸೋಪು ಹಚ್ಚಬೇಕು ಎಂದು ಸೋಪಿನಲ್ಲದ್ದಿದ ಬ್ರಷ್‌ನ್ನು ಮೇಲಕ್ಕೆ ತರುವ ಕಾಲಕ್ಕೆ ಸರಿಯಾಗಿ ಯಾರೋ ಸೆಲೂನಿನ ಬಾಗಿಲಿಗೆ ಬಂದು 'ರಾಮಯ್ಯಾ' ಎಂದು ಕರೆದರು. ರಾಮಯ್ಯ ಆ ಬ್ರಷ್‌ನ್ನು ಹಾಗೇ ಹಿಡಿದುಕೊಂಡು ಅವರೊಡನೆ ಮಾತನಾಡಲು ಹೊರಟುಹೋದ. ಅವರಿಬ್ಬರೂ ಬಾಗಿಲಲ್ಲಿಯೇ ನಿಂತು ಮಾತನಾಡಿದರು. ಬಂದವರ ಮನೆಯಲ್ಲಿ ಏನೋ ಮಂಗಳಕಾರ್ಯ; ಓಲಗಕ್ಕೆ ಹೇಳಲು ಬಂದಿದ್ದರು. ನಮ್ಮಲ್ಲಿ ಓಲಗಕ್ಕೆ ಕ್ಷೌರಿಕರೇ ಬರುವುದು ಹಿಂದಿನಿಂದ ಬಂದ ಪದ್ಧತಿ. ಆಲ್ಲದೆ ಮುನಿಸ್ವಾಮಿ ಕ್ಷೌರಮಾಡುವುದರಲ್ಲಿ ಹೇಗೆ ಪ್ರಸಿದ್ಧನಾಗಿದ್ದನೋ ಹಾಗೆಯೇ ರಾಮಯ್ಯ ಓಲಗಕ್ಕೆ ಎತ್ತಿದ ಕೈ. ರಾಮಯ್ಯ ಬಂದವರೊಡನೆ ಹಾಗೂ ಹೀಗೂ ಚೌಕಾಸಿ ಮಾಡಿ ಗಿರಾಕಿ ಹೊಂದಿಸಿಕೊಂಡ. ಅವನು ಹಿಂದಿರುಗಿ ಬಂದು, ಇನ್ನೊಂದು ಕಡೆಯ ಗಲ್ಲಕ್ಕೆ ಸೋಪು ಹಚ್ಚಲು ಶುರು ಮಾಡುವ ಹೊತ್ತಿಗೆ, ಹಚ್ಚಿದ್ದ ಕಡೆ ಸೋಪು ಒಣಗುತ್ತ ಬಂದಿತ್ತು. ಅಂತೂ ಅವನು ಪೂರ್ತಿ ಸೋಪು ಹಚ್ಚಿ ಕತ್ತಿ ಕೈಗೆ ತೆಗೆದುಕೊಳ್ಳುವ ಕಾಲಕ್ಕೆ, ಎರಡು ಸಲ ಬ್ರಷ್ ಬಾಯಲ್ಲಿ ಹೋಗಿ ನೊರೆಯು ರುಚಿ ನಾಲಗೆಗೆ ಹತ್ತಿತ್ತು.

ಸೋಪು ಹಚ್ಚಿದುದು ಮುಗಿದ ಮೇಲೆ, ಗೂಟಕ್ಕೆ ತಗುಲಿ ಹಾಕಿದ್ದ ಬೆಲ್ಟಿನ ಮೇಲೆ ಕತ್ತಿಯನ್ನು ಹರಿತಮಾಡಲು ಶುರು ಮಾಡಿದ; ಕತ್ತಿಯನ್ನು ಹರಿತ ಮಾಡುತ್ತ ಹರಟೆಗೂ ಶುರು ವಾಯಿತು. ರಾಮಯ್ಯನಿಗೆ ಯುದ್ಧದ ಮಾತೆಂದರೆ ಬಹು ಆಶೆ. ಬಂದವರೊಡನೆಲ್ಲಾ ಯುದ್ಧದ ಪ್ರಸ್ತಾಪವನ್ನು ಮಾಡಿ ವಿಷಯ ಗಳನ್ನು ಸಂಗ್ರಹಿಸುತ್ತಿದ್ದನು. ಮೊದಮೊದಲು ಹಿಟ್ಲರ್ ಅವನಿಗೆ ಬಹು ಮೆಚ್ಚಿನ ವೀರನಂತೆ. 'ನುಗ್ಗಿದರೆ ಹಾಗೆ ನುಗ್ಗಬೇಕು ಸ್ವಾಮಿ' ಅಂತ ಅನ್ನುತ್ತಿದ್ದನಂತೆ. ಆದರೆ ಒಂದು ದಿನ ಯಾರೋ ಗಿರಾಕಿ ಬಂದವರು 'ಹಿಟ್ಲರ್ ರಾಜ್ಯ ಅಂದರೆ ಹಿರಣ್ಯಾಕ್ಷನ ರಾಜ್ಯ ಕಾಣಯ್ಯ' ಎಂದು ಹೇಳಿ, ಹಿಟ್ಲರ್ ಪ್ರಜೆಗಳ ಗೋಳನ್ನು ತಿಳಿಸಿದರಂತೆ. ಅಂದಿನಿಂದ ಅವನು 'ಇಂಗ್ಲಿಷಿನವರ ಜಯವೇ ತನ್ನ ಜಯ' ಎಂದು ತಿಳಿದುಕೊಂಡಿದ್ದಾನೆ. ಅವನು ಕತ್ತಿಯನ್ನು ಮಸೆಯುತ್ತಾ ಹಿಂದಿನ ದಿನದ ಪೇಪರಿನ ಯುದ್ಧವಿಧ್ವಂಸನಗಳನ್ನೆಲ್ಲಾ ತಿಳಿದು ಕೊಂಡನು. ನಾನೆಷ್ಟು ಮೌನವನ್ನು ತಾಳಿಕೊಂಡಿದ್ದರೂ ಒಂದೆರಡು ಸಲ ನನ್ನ ಬಾಯಿಂದಲೂ ಉತ್ತರ ಬರುವಂತೆ ಮಾಡದೆ ಬಿಡಲಿಲ್ಲ. ಅಂತೂ ರಾಮಯ್ಯನ ವೃತ್ತಪತ್ರಿಕೆ ಅಂದರೆ ಅವನ ಗಿರಾಕಿಗಳೇ.

ರಾಮಯ್ಯ ಕತ್ತಿ ಹರಿತಮಾಡುವುದನ್ನು ಮುಗಿಸಿ ಕ್ಷೌರ ಸುರು ಮಾಡುವ ಕಾಲಕ್ಕೆ, ಹಚ್ಚಿದ್ದ ಸೋಪಿನ ಬುರುಗು ಆರುತ್ತಾ ಬಂದು ನನಗೆ ತಿನಿಸು ಸುರುವಾಗಿದ್ದಿತು. ಕಡೆಗೆ ರಾಮಯ್ಯ ಕತ್ತಿಯನ್ನು ಕಿವಿಯ ಬಳಿ ೪-೬ ಸಲ ಗುರಿಯಿಟ್ಟು 'ಕಟ್'ಮಾಡಿ, ಒಂದು ಕಡೆ ಕೆನ್ನೆಯಮೇಲೆ ಎಳೆದನು. ಇನ್ನೊಂದು ಕಡೆಯೂ ಎಳೆದುದಾಯಿತು. ಇನ್ನೇನು ಗಡ್ಡದ ಮೇಲೆ ಕತ್ತಿಯಾಡಬೇಕು-ಅನ್ನುವಷ್ಟರಲ್ಲಿ, ರಾಮಯ್ಯ ಸರಕ್ಕನೆ ಹೊರಗೆ ಓಡಿಹೋದನು. ಎಲ್ಲರ ದೃಷ್ಟಿಯೂ ಬಾಗಿಲ ಕಡೆ ಹರಿಯಿತು. ಮುನಿಸ್ವಾಮಿಯೂ ಹೊರಗೆ ನೋಡಿಕೊಂಡು ಬರಲು ಹೋದ. ರಾಮಯ್ಯ ಹೊರಗೆ ಓಡಿಹೋದ ರಭಸದಲ್ಲಿ, 'ಇನ್ನೇನು ಅನಾಹುತ ನಡೆಯಿತೋ'

ಎಂದು ನಾವೆಲ್ಲ ಕಳವಳಕ್ಕೀಡಾದೆವು. ಮುನಿಸಾಮಿ ಕೂಡಲೇ ಒಳಗೆ ಬಂದು "ಏನೂ ಹೆದರಬೇಡಿ ಸ್ವಾಮಿಗಾ, ಈಗಲೇ ಬರುತ್ತಾನೆ" ಎಂದು ಹೇಳಿದ. ನಾವೆಲ್ಲರೂ ಬಹಳ ಆತುರದಿಂದ 'ಏನು ಸಮಾಚಾರ?' ಎಂದು ಕೇಳಿದೆವು. ವಿಷಯ ಇಷ್ಟೇ: ರಾಮಯ್ಯ ಈಗ ಎರಡು ತಿಂಗಳ ಹಿಂದೆ ಯಾರ ಮನೆಗೋ ಓಲಗಕ್ಕೆ ಹೋಗಿದ್ದನಂತೆ; ಅವರ ಬಾಕಿ ಬಂದಿರಲಿಲ್ಲ. ಯಾವಾಗ ಹೋದರೂ ಅವರು ಮನೆಯಲ್ಲಿ ಇಲ್ಲವೆಂದೇ ಹೇಳಿ ಕಳಿಸುತ್ತಿದ್ದರಂತೆ. ಅವರು ಅಕಸ್ಮಾತ್ ಬೀದಿಯಲ್ಲಿ ಹೋಗುತ್ತಿದ್ದುದು ಕಾಣಿಸಿದುದರಿಂದ, ರಾಮಯ್ಯ ಹಾಗೆ ಓಡಿಹೋದದ್ದು. ಮುನಿಸಾಮಿ ಇದನ್ನೆಲ್ಲಾ ಹೇಳಿ ಮುಗಿಸುವ ಹೊತ್ತಿಗೆ ರಾಮಯ್ಯನೂ ಬಂದ. ಅವನನ್ನು ನೋಡಿ ಎಲ್ಲರಿಗೂ ನಗುಬಂತು. ಆದರೆ ನನಗೆ ಮಾತ್ರ ಸ್ವಲ್ಪ ಬೇಗಿತ್ತು. ದುರುಗುಟ್ಟಿಕೊಂಡು ನಾನು ಅವನನ್ನು ನೋಡುತ್ತಲೆ ಅವನು ಬಹುವಿನಯವಾಗಿ 'ಕ್ಷಮಿಸಿ ಸಾರ್' ಎನ್ನುತ್ತಾ ಪುನಃ ನೋವು-ಬ್ರಸ್ಸಿನ ಕೆಲಸಕ್ಕೆ ಶುರುಮಾಡಿದ.

ತನ್ನ ಬೆರಳುಗಳನ್ನು ನನ್ನ ಗಲ್ಲದಲ್ಲಿ ಒತ್ತುತ್ತಾ, ಮುಖವನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಇತ್ತಿಂದತ್ತ ಅತ್ತಿಂದಿತ್ತ ತಿರುಗಿಸುತ್ತಾ, ಆಗಾಗ ಚರ್ಮವನ್ನು ಎಳೆಯುತ್ತಾ ರಾಮಯ್ಯ ಕ್ಷೌರ-ಕಾರ್ಯವನ್ನು ಮುಂದುವರಿಸಿದ. ಕೆನ್ನೆಯ ಭಾಗ ಕ್ಷೌರಮಾಡುವ ವರೆಗೆ ನನಗೇನೂ ತೊಂದರೆಯಾಗಲಿಲ್ಲ. ಆದರೆ ನನ್ನ ಗಡ್ಡವನ್ನು ಕೆರೆಯುವಾಗ ಮಾತ್ರ ಕಣ್ಣಲ್ಲಿ ನೀರು ಬರುವ ಹಾಗಾಯಿತು. ಸಾಲದುದಕ್ಕೆ ಅವನ ಮುಖ ನನ್ನ ಮುಖದ ಹತ್ತಿರ ಬಂದಾಗ ಲೆಲ್ಲಾ, ಸಹಿಸಲಸಾಧ್ಯವಾದ ಬೀಡಿಯವಾಸನೆ ಅಸಹ್ಯವನ್ನುಂಟು ಮಾಡುತ್ತಿತ್ತು. ಹಾಗೇ ಮೊದಲನೆಯ ಸುತ್ತು ಮುಗಿಯಿತು.

ಎರಡನೆಯ ಸಲ ನಯದ ಕೆಲಸಕ್ಕೆ ಮೊದಲಾಯಿತು. ಸೋಪು-ಬ್ರಸ್ಸಿನ ಕೆಲಸ ನಡೆಯುತ್ತಿದ್ದ ಹಾಗೇ "ಉಲ್ಟಾ ಹೊಡೆಯಲೇ ಸ್ವಾಮಿಗಾ?" ಅಂದ. ಸಾಮಾನ್ಯವಾಗಿ 'ಉಲ್ಟಾ' ಹೊಡೆಯಿಸುವ ಪದ್ಧತಿಯನ್ನಿಟ್ಟುಕೊಂಡಿರದಿದ್ದರೂ, ಈ ದಿನ—ದೀಪಾವಳಿಗೆ ಮೂವನ ಮನೆಗೆ ಹೊರಟಿರುವ ದಿನ—ಮಾತ್ರ ಮನಸ್ಸು ಹೇಗೋ ತಿರುಗಿ "ಹೂಂ" ಅಂದು ಬಿಟ್ಟೆ. ರಾಮಯ್ಯ—ಅದೇ ಚೆನ್ನಾ! ಸಾರ್, ನೋಡಿ, ನುಣ್ಣಗೆ ಏಂಲಿಟೆರಿ ಷೇಪ್' ಮೂಡಿಸಿ ಬಿಡುತ್ತೇನೆ. ಮುಖ ಎರಡು ದಿನ ಲಕ್ಷಣವಾಗಿ ಏಂಜಿನಿಯರ್ ತರಹ ಇರಬೇಕು!' ಎಂದು ಹೇಳಿ ಕೈಗೆ ಕತ್ತಿ ತೆಗೆದುಕೊಂಡ ಅವನು 'ಉಲ್ಟಾ'ನ್ನೇ ಮೆಚ್ಚಿ ಮಾತನಾಡಿದ್ದನ್ನು ಕಂಡು ನನಗೆ ಆಶ್ಚರ್ಯವಾಯಿತು. ಏಕೆಂದರೆ, ಈಗ ಸ್ವಲ್ಪಹೊತ್ತಿಗೆ ಮುಂಚೆ, ನಾನು ಅಲ್ಲಿ ಕುಳಿತಿದ್ದಹಾಗೆಯೇ, ಹಿಂದಿನವರಿಗೆ ಅದೇ ಪ್ರಶ್ನೆಯನ್ನು ಕೇಳಿದ್ದ. ಅವರು "ಉಲ್ಟಾಬೇಡ; ಒಂದು ಪಕ್ಕಕ್ಕೆ ಎಳೆದು ಬಿಡು" ಅಂದರು. ಆಗ ರಾಮಯ್ಯ "ಅದು ಸರಿ ಸ್ವಾಮಿ, ಉಲ್ಟಾ ಬಹಳ ಕೆಟ್ಟದ್ದು, ಅದರಿಂದ ಕೂದಲು ಒರಟಾಗಿ ಚರ್ಮದ ಮೃದುತ್ವವೂ ಕೆಡುತ್ತೆ. ಇಷ್ಟಕ್ಕೂ ಎಷ್ಟು ಉಲ್ಟಾ ಹೊಡೆದು ಎಷ್ಟು ನುಣ್ಣಗೆ ಮಾಡಿಕೊಂಡರೇನು ಸ್ವಾಮಿ, ಸಂಜೆ ಆಗೋಹೊತ್ತಿಗೆ ತರಕಲು-ತರಕಲಾಗಿ ಬಿಡುತ್ತೆ, ಒಂದು ದಿನ ಕೂಡ ನುಣ್ಣಗಿರೋದಿಲ್ಲ..' ಎಂದು ಮುಂತಾಗಿ ಹೇಳಿದ್ದ. ಅವನು ಅಂದುದನ್ನು ಕೇಳಿ 'ಸರಿ! ಹೊತ್ತು ತಿರುಗಿದ ಹಾಗೆ ತಿರುಗೋನು' ಅಂದುಕೊಂಡೆ.

ಎರಡನೆಯ ಸಲ ನನ್ನ ಗಡ್ಡದ ಮೇಲೆ ಅವನು ನಯಗೆಲಸವನ್ನು ಮಾಡುವಾಗ ಆದ ನೋವನ್ನು ನಾನೆಂದಿಗೂ ಮರೆಯಲಾರೆ. ಒಂದು ಸಲ ನಾನು 'ಹಾ' ಎಂದು ಚೀರಬೇಕಾಯಿತು; ಇನ್ನೊಂದು ಸಮಯದಲ್ಲಾಗಿದ್ದರೆ ಆ ನೋವಿಗೆ ತಲೆ ನಡುಗಿಹೋಗುತ್ತಿತ್ತು. ಆದರೆ ಈಗ ಕ್ಷೌರಿಕನ ಕೈಲಿ ತಲೆಕೊಟ್ಟು, ಅವನು ಮುಖದ ಮೇಲೆ ಕತ್ತಿ ಆಡಿಸುತ್ತಿರುವಾಗ, ತಲೆಯಾಡಿಸುವ ಸ್ವಾತಂತ್ರ್ಯಕೂಡಾ ಇಲ್ಲ. ನಾನು ನೋವೆನ್ನುತ್ತಲೆ ಅವನು ಪುನಃ ಕತ್ತಿಯನ್ನು ಹರಿತ ಮಾಡಲು ಶುರುಮಾಡಿದ. ಇನ್ನೇನು, ಎಲ್ಲಾ ಮುಗಿಯಿತು.. ಎಂದುಕೊಂಡಿರುವಾಗ, ಬಾಯಿ ಮುಗ್ಗುಲಲ್ಲಿದ್ದ ಮೊಡವೆ ಗುಳ್ಳೆಯ ಮೇಲೆ ಕತ್ತಿ ಹಾಕಿಬಿಟ್ಟ. ನಾನು ಕುಳಿತುಕೊಳ್ಳುವ ಮೊದಲೇ ಆದರ ಬಗ್ಗೆ ಸೂಚನೆ ಕೊಟ್ಟಿದ್ದೆ. ಮೊದಲನೆಯ ಸುತ್ತಿ ನಲ್ಲಿ ಹುಷಾರಾಗಿದ್ದವನು, ಎರಡನೆಯ ಸಲ, ಸೋಪು ಆದನ್ನು ಮುಚ್ಚಿದ್ದುದರಿಂದ ಅದನ್ನು ಕೊಯ್ದುಬಿಟ್ಟ. ರಕ್ತ ಧಾರಾಕಾರವಾಗಿ ಸುರಿಯಿತು. ಅವನು ಲೊಚ್ ಲೊಚ್ ಎನ್ನುತ್ತಾ ಬೇಗನೆ ಆದರಮೇಲೆ ಪೌಡರನ್ನು ಒತ್ತಿದ.

ನನಗೆ ಪೌಡರ್ ಹಾಕುವುದಕ್ಕೆ ಮೊದಲು, ಅವನ ಅಂಗಡಿಯಲ್ಲಿ ಒಂದು ಹೊಸದಾದ ಸಣ್ಣ ವಿಷನ್ ಇರುವುದೆಂದೂ, ಬೇಕಾದರೆ..ಎಂದು ಹೇಳಿದ. ನಾನು ಬೇಡವೆಂದೆ. ಆಮೇಲೆ ಒಂದು ತೈಲ ಶಿಫಾರಸು ಮಾಡಿದ. 'ಉಪಯೋಗಿಸಿ; ಚೆನ್ನಾಗಿದ್ದರೆ ದುಡ್ಡು ಕೊಡಿ' ಎಂದ. ಅದನ್ನೂ ಬೇಡವೆಂದೆ. ನಮ್ಮ ಕ್ಷೌರಿಕರು ತಮ್ಮಲ್ಲಿರುವ ಹಳೆಯ ಸಾಮಾನುಗಳಿಗೆ ಹೀಗೆ ಗಿರಾಕಿ ಹೊಂದಿಸುವುದೂ ಉಂಟು. ಆದರೆ ನನ್ನ ಹತ್ತಿರ ಅವನ ಜೊಗಳಿಕೆ ನಡೆಯಲಿಲ್ಲ. ತಲೆಗೆ ಎಣ್ಣೆ ಹಚ್ಚಿ, ನೀರು ಚಿಮುಕಿಸಿ, ಓರಣವಾಗಿ ಬಾಚಿದ. ಕಡೆಯ ಮಾತಾಗಿ "ಕ್ರಾಪು ಇನ್ನೂ ಸ್ವಲ್ಪ 'ಷಾರ್ಪ್' ಆಗಿದ್ದರೆ ಚೆನ್ನಾಗಿತ್ತು" ಅಂದ. ನಾನದನ್ನು ಕಿವಿಯಮೇಲೆ ಹಾಕಿಕೊಳ್ಳಲಿಲ್ಲ. ಕ್ರಾಪು ಬಾಚಿ, ಸ್ನೋ ಹಚ್ಚಿದ್ದಾಯಿತು. ಮುಂದಿನವನ ಸರದಿಗೆ 'ನಾರ' ಎಂದ. ನಾನು ಕುರ್ಚಿ ಬಿಟ್ಟು ಎದ್ದೆ. ದುಡ್ಡು ಕೊಟ್ಟು ಅಂಗಡಿ-ಮೆಟ್ಟಿಲು ಇಳಿದೆ. ಪಕ್ಕದ ಅಂಗಡಿಲಿ ಒಂಭತ್ತು ಘಂಟೆ ಹೊಡೆದುದು ಕೇಳಿಸಿತು.

ಅಂತೂ ರೈಲು ತಪ್ಪಿಹೋಯಿತು. ಕಾದಿರುವವರಿಗೆ ಎಷ್ಟು ನಿರಾಶೆಯೋ. ರೈಲು ತಪ್ಪಿತು..ಎಂದು ಕೇಳಿದರೆ, ಶುದ್ಧಸೋಮಾರಿ ಎಂದುಕೊಳ್ಳುತ್ತಾರೆಯೋ ಏನೋ. ಮಧ್ಯಾಹ್ನ ೨ ರ ವರೆಗೂ ಬೇರೆ ರೈಲಿಲ್ಲ. ಯಾವುದೋ ಬಸ್ ಹೊರಡುವುದೆಂದು ಕೇಳಿದ್ದೇನೆ. ಅದಾದರೂ ಸಿಗುವುದೇನೋ ವಿಚಾರಿಸುತ್ತೇನೆ. ಅಂತೂ ದೀಪಾವಳೀ ಬಂದಾಗಲೆಲ್ಲಾ ಈ ದೀಪಾವಳೀ ಕ್ಷೌರ ನನಗೆ ಚಾಪಕ್ಕೆ ಬಾರದೆ ಇರುವುದಿಲ್ಲ.

ಶಿವನಯನ ಲೀಲೆ

ಶ್ರೀ. ' ಅಂಬಿಕಾತನಯ ದತ್ತ '

★

ಶಿವನ ನೋಟ ಸತಿಯ ಕೂಟ ಏನು ಆಟ ಆಡಿತು—
ಏನೇನೋ ಮಾಡಿತು!

ಕೂದಲನ್ನು ಹಣೆಗೆಯಂತೆ ಹಿಕ್ಕಿ ಹಿಕ್ಕಿ ಬಾಚಿತು—
ಕುರುಳಿಗೆ ಕುಡಿ ಚಾಚಿತು!
ಹಣೆಯ ಕೋರೆ-ತಿಂಗಳಲ್ಲಿ ಉಬ್ಬಿ ಉಬ್ಬಿ ಹಬ್ಬಿತು
ಮತ್ತೆ ಮುತ್ತಿ ತಬ್ಬಿತು!

ಕಣ್ಣ ಚಿಕ್ಕೆಗಳಲಿ ಕೆಳೆಯನೆಳಸಿ ಬಳಸಿ ಬಂದಿತು—
ಒಂದುಗೂಡಿ ನಿಂದಿತು!
ಕೆನ್ನೆಗಳಿಗೆ ಕೆಂಪು ಹರಹಿ ಮೆಲ್ಲನೆ ತುಟಿ ಮುಟ್ಟಿತು—
ಮೆಲ್‌ನಗೆಯೊಲು ಹುಟ್ಟಿತು!

ಕೊರಳಿನಲ್ಲಿ ಜೋತು, ಹೆಗಲಿನಲ್ಲಿ ಸೋತು ಬಿದ್ದಿತು—
ಬಾಹುಲತೆಯ ತಿದ್ದಿತು!
ಕೈ ಕೈಯನು ಹಿಸುಕುವಂತೆ ಬೆರಳಿನೊಡನೆ ಆಡಿತು—
ತಂಪ ಮೆದುಪ ನೋಡಿತು!

ಎದೆಯ ಅಳದಲ್ಲಿ ಮುಳುಗಿ ಅದರ ಹರುಹ ಬೆಳಗಿತು—
ಅದರೆತ್ತರಕುಳಿದಿತು!
ಪಕ್ಕೆಗಳಿಗೆ ತಕ್ಕೆಯಾಗಿ ಕಂಕುಳನ್ನು ಸೋಂಕಿತು—
ಬೆನ್ನ ತಟ್ಟಿ ನೂಂಕಿತು!

ನಡುವಿಗೆ ನಡುಪಟ್ಟೆಯಾಗಿ ತೊಡೆಗಳಲ್ಲಿ ತಂಗಿತು—
ಧ್ಯಾನದಲ್ಲಿ ಇಂಗಿತು!
ಆಡಿಯಿಂದಲು ಮುಡಿಯವರೆಗು ಅಳೆದು ಬಳಿದು
ಹೊಳೆದಿತು—
ಮೈಮನಗಳ ತೊಳೆದಿತು!

ಅಂತರಂಗದಲಿತ ರಕ್ತರಂಗವಾಗಿ ಮೂಡಿತು—
ಅಂತರಾತ್ಮಗೂಡಿತು!
ಅವನ ನೋಟ ಅವಳ ಕೂಟ ಏನು ಮಾಟ ಮಾಡಿತು—
ಏನೇನೋ ಆಡಿತು!

ನೀನಾರೆ?—

ಶ್ರೀ. ' ವಿ. ಸಿ. '—

★

ಬಿಳಿಯ ಮುಗಿಲಿನ ಮೊಗವನರಳಿಸಿ
ನಗಿಸಿ ಹೊಳೆಯುವ ಎಳೆಯ ಮಿಂಚಿನ
ತೆರದಿ ಹೊಳೆಯುವ ತಿಳಿಯ ಕಂಗಳ
ಚೆಲುವೆ ನೀನಾರೆ?
ನಗುವ ಕಣ್ಣಳ ಮಿನುಗಿ ನೀನಾರೆ?

ಬೆದರನರಿಯುವ ಮೊಗದ ಸೊಗಸೋ
ನುಡಿವ ಚೆದುರಿನ ಸೆಳೆಯ ತುಟಿಯೋ
ನಡೆಗೆ ಬಳುಕುವ ನುಣುಪು ಕದಪೋ
ಚೆಲುವೆ ನೀನಾರೆ?
ಮಿರುಗು ಮೂಗುತಿಬೆಡಗಿ ನೀನಾರೆ?

ನೆಲಕೆ ಹೆಜ್ಜೆಯು ಸೋಕಲಿಲ್ಲವೊ
ಏನು ಭ್ರಮೆಯನು ಎರಚಿ ಚಿಮ್ಮುವೆ,
ನಟ್ಟ ಕೂರಲಗಂತೆ ನಿಲ್ಲುವೆ
ಚೆಲುವೆ ನೀನಾರೆ?
ಜಿಗರಿ ನಡಿಗೆಯ ಹೆಣ್ಣೆ ನೀನಾರೆ?

ತೆರೆವ ತೋಳಿನ ಅಂಕೆಯೊಲ್ಲೆ,
ಬಯಕೆ ಬೀಟಿಕೆ ಕರಗೆ, ಸಲ್ಲೆ,
ಒಂದನೊಲ್ಲದೆ ಎಲ್ಲಕೊಳ್ಳುವ
ಚೆಲುವೆ ನೀನಾರೆ?
ಸೆಳೆವ ಜರೆಯುವ ಕೆಣಕಿ ನೀನಾರೆ?

* * *

ದಾರಿಗಣ್ಣಳ ಬಲೆಯೆ, ಸೆರೆಯೆ
ನೋಡಿ ನೋಡದ ಬೆಡಗೆ ಕೊಂಕೆ,
ಕೊಲುವ ಮೋಹದ ಬೆರಗೆ ಸೆರಗೆ
ಚೆಲುವೆ ನೀನಾರೆ?
ಮಾಯೆ ಬೀಸುವ ಕುಂಚವಂಚೇನೆ?
ಮಿಂಚಿ ನಿಂಚದ ಮಿಂಚಿನಂಚೇನೆ?

ಕಣ್ಣು ಮೋಹದ ಕರೆಯನೊಲ್ಲೆ,
ನುಡಿವ ತುಟಿಗಳ ತವಕವೊಲ್ಲೆ,
ಒಲಿದ ಬಗೆಗಳ ವೇಗವೊಲ್ಲೆ;
ತಡೆವೆಯಿಂತೇಕೆ?
ಬಂಜೆ ಬಿಂಕ ನುಡಿಯೆ ನಿಲ್ಲೆ,
ಸೆಡೆವೆಯಿಂತೇಕೆ?

ಅವರ್ಣನೀಯ ಅರ್ವಾಚೀನ ಸೌಂದರ್ಯ

(ಲಘುನಿಬಂಧ)

ಪ್ರೊ. ವಿ. ಜಿ. ಕುಲಕರ್ಣಿ ಎಂ.ಎ., ಎಲ್‌ಎಲ್.ಬಿ.

★

ಆಧುನಿಕ ಕವಿಗಳು ತಮ್ಮ ಕಾವ್ಯಗಳಿಗೆ ಕೇವಲ ಹಳೆಯ ವಸ್ತುಗಳನ್ನೆ ಹಳೆಯ ವ್ಯಕ್ತಿಗಳನ್ನೆ, ಹಳೆಯ ಸಂಸ್ಕೃತಿಯನ್ನೆ ಮೂಲವನ್ನಾಗಿ ಆ ಯ್ದು ಕೊ ಂ ಡ ರೆ ಆಗದು. ಹೊಸಕಾಲ, ಹೊಸಜಗತ್ತು, ಹೊಸವ್ಯಕ್ತಿ, ಹೊಸಸಂಸ್ಕೃತಿ ಇವು ಗಳನ್ನೂ ಕಾವ್ಯಕ್ಕೆ ವಸ್ತುಗಳೆನ್ನಾಗಿ ಸ್ವೀ ಕ ರಿ ಸ ಬೇ ಕು.

★



ಏಕೆ ? ಇಂದಿನ ವೇಷ-ಭೂಷಣಗಳಲ್ಲಿ ಏನೂ ರಮಣೀಯತೆ ಇಲ್ಲವೆ ? ಕೇವಲ ಹಳೆಯ ರೀತಿಯ ಉಡುಪಿನಲ್ಲಿ ಮಾತ್ರ..... ಬೆಡಗು ಇದೆಯೆ ?

ವಿಶ್ವದ ರಹಸ್ಯವನ್ನೂ ಆಶ್ಚರ್ಯವನ್ನೂ ಸೌಂದರ್ಯವನ್ನೂ ಹೃದಯಹಾರಿಣಿಯಾದ ರೀತಿಯಲ್ಲಿ ನಮಗೆ ತಿಳುಹಿಸಿ ಕೊಡುವುದು ಕಾವ್ಯದ ಮುಖ್ಯ ಕಾರ್ಯ. ಕವಿಯು ತನ್ನ ದಿವ್ಯದೃಷ್ಟಿಯಿಂದ ಸುತ್ತುಮುತ್ತಲಿನ ವಸ್ತುಗಳನ್ನು ನಿರೀಕ್ಷಿಸಿ, ಅವುಗಳಲ್ಲಿ ಅಡಗಿರುವ ಸೌಂದರ್ಯವನ್ನು ತೋರಿಸುತ್ತಾನೆ; ಸಾಮಾನ್ಯರಾದ ನಮಗೆ ಅನೇಕ ಸಾರಿ ವೇದ್ಯವಾಗದ ಬೆಡಗನ್ನು ತೋರಿಸುತ್ತಾನೆ. ಜಗದ ಕವಿಶ್ರೇಷ್ಠರು ಎಲ್ಲಾ ಕಾಲಗಳಲ್ಲಿಯೂ ಎಲ್ಲಾದೇಶಗಳಲ್ಲಿಯೂ ಈ ಕಾರ್ಯ ಮಾಡಿದ್ದಾರೆ. ನಮ್ಮ ಪೂರ್ವದ ಕವಿಗಳಿಗೆ ನಿಯಮ ನಿರ್ಬಂಧಗಳು ಬಹಳವಾಗಿದ್ದುದರಿಂದ, ಅವರು ಎಷ್ಟೋ ವಿಷಯ ಗಳನ್ನು ಬಿಟ್ಟುಬಿಡಬೇಕಾಯಿತು. ಕಾವ್ಯದಲ್ಲಿ ಕೆಲವೊಂದು ವಿಷಯಗಳ ವರ್ಣನೆ ಮಾತ್ರ ಇರಬೇಕೆಂದೂ ಬೇರೆ ಅನೇಕ ವಿಷಯಗಳು ಬರಕೂಡದೆಂದೂ ಕಟ್ಟುಗಳಿದ್ದುವು. ಇಂತಹ ಕಟ್ಟುಗಳಿಗೆ ಒಳಗಾಗಿ ನಮ್ಮ ಕವಿಗಳನೇಕರು ತಮ್ಮ ಸುತ್ತು-ಮುತ್ತಲಿನ ಅನೇಕ ಸಾಮಾನ್ಯವಿಷಯಗಳನ್ನೂ ವ್ಯಕ್ತಿಗಳನ್ನೂ ಕಾವ್ಯಕ್ಷೇತ್ರದಿಂದ ಹೊರದೂಡಿದರು. ನಮ್ಮ ಹಳೆಯ ಕಾವ್ಯ ದಲ್ಲಿ ವಿಶಿಷ್ಟವಾದ ಕೆಲವು ಹೂವುಗಳ, ಕೆಲವು ಪಕ್ಷಿಗಳ, ಕೆಲವು ವೃಕ್ಷಗಳ, ಕೆಲವು ವರ್ಗಗಳ ಜನರ ವರ್ಣನೆಗಳು ಮಾತ್ರ ಮೇಲಿಂದ ಮೇಲೆ ಬರುತ್ತವೆ.

ಆಧುನಿಕ ಕಾವ್ಯವು ಇಂತಹ ಬಂಧನಗಳನ್ನು ಎಲ್ಲಾ ಸ್ವತಂತ್ರ ವಾಗಿದೆಯೆಂದು ಪಂಡಿತರಾದವರು ಹೇಳುತ್ತಾರೆ. ಆಧುನಿಕ ಕವಿಗಳೂ ಹೇಳುತ್ತಾರೆ. ಆಧುನಿಕ ಕವಿಗಳು ಹಿಂದಿನ ಕವಿಗಳಿಗಿಂತ ಹೆಚ್ಚು ವಿಷಯಗಳನ್ನು ಕುರಿತು, ಹೆಚ್ಚು ಸಾಮಾನ್ಯವಾದ ವಿಷಯಗಳನ್ನು ಕುರಿತು ಹಾಡಿದ್ದಾರೆಂಬುದು ನಿಜ. ಇಂದಿನ ಕವಿಗಳು ಹೊಸ ಮಾರ್ಗಗಳನ್ನು ಹುಡುಕಲಾರಂಭಿಸಿದ್ದಾರೆ; ಹೊಸ ಹೊಸ ವಸ್ತುಗಳನ್ನು ಕುರಿತು ಕವನಗಳನ್ನು ರಚಿಸ ಹತ್ತಿದ್ದಾನೆ. ಹಳಗನ್ನಡ ಕಾವ್ಯಕ್ಕೆ ಹಾಕಿದ್ದ ನಿರ್ಬಂಧಗಳು ಈಗ ಮಾಯವಾಗಿವೆ. ವ್ಯಾಕರಣದಲ್ಲಿಯಾಗಲಿ, ಛಂದಸ್ಸಿನಲ್ಲಿ ಯಾಗಲಿ, ಕಾ ವ್ಯ ದ ವಸ್ತುವಿನಲ್ಲಿಯಾಗಲಿ ನಮ್ಮ ಕವಿಗಳು ಸ್ವಾತಂತ್ರ್ಯವನ್ನು – ಒಮ್ಮೊಮ್ಮೆ ಸ್ವೇ ಚ್ಛಾ ವ್ಯ ತ್ಕಿ ಯ ನ್ನೂ ಆವಲಂಬಿಸ ಹತ್ತಿದ್ದಾರೆ. ಇದೆಲ್ಲ ನನ್ನ ದೃಷ್ಟಿಯಿಂದ ಇಷ್ಟವೆ; ಒಳ್ಳೆಯದೆ. ಜೀವನದ ಯಾವುದೇ ಕ್ಷೇತ್ರದಲ್ಲಿಯೇ ಆಗಲಿ, ನಿರ್ಬಂಧಕ್ಕಿಂತ ಸ್ವಾತಂತ್ರ್ಯವು ವಿಂಗಿಲು. ನಿರ್ಬಂಧಗಳು ಪಂಜ್ಜಾ ದಂತೆ ಸಹಜಪ್ರತಿಭೆಯ ಓಘಾಟಕ್ಕೆ ತಡೆಬರುವುದು ಸ್ವಾಭಾವಿಕ ವದೆ. ಇನ್ನು ಸಹಜಪ್ರತಿಭೆಯೇ ಇಲ್ಲದ ಕವಿಯ ಕಾವ್ಯವು— ಇಂಥ ಕಾವ್ಯವು ಎಂದಿನಂತೆ ಇಂದೂ ರಾತಿಗಟ್ಟರೆ ಸಿಕ್ಕುತ್ತದೆ— ನಿರ್ಬಂಧಗಳಿರಲಿ, ಸ್ವಾತಂತ್ರ್ಯವಿರಲಿ, ಅತಿಗಬ್ಬವಾಗುತ್ತದೆ. ನಮ್ಮ ಇಂದಿನ ಕವಿಗಳು, ಆಧುನಿಕಜೀವನದ ವಿವಿಧ ವಿಷಯಗಳ ಸೌಂದರ್ಯವನ್ನು ಯಾವ ರೀತಿಯಾಗಿ ತೋರಿಸಲಿಕ್ಕೆ ಯತ್ನಿಸಿದ್ದಾರೆ, ಇಲ್ಲವೆ ತೋರಿಸದೆ ಬಿಟ್ಟು ಬಿಟ್ಟಿದ್ದಾರೆ.. ಎಂಬುದನ್ನು ಕುರಿತು, ಅತಿ ಸಂಕ್ಷೇಪವಾಗಿ ಈ ನಿಬಂಧದಲ್ಲಿ ವಿವೇಚಿಸುತ್ತೇನೆ.

ಒಟ್ಟಿನಲ್ಲಿ ನೋಡಿದರೆ, ಆಧುನಿಕ ಜೀವನವನ್ನು ವರ್ಣಿಸುವ, ಬೆಳಗುವ ಕಾವ್ಯವ ನನ್ನಲ್ಲಿ ಇನ್ನೂ ಅಷ್ಟು ಹೆಚ್ಚಾಗಿ ಇಲ್ಲವೆಂದೇ ಹೇಳಬೇಕಾಗುತ್ತದೆ. ಇಂದಿನ ಕವಿಗಳು, ಕಾವ್ಯದ ಚಿರಂತನವನ್ನು-

ಗೆಳಾದ ಪ್ರೇಮ, ವಿರಹ, ಮರಣ, ನಿಸರ್ಗಸೌಂದರ್ಯ ಇವೇ ಮೊದಲಾದುವುಗಳನ್ನು ಕುರಿತು—ತಮ್ಮ ಶಕ್ತ್ಯನುಸಾರವಾಗಿ—ಹಾಡಿದ್ದಾರೆ. ಇವುಗಳನ್ನು ಕುರಿತು ಎಲ್ಲಾಕಾಲದ ಕವಿಗಳೂ ಹಾಡಿದ್ದಾರೆ. ಇನ್ನು ಕೆಲವು ಇಂದಿನ ಕವಿಗಳು ಒಮ್ಮೊಮ್ಮೆ ಇಂದಿನ ಸಮಸ್ಯೆಗಳನ್ನು ತಮ್ಮ ಕವನಗಳಲ್ಲಿ ವಿವೇಚಿಸುತ್ತಾರೆ. ವಿಧವೆಯ ಬಾಳು, ನಮ್ಮದೇಶದ ದುಃಸ್ಥಿತಿ, ಬಡತನ ಮೊದಲಾದುವು ಕಾವ್ಯದಲ್ಲಿ ವರ್ಣಿತವಾಗಿವೆ. ಹಳ್ಳಿಯವರ ಜೀವನವನ್ನು—ಅದರಲ್ಲಿಯೂ ಪ್ರಣಯವನ್ನು—ಹಳ್ಳಿಯ ಭಾಷೆಯಲ್ಲಿಯೇ ಚಿತ್ರಿಸಿದ ಕವನಗಳೂ ಇವೆ. ಆದರೆ ನಮ್ಮ ಜೀವನದ ಬಹುಭಾಗವನ್ನು ಆಕ್ರಮಿಸಿದ ಯಂತ್ರಗಳ ವರ್ಣನೆಯನ್ನು ನಮ್ಮ ಯಾವ ಕವಿಯೂ ಮಾಡಿದಂತೆ ತೋರುವುದಿಲ್ಲ. ಒಂದು ರೇಲ್ವೆಗಾಡಿಯ ವರ್ಣನೆಯನ್ನಾಗಲಿ, ಸಾಯ್ಕಲ್ಲಿನ ವರ್ಣನೆಯನ್ನಾಗಲಿ ಆಧುನಿಕ ಕಾವ್ಯದಲ್ಲಿ ನಾವು ಕಾಣಲಾರೆವು.

ಇದಕ್ಕೆ ಕಾರಣವೇನಿದ್ದಿರಬಹುದು? ಯಂತ್ರಗಳೂ ಸೌಂದರ್ಯವೂ ಪರಸ್ಪರ ವಿರೋಧಿಯಾದ ವಸ್ತುಗಳೆಂದೂ ಸೌಂದರ್ಯವಿರಹಿತವಾದ ವಸ್ತುಗಳು ಕಾವ್ಯದಲ್ಲಿ ಬರಕೂಡದೆಂದೂ ನಮ್ಮ ಕವಿಗಳ ವಿಚಾರವಿದ್ದಿರಬಹುದೆ? ಅಥವಾ ಈ ಹೊಸಯುಗದ ಹೊಸ ಯಂತ್ರಗಳಿಗೆ ಪ್ರತಿಯಾಗಿ ಇನಿದಾದ ಕನ್ನಡ ಶಬ್ದಗಳಿಲ್ಲವೆಂದು ಅವುಗಳ ಗೋಜಿಗೆ ಹೋಗದೆ ಬಿಟ್ಟಿರಬಹುದೆ? ಯಂತ್ರಗಳು ಸೌಂದರ್ಯರಹಿತವಾದ ವಸ್ತುಗಳೆಂದು ಇಟ್ಟುಕೊಂಡರೂ, ನಮ್ಮ ಕವಿಗಳು ಅವುಗಳ ವಿಕಾರರೂಪಗಳನ್ನಾದರೂ ಏಕೆ ವರ್ಣಿಸಿಲ್ಲ? ಆಧುನಿಕ ಜೀವನವು ಯಂತ್ರಗಳಿಲ್ಲದೆ ಒಂದೆ ಕ್ಷಣವಾದರೂ ನಡೆಯಲಾರದು; ಎಂದಮೇಲೆ ಯಂತ್ರಗಳು ಕಾವ್ಯದ ವಸ್ತುವಿಗೆ ಇಲ್ಲದಂತೆ ವರ್ತಿಸುವುದು, ಇಂದಿನ ಜೀವನವಸ್ತುವಿಲ್ಲಗಳೆದಂತೆಯೆ ಸರಿ. ಇಂದಿನ ಕಾವ್ಯಕ್ಕೂ ಇಂದಿನ ಜೀವನಕ್ಕೂ ನಿಕಟಸಂಬಂಧವಿದೆಯೆಂದು ನಾವು ಹೇಗೆ ಹೇಳಬೇಕು?

ಅಲ್ಲದೆ, ಯಂತ್ರಗಳು ವಿದ್ರೂಪದ ಆಗರಗಳೆಂದು ಭಾವಿಸಲಿಕ್ಕೂ ಕಾರಣವಿಲ್ಲ. ಯಂತ್ರಗಳು ಮಾನವನ ಅದ್ಭುತ ಬುದ್ಧಿಶಕ್ತಿಯ ಫಲಗಳು; ಒಮ್ಮೊಮ್ಮೆ ಅವು ಕಲಾಕೃತಿಗಳೂ ಆಗಬಲ್ಲುವು. ಆದರೆ ಅವುಗಳ ಸೌಂದರ್ಯವನ್ನು ನೋಡಿ, ಅನುಭವಿಸಿ, ಕೃತಿಗಳಲ್ಲಿ ಹೊರಹೊಮ್ಮಿಸಲಿಕ್ಕೆ ಸಹಾನುಭೂತಿಯೂ ವಿಶಿಷ್ಟಸೌಂದರ್ಯದೃಷ್ಟಿಯೂ ಬೇಕು. ಈ ಸೌಂದರ್ಯದ ಕಡೆಗೆ ನಮ್ಮ ಕವಿಗಳ ದೃಷ್ಟಿ ಹೊರಳಿಲ್ಲ. ಉದಾಹರಣೆಗಾಗಿ, ನನಗೆ ಎನಿಸಿದ ಯಂತ್ರದ ಒಂದೆರಡು ರಮಣೀಯತೆಗಳನ್ನು ಇಲ್ಲಿ ಹೇಳಬಹುದು. ನಮ್ಮ ಮನೆಯ ಹತ್ತಿರವೆ ರೇಲ್ವೆ ಹಳಿಗಳಿವೆ; ರಾತ್ರಿಯ ಹೊತ್ತಿನಲ್ಲಿ ಗಾಡಿ ಜೋರಿನಿಂದ ಹೋಗುವುದನ್ನು ನಾನು ಬಹಳ ಆಸ್ಥೆಯಿಂದ ನೋಡುತ್ತೇನೆ. ಹಣೆಗಣ್ಣಿನಂತಿರುವ ದೀದೀಪ್ಯಮಾನವಾದ ಅದರ ಮುಖದೀಪ, ರಾಶಿರಾಶಿಯಾಗಿ ಕಿಡಿಯನ್ನು ಸೂಸುವ ಎಂಜಿನ್ನು, ಅದನ್ನು ಹಿಂಬಾಲಿಸಿದ ಬೆಳಕು ಹಚ್ಚಿದ ಡಬ್ಬಿಗಳು, ಅವುಗಳಲ್ಲಿಯ ಕಂಡೂ ಕಾಣದ ಜನರು—ಇವೆಲ್ಲವೂ ಕೂಡಿ, ರೇಲ್ವೆಗಾಡಿಯು ಒಂದು ಅತಿ ಭವ್ಯ ಸುಂದರವಾದ ವಸ್ತುವಾಗಿ ನನಗೆ ಕಾಣುತ್ತದೆ. ಡುಂಬಿಗಳ ಮೊರೆಯಲ್ಲಿ ಮಾತ್ರ ನಮ್ಮ ಕವಿಗಳು ಸಂಗೀತ ಕೇಳುತ್ತಾರೆ; ಟಾರ್ ರಸ್ತೆಯ ಮೇಲೆ ವೇಗದಿಂದ ಹೋಗುವ ಒಳ್ಳೆಯ ಮೋಟಾರ್‌ಕಾರಿನ ಝೇಂಕಾರದಲ್ಲಿ ಹಿತವಾದ ಸಂಗೀತವಿಲ್ಲವೆ?

ಹೆಣ್ಣಿನ ವರ್ಣನೆಯನ್ನು ಬೇರೆ ಬೇರೆ ನಿಲುವುಗಳಲ್ಲಿಯೂ ವಿವಿಧ ವೇಷಗಳಲ್ಲಿಯೂ ನಮ್ಮ ಕವಿಗಳು ಮಾಡಿದ್ದಾರೆ. "ಹಳ್ಳಿ ದಂಡ್ಯಾಗಿನ" ಹಳ್ಳಿಯ ಹೆಣ್ಣಿನ ವರ್ಣನೆಗೂ ಇವೆ. "ಚಿಮ್ಮು ನಿರಿಯನು ಬನದಲಿ ಬಂದ ಬಿಂಕದ ಸಿಂಗಾರಿ" ಯ ವರ್ಣನೆಯೂ ಉಂಟು. ಆದರೆ ಆಧುನಿಕ ರೀತಿಯ ವೇಷ-ಭೂಷಣಗಳನ್ನು ಮಾಡಿಕೊಂಡ ಹುಡುಗಿಯ ವರ್ಣನೆ ನಮ್ಮ ಕಾವ್ಯದಲ್ಲಿ ಇನ್ನೂ ಬಂದಂತಿಲ್ಲ. ಎಂದಾದರೂ ಒಮ್ಮೆ ಇಂತಹ ವರ್ಣನೆ ಬಂದಿದ್ದರೆ ಅದು ಕೇವಲ ವಿಡಂಬನೆಗಾಗಿ. ಏಕೆ? ಇಂದಿನ ವೇಷಭೂಷಣಗಳಲ್ಲಿ ಏನೂ ರಮಣೀಯತೆಯಿಲ್ಲವೆ? ಕೇವಲ ಹಳೆಯ ರೀತಿಯ ಉಡುಪಿನಲ್ಲಿ ಮಾತ್ರ ಕಾವ್ಯಯೋಗ್ಯವಾದ ಬೆಡಗು ಇದೆಯೆ? ಇಂದಿನ ಉಡುಪುಗಳೂ ಹೆಣ್ಣಿನ ಸೌಂದರ್ಯವನ್ನು ಹೆಚ್ಚಬಲ್ಲುವು. ಸಹಜಸೌಂದರ್ಯವಿದ್ದರೆ, ಕೆಲವು ಬಾಲೆಯರ ಮುಗಳು ಕನ್ನಡಕದಿಂದ (ಚಾಳೀಸ) ಹೆಚ್ಚು ಮುದ್ದಾಗಿ ಕಾಣುವುದಿಲ್ಲವೆ? ಸಾಯ್ಕಲ್ಲಿನ ಮೇಲೆ ಹೋಗುವ ಸುಂದರಿಯರನ್ನು ನೋಡುವ ಭಾಗ್ಯವುಳ್ಳವಾಳಿದಾನನಿಗಿದ್ದರೆ, ಅವರನ್ನು ವರ್ಣಿಸುವ ರಸಘಟ್ಟಿಯಂತಿರುವ—ಎಷ್ಟೋ ಪದ್ಯಗಳನ್ನು ಅತನು ಬರೆಯುತ್ತಿದ್ದನೆಂದು ನನಗೆ ಖಾತ್ರಿಯಿದೆ. ಆದರೆ ದಿನಾಲು ಅವರನ್ನು ನೋಡುತ್ತಿರುವ ಆಧುನಿಕ ಕವಿಗಳು, ಸಾಯ್ಕಲ್ ಸುಂದರಿಯ ಬಂಧುರತೆಗೆ ಅಂಧರಾಗಿದ್ದಾರೆ.

ನಮ್ಮ ಕವಿಗಳ ದೃಷ್ಟಿ ಪುರಾಣ ವಸ್ತುಗಳ ಕಡೆಗೇ ಹೆಚ್ಚಾಗಿ ಕಟ್ಟಡವಷ್ಟಾಗಲಿ, ಶಿಲ್ಪವನ್ನಾಗಲಿ ವರ್ಣಿಸಬೇಕಾದರೆ ಹಳೆಯ ಕಟ್ಟಡ ಮತ್ತು ಶಿಲ್ಪಗಳ ಕಡೆಗೆ ಮಾತ್ರ ಅವರ ಕಣ್ಣು ಹೊರಳುತ್ತವೆ. ಬೇಲೂರಿನ ಶಿಲಾಬಾಲಿಕೆಯರು, ಸೋಮನಾಥಪುರದ ದೇವಾಲಯ, ಗೊಮ್ಮಟೇಶ್ವರ, ಹಂಪಿಯ ಹಾಳು ಇವೇ ಮುಂತಾದುವುಗಳನ್ನು ಉದ್ದೇಶಿಸಿ ರಚಿಸಿದ ಪದ್ಯಗಳು ಸಾಕಷ್ಟು ಇವೆ. ಹೊಸ ಕಟ್ಟಡಗಳೂ ಹೊಸ ಶಿಲ್ಪಗಳೂ ನಮ್ಮ ಕವಿಗಳ ಸ್ಫೂರ್ತಿ ಕೊಡಲಿಕ್ಕೆ ತಕ್ಕುವಾಗಿಲ್ಲವೇನೊ! ಒಂದು ಉತ್ತಮವಾದ ಆಸ್ಪತ್ರೆಯ ಹೊರಗಿನ ಆಕಾರ ಮತ್ತು ಒಳಗಿನ ವ್ಯವಸ್ಥೆಯನ್ನು ಕಾವ್ಯದಲ್ಲಿ ವರ್ಣಿಸಬಾರದೇಕೆ? ಆಸ್ಪತ್ರೆಯಲ್ಲಿಯ ಸ್ವಚ್ಛತೆ, ಅಚ್ಚುಕಟ್ಟುತನ, ಶಸ್ತ್ರಶಾಲೆಯ ಗಂಭೀರ ವಾತಾವರಣ ಅಲ್ಲಿಯ ವಿಚಿತ್ರ-ವಿಚಿತ್ರವಾದ ಶಸ್ತ್ರಗಳು ಇವೇ ಮೊದಲಾದುವುಗಳು ಕಾವ್ಯದಲ್ಲಿ ವರ್ಣಿಸಲಿಕ್ಕೆ ಯೋಗ್ಯವಾದ ವಿಷಯಗಳೆಂದು ನಾನು ಭಾವಿಸುತ್ತೇನೆ.

ಒಟ್ಟಿನಲ್ಲಿ ನಮ್ಮ ಕವಿಗಳು ಆಧುನಿಕ ಜೀವನದಲ್ಲಿಯ ವಿಷಯಗಳಿಂದ ಹೆಚ್ಚಾಗಿ ಸ್ಫೂರ್ತಿಪಡೆಯುವಂತೆ ಕಾಣುವುದಿಲ್ಲ. ಪ್ರಾಚೀನ ವಸ್ತು-ರೀತಿಗಳ ಕಡೆಗೆ ಅವರ ಒಲವು ಹೆಚ್ಚಾಗಿದ್ದಂತೆ ಕಾಣುತ್ತದೆ. ಇಂದಿನ ನಮ್ಮ ನಾಟಕ, ಸಣ್ಣಕತೆ, ಕಾದಂಬರಿಗಳಲ್ಲಿ ಆಧುನಿಕ ಜೀವನದ ಬೇರೆ ಬೇರೆ ಅಂತರಂಗಗಳು ತಕ್ಕಮಟ್ಟಿಗೆ

ತ್ರವಾಗಿವೆ; ಆದರೆ ಕಾವ್ಯದಲ್ಲಿ ಮಾತ್ರ ಇಂತಹ ಯತ್ನಗಳು ರ ಕಡಿಮೆ. ಇಲ್ಲವೆಂದರೂ ಅಡ್ಡಿಯಿಲ್ಲ. ಈ ಮಾತು ಉಳಿದ ರತೀಯ ಸಾಹಿತ್ಯಗಳಿಗೂ ಅನ್ವಯಿಸುವಂತೆ ತೋರುತ್ತದೆ. ಳದ ಲಲಿತಕಲೆಗಳಲ್ಲಿಯೂ ಹೆಚ್ಚಾಗಿ ಇದೇ ಹಾಡೇ. ಆಧುನಿಕ ಂಗಾಲಿ ರೀತಿಯ ಚಿತ್ರಗಳನ್ನು ನಾನು ಪ್ರೀತಿಯಿಂದ ನೋಡು ರುತ್ತೇನೆ. ನಂದಲಾಲ ಬೋಸ, ಅವನೀಂದ್ರನಾಥ ಟಾಗೋರ, ಗಟಾಯಿ ಮೊದಲಾದವರ ಚಿತ್ರಗಳು ಪುರಾಣದ ವ್ಯಕ್ತಿ ಸಂನಿ-ಶಗಳನ್ನಾಗಲಿ, ಬುದ್ಧ, ಅಶೋಕ ಮೊದಲಾದ ಪೂರ್ವದ ಹಾಸಿಕ ವ್ಯಕ್ತಿಗಳನ್ನಾಗಲಿ ಕುರಿತು ಬರೆದಂತಹವಿವೆ. ಆಧುನಿಕ ವನದ ಚಿತ್ರಗಳು ತೀರ ಕಡಿಮೆ.

ಈ ಸ್ಥಿತಿಗೆ ಕಾರಣವೇನಿದ್ದಿರಬಹುದು! ಕಾವ್ಯಯೋಗ್ಯವಾದ ಸ್ತುಗಳು ಹಿಂದಿನ ಕಾಲದಲ್ಲಿ ಮಾತ್ರ ಇದ್ದುವೆಂದೂ, ಈಗಿನ ಸ್ತುಗಳೆಲ್ಲ ನೀರಸವೂ ಕಾವ್ಯಬಾಹಿರವೂ ಎಂದೂ ಹೇಳಿದರೆ ನಾನು ಪ್ಪಲಾರೆ. ಆಧುನಿಕ ಜೀವನದ ವಿವಿಧಾಂಗಗಳಾದ ಯಂತ್ರ ುಂತಾದುವುಗಳಲ್ಲಿಯೂ ಕವಿಗಳ ಭಾವಗಳನ್ನರಳಿಸುವ, ವಿಚಾರ ನ್ನು ಕೆರಳಿಸುವ ಅಂಶಗಳಿವೆ. ಕಾವ್ಯದಲ್ಲಿ ಇವುಗಳ ಪ್ರವೇಶ ದ ಹೊರತು, ಆಧುನಿಕ ಕಾವ್ಯವು ನಿಜವಾಗಿಯೂ ಆಧುನಿಕ ವನದಿಂದ ಹುಟ್ಟಿದ, ಅದನ್ನು ಬೆಳಗುವ ಕಾವ್ಯವೆಂದು ನಾನು ಹೇಳಲಾರೆ. ಇನ್ನು ಕೆಲವು ಶತಮಾನಗಳ ಮೇಲೆ, ಈಗಿನ ಕಾವ್ಯ ವಷ್ಟೆ ಅಂದಿನ ಜನರ ಕೈಯಲ್ಲಿ ಸಿಕ್ಕರೆ, ಯಂತ್ರಗಳ ಸೋಂಕಿಲ್ಲದ ಒಂದು ರೀತಿಯ ಹಳ್ಳಿಯ ಜೀವನವನ್ನು ನಾವು ಸಾಗಿಸುತ್ತೇವೆಂದು ಅವರಿಗೆ ಭಾಸವಾಗಬಹುದು. ಇಂದಿನ ಜೀವನದ ಸಂಪೂರ್ಣಚಿತ್ರವು ಇಲ್ಲಿ ಕಾಣುವುದಿಲ್ಲ.

ಕೇವಲ ಯಂತ್ರಗಳ ಹಾಗು ಆಧುನಿಕವೆನ್ನುವ ವಿಷಯಗಳಷ್ಟೆ ಕಾವ್ಯದಲ್ಲಿರಬೇಕೆಂದು ನಾನು ಹೇಳುವುದಿಲ್ಲ. ಆದರೆ ಇವುಗಳೂ ಇಂದಿನ ಕಾವ್ಯದಲ್ಲಿ ಬರುವುದು ಅವಶ್ಯವಿದೆಯೆಂದು ತೋರಿಸುವುದು ಮಾತ್ರ ನನ್ನ ಉದ್ದೇಶವಾಗಿದೆ. ಎಂದರೆ ಮಾತ್ರ ನಮ್ಮ ಕಾವ್ಯ ನಮ್ಮ ಸಮಗ್ರಜೀವನವನ್ನು ಚಿತ್ರಿಸಿದಂತಾಗುತ್ತದೆ. ಕೇವಲ ಪ್ರಾಚೀನಕಾಲದ ಕಡೆಗಷ್ಟೆ ಮುಖ ತಿರುವಿಕೊಂಡು ನಮ್ಮ ಕವಿಗಳು ಕುಳಿತುಕೊಳ್ಳಬಾರದು. ಇಂದಿನ ಜೀವನದಲ್ಲಿಯೆ ಇದ್ದು, ಇಂದಿನ ಜೀವನದ ವಿವಿಧಾಂಗಗಳನ್ನೂ ಇಂದಿನ ಜೀವನದ ಸುಖ-ದುಃಖಗಳನ್ನೂ, ಬೆಡಗು-ಪಿಡುಗುಗಳನ್ನೂ ಚಿತ್ರಿಸುವ ಯತ್ನವನ್ನು ನಮ್ಮ ಕವಿಗಳು ಮಾಡಿದರೆ ಒಳ್ಳೆಯದಾಗುವುದು. 'ಅರ್ವಾಚೀನ ಸೌಂದರ್ಯ' ವು ಇಲ್ಲಿಯ ವರೆಗೆ ಬಹಳ ಮಟ್ಟಿಗೆ 'ಅವರ್ಣನೀಯ'ವಾಗಿಯೆ ಉಳಿದಿದೆ. ಹೀಗೆ ಅವರ್ಣನೀಯವಾಗಿ ಉಳಿಯಬಾರದು; ಉಳಿಯಲಿಕ್ಕೆ ಕಾರಣವಿಲ್ಲ.

ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾರವಾಡ.

★ ನಿಮ್ಮ ಮಾಡುವ ಅನುಕೂಲವುಳ್ಳ ಕರ್ನಾಟಕಸ್ಥರು ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಸೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಳಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲೆ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು:— ಎಮ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWAR.

ಒಂದು ದೃಶ್ಯದ ಪ್ರಹಸನ

ಸಂಗೀತ ಮೇಷ್ಟ್ರು

ಶ್ರೀ. ಕುಡ್ಲಿ ಸಾಸುದೇವ ಶೆಣೈ, ಮಂಗಳೂರು



ಲೇಖಕರು

ಪಾತ್ರವಿವರ :

ಕೃಷ್ಣಪ್ಪಾಜಿ..... ಹಳೆಯ ಸಾಹುಕಾರರು
ರಾಧಮ್ಮ..... ಕೃಷ್ಣಪ್ಪಾಜಿಯವರ ಉಪಪತ್ನಿ
ಲೀಲೂ..... ,, ಮಗಳು
ಧರಣೀಂದ್ರ ಶಾಸ್ತ್ರಿ..... ಸಂಗೀತಮೇಷ್ಟ್ರು

★

[ಕೃಷ್ಣಪ್ಪಾಜಿಯವರ ಮನೆಯ ಕೊರಡಿ; ಕೃಷ್ಣಪ್ಪಾಜಿ, ರಾಧಮ್ಮ ಮತ್ತು ಲೀಲೂ ಕುಳಿತಿರುವರು.]

ರಾಧೆ — ನಮ್ಮ ಲೀಲು ಈಗ..ತುಂಬ ಪದ ಕಲಿತಿದ್ದಾಳೆ.

ಕೃಷ್ಣಪ್ಪಾಜಿ.— (ಏಳ್ಕ ಜಗಿಯುತ್ತ) ಮತ್ತೆ? ಮೇಷ್ಟ್ರಿಗೆ ಸಂಬಳ ಕೊಡಲಿಲ್ಲವೇ? ತಿಂಗಳಿಗೆ ಖಣ್ ಖಣ್ ಇಪ್ಪತ್ತು ರೂಪಾಯಿ! ಪದ ಕಲಿಯದೆ ಮತ್ತೆ?

ರಾಧೆ — "ಸಾಮಿಾ ನೀನೇಕೊಽಽಽ" — "ಮೃದುಗುಣ-ಮೇ ಮುೇ" — ಎಲ್ಲಾ ಬರುತ್ತದೆ ಅವಳಿಗೀಗ!

ಕೃಷ್ಣಪ್ಪಾಜಿ:— ನಿನಗೂ ಬರುತ್ತದೆ! ನೋಪೋಣ, ಹೇಳು ಪುಣ! 'ಸಾಮಿಾ..' ಏನದು?..ಅಹುದೇ, ನೀನೂ ಕಲಿತರೆ ಹೇಗೆ?

ರಾಧೆ.— (ಲಜ್ಜೆಯಿಂದ) ಅಹುದು, ನನಗೆ ಸಂಗೀತ! ಸುಮ್ಮನೆ ತಮಾಷೆ ಮಾಡಬೇಡಿ ನೀವು! ಸ್ಮಶಾನಕ್ಕೆ ಹೊರಟಾಗ ನನಗೆ ಸಂಗೀತ,—ಮತ್ತೇನು?

ಕೃಷ್ಣಪ್ಪಾಜಿ:— ಸ್ಮಶಾನಕ್ಕೆ? ಅವಸರವಿಲ್ಲ! ನಿನ್ನಮ್ಮನ ಅಪರಾಕ್ರಿಯಾನಂತರವಾಗುವ ಮೊದಲೇ ಸ್ಮಶಾನದಂತಹ ಕೆಟ್ಟ ಸ್ಥಳಗಳಿಗೆ ಹೋಗೋಪೆಂದರೆ! ನಿನ್ನಮ್ಮನಷ್ಟೆ ಮಕ್ಕಳನ್ನು ಹೆತ್ತು, ಮತ್ತೆ ಬೇರಾವರೆ ಎಲ್ಲಿಗಾದರೂ ಹೋಗು!

ರಾಧೆ.— ಇಸ್ಸೀ! ನಿಮಗೆ ಒಂದಿಷ್ಟು ಲಜ್ಜೆ ಬೇಡವೆ? ಮಗುವಿನೆದುರಿಗೆ ಬೇಡದ್ದೆಲ್ಲ ಮಾತಾಡೋದು! ಇನ್ನೂ ಹುಡುಗಸ ಹಾಗೆ!

ಕೃಷ್ಣಪ್ಪಾಜಿ:— (ಗಹಗಹಿಸಿ ನಗುತ್ತ) ಹುಡುಗಾಟ ಸಾಯೋತನಕ ಮರೆಯೋದುಂಟೆ ರಾದು? ಆದು ಹೋಗಲಿ; ನಮ್ಮ ಲೀಲೂಗೆ ಇನ್ನು ಎಸಡು ತಿಂಗಳ ಕಲಿಸಿದರೆ ಸಾಕೋ..ಎಂದು! ಎಲ್ಲಾ ಪದ ಬರುತ್ತದಲ್ಲಾ ಅವಳಿಗೆ?

ಲೀಲು.— (ಹುಬ್ಬುಗಂಟಕ್ಕಿ) ಅಹುದು, ಎಲ್ಲಾ ಬರುತ್ತದೆ! ಲಂಬೋದರ ಲುಕುಮಿಕರಾ—ಗಿರಿಜಾನಂದನ—ಇನಕುಲತಿಲಕಾ ಕಲಿತಕೂಡಲೇ ಎಲ್ಲಾ ಪದ ಬಂತು!

ಕೃಷ್ಣಪ್ಪಾಜಿ:— (ಮೋಜಿನಿಂದ) ಹೆ? ಹೆ? ಇನಕುಲತಿಲಕಾ! ಮತ್ತಾವುದು ಬೇಕು ನಿನಗೆ?

ರಾಧೆ:— ಅವಳಿಗೆ ಸಂಗೀತವೆಂದರಾಯಿತು .. ಊಟವಿಲ್ಲ, ನಿದ್ದೆಯಿಲ್ಲ. ಒಂದು ನಾಲ್ಕು ತಿಂಗಳು ಕಲಿಸಬಾರದೆ?

ಲೀಲು:— ಅಹುದು, ನಾಲ್ಕು ತಿಂಗಳು! ನನಗೆ ಪೂರ್ಣ ಒಂದು ವರುಷ ಕಲಿಯಬೇಕು!

ಕೃಷ್ಣಪ್ಪಾಜಿ:— ಒಂದು ವರುಷ? ಆಯ್ತು! ಅದಕ್ಕೇನು, ಆಸೆ—ಕುದುರೆ ತರಬೇಕೆ? ಕಲಿತರಾಯಿತು. ಈಗ ಎರಡು ವರುಷ ವಾಯಿತು. ಇನ್ನೊಂದು ವರ್ಷ ಹೆಚ್ಚೇ?—ಅಲ್ಲವೆ ರಾಧು?

ರಾಧೆ:— ಒಂದು ವರ್ಷ ಅಲ್ಲ, ಇನ್ನೆರಡು ತಿಂಗಳು ಹೆಚ್ಚು! ಅವಳು ಕಲಿತರೆ ನಾವು ಬೇಡವೆನ್ನುತ್ತೇವೆಯೆ?

ಕೃಷ್ಣಪ್ಪಾಜಿ:— ಯಾರಿಗಾಗಿ ಮಗೂ ಈ ದುಡ್ಡು..ಮತ್ತು ಈ ಶ್ರಮ? ನೀನು ಅಳಬೇಡ!

ರಾಧೆ:— ಇಸ್ಸೀ, ಅವಳೆಲ್ಲಿ ಅತ್ತಿದ್ದಾಳೆ? ಸುಮ್ಮನೆ ಅಪಚಾರ ಮಾತಾಡಬೇಡಿ.ನೀವು!

ಕೃಷ್ಣಪ್ಪಾಜಿ:— (ಪುನಃ ಏಳ್ಕ ತೆಗೆದು ಜಗಿಯುತ್ತ) ಆಂ! ನಾನು ನೋಡಲಿಲ್ಲ. ಅಳಬಹುದೆಂದು ಅಳಬೇಡವೆಂದೆ. ಅವಳು ಮಾತು-ಮಾತಿಗೆ ಅಳೋದು. ಅಪಚಾರವೇನದರಲ್ಲಿ? ಅಳು ಬರುವ ಸಂಭವವಿದ್ದರೆ-ಲೀಲೂ—ಅಳಬೇಡವೆಂದೆ, ತಪ್ಪೇ? ಹೋಗಲಿ. ಈಗ, ನೀನು ಕಲಿತ ಒಂದು ಪದ ಹೇಳು ನೋಪೋಣ ಚಂದ!

ಲೀಲು:— ಅಮ್ಮಾ, ನನಗೆ, ಮೇಷ್ಟ್ರು ಸಿನೆಮಾ ಪದ ಕಲಿಸೋದೇ ಇಲ್ಲಮ್ಮಾ!

ಕೃಷ್ಣಪ್ಪಾಜಿ:— ಸಿನೆಮಾ ಪದ? ಹಾಗೆಂದರೆ? ದೇವರ ಪದ ಸಾಲದೆ?

ರಾಧೆ:— ಅವಳ ಸಾಲೆಯ ಹುಡುಗಿಯರು ಸಿನೆಮಾ ಪದ ಕಲಿತಿರುವರಂತೆ; ಅವಳಿಗೂ ಆಸೆ!

ಕೃಷ್ಣಪ್ಪಾಜಿ:— ಅವಳ ಸಾಲೆ ಹುಡುಗಿಯರು ಹೆಚ್ಚು ಕಲಿತಿದ್ದಾರೆ. ಅದೆಲ್ಲಾ ಇವಳೂ ಕಲಿಯಬೇಕೆ?.. ಈಗೊಂದು ಚಂದ ಪದ ಹಾಡು, ದೇವರದ್ದು, ಏನು!

ಲೀಲು:— ಸಿನೆಮಾ ಪದ ಕಲಿಸೆಂದು ಮೇಸ್ಟ್ರೊಡನೆ ನೀನು ಹೇಳಮ್ಮಾ!

ರಾಧೆ:— ನಾವೇಕೆ ಲೀಲೂ? ನೀನೇ ಹೇಳಿದರೆ ಅವರು ಅಲ್ಲವೆಂತಾರೆಯೆ?

ಕೃಷ್ಣಪ್ಪಾಜಿ:— ಬೇಡ, ಲೀಲು..ಸಿನೆಮಾ ಪದ! ನನಗದು ಅರ್ಥವಾಗೋದೇ ಇಲ್ಲಪ್ಪಾ!

ಲೀಲು:— ಅದೇನು, 'ಸಿನೆಮಾಸಂಗೀತವು ಸಂಗೀತವಲ್ಲವೆ?

ಕೃಷ್ಣಪ್ಪಾಜಿ:— ಅದು ಸಂಗೀತವಾದರೆ ನಾನು ಚಕ್ರವರ್ತಿ; ನಿನ್ಮಮ್ಮ ಸಾಮ್ರಾಜ್ಞಿ; ಮತ್ತೆ ನೀನು..

ಲೀಲು:— ನೀನು ತುಕಾರಾಮನ ಹಾಡುಗಳನ್ನು ಜೆನ್ನಾಗಿ ಮೆಚ್ಚಿದ್ದುಂಟು!

ಕೃಷ್ಣಪ್ಪಾಜಿ:— ಅಕೋ ನೋಡು. ತಾಯಿದ್ದೇ ನಾಲಿಗೆ! ಅದೇ ತಲೆ! ನಾನು ಒಂದು ಮಾತಾಡಿದರೆ ಅವಳು ನೂರು ಮಾತಾಡೋದು! ಅಹುದೇ, ಎಲ್ಲಾ ಸಿನೆಮಾ ತುಕಾರಾಮವೋ? ಎಲ್ಲಾ ಹಾಡು ತುಕಾರಾಮ ಆಗಲು ಸಾಧ್ಯವುಂಟೋ? ಬಂದಿಷ್ಟು ಮಂಡೆಯಿಲ್ಲವಲ್ಲಾ ನಿನಗೆ!

ರಾಧೆ:— ಅಕೊಳ್ಳಿ,—'ಮಂಡೆ!' ಅಪಚಾರ! ಏಕೆ ನೀವು ಆ ಮಗುವಿಗೆ ಹಾಗೆ ಬಯ್ಯೋದು?

ಕೃಷ್ಣಪ್ಪಾಜಿ:— ಅಹುದು, ಬಯ್ದೆ!.. ಇರಲಿ, ಲೀಲು ಈಗ ನೀನೊಂದು ಪದ ಹೇಳು. ಸಿನೆಮಾ ಆದರೆ ಸಿನೆಮಾ. ಸ್ಮಶಾನವಾದರೆ ಸ್ಮಶಾನ.

ರಾಧೆ:— ಅಕೊಳ್ಳಿ, ಪುನಃ ಅಪಚಾರ!.. ಹೇಳೇ ಲೀಲೂ! ಅದನ್ನು ಹೇಳು— "ರಘುವೀರಾ, ರಣಧೀರಾ, ರಾರಾ.."

ಕೃಷ್ಣಪ್ಪಾಜಿ:— ವ್ಹಾವ್ಹಾ! ರಾರಾ ಅಲ್ಲ, ಕಾಕಾ! ಅದನ್ನು ಹೇಳು ಲೀಲು ನೀನು..ಆ ದಿನ ನರ್ಕತ್ತಾಯರ ತಾಯಿ ಸತ್ತದಿನ ಮೇಷ್ಟ್ರು ಕಲಿಸುತ್ತಿದ್ದರಲ್ಲಾ, ಯಾವುದು ಅದು?

ರಾಧೆ:— ನರ್ಕತ್ತಾಯರ ತಾಯಿ ಸತ್ತದಿನ? ನೋಡಿ— ಪುನಃ ಅಪಚಾರ! ನೀನು "ರಘುವೀರ" ಹೇಳು ಲೀಲು! (ಕನ್ನಷ್ಟಕ್ಕೆ) ನರ್ಕತ್ತಾಯರ ತಾಯಿ– ಮತ್ತೆ ಸ್ವರ್ಗತ್ತಾಯರ ಮಗಳು! ಬಾಯಿಗೆ ಬಂದಹಾಗೆ ಒದರೋದು!

ಕೃಷ್ಣಪ್ಪಾಜಿ:— ನಿನಗೆ ಅಪಚಾರ ಮತ್ತು ಗ್ರಹಚಾರವೆಂದೇ ವೈದ್ಯಾವ್ಯ ಬಂತು! ಮಾತಾಡಿದ್ದೆಲ್ಲ ಅಪಚಾರ! ನರ್ಕತ್ತಾಯರ ತಾಯಿ ಸತ್ತರೆ ನಮಗೆಲ್ಲಿ ಅಪಚಾರವಂತೆ?

ರಾಧೆ:— ಅವಳ ಸುದ್ದಿ ನಮಗೇಕೆ?

ಕೃಷ್ಣಪ್ಪಾಜಿ:— ಸುಮ್ಮಗಿರು! 'ನಮಗೇಕೆ?' ನೀನು ಭಾರೀ ಬಾರೀ– ಭಾರೀ ಹಂದಿ! ಸುಮ್ಮಗಿರು! (ತಾಂಬೂಲ ಉಗುಳುತ್ತ) ನೀನು ಏನಾದರೂ ಹೇಳು ಲೀಲೂ. ಸತ್ತ ಪದವೂ ಬೇಡ — ಬದುಕಿದ್ದೂ ಬೇಡ!

ಲೀಲು — 'ಬಹುತಾಪವು' ಹೇಳಲೇ?

ಕೃಷ್ಣಪ್ಪಾಜಿ:— (ಅವಾಕ್ಕಾಗಿ) ತಾಪ?.. ಹುಂ, ಹೇಳು.

ಲೀಲು:— (ಹಾರ್ಮೋನಿಯಂ ತೆಗೆದು, ಹಾಡುವಳು.)

(ನನುಬ್ರೋವನಿ—ಎಂಬಂತೆ)

ಬಹುತಾಪವೂ । ಬಹುತಾಪವೂ ಊ ಊ ॥
ಹೃದಯ ದಹನ । ಪುದು ಏನಿದೂ ॥
ಮದನಾಂಗಿ ಸದ । ನದಿ ಶೋಕದೀ..।
....

(ಕೃಷ್ಣಪ್ಪಾಜಿಯವರು ನಿದ್ದೆ ಹೋಗುವರು.)

ರಾಧೆ:— ಸಂಗೀತಮೇಷ್ಟ್ರು ಬಂದರು! (ಎನ್ನುತ್ತಲೇ, ಲೀಲು ಹಾರ್ಮೋನಿಯಂ ಮುಚ್ಚುವಳು. ರಾಧೆ ಗೊರಕೆಹೊಡೆವ ಕೃಷ್ಣಪ್ಪಾಜಿಯವರನ್ನು ಎಚ್ಚರಿಸುವಳು. ಕೃಷ್ಣಪ್ಪಾಜಿಯವರು ನಿದ್ದೆಯಿಂದೆದ್ದು, ಸಂಗೀತಮೇಷ್ಟ್ರಿಗೆ ನಮಸ್ಕರಿಸಿ ಹೋಗುವರು.)

ಸಂಗೀತಮೇಷ್ಟ್ರು:— ನಿನ್ನೆ ಕಲಿಸಿದ ಭೀಮಪಲಾಸ್ ಬಾಯಿಪಾಠವಾಯಿತೇ?

ಲೀಲು:— (ತಲೆಯಲ್ಲಾಡಿಸುವಳು.)

ಮೇಷ್ಟ್ರು:— ಆರೋಹದಲ್ಲಿ ನಿಷಾದ— ನೆನಪಿದೆಯಷ್ಟೆ?

ಲೀಲು:— (ತಲೆಯಲ್ಲಾಡಿಸುವಳು.)

ಮೇಷ್ಟ್ರು:— ಈಗ..ಹಾರ್ಮೋನಿಯಂ ತೆಗೆ! ತೆಗೆದಿದೆ?— ಸರಿ. ಇತ್ತ ತಾ! (ಹಾರ್ಮೋನಿಯಮನ್ನು ತೆಗೆದುಕೊಂಡು)—

ಸರಿ ಸರಿ ಸರ್ ಸರ್ ನರ್ಸಮ್ಮ! ಗರಿ ಗರಿ ಗರ್ ಗರ್ ಗಂಗಮ್ಮ!
ಪರಿ ಪರಿ ನರ್ ಪರ್ ಪದ್ಮಮ್ಮ! ನರಿ ನರಿ ನರ್ ನರ್ ನರ್ಸಮ್ಮ॥
ಸ ರಿ ಗ ನು ವ ದ ನಿ ಸ! ಸ್ಸ–ನ್ನಿ–ದ್ದ–ಪ್ಪ–ಮ್ಮ–ಗ್ಗ–ರ್ರಿ–ಸ್ಸ॥

—ಇದನ್ನು ನಾಲ್ಕು ಸಾರಿ ಬಾಯಿಪಾಠಮಾಡಿ, ಬಾರಿಸಬೇಕು. ಈಗ ಹಾಡು. "ಲಂಬೋದರ ಲಕುಮಿಕರಾ! ಅಂಬಾಸುತ! ಅಮರವಿನುತ॥"

ಲೀಲು:— ಅಮ್ಮಾ! (ರಾಧೆ ಬರುವಳು.)

ರಾಧೆ:— ಏನು ಮಗು?

ಲೀಲು:— ಮೇಷ್ಟ್ರೊಡನೆ ಏನೋ ಹೇಳುವೆಯೆಂದೆಯಲ್ಲಾ ಆಗ?

ರಾಧೆ:— ಏನು ಮಗು ಅದು?

ಲೀಲು:— (ಸೆಲ್ಲನೆ) ಶೀ..!

ರಾಧೆ:— ಶೀನಣ್ಣನ ವಿಷಯವೇ?

ಲೀಲು:— ಅಲ್ಲಮ್ಮ..ನೇ....!'

ಮೇಷ್ಟ್ರು:— ನೇ?..ನೇತಾಡೋದೇ?

ರಾಧೆ:— ನೇತ್ಯಾವತಿಯ ಮಗಳು ಹೇಳಿದ್ದೆ?

ಲೀಲು:— ಇಸ್ಸೀ!....ಮಾ....!

ಮೇಷ್ಟ್ರು:— ಮಾ?..ಮಾತಾಡಬಾರದೇನೋ?

ರಾಧೆ:— ಮಾ?....

ಲೀಲು:— ಇನ್ನೂ ತಿಳಿಯದೇ ಅಮ್ಮಾ? ಸಿನೆಮಾ ಪದ!

ರಾಧೆ:— ಅಯ್ಯೋ, ನನ್ನ ಕರ್ಮ! ಅಹುದು!..ಮೇಷ್ಟ್ರೂ, ನಮ್ಮ ಹುಡುಗಿಗೆ ಬಂದಿಷ್ಟು ಸಿನೆಮಾ ಪದ ಕಲಿಸಿಕೊಡಿರಿ; ಅವಳಿಗೆ ನಿಮ್ಮೊಡನೆ ಹೇಳಲು ನಾಚಿಕೆಯಂತೆ!

ಮೇಷಪ್ಪ:— ಸಿನೇಮಾ ಪದ ? ಹೂಂ ! ಊರಿಗೆಲ್ಲಾ ಸಿನೆಮಾ ಹುಚ್ಚು ! ಸಂಗೀತ ಪಕ್ಕಡ್ಡ ! ಅರಸನಿಂದ ಹಿಡಿದು ಆಡಿನ ವರೆಗೆ ಸಿನೆಮಾದ ಪದ ! (ನಶ್ಯಸೇದಿ)—ಕಳೆದ ವರ್ಷ ನಾನಿತ್ತ ಬರುತಿದ್ದಾಗ, ಎಲ್ಲರೂ ' ಸುನೊ ಸುನೊ " ಎನ್ನುತಿದ್ದರು; ನಮ್ಮಂಥ ಸಂಗೀತಗಾರರು ಕೇಳಿದರು. ಮತ್ತೆ "ವಾನು ಕಿತಿರೇ ಸದಯಾ ವಿತುರಾಯಾ" ಎಂದರು; ನಮ್ಮಂಥ ಸಂಗಿತಗಾರರು "ಇನ್ನೇನು ಮಾರಾಯಾ ?" ಎಂದರು; ಮೂರನೆಯ ತಿಂಗಳಲ್ಲಿ ಫಕ್ಕನೆ "ಆಶಾ ನಿರಾಶಾ ಗಯಿಾ" ಎಂದು ಬೊಬ್ಬೆಯೆದ್ದಿತು; ನಮ್ಮಂಥ ಸಂಗೀತ ಗಾರರು "ಸೈ, ಸೈ" ಎಂದರು. ಈಗ, ಎಲ್ಲಿ ಹೋದರೂ "ಪಿಯಾ ಮಿಲನಕೋ ಜಾನಾ" ಅಂತೆ ! ಇನ್ನಿದು ಕೊನೆಯದು. ಇನ್ನು ನಮ್ಮಂಥ ಶಾಸ್ತ್ರೀಯ ಗಾಯನದವರಿಗೆ "ಜಾನಾ" ಒಂದೇ ಗತಿಯೆಂದು ತೋರುತ್ತದೆ .. ಇರಲಿ ! ಈಗ ನಿನಗೂ ಸಿನೇಮಾ ಹಾಡುಬೇಕು, ಅಲ್ಲವೇ ? ಅಂ ! (ಆಲೋಚಿಸಿ)—(ಮೈ-ಮೇಲೆ ಆವೇಶ ಬಂದಂತೆ — ಸಮಸ್ತ ಸಿನೆಮಾ ಪ್ರಪಂಚದಮೇಲೆ ಸೇಡುತೀರಿಸಿಕೊಳ್ಳುವಂತೆ–ಹಾಡುವನು.)

ಹಾಡು:— (ರಾಗ: ಯಾವರಾಗ ಒಪ್ಪುತ್ತದೋ–ಅದು.)

(ಹೆಂಗುಸರ ಸ್ವರದಿಂದ)—ಪಿಯಾ–ಪರದೇಶ–ಗಯೋ ।
ಆ ಆ! ಪಿಯೋ–ಪರದೇಶ–ಗಯೋ॥

(ಗಂಡುಸಿನ ಸ್ವರದಿಂದ)—ಪಿಯ–ಅಬ ಆಗಯೋ ।
ಪಿಯ— ,, ,, ॥

(ಹೆಂಗುಸಿನ ಸ್ವರದಿಂದ)—ನಾರೀ ।—

(ಗಂಡುಸಿನ ಸ್ವರದಿಂದ)—ತುಮಾರ್ಯಾರೀ—

(ಹೆಂಗುಸಿನ ಸ್ವರದಿಂದ)—ಬನವಾರೀ—

(ಗಂಡುಸಿನ ಸ್ವರದಿಂದ)—ಅಬ್ ತೇರೀ—

(ಹೆಂಗುಸಿನ ಸ್ವರದಿಂದ)—ಪಿಯಾ–ಪರದೇಶ–ಗಯೋ ।

(ಗಂಡುಸಿನ ಸ್ವರದಿಂದ)—ಪಿಯಾ–ಅಬ–ಆಗಯೋ ॥

—ಸಾಕೋ ಬೇಕೊ ?

ಲೀಲು:— (ಹೆದರಿ) ಬೇ.....

ಮೇಷಪ್ಪ:— ಬೇಕು ! ಎಷ್ಟು ಬೇಕ್ಕು ?

ರಾಧೆ:— ಒಂದೆರಡು—

ಲೀಲು:— ಬೇರೊಂದು.

ಮೇಷಪ್ಪ:— ಬೇರೊಂದು ?

(ಹಾಡು)—(ಹೆಂಗುಸಿನ ಸ್ವರದಿಂದ)

" ಮೈ ದೂದ್ಕೆಪಿಲಾಯಂಗಿ ।
ಮೈ ಬನಕೇ ಚಿಡಿಯಾಂ ಬನಬನದೂಂಡಕೆ ।
ಸಬಕೆ । ಸಾಜನ್ । ವಿಾರಾ ಭೋಜನ್ ॥ .... ."

— ಸಾಕೋ ಬೇಕೊ ?

ಲೀಲು:— (ಇನ್ನೂ ಹೆದರಿ, ಒಂದೂ ವಿಚಾರವಿಲ್ಲದೆ, ತಲೆಯಲ್ಲಾಡಿಸುವಳು.)

ಮೇಷಪ್ಪ:— ಇನ್ನೂ ? (ಕೋಪದಿಂದ ಎದ್ದು)—ಇನ್ನೂ ? ನಾನು ? ಸಿನೆಮಾ ಪದ ? ನನ್ನ ಮುಂಡಾಸೂ ಹಾಡಲಿಕ್ಕಿಲ್ಲ ! ಸಿನೆಮಾ ಪದ ?

ರಾಧೆ:— ಧರಣೇಂದ್ರಶಾಸ್ತ್ರಿಗಳೇ..ತಾವು ಕೋಪಿಸಬಾರದು!

ಮೇಷಪ್ಪ:— ಕೋಪಿಸಬಾರದು ? ಮತ್ತೇನು ಮಾಡಬೇಕು ?....ಸಂಗೀತಗಾರರಿಗೆ ಕೋಪಮಾಡುವ ಸ್ವತಂತ್ರ ವಿಲ್ಲವೇ ?..ಸಿನೆಮಾ ಪದ ! ಛಿತ್–ನನ್ನ ನಾಲಿಗೆ ? ಸಿನೆಮಾ ಪದ ? ಮೈಸೂರು ಅರಸರನ್ನು ಮೆಚ್ಚಿಸಿದ್ದೇನೆ– ನಿಮ್ಮನ್ನು ಮೆಚ್ಚಿಸುವ ಅವಶ್ಯವಿಲ್ಲ ! ಸುಮ್ಮನೆ ಬಂದುದಲ್ಲ ಈ ಶಾಲು ! ಅರಸರು ಸಿನೆಮಾ ಪದಕ್ಕೆ ಶಾಲು ಕೊಡುವುದಿಲ್ಲ!

ಲೀಲು:— ಅಮ್ಮಾ, ಮೈಸೂರು ಅರಸರು ಸಿನೆಮಾ ಪದಕ್ಕೆ ಕೊಟ್ಟಿದ್ದಾರಂತೆ ಅಮ್ಮಾ !

ಮೇಷಪ್ಪ:— ಭೂಪ್ ! ಕೊಟ್ಟಿದ್ದಾರೆ ! ಏನು ಕೊಟ್ಟಿದ್ದಾರೆ? ಸಿನೆಮಾ ಪದಕ್ಕೆ ಅರಸರು ಶಾಲು ಕೊಟ್ಟರೆ, ಮತ್ತೆ ನನ್ನ ಸಂಗೀತಕ್ಕೆ ಏನು ಕೊಡುವರಂತೆ ?..ಬಿಟ್ಟಿ ! ಈ ಊರು ಬಿಟ್ಟಿ ! ಸಿನೆಮಾ ಪದ ಇದ್ದಲ್ಲಿ ಧರಣೇಂದ್ರ ಶಾಸ್ತ್ರಿಗಳಿಲ್ಲ.

ಲೀಲು.— ಸಿನೆಮಾ ಪದ ಎಲ್ಲ ಊರಲ್ಲಿದೆಯಂತೆ ಅಮ್ಮಾ!

ರಾಧೆ:— ಇರಬಹುದು ಮಗು ! ಮೇಷ್ಟ್ರೇ —ಎಲ್ಲಾ ಊರಲ್ಲಿ..

ಮೇಷಪ್ಪ:— ಭೂಪ್ ! ಎಲ್ಲಾ ಊರಲ್ಲಿ ಸಿನೆಮಾ ಪದ ಇದ್ದರೆ, ಧರಣೇಂದ್ರಶಾಸ್ತ್ರಿಗಳಿಗೆ ಊರುಗಳೇ ಬೇಡ !

ಲೀಲು, ರಾಧೆ:— (ನಿಟ್ಟುಸಿರಿಡುವರು.)

ಮೇಷಪ್ಪ:—(ಸರಕ್ಕನೆ ತಿರುಗಿ) ಏನು ! ಊರೇ ಬೇಡವೆಂದ ಕೂಡಲೇ, ನಾನು ಈ ಭೂಮಿ ಬಿಟ್ಟು ಹೋಗುವೆನೆಂದು ಭಾವಿಸುತ್ತಿರಿ—ಅಲ್ಲವೇ ? ತಿಳಿಯಿತು—ನಿಮ್ಮ ಕೃತಜ್ಞತೆ ! ನಾನು ಎರಡು ವರ್ಷ ಸಂಗೀತ ಕಲಿಸಿದುದಕ್ಕೆ ಈ ಪ್ರಪಂಚದಿಂದಲೇ ರಿಟಾಯರ್ ಆಗಬೇಕೆಂದು ನಿಮ್ಮ ಆಸೆ ! ಹಂ ! ಈ ಊರೇ !.. ಸಾಯಲಿಕ್ಕೆ ನನಗೆ ಹುಚ್ಚೇ ?

ರಾಧೆ:— ರಾಮ ರಾಮ ! ನಾವು ಹಾಗೆ ಎಣಿಸಲಿಲ್ಲ ಮೇಷ್ಟ್ರೇ !

ಮೇಷಪ್ಪ:— ನೀವು ಎಣಿಸಿದರೆ ನಾನು ಸಾಯಲು ಸಿದ್ದನಿಲ್ಲ; ನಿಮ್ಮ ಸಂಬಳವೂ ಬೇಡ—ಈ ಸಿನೆಮಾ ಕಲಿಸೋದೂ ಬೇಡ ! ಕೊಡ್ತೀನನ್ನ ರೂಪಾಯಿ—ನಾನು ಹೊರಟೆ !

ಲೀಲು:— ಅಮ್ಮಾ, ಸಂಬಳ ಬೇಡವೆಂದರು; ರೂಪಾಯಿ ಬೇಕಂತೆ !

ಮೇಷಪ್ಪ:— ಭೂಪ್! ನಾನು ಸಾಯಬೇಕು ಬೇರೆ—ಸಂಬಳ ಬಿಟ್ಟುಬಿಡಬೇಕು ಬೇರೆ ! ಒಳ್ಳೇ ಜನ ! ಸಂಗೀತಗಾರರು ಊಟ ಮಾಡೋದು ಹೇಗೆ ? ಕೊಡಿ ಕೊಡಿ !

ರಾಧೆ:— ಅವರಿಲ್ಲ ಮೇಷ್ಟ್ರೇ !

ಮೇಷಪ್ಪ— ಅವರಿಲ್ಲವಾದರೆ, (ತನಗೇ ಬೆರಳು ತೋರಿಸಿ) ಇವರಿದ್ದಾರೆ ! ಬರಲಿ !

ರಾಧೆ— ಅವರು ಮನೆಗೆ ಬಾರದೆ ಸಾಧ್ಯವಿಲ್ಲ ಮೇಷ್ಟ್ರೇ. ನೀವು ಕೋಪ ಮಾಡದೆ....

ಮೇಷಪ್ಪ:— ಅವರಿಲ್ಲದಿದ್ದರೆ ನಾಳೆ ಬಂದೇನು ! ಕೋಪ ಮಾತ್ರ ಬಿಡಲು ಸಾಧ್ಯವಿಲ್ಲ; ಸಿನೆಮಾ ಕಲಿಸಲೂ ಸಾಧ್ಯವಿಲ್ಲ. ಹೋಗುತ್ತೇನೆ. ಹಂ ! ಸಿನೆಮಾ ಪದ ಕಾಗೆಗೆ ಹೇಳಿರಿ! (ಹೋಗುವನು.)

ವೆಸ್ಟ್-ಮಿನ್‌ಸ್ಟರ್ ★ ಸ್ಟ್ಯಾಟ್ಯೂಟ್

ಶ್ರೀ. ಗು. ಕೃ. ವಾಳವೇಕರ ಬಿ. ಎ., ಎಲ್‌ಎಲ್. ಬಿ.

ಭಾರತದ ಪಾರತಂತ್ರ್ಯದ ಕಗ್ಗತ್ತಲೆಯಲ್ಲಿ 'ವೆಸ್ಟ್ ಮಿನ್‌ಸ್ಟರ್ ಸ್ಟ್ಯಾಟ್ಯೂಟ್' ಎಂಬ ಕಾನೂನು ಸ್ವಾತಂತ್ರ್ಯದ ದೀಪಾವಳಿಯನ್ನು ಮಾಡಲು ಬರುವುದರಲ್ಲಿದೆ. ಆ ಕಾನೂನು ಈಗಾಗಲೆ ಯಾವ ಯಾವಲ್ಲಿ ತನ್ನ ಬೆಳಕನ್ನು ಕೆಡಹಿದೆ, ಆ ಬೆಳಕಿನ ಬೆಲೆ ಎಂತಹದು? ಎಂಬುದನ್ನು ನಾವೆಲ್ಲ ಅರಿತುಕೊಳ್ಳಲೆಬೇಕು.

★

ಇತ್ತೀಚಿಗೆ ವೆಸ್ಟಮಿನ್‌ಸ್ಟರ್ ಸ್ಟ್ಯಾಟಿನ ಉಲ್ಲೇಖ ಹೆಚ್ಚಾಗ ಹತ್ತಿದೆ. ಹಿಟ್ಲರನನ್ನು ಬಗ್ಗುಬಡಿದು, ನಾಝಿಜಮ್ ನಾಶ-ಗೊಳಿಸಿ, ಮಹಾಯುದ್ಧದ ಸತ್ರದಲ್ಲಿ ವಿಜಯಶ್ರೀ ಸಂಪಾದಿಸಿ ಅವಭೃತಸ್ನಾನಮಾಡಿ ಪರಿಶುದ್ಧರಾದ ಬ್ರಿಟಿಶರು, ಭರತ-ಭೂಮಿಗೆ **ವೆಸ್ಟ್‌ಮಿನ್‌ಸ್ಟರ್ ಕಾನೂನಿನಲ್ಲಿ** ನಿರ್ದಿಷ್ಟವಾದ ಸ್ವರಾಜ್ಯವನ್ನು ದಯಪಾಲಿಸುವವರಿದ್ದಾರಂತೆ. ಆದುದರಿಂದ ಈ ಕಾನೂನಿನಲ್ಲಿ ಏನಿದೆಯೆಂಬುದನ್ನು ವಿಚಾರಿಸಬೇಕಾಗಿದೆ. ಈ ಕಾನೂನಿನ ಮುಖ್ಯಾಂಶಗಳು ಹೀಗಿವೆ:—

ಈ ಕಾನೂನು ತೀರ ಸಣ್ಣದು. ಇದರಲ್ಲಿ ೧೨ ಕಲಮುಗಳು ಮಾತ್ರ ಇವೆ. ಈ ಹನ್ನೆರಡು ಕಲಮುಗಳಲ್ಲಿ ೭-ಲ ಕಲಮು ಗಳು ಮಾತ್ರ ಮಹತ್ತ್ವದುವುಗಳೆಂದು ಹೇಳಬಹುದು. ಕೆಲವು ಕಲಮುಗಳನ್ನು ಕಾನೂನಿನ ಶಾಸ್ತ್ರಕ್ಕನುಸರಿಸಿ ಸೇರಿಸಲಾಗಿದೆ. ಉದಾಹರಣಾರ್ಥವಾಗಿ ಕೊನೆಯ ಕಲಮು (೧೨) ತೀರ ಸಣ್ಣದಿದೆ. "**ಈ ಆಕ್ಟನ್ನು 'ವೆಸ್ಟ್‌ಮಿನ್‌ಸ್ಟರ್ ಸ್ಟ್ಯಾಟ್ಯೂ ೧೯೩೯' ಎಂದು ನಿರ್ದಿಷ್ಟಗೊಳಿಸಬೇಕು** (cited)" ಎಂದು ಈ ಕಾನೂನಿನ ಹೇತು ಹಾಗು ಕಾರಣಗಳ ಉಲ್ಲೇಖನದಲ್ಲಿ (ಪ್ರೀ ಆಂಬಲ್‌ನಲ್ಲಿ) ೧೯೨೬ರ ಮತ್ತು ೧೯೩೦ರ ಇಂಪೀರಿಯಲ್ ಕಾನ್‌ಫರನ್ಸುಗಳ ನಿರ್ಣಯಗಳನ್ನು ಫಲವತ್ತಾಗಿ ಮಾಡುವುದ ಕ್ಕಾಗಿ, ಈ ಕಾನೂನು ಮಾಡಲಾಗಿದೆಯೆಂದು ಸಾರಲಾಗಿದೆ. ಈ ಕಾನ್‌ಫರನ್ಸುಗಳ ಕಾಲದ ಹಾಗೂ ಅದಕ್ಕೂ ಪೂರ್ವದ ಬ್ರಿಟಿಶ್ ವಸಹಾತುಗಳ ಮತ್ತು ಯುನಾಯಿಟೆಡ್ ಕಿಂಗ್‌ಡಮ್ಮಿನ ರಾಜಕೀಯ, ಆರ್ಥಿಕ ಸಂಬಂಧದ ಇತಿಹಾಸವು ಬಹಳ ಮನನೀಯ ವಾಗಿದೆ. ಅದರಲ್ಲಿ ಬ್ರಿಟಿಶರ ಚಾರಿತ್ರ್ಯ, ಶೀಲ, ನೀತಿ, ನ್ಯಾಯ-ಪ್ರಿಯತೆ, ತತ್ತ್ವನಿಷ್ಠೆ ಮೊದಲಾದುವುಗಳ ನಿಚ್ಚಳವಾದ ಪ್ರತಿಬಿಂಬವಿದೆ. ಸ್ವಧರ್ಮೀಯರು, ಸವರ್ಣೀಯರು, ಒಂದೇ ಸಂಸ್ಕೃತಿಯವರು, ಸಜಾತೀಯರು, ಒಂದೇ ಕುಲದವರು (of the same race) ಆದ ವಸಹಾತಿಗರ ಕೂಡ ಬ್ರಿಟಿಶರು ಹ್ಯಾಗೆ ನಡಕೊಂಡರೆಂಬುದು, ಕಾನಡಾದ ಇತ್ತೀಚೆಗಿನ ಇತಿಹಾಸ ದಿಂದ ಚೆನ್ನಾಗಿ ಕಂಡುಬರುತ್ತದೆ. ಸಂಯುಕ್ತ ಕರ್ನಾಟಕದ ಸಂಚಿಕೆಗಳಲ್ಲಿ "**ಸಾಮಂತಸ್ವರಾಜ್ಯದ ಸ್ವರೂಪ**" ಎಂಬ ಲೇಖನಮಾಲೆಯಲ್ಲಿ ಕೆಲವು ಸಂಗತಿಗಳನ್ನು ಉಲ್ಲೇಖಮಾಡಿದ್ದೇನೆ. ಹಿಂದಿನ ಆಗು-ಹೋಗುಗಳನ್ನು ತಿಳಿದುಕೊಂಡರೆ ವೆಸ್ಟ್‌ಮಿನ್‌ಸ್ಟರ್ ಕಾನೂನನ್ನು ಪಾಸುಮಾಡುವ ಆವಶ್ಯಕತೆ ಯಾಕೆ ಉಂಟಾಯಿ ತೆಂಬುದು ಒಡೆದು ಕಾಣುತ್ತದೆ.

ಈ ಕಾನೂನಿನ ಪ್ರಾಸ್ತಾವಿಕ ಲೇಖನದಲ್ಲಿ "**ಬ್ರಿಟಿಶ್ ಎಂಪಾಯರ**" ಎಂಬ ಶಬ್ದಸಮುಚ್ಚಯದ ಬದಲು "**ಬ್ರಿಟಿಶ್ ಕಾಮನವೆಲ್ತ್ ಆಫ್ ನೇಶನ್ಸ್**" ಎಂಬ ಶಬ್ದಸಮುಚ್ಚಯವು ಉಪಯೋಗಿಸಲ್ಪಟ್ಟಿದೆ. ಸಾಮ್ರಾಜ್ಯಶಬ್ದವು ವಸಹಾತಿಗರಿಗೆ ರುಚಿಸಲಿಲ್ಲವೋ? ಈ ಕಾನೂನು (೧) ಕಾನಡಾ (೨) ಆಸ್ಟ್ರೇಲಿಯಾ (೩) ನ್ಯೂಫೌಂಲೆಂಡ್ (೪) ದಕ್ಷಿಣ ಆಫ್ರಿಕಾ (೫) ಆಯರ್ಲಂಡ್ (Free State) (೬) ನ್ಯೂ ಫೌಂಡ್‌ಲಂಡ್ ಗಳಿಗೆ ಮಾತ್ರ ಸಂಬಂಧಪಟ್ಟದ್ದಿದೆ. ಇವುಗಳಷ್ಟೇ ಡೋಮಿನಿ-ಯನ್ನುಗಳಂತೆ.

ಕಾನೂನು

ಕಲಮ್ ೧: ಡೋಮೀನಿಯನ್ ಎಂದರೆ ಆರು ಡೋಮೀನಿ-ಯನ್ನುಗಳಲ್ಲಿ ಒಂದು.

ಕಲಮ್ ೨: (೧) ಈ ಕಾನೂನು ಪ್ರಾರಂಭವಾದ **ನಂತರ** ಡೊಮೀನಿಯನ್‌ಪಾರ್ಲಮೆಂಟು ಪಾಸುಮಾಡಿದ ಯಾವ ಕಾನೂನಿಗೂ The Colonial Laws Validity Act 1865 ಅನ್ವಯಿಸುವುದಿಲ್ಲ.

ಬ್ರಿಟಿಶ್ ಪಾರ್ಲಿಮೆಂಟಿನ ಕಾನೂನುಗಳಿಗೆ ವಿರುದ್ಧವಾದ, ವಿಸಂಗತವಾದ ಕಾನೂನನ್ನು ಪಾಸು ಮಾಡುವ ಅಧಿಕಾರವು ವಸಹಾತುಗಳಿಗೆ ಇಲ್ಲ ವೆಂಬುದೇ ಕೊಲೋನಿಯಲ್ ಲಾಜ್ ವ್ಯಾಲಿಡಿಟಿ ಆ್ಯಕ್ಟಿನ ಮುಖ್ಯಾಂಶವಾಗಿತ್ತು. ಆದರೂ ಆಗಿನ ಕಾಲಕ್ಕೆ ಈ ಆ್ಯಕ್ಟಿನಿಂದ ವಸಹಾತುಗಳ ಕಾನೂನು ಮಾಡುವ ಅಧಿಕಾರ ವಿಸ್ತೃತವಾಯಿತು. ಆದಕ್ಕೂ ಮೊದಲು ವಸಹಾತುಗಳಿಗೆ ಬ್ರಿಟಿಶ್ 'ಕಾಮನ್ಸ್‌ಲಾ'ಕ್ಕೆ ವಿರುದ್ಧವಾದ ಅಥವಾ ವಿಸಂಗತವಾದ ಕಾಯಿದೆಗಳನ್ನು ಮಾಡುವ ಅಧಿಕಾರವಿದ್ದಿಲ್ಲ.

೨. ಬ್ರಿಟಿಶ್ ಪಾರ್ಲಿಮೆಂಟಿನ ಸದ್ಯದ ಅಥವಾ ಮುಂದೆ ಪಾಸಾಗುವಂತಹ ಯಾವ ಕಾನೂನಿಗೂ ವಿಸಂಗತ ಅಥವಾ ವಿರುದ್ಧವಾದ ಕಾನೂನನ್ನು ಪಾಸುಮಾಡುವ ಅಧಿಕಾರವು ಡೋಮಿನಿಯನ್ ಪಾರ್ಲಿಮೆಂಟಿಗಿದೆ. ಬ್ರಿಟಿಶ್ ಪಾರ್ಲಿಮೆಂಟು ಈ ಮೊದಲೆ ಪಾಸುಮಾಡಿದ ಅಥವಾ ಮುಂದೆ ಪಾಸು ಮಾಡುವ ಕಾನೂನನ್ನು ತಿದ್ದುವ ಅಥವಾ ರದ್ದು ಮಾಡುವ ಅಧಿಕಾರ ಡೊಮಿನಿಯನ್ ಪಾರ್ಲಿಮೆಂಟಿಗಿದೆ.

ಕಲಮ್ ೩: ತನ್ನ ಸೀಮಾಂತರದ ಹೊರಗೆ (Extraterritorial operation) ನಡೆಯುವ ಕಾನೂನು ಮಾಡುವ ಅಧಿಕಾರವೂ ಡೊಮಿನಿಯನ್ ಪಾರ್ಲಿಮೆಂಟಿಗಿದೆ.

ಕಲಮ್ ೪: ಇನ್ನು ಮುಂದೆ ಡೊಮಿನಿಯನ್ನಿನ ಸಮ್ಮತಿ ಇಲ್ಲದೆ ಬ್ರಿಟಿಶ್ ಪಾರ್ಲಿಮೆಂಟಿನ ಯಾವ ಕಾನೂನನ್ನೂ ಡೋಮಿನಿಯನ್ನಿನಲ್ಲಿ ಅಮಲಿನಲ್ಲಿ ತರಲಾಗದು.

"Under the Statute no attempt is made to renounce the legislation supremacy of the U. K. Parliament" ವೆ. ಸ್ಟ್ಯಾ. ಪ್ರಕಾರ ಯುನಾಯಿಟೆಡ್ ಕಿಂಗಡಮ್ಮಿನ ಪಾರ್ಲಿಮೆಂಟು ತನ್ನ ಕಾನೂನು-ಪ್ರಭುತ್ವವನ್ನು ಬಿಟ್ಟು ಕೊಟ್ಟಿಲ್ಲವೆಂದು ಒಬ್ಬ ಬರಹಗಾರನು ಅಭಿಪ್ರಾಯ ಪಟ್ಟಿದ್ದಾರೆ. ಹೌದು, 'ಮೂಗು ಹೋದರೂ ಮೂಗಿನ ಹೊರಳಿ ಉಳಿದಿದೆ' ಎಂದು ಸಮಾಧಾನಪಟ್ಟುಕೊಂಡಿದೆ ಅದು.

ಕಲಮುಗಳು ೫-೯: ಈ ಕಲಮುಗಳಲ್ಲಿ ಏಕಿಷ್ಟ ಆಕ್ಟುಗಳ ಹಾಗು ಕೆಲವು ವಸಹಾತುಗಳ ಸಂಬಂಧದ ವಿಷಯ ಬಂದಿದೆ.

ಕಲಮ್ ೧೦: ಈ ಕಲಮಿನಲ್ಲಿ ವೆಸ್ಟ್ ಮಿ. ಸ್ಟ್ಯಾಟ್ಯೂಟಿನ ಇಂತಹ ಕಲಮು ತಪ್ಪಿಗೆ ಹೊಂದಿಕೆ ಆಗುತ್ತದೆ, ಇಂತಹ ಕಲಮು ಆಗುವುದಿಲ್ಲ—ಎಂಬುದನ್ನು ಡೊಮಿನಿಯನ್ ಪಾರ್ಲಿಮೆಂಟು ನಿರ್ಣಯಿಸಬಹುದೆಂಬ ಮಾತಿದೆ.

ಕಲಮ್ ೧೧: ಕಾಲನ್ನಿ ಈ ಶಬ್ದದ ಅರ್ಥದ ವಿಷಯ ಈ ಕಲಮಿನಲ್ಲಿದೆ.

ಕಲಮ್ ೧೨: ಆಕ್ಟು 'ವೆಸ್ಟ್‌ಮಿನಿಸ್ಟರ್ ಸ್ಟ್ಯಾಟೂಟ್ ೧೯೩೧' ಎಂದು ಕರೆಯಲ್ಪಡಬೇಕು.

ಪೂರ್ವಕಥಾನುವಾದ

ಬ್ರಿಟಿಶ್ ವಸಹಾತುಗಳವರು ಗ್ರೇಟ್‌ಬ್ರಿಟನಿನ ಸರಿಸಮಾನಸ್ಥರಂದರು, ಸಮಾನ ದರ್ಜೆಯವರು, ಸಮಾನ ಅಧಿಕಾರ ಉಳ್ಳವರು "of equal status" ಎಂಬ ಭಾವನೆಯು ಕಳೆದ ಮಹಾಯುದ್ಧದ ನಂತರ ಎಲ್ಲ ಕಡೆಗೆ ದೃಢವಾಗುತ್ತನಡೆದಿತ್ತು. ಈ ಭಾವನೆಯು ಕಾನೂನಿನಲ್ಲಿ ಪರಿಣಮಿಸಿ, ಅದಕ್ಕೆ ಶಾಶ್ವತವಾದ ಮತ್ತು ಯುನಾಯಿಟೆಡ್ ಕಿಂಗಡಮ್ ಹಾಗೂ ಡೊಮಿನಿಯನ್ನುಗಳ ಮೇಲೆ ಬಂಧನಕಾರಕವಾದ ಭದ್ರತೆಯುಂಟಾಗಬೇಕೆಂದು ಡೊಮಿನಿಯನ್‌ಗಳ ಬಲವಾದ ಮುನಿಸೆ. "The Dominions given into sister nations without legal change of status, and the Statute of Westminster 1931 virtually gave formal sanction only to a *fait accomple*".(Keith.) ಪರದೇಶಗಳಲ್ಲಿ ಸ್ವತಂತ್ರ ರಾಯಭಾರಿಗಳನ್ನು ನಿಯಮಿಸುವ ಅಧಿಕಾರ, ಪರದೇಶಗಳ ಕೂಡ ವ್ಯಾಪಾರದ ಒಪ್ಪಂದಮಾಡುವ ಅಧಿಕಾರ, ಪ್ರಿವ್ಹಿ ಕೌನ್ಸಿಲ್ಲಿಗೆ ಡೋಮಿನಿಯನ್ ಕೋರ್ಟುಗಳ ನಿರ್ಣಯದ ಮೇಲಿನ ಅಪೀಲುಗಳನ್ನು ವಿಚಾರಿಸುವ ಅಧಿಕಾರವಿದೆಯೋ ಎಂಬ ಪ್ರಶ್ನೆ, ಗವ್ಹರ್ನರ್ ಜನರಲ್ಲರ ಅಧಿಕಾರ, ಗ್ರೇಟಬ್ರಿಟನ್ನು ಸಾರಿದ ಯುದ್ಧದಲ್ಲಿ ಡೊಮಿನಿಯನ್ನು ಭಾಗವಹಿಸಲೇ ಬೇಕೊ .. ಎಂಬ ಪ್ರಶ್ನೆ ಇವೇ ಮೊದಲಾದ ವಿಷಯಗಳ ಚರ್ಚೆ ಕೆಲವು ಕಾಲ ನಡೆದಿತ್ತು. ೧೯೨೬ ರ ಹಾಗೂ ೧೯೩೦ ರ ಇಂಪೀರಿಯಲ್ ಕಾನ್ಫರನ್ಸ್‌ಗಳಲ್ಲಿ ಕೆಲವು ವಿಷಯಗಳ ಚರ್ಚೆಯಾಯಿತು. ೧೯೨೯ ರ ಕವಿಾಟಿಯು ೧೯೨೬ ರ ಕಾನಫರನ್ಸಿನ ಸಿಫಾರಸಿಗನುಸರಿಸಿ ತನ್ನ ವರದಿಯನ್ನು ಸಾದರಪಡಿಸಿತು. ಎಲ್ಲ ವಿಷಯಗಳ ನಿರ್ಣಯವೂ ಡೋಮಿನಿಯನ್ನುಗಳಿಗೆ ಗುಣವಾಗುವಂತೆ ಆಯಿತೆಂದು ಬೇರೆ ಹೇಳುವ ಕಾರಣವಿಲ್ಲ. ಉದಾಹರಣಾರ್ಥ ಡೋಮಿನಿಯನ್ ಸರಕಾರದ ಸೂಚನೆಗನುಸರಿಸಿ, ಗವ್ಹರ್ನರ್ ಜನರಲ್ಲನನ್ನು ಅರಸನು (King) ನಿಯಮಿಸಬೇಕೆಂದಾಯಿತು.

೧೯೧೭ ರ ಇಂಪೀರಿಯಲ್ ಕಾನಫರನ್ಸಿನ ನೀತಿಯ ನಿರ್ಣಯದಲ್ಲಿ ಸಮಾನತೆಯ ಭಾವನೆಯ ಮಸಮಸಕಾದ ಚಿತ್ರವಿದೆ. ೧೯೧೭ರಿಂದ ೧೯೩೭ರ ವರೆಗಿನ ಕಾಲದಲ್ಲಿ ಈ ಭಾವನೆಯು ಸಾಕಷ್ಟು ಬಲಿಯಿತು. ಬೇರೆ ಡೋಮಿನಿಯನ್‌ಗಳ ಬೇಡಿಕೆಗೆ ಸ್ವಾತಂತ್ರ್ಯಪ್ರಿಯ ಅಯರ್ಲಂಡಿನಿಂದ ಬಲ ದೊರೆಯಿತು ೧೯೧೭ ರಲ್ಲಿ ಅಯರ್ಲಂಡಿಗೆ ಸ್ವಾತಂತ್ರ್ಯ ದೊರೆತಿದ್ದಿಲ್ಲ. ೧೯೨೬ ರ ಕಾನಫರನ್ಸಿನ ಅಧ್ಯಕ್ಷರು ರಾಜಕಾರಣದಲ್ಲಿ ನುರಿತ ಕುಶಲ ಸಚಿವರಾದ ಲಾರ್ಡ್ ಬಾಲ್ಫರರು. ಅವರು ತಮ್ಮ ವರದಿಯಲ್ಲಿ ಯು. ಕಿಂಗಡಮ್ ಹಾಗು ಡೊಮಿನಿಯನ್ನುಗಳು "are equal in status, in no way subordinate to one another in any aspect of their domestic or external affairs." ಎಂದು ಆಶ್ವಾಸನೆಕೊಟ್ಟರು.

ಡೊಮಿನಿಯನ್ನುಗಳ ಭೌಗೋಲಿಕ ಸ್ಥಾನ ಅವುಗಳ ಆರ್ಥಿಕ ಸ್ಥಿತಿ, ಅವುಗಳ ಆತ್ಮರಕ್ಷಣೆಯ ಸಾಮರ್ಥ್ಯ ಮೊದಲಾದುವುಗಳ ಮೇಲೆ ಅವುಗಳ ಸ್ವಾತಂತ್ರ್ಯದ ಹಸಿವು ಅವಲಂಬಿಸಿತ್ತು. ದಕ್ಷಿಣ-ಆಫ್ರಿಕಾ, ಕಾನಡಾ, ಅಯರ್ಲಂಡ್, ಇವು ಬಲವುಳ್ಳವಿದ್ದುದರಿಂದ

ಅವು ಪೂರ್ಣಸ್ವಾತಂತ್ರ್ಯದ ಧ್ಯೇಯಕ್ಕನುಸರಿಸಿ ಒತ್ತರದಿಂದ ಮುಂದುವರಿಯಲು ಹವಣಿಸುತ್ತಿದ್ದುವು. ಆಸ್ಟ್ರೇಲಿಯಾ, ನ್ಯೂಫೌಂಡ್‌ಲೆಂಡ್‌ಗಳು ಆತ್ಮರಕ್ಷಣೆಯಲ್ಲಿ ಹಿಂದುಳಿದುವುಗಳು. ಆಸ್ಟ್ರೇಲಿಯಾವು ಬಹಳ ವಿಸ್ತಾರವಾದ ಡೊಮಿನಿಯನ್ನು. ಅದು ಏಷ್ಯದ ಖಂಡವೆನಿಸಿಕೊಳ್ಳುತ್ತದೆ. ಅದಕ್ಕೆ ಆಕ್ರಮಣಶೀಲವಾದ ಬಲಿಷ್ಠ ರಾಷ್ಟ್ರಗಳ ಭಯವಿದೆ. ಕಾರಣ ಬ್ರಿಟಿಶ್‌ನೌಕೆಯು ಮತ್ತು ಬ್ರಿಟಿಶ್ ಬಲದ ರಕ್ಷಣೆಯು ಬೇಕೆಂದು ಅದರ ಮನೀಷೆ. ಅನೇಕ ಸಂದರ್ಭಗಳಲ್ಲಿ ಬೇರೆ ಬೇರೆ ಡೊಮಿನಿಯನ್ನುಗಳು ಹೇಗೆ ವರ್ತಿಸಬೇಕೆಂಬುದನ್ನು ಉದಹರಿಸಿ, ಈ ಮಾತನ್ನು ಹೆಚ್ಚು ಸ್ಪಷ್ಟೀಕರಿಸಬಹುದು. ಆದರೆ ವಿಸ್ತಾರಭಯದಿಂದ ಅದರ ಗೋಜಿಗೆ ಹೋಗುವದಿಲ್ಲ.

ಸಮಾನದರ್ಜೆಯ ಘೋಷಣೆಯಾದರೂ ಅದು ನಿತ್ಯವ್ಯವಹಾರದಲ್ಲಿ ಹೇಗೆ ಪರಿಣಮಿಸುತ್ತದೆಂಬ ಬಗ್ಗೆ ವರದಿಯು ಹೀಗೆ ಹೇಳುತ್ತದೆ:

"The principles of equality and similarity appropriate to status do not universally extend to fuction. Here we reuire something more than invitable dogmas. For example, to dea with questions of diplomacy and questions o defence, we require also flexible machinery—machinery which can, from time to time, be adapted to that changing circumstances of the world.

ಅದ್ಯಕಥಾನುವಾದ

೧೯೩೧ನೆಯ ಇಸ್ವಿಯ ಡಿಶೆಂಬರ್ ೧೧ನೆಯ ತಾರೀಖಿಗೆ ಈ ಆಕ್ಟು ಪಾಸಾಯಿತು— (22 Geo. 5 c. 4) ಈ ಕಾನೂನಿನ ಮಸೂದೆಯನ್ನು ಬ್ರಿ. ಪಾರ್ಲಿಮೆಂಟಿಗೆ ಸಾದರಪಡಿಸುವಾಗ, ಬ್ರಿಟಿಶ್‌ಮಂತ್ರಿಗಳಿಗೆ ಇಷ್ಟವಿಲ್ಲದ ಕೆಲಸ ಮಾಡುತ್ತೇವೆಂದೆನಿಸಿತಂತೆ. ಇದೊಂದು "Hazardous experiment" ಎಂದು ಅವರು ತಿಳಿದರಂತೆ. ೧೯೩೦ರ ಕಾನಫರನ್ಸಿನ ಗೊತ್ತುವಳಿಗನುಸರಿಸಿ, ಬ್ರಿಟಿಶ್ ಪಾರ್ಲಿಮೆಂಟಿನಲ್ಲಿ ಒಂದು ಬಿಲ್ಲು ಮಂಡಿಸಬೇಕೆಂದು ಡೊಮಿನಿಯನ್ ಪಾರ್ಲಿಮೆಂಟುಗಳು ನಿರ್ಣಯಿಸಿದುವು. ಹೀಗಾಗಿ ವೆ. ಸ್ಟಾ. ಮಸೂದೆಯನ್ನು ಮಂಡಿಸಿ ಪಾಸುಮಾಡಿಸಿಕೊಳ್ಳದೆ ಗತ್ಯಂತರವಿದ್ದಿಲ್ಲ. "In 1931 the Statute of Westminster had dissolved the formal bones of Empire; in 1932 the Ottawa Conference endeavoured through the policy of preference to establish a new commercial tie between the Dominions and the mother country" ಎಂದು ಜೆ. ಎ. ಸ್ಪೆಂಡರರು ಬರೆದಿದ್ದಾರೆ.

ಕಾನಡಾ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ಇವುಗಳ ಘಟನೆಗಳ (ಕಾನಸ್ಟಿಟ್ಯೂಶನ್) ಬಗ್ಗೆ. ಬ್ರಿಟಿಶ್ ಪಾರ್ಲಿಮೆಂಟಿನ ಬೇರೆ ಬೇರೆ ಆ್ಯಕ್ಟುಗಳುಂಟು. ಆಯರಿಶ್ ಫ್ರೀಸ್ಟೇಟ್ ಹಾಗೂ ಗ್ರೇಟ್ ಬ್ರಿಟನ್ ಇವುಗಳ ನಡುವೆ ಕರಾರು ಅಥವಾ ಒಪ್ಪಂದವಾಗಿದೆ. ವಸಹಾತುಗಳಿಗೆ ಸಂಬಂಧಪಟ್ಟ ಬ್ರಿಟಿಶ್ ಪಾರ್ಲಿಮೆಂಟಿನ ಕಾನೂನುಗಳ ಮೇಲೆ ಹಾಗೂ ಆಯರಿಶ್ ಫ್ರಿಸ್ಟೇಟಿನ ಸಂಗಡ ಆದ ಕರಾರಿನ ಮೇಲೆ ಮತ್ತು ಅದಕ್ಕೆ ಸಂಬಂಧಪಟ್ಟ ಕಾನೂನುಗಳ ಮೇಲೆ ವೆಸ್ಟಮಿನ್‌ಸ್ಟರ ಸ್ಟ್ಯಾಟ್ಯೂಟಿನ ಪರಿಣಾಮವೇನಾಗಿದೆಯೆಂಬುದನ್ನು ಸಂಕ್ಷೇಪವಾಗಿ ವಿಚಾರಿಸುವ:

ಬ್ರಿಟಿಶ್ ಪಾರ್ಲಿಮೆಂಟಿನ ಆ್ಯಕ್ಟುಗಳಲ್ಲಿ ಅಡಕವಾದ ತಪ್ಪು ಘಟನೆಗಳನ್ನು ತಿದ್ದುಪಡಿಗೊಳಿಸುವ ಅಧಿಕಾರವು ವೆ. ಸ್ಟಾ. ಟ್ಯೂಟಿನಿಂದ ತಮಗೆ ದೊರೆಯಬಾರದೆಂದು ಕಾನಡಾ, ಆಸ್ಟ್ರೇಲಿಯಾ ಮತ್ತು ನ್ಯೂಫೌಂಡಲಂಡ್‌ಗಳ ಬೇಡಿಕೆ ಇತ್ತು. ಆಸ್ಟ್ರೇಲಿಯಾ, ನ್ಯೂಫೌಂಡಲಂಡ್, ನ್ಯೂಫೌಂಡಲಂಡ್‌ಗಳು ವೆ. ಸ್ಟಾ. ಟ್ಯೂ ಟಿನ ಸಾಮಾನ್ಯ ಕಲಮುಗಳು ತಮಗೆ ಹತ್ತಬಾರದೆಂಬ ಇಚ್ಛೆಯನ್ನು ಪ್ರದರ್ಶಿಸಿದುವು. ಆದರಂತೆಯೆ ವೆ. ಸ್ಟಾ. ಟ್ಯೂಟಿನಲ್ಲಿ ಒಂದು ಕಲಮನ್ನು ಹಾಕುವುದರಲ್ಲಿ ಬಂದಿತು. ಉದಾಹರಣಾರ್ಥ The British North America Act 1867 ಇದು ಕಾನಡಾದ ಘಟನೆಗೆ ಸಂಬಂಧಪಟ್ಟಿದೆ. ಇದು ಬ್ರಿಟಿಶ್ ಪಾರ್ಲಿಮೆಂಟಿನ ಆ್ಯಕ್ಟು. ವೆ. ಸ್ಟಾ. ಟ್ಯೂಟಿನ ಪ್ರಕಾರ ಬ್ರಿಟಿಶ್ ಪಾರ್ಲಿಮೆಂಟಿನ ಬೇಕಾದ ಆ್ಯಕ್ಟಿನಲ್ಲಿ ತಿದ್ದುಪಡಿಮಾಡುವ ರದ್ದು-

ಮಾರಾಟಕ್ಕೆ ತಯಾರಿದ್ದ ಪುಸ್ತಕಗಳು

ಶ್ರೀ. ಚಿಂತಾಮಣಿ ರಾಮಚಂದ್ರ ಸಹಸ್ರಬುದ್ಧೆ ಕೃತ

ಚಹಾ ಗೀತಾ	ಸಂಸ್ಕೃತ	..	೦– ೮–೦
ಕಾಕದೂತ	,,	..	೦– ೬–೦
ರಾಷ್ಟ್ರೀಯೋಪನಿಷತ್	,,	..	೦– ೨–೬
ರಾಷ್ಟ್ರೀಯ ಮೋಹಮುದ್ಗರ	,,	..	೦– ೧–೦
ಮೋಹಮುದ್ಗರ	,,	..	೦– ೧–೦
ಪ್ರತಿಕಾರ ನಾಟಕಮ್	,,	..	೧– ೦–೦
ಅಬಲಾ-ಮರ್ದನ-ನಾಟಕಮ್	,,	..	೧– ೦–೦
ರಾಷ್ಟ್ರೀಯ ಮಂಗಲಾಷ್ಟಕಂ	,,	..	೦– ೦–೬
ತಿಲಕ ಸೂಕ್ತಿ ಶತಕಮ್	,,	..	೨– ೪–೦
ಪನ್ಹಾಳಗಡಚಾ ಕಿಲ್ಲೇದಾರ	ಮರಾಠಿ	..	೦– ೬–೦
ಗಡ ಆಲಾ ಪಣ ಸಿಂಹ ಗೇಲಾ	,,	..	೦–೧೨–೦
ದೇಶಿ ದುಮದುಮೆ ಶತಕ	,,	..	೦– ೨–೦

ಕಿಮ್ಮತಿನ ಹೊರ್ತಾಗಿ ಟಪಾಲು ಹೆಚ್ಚಿಗೆ ಬೀಳುವದು.

ವಿಳಾಸ:— ಮ್ಯಾನೇಜರ್,

ಕರ್ನಾಟಕ ಪ್ರಿಂಟಿಂಗ್ ವರ್ಕ್ಸ್, ಧಾರವಾಡ.

ಪಡಿಸುವ ಅಧಿಕಾರವು ಡೊಮಿನಿಯನ್ನ ಪಾರ್ಲಿಮೆಂಟುಗಳಿಗಿದೆ. ಆದರೆ ಘಟನೆಗೆ ಸಂಬಂಧಪಟ್ಟ ಬ್ರಿಟಿಶ್ ಪಾರ್ಲಿಮೆಂಟಿನ ಕಾನೂನನ್ನು ರದ್ದುಪಡಿಸುವ ಅಧಿಕಾರ ತಮಗೆ ಬೇಡವೆಂದು ಹೇಳಿಕೆನೆಡಿಯನ್ನರು, ತಮ್ಮ ಕಾನೂನುಸ್ವಾತಂತ್ರ್ಯವನ್ನು ಅಷ್ಟರ ಮಟ್ಟಿಗೆ ಮರ್ಯಾದಿತ ಮಾಡಿಕೊಂಡರು. ಡೊಮಿನಿಯನ್ ಪಾರ್ಲಿಮೆಂಟುಗಳಿಗೆ 'ವೆ. ಸ್ಟ್ಯಾಟ್ಯೂಟ್' ತಮಗೆ ಅನ್ವಯಿಸುತ್ತದೆ' ಎಂಬ ಕಾನೂನನ್ನು ಪಾಸುಮಾಡುವ ಅಧಿಕಾರವಿದೆ.

ಬ್ರಿಟಿಶ್ ಪಾರ್ಲಮೆಂಟಿನ South Africa Act 1909 ರಿಂದ ದಕ್ಷಿಣ ಆಫ್ರಿಕಕ್ಕೆ ಸ್ವರಾಜ್ಯ ದೊರೆಯಿತು. ಬ್ರಿಟಿಶ್ ಹಾಗು ಬೋಯರ ನಡುವೆ, ವ್ಹಿರೀನಿಗಿಂಗ್ (Vereeniging) ಒಪ್ಪಂದವಾದ ಎಂಟು ವರ್ಷಗಳಲ್ಲಿ ಈ ಶುಭೋದಯವಾಯಿತು. ಹಿಂದುಸ್ಥಾನಕ್ಕೆ ೧೫೦ ವರ್ಷಗಳಾದರೂ ಈ ಕಪಿಲಾಷಷ್ಠಿಯೋಗ ಬರಲೊಲ್ಲದು. ವೆ. ಸ್ಟ್ಯಾ. ಪಾಸಾದ ಬಳಿಕ ೧೯೦೯ರ ದಕ್ಷಿಣ ಆಫ್ರಿಕಾ ಅಕ್ಟಿನಲ್ಲಿ, ದಕ್ಷಿಣಆಫ್ರಿಕಾ ಪಾರ್ಲಿಮೆಂಟಿನ Status of Union Act 1934 ರಿಂದ ಅನೇಕ ಬದಲಾವಣೆಗಳಾದುವು. ೧೯೩೪ರ ಕಾನೂನಿನಲ್ಲಿ ದಕ್ಷಿಣಆಫ್ರಿಕೆಯು 'Sovereign independent State' ಇದೆಯೆಂಬ ಮತ್ತು ಅದಕ್ಕೆ 'Sovereign legislative power in and over the Union' ಇದೆಯೆಂಬ ಘೋಷಣೆ ಇದೆ.

ಅರಸೊತ್ತಿಗೆ

ಬ್ರಿಟಿಶ್ ಕಾಮನ್ವೆಲ್ತಿನ ಬೇರೆ ಬೇರೆ ಡೊಮಿನಿಯನ್ನುಗಳನ್ನು ಯುನಾಯಿಟೆಡ್ ಕಿಂಗ್‌ಡಮ್ಮಿಗೆ ತೊಡಕಿಸುವ ಮುಖ್ಯ ಸರಪಳಿಯೂ ಒಂದೇ ಇದೆ. ಅದು crown ಎಂದರೆ ಅರಸೊತ್ತಿಗೆ. Constitutional monarchy ಎಂದರೆ ಘಟನಾತ್ಮಕ ಅರಸೊತ್ತಿಗೆಗೆ ಬ್ರಿಟಿಶ್ ಘಟನೆಯಲ್ಲಿದ್ದ ಸ್ಥಾನವು ಚಲಿಸಹತ್ತಿದೆ.

"....the Statute of Westminster broke with the principle. which is of the essence of constitutional monarchy that the king should not act except on the advice of Ministers Since there was no Imperial Government and all other Governments were of equal status, there was no Government to advice him in his capacity of Head of the Commonwealth."

ಅರಸನು ಯಾವಾಗಲೂ ತನ್ನ ಮಂತ್ರಿಗಳ ಉಪದೇಶದಂತೆ ನಡೆಯಬೇಕು; ಆ ಮಂತ್ರಿಗಳು ಡೊಮಿನಿಯನ್ನಿನವರಿರಲಿ ಅಥವಾ ಯುನಾಯಿಟೆಡ್ ಕಿಂಗಡಮ್ಮಿನವರಿರಲಿ. ಉದಾಹರಣಾರ್ಥ ದ ಆಫ್ರಿಕಾದ ಕಾರ್ಯನಿರ್ವಾಹಕ ಸರಕಾರವು ಹೇಗಿದೆ ನೋಡಿರಿ: The executive Government of the Union.. vests in the king acting on the advice of his Ministers of State for the Union. ಹಿಂದುಸ್ಥಾನದ ಮಟ್ಟಿಗೆ ಚಕ್ರವರ್ತಿ, ಸಮ್ರಾಟ್ ಆಗಿರುವ, ಉಳಿದ ಕಡೆಗೆ ಅರಸು-ರಾಜನು (King)-ಎಂದು ಸಂಬೋಧಿಸಲ್ಪಟ್ಟ ಎಂಟನೆಯ ಎಡ್ವರ್ಡರು ತಮ್ಮ ಪ್ರೀತ್ಯಾಸ್ಪದಳಾದ ವಿದುಷಿಗಾಗಿ ಸಾಮ್ರಾಜ್ಯ ಪದವನ್ನು ತ್ಯಜಿಸಿದ ಕಾಲದಲ್ಲಿ, ಅವರ ಸ್ಥಾನಕ್ಕೆ ಯಾರು ಬರಬೇಕೆಂಬ ಪ್ರಶ್ನೆಬಂತು. ವೆಸ್ಟ್‌ಮಿನ್‌ಸ್ಟರ್ ಸ್ಟ್ಯಾಟೂಟ್ ಪ್ರಕಾರ ಎಂಟನೆಯ ಎಡ್ವರ್ಡರ ತರುವಾಯ ಪಟ್ಟಕ್ಕೆ ಬರುವವರಿಗೆ ಡೊಮಿನಿಯನ್ನುಗಳ ಸಮ್ಮತಿ ಕೂಡ ದೊರೆಯಬೇಕು; ಯುನೈಟೆಡ್ ಕಿಂಗಡಮ್ಮಿನ ಸಮ್ಮತಿ ಮಾತ್ರ ದೊರೆತರೆ ಸಾಲದು. ಅರಸನೆಯ ಜಾರ್ಜರ ನಾಮಾಭಿಧಾನ ಮತ್ತು ಪದವಿ ಹೀಗೆ:— "George VI by the Grace of God of Great Britain, Ireland and the British Dominions beyond the Seas King, Defender of the Faith, Emperor of India." ಅರಸರ ಪದವಿಗಳಿಗೆ ಸಂಬಂಧಪಟ್ಟ ಎಲ್ಲಕ್ಕೂಮೊದಲಿನ ಕಾನೂನು ಎಂದರೆ The Act of Settlement 1701. ಇತ್ತಕಡೆಗೆ The Royal and Parliamentary Titles Act 1927 ಪಾಸಾಯಿತು. ಎಂಟನೆಯ ಎಡ್ವರ್ಡರ ರಾಜ್ಯತ್ಯಾಗದ ಬಗ್ಗೆ ಕಾನಡಾದಲ್ಲಿ The Throne Act 1937 of the Dominion of Canada ಮತ್ತು ದ. ಆಫ್ರಿಕಾದಲ್ಲಿ His Majesty King Edward VIII's Abdication Act 1937 ಪಾಸಾಗಿ, ಆ ಡೊಮಿನಿಯನ್ನುಗಳ ಸಮ್ಮತಿ ದೊರೆಯಿತು. ಈ ಸಂದರ್ಭದಲ್ಲಿ ಒಂದು ವಿಚಿತ್ರ ಘಟನೆ ಸಂಭವಿಸಿತು. ೧೯೩೬ರ ಡಿಶಂಬರ್ ೧೦ನೆಯ ತಾರೀಖಿಗೆ ಎನೆಯ ಎಡ್ವರ್ಡರ ತ್ಯಾಗದ ಕಾನೂನು ಬ್ರಿಟಿಶ್ ಪಾರ್ಲಿಮೆಂಟಿನಲ್ಲಿ ಪಾಸಾಗಿ, ಅವರು ಅರಸೊತ್ತಿಗೆಯನ್ನು ಬಿಟ್ಟುಕೊಟ್ಟರು, ಮತ್ತು ಕೂಡಲೆ ೬ನೆಯ ಜಾರ್ಜರು ಅರಸರಾದರು. ಆದರೆ ಈ ತ್ಯಾಗಕ್ಕೆ ಸಮ್ಮತಿಕೊಡುವ ಬಿಲ್ಲು The Executive Authority (External Relations) Act 1936 ಅಯರಿಶ್ ಫ್ರೀಸ್ಟೇಟ್ ಪಾರ್ಲಿಮೆಂಟಿನಲ್ಲಿ ೧೯೩೬ರ ದಿಶಂಬರ್ ೧೦ನೆಯ ತಾರೀಖಿಗೆ ಪಾಸಾಯಿತು. ಹೀಗಾದುದರಿಂದ ಎನೆಯ ಎಡ್ವರ್ಡರು ಇಂಗ್ಲಂಡಿನಲ್ಲಿ ತಾ॥ ೧೦-೧೨-೧೯೩೬ಕ್ಕೆ ರಾಜರೆಂದು ಗಣಿಸಲ್ಪಡದಿದ್ದರೂ, ಅಯರ್ಲಂಡಿನಲ್ಲಿ ಅವರು ರಾಜರಾಗಿಯೇ ಉಳಿದರು. ಅಯರಿಶ್ ಪಾರ್ಲಿಮೆಂಟಿನಲ್ಲಿ ರಾಜ್ಯತ್ಯಾಗದ ಸಮ್ಮತಿಯ ಅಕ್ಟ್ ಪಾಸಾಗುವವರೆಗೆ, ಎನೆಯ ಎಡ್ವರ್ಡರು ಅಯರ್ಲಂಡಿನಲ್ಲಿ ಕಾನೂನಿನ ಪ್ರಕಾರ ರಾಜರಾಗಿಯೆ ಉಳಿದರು. ಎಂದರೆ ಅಯರ್ಲಂಡಿನಲ್ಲಿ ಎನೆಯ ಎಡ್ವರ್ಡರ ಆಳಿಕೆ ಒಂದು ದಿವಸದಿಂದ ಬೆಳೆಯಿತು. ದೂರನ ಡೊಮಿನಿಯನ್ನುಗಳ ಪಾರ್ಲಿಮೆಂಟನ್ನು ಕರೆದು ಈ ವಿಷಯವನ್ನು ಚರ್ಚಿಸಲು ಅವಕಾಶವಿಲ್ಲದ್ದರಿಂದ, ಆ ಡೊಮಿನಿಯನ್‌ಗಳ ಸರಕಾರದ ಸಮ್ಮತಿ ಸಾಕೆಂದು ಕೆಲಸ ಸಾಗಿಸುವುದರಲ್ಲಿ ಬಂತು. ಹಿಂದಿನಿಂದ ಅವುಗಳ ಪಾರ್ಲಿಮೆಂಟುಗಳ ಅಕ್ಟ್ಗಳಾದುವು. ವೆ. ನಿ. ಸ್ಟ್ಯಾಟಿನ ಪ್ರಕಾರ ಈ ಸಂದರ್ಭದಲ್ಲಿ ಇನ್ನೂ ಕೆಲವು ತೊಡಕಿನ ಪ್ರಶ್ನೆಗಳು ಹೊರಟುವು. ಸದ್ಯಕ್ಕೆ ಅವುಗಳ ವಿಚಾರ ಬದಿಗಿಡುವಾ. ೧೯೩೬ನೆಯ ಡಿಶಂಬರ್ ೧೦ಕ್ಕೆ ಅಯರಿಶ್ ಪಾರ್ಲಿಮೆಂಟಿನಲ್ಲಿ ಡಿಫ್ಫೆರೆಂಟ್ ಆದ ಎರಡು ಬಿಲ್ಲುಗಳನ್ನು — Constitution

(Amendment No. 27) Bill ಮತ್ತು the Executive Authority (External Relations) Bill ಮಾಡಿಸಿ ಪಾಸುಮಾಡಿಕೊಂಡರು. ಈ ಬಿಲ್ಲುಗಳ ತಳಹದಿ ವೆಸ್ಟ್‌ಮಿನ್‌ಸ್ಟರ್ ಸ್ಟ್ಯಾಟ್ಯೂಟ್. ಮೊದಲನೆಯ ಬಿಲ್ಲಿನಿಂದ ಫ್ರೀಸ್ಟೇಟಿನ ಒಳದೇಶದ ವ್ಯವಹಾರದಲ್ಲಿ ಅರಸನಿಗೆ ಸ್ಥಾನವಿಲ್ಲದಂತಾಯಿತು (removed the king from all internal activities of the Free State). ಎರಡನೆಯ ಬಿಲ್ಲಿನಿಂದ ಪರದೇಶಗಳ ಕೂಡ ಒಪ್ಪಂದ ಮಾಡುವಾಗ ಅರಸನು ಅಯರ್ಲಂಡಿನ ಕಾರ್ಯನಿರ್ವಾಹಕ ಮಂಡಳದ (Executive Council) ಅನುಮತಿಯಂತೆ ನಡೆಯುತಕ್ಕದ್ದು ಎಂದು ಗೊತ್ತಾಯಿತು. ಡಿವ್ಹೆಲೆರಾರವರು ಹೀಗೆ ಹೇಳಿದರು: "that in the new constitution there would be no reference whatsoever to the king, that constitutionally the king would not appear in that constitution."

ಅರಸರ ಪ್ರತಿನಿಧಿಯಾದ ಗವ್ವರ್ನರ ಜನರಲ್ಲರ ಅವಸ್ಥೆ ಏನಾಗಿರ ಬೇಕು? Sovereign ಮತ್ತು Crown ಈ ಶಬ್ದಗಳು ಸಮಾನಾರ್ಥದುವೆಂದು ಸಾಮಾನ್ಯವಾಗಿ ಉಪಯೋಗಿಸುವು ದುಂಟು. ಆದರೆ ಅವುಗಳಿಗೆ ಘಟನೆಯ ಪರಿಭಾಷೆಯಲ್ಲಿ ಬೇರೆ ಬೇರೆ ಅರ್ಥಗಳುಂಟು. ವ್ಯಕ್ತಿಶಃ ಅರಸನಿಗೆ ಅಧಿಕಾರವಿಲ್ಲ. ಅವನ ಅಧಿಕಾರದ ಉಗಮವೂ, ಆದರ ಕೇಂದ್ರವೂ ಅವನ ಅರಸೊತ್ತಿಗೆ ಯಲ್ಲಿ (crown) ಇದೆ. ಡೊಮಿನಿಯನ್ನುಗಳಲ್ಲಿಯು ಸರಕಾರದ ಎಲ್ಲವರದ ಅಧಿಕಾರವು (higher powers of the Government) ಅರಸನಿಂದ (crown) ದೊರೆಯುತ್ತದೆ. ಆದರೆ ಅಯರಿಶ್ ಫ್ರೀಸ್ಟೇಟಿನ ಘಟನೆಯ ೩ನೆಯ ಆರ್ಟಿಕಲ್ಲಿನ ಪ್ರಕಾರ "all powers of Government are declared to be derived from the people of Ireland and when are usually exercised in the name of the Free State." ವೆಸ್ಟ್‌ಮಿನಸ್ಟರ್ ಸ್ಟ್ಯಾಟ್ಯೂಟಿನ ಪ್ರೀಅಂಬಲದ ಪಠನೆಯ ಕಲ್ಮಿಸಲ್ಲಿ "the crown is the symbol of the free association of the members of the British Comonwealth of Nations" ಎಂಬುದಾಗಿ ಇದೆ. ಇದರ ಅರ್ಥ, ಇದರ ವ್ಯಾಪ್ತಿ ಮೊದಲಾದುವುಗಳ ಬಗ್ಗೆ ಏಕೈಕ್ಯವಿಲ್ಲ. crown is an intangible institution. ಅರಸೊತ್ತಿಗೆಯು ೧೯೩೪ರಲ್ಲಿ ಪಂಜಮ ಜಾರ್ಜರಲ್ಲಿತ್ತು, ೧೯೩೬ ರಲ್ಲಿ ಎಡ್ವರ್ಡನೆಯ ಎಡ್ವರ್ಡರಲ್ಲಿತ್ತು. ೧೯೩೭ರಲ್ಲಿ ೬ನೆಯ ಜಾರ್ಜರಿಗೆ ಬಂದಿತು. ಅರಸರು ಬದಲಾದರು, ಅರಸೊತ್ತಿಗೆ ಬದಲಾಗಲಿಲ್ಲ. ಅರಸೊತ್ತಿಗೆಯ ಚಿನ್ಹ, ಅಥವಾ ಕುರುಹು The Great Seal of the United Kingdom ಅಥವಾ the Great Seal of the Realm ಎಂಬ ಮುದ್ರೆ ಮತ್ತು the Royal Sign Manual (*i. e.* the King's Signature.) ಇವೆ. ೧೯೩೭ರಲ್ಲಿ ಅಯರಿಶ್ ಫ್ರೀ ಸ್ಟೇಟಿನವರು ಇಂಗ್ಲಂಡಿನ ಗ್ರೇಟ್ ಸೀಲ್ (ಮುದ್ರೆ) ಸಹ ಬಿಟ್ಟುಕೊಟ್ಟು, ತಮ್ಮ ಸ್ವತಂತ್ರ ಗ್ರೇಟ್ ಸೀಲ್ (ಮುದ್ರೆ) ಮಾಡಿಕೊಂಡರು. ದಕ್ಷಿಣ ಆಫ್ರಿಕಾ ಸಹ ಸ್ವತಂತ್ರ ಮುದ್ರೆ ಮಾಡಿಕೊಂಡಿದೆ. ಡೊಮಿನಿಯನ್ನುಗಳ ಈ ವರ್ತನದಿಂದ ವೆಸ್ಟ್‌ಮಿನಿಸ್ಟರ್ ಸ್ಟ್ಯಾಟ್ಯೂಟಿನ ಪ್ರೀ ಆಂಬಲಿನಲ್ಲಿ, ಆ ಸ್ಟ್ಯಾಟ್ಯೂಟಿಗೆ ತಳಹದಿಯಾದ ೧೯೩೬ ಹಾಗೂ ೧೯೩೭ರ ಇಂಪೀರಿಯಲ್ ಕಾನ್ಫರನ್ಸುಗಳ ವರದಿ-ನಿರ್ಣಯಗಳಲ್ಲಿ 'Crown is the Symbol, Crown is the Luck' ಎಂಬ ಭಾವನೆಗೆ ಬಾಧೆ ಬರುತ್ತದೋ ಹ್ಯಾಗೆ ಎಂಬ ಶಂಕೆ ಉತ್ಪನ್ನವಾಗುತ್ತದೆ. ಅರಸೊತ್ತಿಗೆಯ ಸ್ಥಾನಮಾನ, ಅಧಿಕಾರ ಇವುಗಳ ಬಗ್ಗೆ ಒಂದೇ ತರದ ಅಭಿಪ್ರಾಯವಿಲ್ಲ.

ವೆಸ್ಟ್‌ಮಿನಿಸ್ಟರ್ ಸ್ಟ್ಯಾಟ್ಯೂಟಿನಂತಹ ಮಹತ್ವದ ವ್ಯಾಪಕವಾದ, ಬಹುಪರಿಣಾಮಕಾರಿಯಾದ ಕಾನೂನಿನ ವಿವೇಚನವನ್ನು ಒಂದುಚಿಕ್ಕ ಬರೆಹದಲ್ಲಿ ಮಾಡುವುದು ಶಕ್ಯವಿಲ್ಲ. ಕೆಲವು ಮಹತ್ವದ ಸಂಗತಿಗಳನ್ನು ಮಾತ್ರ ಇದರಲ್ಲಿ ವಿವರಿಸಲಾಗಿದೆ.

ಮುಂಬಯಿ ಸರಕಾರದ ಔದ್ಯೋಗಿಕ
ಸಮಿತಿಯಿಂದ ಮನ್ನಣೆಯನ್ನು ಪಡೆದಿರುವ

ದಿ ನ್ಯಾಶನಲ್ ಟೇಲರಿಂಗ್ ಕಾಲೇಜ್

ಮರಾಠಾಗಲ್ಲಿ—ಹುಬ್ಬಳ್ಳಿ.

ಹಣವನ್ನು ವೆಚ್ಚಮಾಡಿ ಎಲ್ಲೆಲ್ಲಿಯವೊ ಖಾಸಗೀ
ಸರ್ಟೀಫಿಕೆಟುಗಳನ್ನು ಪಡೆದುಕೊಳ್ಳುವುದಕ್ಕಿಂತ,
ಸರಕಾರದಿಂದ ದೊರೆಯುವ ಅಧಿಕೃತ ಸರ್ಟೀ-
ಫಿಕೇಟುಗಳನ್ನು ಪಡೆದುಕೊಂಡರೆ
ಒಳ್ಳೆಯದಲ್ಲವೆ?

ಈ ಸಲ ನಮ್ಮ ಕಾಲೇಜಿನ ಪರಿಣಾಮವು ಸರಕಾರೀ
ಪರೀಕ್ಷೆಯಲ್ಲಿ ೧೦೦ ಕ್ಕೆ ೯೦ ರಂತೆ ಆಗಿದೆ.
ಹೆಚ್ಚಿಗೆ ಮಾಹಿತಿ ಬೇಕಾಗಿದ್ದವರು
೧ ಆಣೆಯ ಸ್ಟ್ಯಾಂಪು ಇಟ್ಟು ಬರೆದು ಕೇಳಿರಿ.

ಎನ್. ಆರ್. ಬುಲ್‌ಬುಲೆ,
D.M.T.C.A. (London)
ಪ್ರಿನ್ಸಿಪಾಲ್

ಬಾಳಿನ ದೀಪಾವಳಿ

★

ಶ್ರೀ. ಗು. ಭೀ. ಜೋಶಿ,
ಎಂ ಎ., ಬಿ. ಟಿ. ಗದಗ

(ಹಗಲುಗನಸು)

★

ಬಾಳಿದರೇನು ಬದುಕಿದರೇನು? ಹಾಳುಜೀವನದಲ್ಲೇನಿದೆ? ನರಳಿದರೇನು ನೊಂದರೇನು ಕೇಳುವರಾರಯ್ಯಾ? ಗೋಳಿಟ್ಟು ಕಿರಿಚಿದರೂ ಬಯಲಲ್ಲಿ ಬೆರೆತು ಕಿವಿಗೆ ತಟ್ಟದು! ಸುಟ್ಟರೂ ಸುಡದ, ಮುಳುಗಿಸಿದರೂ ಮುಳುಗದ, ಹೇಸಿ ಜೀವ ಹುಸಿಯಲ್ಲ!! 'ಉಣ್ಣಲು ಇಲ್ಲ, ಉಡಲು ಇಲ್ಲ, ನಿಲ್ಲುವುದೇಕೆ ಬಾ ಬಾ' ಎಂದೊಡೆ, ಮಣ್ಣಲಿ ಹುಟ್ಟದಿರೇನಾಯಿತೋ, ಮರವನೇರಿ ಬದುಕುವೆನೆಂದು ಕುಣಿಕುಣಿದಾಡುವುದೀ ಜೀವ; ಮಣಿಮಣಿದಾಡುವುದೀ ಜೀವ! ಮನೆಯ ನೀಗಿದಿ, ಮಾರುಗಳಿಸಿದ ಮೂರುಗಳಿಗೆಗೆ ಕಿವಿಸೋತಿ, ಸಿಕ್ಕಮಾಣಿಕ ಸಿಕ್ಕದಂತೆ ತೂರಿದಿ! ಏನು ಮರುಳೋ ಛೀ ಕೋತಿ!

'ಎಂತಹ ಬಾಳಿಗೆ ಮರುಳಾದೆಯೊ ಹರಕು ಕಂತೆಯ ಸಂಸಾರಾ' ಎಂದೊರಲುವರು ಬಹುಜನ,ನರಳುವರು ಕರುಳುಬಾಯಿಗೆ ಬಂದಾಗ. ಕೂಸಿನ ಹಾಸ್ಯ, ಪ್ರೀತಿಯ ಮುದ್ದು, ಸೋಸಿನ ಬಾಳು ಸುಖವಿಲ್ಲ. ದೀಪದ ಬೆಳಕು, ಗಾಡಿಯ ಓಟ, ಮನದಣಿಯಾಟ, ಸವಿಯೂಟ ಎಂದುರುಳುವರು ಗಾಜಿನಮೇಲೆ ಗುಂಡಿನಂತೆ—ನಗುತ ನಗುತಾ ಕಂಕುಳಿನಲಿ ಕೈಯಿಕ್ಕಿದಹಾಗೆ.

ಮೂಡುವ ಸೂರ್ಯನ ಭಾಗ್ಯವ ನೋಡಿ ಬದುಕಲಾ, ಮುಳುಗುವ ತೇಜದ ಮುಂದತೆ ನೋಡಿ ನಂದಲಾ! ಸಾಗರ ಮುಳುಗಿದೆ, ಗಿರಿಯುನೇರಿದೆ, ಹಾರಿದೆ ಜಗವೆಲ್ಲ! ಏನೂ ತೋರದು, ಎಲ್ಲೂ ಕಾಣದು, ಒಯಲೋ ಬಯಲೆಲ್ಲ! ಓಡಿ ನೋಡಿ ದಣಿದು ದಣಿದು ಮಬ್ಬಲಿ ಮುಚ್ಚಿದುವು ಕಣ್ಣು; ಕೂಸು-ಕುನ್ನಿ ಕಿರಿಚಿದುವು; ಹಿರಿಯ ಕಿರಿಯರು ನರಳುವರು. ಗುಡಿ-ಗೋಪುರಗಳು ಉರುಳಿದುವು; ಕಡಲೆರಿತು ಮುಗಿಲ್ಮುಸಿಯಿತು, ಗುಡುಗುಡಿಸಿತು, ಮಿಂಚಿದ್ದುವು. ಬೆಂಕಿಯು ಮಳೆ ಬಾಂದಳದಲಿ; ಬೆಳುಹಕ್ಕಿಗಳಾರಾಡಿದುವು. ಬಾಳು ಬೆಯ್ದು ಬೆಳಗಾಯಿತೆಂದು ಹಿಗ್ಗಿದೆ; ತಿಂಗಳಿನ ಬೆಳಕಿಗೆ ಬೆಳಗಾಯಿತೆಂದು ಗುಡುಬಿಟ್ಟು ಗೂಳಿಗಟ್ಟಿಹೋದ ಕಾಗೆಗಳಂತೆ, ಎಲ್ಲ ಆಶೆ ಅಳಿಯಿತು.

ಇರಬೇಕೆಂದರೆ ನೆರೆಯಾಳಿನ ನೊರೆರಕ್ತದ ಕಸರು; ಮರಣದ ನೂರೇಣಿಗೆ ಜೋಲಿಕ್ಕುವವ ಮತ್ತೊಬ್ಬನ ಕತ್ತಿಗೆ ಕೈಹಾಕಿರುವ. ಕಾಲ್ಕೆಳಗೆ ಜರಿದುಹೋಗುವ ನೆಲಕ್ಕಾಗಿ, ಸಾವಿರಗಟ್ಟಲೆ ಸಾವು. ಗುಡಿಯು ಗೋಪುರ ಮುಗಿಲ ಮುಟ್ಟಿದ್ದರೂ ಮೂರ್ತಿಯು ಮಣ್ಣೊಳಗೇ!! ಏನಿದೆ ಈ ಬಾಳುವೆಯಲ್ಲಿ..ಹಾಳು ಹುಡಿಯಲ್ಲದೆ! ಕಣ್ಮುಚ್ಚಿದರೆ ಮಬ್ಬು, ಕಣ್ತೆರೆದರೆ ಹಸಿವೆ; ಹುಟ್ಟುತಿರುವುದೇ, ಹಸಿವೆ ಹಿಂಗದು; ನೀರಲಿ ಬಿದ್ದು ನೀಗಿದರೆ ವಿಮಾನನಾಗಿ ಬಂದರೆ! ಮಣ್ಣಲಿ ಮುಚ್ಚಿದರೆ ಹುಳುಗಳಾದರೆ! ಇರುವುದು ಕಷ್ಟ; ಹೋಗುವುದು ಪೆಚ್ಚಿನ ಕಷ್ಟ!!

ಅರಿಯದ ಕೂಸಿನಂತೆ ಆನಂದದಿ ಬಾಳು! ಉಣ್ಣಲು ಉಡಲು ಹೆರವರು ಕೊಡುವರು ಅರಿಯದ ಕೂಸಿಗೆ. ತಣ್ಣಗೆ ಬೆಚ್ಚಗೆ ಎನ್ನುವಳು ಹೆತ್ತವ್ವ. ಕಡಿಯುವ ಕೊಡಲಿಯು ನೆಕ್ಕುವುದು ಕೊಣ. ಮರಿಯುವ. ಬಾಳಿನ ಕಿಚ್ಚಲಿ ಬೀಯುವ ಮನುಜ ಆನಂದದಿ ಬಾಳಲೆಂಬರು ಹುಚ್ಚುಕವಿಗಳು.

ಕನಸು ನಡೆದಿದೆ; ಕನಿವಿಸಿ ಏತಕೆ? ತಾಳು ತಾಳು, ಬರುವುದು ಬೆಳಗಿನ ಜಾವ. ಕನಸಿನಲಿ ಕಡಿದರೆ ಕತ್ತು ಹೋಗುವುದೇ! ಉರಿಯಲಿ ಕಾಳ್ಕಿಚ್ಚು; ಹರಿಯಲಿ ಹುಚ್ಚು ಹೊಳೆ; ಹಲ್ಗರಿಯಲಿ ಕರಾಳಮರಣ; ನಿನಗೇತರ ಭಯ? ಬಯಲಾದ ಮೇಲೆ ಬಾಳೆಲ್ಲಿಯದು? ಕಾಳರಾತ್ರಿಯ ಕನಸೆಲ್ಲ!

ಬಂದದ್ದು ಕನಸೋ ಬರುವುದು ಕನಸೋ ಹೇಳುವರಾರಯ್ಯಾ! ಹಗಲೂ ರಾತ್ರಿ ಹರಿವುವು ತಾವು ಒಂದರ ಹಿಂದೊಂದು!

ರೆಕ್ಕೆ ಕಟ್ಟಿ, ಹಕ್ಕಿಯ ಹಾಗೆ ಹಾರಿದರೆ ಸಿಕ್ಕುವುದೆ ಸತ್ಯ! ಭೂಮಿಯನೊಡೆದು ಗರ್ಭವ ಸೇರಿ ಹುಡುಕಾಡಿದರೆ ಸಿಕ್ಕುವುದೆ ಸತ್ಯ? ಗರುಡನ ಹಾಗೆ ಗಡಿಬಿಡಿಯಿಂದ ಓಡಿದರೆ ದೊರೆವುದೆ ಸತ್ಯ! ನಕ್ಷತ್ರಗಳನು ಬಿಗಿದ ನೂಲನು ಹಿಡಿದರೆ ಸಿಕ್ಕುವುದೇ ಸತ್ಯ? ಮಿಂಚನು ಏರಿ ಮಾಯದ ದೀಪವ ಜಗದೊಳಗೆಲ್ಲ ಹಂಚಿದರೆ ಸಿಕ್ಕುವುದೆ ಸತ್ಯ?

ಸಾಕು ಸಾಕು ಈ ಸತ್ಯದ ಶೋಧ! ಹಣ್ಣು ಹೆಚ್ಚುವ ಈಳಿಗೆಯಿಂದ ಹೆಣ್ಣನು ಕೊಲ್ಲುವ ಜಗದಲ್ಲಿ.. ಸತ್ಯವೆಲ್ಲಿಯದು, ತತ್ತ್ವವೆಲ್ಲಿಯದು? ಹೇಗೋ ಬಂದೆ, ಬಲೆಯಲಿ ಬಿದ್ದೆ, ಕಾಣೆನು ಮುಂದಿನ್ನು!

ದಣಿದೆನು ಓಡಾಡಿ; ಕಣ್ಮುಚ್ಚಿದೆ; ಕನಸೊಂದು ಕಂಡೆನು ಮನಸಿನ ರಂಗದಲಿ:

ಕಗ್ಗತ್ತಲೆ; ಮಿಂಚೊಮ್ಮೆ ಸೆಳೆಯುವುದು; ಮಿಣುಮಿಣುಕು ದೀಪ ಒಂದು ಉರಿಯುತಿದೆ. ನಿರುಕಿಸಿ ನೋಡಿದೆ ಪಣತಿಯು ಕಂಡಿತು, ನೆಲದಮೇಲಿಟ್ಟಲ್ಲ; ಸಣ್ಣ ಎಳೆಗೆ ಮಧ್ಯದಲ್ಲಿ ತೂಗುತ್ತಿದೆ. ಆ ಎಳೆಗೆ ಬೆಂಕಿಯು ತಗುಲಿದರೆ..! ಮೈನಡುಗಿತು!!

ದೀಪ ಹೊಯ್ದಾಡಹತ್ತಿತು. ಕತ್ತಲೆಯಲ್ಲಿ ಸಹ ಕಾಣುವ ಕರಿಯ ಪುಟಗಳನ್ನುಬ್ಬಿಸಿ, ಯಾರೋ ಗಾಳಿಯನ್ನು ಊದುವಂತೆ ತೋರಿತು. ಅಯ್ಯೋ, ಜೀಕು ಜೋರಾಯಿತು! ದೀಪನಂದುವುದು! ಪಣತಿಯು ಬೀಳುವುದು! ಏನು ಮಾಡಲಿ?

ಖಟ್ ಖಜಲ್ಲೆಂದು ಸಪ್ಪಳವಾಗಿ ಆ ಪಣತಿಯು ಇನ್ನೊಂದಕ್ಕೆ ತಾಕಿತು. ಹತ್ತಿತ್ತು ದೀಪ. ಅದು ಮತ್ತೊಂದಕ್ಕೆ, ಮತ್ತೊಂದು ಇನ್ನೊಂದಕ್ಕೆ, ಹೀಗೆ ದೀಪಾವಳಿಯ ಸಾಲುದೀಪಗಳು ಬೆಳಗಿದುವು. ನೊಡಲಿನ ಪಣತಿಯು ನಂದಿಹೋಗಿತ್ತು. ಹಿಂದುಗಡೆ ತಿರುಗಿದೆ, ಏನು ಬೆಳಕದು!!!

ಚಟ ಮತ್ತು ಹಟ

(ನಿರುದ್ಯೋಗಿಯುದೊಂದು ನಿಬಂಧ)

ಇಂದಿನ ತರುಣರಿಗೆ ಅಭ್ಯಾಸಕ್ಕಿಂತ ಚಟಗಳ ದುರಭ್ಯಾಸವೆ ಹೆಚ್ಚಾಗಿದೆ ಎಂದು ಹಿರಿಯರು ದೂಷಿಸುವುದುಂಟು. ಇಂತಹ ದುಶ್ಚಟಗಳಿಗೆ ಇಂದಿನ ಬಂಧನವಿಲ್ಲದ ಸಮಾಜಜೀವನ ಮತ್ತು ಉಪಯೋಗವಿಲ್ಲದ ವಿದ್ಯಾಭ್ಯಾಸಪದ್ಧತಿ—ಇವೇ ಕಾರಣ ಎಂದೂ ಅವರು ವಾದಿಸುವುದುಂಟು. ಈ ಮಾತು ಸತ್ಯವಿದೆ, ಆದರೆ ಅದರ ಮೂಲದಲ್ಲಿದ್ದ ಅಭಿಪ್ರಾಯವು ಮಾತ್ರ ಯುಕ್ತವಾದುದಲ್ಲ ಎಂದು ನಾನು ಇಲ್ಲಿ ಹೇಳುವವನಿದ್ದೇನೆ.

ಮೊದಲ ಮಾತೆಂದರೆ, ಚಟಕ್ಕೆ ದುರಭ್ಯಾಸವೆನ್ನುವ ವೃತ್ತಿಯೆ ತಪ್ಪಾದುದು. ಯಾಕೆಂದರೆ, ಸಾಮಾನ್ಯವಾಗಿ ಮನುಷ್ಯನು ಕೇವಲ ಇನ್ನೊಬ್ಬರ ಚಟಕ್ಕೆ ದುರಭ್ಯಾಸವೆನ್ನುತ್ತಾನೆ. ಇದು ಸರ್ವಸಾಮಾನ್ಯ 'ಚಟ' ವೆಂದೇ ಹೇಳಬಹುದು. ನೀವು ಬೇಕಾದ್ದೊಂದು ಚಟವನ್ನು ಸೂಕ್ಷ್ಮವಾಗಿ ನಿರೀಕ್ಷಿಸಿ ನೋಡಿರಿ, ಅದು 'ದುರಭ್ಯಾಸ' ಎಂದು ಸಾಧಿಸುವುದು ಸಯುಕ್ತಿಕವೆನಿಸುವುದಿಲ್ಲ; ಸಯುಕ್ತಿಕವಲ್ಲವಾದರೂ ಅದನ್ನು ಸಾಧಿಸುವುದು ಹಟವೆನಿಸುವುದು. ಹಟವು ಚಟಕ್ಕಿಂತ ಅಸಿಷ್ಟ; ಇಷ್ಟೇಕೆ, ಚಟವು ಹಟದ ವಿರುದ್ಧವಾಗಿದೆ, ಚಟದಲ್ಲಿ ಸಾಮಾಜಿಕತೆಯ ಶಕ್ತಿ ಇದೆ.

ಉದಾಹರಣೆಗಾಗಿ, ತಂತಮ್ಮ ಪ್ರವಾಸದ ಅನುಭವವನ್ನು ನೆನೆದುಕೊಳ್ಳಬಹುದು. ಥರ್ಡ್ ಕ್ಲಾಸಿನ ಪ್ರವಾಸದಲ್ಲಂತೂ ಝೂನಿಗಿಂತ ಹೆಚ್ಚಿನ 'ರಿಯಾಯತ್ತು'—ಸವಲತ್ತುಗಳನ್ನು ಚಟವು ಒದಗಿಸಿಕೊಡುತ್ತದೆ ಕಂಪಾರ್ಟ್‌ಮೆಂಟು ಕಿಕ್ಕಿರಿದಿರುತ್ತಿರುವುದು, ನಿಮ್ಮ ಕಾಲ ಮೇಲೆ ನಿಲ್ಲಲು ನಿಮಗೆ ಸ್ಥಾನವಿಲ್ಲ, ಆದರೂ ಟಿಕೆಟ್ಟು ನಿಮ್ಮ ಕಡೆಗಿದೆ, ನಿಮಗೆ ಒಳಸುಗ್ಗಲು ಅಧಿಕಾರವಿದೆ ಎಂದು ಹಟದಿಂದ ನೀವು ಒಳಹೊಕ್ಕಿರೆಂದು ತಿಳಿಯುವಾ. ಆ ಕಾಲಕ್ಕೆ ಒಳಗೆ ಕುಳಿತ ಪ್ರತಿಯೊಂದು ವ್ಯಕ್ತಿಯೂ ನಿಮಗೆ ಶತ್ರುವಾಗುವುದು, ಪ್ರತಿಯೊಬ್ಬನ ನೋಟ ನಿಮಗೆ ವಿಷಾನ ದಾಳಿಯ ಎಚ್ಚರಿಕೆಯಂತಾಗುವುದು, ಪ್ರತಿಯೊಂದು ಮಾತೂ ನಿಮಗೆ ಬಾಂಬಿನಂತೆ ಬಡಿಯುವುದು. 'ಹಕ್ಕು ಸಾಧಿಸುವವರು ಸ್ವರಾಜ್ಯಗಳಿಸಲಿಕ್ಕೆ ಹೋಗಬೇಕು' ಎನ್ನುವನೊಬ್ಬ; 'ಹಕ್ಕಿಗೆ ತಕ್ಕ ರೊಕ್ಕ ಇರಬೇಕು ನೋಡು' ಎನ್ನುವ ಇನ್ನೊಬ್ಬ; 'ನಿಂತರೂ ಹಕ್ಕು ಸಾಧಿಸಬೇಕಾದರೆ ಗಾಂಧೀನೇ ಆಗಿರಬೇಕು ನೋಡ' ಎನ್ನುವ ಮತ್ತೊಬ್ಬ; 'ನನ್ನಂತಹ ಬಡಪಾಂಡಿಗೆ ಎಲ್ಲಿಂದ ಬರಬೇಕು ಹಕ್ಕು? ಕಟ್ಟಿಗೇ ಫಳಿವ್ಯಾಗ ಕುಂತು ಹೋಗೋನೇ ನಮ್ಮ ಪಾಲಿನ ಹಕ್ಕು' ಎಂದು, ನಿಂತ ನಿಮ್ಮ ಕಾಲುನೋವನ್ನು ನೋಡಿ ಬೇರೊಬ್ಬ ಜುಚ್ಚಿ ಮಾತನಾಡುವ. ಅಂತೂ ಪ್ರವಾಸ ಮುಗಿಯುವಷ್ಟರಲ್ಲಿ ನಿಮ್ಮ ಮೈಮೇಲೆ ಬಟ್ಟೆ ತೂತುತೂತಾಗಿ, ಕಿಸೆಯೊಳಗಿನ ಟಿಕೆಟ್ಟು ಜಾರಿ, ವಾಗ್ಬಾಣಗಳು ನಿಮ್ಮ ಶರೀರವನ್ನು ಭೇದಿಸುವುವು.

ಇನ್ನು ಬೇರೊಂದು ಸ್ಥಿತಿಯನ್ನು ಕಲ್ಪಿಸುವಾ. ಎಲ್ಲರ ಕಾಲು ತುಳಿಯುತ್ತ, ನಿಮ್ಮ ಕಾಲೂರದಂತಾಗಿ ನೀವು ಕುಣಿಯುತ್ತಿರುವಾಗ, ಸುತ್ತಲಿನ ಮುಕ್ಕಣ್ಣ ಕಿಡಿಗಳು ನಿಮ್ಮನ್ನು ಸುಡುತ್ತಿರುವಾಗ, ನೀವು ಜೋಲಿ ಹೊಡೆದರೂ ಅಡ್ಡಿ ಇಲ್ಲ ಎಂಬ ಧೈರ್ಯದಿಂದ ಕಿಸೆಯೊಳಗೆ ಒಂದು ಕೈಯನ್ನು ಹಾಕಿ, ಮೆಲ್ಲಗೆ ಚಂಚಿಯನ್ನು ಹೊರಗೆಳೆವಿರೆಂದು ಕಲ್ಪಿಸುವಾ. ಆಗ ತಟ್ಟನೆ—ಕಾಮನನ್ನು ಸುಟ್ಟರೂ ಕೊನೆಗೆ ಕಾಮನ ಬಲೆಯಲ್ಲಿ ಬಿದ್ದ ಮುಕ್ಕಣ್ಣನಂತೆ—ಮೆಲ್ಲಗೆ ಕೆಲವು ಕಿಡಿಗಣ್ಣುಗಳು ಮುಚ್ಚುವುವು; ವಾಗ್ಬಾಣಕ್ಕಾಗಿ ತೆರೆದ ಬಾಯಿಗಳು ನೀರೊಡೆದು ಮತ್ತಾಗಾಗುವುವು; ಆಗ ನೀವು ಒಬ್ಬನಿಗೆ ವೀಳ್ಯದೆಲೆಯನ್ನು ಕೊಡುವಿರಿ. ಅವನು ನಾಚಿಕೆಯಿಂದ ಅದನ್ನು ಸ್ವೀಕರಿಸಿ, ಆಮೇಲೆ, ಶರಣಾಗತನಾದವನು

★

"ಚಟವಿದ್ದವರು ಎಂದು ಹೇಳಿಸಿಕೊಳ್ಳುವವರಲ್ಲಿಯೆ ಚಟಗಳಿಗಿಂತ, ಚಟವಿಲ್ಲದವರು ಎಂದು ಹೇಳಿಸಿಕೊಳ್ಳುವವರಲ್ಲಿಯ ಚಟಗಳು ಹೆಚ್ಚು ಭೀಕರವಾಗಿರುವುವು. ಯಾವ ಚಟಗಳೂ ಇಲ್ಲವೆಂದು ಹೇಳುವ ಹಿಟ್ಲರ್, ಮುಸಲೋನಿಯವರ ಸರ್ವಾಧಿಕಾರಿತ್ವದ ಚಟವಿಂದು ಜಗತ್ತಿಗೇ ಕಂಟಕವಾಗಿದೆ.

★

ಕಷ್ಟ-ಕಾಣಿಕೆಯನ್ನೊಪ್ಪಿಸುವಂತೆ ಒಂದು ಆಡಿಕೆಯ ಹೋಳನ್ನು ಕೊಡುವನು. ಕ್ರಮೇಣ 'ಯಳ್ಳಿಗೆ ಹೊಟಿಇ?' ಎಂದು ತರುಬಾಕನಷ್ಟೆ ಪ್ರೇಮದಿಂದ ತುಂಬಿದ ಮಾತುಗಳಿಂದ ನಿಮ್ಮ ಉಪಚಾರಕ್ಕೆ ಪ್ರಾರಂಭವಾಗುವುದು. ಆಯಿತು— ಇನ್ನೇನು ತಡ? ಮುಂದಿನ ಸ್ಟೇಶನ್ನು ಬರುವಷ್ಟರಲ್ಲಿ ಮೊದಲು ನಿಮ್ಮ ಚಂಚಿಗೆ, ಆಮೇಲೆ ಪ್ರಶಸ್ತವಾಗಿ ಕೂಡಲು ನಿಮಗೆ ಸ್ಥಾನ ದೊರಕುವುದು. ನೀವು ಸಾಕಷ್ಟು ಜುರುಕಾಗಿದ್ದರೆ, ಇಳಿಯುವ ಮುಂಚೆ, ಕಂಪಾರ್ಟ್‌ಮೆಂಟಿನಲ್ಲಿ ಮುಂದ್ದುಗೂಸಿನಂತೆ ಕೈಯಿಂದ ಕೈಗೆ ಸಾಗುತ್ತಿರುವ ನಿಮ್ಮ ಚಂಚಿಯನ್ನು ಘನಃ ಸಂಪಾದಿಸಿಕೊಳ್ಳುವಿರಿ. ಹೋಗಲಿ—ಒಂದು ವೇಳೆ ಚಂಚಿ ಹೋದರೂ ನೀವು ಸಂಪಾದಿಸಿದ ಗೆಳೆತನವೆಷ್ಟು, ನಿಮ್ಮ ಚಟದ ಸಾಮಾಜಿಕತೆಯ ಶಕ್ತಿ ಎಷ್ಟು?

ಅದಕ್ಕೇ ನಾನು ಹೇಳುವುದು, ಚಟವು ದುರಭ್ಯಾಸವಲ್ಲ ಎಂದು. ಇನ್ನು ಕೆಲವು ಹಿರಿಯರು ಹೀಗೆ ವಾದಿಸಬಹುದು; 'ವೀಳ್ಯದೆಲೆ-ತಂಬಾಕದ ಚಟವು ದುರಭ್ಯಾಸವಲ್ಲ. ಆದರೆ ಇಂದಿನ ಹುಡುಗರಿಗೆ ಆರೋಗ್ಯಕ್ಕೆ ಘಾತುಕ, ವಿನಯಕ್ಕೆ ವಿರೋಧಕ ಎನಿಸುವ ಸಿಗರೇಟು ಮೊದಲಾದ ಚಟಗಳಿರುವುವು. ಇಂತಹವು ನಿಶ್ಚಯವಾಗಿ ದುರಭ್ಯಾಸಗಳೆ' ಎಂದು. ಈ ಮಾತಿಗೆ ನನ್ನ ಒಪ್ಪಿಗೆಯಿಲ್ಲ. ಚಟವು ಪರಮಾತ್ಮನಂತೆ ನಿರ್ಗುಣವಾಗಿದೆ. ಅದರಲ್ಲಿ ಒಳಿತು-ಕೆಡಕುಗಳಿಲ್ಲ. ಪರಮಾತ್ಮನಿಗೆ ಅವತಾರ ತಾಳುವುದೂ ಚಟವೆ, 'ದಿನಕ್ಕೆ ಮೂರಾವೃತ್ತಿ ಸಂಧ್ಯಾವಂದನೆ ಇಲ್ಲದೆ ಮನಸ್ಸಿಗೆ ಸಮಾಧಾನವಿಲ್ಲ' ಎನ್ನುವ ಭಾವಿಕನದೂ ಚಟವೆ, ಸಿಗರೇಟು ಸೇದುವುದೂ ಚಟವೆ. ಒಟ್ಟಾರೆ ವೇಳೆಯ ಸದುಪಯೋಗ, ಮನಸ್ಸಿಗೆ ಶಾಂತಿ ತಂದುಕೊಡುವುದು ಚಟದ ಮುಖ್ಯ ಲಕ್ಷಣ. ಮೂರಾವರ್ತಿ ಸಂಧ್ಯಾವಂದನೆ ಮಾಡಿದರೂ ಮನೆಯವರ ಮೇಲೆ ಹರಿಹಾಯ್ದು ನೆರೆಹೊರೆಯವರೊಡನೆ ಜಗಳ ಹೂಡುವುದಕ್ಕಿಂತ, ತಡೆಯದ ಕೋಪ ಆವರಿಸಿದಾಗ ಒಬ್ಬನೇ ಹೋಗಿ ಒಂದು ಸಿಗರೇಟನ್ನು ಹೊತ್ತಿಸುವುದು ಹೆಚ್ಚು ಸಾತ್ತ್ವಿಕವಲ್ಲವೆ? ಸಾಯಂಕಾಲ ಮನೆಯ ಹೊರಮಗ್ಗಲು ಕಟ್ಟೆಯ ಸಿಂಹಾಸನದಲ್ಲಿ ಕುಳಿತು ಹೋಗಿಬರುವವರ ಚಾರಿತ್ರ್ಯದ ಮೇಲೆ ನಿರ್ಣಯದ ಹರಟೆ ಕೊಚ್ಚುವುದಕ್ಕಿಂತ, ನಾಲ್ಕು ಗೆಳೆಯರೊಡನೆ ಸಿನೇಮಾಕ್ಕೆ ಹೋಗಿ ನಕ್ಕು ನಲಿದು ಬರುವುದು ಹೆಚ್ಚಿನ ಸಂಭಾವಿತತನವಲ್ಲವೆ?

ಹಾಗೆ ಕೇಳಿದರೆ ಚಟವಿಲ್ಲದ ಮಾನವನಿಗೆ ಸಮಾಜದಲ್ಲಿ ಸ್ಥಾನವೆ ದೊರಕದು, ಸಭೆಗಳಲ್ಲಿ ಮಾನ ದೊರಕದು. ಒಂದು ದೃಷ್ಟಿಯಿಂದ ಚಟವಿಲ್ಲದವನು ಮಾನವಸಮಾಜಕ್ಕೆ ಶತ್ರು ಎನಿಸುವನು ಎಂದು ಹೇಳಬಹುದು. ಇಂದು ಸಮಾಜದ ಪ್ರಗತಿಗೆ ವಿರೋಧಕವಾದ ಸಂಪ್ರದಾಯಗಳೆಲ್ಲ ಈ ಚಟವಿರದವರ ಕುಜೇಷ್ಟೆಗಳೆ ಎಂದು ಹೇಳಬಹುದು. ಉದಾಹರಣೆಗಾಗಿ, ಒಬ್ಬ ಚೀನಾ ಲೇಖಕನ ಮಾತನ್ನು ಕಾಣಿಸಬಹುದು. ಸಿಗರೇಟಿನ ಚಟದ ವಿಷಯವಾಗಿ ಬರೆಯುತ್ತ ಅವನು ಹೀಗೆ ಹೇಳುತ್ತಾನೆ:—'If the annoyance coused by the smokers to the non-smokers is physical, that caused by the non-smokers to the smokes is spiritual' (ಸಿಗರೇಟು ಸೇದುವವನಿಂದ ಸಿಗರೇಟು ಸೇದದವನಿಗೆ ತೊಂದರೆಯಾದರೆ ಅದು ಕೇವಲ ಬಾಹ್ಯ ಇಂದ್ರಿಯಗಳಿಗೆ; ಆದರೆ ಅದೇ ವೇಳೆಗೆ ಸೇದಲಾರದವನಿಂದ ಸೇದುವವನಿಗೆ ಆಗುವ ತೊಂದರೆ ಆಂತರಿಕವಿದೆ, ಆತ್ಮಿಕವಾಗಿದೆ.) ಅಲ್ಲವೆ ಮತ್ತೆ? ತಾನು ಮೂಗು ಮುರಿಯುವನು, ಮೂಗು ಮುಚ್ಚುವನು. ಆಷ್ಟಕ್ಕೆ ಮುಗಿಸಿ ಅಲ್ಲಿಂದ ಸುಮ್ಮನೆ ಎದ್ದುಹೋಗುವುದಿಲ್ಲ. ಸಿಗರೇಟು ಸೇದುವುದು ಮಹತ್ಪಾಪವೆಂದು ಸಾಧಿಸಿ, ಪಾಪ! ಯಾರಿಗೂ ತೊಂದರೆ ಕೊಡದೆ ಹೊಗೆಸುತ್ತನ್ನು ಏಕಾಗ್ರತೆಯಿಂದ ಉಪಭೋಗಿಸುತ್ತಿರುವವನ ಮನಸ್ಸಿಗೆ ಗಾಯವನ್ನುಂಟುಮಾಡುವನು. ಇದಕ್ಕೆ ಕಾರಣವೇನು? ತಂಬಾಕನ್ನು ಹೊತ್ತಿಸುವುದು ಪಾಪವೂ ಅಲ್ಲ, ಅನಾರೋಗ್ಯವೂ ಅಲ್ಲ ಎಂದು ಅನೇಕ ತಜ್ಞ ಡಾಕ್ಟರರು ಹೇಳುತ್ತಿರುವಾಗ, ಈ ಹೊಗೆಸೊಪ್ಪಿನ ಹನ್ನಿಮಂತನು ಮುಖ ತಿರುಗಿಸಿ ಮಡಿವಂತನಾಗಲು ಕಾರಣವೇನು? ನನಗಂತೂ ಒಂದೇ ಒಂದು ಕಾರಣ ತೋಚುವುದು, ಅದೆಂದರೆ ಅಸಹನೆವೃತ್ತಿ. ತಾನು ಮಾಡಲಾಗದ್ದನ್ನು ಮತ್ತೊಬ್ಬನು ಉಪಭೋಗಿಸುವುದನ್ನು ಕಂಡು ಅಸಹನೆಯಾಗುವುದು. ಈ ಅಸಹನೆಯಿಂದ ತರ್ಕ ತಪ್ಪಿ ಮರ್ಕಟ ಬುದ್ಧಿ ಬರುವುದು; ಅಣಕಿಸುವನು, ಹಂಗಿಸುವನು. ತನ್ನದು ತಪ್ಪೆಂದು ಹೆಚ್ಚೆಚ್ಚು ಹೊಳೆದ ಹಾಗೆ ಹೆಚ್ಚೆಚ್ಚು ಹಟದ ವೃತ್ತಿಯನ್ನು ತಾಳುವನು. ಚಟದವರಿಗಿಂತ ತಾನು ಶ್ರೇಷ್ಠನೆಂಬ ಕಲ್ಪನೆಯ ಕನಸಿನಲ್ಲಿ ಎಚ್ಚರದಪ್ಪುವನು. ಕೊನೆಗೆ ಎಲ್ಲರನ್ನೂ ಬಿಟ್ಟು ತಾನೊಬ್ಬನೆ ಒಂಟಿಗನಾಗಿ ವರ್ತಿಸುವನು. ಚಟವಿಲ್ಲದವರ ಉದಾಹರಣೆ ಎಂದು ಇಂದಿನ ಹಿಟ್ಲರ್-ಮುಸೊಲಿನಿ ಜಾತಿಯ ಸರ್ವಾಧಿಕಾರಿಗಳನ್ನು ನೋಡಬಹುದು. ಅವರಿಗೆ ಯಾವುದೂ ಚಟವಿಲ್ಲವಂತೆ! ಪಾಪ! ಆದಕಾಗಿಯೆ ಮಾನವಸಮಾಜದ ಶತ್ರುಗಳಾಗಿದ್ದಾರೆ, ಕ್ರೂರವೃತ್ತಿಯವರಾಗಿದ್ದಾರೆ, ವ್ಯಕ್ತಿಸ್ವಾತಂತ್ರ್ಯದ ವಿರೋಧಕರಾಗಿದ್ದಾರೆ. ಇವರ ವಿರುದ್ಧವಾಗಿ ಯಾವಾಗಲೂ ಬಾಯಲ್ಲಿ ಸಿಗಾರನ್ನಿಟ್ಟುಕೊಂಡು ವಿಮಾನದಾಳಿಯಲ್ಲೂ ಕೈಜೀಸುತ್ತ ಸಾಗುವ ಚರ್ಚಿಲ್‌ರನ್ನು ನೋಡಬಹುದು.

ಮಾನವನಿಗೆ ಚಟ ಬೇಕು; ಚಟವಿಲ್ಲದಿದ್ದರೆ ಹಟ ಸೇರುವುದು. ಚಟವಿಲ್ಲದವನು ಮಾನವನೇ ಅಲ್ಲವೆಂದು ಹೇಳಬಹುದಾಗಿದೆ. ಆದರೆ ಹಾಗೆ ಹೇಳಲು ನನಗೆ ಮನಸ್ಸಿಲ್ಲ. ಅಂತಹ ಹಟವೂ ನನ್ನಲ್ಲಿಲ್ಲ. ಯಾಕೆಂದರೆ ನನಗೂ ಚಟವಿದೆ; ದಣಿದಾಗ, ಕನಲಿದಾಗ, ಜಾಡ್ಯವಿದ್ದಾಗ, ಜಂಭ ತುಂಬಿದಾಗ, ಬಲು ಸಂತೋಷವಾದಾಗ, ಬೇಸರವಾದಾಗ— ನನಗೆ ಬರೆಯುವ ಚಟವಿದೆ. ಆದಕಾಗಿ ನಾನು ಬರೆದುದನ್ನು ನೀವು ಓದಲೇ ಬೇಕೆಂಬ ಹಟ ಕೂಡ ನನಗಿಲ್ಲ.

ರಾಜಯೋಗಿ

★

ಆನಂದಕಂದರ ಐತಿಹಾಸಿಕ ಕಾದಂಬರಿ

ವಿಜಯನಗರ ಸಾಮ್ರಾಜ್ಯವನ್ನಾಳಿದ, ಸಂಗಮ ವಂಶದಲ್ಲಿಯ ಕೊನೆಯ ದೊರೆ ಅಸೆಯ ವಿರೂಪಾಕ್ಷನ ಕರ್ತವ್ಯಚ್ಯುತಿಯ ದುಷ್ಪರಿಣಾಮ; ಅದನ್ನು ತಪ್ಪಿಸಲು ಹೆಣಗಿದ ರಾಜಶೇಖರ, ನರಸಿಂಹನಾಯಕ, ಹೇಮಾಂಬಿಕೆ ಇವರ ಸಾಮ್ರಾಜ್ಯನಿಷ್ಠೆಯ ಸುಪರಿಣಾಮ ಇವುಗಳ ಹೃದಯಂಗಮ ಚಿತ್ರಣವಿದು. ಬೆಲೆ ೧–೮–೦. ಬೇಕಾದವರು ಜಯಂತಿ ಕಾರ್ಯಾಲಕ್ಕೆ ಬರೆಯಿರಿ.

ರಸಿಕರಿಲ್ಲದ ಜನಾಂಗ ನಾಗರಿಕವೆನ್ನಿಸಿಕೊಳ್ಳುವುದಿಲ್ಲ; ರಸಿಕತೆ ನಾಗರಿಕತೆಯ ಹೆಗ್ಗುರುತು. ಸಂಸ್ಕೃತಿಯನ್ನು ಬೆಳಸುವುದೂ ರಸಿಕತೆಯೆ. ನಮ್ಮ ಕನ್ನಡ ನಾಡಿನಲ್ಲಿ, ಹಿಂದೆ ರಸಿಕತೆ ತುಂಬಿ ತುಳುಕುತಿತ್ತು. ಹಾಗಾದರೆ ರಸಿಕನಾಗುವುದೆಂದರೆ ಏನು? ರಸಿಕತೆ ಪಡೆಯುವುದೆಂದರೆ ಹೇಗೆ?

ರಸಿಕತೆ (ಭಾಗ ೧)

★

ಶ್ರೀ. ಎಂ. ವಿ. ಸೀತಾರಾಮಯ್ಯ ಎಂ. ಎ.

"ರಾಗರಸಿಕನಾಗಬೇಕು, ಭಾವಿಸೆ ವೀತರಾಗರಸಿಕನಾಗಬೇಕು।"

—ರತ್ನಾಕರ ವರ್ಣಿ

"ತಮ್ಮ ಮನಸ್ಸಿಗೆ ಆನಂದವನ್ನು ಕೊಡುವ ಭೋಗಗಳನ್ನು ಅನುಭವಿಸುವುದರಲ್ಲಿ ಕಷ್ಟ-ಸುಖಗಳನ್ನಾಗಲಿ, ಲಾಭ-ನಷ್ಟಗಳನ್ನಾಗಲಿ, ಕಡೆಗೆ ಧರ್ಮಾಧರ್ಮಗಳನ್ನಾಗಲಿ ಹೆಚ್ಚಾಗಿ ಲೆಕ್ಕವಿಡದೆ ಕೆಲಸಮಾಡುವವನು ರಸಿಕ" ಎಂಬುದಾಗಿಯೂ, "ಯಾವ ಕಾರಣದಿಂದಲೆ ಆಗಲಿ, ಯಾವುದರಲ್ಲಿ ಮನಸ್ಸು ದೃಢವಾಗಿ ನಿಲ್ಲುವುದೊ ಅದನ್ನನುಭವಿಸುವಾಗ ನಮಗೆ ನಿರತಿಶಯಾನಂದವುಂಟಾಗುವುದು; ಅಂತಹ ಆನಂದವನ್ನು ಸಾಧಿಸಲು ಪ್ರಯತ್ನಿಸುವುದೇ ರಸಿಕತ್ವಕ್ಕೆ ಲಕ್ಷಣ" ಎಂಬುದಾಗಿಯೂ ವಿದ್ವಾಂಸರು ಒಬ್ಬರು ವ್ಯಾಖ್ಯಾನ ಮಾಡಿದ್ದಾರೆ. ಈ ವ್ಯಾಖ್ಯಾನ ಬಹುಮಟ್ಟಿಗೆ ವ್ಯಾಪಕವಾಗಿಯೆ ಇದೆ.

ಭೋಗಪಡಬೇಕೆಂದು ಯಾರಿಗೆ ಆಸೆಯಿಲ್ಲ? ಅವರವರ ಕೈಲಾದಮಟ್ಟಿಗೆ ಎಲ್ಲರೂ ಭೋಗಪಡಲು ಪ್ರಯತ್ನಪಡುತ್ತಾರೆ; ಹುಟ್ಟಿಬರುವಂದು ಎಷ್ಟು ಕೇಳಿಕೊಂಡು ಬಂದಿದ್ದರೊ ಅಷ್ಟು ಪಟ್ಟು ಪಡುತ್ತಾರೆ. ಅನುಕೂಲವಿರುವವರು ಹೆಚ್ಚು ಭೋಗಪಡುತ್ತಾರೆ; ಅನುಕೂಲವಿಲ್ಲದವರು ಕಡಮೆ ಭೋಗಿಸುತ್ತಾರೆ. ಅಂತೂ ಭೋಗಪಡಬೇಕೆಂಬ ಇಚ್ಛೆ ಮಾನವಸಹಜವಾದದ್ದು.

ಇಂತು ಭೋಗಪಡಬೇಕೆಂಬ ಇಚ್ಛೆ ಮಾನವಸಹಜವಾದ ಮೇಲೆ, ಎಲ್ಲರೂ ಭೋಗಿಸಬೇಕೆಂದು ಪ್ರಯತ್ನಮಾಡಿಯೆ ಮಾಡುತ್ತಾರಷ್ಟೆ! ಪ್ರಯತ್ನಮಾಡುವವರೆಲ್ಲ ರಸಿಕರಾಗಲಾರರು. ಭೋಗಾನುಭವದ ಪ್ರಯತ್ನ ರಸಿಕತೆಯ ಲಕ್ಷಣಮಾತ್ರ; ಭೋಗ-ಸಾಧನೆಯೆ ರಸಿಕತೆ ಎನ್ನಿಸಿಕೊಳ್ಳಬೇಕಾದರೆ 'ರಸಿಕನ ಊಟ, ಉಡಿಗೆ, ತೊಡಿಗೆ, ಮಾತು-ಕತೆ, ನಡತೆ ಮುಂತಾದುವುಗಳಲ್ಲಿ ಹೊರಹೊಮ್ಮುವ ಅವನ ಮನೋಭಾವವೇ, ಮನೋಧರ್ಮವೇ, ನಯನಾಜೂಕೇ ರಸಿಕತೆ.'

ಭೋಗಪಡುವವರೆಲ್ಲ ಭೋಗವನ್ನು ಸಾಧಿಸುತ್ತಾರೆ..ಎಂದು ಹೇಳಲಾಗುವುದಿಲ್ಲ; ಆದುದರಿಂದ ಭೋಗಪಡುವವರೆಲ್ಲ ರಸಿಕರೆಂದು ಹೇಳಲೂ ಬರುವುದಿಲ್ಲ. ಈಗಿನ ಕಾಲದಲ್ಲಿ ಸಿಗರೇಟು ಸೇದುವುದು ಹೇಗೊ ಪೂರ್ವಕಾಲದವರಲ್ಲಿ, ಎಂದರೆ ಹಿಂದಿನ ತಲೆಮಾರೆಯವರಲ್ಲಿ (ದೀರ್ಘಾಯುಗಳಂದ ಪೂರ್ವಕಾಲದವರು ಬಹುಮಂದಿ ಇನ್ನೂ ಈಗಲೂ ಬದುಕಿದ್ದಾರೆ!) ನಶ್ಯಹಾಕುವುದು ಒಂದು ಭೋಗ; ಮಹಾಭೋಗವೆಂದರೂ ಸಲ್ಲುವುದು. ಪೂರ್ವಿಕರಲ್ಲಿ ನಶ್ಯಹಾಕದವರು ಯಾರು? ದೇವರ ಪೂಜೆ ಮಾಡುವಾಗಲೂ, ಕಡೆಗೆ ತಂದೆಯ ಶ್ರಾದ್ಧಮಾಡುವಾಗ ಸಹ—ನಶ್ಯಹಾಕುತ್ತಿದ್ದರು, ಹಾಕುತ್ತಿದ್ದಾರೆ, ಅವರು. ನಶ್ಯವನ್ನು ಸಹಿಸುವ ದೇವರು ಸಿಗರೇಟನ್ನು ಯಾಕೆ ಸಹಿಸನೊ ನಾವು ಕಾಣೆವು. ದಿವಂಗತ ಪೂಜ್ಯಪಿತೃ ನಶ್ಯಪ್ರೇಮಿಯೆಂದು ಅರಿತಿದ್ದ ಒಬ್ಬ ಸತ್ಪುತ್ರ, ಪ್ರತಿವರ್ಷ ಶ್ರಾದ್ಧಮಾಡುವಾಗ "ಬ್ರಾಹ್ಮಣರಿಗೆ" ತಾಂಬೂಲದ ಜೊತೆಗೆ ನಶ್ಯವನ್ನೂ (ಒಂದು ಚಿಟಿಕೆ ಮಾತ್ರವಲ್ಲ; ಎರಡು ಮೂರು ತೊಲಗಳಷ್ಟು) ಕೊಡುತ್ತಿದ್ದನಂತೆ. ಎಷ್ಟೊಬ್ಬಂದು ಮಂದಿ ದಿವಂಗತ ಪೂಜ್ಯಪಿತೃಗಳು ಧೂಮಪಾನ ಪ್ರಿಯರಾಗಿರಲಿಲ್ಲ (ಬದುಕಿದ್ದಾಗ)? ಅವರುಗಳ ಆತ್ಮಸಂತೃಪ್ತಿಗಾಗಿ ಸಿಗರೇಟು (ಬೇಕಾದರೆ ಚುಟ್ಟ) ದಾನಮಾಡಿದರೆ "ಬ್ರಾಹ್ಮಣರು" ಸ್ವೀಕರಿಸುವರೊ? ನಮಗೆ ಸಂದೇಹ. ಅಂತೂ ಸಿಗರೇಟಿಗಿಲ್ಲದ ಪರಮಪವಿತ್ರಸ್ಥಾನ ನಶ್ಯಕ್ಕೆ ದೊರೆತಿದೆ. ನಶ್ಯದ ಪೂರ್ವಜನ್ಮ (ಒಂದು ಇದ್ದರೆ) ಸುಕೃತ. ನಶ್ಯದ ಕತೆಯೆ ಬೇರೆ. ಅದರ ಮಹತ್ತ್ವದ ಅರಿವು ಈ ಲೇಖಕನಿಗೆ ಸುತರಾಂ ಇಲ್ಲ. ಅಲ್ಲದೆ ಆ ಕತೆ ಅಪ್ರಕೃತ ಆದ್ದರಿಂದ,—ಇರಲಿ. ನಶ್ಯಹಾಕುವವರೆಲ್ಲ ರಸಿಕರೇನು? ಅಲ್ಲ. ಹಾಗಾದರೆ ನಶ್ಯಹಾಕುವವರಲ್ಲಿ ರಸಿಕ ಯಾವನು? ಯಾವನೆ? ಹೇಳುತ್ತೇನೆ, ಕೇಳಿ: ಆ ರಸಿಕನಿಗೆ ಎಲ್ಲ ಅಂಗಡಿಗಳಲ್ಲೂ ದೊರೆಯುವ ನಶ್ಯ ಆಗದು. ಅದು ಮೈಸೂರು ಮಂಡಿಪೇಟೆಯ ಮೂಲೆಯಲ್ಲಿ ಮುಡಪನಮಷ್ಠ ಗೌಸಿನ ಅಂಗಡಿಯ ತಾಯೂರು ಉಂಡೆ ನಶ್ಯವೇ ಆಗಬೇಕು. ಏಕೆಂದರೆ, ಬಹುಮತದಿಂದ—ಗೌಸ್‌ಸಾಹೇಬರ ಅಂಗಡಿಯ ನಶ್ಯವೇ ಸರ್ವೋತ್ತಮವಾದದ್ದೆಂದು ತೀರ್ಮಾನವಾಗಿಬಿಟ್ಟಿದೆಯಂತೆ! ಬಿಸಿಲಾಗಲಿ ಮಳೆಯಾಗಲಿ, ಮಟ ಮಟ ಮಧ್ಯಾಹ್ನವಾಗಿರಲಿ, ರಾತ್ರಿ ಹೊಷ್ತು ಯಿರಲಿ, ಕಾಸಿರಲಿ ಇಲ್ಲದಿರಲಿ, ಗೌಸ್‌ಸಾಹೇಬರ ಅಂಗಡಿಗೇ ಹೋಗಿ ಒಂದು ತೊಲ ನಶ್ಯಕೊಂಡೇ ಸಿದ್ಧ. ಹೋದಾಗ ಸಾಹೇಬರೊಡನೆ ಐದು ನಿಮಿಷ ತಮಾಷೆಯಾಗಿ ಹರಟೆ ಹರಟಬೇಕು; ಆ ವೇಳೆಯಲ್ಲಿ, ಅವರೆದುರಿಗೆಯೇ ಒಂದಿಷ್ಟು ನಶ್ಯ

ಮಾಡಬೇಕು; ಆ ನಶ್ಯ ಮಾಡುವುದಕ್ಕೆ, ಒಂದು ಬೆಳ್ಳಿಯ ಡಬ್ಬಿಯಲ್ಲಿ ಒಂದಿಷ್ಟು ಹಸನಾದ–ಅಪ್ಪಟ ಹಸುವಿನ–ಬೆಣ್ಣೆ, ಒಂದಿಷ್ಟು ಹೊಸದಾದ ಖಾರವಾದ ಕೆನೆಸುಣ್ಣ ಯಾವಾಗಲೂ ಸಿದ್ಧವಾಗಿರಬೇಕು; ನಶ್ಯಮಾಡುವ ಝೂಕೇ ಒಂದು ಬಗೆ; ಮಾಡಿದ ನಶ್ಯದ ಚಿಟಿಕೆಗಳನ್ನು ಹಾಕಲು ಚಿತ್ರಗೆಲಸಮಾಡಿದ ದಂತದ ಡಬ್ಬಿಯೇ ಇರತಕ್ಕದ್ದು; ನಶ್ಯಮಾಡಿದ ಮೇಲೆ, ಅಲ್ಲಿಯೇ ಒಂದು ಚಿಟಿಕೆ ತೆಗೆದು ಅದನ್ನು ಗಂಭೀರ ಹಸ್ತಮುದ್ರೆಯೊಡನೆ ಹಿಡಿದುಕೊಂಡು, ಅದೊಂದು ಬಗೆಯ ವಿಶಿಷ್ಟಭಂಗಿಯಲ್ಲಿ ನಾಸಾಪುಟಕ್ಕೆ ಏರಿಸಬೇಕು; ಏರಿಸಿ, ದಟ್ಟಹಸುರು ಬಣ್ಣದ ರೇಶ್ಮೆಯ ಕೈಚೀಲವನ್ನು ಕಿಸೆಯಿಂದ ಹೊರತೆಗೆದು, ನಾಸಾಬಾಹ್ಯವನ್ನು ಮೃದುಮಾರ್ಜನದಿಂದ ಶುದ್ಧಿಮಾಡಿ, ಕೂಡಲೆ ಸಾಹೇಬರಿಗೂ ಒಂದು ಚಿಟಿಕೆ ತೆಗೆದು ಕೈಗೆ ಹಾಕಿ "ಆಚ್ಛಾ ಹೈ ಸಾಹೆಬ್" ಎಂದು ಆನಂದೋದ್ಗಾರ ತೆಗೆದು ಮುಂದಕ್ಕೆ ಹೊರಡಬೇಕು. ಈ ಕಾಲದಲ್ಲಿ ನಶ್ಯದ ಚಾಳಿ ಕಡಮೆಯಾಗುತ್ತಿದೆ. ಹೋಗಲಿ; ಸರ್ವಸಾಮಾನ್ಯವಾಗಿ ಈ ಪ್ರಾಂತ ಎಲ್ಲರೂ ಕಾಫಿ ಕುಡಿಯುತ್ತಾರಷ್ಟೆ! ಹಾಗಾದರೆ ಕಾಫಿ ಕುಡಿಯುವವರೆಲ್ಲ ರಸಿಕರೊ? ಅಲ್ಲ. ರಸಿಕನಾದವನು ಮೆಚ್ಚುವ ಕಾಫಿಯೇ ಬೇರೆ. **ಸ್ಪೆನ್ಸರ್** ಅವರ ಅಂಗಡಿಗಳಲ್ಲಿ ದೊರಕುವ ಕಾಫಿ ರಸಿಕನ ಕಾಫಿ ಎನ್ನಬಹುದು. ನಾವೆಲ್ಲ ಕುಡಿಯುವ ಕಾಫಿ, ಬಡವರಾದರೆ "ಪಾಸಕ"ವಾಗಿರುತ್ತದೆ, ಹಣವಂತರಾದರೆ ಹಾಲುಕೀರಾಗಿರುತ್ತದೆ. ರಸಿಕನ ಕಾಫಿ ಇದಲ್ಲ. ರಸಿಕ ಕಾಫಿಯ ನೆವದಲ್ಲಿ ಪಾನಕವನ್ನಾಗಲಿ ಹಾಲನ್ನಾಗಲಿ ಕುಡಿಯತಕ್ಕವನಲ್ಲ; ಅವನು 'ಕಾಫಿ'ಯನ್ನೇ ಕುಡಿಯತಕ್ಕವನು.

ನಾನು ಮೈಸೂರಿನಲ್ಲಿ ಒಬ್ಬರು ರಸಿಕರನ್ನು ಚೆನ್ನಾಗಿ ಬಲ್ಲೆ: ಅವರು ಮೇಲೆ ವಿವರಿಸಿದ ರೀತಿಯಲ್ಲಿ ತಾಯೂರು ಉಂಡೆ ನಶ್ಯ ಹಾಕತಕ್ಕವರು; ಮೇಲೆ ಹೇಳಿದಂತಹ ಕಾಫಿಯನ್ನೇ— ಮನೆಯಲ್ಲಿ ಮಾಡಿಸಿ, ಸ್ಪೆನ್ಸರ್ ಅಂಗಡಿಗೆ ಹೋಗಿ ಅಲ್ಲ— ಕುಡಿಯುವವರು. ಅವರು ಪೂರ್ವಕಾಲದವರೂ ಹೌದು, ಈಗಿನ ಕಾಲದವರೂ ಹೌದು; ಪ್ರಾಚೀನರ ರಸಿಕತೆಯನ್ನು ರೂಢಿಸಿಕೊಂಡಿರುವವರು, ಹೊಸ ಕಾಲದ ರಸಿಕತೆಯನ್ನು ಹುಡುಕುತ್ತಿರುವವರು. ಅವರು ತಲೆಯಲ್ಲಿ ಜುಟ್ಟುಬಿಟ್ಟಿದ್ದಾರೆ, ಎಂದರೆ ಸಾಕು: ಕೇಶಸಂವರ್ಧನ ಸಂರಕ್ಷಣ ಸಂಸ್ಕರಣ ವಿಧಾನಗಳನ್ನು ನಮ್ಮ ನವೀನ ನಾರೀಮಣಿಯರು (ಅವರಲ್ಲಿ ಇನ್ನೂ ಅಲಂಕಾರಾರ್ಥವಾಗಿ ಕೂದಲು ಕತ್ತರಿಸಿಕೊಳ್ಳುವುದು—Bobbing—ಬಂದಿಲ್ಲದೆ ಇರುವ್ರದರಿಂದ) ಅವರಿಂದಲೇ ಕಲಿಯಬೇಕು. ಅವರು ಬೆಳಗ್ಗೆ ಧರಿಸಿದ ಉಡುಪನ್ನು ಸಂಜೆ ಧರಿಸರು; ಅಲ್ಲದೆ, ಅವರು ತಮ್ಮ ಬಟ್ಟೆಯನ್ನು ಅಗಸನಿಗೆ ಹಾಕರು (ಅಗಸನ ಮಂಡಿಯ ವಾಸನೆ ಅವರ ಪತ್ತಿರವೂ ಸುಳಿಯಕೂಡದು); ಪ್ರತಿದಿನವೂ ಬೆಳಗ್ಗೆ ಸೂರ್ಯೋದಯಕ್ಕೆ ಮುಂಚೆ ಎದ್ದು, ತಮ್ಮ ಬಟ್ಟೆಯನ್ನು ತಾವೇ ಒಗೆದುಕೊಂಡು, ಸ್ನಾನ-ಸಂಧ್ಯಾವಂದನೆ ಮಾಡಿ, ಗರಿಮುರಿಯಾದ ಮಡಿಬಟ್ಟೆ ಉಟ್ಟು, ಮನೆಯಲ್ಲಿ ಮಾಡಿಸಿದ ಮೆಂತ್ಯದ ದೋಸೆಯನ್ನು ನಿಂಬೆಕಾಯಿ ಉಪ್ಪಿನಕಾಯಿ ನಂಜಿಕೊಂಡು ತಿಂದು, 'ಕಾಫಿ' ಕುಡಿದು, ಹೊರಕ್ಕೆ ಹೊರಡುವರು. ಹೊರಕ್ಕೆ ಹೊರಟಾಗ ಈ ರಸಿಕ ಶಿಖಾಮಣಿಗಳನ್ನು ನೋಡಬೇಕು. ತೆಳುವಾದ, ಸರಿಗೆಯ ಸೇಲಂ ಧೋತ್ರವನ್ನು ನೀವಿನೀವಿ ಪಂಜಕಚ್ಚೆ ಹಾಕಿ ಉಟ್ಟಿರುವರು; ಹಸುವಿನ ಹಾಲುಕೆನೆಯ ಬಣ್ಣದ ರೇಶ್ಮೆಯ ಸಡಿಲವಾದ ಜುಬ್ಬವನ್ನು ತೊಟ್ಟಿರುವರು; ಹೊಸದಾದ ವೂನದ ಪಾಪಾಸನ್ನು ಮೆಟ್ಟಿರುವರು; ಬೆಳ್ಳಿಯ ಕಟ್ಟಿನಿಂದ ಅಲಂಕೃತವಾದ ದೊಡ್ಡದೂ ಅಲ್ಲದ ಸಣ್ಣದೂ ಅಲ್ಲದ ಬೆತ್ತ ಹಿಡಿದಿರುವರು; ಕೈಗೆ ವಜ್ರದ ಉಂಗುರ ಧರಿಸಿರುವರು. ಹಾಗೆಯೆ ಸ್ವಲ್ಪಹೊತ್ತು ತಿರುಗಾಡಿದಮೇಲೆ, ಒಂದು ಅಭುಕ್ತ ಮೂಲೆಯಲ್ಲಿ ಒಂದು ಹೋಟಲಿಗೆ ನುಗ್ಗುವರು. ಆ ಹೋಟಲಿಗೆ ಹೋಗುವವರೆಲ್ಲ ಸಂಗೀತಗಾರರು, ನಟರು, ಚಿತ್ರಗಾರರು, ಕಲಾಭಿಮಾನಿಗಳು ಇತ್ಯಾದಿ ರಸಿಕರೆ. ಅಲ್ಲಿ ಅವರು ತಿನ್ನುವುದು ನಾಲ್ಕು ಸಾದಾ ದೋಸೆ, ನಾಲ್ಕು ಬೆಣ್ಣೆ, ಎರಡು ಪಲ್ಯ; ಆದರೆ ಕಾಫಿ ಕುಡಿಯರು ಅಲ್ಲಿ; ಏಕೆಂದರೆ, ಅವರ ರುಚಿಗೆ ತಕ್ಕ ಕಾಫಿ ಅಲ್ಲಿ ದೊರೆಯದು ಅವರಿಗೆ; ಸಾದಾ ದೋಸೆಗೆ ಮಾತ್ರ ಪ್ರಸಿದ್ಧಿ ಆ ಹೋಟಲು. ಮಧ್ಯಾಹ್ನಕ್ಕೆ ಮುಂಚೆ ಮನೆಗೆ ಬರುವಾಗ ಏನಾದರೂ ಹೊಸದಾದ, ಉತ್ತಮ ಬಗೆಯ, ತರಕಾರಿ ಹಿಡಿದುಕೊಂಡು ಬರುವರು. ಮನೆಗೆ ಬಂದು ಪುಷ್ಕಳವಾದ ಭೋಜನ ಕತ್ತರಿಸುವರು. ಊಟವಾದಮೇಲೆ, '**ಬುತ್ತಿಚಿಗರಿನ ಆಬೆಲೆ**'ಯ ತಾಂಬೂಲವನ್ನು ಸವಿಯುವರು. ಆವರ ತಾಂಬೂಲ ಚರ್ವಣವೇ ಒಂದು ಪ್ರತ್ಯೇಕ ಪ್ರಸಂಗವಾಗುತ್ತದೆ ವರ್ಣಿಸಿಕೊಂಡು ಹೊರಟರೆ. ಇರಲಿ. ಆ ಮೇಲೆ ಲಘುವಾದ '**ಶಯನೋತ್ಸವ**' ಮಾಡಿ ಏಳುವರು; ಎದ್ದು ತಮ್ಮಾಕೆಯೊಡನೆ ಒಂದೆರಡು **ಪಗಡೆ ಆಟ** ಆಡುವರು; ಪ್ರತಿ ಆಟದಲ್ಲೂ ಗೆಲ್ಲುವ ಸಾಮರ್ಥ್ಯ ಇದ್ದರೂ, ಬೇಕೆಂದೇ ಒಂದು ಆಟ ಸೋಲುವರು (ಇದು ರಸಿಕತೆಯಲ್ಲವೆ!). ಬಳಿಕ, ಕೋಸಂಬರಿ, ಹುರಿಗಾಳು, ಪುಳ್ಳಂಗಾಯಿ ಉಂಡೆ, ಹುಳಿಯವಲಕ್ಕಿ, ಕೋಡಬಳೆ ಮುಂತಾದ ಅಪ್ಪಟ ದೇಶೀಯ ತಿಂಡಿಗಳಲ್ಲಿ ಏಕಾದರೂ ಒಂದೆರಡನ್ನು ಋತುಧರ್ಮಕ್ಕೆ ಅನುಸಾರವಾಗಿ ಮಾಡಿಸಿಕೊಂಡು ತಿನ್ನುವರು. ತರುವಾಯ ತುಸಹೊತ್ತು ಪಕ್ಕದ ಮನೆಯ ಗೆಳೆಯರೊಡನೆ 'ಗಂಜೀಪ್ಪು' ಆಡುವರು; ಆಮೇಲೆ ಕೊಂಚ ಹೊತ್ತು ಎದುರು ಮನೆಯ ಜಗುಲಿಯ ಮೇಲೆ ನೆರೆಯುತ್ತಿದ್ದ '**ಇನ್ಸ್ಟಿಟ್ಯೂಟಿಯ ಚೇರ್**'ಯಲ್ಲಿ ಭಾಗವಹಿಸುವರು. ಸಂಜೆಯ ವೇಳೆ, ಸಂಗೀತಗಾರರ ಸ್ನೇಹಿತರ ಮನೆಗಳಿಗೆ ಹೋಗಿ, ಸಂಗೀತದ ಸವಿ ಸವಿಯುವರು; ಸಂಗೀತ ವಿಚಾರ ಚರ್ಚೆಮಾಡುವರು (ಇವರಿಗೆ ಸಂಗೀತಶಾಸ್ತ್ರದಲ್ಲಿ ಅಗಾಧ ಪಾಂಡಿತ್ಯ; '**ಶಾರೀರ**' ವಿಲ್ಲದೆ ಹೋದುದರಿಂದ ಸಂಗೀತಗಾರರಾಗಿ ಪ್ರಸಿದ್ಧಿಗೆ ಬಾರಲಿಲ್ಲ, ಅಷ್ಟೆ); ಇಲ್ಲವೆ ಸಿನಿಮಾಕ್ಕೆ ಹೋಗುವರು. ಅವರು ಈಚೆಗೆ ನಾಟಕನೋಡುವುದನ್ನು ಬಿಟ್ಟುಬಿಟ್ಟಿದ್ದಾರೆ: ಏಕೆಂದರೆ, ವರದಾಚಾರ್ಯರ ನಾಟಕಾಭಿನಯ ನೈಪುಣ್ಯವನ್ನು ಸವಿದ ಅವರಿಗೆ, ಈಚೀಚಿನ ನಾಟಕಪ್ರದರ್ಶನಗಳು ಸೊಗಸುವುದಿಲ್ಲವಂತೆ. ಹೊಸದಾದ ಚಲನಚಿತ್ರದಲ್ಲಿ ಅವರಿಗೆ ಒಂದು ಹೊಸ ಅಭಿರುಚಿ ಹುಟ್ಟಿದೆ;— ಹೊಸದಾದ 'ಮಾತೃಕ್ಕೆ ಅದರಲ್ಲಿ ಗುಣವಿಲ್ಲವೆನ್ನುವಷ್ಟು ಅಂಧರಾದ ಪ್ರಾಚೀನ ಪ್ರಿಯರಿಗೆ

ವರು. ಇವರೀಗ ನಿಜವಾದ ರಸಿಕರೆಂದು ನನ್ನ ಭಾವನೆ. ರಸಿಕ ನಾದವನು ಹಳೆಯಕಾಲದ್ದು—ಹೊಸಕಾಲದ್ದು ಎಂಬ ಭೇದವನ್ನು ಮಾಡದೆ, ಎಲ್ಲ ಭೋಗವಸ್ತುಗಳನ್ನೂ ಸಮವಾಗಿ ಭೋಗಿಸುವನು. ಅಂತೆಯೆ ನಮ್ಮ ಈ ರಸಿಕಶಿಖಾಮಣಿಗಳು ತಮ್ಮ ವಿಲೇಪನಕ್ಕೆ ಪೂರ್ವಕಾಲದಿಂದ ಬಂದಿರುವ ಪರಿಮಳದ್ರವ್ಯ ಗಳನ್ನು ಉಪಯೋಗಿಸುವಂತೆ, ತಮ್ಮ ಕರವಸ್ತ್ರಮುಂತಾದ ಬಟ್ಟೆ-ಬರೆಗಳಿಗೆ ನೂತನಕಾಲದ 'ಸೆಂಟು'ಗಳನ್ನೂ ಉಪಯೋಗಿಸುವರು. ಎಗೆ ವಜ್ರದ ಹತ್ತುಕಡುಕನ್ನೂ ಹಾಕುವರು; ಕೈಗೆ ಚಿನ್ನದ ರವಣಿಯ ಕೈಗಡಿಯಾರವನ್ನೂ ಧರಿಸುವರು. ಅವರು ಸಂಜೆ ನಿಗೆ ಬರುವಾಗ, ಕೆಂಡಸಂಪಗೆ, ಪಚ್ಚೆತೆನೆ ಹಾಕಿ, ಪನ್ನೀರಿನಲ್ಲಿ ೋಯಿಸಿದ ಬಾಳೆಯನಾರಿನಿಂದ ಕಟ್ಟಿದ ಅಚ್ಚ ಮಲ್ಲಿಗೆಹೂವಿನ ಚ್ಚುಗಳನ್ನು ತಾರದೆ ಇರುವುದಿಲ್ಲ. ರಾತ್ರಿ ಮಲಗುವಾಗ ಾವೂ ಒಂದು ಕುಚ್ಚು ಹೂವನ್ನು ಜುಟ್ಟಿನೊಳಕ್ಕೆ ಸೇರಿಸಿ ಲಗುವರು. ಮಾರನೆಯ ಬೆಳಗ್ಗೆ ಎದ್ದು ಸ್ನಾನಮಾಡಿದ ಮೇಲೂ ಸಹ, ಅವರ ಕೇಶಗುಚ್ಛ ಮಲ್ಲಿಗೆಯ ನರುಗಂಪನ್ನು ೀರುತ್ತಿರುವುದು. ಅವರಿಗೆ ದಕ್ಷಿಣಾದಿ ಸಂಗೀತದಲ್ಲಿ ಎಷ್ಟು ಪ್ರೇಮವೊ ಉತ್ತರಾದಿ ಸಂಗೀತದಲ್ಲೂ ಅಷ್ಟೇ ಪ್ರೇಮ. ರಾಮಾಯಣ-ಮಹಾಭಾರತಾದಿ ಕಾವ್ಯಗಳ ಜೊತೆಗೆ ಕಾದಂಬರಿ-ಕತೆಗಳನ್ನೂ ಓದುವರು. ಹೀಗೆಯೇ ಅವರ ವಿಚಾರದಲ್ಲಿ ಎಷ್ಟೋ ವಿಷಯಗಳನ್ನು ಎತ್ತಿಹೇಳುತ್ತ ಹೋಗಬಹುದು. ಈ ರಸಿಕಶಿಖಾಮಣಿಗಳ ಬಗ್ಗೆ ಇಷ್ಟು ಹೇಳಿದ್ದರ ತಾತ್ಪರ್ಯವೇನೆಂದರೆ, ಉತ್ತಮವಾದ ಭೋಗವಸ್ತುಗಳನ್ನು ಪಡೆದು, ಸಂಪೂರ್ಣ ಸಂತೃಪ್ತಿ-ಸಂದಗಳು ದೊರಕುವಂತೆ ಅವುಗಳನ್ನು ಉತ್ತಮವಾದ ರೀತಿಯಲ್ಲಿ ಉಪಯೋಗಿಸುವವನೆ ರಸಿಕ; ರಸಿಕನ ಗುಣ ರಸಿಕತೆ ಅಥವಾ ರಾಸಿಕ್ಯ.

'ನಮ್ಮ ಪೂರ್ವಿಕರೆಲ್ಲ ರಸಿಕರಾಗಿದ್ದರು, ಈಗಿನವರು ಅರಸಿಕರು!' ಎಂದು ಕೆಲವರು ಹೇಳುತ್ತಾರೆ. ಇದನ್ನು ನಾನು ಒಪ್ಪುವುದಿಲ್ಲ; ಎಂದ ಮಾತ್ರಕ್ಕೆ, ಪೂರ್ವಿಕರು ರಸಿಕರಾಗಿರಲಿಲ್ಲವೆಂದು ಸ್ಪಷ್ಟ ಅಭಿವ್ಯಾಯವಲ್ಲ; ಈಗಿನವರು ಅರಸಿಕರು ಎಂಬುದನ್ನು ಕಾತ್ಸ್ನ್ಯ ನಾನು ಒಪ್ಪುವುದಿಲ್ಲ. ಪೂರ್ವಕಾಲ ಸುಭಿಕ್ಷವಾಗಿತ್ತು. ಎಲ್ಲರೂ ಹೆಚ್ಚು ಕಡಿಮೆ ರಸಿಕರಾಗಿರಲು ಅವಕಾಶವಿತ್ತು, ಅಷ್ಟೆ. ಈಗ, ನಾನಾಕಾರಣಗಳಿಂದ ಆ ಅವಕಾಶ ತಪ್ಪಿಹೋಗಿದೆ. ಈಗಿನ ಕಾಲದವರಿಗೆ ಹೊಟ್ಟೆಗೇ ಹಿಟ್ಟಿಲ್ಲ, ಇನ್ನು ಜುಟ್ಟಿಗೆ ಮಲ್ಲಿಗೆ ಎಲ್ಲಿಂದ ತಂದಾರು! ನನ್ನ ವಿಕ್ರಯೊಬ್ಬರಿದ್ದಾರೆ; ಅವರಿಗೆ ಕಾಸಿಷ್ಟಿದೆ — ಹಣವಲ್ಲ, ರಸಿಕತೆ ಎಂದರೆ ರಸಿಕನಿಗೆ ಇರಬೇಕಾದ ಮನೋಧರ್ಮ; ಆದರೆ ಅವರಿಗೆ ಬೇಕಾದಷ್ಟು ಇಲ್ಲ—ಏನೆಂದರೆ, ಹಣ. ಅವರಿಗೆ ಹಣವೊಂದು ಇದ್ದಿದ್ದರೆ— ಈಗಿನ ಕಾಲದ ರಸಿಕಶಿಖಾಮಣಿ ಎಂಥವನು ಎಂಬುದನ್ನು ನಿದರ್ಶನಪಡಿಸುತ್ತಿದ್ದರು. ಸ್ಪಷ್ಟವಾಗಿಯೆ, ರಸಿಕತೆಯ ಸಿದ್ಧಿಯನ್ನು ಪಡೆಯಬೇಕಾದರೆ ಕೈತುಂಬ ಹಣ ಇದ್ದೇ ತೀರಬೇಕು. ಒಬ್ಬನಿಗೆ ಎಂಥ ರಸಿಕಹೃದಯವೇ ಇರಲಿ, ಎಂಥ ರಸಿಕ ಮನೋವೃತ್ತಿಯೆ ಇರಲಿ, ಹಣವೊಂದು ಇಲ್ಲದಿದ್ದರೆ ಅವನು ರಸಿಕತೆಯನ್ನು ಸಾಧಿಸುವುದು ಕಷ್ಟ. ರಸಿಕ ಮನೋವೃತ್ತಿಯುಳ್ಳವನು ಎಂದಿಗೂ ಇನ್ನೊಬ್ಬರ ಬಾಯ್ದಂಬುಲಕ್ಕೆ ಕೈಯೊಡ್ಡನು. ಅವನಿಗೆ ಆತ್ಮಪ್ರತ್ಯಯ ಹೆಚ್ಚು. ಭೋಗಾಪೇಕ್ಷೆ ಅಷ್ಟು ಕಾಡಿದರೆ ಸಾಲವನ್ನಾದರೂ ಮಾಡಿ ತುಪ್ಪ ತಿಂದಾನೇ ಹೊರತು ಇನ್ನೊಬ್ಬರ ಹಂಗಿಗೆ ಒಳಗಾಗಲು ಅವನು ಇಷ್ಟಪಡನು.

ರಸಿಕ ಸತ್ತ್ವಸಂಪನ್ನ. ಸತ್ತ್ವವಿಲ್ಲದಿದ್ದರೆ ರಸಿಕತೆಯ ಸಂಪೂರ್ಣ ಸುಖವನ್ನು ಕಾಣಲಾಗುವುದಿಲ್ಲ. ಅಲ್ಲದೆ, ಅವನು ಉದಾರಿಯೂ ಹೌದು. ತಾನು ಪಡುವ ಭೋಗಗಳನ್ನು, ಸುಖ-ಸಂತೋಷಗಳನ್ನು ಇತರರು ಕೆಲವರಾದರೂ ಪಡಲಿ—ಎಂದು ಅವನು ಅಶಿಸುತ್ತಾನೆ. ತನ್ನ ರಸಿಕತೆಯ ಕಾರಣದಿಂದ ಇತರರು ಆನಂದಪಡುವುದನ್ನು ನೋಡುವುದರಲ್ಲಿ ಅವನಿಗೆ ಹೆಚ್ಚಿನ ಆನಂದ. ರಸಿಕನೊಬ್ಬನಿಗೆ ಅಯ್ಯಂಗಾರರ 'ಪುಳಿಯೋಹರೆ' ತಿನ್ನಬೇಕೆಂದು ಆಸೆಯಾಯಿತು. ಎಂದುಕೊಳ್ಳಿ. ಅವನೊಬ್ಬನೆ ಮಾಡಿಸಿಕೊಂಡು ತಿನ್ನುತ್ತಾನೆಯೆ? ಎಂದಿಗೂ ಇಲ್ಲ. ಸ್ವಲ್ಪ ಹೆಚ್ಚಾಗಿಯೇ ಮಾಡಿಸಿ, ತನ್ನ ಗೆಳೆಯರೊಡನೆ ತಿಂದು ಸಂತೋಷಪಡುತ್ತಾನೆ. ಅವನು ಯಾವ ವಿಷಯದ ಕಾರಣಲಿ, ಒಂಟಿಯಾಗಿ ಹೋಗನು. ರಸಿಕ ಎಂದಿಗೂ 'ಒಂಟಿಪಡಕ ಸುಂಟರಗಾಳಿ' ಯಲ್ಲ.

ರಸಿಕನ ಭೋಗದಲ್ಲಿ ಹೇಗೋ ಹಾಗೆಯೇ ಅವನ ಮಾತಿನಲ್ಲಿಯೂ ನಡತೆಯಲ್ಲಿಯೂ ನಯ-ನಾಜೂಕು ಇರುತ್ತದೆ. ರಸಿಕ

ಚಿತ್ರಸೃಷ್ಟಿ
ಎಂದರೆ
ಶ್ರೀ. ಸಾಲಿ ರಾಮಚಂದ್ರರಾಯರ
ಕವನಸಂಗ್ರಹ
ಸಂಪಾದಕರು : ಹಾಂ. ಭೀ. ದೇಸಾಯಿ, ಎಂ. ಎ.
ಇದುವರೆಗೆ ಅಲ್ಲಲ್ಲಿ ತುಣುಕುತುಣುಕಾಗಿ ಪ್ರಕಟವಾಗಿದ್ದ
ಶ್ರೀಯುತರ ಕವನಗಳನ್ನು, ಮೊದಲುಬಾರಿ ಒಂದೆಡೆಗೆ
ಈ ಪುಸ್ತಕದಲ್ಲಿ ಹವಣಿಸಿ, ಶ್ರೀಯುತರ ಕಾವ್ಯ
ರಚನೆ, ಕಲಾರೀತಿ, ಕೃತಿಯ ವಿಶಿಷ್ಟತೆ,
ಉದಾತ್ತಭಾವ ಇತ್ಯಾದಿ ಅಂಗಗಳನ್ನು
ಸಮಾಲೋಚನೆಯಲ್ಲಿ ವಿಸ್ತಾರವಾಗಿ
ವಿವೇಚಿಸಿದೆ. ಕೆಲವು ಪದ್ಯಗಳು ಕನ್ನಡ ಕಲಾಕೋವಿದ
ರಾದ ಶ್ರೀ. ಅಷ್ಟಪುತ್ರಿ ಪ್ರಲ್ಹಾದರಾಯರು ಸಿದ್ಧ-
ಗೊಳಿಸಿದ ಭಾವವ್ಯಂಜಕವಾದ ಚಿತ್ರಗಳಿಂದ ಯುಕ್ತವಾಗಿವೆ.
ವಿಶ್ವಸಾಹಿತ್ಯ ಪ್ರಕಟನೆಯ ಎರಡನೆಯ ಕುಡಿಯು.
ಮುದ್ರಣ ಪ್ರಾರಂಭವಾಗಿದೆ. ಬೇಗನೆ ಪ್ರಕಟವಾಗುವುದು.
ಪ್ರತಿ ದೊರೆಯುವ ಸ್ಥಳ :
ಕರ್ನಾಟಕ ಬುಕ್ ಡಿಪೊ,
ಗಾಂಧಿ ಚೌಕ, ಧಾರವಾಡ.

ಎಂದಿಗೂ ರೇಗುವುದಿಲ್ಲ, ಸಿಡುಕುವುದಿಲ್ಲ. ಕೋಪಗೊಂಡು ತನ್ನ ಮನಃಸಮಾಧಾನವನ್ನು ಕೆಡಿಸಿಕೊಳ್ಳಲು ಇಷ್ಟಪಡುವುದಿಲ್ಲ. ಅಲ್ಲದೆ, ರಸಿಕ ಸಮಯವರಿತು ಮಾತನಾಡುತ್ತಾನೆ. ಜೊತೆಯವರಿಗೆ ಬೇಸರ ಹಿಡಿಯುವಂತೆ ಪಟ್ಟುಹಿಡಿದು ಮಾತನಾಡುವುದಿಲ್ಲ. ಅವನ ಮಾತು ಹೊಂಬಿಸಿಲು ಕೂಡಿ ಹನಿಯುವ ಹೂಮಳೆಯಂತೆ ಇರುತ್ತದೆಯೆ ಹೊರತು, ಕಾರ್ಗಾಲದಲ್ಲಿ ಭೋರ್ಗರೆದು ಸುರಿಯುವ ಆನೆಮಳೆಯಂತಿರುವುದಿಲ್ಲ. ಜೊತೆಗೆ ರಸಿಕನ ಮಾತು ಯಾವಾಗಲೂ ವ್ಯಂಗ್ಯಪೂರ್ಣ; ಮಧುರಹಾಸ್ಯದಿಂದ ತುಂಬಿ ತುಳುಕುತ್ತಿರುತ್ತದೆ. ಆದರೆ ಅವನ ಹಾಸ್ಯ ಚುಚ್ಚುಹಾಸ್ಯವಲ್ಲ. ರಸಿಕ ಇನ್ನೊಬ್ಬರ ಮನಸ್ಸು ನೋಯಿಸುವಂತೆ ಮಾತನಾಡಲು ಇಷ್ಟಪಡುವುದಿಲ್ಲ. ಏಕೆಂದರೆ, ಅವನ ಮನಸ್ಸು ಬಹು ಸೂಕ್ಷ್ಮ; ಇತರರ ಮನಸ್ಸೂ ಹಾಗೆಯೇ ಸೂಕ್ಷ್ಮವಿರಬಹುದು ಎಂದು ತಿಳಿಯುವಷ್ಟು ಉದಾರಬುದ್ಧಿ ಅವನಿಗೆ ಉಂಟು.

ನಿಜವಾದ ರಸಿಕ ಬರಿಯೆ ಭೋಗವಸ್ತುಗಳಿಂದಲೇ ಆನಂದ ಗೊಳ್ಳುವುದಿಲ್ಲ. ಅವನು ಧರ್ಮದ ತಿರುಳನ್ನು ಅರಿತುಕೊಳ್ಳಲು ಆತುರನಾಗಿರುತ್ತಾನೆ. ಸಾಹಿತ್ಯ, ಸಂಗೀತ ಮುಂತಾದ ನಾನಾ ಕಲೆಗಳಲ್ಲಿ ಅವನಿಗೆ ಅಭಿರುಚಿ ಇರುತ್ತದೆ. ರಸಿಕರನ್ನು ಮೆಚ್ಚಿಸುವಂತೆ ಕಾವ್ಯ ಬರೆಯಬೇಕೆಂಬುದು ನಮ್ಮ ಕವಿಗಳ ಗುರಿಯಾಗಿತ್ತು. ಈಗಲೂ ಸಹ ಸಾಹಿತ್ಯ-ಕಲೆಗಳಿಗೆ ಪ್ರೋತ್ಸಾಹ ಕೊಡುತ್ತಿರುವವರು ರಸಿಕರೇ ಆಗಿರುತ್ತಾರೆ.

ಒಬ್ಬನು ರಸಿಕ ಎಂದ ಕೂಡಲೆ ಅವನು ಬರಿಯೆ ವಿಷಯಲಂಪಟ ಎಂದು ಕೆಲವರು ಭಾವಿಸಿರುವಂತಿದೆ. ಇದಕ್ಕಿಂತ ತಪ್ಪು ಅ[illegible] ಪ್ರಾಯ ಬೇರೊಂದು ಇಲ್ಲ. ರಸಿಕ ಎಂದಿಗೂ 'ವಿಷಯಿ' [illegible] ಒಂದು ವೇಳೆ ಅವನು ಯಾವುದಾದರೂ ವಿಷಯಾನುಭೋಗದ[illegible] ದಾರಿತಪ್ಪಿ ನಡೆದರೆ ಅದು ಅವನ ರಸಿಕತೆಯ ದೋಷವಲ್ಲ, ಮಾನವ ಸಹಜವಾದ ಲೋಪದೋಷ; ಯಾರೂ ಮಾಡದ ಮಹಾಪರಾಧವನ್ನೇನೂ ಅವನು ಮಾಡಿದಂತಾಗುವುದಿಲ್ಲ.

ರಸಿಕರಿಲ್ಲದ ಜನಾಂಗ ನಾಗರಿಕವೆನ್ನಿಸಿಕೊಳ್ಳುವುದಿಲ್ಲ; ರಸಿಕ ನಾಗರಿಕತೆಯ ಹೆಗ್ಗುರುತು; ಸಂಸ್ಕೃತಿಯನ್ನು ಬೆಳಸುವುದು ರಸಿಕತೆಯೆ. ನಮ್ಮ ಕನ್ನಡ ನಾಡಿನಲ್ಲಿ ಹಿಂದೆ ರಸಿಕತೆ ತುಂ[illegible] ತುಳುಕುತ್ತಿತ್ತು. ಆ ಕನ್ನಡ ರಸಿಕತೆ ಇಂದಿನ ವರೆಗೂ ಅವಿಚ್ಛಿ[illegible] ವಾಗಿ ಹರಿದುಕೊಂಡು ಬಂದಿದೆ. ಮೈಸೂರು ಸಂಸ್ಥಾನ ಹಿಂದಿನ ಪ್ರಭುಗಳವರಾದ ಮುಮ್ಮಡಿ ಶ್ರೀಕೃಷ್ಣರಾಜ ಒಡೆ[illegible] ರವರು, ಶ್ರೀಚಾಮರಾಜೇಂದ್ರ ಒಡೆಯರವರು, ರಾಜರ್ಷಿಗಳೆಂ[illegible] ಹೆಸರಾದ ಶ್ರೀನಾಲ್ವಡಿ ಕೃಷ್ಣರಾಜ ಒಡೆಯರವರು—ಇವರುಗಳು ರಸಿಕರಾಗಿದ್ದುದರಿಂದಲೇ ಈ ಸಂಸ್ಥಾನ ಮಾದರಿ ರಾಜ್ಯವೆಂಬ ಹೆಸರು ಗಳಿಸಿದ್ದು; ಕನ್ನಡ ಸಾಹಿತ್ಯ, ಸಂಗೀತ, ಚಿತ್ರ ಮುಂತಾದ ಕಲೆಗಳು ಇಷ್ಟು ಅಭಿವೃದ್ಧಿಗೊಳ್ಳುತ್ತಿರುವುದು ಮೈಸೂರಿನವರ ಜೀವಿಕೆ ನಯಗೊಳ್ಳುತ್ತಿರುವುದು. ಯಾ[illegible] ಪ್ರಾಂತದವರೇ ಆಗಿರಲಿ, ಕನ್ನಡಿಗರು ಇನ್ನೂ ರಸಿಕತೆಯನ್ನು ಕಳೆದುಕೊಂಡಿಲ್ಲ. ನಮ್ಮಲ್ಲಿ ಇನ್ನೂ ರಸಿಕರಿದ್ದಾರೆ—ಎಂಬುದು ನನ್ನ ಮತ; ಆ ರಸಿಕತೆ ಬೆಳೆಯಲಿ, ರಸಿಕರು ಹೆಚ್ಚಾಗಲಿ ಎಂಬುದೆ ಹಾರೈಕೆ.

ವಿಲಯವಹ್ನಿಜ್ವಾಲೆ !

★

ಶ್ರೀ. ಸಾಲಿ ರಾಮಚಂದ್ರರಾಯರು

ಪರಿದಪ್ಪುದು ಪರಿದಪ್ಪುದು ನೆತ್ತರ ಪೊನಲ್ ಪರಿದು
ಪರಿದಾಗುತುಂ! ಮನುಜಜಾತಿ ಸಂಹಾರಕೇಂ
ಗುರಿಯಾಯ್ತೊ ! ಅಕಟ, ಮಾತ್ಸರ್ಯಾಗ್ನಿಗೇಂ ನರನ
ಬುದ್ಧಿ ಆಹುತಿಯಾದುದೋ ! ||

ತಿರೆ ನಡುಗಿದಪ್ಪುದು ಕಂಗೆಟ್ಟು ! ಮಾನವಜೀವ-
ಮುರಿವೆಂಕೆಯೊಳ್ ಬೀಯುತಿರ್ಪುದೈ ! ಯುದ್ಧಾಗ್ನಿ
ಉರಿದಪ್ಪುದು ಪರ್ಬುತಂ ! ಸ್ಫೀಬಾಲವೃದ್ಧರಮು-
ನದು ಬಿಡದು ! ದಾರುಣವಿದು ! || ೧ ||

ಬಲಿದ ಬೀಗೆಯೊಳಿರಚುತಿರ್ಪ್ಪಣ್ಣೆಯಂ ಜನರದಂ
ಬಲಿಸಲೇನಾತುರರೊ ! ಕರುಣಾನಿಧೀ, ಕ್ರಿಸ್ತ,
ಕೊಲೆಗದೇನೆಳಸುವರೊ ನಿನ್ನವರ್ ಮಾನವನ
ಜೀವವಂ ಪುಲ್ಲೆ ಬಗೆದು ! ||

ನೆಲಮನಾವರಿಸಿದುದು, ಜಲಮನಾವರಿಸಿದುದು
ವಿಲಯವಹ್ನಿಜ್ವಾಲೆ ! ನಂದಿಸಲದಂ ಶಾಂತಿ-
ಜಲದಂಬುದಂ ಭಾರತದ ನಭೋಮಂಡಲದೊ-
ಳ್ಕೆಶಂದು ನಿಂದಿರ್ಪುದು ! || ೨ ||

ಕಥೆ ಮುಚ್ಚಿ. ಕಟಕಿಗಳನ್ನು ಭದ್ರಪಡಿಸಿ 'ಕೊಂದುಬಿಡಿರಿ' ಎಂಬ ಭಂಗಿಯಲ್ಲಿ ನಿಂತುಬಿಟ್ಟಳು. ರಾಮೂ ಉಸ್ಸೆಂದು ಕುಳಿತ.

★

ಸಂತಾನ-ಸಂಯಮಿ!

ಶ್ರೀ. ಕೆ. ಟಿ. ಪುರಾಣಿಕ ಬಿ.ಎ., ಬಿ.ಟಿ.
ಗೋಕಾಕ

(ವಿನೋದ ಕಥೆ)

ಆಭಾಸವನ್ನು ಆದರ್ಶವೆಂದು ಹರಿದಾಡಿ, ಆಯುಷ್ಯವನ್ನೆಲ್ಲ ಹಾಳು ಮಾಡಿ ಕೊಳ್ಳುವ ರಾಮೂನಂತಹ ಹದಗೇಡಿ ತರುಣರು ನಮ್ಮ ಸಮಾಜದಲ್ಲಿ ಎಷ್ಟೊಂದು ಜನರಿಲ್ಲ? ಇಂತಹ ಹದಗೇಡಿಗಳಿಂದಲೆ ದೀಪಾವಳಿಯಂತಹ ಸಂಸಾರ ದಿವಾಳಿಯ ಸಂಸಾರವಾಗುವದು.

ಪತಿಯು ಗರ್ಭಿಣಿಯಾದ 'ದುಷ್ಟ ಸಮಾಚಾರ'ವನ್ನು ತಿಳಿಸಿ ಹೊಟ್ಟೆಯುರಿದು ಹೋಗುವ ಹರಯದ ಗಂಡಂದಿರೂ ಎಷ್ಟಿಲ್ಲವರಂತೆ; ನಮ್ಮ ರಾಮೂ * ಕೂಡ ಆ ಜಾತಿಗೆ ಸೇರಿದವನೆ? ಅದಕ್ಕೆಯೆ ಅವನಿಷ್ಟು ಕಿಡಿಕಿಡಿಯಾದುದು. ಅವನ ಆವಾಗ್ನಿಯು ಭುಗಿಲೆನ್ನಲು ಕಾರಣವಿಲ್ಲದಿಲ್ಲ. ನಮ್ಮ ರಾಮೂ ಸಂತತಿಪುರುಷನೆಂಬುದನ್ನು ನೀವು ಇನ್ನೂ ಮರೆತಿರಲಿಕ್ಕಿಲ್ಲ. ಆ ಕ್ರಾಂತಿಯ ಬೀಜವು "ವಿಾಸಲು ವಿಾಸೆ"ಯಲ್ಲಿ ಮೊಳೆತು, "ಎದುವೆಯ ಮುನ್ನಾದಿನ"ದಲ್ಲಿ ಚೂಪಗೊಂಡು, "ಪ್ರಣಯಪರೀಕ್ಷೆ"ಯ ಒರೆಗಲ್ಲಿಗೆ ತಾಗಿ, "ಆಳಿಯ ದೇವರ"ಲ್ಲಿ ಗೆಲವನ್ನು ಪಡೆದು "ಪ್ರಣಯದ ಪರಿಸಮಾಪ್ತಿ"ಯಲ್ಲಿ ಕುದಿಯುತ್ತಿತ್ತು. ಇತ್ತಲಾಗಿ ನಮ್ಮ ಕ್ರಾಂತಿಪುರುಷ ಜಗದ ಗಂಡುಗಳೆಲ್ಲ ತಮ್ಮ ಗಂಡುಶಕ್ತಿಯನ್ನು ಕೇಂದ್ರೀಕರಿಸಿ 'ಸಂತಾನಸಂಯಮ'ವನ್ನು ಪಾಲಿಸಬೇಕೆಂಬ ಉಪನ್ಯಾಸಗಳನ್ನು ಪ್ರಾರಂಭಿಸಿದ್ದ. ಈ ಉಪನ್ಯಾಸಕರ ಘನಯೋಗ್ಯತೆಗೆ ತಕ್ಕ ಹಾಗೆ, ಆ ನಿಯಮವನ್ನು ಯಾರೂ ಮುರಿಯುತ್ತಲೂ ಬಂದಿದ್ದ. ಜನತಾಜನಾರ್ದನನ ಋಣಕ್ಕಾಗಿ ತಾನು ಹೀಗೆ ಉಪನ್ಯಾಸ ಕೊಡುತ್ತಿರುವುದರಿಂದ, ತನ್ನ ಮೇಲೆಯೇ ಇಂತಹ ವಿಪತ್ತನ್ನು ಜನಾರ್ದನನು ತರಲಿಕ್ಕಿಲ್ಲ ಎಂ ಭಾವಿಸಿದ್ದ. 'ಲೋಕದ ಡೊಂಕತಿದ್ದಲು' ಸನ್ನದ್ಧನಾದ ಆ ಕ್ರಾಂತಿಪುರುಷನು, ಈ ದಿನ ಹೆಂಡತಿಯ ಮುಖದಿಂದ ಗರ್ಭಿಣಿಯಾಗಿರುವ ಗಂಡಾಂತರದ ಪ್ರಸಂಗವನ್ನು ಕೇಳಿ, ಕಿಡಿಕಿಡಿಯಾಗುವುದರಲ್ಲಿ ಏನಾಶ್ಚರ್ಯ! ಈ ಅನಿರೀಕ್ಷಿತ ಅನಾಚಾರದಲ್ಲಿ ತನ್ನ ಹೊಣೆಗಾರಿಕೆಯನ್ನು ಕಡೆಗಾಣಿಸಿದ ದೇವರ ಕೈವಾಡಕ್ಕಾಗಿ ರಾಮೂ ಬಹಳ ಸಿಟ್ಟಿಗೆದ್ದ; ಮೈಮರೆತ. "ನಮ್ಮ ಸಮಾಜದ ಹೆಣ್ಣು-ಗಂಡುಗಳಲ್ಲಿ ಪರಿಶುದ್ಧ ಪ್ರಣಯದ ಸೌಖ್ಯವೇ ಗೊತ್ತಿಲ್ಲ! ಎಲ್ಲರೂ ಕಣ್ಣಿಲ್ಲದ ಕಾಮುಕರು! ಕಣ್ಣಿರುವ ಪಶುಗಳು! ಇವರನ್ನು ಒಳ್ಳೆಯ ಹಾದಿಗೆ ತರಲು ಕಂಕಣಬದ್ಧನಾದ ನನ್ನಂತಹ ಮಹಾಪುರುಷನ ಉತ್ಸಾಹವನ್ನೂ ದೇವನೆಂಬವನು ಭಂಗಿಸಬೇಕೇ? ಇದರಿಂದ ಸಂತಾನಸಂಯಮವು ದೇವನಿಗೆ ಬೇಕಾಗಿಲ್ಲವೆಂದು ಸ್ಪಷ್ಟವಾಗಿ ತೋರುತ್ತಿದೆ. ದೇವರಲ್ಲಿಯಾದರೂ ಪರಿಶುದ್ಧ ಪ್ರಣಯವೆಲ್ಲಿದೆ? ಅವರೂ ಕಾಮುಕರು! ಕಾಮುಕರನ್ನಾಳುವ ದೊರೆಗಳು ಕಾಮುಕರೇ! ಎಲ್ಲವೂ ಅನರ್ಥ!" ರಾಮೂ ಅವಡುಗಚ್ಚಿ ಆಕಾಶದ ಕಡೆಗೆ ನೋಡಿದ. ದೇವರನ್ನು ಶಪಿಸಿದ. ಗೆಳೆಯರೆದುರಿಗೆ ಗುಡ್ಡದಂತಹ ಮಾತನಾಡಿದ ತನ್ನ ಅವಸ್ಥೆಯು, ಇನ್ನು ಮೇಲೆ ಭಯಂಕರವಾಗುವುದೆಂದು ಗಡಗುಟ್ಟಿ ನಡುಗಿದ. ನಡುಗುತ್ತಿರುವಾಗಲೇ ಮತ್ತೆ ವಿಚಾರಿಸಿದ: "ನಾನು ದೇವರನ್ನೇ ಏಕೆ ಹಳಿಯಬೇಕು? ಇವಳಿಗೆ ತಿಳಿಯಬಾರದೆ? ನನ್ನ ಕ್ರಾಂತಿಕಾರಕ ವಿಚಾರಗಳನ್ನು ತಿಳಿದ ಹೆಂಡತಿಯೂ ಗರ್ಭಿಣಿಯಾಗಬೇಕೆಂದರೆ!.....ಅಯ್ಯೋ! ಈ ಮೂರ್ಖ ದೇವತೆಗಳೊಡನೆ ಈ ಮೂಢಳೂ ಒಳಸಂಚು ಮಾಡಿದಂತೆ ತೋರುತ್ತದೆ. ಆಗಲಿ, ಆ ಪುಂಡ ದೇವತೆಗಳಿಗೂ ಈ ಮೊಂಡ ಹೆಂಡತಿಗೂ ಕೂಡಿಯೇ

* ಈ ವಿಾಸಲು ವಿಾಸೆಯ ರಾಮು, ಜಯಂತಿಯ ನಾಚಕರಿಗೆ ಅಪರಿಚಿತನೂ ಅಲ್ಲ. —ಸಂ. ಜ.

ಬುದ್ಧಿಯನ್ನು ಕಲಿಸುವೆ. ಕ್ರಾಂತಿಪುರುಷನ ಗಂಡುಶಕ್ತಿಯ ಅರಿವನ್ನು ಇರ್ವರೂ ನೋಡಲಿ!" ರಾಮೂ ಯಾವುದೋ ನಿರ್ಧಾರಕ್ಕೆ ಬಂದ. ಅವನ ಗೆಲುವಿನ ಮುಖದಲ್ಲಿ ಮುಗುಳುನಗೆಯು ತೇಲಾಡ ಹತ್ತಿತು. ಮರುಕ್ಷಣದಲ್ಲಿ ಮುಗುಳುನಗೆಯು ಮಂಜಿನ ಹನಿಯಂತೆ ಮಾಯವಾಗಿ, ಹೊಳೆದ ಕಾರ್ಯದ ಅರಿವು ಅವನ ಅಂತರಾಳವನ್ನೇ ಭೇದಿಸತೊಡಗಿತು. "ಛೇ! ಇದೆಂದಿಗೂ ಆಗದು!" ಎಂದು ನಿಟ್ಟುಸಿರಿಡುವ. "ಏಕಾಗಬಾರದು?" ಎಂದು ಮತ್ತೊಮ್ಮೆ ನಿರ್ಧಾರದ ಗೆಲುವನ್ನು ಸೂಚಿಸುವ. "ಇವಳು ಒಪ್ಪುವಳೆ?" ಎಂದು ಒಮ್ಮೆ ಸಂಶಯಗ್ರಸ್ತನಾಗಿ ಗ್ರಹಣ ಹಿಡಿದ ಚಂದಿರನಂತೆ ಮುಖಮಾಡುವ. "ಅವಳ ಒಪ್ಪಿಗೆಯೇಕೆ?" ಎಂದು ತನ್ನನ್ನೇ ಕೇಳಿಕೊಂಡು, ಗ್ರಹಣ ಬಿಟ್ಟ ಚಂದಿರನಂತೆ ಮುಖವರಳಿಸುವ. ಅಂತೂ ಕ್ರಾಂತಿಪುರುಷ ಪ್ರಕ್ಷುಬ್ಧ ಸಮುದ್ರದ ಪರ್ವತಪ್ರಾಯವಾದ ತೆರೆಗಳ ಮೇಲೆ ಬಂಡೆಗಲ್ಲಿಗಪ್ಪಳಿಸಲಿರುವ ನೌಕೆಯಂತೆ ಹೊಯ್ದಾಡತೊಡಗಿದ. ಹೊಯ್ದಾಟವೆ ಕ್ರಾಂತಿಪುರುಷರ ಲಕ್ಷಣವಲ್ಲವೇ ಮತ್ತೆ?

* * *

ಈಗೆಂಟು ದಿನಗಳಿಂದಲೂ ರಾಮೂ ಅದಾವುದೋ ಆಳವಾದ ಸಮಸ್ಯೆಯನ್ನು ಕುರಿತು ಯೋಚಿಸುತ್ತಿರುವ. ಅವನಿಗೆ ಯಾವ ಕೆಲಸದಲ್ಲಿಯೂ ಮನಸ್ಸಿಲ್ಲ. ಊಟದಲ್ಲಿ ಸೊಗಸಿಲ್ಲ. ರಾತ್ರಿಯೆಲ್ಲವೂ ಸಮಸ್ಯೆಯ ಯೋಚನೆಗೆ ವಿನಾಸಲು. ಒಮ್ಮೆ ಸಮಸ್ಯೆಬಿಟ್ಟಂತಾಗುವುದು. ಮರುಕ್ಷಣದಲ್ಲಿ, ಅದನ್ನು ಅವನು ಮನಸ್ಸಿನಲ್ಲಿಯೇ ವ್ಯಯೋಗಿಸಿ ನೋಡಿದಾಗ, ಆ ಸಮಸ್ಯೆಯು ಇನ್ನಿಷ್ಟು ಬಿಕ್ಕಟ್ಟೆಂದು ತೋರುವುದು. ಈಗ ಮಾತ್ರ ರಾಮೂನ ತಲೆಯು ತಾಳ ತಪ್ಪಿದಂತಾಗುವುದು. ಜಗತ್ತು ಶೂನ್ಯವಾಗಿ ಕಾಣ ಹತ್ತುವುದು. ಇಂತಹ ಸನ್ನಿವೇಶದಲ್ಲಿ ಪ್ರತ್ಯಕ್ಷ ಪ್ರಣಯದೇವತೆಯು ಎದುರಿಗೆ ಬಂದರೆ ಇವನಿಗಾಗುವ ಸಂಕಟವು ಅಷ್ಟಿಷ್ಟಲ್ಲ. ಇವನ ಸಂಕಟಭಾವವನ್ನು ವ್ಯಕ್ತಗೊಳಿಸುವ ಮುಖಚರ್ಯೆಯನ್ನು ನೋಡಿ, ಅವಳು ಕೂಡ ಹೌಹಾರಿದಳು. ಬೇನೆಯಿಂದ ಬಳಲುತ್ತಿರುವ ಹೆತ್ತವ್ವನು ಕೂಡ ಇವನಿಗೆ ಸಮಸ್ಯೆಯಾಗಿಬಿಟ್ಟಳು. ಹೆಂಡತಿಯನ್ನು ಯಾವಾಗಲಾದರೂ ತಪ್ಪಿ ಮಾತನಾಡಿಸುವ ಪ್ರಸಂಗಬಂದರೆ, ಇವನಿಗೆ ತಾನೇ ತಪ್ಪುಹೆಜ್ಜೆಗಳನಿಕ್ಕುವಂತೆ ಭಾಸವಾಗಿ, ಮಾತನ್ನು ಅರ್ಧಕ್ಕೇ ನಿಲ್ಲಿಸಿ, ಎಲ್ಲಿ ಹೆಂಡತಿಯು 'ಹೀಗೇಕೆ?' ಎಂದು ಕೇಳುವಳೋ ಎಂಬ ಭೀತಿಯಿಂದ, ಹೊರಗಿನ ಕೋಣೆಗೆ ಓಡುತ್ತ ಬಂದು ದಿಂಬಿಗೆ ಉಸ್ಸೆಂದು ಬರಗಿ ಕುಳಿತುಕೊಳ್ಳುವ. ಇವನಿಗೆ ತಾನೊಂದು ಅದಾವುದೋ ಮಾಡಬಾರದ ಮಹಾಪಾತಕವನ್ನು ಮಾಡಿ ಕೆಟ್ಟಂತೆ ಭಾಸವಾಗಿ, ತನ್ನಲ್ಲಿ ತನಗೇ ಅಸಹ್ಯ ಹುಟ್ಟತೊಡಗಿತು. ತನ್ನ ಹಳೆಯ ಆದರ್ಶಗಳನ್ನು ನೆನಸಿಕೊಂಡು, ಚಿಕ್ಕ ಮಗುವಿನಂತೆ ಅತ್ತ ಉದಾಹರಣೆಗಳೂ ಉಂಟು. ಇಂತಹ ಆದರ್ಶಗಳ ಬೆನ್ನುಹತ್ತಿ, ಕಡೆಗೆ ಅವುಗಳ ಬೆನ್ನುಮೂಳೆಯನ್ನೇ ಮುರಿಯತೊಡಗಿದ ತಾನು ಮಹಾಪರಾಧಿಯೆಂದು ಖಂಡಿತವಾಗಿಯೂ ನಿಶ್ಚಯಿಸಿದ. ಆದರೆ..? ಆದರೆ? ಮಾತು ಮಿಂಚಿಹೋಗಿದೆ. ಮಿಂಚಿದ ಮಾತ್ರ ನೆನಸಿ ರಾಮೂ ಗಂಭೀರನಾದ. ಮತ್ತೆ ವಿಚಾರಿಸತೊಡಗಿದ. ಗುಣುಗುಟ್ಟತೊಡಗಿದ. "ಮಾತು ಮಿಂಚಿ ಹೋದರೇನಾಯಿತು? ಕ್ರಾಂತಿಪುರುಷನಲ್ಲಿ ಹಂಚಿಕೆಗಳಿಗೇನು ಕಡಿಮೆ?" ನನ್ನ ಆ ದಿನ ನಿರ್ಧಾರವನ್ನು ನೆರವೇರಿಸಿದರಾಯಿತು. ಎಲ್ಲವೂ ಸಮಾಧಾನವಾ ಮುಗ್ಗುರಿಸಿದ ಬಂಡಿಯು ಮತ್ತೆ ಹಾದಿಗೆ ಹತ್ತುವುದು. ಆದರೆ, ಅದನ್ನು ಹೇಗೆ ನೆರವೇರಿಸುವದು?.... ಅಯ್ಯೋ! ತಾಯಿ ತಾಯಿಯೊಬ್ಬಳಿರುವಳಲ್ಲ! ಇಂತಹ ಮಾತನ್ನು ಅವಳಿಗೆ ಹೇಳಿದಿಯ ಮಾಡಲಿಕ್ಕಾಗುವುದೆ? ಹೇಳಿದರೆ..ತಾಯಿ ಒಪ್ಪಲಾರಳು.... ತಾಯಿಯನ್ನೇನು ಕೇಳುವುದು?..ತಾಯಿ ಎಷ್ಟಾದರೂ ಹೆಂಗುಸ್ತಾನೆ? ಹೆಣ್ಣುಗಳಿಗೆ ಬುದ್ಧಿಯಿದೆ ಎಂದು ತಿಳಿದುಕೊಳ್ಳುವುದ ಕೂಡ ಬುದ್ಧಿಯಿಲ್ಲದವರ ಲಕ್ಷಣ. ಆದರೂ ತಾಯಿಯದು ನನ್ನ ಅಚಲವಾದ ಪ್ರೇಮವಿದೆ. ಅವಳಿಗೆ ನಾನೊಬ್ಬನೇ ಮಗು. ನನ್ನ ಆದರ್ಶಸಾಧನೆಯಲ್ಲಿ ಅವಳಿಗೂ ಹಿಗ್ಗು....ಹೌದು... ಅವಳನ್ನು ಕೇಳಿಯೇ ಬಿಡುವೆನು..ಅವಳು ಮೊಗದಿರುಹದು ನನ್ನ ಹಾದಿ ನನಗೆ ತೆರವಾಗಿಯೇ ಇದೆ." ರಾಮೂ ತಾಯಿಯನ್ನು ಕಾಣಲು ನಿಶ್ಚಯಿಸಿದ.... "ಯಾವಾಗ? ತಂದೆ ಮನೆಯಲ್ಲಿರಬಾರದು? ಹೆಂಡತಿ ಹತ್ತಿರವಿರಬಾರದು. ತಾಯಿಗೆ ನನ್ನ ಮಾತುಗಳನ್ನು ಕೇಳುವಷ್ಟು ತಾಳ್ಮೆಯಿರುವ ದಿನವಿರಬೇಕು" ಹೀಗೆ ಗೊಣಗುತ್ತ ರಾಮೂ ದಿನವನ್ನು ನಿಶ್ಚಯಿಸಿಬಿಟ್ಟ. ರಣಾಂಗಣಕ್ಕಿಳಿಯಲಿರುವ ದಂಡನಾಯಕನು, ರಣರಂಗಕ್ಕೆ ಹೊರಡುವ ಮುನ್ನ ತಾಯಿಯ 'ಪರಕೆವೆಶ್ತ' ಬರಲು ಹೊರಡುವ ವೀರಾಧಿವೀರನಂತೆ ಹೊರಟೇಬಿಟ್ಟ. ರಾಮೂನಿಗೆ ಆ ದಿನವು ಬಹಳ ಮಡತ್ತ್ವವೆದುದು. ಅವನ ದೀರ್ಘಸಮಸ್ಯೆ ಬಗೆಹರಿಯುವ ದಿನವದು. ಅವನ ಆದರ್ಶವು ಮುಂದೋಡುವ ಮಂಗಳ ದಿನವದು. ಸುಮಂಗಳ ದಿನ!

೨

ಸಂಜೆಯ ಐದುಗಂಟೆಯ ಸಮಯ; ಹೆಂಡತಿ ಅರಿಸಿಣ-ಕುಂಕು ಮಕ್ಕೆ ಹೋಗಿದ್ದಾಳೆ. ಮುಕುಂದರಾಯರು ದಿನದ ಹಾಗೆ ಆಡ್ಡಾಡಲು ಹೋಗಿದ್ದಾರೆ. ತಾಯಿಯ ಪ್ರಕೃತಿ ಈ ದಿನ ಸ್ವಲ್ಪ ಚೇತರಿಸಿಕೊಂಡಿದೆ. ರಾಮೂನಿಗೆ ಇಂತಹ ಯೋಗಾಯೋಗವು ಇನ್ನೆಂದಿಗೂ ಕೂಡದೆಂದೆನಿಸಿರಬೇಕು. ಅಂತೆಯೇ ಮಾತುಗಾರಿಕೆಯ ಸರ್ವಸನ್ನಾಹದೊಂದಿಗೆ, ತಾಯಿ ಮಲಗಿದ ಕೋಣೆಯನ್ನು ಪ್ರವೇಶಿಸಿದ. ಸೂಕ್ಷ್ಮವಾದ ರಾಜಕೀಯಸಮಸ್ಯೆಗಳನ್ನು ಚರ್ಚಿಸಲು ಹೊರಡುವ ರಾಜಕಾರಣಪುರುಷನಂತೆ ರಾಮೂನ ಮುಖ ಗಂಭೀರವಾಗಿ ಬಿಟ್ಟಿತು. ಕೋಣೆಯನ್ನು ಪ್ರವೇಶಿಸಿ ರಾಮೂ ಮೆಲುದನಿಯಲ್ಲಿ ತಾಯಿಯನ್ನು ಕೂಗಿದ:

"ಈಹೊತ್ತು ಪ್ರಕೃತಿ ಚೆನ್ನಾಗಿದೆಯಲ್ಲವೆನವ್ವಾ?"

"ಬಾ ರಾಮೂ! ಇಂದು ಕೆಮ್ಮಿನ ತೊಂದರೆ ಬಡಳವಾಗಿಲ್ಲ. ಅಶಕ್ತತೆಮಾತ್ರ ಅಸಾಧ್ಯವಾಗಿದೆ. ರಾಮೂ, ಒಮ್ಮೆ ಈ ಜಡ್ಡಿನಿಂದ

ಪಾರಾಗಬೇಕು ನೋಡು ...." ರಾಮೂ ಇದಾವುದನ್ನೂ ಕೇಳುವ ಮಾತೃವತ್ಸಲನಾದ ಸುಳುಮಾರನಾಗಿರಲಿಲ್ಲ.

"ಅವ್ವಾ!....ಇವಳು.." ಠಾಮೂ ಸ್ವಲ್ಪ ನಾಚಿದ.

"ಹೌದು ಮಗೂ! ನೀನು ಗಂಡುಮಗುವನ್ನು ಆಡಿಸುವುದನ್ನು ನೋಡಿ ನಾನುಸಾಯಬೇಕು. ನನ್ನ ಪುಣ್ಯ ಹೇಗಿದೆಯೋ!" ರಮಾಬಾಯಿಯವರ ಕಣ್ಣಲ್ಲಿ ನೀರೂರಿತು. ತಾಯಿಯ ಕಣ್ಣಲ್ಲಿ ನೀರೂರಿದುದನ್ನು ಕಂಡ ರಾಮೂನಿಗೆ ವಿವೇಚನಾಸಾಮರ್ಥ್ಯವೇ ಕುಸಿದುಬಿದ್ದಂತಾಯಿತು. ಅವನ ಧೈರ್ಯದ ಕಳಸವು ತತ್ತರಿಸತೊಡಗಿತು. ಇದ್ದ ಬಿದ್ದ ಧೈರ್ಯವನ್ನೆಲ್ಲ ಕೂಡಿಹಾಕಿಕೊಂಡು ರಾಮೂ ಮಾತನಾಡತೊಡಗಿದ:

"ಅವ್ವಾ! ನಾನು ಇಷ್ಟು ಬೇಗನೆ ತಂದೆಯಾಗಬೇಕೇನವ್ವಾ? ಭರತಖಂಡದಲ್ಲಿ...."

"ನಿನ್ನ ಕೈಯಲ್ಲೇನಿದೆ ಮಗೂ. ಎಲ್ಲವೂ ಅವನ ಸ್ವಾಧೀನ! ನೀನು ಭಾಗ್ಯಶಾಲಿಯೆಂದೇ ಇಷ್ಟು ಬೇಗ ಗಂಡುಮಗುವನ್ನು ಪಡೆಯುವಿ!" ಸಮಾಧಾನದಿಂದ ಹೇಳಿದರು ರಮಾಬಾಯಿಯವರು. ರಾಮೂನ ತಲೆ ತಿರುಗಿದಂತಾಯಿತು. ತಾಯಿ, ದೇವರು, ಹೆಂಡತಿ ಮೂವರೂ ಒಳಸಂಚಿನಲ್ಲಿದ್ದಾರೆಯೆಂಬ ಮಾತು ಸ್ಪಷ್ಟವಾಗಿರಬೇಕು ಕ್ರಾಂತಿಪುರುಷನಿಗೆ. ಅಂತೆಯೇ ಅವನು ರಭಸದಿಂದ "ಅವ್ವಾ! ಭರತಖಂಡದಲ್ಲಿ ಮೂವತ್ತು ಮೂರು ಕೋಟಿ ಜೀವಿಗಳು ಬಡತನದಲ್ಲಿ ಬೆಂದು ಭಸ್ಮವಾಗುತ್ತಿರುವಾಗ, ಇನ್ನೊಂದು ಬಡಜೀವವನ್ನು ಆ ಅಗ್ನಿಕುಂಡದಲ್ಲಿ ನನ್ನಂತಹ ಆದರ್ಶಪುರುಷನು ಆಹುತಿಯಿಕ್ಕಬೇಕೆ? ಪ್ರತಿಜೀವಿಯೂ ತಲೆಭಾರವಾದಾಗ, ಇನ್ನೊಂದು ಇಲ್ಲದ ಜೀವಿಯ ಭಾರವನ್ನು ಭಾರತಾಂಬೆಯು ಹೇಗೆ ಸಂತವಿಸುವಳು? ಅವ್ವಾ! ಸ್ವಲ್ಪ ವೃತ್ತಪತ್ರಿಕೆಗಳ ಕಡೆಗೆ ನೋಡವ್ವಾ! 'ಮೂವತ್ತು ಮೂರು ಕೋಟಿ' ಕವಿತೆಯನ್ನಾದರೂ ಕೇಳಿ ತಿಳಿಯವ್ವಾ! ಯಾರ ಹೊಟ್ಟೆಯೂ ಪೂರ್ಣವಾಗಿ ತುಂಬುವುದಿಲ್ಲ. ಯಾರಿಗೆ ಹೊಟ್ಟೆಗಿಲ್ಲ, ಯಾರಿಗೆ ಬಟ್ಟೆಯಿಲ್ಲ! ನೆಲೆಯಿಲ್ಲದ ನಿರ್ಗತಿಕರೆಷ್ಟು ಜನರೊ? ಅರೆಹೊಟ್ಟೆ ತಿಂದು ಬದುಕುವ ಜೀವಿಗಳ ಸಂಖ್ಯೆ ಎಷ್ಟಿವಾರಿ ಹೋಗಿದೆ. ನಾವು ತಿಳಿದವರು, ಎಲ್ಲವನ್ನೂ ಬಲ್ಲ ಮುಂದುವರಿದ ವರ್ಗದವರು. ತಿಳಿದೂ ತಿಳಿದೂ ಇಂತಹ ಘೋರಕೃತ್ಯವನ್ನು ಸೈರಿಸಬೇಕೇ? ಸ್ವಲ್ಪ ತಾಳ್ಮೆಯಿಂದ ವಿಚಾರಿಸವ್ವಾ!" ರಾಮೂ ಬೆವರನ್ನೊರಸಿಕೊಳ್ಳುತ್ತ ತನ್ನ ವಾಗ್ಝರಿಯ ಪರಿಣಾಮವನ್ನು ಎದುರು ನೋಡತೊಡಗಿದ. ರಾಮೂನ ಇಂತಹ ಉಪನ್ಯಾಸದ ಕಿಡಿಗಳು ರಮಾಬಾಯಿಯವರಿಗೆ ಹೊಸತಾಗಿರಲಿಲ್ಲವಾದುದರಿಂದ,ಅವರು ಸಮಾಧಾನದಿಂದ "ಇದನ್ನೇನು ಆರಂಭಿಸಿದೆ ರಾಮೂ! ಭರತಖಂಡದ ಗೊಡವೆ ನಿನಗೇಕೆ? ನಿನಗೇನು ಕವಿಮೆಯಾಗಿದೆ? ಬರುವ ಕಂದಮ್ಮನ ಭಾಗ್ಯಕ್ಕೇನು ಕೊರತೆಯಿದೆ? ಮೇಲಾಗಿ ಎಲ್ಲವೂ ದೇವರ ಲೀಲೆಯಿರುವಾಗ, ನಿನ್ನ ಕಾಳಜಿ ಎಲ್ಲಿಗೆ ಮುಟ್ಟೀತು? ಇಂತಹ ಹುಚ್ಚುಚ್ಚಾರ ಮಾತನಾಡಬಾರದಪ್ಪಾ ರಾಮೂ!...."

ರಾಮೂನಿಗೆ ತನ್ನ ಮಾತುಗಾರಿಕೆಯ ಪರಿಣಾಮವು 'ಹುಚ್ಚುಚ್ಚಾರ'ದಲ್ಲಿ ಪರಿಣಾಮಗೊಂಡುದನ್ನು ಕಂಡು ದಿಕ್ಕು ತಪ್ಪಿತು. ಅವನು ಗಡುಸುದನಿಯಲ್ಲಿ :

"ಅವ್ವಾ! ನನಗೆ ಮಗು ಬೇಡ; ತಿಳಿಯಿತೇ?" ಎಂದನು.

ಮಗನ ಮಾತಿಗೆ ಮುಗುಳುನಗೆ ನಗುತ್ತ ರಮಾಬಾಯಿಯವರು ನುಡಿದರು :

"ನೀನೇನು ಮಾಡಬಲ್ಲಿ ಮಗು! ನಿನಗೆ ಬೇಡವೆಂದರೂ ಈಗ ಹೇಗೆ ನಿಲ್ಲುವುದು? ದೇವರು.." ರಾಮೂ ಮಾತನಾಡಗೊಡದೆ "ಅವ್ವಾ! ಸಾಧ್ಯವಿದೆ. ಮಗುವನ್ನು ಪಡೆಯದಿರುವುದು ಸಾಧ್ಯವಿದೆ. ಇದು ವಿಜ್ಞಾನಯುಗ! ಪಾಶ್ಚಾತ್ಯ ಸಂಸ್ಕೃತಿಯ ಪರಿಣಾಮವಾಗಿ ಬೆಳೆಯುತ್ತಿರುವ ಸವಯುಗ! ದೇವರ..ನಿನ್ನ ದೇವರ ವಿದುಳಿನಲ್ಲಿ ಬಾರದ ಅನೇಕ ಸಂಶೋಧನೆಗಳು ಹೊರಟಯುಗ! ಅವ್ವಾ..ನೀನು ನನಗೆ ಅಪ್ಪಣೆಯನ್ನು ದಯಪಾಲಿಸಿ ನೋಡು, ಯುಗದ ಮಹಿಮೆಯನ್ನು.." ರಮಾಬಾಯಿಯವರಿಗೆ ಏನೋ ಇಲ್ಲದ ಕಲ್ಪನೆ ಬಂದು ಎದೆಯು ಧಸ್ಸೆಂದಿತು. ಅವರು ಒಮ್ಮೆ ಜೋರಾಗಿ ಕೆಮ್ಮಿ ಮಾತನಾಡತೊಡಗಿದರು :

"ಹುಚ್ಚು ಖೋಡಿ! ಇಲ್ಲದ್ದನ್ನು ಮಾತನಾಡಬೇಡ; ಬೇಡಿ ಬಯಸಿದರೆ ಮಕ್ಕಳಾಗುತ್ತಿರುವುದಿಲ್ಲ. ನನ್ನ ಹೊಟ್ಟೆಯ ಪುಣ್ಯ...."

"ಅವ್ವಾ! ಅವ್ವಾ! ನನಗಾಗಿಯಾದರೂ ಸುಮ್ಮನಿರವ್ವಾ! ನನ್ನ ಆದರ್ಶವನ್ನು ನೋಡಿಯಾದರೂ ಒಪ್ಪಿಗೆಯನ್ನಿಯವ್ವಾ! ಭರತಖಂಡದ ಕರುಣಾಜನಕ ಪರಿಸ್ಥಿತಿಯನ್ನು ನೋಡಿಯಾದರೂ ನಿನ್ನ ಶುಭಾಶೀರ್ವಾದಗಳನ್ನು ಎರಚವ್ವಾ! ಆಧುನಿಕ ವಿಜ್ಞಾನದ ಪ್ರಪಂಚದ ಮೇಲಿನ ಅಭಿಮಾನದಿಂದಲಾದರೂ ಔಷಧ..... (ರಾಮೂನ ಗಂಟಲು ಹತ್ತಿಕ್ಕಿದಂತಾಯಿತೇನೋ! ಕೆಮ್ಮಿ ಗಂಟಲು ಸಡಿಲುಮಾಡಿಕೊಂಡು) ನಾನು ನಿನ್ನ ಒಬ್ಬನೇ ಮಗನಲ್ಲವೆ? ನನಗೆ ಬೇಡವಾದದ್ದು ನಿನಗೇತಕ್ಕೆ ಬೇಕು? ನಿನಗೆ ನೊಮ್ಮಕ್ಕಳು ಬೇಕಾದರೆ ಆ ವ್ರಗಳ ಹಿಂಡನ್ನೇ ನೋಡುವಿ ಸ್ವಲ್ಪ ದಿನ ತಾಳು! ನಾನಿನ್ನೂ ನೆರೆಗೂದಲನ್ನು ಕಂಡಿಲ್ಲ. ನನ್ನ ಹಾಲುಗಲ್ಲದ ಬಣ್ಣಕೂಡ ತಿರುಗಿಲ್ಲ. ನಾನು ತಂದೆ....ಅವ್ವಾ ಎಂದಿಗೂ ಆಗದು..ಆಗದು!..ಆಗದು..ನಿನ್ನ ಶುಭಾಶೀರ್ವಾದದಿಂದ ಎಲ್ಲವೂ ಸರಿಹೋಗುವುದು. ಡಾಕ್ಟರರನ್ನು ಕೇಳಿದ್ದೇನೆ. ಹಕೀಮರನ್ನು ವಿಚಾರಿಸಿದ್ದೇನೆ. ವೈದ್ಯರ ಮನೆಗೆ ಎಡೆತಾಕಿ ಕಂಗೆಟ್ಟಿದ್ದೇನೆ. ಎಲ್ಲವೂ ಸರಿಹೋಗುವುದು ತಾಯಿಾ! ನನ್ನ ಬಾಳುವೆಯೂ ಬೆಳೆಯುವುದು. ನನ್ನ ಪ್ರತಿಷ್ಠೆಯೂ ..... ಆದರ್ಶವೂ....."

ರಮಾಬಾಯಿಯವರ ಹೃದಯದಲ್ಲಿ ಯಾವ ಸುಟ್ಟದನಿಯಾಯಿತೊ, ಚಿಟ್ಟನೇ ಚೀರಿದರು. ರಾಮೂ ಗಾಬರಿಯಾಗಿ ಅವ್ವಾ ಅವ್ವಾ!' ಎಂದು ಕೂಗುತ್ತ ನೆತ್ತಿಗೆ ನೀರುಬಡಿಯಹತ್ತಿದನು. "ಅವ್ವಾ! ಅವ್ವಾ! ಏನಾಯಿತು ಹೇಳೇ; ಅವ್ವಾ!' ಅವ್ವಾ!' ರಾಮೂನ ಹೆಂಡತಿ ಓಡುತ್ತ ಕೋಣೆಯಲ್ಲಿ ಧಾವಿಸಿ ಬಂದಳು.

ರಾಮೂ ಅವಳನ್ನು ನೋಡಲಾರದ ದೃಷ್ಟಿಯಲ್ಲಿ "ನಿನ್ನದೇ ಪುಣ್ಯ" ಎಂಬ ಭಾವವನ್ನು ಪ್ರಕಟಿಸಿ ಕಣ್ಣಾರೆಯಿಸಿದ. ಡಾಕ್ಟರರನ್ನು ಕರೆಕಳುಹಿದ್ದಾಯಿತು. ರಮಾಬಾಯಿಯವರ ಪ್ರಕೃತಿಯ ಸೂಕ್ಷ್ಮ ಪರೀಕ್ಷೆಯಾಯಿತು. "ಹೃದಯ ವಿಕಾರ" "ಒಮ್ಮೆಲೆ ಆದ ಆಘಾತದ ಪರಿಣಾಮ" ಎಂದು ಹೇಳಿ, ಅವರಿಗೆ ಸಂಪೂರ್ಣ ವಿಶ್ರಾಂತಿಯನ್ನು ಕೊಡಲು ಹೇಳಿಹೋದರು. ಮುಕುಂದರಾಯರಿಗೆ 'ಆದ ಆಘಾತ'ದ ಕಲ್ಪನೆ ಬರಲಿಲ್ಲ. ರಾಮೂನ ಹೆಂಡತಿಗೆ ಈ ದುರಂತಪ್ರಸಂಗದ ಪರಿಚಯವು ಹಾಗೆಯೇ ಉಳಿಯಿತು. ರಾಮೂನ ಸಮಸ್ಯೆಯು ಈ ರೀತಿಯಲ್ಲಿ ಬಗೆಹರಿಯಿತು. ಅವನ ಕಳವಳಕ್ಕೆ ಮಿತಿಯಿಲ್ಲ. ಅವನ ತಲೆಯು ಬಿರುಗಾಳಿಗೊಡ್ಡಿದ ತಂಬಿಗೆಯಾಯಿತು. ಅವನು 'ನಾನು ವಿಚಾರಿಸಿದುದೇನು? ಇಲ್ಲಿ ನಡೆಯಿತೇನು?' ಎಂದು ಯಾವಾಗಲೂ ಗೊಣಗುಟ್ಟತೊಡಗಿದ. ಅವನ ಈ ಆಚರಣೆಯ ಅಸಹನೀಯ ಪರಿಣಾಮವು ಹೆಂಡತಿಯ ಮೇಲಾದರೂ, ಕೇಳುವುದಕ್ಕೆ ಧೈರ್ಯಸಾಲದೆ, ತಾನೇ ಒಳಗೊಳಗೆ ಕೊರಗತೊಡಗಿದಳು. ಕೆಲವು ದಿನಗಳ ಹಿಂದೆ ಆನಂದಮಯವಾಗಿದ್ದ ಮನೆಯಲ್ಲಿ ಬೆಚ್ಚಿಕೆ ತಲೆದೋರತೊಡಗಿತು. ಹೆಂಡತಿಯ ದುರವಸ್ಥೆಯನ್ನು ಕಂಡ ಮುಕುಂದರಾಯರು ದಿನಾಲು ನವೆಯತೊಡಗಿದರು. ರಮಾಬಾಯಿಯವರ ಪ್ರಕೃತಿಯು ಚಿಂತಾಜನಕವಾಗತೊಡಗಿತು; ಒಮ್ಮೆ ಅರಿವು; ಒಮ್ಮೆ ಮೈಮರೆವು ಅವರ ಪ್ರಕೃತಿಯ ಮೈತಿಷ್ಟ್ಯವಾಗಿಬಿಟ್ಟಿತು. ಅರಿವು ಬಂದಾಗ "ರಾಮೂ! ಗಂಡುಮಗುವನ್ನು ನೋಡಬೇಕಪ್ಪಾ!" ಎನ್ನುತ್ತಿದ್ದರು. ಈ ಮಾತುಗಳನ್ನು ಕೇಳಿದ ರಾಮೂನ ಪರಿಸ್ಥಿತಿಯ ಬಣ್ಣನೆಯನ್ನು ನಾವು ಮಾಡುವುದೇ ಬೇಡ. ಅವನು ಕಣ್ಣೀರನ್ನು ಮಾತ್ರ ಸುರಿಸುತ್ತಿದ್ದ. ಅದು ಅವನ ನಿತ್ಯನಿಯಮವಾಗಿಬಿಟ್ಟಿತು. ಅದೇತಕ್ಕೊ!

ಕ

"ನಿಮಗೆ ಆಗಿದೆಯಾದರೂ ಏನು?" ಮರುಕದುಂಬಿ ಕಣ್ಣೀರು ಸುರಿಸುತ್ತ ಕೇಳಿದಳು ರಾಮೂನ ಹೆಂಡತಿ. ರಾಮೂನ ವಿಲಕ್ಷಣ ಆಚರಣೆಯೇ ಈ ಪ್ರಶ್ನೆಗೆ ಕಾರಣವಾಗಿದ್ದಿತೆಂದು ಬೇರೆ ಹೇಳುವ ಕಾರಣವಿಲ್ಲ.

"ನನ್ನನ್ನು ಸುಡುಗಾಡು ಕರೆಯುತ್ತಿ" ಕಟ್ಟಿಗೆ ಮುರಿದಂತಹ ರಾಮೂನ ಒರಟು ಉತ್ತರ. ಇಂತಹ ಉತ್ತರದಿಂದ ಗರ್ಭಿಣಿಯು ಗಡಗಡಿಸಿ ನಡುಗಿದಳು. ದಿನಾಲು ಜಗಳ ನಡೆದ ಗಂಡನ ದೇಹಕ್ಕೆ ಅದಾವುದೋ ಒಂದು ಅಸಾಧ್ಯವಾದ ಬೇನೆ ಆವರಿಸಿದೆ, ಎಂದು ಗಾಬರಿಯಾಗಿ ಕೈಕಾಲು ಕಳೆದುಕೊಂಡಳು. ಆದರೆ ರಾಮೂ ಅವಳ ಹೃದಯದಲ್ಲಿ ನಡೆಯುತ್ತಿದ್ದ ಭಾವಗಳನ್ನು ಗ್ರಹಿಸುವಷ್ಟು ಶಾಂತನಾದ ಪತಿದೇವನಾಗಿರಲಿಲ್ಲ. ಅವಳಿಗೆ ತಾನು ಸುಮ್ಮನಿರುವುದು ಅಸಾಧ್ಯಕ್ಕೆ ಕಾರಣವಾಗಬಹುದೆಂದೆನ್ನಿಸಿದರೂ ಯಾವುದನ್ನೂ ಮಾಡಲಿಕ್ಕೆ ಅಸ್ಪದವಿರಲಿಲ್ಲ. ಎಷ್ಟಾದರೂ ರಾಮೂನ ಹೆಂಡತಿ ಗೃಹಿಣಿಯಲ್ಲವೆ? ಮತ್ತೆ ಕಾತರದಿಂದ ಕೇಳಿದಳು; "ದಿನಾಲು ಸೊರಗುತ್ತ ನಡೆದಿರುವಿರಿ. ಡಾಕ್ಟರರಿಗೆ ಪ್ರಕೃತಿ ತೋರಿಸಬಾರದೇಕೆ? ನಮ್ಮನೆ ಹೀಗೆ ಕುಳಿತರೆ ಪರಿಣಾಮ ಘಾತುಕವಾಗಬಹುದು! ನನ್ನ ಆಣೆಯಾಗಿದೆ; ಚಿಕಿತ್ಸೆ ಮಾಡಿಸಿಕೊಳ್ಳಿರಿ!" ಕಣ್ಣೀರು ತುಂಬಿ ಕಂಠ ಬಿಗಿಯಿತು.

ರಾಮೂನಿಗೆ ಅವಳ ಮಾತುಗಳೆಲ್ಲ ಅಸಹ್ಯವೆನಿಸತೊಡಗಿದುವು. ಅವಳು ಮಾತನಾಡುವಾಗ ಇಲ್ಲದ ಅಕ್ಕಸವು ತಲೆದೋರುವುದು. ಯಾವನಾದರೂ ಮಾನಸಶಾಸ್ತ್ರ ಪ್ರವೀಣನಿದ್ದರೆ, ರಾಮೂನ ಮೆದುಳಿನಲ್ಲಿ ನಡೆಯುತ್ತಿರುವ ಆಂದೋಲನವೇ ಅವನ ರೋಗಕ್ಕೆ ಕಾರಣವೆಂದು ಹೇಳಬಹುದಾಗಿತ್ತು. ಆದರೆ ರಾಮೂನ ಹೆಂಡತಿಗೆ ಆ ಶಕ್ತಿ ಎಲ್ಲಿಂದ ಬರಬೇಕು? ಒಮ್ಮೆ ರಾಮೂ, ಹೆಂಡತಿಯ ಕನಿಕರದ ಮಾತುಗಳನ್ನು ಕೇಳಲಾರದೆ ಅಕ್ಕಸದಿಂದ:

"ನನ್ನ ರೋಗದ ಮೂಲ ನಿನ್ನಲ್ಲಿದೆ" ಎಂದು ಹೆಂಡತಿಯನ್ನು ದುರದುರನೆ ನೋಡಿದ. ಅವಳು ಗಾಬರಿಯಾಗಿ "ನಾನು ಅಂತಹದನ್ನೇನು ಮಾಡಿದ್ದೇನೆ?" ಎಂದು ಅಂಜಂಜುತ್ತ ಮೆಲ್ಲಗೆ ಕೇಳಿದಳು.

"ಗರ್ಭಿಣಿಯಾಗಿರುನೆಯಲ್ಲ!" ಎಂದ ರಾಮೂ— ಕೆಕ್ಕರಿಸಿ ನೋಡುತ್ತ. ರಾಮೂನ ಮುಗ್ಧ ಹೆಂಡತಿಗೆ ಈ ಮಾತ್ಗಳ ಅರ್ಥವೇ ಆಗಲಿಲ್ಲ. ತಾನು ಗರ್ಭಿಣಿಯಾದದ್ದು ಇವರ ರೋಗದ ಮೂಲ ಹೇಗಾಗಿರಬೇಕೆಂದು ವಿಚಾರಿಸಿದಳು. ವಿಚಾರ ಬಗೆಹರಿಯಲಿಲ್ಲ. ಬಹಳಮಾಡಿ ಇದು ವಿನೋದದ ಮಾತಾಗಿರಬೇಕೆಂದು ಭಾವಿಸಿ, ತಾನುಕೂಡ ಸ್ವಲ್ಪ ವಿನೋದಮಾಡಿ ಗಂಡನನ್ನು ಸಮಾಧಾನಗೊಳಿಸಬೇಕೆಂಬ ಭಾವನೆಯಿಂದ, ವಿನೋದಪೂರಿತ ವ್ಯಂಗ್ಯಧ್ವನಿಯಲ್ಲಿ ವಯ್ಯಾರವನ್ನು ಬೆರಸಿ ಹೇಳಿದಳು:

"ಇದಕ್ಕೆ ನಾನೊಬ್ಬಳೆ....." ರಾಮೂನ ಕಣ್ಣುಗಳು ಅರಳಿದುವು; ಅಕ್ಕಸದ ಅಳತೆತಪ್ಪಿ ಬೇತಾಳದಂತೆ ಕುಣಿಯತೊಡಗಿತು. ತನ್ನ ತಪ್ಪನ್ನು ಅಣಕವಾಡುವ ಹೆಂಡತಿಯ ಮಾತುಗಳನ್ನು ಸಹಿಸದಾದನು ರಾಮು. ಮೈಮರೆತ ದನಿಯಲ್ಲಿ ಕಿರಿಚುತ್ತ ಹೆಂಡತಿಯನ್ನು ಕೈಸೋಲುವವರೆಗೆ ಥಳಿಸಿದನು; ಒದ್ದು ಕೆಡಹಿದನು. ಎಷ್ಟಾದರೂ ರಾಮೂ ಗಂಡುಶಕ್ತಿಯನ್ನು ಕೇಂದ್ರೀಕರಿಸುವ ಕ್ರಾಂತಿಕಾರಕ ವೀರಾಧಿವೀರನಲ್ಲವೆ? ಇವನ ಬಡಿತಗಳ ಅಸಹ್ಯವೇದನೆಗಳನ್ನು ಸಹಿಸುವ ಹೆಂಡತಿಯು ತುಟಿಬಿಚ್ಚಲಿಲ್ಲ; ಬೊಬ್ಬೆ ಇಡಲಿಲ್ಲ. ಎಲ್ಲಿ ಹೊರಗಿನವರು ಈ ರಂಬಾಟವನ್ನು ಕೇಳುವರೋ ಎಂದು ಕಡಮುಚ್ಚಿ, ಕಿಟಕಿಗಳನ್ನು ಭದ್ರಪಡಿಸಿ, ಗಂಡೆದೆಯ ಗಂಡುಸಿನೆದುರಿಗೆ 'ಕೊಂದುಬಿಡಿರಿ' ಎಂಬುವ ಭಂಗಿಯಲ್ಲಿ ನಿಂತುಬಿಟ್ಟಳು. ರಾಮೂ ಉಸ್ಸೆಂದು ಕುಳಿತ. ಹೆಂಡತಿಯ ಮುಖ ಕೆಂಪಾಗಿತ್ತು. ರಾಮೂನ ಕಣ್ಣುಗಳು ರಕ್ತವರ್ಣಕ್ಕಿಳಿದಿದ್ದುವು. ಒಮ್ಮೆ ತನ್ನ ಕೈಗಳ ಕಡೆಗೆ ನೋಡಿಕೊಂಡ. ಕೆಂಪು! ನೆಲದ ಕಡೆಗೆ ನೋಡಿದ, ರಕ್ತದ ಹನಿಗಳು! ಲಗುಬಗೆಯಿಂದ ಹೆಂಡತಿಯ ಮುಖದ ಕಡೆಗೆ ನೋಡಿದ. ಕೆಂಪು ಬಾಸುಂಡೆಗಳು! ಎದುರಿಗಿರುವ ನಿಲುವುಗನ್ನಡಿಯಲ್ಲಿ ಮುಖ ಕಂಡಿತು. ದಿಟ್ಟಿಸಿ ನೋಡಿದ. ನೋಡಿಯೇ ನೋಡಿದ....ರಾಮೂ ಚಿಟ್ಟನೆ ಚೀರಿ ಬೊಪ್ಪನೆ ನಿಂತಲ್ಲಿಯೆ ಬಿದ್ದುಬಿಟ್ಟ. ಹೆಂಡತಿ ಗಾಬರಿಯಾದರೂ

ತದನ್ನು ಹೊರಪಡಿಸದೆ ಉಪಚಾರ ಮಾಡತೊಡಗಿದಳು. ರಾಮೂ ಎಚ್ಚರುಗೊಂಡಾಗ ಹೆಂಡತಿಯ ತೊಡೆಯಮೇಲೆ ಪುಲಗಿದ್ದ. ಅವನಿಗೆ ಯಾವುದೂ ತಿಳಿಯದಂತಾಯಿತು. ಕಣ್ಣೆದುರು ಹೂಡಿದ ದುರಂತನಾಟಕದ ಚಿತ್ರವು ಕಂಗೊಳಿಸಿತು. ತಾನು ಹೆಂಡತಿಯನ್ನು ಸಾಯುವ ಹಾಗೆ ಬಡಿದದ್ದೇಕೆ? ಅವಳ ತಪ್ಪಾವುದು? ಈ ವಿಚಾರಗಳು ರಾಮೂನನ್ನು ಗಾಸಿಗೊಳಿಸಿದುವು. ಸಾಯುವ ಹಾಗೆ ಬಡಿಸಿಕೊಂಡರೂ ಮತ್ತೆ ತನ್ನ ಉಪಚಾರ ಮಾಡುತ್ತಿರುವ ಹೆಂಡತಿ ಅವನಿಗೊಂದು ಸಮಸ್ಯೆಯಾಗಿಬಿಟ್ಟಳು. ಅವನ ಹೃದಯದ ಹೆಬ್ಬಾಗಿಲು ಮುಚ್ಚಿರುವಾಗ ಅವನಿಗೆ ಎಲ್ಲವೂ ಸಮಸ್ಯೆಗಳಷ್ಟೆ! ದೀರ್ಘವಾದ ನಿಟ್ಟುಸಿರುಬಿಟ್ಟ. ಕರುಣಾಜನಕ— ವಿಸಯ-ಪೂರಿತ — ಕಣ್ಣೀರುತುಂಬಿದ— ಕಣ್ಣುಗಳಿಂದ ಹೆಂಡತಿ ಅವನನ್ನು ನೋಡುತ್ತ "ಹಗುರಾಯಿತೇನೊ! ಸ್ವಲ್ಪ ಹಾಲು ಕೊಡಲಾ?" ಎಂದಳು ಕಣ್ಣೀರನ್ನೊರಸಿಕೊಂಡು. "ಆಗಬಹುದು" ಎಂದ ಕ್ರಾಂತಿಪುರುಷ. ಅವನ ಈ ಐದು ಅಕ್ಷರಗಳ ಅಕ್ಕರೆಯ ದನಿಯಲ್ಲಿ ಅದೆಷ್ಟು ಉತ್ಸಾಹ ಅವಳಿಗೆ! ಅವಳು ಎಲ್ಲವನ್ನೂ ಮರೆತಳು. ರಾಮೂ ಹಾಲು ಕುಡಿದ. ಮೈಯೆಲ್ಲ ದಣಿದಂತಾಗಿತ್ತು ಈ ಗಂಡುದಣಿಗೆ. ಕೊಳುಗುಳದಲ್ಲಿ ಕಾಳೆಗವಾಡಿದ ಕಡುಗಲಿಗೆ ಕೂಡ ಇಷ್ಟು ದಣಿವಾಗಿರಲಿಕ್ಕಿಲ್ಲ, ಅಷ್ಟು ದಣಿದು ಬಿಟ್ಟಿದ್ದ ರಾಮು. ಒರಗಿದ, ಹೆಂಡತಿ ಗಾಳಿಹಾಕತೊಡಗಿದಳು. ರಾಮೂನಿಗೆ ಇದನ್ನು ನೋಡಿ, ಆದೇನೋ ವಿಚಿತ್ರಭಾವನೆಯು ತೆರೆ ಬಡಿಯಿತು. ಆ ತೆರೆಯ ತಂಗಾಳಿಗೆ ರಾಮೂನಿಗೆ ಗಾಢವಾದ ನಿದ್ರೆ ಯಾವಾಗ ಹತ್ತಿತೋ ನಾವರಿಯೆವು. ಹೆಂಡತಿಮಾತ್ರ ಬೀಸಣಿಕೆಯನ್ನು ಕೆಳಗಿಟ್ಟು ಮೈಮುರಿದುಕೊಂಡಾಗ ಮುಂಜಾವಿನ ಕೋಳಿ ಕೂಗುತ್ತಿತ್ತು.

೪

ರಮಾಬಾಯಿಯವರ ಪ್ರಕೃತಿ ತೀರ ಚಿಂತಾಜನಕವಾಗಿಬಿಟ್ಟಿತು. ಮೊದಲೇ ಕೃಶವಾದ ಶರೀರ; ಅದರಲ್ಲಿ ಕ್ಷಯದ ಸಂಸ್ಕಾರ. ತಾಯಿ-ಮಕ್ಕಳ "ಆದರ್ಶಬೆಟ್ಟಿ" ಯಾದಂದಿನಿಂದ, ಅವರಿಗೆ ಒಂದು ಬಟ್ಟಲು ಹಾಲು ಕೂಡ ಹೋಗುವುದು ದುಸ್ತರವಾಗತೊಡಗಿತು. ಮಗನೆಲ್ಲಿ ತಾನು ಜೇಳೆದಂತೆ ಮಾಡುವನೋ ಎಂಬುದು ಇವರ ಎದೆಯನ್ನು ಕೊರೆಯುತ್ತಿರಬೇಕು. ಆದಕ್ಕಾಗಿಯೆ ಅವರು ಸೊಸೆಯನ್ನು ಕಂಡಾಗೆಲ್ಲ ಕಣ್ಣೀರು ಹಾಕುತ್ತಿರಬೇಕು. ಪಾಪ! ರಾಮೂನ ಹೆಂಡತಿಗೆ ಇದರರ್ಥವೆ ಆಗಲೊಲ್ಲದು. ಇತ್ತ ರಾಮೂ ತಾಯಿಯ ಈ ದುರವಸ್ಥೆಗೆ ತಾನೇ ಕಾರಣನಾದೆನೆಂದು ತಿಳಿದು, ಅವಳು ಹೇಗಾದರೂ ಒಮ್ಮೆ ಬದುಕಿ ಉಳಿದರೆ ಸಾಕು ಎಂದು ಉಸಿರಿಸಲು ಸನ್ನದ್ಧನಾಗಬೇಕಾಯಿತು. ನಡುನಡುವೆ ತನ್ನ ಆದರ್ಶದ ಅರಿವಾಗಿ ಸಂಕಟವಾದರೂ, ಹೆಂಡತಿಗೆ ತಿಳಿಹೇಳಿ ಅವಳಿಂದಲೇ ತನ್ನ ಆದರ್ಶವನ್ನು ಕೊನೆಮುಟ್ಟಿಸಿಕೊಳ್ಳಬೇಕೆಂದು ಆ ಪ್ರಸಂಗವನ್ನು ಎದುರು ನೋಡುತ್ತ ಕುಳ್ಳಿರಬೇಕಾಯಿತು. ಅವನಿಗೆ ಒಮ್ಮೊಮ್ಮೆ ರಾತ್ರಿಯೆಲ್ಲಾ ತಾಯಿಯ ಹತ್ತಿರವೇ ಕುಳ್ಳಿರಬೇಕಾದ ಪ್ರಸಂಗ ಬರುತ್ತಿತ್ತು. 'ತಾಯಿ ಮೊದಲು ಬದುಕಲಿ, ಆ ಮೇಲೆ ನೋಡುವ' ಎಂದು ತನ್ನ ಆದರ್ಶಸಾಧನೆಯ ದಿನಗಳನ್ನು ಮುಂದೂಡಿದ. ಎಷ್ಟಾದರೂ ರಾಮೂ ಧೈರ್ಯಶಾಲಿಯಲ್ಲವೆ? ಇವನ ಧೈರ್ಯದ ಅನುಭವ ಬೇಕಾಗಿದ್ದರೆ ಇವನ ಹಿಂದಿನ ಜೀವನವನ್ನು ನೋಡಿದರೆ ತಟ್ಟನೆ ಹೊಳೆಯುವದು. ಒಮ್ಮೊಮ್ಮೆ ತಾಯಿಯ ಹತ್ತಿರ ಕುಳಿತಾಗ ಇವನಿಗೆ ಹಿಂದಿನ ಚಿತ್ರಗಳು ನೆನಪಾಗುವುವು. ತಾನು ತಾಯಿಯೊಡನೆ ಮಾತನಾಡಿದ್ದು— ಅವಳು ಸ್ಮೃತಿತಪ್ಪಿ ಬಿದ್ದುದು— ಹೆಂಡತಿಯನ್ನು ಹೊಡೆದುದು ಇವೆಲ್ಲಕ್ಕೂ ಯಾವ ಆದರ್ಶಕಾರಣವಾಗಿತ್ತೋ ಆ ಆದರ್ಶದ ರೂಪ-ರೇಷೆಗಳನ್ನು ರಾಮೂ ಕ್ಷಣಹೊತ್ತು ವಿಚಾರಿಸುವ. ದೀರ್ಘವಾಗಿ ವಿಚಾರಕ್ಕಿಳಿವ. ಆದರೆ ವಿಚಾರದ ಪ್ರವಾಹವು ಮುಂದೆ ಓಡುತ್ತಿರಲಿಲ್ಲ. ಆದರ್ಶವಿದ್ದರಲ್ಲವೇ ವಿಚಾರ? ಆದರ್ಶದ ತಿಳಿಬೆಳಕು ಕಾಣದ ಆದರ್ಶಜೀವಿಗಳಿಗೆ ಎಲ್ಲಿಯ ವಿಚಾರ? ಕಡೆಗೆ ಬೇಸತ್ತು ಹೊರಗೆಬಂದಾಗ ತಲೆಕಾಯ್ದು ಕೆಂಡವಾಗುತ್ತಿತ್ತು.

ಒಮ್ಮೊಮ್ಮೆ ರಮಾಬಾಯಿಯವರು ಒಮ್ಮೆಲೆ ಕಿರಿಚುತ್ತಿದ್ದರು. "ರಾಮೂ .. ಬೇಡ ಮಗೂ .. ಅನಾಚಾರ .." ಎಂದು. ಮುಕುಂದರಾಯರು ಇದನ್ನು ಕೇಳಿ ಹೌಹಾರಿ ಮಗನ ಕಡೆಗೆ



ನೋಡುತ್ತಿದ್ದರು. ರಾಮೂ ತನಗೆ ಏನೂ ಗೊತ್ತಿಲ್ಲವೆಂಬ ಭಾವಪ್ರಕಟನೆಯ ಮುಖಮಾಡುತ್ತಿದ್ದ. ಆದರೆ ಇಂತಹ ಸನ್ನಿವೇಶಗಳಿಂದ ಅವನ ಎದೆ ಮಾತ್ರ ಸುಟ್ಟು ಕರುಕಾಗತೊಡ ಗಿತು. "ಅಯ್ಯೋ! ನನ್ನ ಮಾತನ್ನು ನಂಬಿ ತಾಯಿ ವೃದ್ಧ ಸಾಯುವಳಲ್ಲಾ"ಎನ್ನಿಸಿದಾಗ, ರಾಮುನಿಗೆ ತಾನು ಕೊಲೆಪಾತಕ ನೆಂದು ವಿಲಕ್ಷಣ ಸಂಕಟವಾಗುತ್ತಿತ್ತು. ಆಗಾಗುವ ಅವನ ಸಂಕಟಕ್ಕೆ ಆಳತೆಯಿಲ್ಲ. ತನ್ನ ಹಿಂದಿನ ಆದರ್ಶವೆಲ್ಲಿ? ತಾಯಿಗಾಗಿ ವಿಶೇಷವನ್ನು ಕೂಡ ತೆಗೆಯಲು ಗೋಳಾಡಿದ ತಾನು, ಇಂದು ಪ್ರತ್ಯಕ್ಷ ತಾಯಿಯ ಕೊಲೆಯನ್ನೇ ಮಾಡುತ್ತಿರುವೆನಲ್ಲಾ? ಇದೆಂತಹ ಆದರ್ಶ! ಆದರ್ಶಸಾಧನೆ! ತಾಯ್ಗುಡಿಕನ ಆದರ್ಶ! ಸುಟ್ಟಿತು ತನ್ನ ಆದರ್ಶ!—ಎಂದು ತಲೆಯಮೇಲೆ ಕೈಹೇರಿಕೊಂಡು ಕುಳಿತುಬಿಡುವನು. ಅಷ್ಟರಲ್ಲಿ ತನ್ನ ವಿಚಾರವನ್ನು ಮಂಡಿಸಿದ ಲೇಖನವನ್ನು ಕೆಂಡು ಹತಾಶನಾಗುವನು. "ಇವು ನನ್ನ ವಿಚಾರ ಗಳು. ಆದರೆ ಆಚಾರ? ಯಾರು ಮೊಖರ್ಜಿರು? ಯಾರು ಕಾಮುಕರು? ಸಮಾಜದ ಮೇಲೆ ಸಿಕ್ಕಂತೆ ಪರಿಹಾಯ್ದು ನನ್ನ ವಿಚಾರಕ್ಕೂ ಆಚಾರಕ್ಕೂ . . . ." ರಾಮೂ ಮುಂದೆ ವಿಚಾರಿಸ ದಾದ. ಕೆಲವು ಹೊತ್ತಿನಮೇಲೆ ಒಮ್ಮೆಲೆ ಉರಿದೆದ್ದು "ಹೌದು, ಹೌದು ಹೀಗೆಯೇ ಮಾಡಬೇಕು.. ಇದೊಮ್ಮೆ ಪಾರಾದರೆ ಸಾಕು."ಎಂದು ಏನೋ ವಿಚಾರಿಸಿ,ನಿರ್ಧಾರದ ತಲೆ ಅಲ್ಲಾಡಿಸುವ ಹೊತ್ತಿಗೆ ತಾಯಿಯ 'ರಾಮೂ, ಬೇಡ ಮಗೂ .. ಅನಾಚಾರ' ಎಂಬ ಮಾತು ನೆನಪಾಗಿ ನೆಲಕ್ಕೆ ಕುಕ್ಕರಿಸುವನು. ರಾಮೂನ ಪರಿಸ್ಥಿತಿ ತೀರ ಹದಗೆಟ್ಟಿತು. ಒಂದೆಡೆಗೆ ತಾಯಿ..ಇನ್ನೊಂದೆಡೆಗೆ ಆದರ್ಶ(?),ಅವನ ಆದರ್ಶ: ಏನಾದರೂ ಆಗಲಿ, ಆದರ್ಶವನ್ನೊಮ್ಮೆ ಕೊನೆಗಾಣಿಸಿ ಕೈಜಾಡಿಸಿಕೊಳ್ಳಬೇಕೆಂದರೆ ನರಳುತ್ತಿರುವ ತಾಯಿ, ರೋಗಿ. ರಾಮೂ ಗತಿಗೆಟ್ಟ. ಮತಿಗೆಟ್ಟ.

ಣ

ಅಮಾವಾಸ್ಯೆಯ ಮಧ್ಯರಾತ್ರಿ. ಕಾರ್ಗತ್ತಲೆ. ಗಗನಮಂಡಲ ವೆಲ್ಲ ಮೆಘಾಚ್ಛಾದಿತವಾಗಿರುವುದರಿಂದ, ಚಿಕ್ಕೆಗಳು ಕೂಡ ಬೆದರಿ ಕಣ್ಣುಸಹ ಪಿಳುಕಿಸಲಾರದೆ ಕುಳಿತಂತೆ ಕಾಣುತ್ತವೆ. ಈ ಹೊತ್ತು ರಮಾಬಾಯಿಯವರ ಪ್ರಕೃತಿ ತೀರ ಹದಗೆಟ್ಟಿದೆ. ರಾಮೂ ಹತಾಶನಾದರೂ ಧೈರ್ಯದ ಆವಿರ್ಭಾವವನ್ನು ನಟಿಸುತ್ತ, ಗಂಭೀರವಾಗಿ ತಾಯಿಯ ಮಗ್ಗುಲಲ್ಲಿಯೇ ಕುಳಿತುಬಿಟ್ಟಿದ್ದಾನೆ. ಇವನಿಷ್ಟು ಗಂಭೀರನಾಗಲು ತಾಯಿಯ ಚಿಂತಾಜನಕ ಪರಿಸ್ಥಿತಿ ಯಷ್ಟೇ ಕಾರಣವಾಗಿರಲಿಲ್ಲ. ಈ ದಿನವೇ ಅವನು ತನ್ನ ಆದರ್ಶ ಸಾಧನೆಯಲ್ಲಿ ಆಡ್ಡಬಂದ ಅಡಚಣೆಯನ್ನು ಬೇರುಸಹಿತ ಕೀಳುವು ದನ್ನು ನಿರ್ಧರಿಸಿದ್ದ. ಅದಕ್ಕಾಗಿಯೇ ಅವನ ಗಂಭೀರಭಾವವು ಇಮ್ಮಡಿಸಿತ್ತು. "ನನಗೆ ತಾಯಿಬೇಕು, ತಾಯಿಗಾಗಿಯೇ ಈ ಕಾರ್ಯವನ್ನು ನೆರವೇರಿಸಬೇಕು" ಇದು ಅವನ ಮುಖ್ಯ ಪಲ್ಲವಿ ಯಾಗಿತ್ತು. ಆದೆಂತೋ ನಾವರಿಯೆವು. ರಮಾಬಾಯಿಯವರಿಗೆ ಸ್ವಲ್ಪ ಜಂಪುಹತ್ತಿತು. ರಾಮುನಿಗೆ ತನ್ನ ಕಾರ್ಯದ ಗಳಿಗೆ. ಬಟ್ಟಲವು ತುಂಬಲು ಸನಿಯಕ್ಕೆ ಬಂದಿತೆಂಬ ಅರಿವಾಯಿತೇನೋ! ಮೆಲ್ಲನೆ ಹೊರಹೊರಟ. ಕಳ್ಳಹೆಜ್ಜೆಯಲ್ಲಿ ಕಾಲಿಕ್ಕಿದ. ಅವನ ಎದೆಬಡಿದುಕೊಳ್ಳುತ್ತಿತ್ತು. ಒಮ್ಮೆಲೆ ತಾಯಿ ಕೆರಿಚಿದಂತಾ ಯಿತು. "ಬೇಡ ಮಗೂ.. ಅನಾಚಾರ"! ಗದಗುಟ್ಟಿ ನಡುಗಿದ. ಹಿಂದಿರುಗಿ ನೋಡಿದ; ತಾಯಿ ಮಲಗಿದ್ದಾಳೆ. ಎಲ್ಲವೂ ತನ್ನ ಹೇಡಿತನವೆಂದು ನಿರ್ಧರಿಸಿ ಹೆಂಡತಿಯ ಕೋಣೆಗೆ ಬಂದ. ಈ ಅನಿರೀಕ್ಷಿತವಾದ ಬರವು ಅವಳನ್ನು ದಿಗಿಲುಗೊಳಿಸಿದರೂ, ಎಂದಿ ನಂತೆ ಆಕೆ ಮುಗುಳುನಗೆ ಬೀರಿದಳು. ರಾಮೂ ಮೆಲ್ಲಗೆ ನುಡಿದ; "ನಾನು ಹೇಳುವಂತೆ ಕೇಳುತ್ತೀಯಾ?"

"ನಿಮ್ಮ ಯಾವ ಮಾತನ್ನು ಎತಾರಿದ್ದೇನೆ?" ಇದೇನೊ ಹೊಸ ಸಂಕಟವೆಂದು ಬೆದರಿ ಮೆಲುದನಿಯಲ್ಲಿ ಉತ್ಪ್ವಾಸವನ್ನು ಬೆರಸಿ ನುಡಿದಳು ರಾಮೂನ ಮಡದಿ.

ರಾಮೂನ ಉತ್ಸಾಹ ಇಮ್ಮಡಿಸಿತು. ಅವನು ಒಂದೇ ನೆಗೆತ ದಿಂದ ತನ್ನ ಕಪಾಟಿನ ಬಳಿಗೆ ಹೋಗಿ ಬಾಗಿಲನ್ನು ತೆರೆದ. ತನ್ನ ಆದರ್ಶಸಾಧನದ ಸಾಧನವಾದ ಚಿಕ್ಕಪೆಟ್ಟಿಗೆಯನ್ನು ಹೊರದೆಗೆದ. ಇನ್ನೇನು 'ಕ್ಷಣದಲ್ಲಿ ಆದರ್ಶವನ್ನು ಸಾಧಿಸಿಬಿಡುತ್ತೇನೆ' ಎನ್ನುವ ಗೆಲುವಿನ ಮುಗುಳು, ಮೊಗದಲ್ಲಿ ಮೂಡಿತು. ಹೆಂಡತಿಗೆ ಇವನು ಮಾಡುತ್ತಿರುವ ಮಹತ್ಕಾರ್ಯದ ಕಲ್ಪನೆ ಕೂಡ ಇರಲಿಲ್ಲ. ಇತ್ತಿತ್ತಲಾಗಿ ಮಾರ್ಪಡುತ್ತಿರುವ ಗಂಡನ ವಿಲಕ್ಷಣ ಆಚರಣೆಯ ಇನ್ನೊಂದು ರೀತಿಯೇ ಇದಾಗಿರಬಹುದೆಂದು, ಬಾಯಿಮುಚ್ಚಿ ಕಣ್ಣುತೆಗೆದು ನೋಡುತ್ತಿದ್ದಳು.

'ಖಟ್ –ಕಕ ಖಡಲ್ ಕಕ ಖಡಲ್–ಲ್–ಲ್ಕಕಕಕಕ.....'
ಗದ್ದರಿಸಿತು. ರಾಮೂ ಗಡಗುಟ್ಟಿನಡುಗಿ ಹೆಂಡತಿಗೆ 'ಕಿಟಕಿಯನ್ನು ಹಾಕು' ಎಂದ. ರಾಮೂ ಎಷ್ಟಾದರೂ ಗಂಡು ತಾನೆ? ಆ ಸಣ್ಣ ಪೆಟ್ಟಿಗೆಯಲ್ಲಿ ಕೈಹಾಕಿ ರಾಮೂ ಒಂದು ಕಾಚಿನ ಕುಪ್ಪಿಯನ್ನು ಕಡೆಗೆ ತೆಗೆದ. ಮುಂದಪ್ರಕಾಶದಲ್ಲಿಯೂ ವಿನುಗಿತು. 'ಖಟ್.. ಖಡಲ್..ಖಡಲ್ಕಕಕಕ'.... 'ರಾಮೂ.....ಅಯ್ಯೋ ೀ ೀ ೀ ೀ ೀ ಕಕಕ.....' ಛಟ್ ಎಂದು ಕುಪ್ಪೆ ಕುಕ್ಕರಿಸಿತು. ರಾಮೂ, ಒಳಕ್ಕೆ ಧಾವಿಸಿದ 'ಅವ್ವಾ! ಅವ್ವಾ!' ಎನ್ನುತ್ತ ರಾಮೂ ಮಂಜವಿಂದ ಕೆಳಗುರುಳಿದ ತಾಯಿಯನ್ನು ಮೇಲಕ್ಕೆ ಮಲಗಿಸುತ್ತ ಕೂಗಿ ಕರೆಯತೊಡಗಿದ. ಮುಕುಂದರಾಯರು ಓಡಿಬಂದರು. ರಾಮೂ ಸಂಕಟದ ಸ್ವರದಲ್ಲಿ 'ಅವ್ವಾ' ಎಂದ. ಅವನ ಎದೆ ಡಬಡುಬ ಎನ್ನುತ್ತಿತ್ತು. ಮೋರೆ ಹೀರಿಹೋಗಿತ್ತು. 'ಅವ್ವಾ! ಅವ್ವಾ! ಏ ಅವ್ವಾ!' ರಾಮೂ ಮುಕುಂದರಾಯರ ಕಡೆಗೆ ನೋಡಿದ. ಮುಕುಂದರಾಯರು ರಾಮೂನ ಕಡೆಗೆ ನೋಡಿದರು.

ನಮ್ಮ ಪ್ರಶ್ನೆ

ಇಂದಿನ ಕಾಂಗ್ರೆಸ್ಸಿನ ರಾಜಕಾರ್ಯದಲ್ಲಿ ದಿನಕ್ಕೊಂದು ವಿಚಾರ ಮುಂದೆ ಬರುವುದನ್ನು ಕಾಣುತ್ತೇವೆ. ನಿನ್ನೆ ಒಂದು ತತ್ತ್ವವನ್ನು ಒಪ್ಪಿದವರು ಇಂದು ಮತ್ತೊಂದು ತತ್ತ್ವಕ್ಕೆ ತಕ್ಕೆ ಬೀಳುತ್ತಲಿದ್ದಾರೆ. ಇದೇನು ಬುದ್ಧಿವಂತಿಕೆಯ ಲಕ್ಷಣವೊ, ಮನಶ್ಚಾಪಲ್ಯದ ಲಕ್ಷಣವೊ?

★

ಪಂಡಿತ ಜಾರಾನಾಥರು

ನ್ನೆಮ್ಮ ರಾಷ್ಟ್ರೀಯ ಚಳವಳಿಗಳಲ್ಲಿ ಸದ್ಯ ಅಗ್ರಗಣ್ಯರು ಎಂದರೆ ಜನಸಂಖ್ಯೆಗೂ ಏನಾದರೂ ಒಂದು ಸಕಾರಣ ಸಂಬಂಧ ಬೇಕೋ ಬೇಡವೋ? ಜಿನ್ನಾ ಸಾಹೇಬರಿಗೆ ಆ ಒಂದೂ ವಿಚಾರ ಬೇಕಾಗಿಲ್ಲ! ಶ್ರೀ. ಸಾವರಕರ, ಶ್ರೀ. ಸುಭಾಷ ಬಾಬು ಮತ್ತು ಶ್ರೀ. ಎಮ್. ಎನ್. ರಾಯ್. ಇವರಲ್ಲಿ ಕೊನೆಯ ಇಬ್ಬರಿಗೆ ಬೇಕಾದಷ್ಟು ಪುಷ್ಟಿಯಿದೆ, ಸಾಕಾಗುವಷ್ಟು ಹಿಂಬಾಲಕರಿಲ್ಲ. ಮೊದಲನೆಯ ಮೂವರಿಗೆ ತುಂಬ ಅನುಯಾಯಿಗಳು ಇದ್ದಾರೆ; ಆದರ್ಶ ಒಂದೇ ಇಲ್ಲ. ಜಿನ್ನಾ ಅವರಿಗೂ ವೈಸ್‌ರಾಯರಿಗೂ ನಡೆದ ಸಕ್ರಗಳನ್ನು ಆಗಲೇ ಅನೇಕರು ಓದಿರಬಹುದು. ಜಿನ್ನಾ ಅವರಿಗೆ ಬೇಕಾದ್ದು ಒಂದೇ. ವಾಯ್ಸ್‌ರೊಯರು ಬಿಳಿಯಿಸಲಿರುವ ಕೌನ್ಸಿಲ್‌ನಲ್ಲಿ ಅರ್ಧಕ್ಕರ್ಧದ ಜಾಗೆಗಳನ್ನು ಮುಸಲ್ಮಾನರಿಗೇ ಕೊಡಬೇಕು ಎಂಬುದೇ ಸರಕಾರದ-ಪತ್ರಗಳ ಸಾರಾಂಶ! ಅದರ ತತ್ತ್ವವೇನು ಎಂಬುದರ ಕಡೆಗೆ ಅವರ ಗಮನವಿಲ್ಲ. ಮುಸಲ್ಮಾನರು ದೇಶದ ಜನಸಂಖ್ಯೆಯಲ್ಲಿ ಅರ್ಧದಷ್ಟು ಇದ್ದಾರೋ? ಸೀಖ್, ಪಾರಸಿ, ಕ್ರೈಸ್ತ ಮುಂತಾದ ಅಲ್ಪಸಂಖ್ಯಾತರಿಗೆ ದಿಕ್ಕೇ ಇಲ್ಲವೋ? ಇವರಿಗೂ ಯೋಗ್ಯ ಪ್ರಾತಿನಿಧ್ಯ ಬೇಡವೋ? ಮುಸಲ್ಮಾನರ ಪ್ರಾತಿನಿಧ್ಯಕ್ಕೂ ಅವರ ಒಟ್ಟು ಜನಸಂಖ್ಯೆಗೂ ಏನಾದರೂ ಒಂದು ಸಕಾರಣ ಸಂಬಂಧ ಬೇಕೋ ಬೇಡವೋ? ಜಿನ್ನಾ ಸಾಹೇಬರಿಗೆ ಆ ಒಂದೂ ವಿಚಾರ ಬೇಕಾಗಿಲ್ಲ!

ಯುದ್ಧ ಮತ್ತು ಅಧ್ಯಾತ್ಮ

ಬಾನಿನಿಂದ ಬಾಂಬಿನ ಮಳೆ ಸುರಿದು, ಮುಂದಿದ್ದ ಬೇವರು ಮುಗಿಲ ಕಡೆಗೆ ನಡೆದಿದ್ದರೂ ಭಟ್ಟರ ಧ್ಯಾನ-ಜಪಗಳಿಗೆ ಚ್ಯುತಿಯೆ ಇಲ್ಲ! ಧನ್ಯ, ಭಾರತೀಯರ ಆಧ್ಯಾತ್ಮತೇಜವೆ!

ಅವರಂತೆಯೇ ವೈಸ್‌ರೊಯರು ಕೇಳಿದರೇನಾದೀತು? ಆಗುವುದು ಒಂದು. ಯುರೋಪಿಯನ್—ಮುನ್ಸೀಂ ರಾಜ್ಯಾಧಿಕಾರಿವರ್ಗ; ಮತ್ತು ಹಿಂದೆ ಅಕ್ಬರನ ಕಾಲದಿಂದ ಈಗಿನವರೆಗೆ ದರ್ಬಾರ್ ನಡೆಯಿಸಿದ ಎರಡು ಜನಾಂಗಗಳ ಅಧಿಕಾರದ ಪುನರ್ಜನ್ಮ ಪುನರುಜ್ಜೀವನ ಇನ್ನೊಂದು. ಒಬ್ಬರ ಗೃಹ, ಘಟ ಇರುವುದು ಇಂಡಿಯಾದಲ್ಲಾದರೂ ಮತ, ಮಂದಿರಗಳು ಮಕ್ಕಾದಲ್ಲಿವೆ! ಇನ್ನೊಬ್ಬರ ಡೌಲು ದರಬಾರು, ಕೂಳು-ಕಾಳಿ ಇಲ್ಲಿಯೇ ಆದರೂ, ಅವರ ವಿರಾಮಸ್ಥಾನ ಇಂಗ್ಲಂಡ್‌ನಲ್ಲಿದೆ! ಇಬ್ಬರ ಕಣ್ಣು ಒಂದೇ ಇಲ್ಲಿರುವುದು, ಇನ್ನೊಂದಿದೆ ದೇಶಾಂತರದಲ್ಲಿ! ಇಬ್ಬರ ಕೈಕಾಲುಗಳು ಮಾತ್ರ ಇಲ್ಲಿ, ಅವರ ಶಾಶ್ವತ ಆಕರ್ಷಣಗಳು ಮಾತ್ರ ಇಲ್ಲಿಲ್ಲ, ಬಹುದೂರದಲ್ಲಿವೆ! ವೈಸ್‌ರೊಯ್ ಒಡಲ ಬಗ್ಗಿದರೂ ಅಂತಹ ಒಪ್ಪಂದಕ್ಕೆಳೆಯಲು ಇಷ್ಟೇ ಅಲ್ಲ—ಸಮ್ಮೇಳನಗಿಂತಲೂ ವೈಟ್ ಹೌಲ್‌ನಲ್ಲಿ

ವೈ. ರಾ. ಸಾ. ಭೀಮರಾವ ಕಲಕೋಟಿ,
ರಿಟಾಯರ್ಡ್ ಇನ್ಸ್‌ಪೆಕ್ಟರ್ ಇವರು ತಯಾರಿಸಿದ

मराठी पोलीस गाईड

सुधारून वाढविलेली मराठी आवृत्ति

★

डिस्ट्रिक्ट, रेल्वे पोलीस, अबकारी पोलीस व
पोलीस पाटील यांना

● अत्यंत उपयुक्त ●

रॉयल अष्टपत्री पृष्ठे ४२९.

किंमत फक्त २॥ रुपये.

★

कमीत्तीन हेरताना व्ही. पी. मुत्तु टी. ख. प्रत्येक.

पुस्तक मिळण्याचे स्थळ:
मॅनेजर,
कर्नाटक प्रिंटिंग वर्क्स, धारवाड.

ಅಡ್ಡಿ ಹೆಚ್ಚಾಯಿತು ಜಿನ್ನಾ ಸಾಹೇಬರಿಗೆ. ಇಂತಹ ಯುದ್ಧದ ಅವಸರಾವಶ್ಯಕತೆಗಳ ರಭಸದಲ್ಲಿ, ಬಹುಸಂಖ್ಯಾಕ ಹಿಂದುಗಳನ್ನು ಗಣ್ಯಕ್ಕೆ ತಾರದಿರುವುದು ಅಷ್ಟು ಸುಲಭವಲ್ಲವಷ್ಟೆ?

ಅಷ್ಟೇ ಅಲ್ಲ. ಇದಿರಾಳಾಗಿ ಸಾವರಕರರು ಇದ್ದಾರೆ. ಅವರ ಹಿಂದೂ ಮಹಾಸಭೆಯಿದೆ. ಮುಸ್ಲಿಮ್‌ಲೀಗಿನ ಸಹಜ ಪ್ರತಿಯೋಗವೇ ಹಿಂದೂ ಮಹಾಸಭೆ. ಮುಸ್ಲೀಮರೊಡನೆ ಮೊದಲಿನಿಂದ ಗಾಂಧಿಜಿ ಮತ್ತು ಕೊಂಗ್ರೆಸ್ ಪಡಾಡುತ್ತ ಬಂದ ಶಿಥಿಲಸಂಧಾನಗಳ ಪ್ರತೀಕಾರ ಸ್ವರೂಪವೂ ಅದೇ! ಗಾಂಧಿಜಿ ಅವರಿಗೆ ಬಗ್ಗುತ್ತ ಬಂದಿರುವುದೇ ಬ್ರಿಟಿಷ್ ಮತ್ತು ಇಂಡಿಯಾ ಸರಕಾರಕ್ಕೂ ಮೇಲ್ಬಜ್ಜಾಯಾಯಿತೆಂದು ತೋರುತ್ತದೆ. ಬರುಬರುತ್ತ ಇವರಿಗೆ ಬಗ್ಗುವ ರೂಢಿಯಾದಂತೆಯೇ ಮುಸ್ಲಿಮ್‌ಲೀಗಿಗೆ ಇವರನ್ನು ಬಗ್ಗಿಸುವ ರೂಢಿಯಾಗಿ ಬಿಟ್ಟಿದೆ! ಹೀಗಿದೆ ರಾಜಕೀಯ ಕಾರ್ಯರಂಗ. ಅದರಲ್ಲಿ ಸಮಾಸಸ್ಕಂಧತೆ, ಸ್ನೇಹಸಂಯೋಜನೆಗಳು ಅಪರೂಪವಾಗುತ್ತಲೇ ಬಂದಿವೆ.

ಹಿಂದೂ ಮಹಾಸಭೆಯಲ್ಲಿ ಕೆಲವು ಲೋಪಗಳಿರಬಹುದು; ಅದರೂ ಅದೂ ಇಲ್ಲವಾದರೆ ನಮ್ಮಲ್ಲಿ ಎರಡೇ ದೊಡ್ಡ ಪಾರ್ಟಿಗಳಿರುತ್ತಿದ್ದುವು— ಬಗ್ಗುವ ಕೊಂಗ್ರೆಸ್ ಒಂದು, ಬಗ್ಗಿಸುವ ಮುಸ್ಲಿಮ್‌ಲೀಗ್ ಇನ್ನೊಂದು. ನಿಜಸ್ಥಿತಿಯು ಹೀಗಿರುವಾಗ ಇಂದು ಹಿಂದೂ ಮಹಾಸಭೆಯು ಇಬ್ಬರಿಗೂ ನಿರೋಧಕವಾಗಿ ಇರುವ ಒಂದು ಶಕ್ತಿಯಾಗಿ ನಿಂತಿದೆಯೆನ್ನಬೇಕಾಗುತ್ತದಲ್ಲವೆ?

* * *

ನಮ್ಮದೇಶಕ್ಕೆ ಸ್ವಾತಂತ್ರ್ಯ ಬರಬೇಕಾದರೆ ಬ್ರಿಟಿಷರು ಮೊದಲು ಅವರ ಯುದ್ಧಕ್ಕೆ ಸಹಾಯಮಾಡಬೇಕೆನ್ನುತ್ತಾರೆ. ಈ ಮೂವರಲ್ಲಿ ಇಬ್ಬರು ತಮ್ಮ ತಮ್ಮ ಕೆಲವು ಶರತುಗಳ ಮೇಲೆ ಸಹಾಯಮಾಡಲಿಕ್ಕೆ ಸಿದ್ಧರಾಗಿದ್ದರೆ ಆ ಇಬ್ಬರು, ಜಿನ್ನಾ ಮತ್ತು ಸಾವರಕರರು. ಆದರೆ ಗಾಂಧಿಯವರು ಮಾತ್ರ ಒಂದು ಒಗಟನ್ನು ಹುಟ್ಟಿಸಿಬಿಟ್ಟಿದ್ದಾರೆ! ಮೊನ್ನೆ ಮಾತನಾಡಿದಾಗ, ಆಜೆ ಮೊನ್ನೆಯ ಎ. ಆಯ್. ಸಿ. ಸಿ.ಯ "ಪುಣೆಯ ಠರಾವಿನ" ವಿಷಯ ಅವರು ಹೀಗೆಂದರು: "ಕಳೆದ ಇಪ್ಪತ್ತು ವರ್ಷಗಳ ಕೊಂಗ್ರೆಸ್ಸಿನ ನಿಷೇಧ" ಎನ್ನುತ್ತ ಅದರಲ್ಲಿ ಕೊಂಗ್ರೆಸ್ ಮತಕ್ಕೆ ವಿರುದ್ಧವಾದ "ವಾಯೊಲೆನ್ಸ್" ಇದೆ ಎಂದರು. ಆದರೆ ೧೯೨೮ರಲ್ಲಿ ಕೊಂಗ್ರೆಸ್ ಸರಕಾರಗಳನ್ನು ರಚಿಸಿದಾಗ ಅವರೇ "ಒಂದು ರಾಷ್ಟ್ರೀಯ ಸರಕಾರವಿದ್ದಿದ್ದರೆ, ನಾನದರಲ್ಲಿ ಭಾಗಿಯಾಗದೆ ಹೊರಗಿದ್ದರೂ ಮಿಲಿಟರಿ ತರಬೇತಿಗೆ ವೋಟ್ ಕೊಡುವುದು ನನ್ನ ಕರ್ತವ್ಯವೇ ಆಗುವುದು....." ಎಂದಿದ್ದಾರೆ. "If there was a national Government, whilst I should not take any direct part in any way, I can conceive occasions when it would be my duty to vote for the military training of those who wish to take it. For I know that all its members do not believe in non-violence to the extent I do." —*Gandhiji*

ಈಗ ಪುಣೆಯ ಠರಾವು ಹಾಗೆಯೇ ನಿಂತಿದ್ದರೆ ಅದೊಂದು "ರಾಷ್ಟ್ರೀಯ ವಿಪತ್ತು (national disaster)' ಆಗುತ್ತಿತ್ತು ಎನ್ನುತ್ತಾರೆ. ಅವರ ಪಟ್ಟಶಿಷ್ಯ ರಾಜಗೋಪಾಲಾಚಾರ್ಯರೋ ಯುದ್ಧಸಹಾಯಕ್ಕೆ ದೊಡ್ಡ 'ವೋಟ್' ಕೊಡುವವರೇ! ಮೊನ್ನೆಯ ಗಾಂಧಿಯವರ ಮಾತು ಕೇಳಿದ ಮೇಲಕ್ಕೂ ಅವರ ವೋಟ್ ಏನೋ ಹಾಗೇ ಕಾಯಮ್ ನಿಂತಿದೆ. ಆದರೆ ಇನ್ನೂ ಅನೇಕ ಕೊಂಗ್ರೆಸ್ಸಿನ ಮುಂದಾಳುಗಳು ಮಹಾತ್ಮರ ಈಗಿನ ತೀರ್ಮಾನಕ್ಕೆ 'ಭಳಿರೆ' ಎನ್ನುತ್ತಾರೆ. ಆದರೆ ಇವರಲ್ಲಿ ಮಂತ್ರಿಗಳಾಗಿದ್ದ ಅನೇಕರು, ತನ್ನ ಮಂತ್ರಿತನಕ್ಕೆ ರಾಜೀನಾಮೆ ಕೊಡುವವರೆಗೆ ಈ ಯುದ್ಧವು "ನಮ್ಮಯುದ್ಧ" "ಧರ್ಮಯುದ್ಧ" ಮುಂತಾದ ಅಭಿಮಾನದ, ಅನುಕಂಪದ ಮಾತನಾಡುತ್ತಿದ್ದರು.

ಈಗ ಅವರಲ್ಲಿ ಅಷ್ಟು ವೇಗದಿಂದ ಬಂದ ಬದಲಾವಣೆ ಜಮಾತ್ಕಾರವೇ ಆಗಿದೆ! ಇದೇನು, ನಿಜವಾದ ಮಾನಸಾಂತರವೋ ಬರಿಯ ಪ್ರತಿಧ್ವನಿಯೊ? ಅದು ಹೇಗೂ ಇರಲಿ, ಜನಸಾಮಾನ್ಯಳ ಕೊಂಗ್ರೆಸ್ಸಿನ ಸದ್ಯದ ಸ್ವರಾಜ್ಯಸಾಧನ ವಿಧಿಯನ್ನು ಹೇಗೆ.. ಏನೆಂದು ತಿಳಿದುಕೊಳ್ಳಬೇಕು?

ಪುಳ್ಳಂಗಾಯುಂಡೆ

ಶ್ರೀ ಕೆ. ವಿ. ರಾಘವಾಚಾರ್ ಎಂ. ಎ.

★

ನಾಮಪದಗಳ ಮೂಲಗಳನ್ನು ಹುಡುಕುತ್ತ ಹೋಗುವವರಿಗೆ ಎಷ್ಟೋ ಸಲ ಆ ಪದಗಳ ಹಿಂದೆ ಭಾವಕಾವ್ಯವೊಂದಿದ್ದುದು ಕಂಡು ಬರುತ್ತದೆ; ಇನ್ನೆಷ್ಟೋ ಸಲ ವಸ್ತುವಿನ ಅಂತರ್ಚಿತ್ರವನ್ನು ಮನದೆದುರು ಮೂಡಿಸುವಂತಹ ಕಣಸು ಕಾಣುತ್ತದೆ; ಇನ್ನೆಷ್ಟೋ ಸಲ ನಮ್ಮವರ ರಸಿಕತನ ವ್ಯಕ್ತವಾಗುತ್ತದೆ. ಇದನ್ನೆಲ್ಲ ಈ 'ಪುಳ್ಳಂಗಾಯುಂಡೆ' ಯಲ್ಲಿ ಕಾಣಬಹುದು.

★

'ಹೆಸರಿನಲ್ಲಿ ಏನಿದೆ?' ಎಂಬ ಪ್ರಶ್ನೆಯನ್ನು ಹಿಂದಿನವರು ಕೇಳಿದ್ದಾರೆ; ಇಂದಿನವರು ಕೇಳುತ್ತಾರೆ; ಮುಂದಿನವರೂ ಕೇಳಿಯಾರು. 'ವಸ್ತು ಚೆನ್ನಾಗಿದ್ದರೆ ಸರಿ, ಹೆಸರು ಕಟ್ಟಿಕೊಂಡೇನು?' ಎಂದು ಕೆಲವರು. 'ಒಳ್ಳೆಯ ವಸ್ತುವಿಗೆ ಒಳ್ಳೆಯ ಹೆಸರೂ ಇದ್ದರೆ ಮತ್ತೂ ಚೆನ್ನ' ಎಂದು ಕೆಲವರು. ಒಳ್ಳೆಯ ಹೆಸರು ಎಂದರೇನು? ವಿಕ್ಕ ಕೆಲವು ಒಳ್ಳೆಯವಂತೆ ಈ ಒಳ್ಳೆಯದನ್ನೂ ಕುರಿತೇಟಾಗಿ ಹೇಳುವುದು ಕಷ್ಟ. ಕೇಳಿದೊಡನೆ ಕಿವಿ ಕೊಸರಿ ಬಗೆಯರಳುವ ಹೆಸರನ್ನು ಒಳ್ಳೆಯದೆನ್ನುವದೆ? ಹೇಳಿದೊಡನೆ ಅರ್ಥ ಎಶದವಾಗಿ ಭಾವದೀಪಸನವಾಗಿ, ಹೇಳಿದ್ದು ಕಣ್ಣಿಗೆ ಕಟ್ಟಿದಂತೆ ಕಣಿಡು ನಿಲ್ಲುವ ಹೆಸರನ್ನು ಒಳ್ಳೆಯದೆನ್ನುವದೆ? ರಾಮ–ಕೃಷ್ಣರ ಹೆಸರು ಒಳ್ಳೆಯದು, ರಾವಣ–ಜರಾಸಂಧರ ಹೆಸರು ಕೆಟ್ಟದೆಂದೆ? ಕೃಷ್ಣ–ಜರಾಸಂಧ ಈ ಹೆಸರುಗಳ ಸುತ್ತು ಕಟ್ಟಿಕೊಂಡಿರುವ ಅರ್ಥಾವರಣ ಭಾವಾವರಣಗಳ ಅರಿವೇ ಇಲ್ಲದೆ, ವಸ್ತುವನ್ನು ಮೊದಲ ಸಲ ಕೇಳುವ ಕಿವಿಗೆ ಜರಾಸಂಧ ಹೆಸರೇ ಹೆಚ್ಚು ಸೊಗಸೀತೇನೊ! ತನ್ನ ಒಲವನ್ನು ಸೂರೆಗೊಂಡ ನಲ್ಲೆಯ ಹೆಸರು 'ಮುಳ್ಳಿ' ಎಂದಿದ್ದರೆ, ಮುಳ್ಳಿಯಷ್ಟು ಇಂಪಾದ ಸವಿಯಾದ ಕೆಲವಾದ ಹೆಸರು ಮತ್ತೆ ಯಾವುದೂ ಇರದು..ಸಲ್ಲಸ ಕಿವಿಗೆ. ಸಲ್ಲಾಪವುದಕ್ಕೆ ಮುನ್ನವೇ ಹೆಸರಿನ ಚಿಂತೆ ಏನಾದರೂ ಬಂದರೆ, ಮುಳ್ಳಿ ಕಾಮಲತೆಯೊ ಕಾಂಚನಮಾಲೆಯೊ ಅದರೂ ಆಗ ಸಾಹುದು. ಅಂತೂ, ಹೆಸರುಗಳ ಸೊಗಸೇ ಸೊಗಸು.

ಹೆಸರುಗಳಲ್ಲಿ ಕೆಲವು ಬುದ್ಧಿಪ್ರೇರಿತವಾದುವು. ಕೆಲವು ಭಾವಪ್ರೇರಿತವಾದುವು. ಮಳೆಹೊತ್ತು ನಡುಬಾನಲ್ಲಿ ತೂಗುವ ಬಾಗಿದ ಬಣ್ಣದ ಪಟ್ಟಿಯನ್ನು ಬುದ್ಧಿ ಮಳೆಬಿಲ್ಲೆಂದರೆ, ಭಾವ ಕಾಮನ ಬಿಲ್ಲೆನ್ನುತ್ತದೆ. ಮತ್ತೆ, ಅರ್ಥ–ಭಾವಗಳು ಸೂಸಿ ಸೊಗಸುವ ಹೆಸರುಗಳು ಕೆಲವು; ಹೆಸರ ಸೊಗಸಿಂದ ಸೂಸುವ ಅರ್ಥ–ಭಾವಗಳು ಕೆಲವು. ತಮಿಳಿನಲ್ಲಿ 'ಸತ್ಯ' ಎನ್ನುವುದಕ್ಕೆ ಮೂರು ಮಾತು ಬಳಕೆಯುಂಟು: **ಉ ಣ್ ಮೈ, ವಾ ಯ್ ಮೈ, ಮೆಯ್ ಮೈ.** (ಉಳ್=ಒಳಗು, ಮನಸ್ಸು; ವಾಯ್=ಬಾಯಿ, ವಕ್ತ್ರ; ಮೆಯ್=ಮೈ, ಕಾಯ; –ಮೈ = –ಮೆ, –ತನ, –ತ್ವ, –ಧರ್ಮ). ಸತ್ಯ ಎಂದರೆ: ಮನಸ್ಸಿನ ತನ, ಧರ್ಮ; ಬಾಯತನ, ಧರ್ಮ; ಮೈಯತನ, ಧರ್ಮ. 'ಕಾಯಾ ವಾಚಾ ಮನಸಾ' ಎಂದು ಮಾತೆತ್ತಿದ್ದರೆ ಹೇಳುತ್ತೇವೆ. (ಸಂಸ್ಕೃತ ಪಂಡಿತರು 'ಏನು ಕಾಯಾ? ಚವನ ತಲಕಾಯಿ! ಕಾಯೇನ ಆಗಬೇಡವೆ? ಹಾಳು ಕನ್ನಡಿಗನ ಮನೆ ಕಾಯಾ' ಎಂದು ಅಕ್ಷೇಪಿಸುತ್ತಾರೆ. ಇರಲಿ). ಬಗೆಯುವುದು, ಆಡುವುದು, ಮಾಡುವುದು–ಮೂರೂ ಒಂದೇ ಆಗಿರಬೇಕು. ಸತ್ಯವನ್ನೇ ನೆನೆಯಬೇಕು, ಸತ್ಯವನ್ನೇ ನುಡಿಯಬೇಕು, ಸತ್ಯವನ್ನೇ ನೆಗಳಬೇಕು. ಇದೇ ಸತ್ಯವಂತರ ಲಕ್ಷಣ, ತ್ರಿಕರಣಶುದ್ಧಿ. ಈ ಭಾವಗಳೆಲ್ಲ ಉಣ್ಮೈ, ವಾಯ್ಮೈ, ಮೆಯ್ಮೈ ಎಂಬ ಮಾತುಗಳಲ್ಲಿ ತುಂಬಿವೆ. ತಮಿಳುಕಿವಿಗೆ ಈ ಮಾತುಗಳು ಜೇನುಮಳೆ ಕೊಂಡಂತೆ. ಇಲ್ಲಿ, ಹೆಸರಿನ ಸೊಗಸು ಭಾವದ ಸೊಗಸಿನಿಂದ. ನೆಲ್ಲು, ರಾಗಿ, ಜೋಳ ಮೊದಲಾದ ಕಾಳುಗಳನ್ನು ಬೆಂಕಿಯ ಮೇಲಿಟ್ಟರೆ ಅರಳಾಗುತ್ತದೆ. ಪಟಕವನ್ನು ಬೆಂಕಿಯಲ್ಲಿಟ್ಟು ಅರಳು ಮಾಡುತ್ತಾರೆ. ಇಲ್ಲಿ, 'ಅರಳು' ಎಂದರೇನು? ಮೊಗ್ಗು ಅರಳುವುದನ್ನು ಬಲ್ಲೆವು. ಅರಳಿದ ಮೊಗ್ಗನ್ನು–ಹೂವನ್ನು–**ಅರಲ್ ಅಲರ್** ಎನ್ನುತ್ತೇವೆ. ಗುಟ್ಟಾಗಿ ಗಟ್ಟಿಯಾಗಿ ಒಳಗೆ ಅಡಗಿದ್ದ ಚೈತನ್ಯ, ಮೆದುವಾಗಿ ತೆರೆದು ಹೊರಸೂಸುವುದೇ ಅರಳುವುದು; ಆ ಸೂಸೇ **ಅರಳು.** ಬತ್ತದರಳು, ರಾಗಿಯರಳು, ಜೋಳದರಳು ಎನ್ನುವಾಗ ಸಿಪ್ಪೆಯೊಳಗೆ ಗಟ್ಟಿ ಕಾಳಾಗಿ ಅಡಗಿದ್ದ ಸತ್ತ್ವ, ಕಾವಿನ ಸಂಸ್ಕಾರದಿಂದ ಮೃದುಗೊಂಡು ಬಾಯಿ ತೆರೆದು ಬೆಳ್ನಗೆ ಸೂಸುವ ಪ್ರಫುಲ್ಲಭಾವನೆ ನನಗೆ ಆಗುತ್ತದೆ. ಇಲ್ಲಿ, ಹೆಸರ ಸೊಗಸಿಂದ ಭಾವಸ್ಫೂರ್ತಿ.

ಒಳ್ಳೆಯ ಹೆಸರು ಇರಬೇಕೆನ್ನುವವರೂ 'ಯಾವ ಹೆಸರಾದರೇನಂತೆ–ಗುರುತಿಸುವುದಕ್ಕೆ' ಎನ್ನುವವರೂ ಒಂದೇಸಮನೆ ತಿಣುಕುತ್ತಾರೆ: ಹುಟ್ಟಿದ ಮಗುವಿಗೆ ಏನು ನಾಮಕರಣ ಮಾಡಬೇಕು? ಒರೆದ ಪುಸ್ತಕಕ್ಕೆ ಯಾವ ಹೆಸರಿಡಬೇಕು? ಹೊಸದಾಗಿ ಕಂಡು ಹಿಡಿದ ವಿಷಯವನ್ನೊ ಯಂತ್ರವನ್ನೊ ಏನೆಂದು ಕರೆಯಬೇಕು? ಕಲ್ಪಿಸಿದ ಪಾತ್ರಗಳಿಗೆ, ಕಟ್ಟಿದ ಮನೆಗೆ ಯಾವ ಹೆಸರು ಚೆನ್ನ? ತಮ್ಮ ಮನೆಯ ಹಸು, ಕುದುರೆ, ಆಡು, ಕುರಿ, ಕತ್ತೆ, ಕೋಳಿ, ನಾಯಿ, ಗಿಣಿ ಇವಕ್ಕೆ ಯಾವ ಹೆಸರು ಮುದ್ದು? ಈ ಯೋಚನೆಗಳು ಒಮ್ಮೆಯಾದರೂ ಸುಳಿಯದ ತಲೆಯಿಲ್ಲ. ಒಳ್ಳೆಯ ಹೆಸರ ಸೂಚನೆಗಾಗಿ ಬಹುಮಾನ ಪ್ರಕಟನೆಗಳು ಎಷ್ಟು ಬಂದಿಲ್ಲ ಪತ್ರಿಕೆಗಳಲ್ಲಿ! ಈ ವಿಚಾರದಲ್ಲಿ ಔದಾಸೀನ್ಯ ಸಾಧ್ಯವೇ ಇಲ್ಲ.

ವೈ. ರಾ. ಸಾ. ಭೀಮರಾವ ಕಲಕೋಟಿ,
ರಿಟಾಯರ್ಡ್ ಇನ್ಸ್‌ಪೆಕ್ಟರ್ ಇವರು ತಯಾರಿಸಿದ

ಮರಾಠೀ ಪೋಲೀಸ ಗೈಡ

ಸುಧಾರೂನ ವಾಡವಿಲೇಲೀ ಮರಾಠೀ ಆವೃತ್ತಿ

★

ಡಿಸ್ಟ್ರಿಕ್ಟ, ರೇಲ್ವೆ ಪೋಲೀಸ, ಅಬಕಾರೀ ಪೋಲೀಸ ವ
ಪೋಲೀಸ ಪಾಟೀಲ ಯಾಂಸಾ

ಅತ್ಯಂತ ಉಪಯುಕ್ತ

ರೌಯಲ ಆಕ್ಟಪೇಪರ ಪೃಷ್ಠೆ ೪೨೯.

ಕಿಂಮತ ಫಕ್ತ ೨॥ ರುಪಯೇ.

★

ಕಿಮ್ಮತ್ತಿನ ಹೊರತಾಗಿ ವ್ಹಿ. ಪಿ. ಮತ್ತು ಟಿ. ಖ. ಪ್ರತ್ಯೇಕ.

ಪುಸ್ತಕ ಸಿಗತಕ್ಕ ಸ್ಥಳ:
ಮ್ಯಾನೇಜರ್,
ಕರ್ನಾಟಕ ಪ್ರಿಂಟಿಂಗ್ ವರ್ಕ್ಸ, ಧಾರವಾಡ.

ಅಡ್ಡಿ ಹೆಚ್ಚಾಯಿತು ಜಿನ್ನಾಸಾಹೇಬರಿಗೆ. ಇಂತಹ ಯುದ್ಧದ ಅವಸರಾವಶ್ಯಕತೆಗಳ ರಭಸದಲ್ಲಿ, ಬಹುಸಂಖ್ಯಾಕ ಹಿಂದುಗಳನ್ನು ಗಣ್ಯಕ್ಕೆ ತಾರದಿರುವುದು ಅಷ್ಟು ಸುಲಭವಲ್ಲವಷ್ಟೆ?

ಅಷ್ಟೇ ಅಲ್ಲ. ಇದಿರಾಳಾಗಿ ಸಾವರಕರರು ಇದ್ದಾರೆ. ಅವರ ಹಿಂದೂ ಮಹಾಸಭೆಯಿದೆ. ಮುಸ್ಲಿಮ್‌ಲೀಗಿನ ಸಹಜ ಪ್ರತಿಯೋಗವೇ ಹಿಂದೂ ಮಹಾಸಭೆ. ಮುಸ್ಲೀಮರೊಡನೆ ಮೊದಲಿನಿಂದ ಗಾಂಧಿಜಿ ಮತ್ತು ಕೊಂಗ್ರೆಸ್ ಮಾಡುತ್ತ ಬಂದ ಶಿಥಿಲ-ಸಂಧಾನಗಳ ಪ್ರತೀಕಾರ ಸ್ವರೂಪವೂ ಅದೇ! ಗಾಂಧಿಜಿ ಅವರಿಗೆ ಬಗ್ಗುತ್ತ ಬಂದಿರುವುದೇ ಬ್ರಿಟಿಷ್ ಮತ್ತು ಇಂಡಿಯಾ ಸರಕಾರಕ್ಕೂ ಮೇಲ್ಬಾಯಾಯಿತೆಂದು ತೋರುತ್ತದೆ. ಬರುಬರುತ್ತ ಇವರಿಗೆ ಬಗ್ಗುವ ರೂಢಿಯಾದಂತೆಯೇ ಮುಸ್ಲಿಮ್‌ಲೀಗಿಗೆ ಇವರನ್ನು ಬಗ್ಗಿಸುವ ರೂಢಿಯಾಗಿ ಬಿಟ್ಟಿದೆ! ಹೀಗಿದೆ ರಾಜಕೀಯ ಕಾರ್ಯರಂಗ. ಅದರಲ್ಲಿ ಸಮಾಸಸ್ಕಂಧತೆ, ಸ್ನೇಹಸಂಯೋಜನೆಗಳು ಅಪರೂಪವಾಗುತ್ತಲೇ ಬಂದಿವೆ.

ಹಿಂದೂ ಮಹಾಸಭೆಯಲ್ಲಿ ಕೆಲವು ಲೋಪಗಳಿರಬಹುದು; ಆದರೂ ಆದೂ ಇಲ್ಲವಾದರೆ ನಮ್ಮಲ್ಲಿ ಎರಡೇ ದೊಡ್ಡ ಪಾರ್ಟಿಗಳಿರುತ್ತಿದ್ದುವು— ಬಗ್ಗುವ ಕೊಂಗ್ರೆಸ್ ಒಂದು, ಬಗ್ಗಿಸುವ ಮುಸ್ಲಿಮ್‌ಲೀಗ್ ಇನ್ನೊಂದು. ನಿಜಸ್ಥಿತಿಯು ಹೀಗಿರುವಾಗ ಇಂದು ಹಿಂದೂ ಮಹಾಸಭೆಯು ಇಬ್ಬರಿಗೂ ನಿರೋಧಕವಾಗಿ ಇರುವ ಒಂದು ಶಕ್ತಿಯಾಗಿ ನಿಂತಿದೆಯೆನ್ನಬೇಕಾಗುತ್ತದಲ್ಲವೆ?

* * *

ನಮ್ಮದೇಶಕ್ಕೆ ಸ್ವಾತಂತ್ರ್ಯ ಬರಬೇಕಾದರೆ ಬ್ರಿಟಿಷರು ಮೊದಲು ಅವರ ಯುದ್ಧಕ್ಕೆ ಸಹಾಯಮಾಡಬೇಕೆನ್ನುತ್ತಾರೆ. ಈ ಮೂವರಲ್ಲಿ ಇಬ್ಬರು ತಮ್ಮ ತಮ್ಮ ಕೆಲವು ಶರತುಗಳ ಮೇಲೆ ಸಹಾಯಮಾಡಲಿಕ್ಕೆ ಸಿದ್ಧರಾಗಿದ್ದರೆ ಆ ಇಬ್ಬರು, ಜಿನ್ನಾ ಮತ್ತು ಸಾವರಕರರು. ಆದರೆ ಗಾಂಧಿಯವರು ಮಾತ್ರ ಒಂದು ಒಗಟನ್ನು ಹುಟ್ಟಿಸಿಬಿಟ್ಟಿದ್ದಾರೆ! ಮೊನ್ನೆ ಮಾತನಾಡಿದಾಗ, ಆಜೆ ಮೊನ್ನೆಯ ಏ. ಆಯ್. ಸಿ. ಸಿ.ಯ "ಪುಣೆಯ ಠರಾವಿನ" ವಿಷಯ ಅವರು ಹೀಗೆಂದರು: "ಕಳೆದ ಇಪ್ಪತ್ತು ವರ್ಷಗಳ ಕೊಂಗ್ರೆಸಿನ ನಿಷೇಧ" ಎನ್ನುತ್ತ ಅದರಲ್ಲಿ ಕೊಂಗ್ರೆಸ್ ಮತಕ್ಕೆ ವಿರುದ್ಧವಾದ "ವಾಯೊಲೆನ್ಸ್" ಇದೆ ಎಂದರು. ಆದರೆ ೧೯೩೭ರಲ್ಲಿ ಕೊಂಗ್ರೆಸ್ ಸರಕಾರಗಳನ್ನು ರಚಿಸಿದಾಗ ಅವರೇ "ಒಂದು ರಾಷ್ಟ್ರೀಯ ಸರಕಾರವಿದ್ದಿದ್ದರೆ, ನಾನದರಲ್ಲಿ ಭಾಗಿಯಾಗದೆ ಹೋದರೂ ಮಿಲಿಟರಿ ತರಬೇತಿಗೆ ವೋಟ್ ಕೊಡುವುದು ನನ್ನ ಕರ್ತವ್ಯವೇ ಆಗುವುದು....." ಎಂದಿದ್ದಾರೆ. "If there was a national Government, whilst I should not take any direct part in any way, I can conceive occasions when it would be my duty to vote for the military training of those who wish to take it. For I know that all its members do not believe in non-violence to the extent I do." —*Gandhiji*

ಈಗ ಪುಣೆಯ ಠರಾವು ಹಾಗೆಯೇ ನಿಂತಿದ್ದರೆ ಅದೊಂದು "ರಾಷ್ಟ್ರೀಯ ವಿಪತ್ತು (national disaster)" ಆಗುತ್ತಿತ್ತು ಎನ್ನುತ್ತಾರೆ. ಅವರ ಪಟ್ಟಶಿಷ್ಯ ರಾಜಗೋಪಾಲಾಚಾರ್ಯರೋ ಯುದ್ಧಸಹಾಯಕ್ಕೆ ದೊಡ್ಡ 'ವೋಟ್' ಕೊಡುವವರೇ! ಮೊನ್ನೆಯ ಗಾಂಧಿಯವರ ಮಾತು ಕೇಳಿದ ಮೇಲಕ್ಕೂ ಅವರ ವೋಟ್ ಏನೋ ಹಾಗೇ ಕಾಯಮ್ ನಿಂತಿದೆ. ಆದರೆ ಇನ್ನೂ ಅನೇಕ ಕೊಂಗ್ರೆಸ್ಸಿನ ಮುಂದಾಳುಗಳು ಮಹಾತ್ಮರ ಈಗಿನ ತೀರ್ಮಾನಕ್ಕೆ 'ಭಳಿರೆ' ಎನ್ನುತ್ತಾರೆ. ಆದರೆ ಇವರಲ್ಲಿ ಮಂತ್ರಿಗಳಾಗಿದ್ದ ಅನೇಕರು, ತಮ್ಮ ಮಂತ್ರಿತನಕ್ಕೆ ರಾಜೀನಾಮೆ ಕೊಡುವವರೆಗೆ ಈ ಯುದ್ಧವು "ನಮ್ಮಯುದ್ಧ" "ಧರ್ಮಯುದ್ಧ" ಮುಂತಾದ ಅಭಿಮಾನದ, ಅನುಕಂಪದ ಮಾತನಾಡುತ್ತಿದ್ದರು.

ಈಗ ಅವರಲ್ಲಿ ಅಷ್ಟು ವೇಗದಿಂದ ಬಂದ ಬದಲಾವಣೆ ಚಮತ್ಕಾರವೇ ಆಗಿದೆ! ಇದೇನು, ನಿಜವಾದ ಮಾನಸಾಂತರವೋ ಬರಿಯ ಪ್ರತಿಧ್ವನಿಯೊ? ಅದು ಹೇಗೂ ಇರಲಿ, ಜನಸಾಮಾನ್ಯವು ಕೊಂಗ್ರೆಸ್ಸಿನ ಸದ್ಯದ ಸ್ವರಾಜ್ಯಸಾಧನ ವಿಧಿಯನ್ನು ಹೇಗೆ.. ಏನೆಂದು ತಿಳಿದುಕೊಳ್ಳಬೇಕು?

ಪುಳ್ಳಿಂಗಾಯುಂಡೆ

ಶ್ರೀ ಕೆ. ವಿ. ರಾಘವಾಚಾರ್ ಎಂ. ಎ.

★

ನಾಮಪದಗಳ ಮೂಲಗಳನ್ನು ಹುಡುಕುತ್ತ ಹೋಗುವವರಿಗೆ ಎಷ್ಟೋ ಸಲ ಆ ಪದಗಳ ಹಿಂದೆ ಭಾವಕಾವ್ಯವೊಂದಿದ್ದುದು ಕಂಡು ಬರುತ್ತದೆ; ಇನ್ನೆಷ್ಟೋ ಸಲ ವಸ್ತುವಿನ ಅಂತರ್ಲಿತ್ರವನ್ನು ಮನದೆದುರು ಮೂಡಿಸುವಂತಹ ಕಣಸು ಕಾಣುತ್ತದೆ; ಇನ್ನೆಷ್ಟೋ ಸಲ ನಮ್ಮವರ ರಸಿಕತನ ವ್ಯಕ್ತವಾಗುತ್ತದೆ. ಇದನ್ನೆಲ್ಲ ಈ 'ಪುಳ್ಳಿಂಗಾಯುಂಡೆ' ಯಲ್ಲಿ ಕಾಣಬಹುದು.

★

'ಹೆಸರಿನಲ್ಲಿ ಏನಿದೆ?' ಎಂಬ ಪ್ರಶ್ನೆಯನ್ನು ಹಿಂದಿನವರು ಕೇಳಿದ್ದಾರೆ; ಇಂದಿನವರು ಕೇಳುತ್ತಾರೆ; ಮುಂದಿನವರೂ ಕೇಳಿಯಾರು. 'ವಸ್ತು ಚೆನ್ನಾಗಿದ್ದರೆ ಸರಿ, ಹೆಸರು ಕಟ್ಟಿಕೊಂಡೇನು?' ಎಂದು ಕೆಲವರು. 'ಒಳ್ಳೆಯ ವಸ್ತುವಿಗೆ ಒಳ್ಳೆಯ ಹೆಸರೂ ಇದ್ದರೆ ಮತ್ತೂ ಚೆನ್ನ' ಎಂದು ಕೆಲವರು. ಒಳ್ಳೆಯ ಹೆಸರು ಎಂದರೇನು? ಮಿಕ್ಕ ಕೆಲವು ಒಳ್ಳೆಯವಂತೆ ಈ ಒಳ್ಳೆಯದನ್ನೂ ಕುರಿತೇಟಾಗಿ ಹೇಳುವುದು ಕಷ್ಟ. ಕೇಳಿದೊಡನೆ ಕಿವಿ ಕೊಸರಿ ಬಗೆಯರಳುವ ಹೆಸರನ್ನು ಒಳ್ಳೆಯದೆನ್ನುವುದೆ? ಹೇಳಿದೊಡನೆ ಅರ್ಥ ವಿಶದವಾಗಿ ಭಾವದೀಪಸನವಾಗಿ, ಹೇಳಿದ್ದು ಕಣ್ಣಿಗೆ ಕಟ್ಟಿದಂತೆ ಕಣ್ಣಿಗೆ ನಿಲ್ಲುವ ಹೆಸರನ್ನು ಒಳ್ಳೆಯದೆನ್ನುವುದೆ? ರಾಮ–ಕೃಷ್ಣರ ಹೆಸರು ಒಳ್ಳೆಯದು, ರಾವಣ–ಜರಾಸಂಧರ ಹೆಸರು ಕೆಟ್ಟದೆಂದೆ? ಕೃಷ್ಣ–ಜರಾಸಂಧ ಈ ಹೆಸರುಗಳ ಸುತ್ತು ಕಟ್ಟಿಕೊಂಡಿರುವ ಅರ್ಥಾವರಣ ಭಾವಾವರಣಗಳ ಅರಿವೇ ಇಲ್ಲದೆ, ಇವನ್ನು ಮೊದಲ ಸಲ ಕೇಳುವ ಕಿವಿಗೆ ಜರಾಸಂಧ ಹೆಸರೇ ಹೆಚ್ಚು ಸೊಗಸೀತೇನೊ! ತನ್ನ ಒಲವನ್ನು ಸೂರೆಗೊಂಡ ನಲ್ಲೆಯ ಹೆಸರು 'ಮುಳ್ಳಿ' ಎಂದಿದ್ದರೆ, ಮುಳ್ಳಿಯಷ್ಟು ಇಂಪಾದ ಸವಿಯಾದ ಜೆಲುವಾದ ಹೆಸರು ಮತ್ತೆ ಯಾವುದೂ ಇರದು..ನಲ್ಲನ ಕಿವಿಗೆ. ಒಲವೂರುವುದಕ್ಕೆ ಮುನ್ನವೇ ಹೆಸರಿನ ಚಿಂತೆ ಏನಾದರೂ ಬಂದನೆ, ಮುಳ್ಳಿ ಕಾಮಲತೆಯೊ ಕಾಂಚನಮಾಲೆಯೊ ಆದರೂ ಆಗ ಒಮದು. ಅಂತೂ, ಹೆಸರುಗಳ ಸೊಗಸೇ ಸೊಗಸು.

ಹೆಸರುಗಳಲ್ಲಿ ಕೆಲವು ಬುದ್ಧಿಪ್ರೇರಿತವಾದುವು, ಕೆಲವು ಭಾವಪ್ರೇರಿತವಾದುವು. ಮಳೆಹೊತ್ತು ನಡುಬಾನಲ್ಲಿ ತೂಗುವ ಬಾಗಿದ ಬಣ್ಣದ ಪಟ್ಟಿಯನ್ನು ಬುದ್ಧಿ ಮಳೆಬಿಲ್ಲೆಂದರೆ, ಭಾವ ಕಾಮನ ಬಿಲ್ಲೆನ್ನುತ್ತದೆ. ಮತ್ತೆ, ಅರ್ಥ–ಭಾವಗಳು ಸೂಸಿ ಸೊಗಸುವ ಹೆಸರುಗಳುಕೆಲವು; ಹೆಸರ ಸೊಗಸಿಂದ ಸೂಸುವ ಅರ್ಥ–ಭಾವಗಳು ಕೆಲವು. ತಮಿಳಿನಲ್ಲಿ 'ಸತ್ಯ' ಎನ್ನುವುದಕ್ಕೆ ಮೂರು ಮಾತು ಬಳಕೆಯುಂಟು: **ಉಣ್ಮೈ, ವಾಯ್ಮೈ, ಮೆಯ್ಮೈ.** (ಉಳ್=ಒಳಗು, ಮನಸ್ಸು; ವಾಯ್=ಬಾಯಿ, ವಕ್ತ್ರ; ಮೆಯ್=ಮೈ, ಕಾಯ; –ಮೈ = –ಮೆ, –ತನ, –ತ್ವ, –ಧರ್ಮ). ಸತ್ಯ ಎಂದರೆ: ಮನಸ್ಸಿನ ತನ, ಧರ್ಮ; ಬಾಯತನ, ಧರ್ಮ; ಮೈಯತನ, ಧರ್ಮ. 'ಕಾಯಾ ವಾಚಾ ಮನಸಾ' ಎಂದು ಮಾತಿತ್ತಿದ್ದರೆ ಹೇಳುತ್ತೇವೆ. (ಸಂಸ್ಕೃತ ಪಂಡಿತರು 'ಏನು ಕಾಯಾ? ಅವನ ತಲಕಾಯಿ! ಕಾಯೇನ ಆಗಬೇಡವೆ? ಹಾಳು ಕನ್ಯಡಿಗನ ಮನೆ ಕಾಯಾ' ಎಂದು ಆಕ್ಷೇಪಿಸುತ್ತಾರೆ. ಇರಲಿ). ಬಗೆಯುವುದು, ಆಡುವುದು, ಮಾಡುವುದು–ಮೂರೂ ಒಂದೇ ಆಗಿರಬೇಕು. ಸತ್ಯವನ್ನೇ ನೆನೆಯಬೇಕು, ಸತ್ಯವನ್ನೇ ನುಡಿಯಬೇಕು, ಸತ್ಯವನ್ನೇ ನೆಗಳಬೇಕು. ಇದೇ ಸತ್ಯವಂತರ ಲಕ್ಷಣ, ತ್ರಿಕರಣಶುದ್ಧಿ. ಈ ಭಾವಗಳೆಲ್ಲ ಉಣ್ಮೈ, ವಾಯ್ಮೈ, ಮೆಯ್ಮೈ ಎಂಬ ಮಾತುಗಳಲ್ಲಿ ತುಂಬಿವೆ. ತಮಿಳುನಾಡಿಗೆ ಈ ಮಾತುಗಳು ಜೀನಮಂತ್ರ ಕೊಂಡಂತೆ. ಇಲ್ಲಿ, ಹೆಸರಿನ ಸೊಗಸು ಭಾವದ ಸೊಗಸಿನಿಂದ. ನೆಲ್ಲು, ರಾಗಿ, ಜೋಳ ಮೊದಲಾದ ಕಾಳುಗಳನ್ನು ಬೆಂಕಿಯ ಮೇಲಿಟ್ಟರೆ ಅರಳಾಗುತ್ತದೆ. ಪಟಿಕವನ್ನು ಬೆಂಕಿಯಲ್ಲಿಟ್ಟು ಅರಳು ಮಾಡುತ್ತಾರೆ. ಇಲ್ಲಿ, 'ಅರಳು' ಎಂದರೇನು? ಮೊಗ್ಗು ಅರಳುವುದನ್ನು ಬಲ್ಲೆವು. ಅರಳಿದ ಮೊಗ್ಗನ್ನು–ಹೂವನ್ನು–**ಅರಲ್ ಅಲರ್** ಎನ್ನುತ್ತೇವೆ. ಗುಟ್ಟಾಗಿ ಗಟ್ಟಿಯಾಗಿ ಒಳಗೆ ಅಡಗಿದ್ದ ಚೈತನ್ಯ, ಮೆದುವಾಗಿ ತೆರೆದು ಹೊರಸೂಸುವುದೇ ಅರಳುವುದು; ಆ ಸೂಸೇ **ಅರಳು.** ಬತ್ತದರಳು, ರಾಗಿಯರಳು, ಜೋಳದರಳು ಎನ್ನುವಾಗ ಸಿಪ್ಪೆಯೊಳಗೆ ಗಟ್ಟಿ ಕಾಳಾಗಿ ಅಡಗಿದ್ದ ಸತ್ತ್ವ, ಕಾವಿನ ಸಂಸ್ಕಾರದಿಂದ ಮೃದುಗೊಂಡು ಬಾಯಿ ತೆರೆದು ಬೆಳ್ನಗೆ ಸೂಸುವ ಪ್ರಫುಲ್ಲಭಾವನೆ ನನಗೆ ಅಗುತ್ತದೆ. ಇಲ್ಲಿ, ಹೆಸರ ಸೊಗಸಿಂದ ಭಾವಸ್ಫೂರ್ತಿ.

ಒಳ್ಳೆಯ ಹೆಸರು ಇರಬೇಕೆನ್ನುವವರೂ 'ಯಾವ ಹೆಸರಾದರೇನಂತೆ–ಗುರುತಿಸುವುದಕ್ಕೆ' ಎನ್ನುವವರೂ ಒಂದೇಸಮನೆ ತಿಣುಕುತ್ತಾರೆ: ಹುಟ್ಟಿದ ಮಗುವಿಗೆ ಏನು ನಾಮಕರಣ ಮಾಡಬೇಕು? ಒರೆದ ಪುಸ್ತಕಕ್ಕೆ ಯಾವ ಹೆಸರಿಡಬೇಕು? ಹೊಸದಾಗಿ ಕಂಡು ಹಿಡಿದ ವಿಷಯವನ್ನೊ ಯಂತ್ರವನ್ನೊ ಏನೆಂದು ಕರೆಯಬೇಕು? ಕಲ್ಪಿಸಿದ ಪಾತ್ರಗಳಿಗೆ, ಕಟ್ಟಿದ ಮನೆಗೆ ಯಾವ ಹೆಸರು ಚೆನ್ನ? ತಮ್ಮ ಮನೆಯ ಹಸು, ಕುದುರೆ, ಆಡು, ಕುರಿ, ಕತ್ತೆ, ಕೋಳಿ, ನಾಯಿ, ಗಿಣಿ ಇವಕ್ಕೆಲ್ಲ ಯಾವ ಹೆಸರು ಮುದ್ದು? ಈ ಯೋಚನೆಗಳು ಒಮ್ಮೆಯಾದರೂ ಸುಳಿಯದ ತಲೆಯಿಲ್ಲ. ಒಳ್ಳೆಯ ಹೆಸರ ಸೂಚನೆಗಾಗಿ ಬಹುಮಾನ ಪ್ರಕಟನೆಗಳು ಎಷ್ಟು ಬಂದಿಲ್ಲ ಪತ್ರಿಕೆಗಳಲ್ಲಿ! ಈ ವಿಚಾರದಲ್ಲಿ ಔದಾಸೀನ್ಯ ಸಾಧ್ಯವೇ ಇಲ್ಲ.

ಯಾವ ಹೆಸರಾದರೇನಂತೆ ಎನ್ನುವವರೂ ವಿಚಿತ್ರ ಹೆಸರುಗಳಿಗಾಗಿ ಮುಲುಕುತ್ತಾರೆ. **ಕುಚೇಲ, ಸುದಾಮ, ಕುಂಭಕರ್ಣ, ಲಂಕಾಸುಂದರಿ, ಶೂರ್ಪಣಖಿ, ಪೂತನಿ**—ಈ ಹೆಸರುಗಳನ್ನು ಆಯ್ದಿಟ್ಟು ಹಿಗ್ಗುವವರು ಉದಾಸೀನರೆ? ಅತಿಭೈರ್ಯ–ಅತಿ ಭೀತಿ, ಅತಿ ಪ್ರೀತಿ–ಅತಿ ದ್ವೇಷ ಇವೇ ಮೊದಲಾದ ದ್ವಂದ್ವಗಳು ಒಂದೇ ಗಂಡಭೇರುಂಡದ ಇಮ್ಮೊಗಗಳೆಂದು ಮನಶ್ಶಾಸ್ತ್ರಜ್ಞರು ಹೇಳುವುದುಂಟು. ಹಾಗೆಯೆ, ಬಲು ಒಳ್ಳೆಯ ಹೆಸರಿಡಬೇಕೆಂಬ ಹಂಬಲೂ ಬಲು ಸೋಜಿಗದ ಹೆಸರಿಡಬೇಕೆಂಬ ಬಯಕೆಯೂ ಒಂದೇ ಮನೋಭಾವದ ಎರಡು ಮುಖಗಳು. ಅಂತೂ, ಒಬ್ಬರಿಗೆ ರುಚಿಸಿದ್ದು ಮತ್ತೊಬ್ಬರಿಗೆ ರುಚಿಸಬೇಕೆಂದಿಲ್ಲ. ಒಂದು ಕಾಲಕ್ಕೆ ಸೊಗಸಿದ್ದು ಮತ್ತೊಂದು ಕಾಲಕ್ಕೆ ಸೊಗಸಬೇಕೆಂದಿಲ್ಲ. ಮಕ್ಕಳಿಗೆ ದೇವರ ಹೆಸರಿಡುವ ಸಂಪ್ರದಾಯ ನಮ್ಮ ಕಡೆ ನಿಡುಗಾಲದಿಂದ ನಡೆದು ಬಂದದ್ದು. **ಶ್ರೀನಿವಾಸ, ಶ್ರೀಕಂಠ, ವೆಂಕಟೇಶ, ನಾರಾಯಣ, ನರಸಿಂಹ, ಕೃಷ್ಣ, ಶಿವ, ರಾಮ, ಭೀಮ, ಹನುಮಂತ, ಗರುಡ, ವಿನಾಯಕ, ಬಸವ, ಲಕ್ಷ್ಮೀ, ಗೌರಿ, ಶಾರದೆ**—ಇವೇ ಮುಂತಾದ ದೇವರ ನಾಮಗಳೂ ಅವುಗಳ ಪರ್ಯಾಯಗಳೂ ನಮ್ಮ ಮಕ್ಕಳಿಗೆ ಹೆಸರೊದಗಿಸುತ್ತಿದ್ದುವು. ಈಗೀಗ ಅವು ಅಷ್ಟಾಗಿ ರುಚಿಸುತ್ತಿಲ್ಲ. ಈಗಿನ ಸೊಗಸೆಂದರೆ: **ಅನಂದ್, ಪ್ರಸಾದ್, ರತ್ನಂ, ಪ್ರಸನ್, ಕನ್ನನ್, ಇಂದು, ಕಾಂತಿ, ಲೀಲಾ**..ಇತ್ಯಾದಿ.

ಹೆಸರುಗಳ ವೇಲಾಟ ನಡೆದದ್ದೇ ಆವರೆ ಬಂಗಾಳಕ್ಕೆ ಮೊದಲ ಪೆಟ್ಟು ಖಂಡಿತ. ಬಂಗಾಳೀ ಹೆಸರುಗಳ ಭಾವವಿಲಾಸ, ನಾದಗುಂಫನ, ರಮಣೀಯತೆ ಭರತಖಂಡದ ವಿಕ್ಕೆ ನಾಡುಗಳಲ್ಲಿ ಬಳಕೆಯಾಗುವ ಹೆಸರುಗಳಲ್ಲಿ ಅಷ್ಟಾಗಿ ಕಾಣಬರುವುದಿಲ್ಲ: **ನರೇಂದ್ರನಾಥ, ಮನ್ಮಥನಾಥ, ಚಿತ್ತರಂಜನ, ನಳಿನೀರಂಜನ, ಪ್ರಫುಲ್ಲಚಂದ್ರ, ಜಗದೀಶಚಂದ್ರ, ರಮೇಶಚಂದ್ರ, ಈಶ್ವರಚಂದ್ರ, ವಿಪಿನಚಂದ್ರ, ಶರಚ್ಚಂದ್ರ, ಸುಭಾಸಚಂದ್ರ, ಧಿರೇಂದ್ರ, ದ್ವಿಜೇಂದ್ರ, ಅವನೀಂದ್ರ ವ್ರಜೇಂದ್ರನಾಥ, ರವೀಂದ್ರನಾಥ, ಅಸುತೋಷ, ರಾಘವೆಂದ್ರ, ರಾಜಾರಾಮಮೋಹನ, ಮದನಮೋಹನ**—ಓ! ಎಷ್ಟುಬೇಕು? ಈ ರೋಮಾಂಚಹೆಸರುಗಳ ಮುಂದೆ ಕೆಂಪು, ಕರಿಯ, ತಿಪ್ಪ, ತಿಮ್ಮ, ಬೊಮ್ಮ, ಮುಳ್ಳ, ಕಲ್ಲ, ಗುಂಡ, ಹುಚ್ಚ— ಇವು ಏನು ನಿಂತಾವು? ಈ ಬಂಗಾಳೀ ಹೆಸರುಗಳ ಸೊಬಗು, ಸಂಸ್ಕೃತ ವೃತ್ತಗಳ ನಾಮವೈಭವದಂತಿದೆ. **ವಿದ್ಯುಲ್ಲೇಖಾ, ವಿದ್ಯುನ್ಮಾಲಾ, ಜಲಧರಮಾಲಾ, ಶಶಿಕಲಾ, ಶಶಿವದನಾ, ಮದಲೇಖಾ, ತನುಮಧ್ಯಮಾ, ಕಲಹಂಸ, ಮಂಜುಭಾಷಿಣೀ, ಮತ್ತಮಯೂರೀ, ಭ್ರಮರವಿಲಸಿತ, ಭುಜಂಗಪ್ರಯಾತ, ಭುಜಂಗನಿರ್ಜರಿತ, ವಸಂತತಿಲಕಾ, ಪಂಚಚಾಮರ, ಮಂದಾಕ್ರಾಂತ, ಸುಂದರಾನಿಲ, ಶಾರ್ದೂಲವಿಕ್ರೀಡಿತ, ಮತ್ತೇಭವಿಕ್ರೀಡಿತ.**

* * *

ಈ ಸಲ ಕೃಷ್ಣಜಯಂತಿಯ ತಿಂಡಿಯೌತಣಕ್ಕೆ ನಾವು ಕೆಲವರು ಶ್ರೀವೈಷ್ಣವರಾದ ಸ್ನೇಹಿತರೊಬ್ಬರ ಮನೆಗೆ ಹೋಗಿದ್ದೆವು. ಅಯ್ಯಂಗಾರ್ರ ಮನೆಯ ಗೋಕುಲಾಷ್ಟಮಿಯನ್ನು ಓದಿಕೇಳಿ ತಿಳಿಯುವುದಕ್ಕಾಗದು; ಕಂಡು ಉಂಡು ತಣಿಯಬೇಕು. ಅವರು ಮಾಡುವುದು ವರ್ಷಕ್ಕೆ ಒಂದೇ ಹಬ್ಬವಂತೆ; ಅದು ಕೃಷ್ಣನ ಹುಟ್ಟಿದ ಹಬ್ಬವಂತೆ! ಅಯ್ಯಂಗಾರ್ರ ಮನೆಯಲ್ಲಿ ಒಂದು ವರ್ಷದ ಗೋಕುಲಾಷ್ಟಮಿಗೆ ಮಾಡಿದ್ದು **ಮಾರನೆಯ** ವರ್ಷದ ಗೋಕುಲಾಷ್ಟಮಿಯವರೆಗೂ ಇರುತ್ತದೆಂದು ಆಡಿಕೊಳ್ಳುವ ದುಂಟು. ಅದು ಅವರ ತಿಡಿಗೆಯ ಬೊತ್ತವನ್ನು ಕುರಿತ ಮಾತೊ, ತಡೆತವನ್ನು ಕುರಿತ ಮಾತೊ ತಿಳಿಯದು. ಕಡುಬಡವನಾದರೂ, ಕಡತಂದಾದರೂ, ಆ ಹಬ್ಬವನ್ನು ವಿಜೃಂಭಣೆಯಿಂದ ನಡಸುತ್ತಾನಂತೆ. ಮನುಷ್ಯನಿಗೆ ತಿಳಿದಿರುವ–ತಿಳಿಯದಿರುವ–, (ಸಸ್ಯಾಹಾರ) ಭಕ್ಷ್ಯ-ಭೋಜ್ಯಗಳೆಲ್ಲ—ತಿಥಿವಡೆಯಿಂದ ಹಬ್ಬದ ಚಿರೋಟಿಯವರೆಗೆ—ಅಣಿಯಾಗುತ್ತವಂತೆ ಅಂದಿನ ಇರುಳು. ಕಣ್ಣನ (ಕೃಷ್ಣನ) ಮುಂದೆ ಒಡ್ಡಿದ ತಿಂಡಿಯೊಡ್ಡನ್ನು (ಮೈಸೂರ ತಿಂಡಿ, ಧಾರವಾಡದ್ದಲ್ಲ) ನೋಡುವುದಕ್ಕೆ ಎರಡು ಕಣ್ಣು ಸಾಲದಂತೆ. ಅದರ ವೈಭವದ ಮುಂದೆ ಆನಂದಭವನದ ತಿಂಡಿಯಂಗಡಿಯಲ್ಲಿ, ಕನ್ನಡಿ ಹಿನ್ನೆಲೆಯಲ್ಲಿ, ಅಣಿಯಣಿಯಾಗಿ ಪೇರಿಸಿದ ಕಂಚಿನ ತಟ್ಟೆಗಳ ಬೆಡಗು, ನೇಸರ ಮುಂದಿನ ನೆಯ್ಬತ್ತಿಯಂತೆ. ಇದನ್ನೆಲ್ಲಾ ಕೇಳಿ ಕೆಲವರಿಗೆ ಬಾಯಲ್ಲಿ ನೀರೂರಿ, ಅಯ್ಯಂಗಾರ್ರ ಕೆಳೆಯರನ್ನು ಕಂಡು ಹೊಟ್ಟೆ ಉರಿಯಬಹುದು. ಅಂಥವರು ಬೇಗನೆ ಅಯ್ಯಂಗಾರ್ರ (ಅದರಲ್ಲಿಯೂ ಸಂಪ್ರದಾಯನಿಷ್ಠರ) ಸ್ನೇಹಸಂಪಾದನೆಗೆ ತೊಡಗುವುದು ಒಳ್ಳೆಯದು. ಅದರೆ, ಒಂದು ಎಚ್ಚರಿಕೆ! ಆಗಲೇ ಹಲವು ಕೆಳೆ ಬೆಳೆದಿರುವ ಮನೆಗೇ ಮುತ್ತಿಗೆ ಹಾಕಬಾರದು. ಮಾಮೂಲಿಗೇ ವೋಸಬಂದೀತು. ಒಬ್ಬೊಬ್ಬರೂ ಬೇರೆ ಬೇರೆ ಹೊಸ ಹೊಸ ಕೆಳೆಗಳಿಸಬೇಕು. ಇದೆಲ್ಲಕ್ಕಿಂತ, ಊರಿಗೊಂದು ಕೇರಿಗೊಂದು ಅಯ್ಯಂಗಾರ್ರ ಮನೆ ಇದ್ದೇ ತೀರಬೇಕೆಂದು ಕಟ್ಟಳೆಯನ್ನೇ ಮಾಡಿಬಿಡುವುದು ಸೂಕ್ತ. ಆದರೆ, ಜತೆಗೆ ಗೋಕುಲಾಷ್ಟಮಿಯ ಹಬ್ಬಕ್ಕಾಗಿ ಆ ಮನೆಗೆ ರಾಜನಿಂದಲೋ ಸರ್ಕಾರದಿಂದಲೋ ಸಾರ್ವಜನಿಕ ಪುದುಪಟ್ಟಿನಿಂದಲೋ ದತ್ತಿಬಿಡಿಸಬೇಕು ಅಷ್ಟೆ!

ನಾವು ಹೋಗಿದ್ದ ಮನೆಯವರು ಶ್ರೀಮಂತರಲ್ಲ; ಬಡವರೂ ಅಲ್ಲವೆನ್ನಬಹುದು. ನಡುನಿಲೆಯ ಸಾಮಾನ್ಯರು. ಒಂದು ಸುಮಾರು ಕೋಣೆಯಲ್ಲಿ ಏಳೆಂಟು ಮಂದಿ ಕುಳಿತಿದ್ದೆವು. ಹರಟೆ ಹೊಡೆಯುತ್ತ, ಯಾರುಯಾರನ್ನೊ ಹಳಿಯುತ್ತ ಹೊಗಳುತ್ತ, ಮನಬಂದಂತೆ ಅಡಿಕೊಳ್ಳುತ್ತ ಅಣಕಿಸುತ್ತ. ಇದ್ದಕ್ಕಿದ್ದಹಾಗೆ ಒಳಗಿನಿಂದ ಬಂತು ಬೆಳ್ಳಗೆ ಬೆಳಗಿದ ಬೆಳ್ಳಿಯ ಚಿಂಬು. ಅಷ್ಟೇನೂ ದೊಡ್ಡದಲ್ಲ; ಸುಮಾರು ಒಂದು ಕೊಡ ನೀರು ಹಿಡಿಸುತ್ತಿತ್ತು ಅಷ್ಟೆ. ಹಿಂದೆಯೇ ಬಂತು ಅದರ ಪರಿವಾರ—ಬೆಳ್ಳಿಯ ಲೋಟ, ಬಟ್ಟಲುಗಳು. ನಾವಿನ್ನೂ ಕೈ ತೊಳೆಯುವುದರಲ್ಲೇ ಇದ್ದೇವೆ. ಮೊದಲಾಯಿತು ತಟ್ಟಿಗಳ ಮೆರವಣಿಗೆ; ಒಂದರಹಿಂದೊಂದು ಎಡೆಬಿಡದೆ ಬರುತ್ತಲೇ ಇದ್ದುವು. ಬೆಳ್ಳಿಯ ತಟ್ಟೆಗಳನ್ನು ಮೆಚ್ಚ-

ಬೇಕೊ ತಿಂಡಿಯ ಪೊತ್ತಗಳನ್ನು ಮೆಚ್ಚಬೇಕೊ—ತೋಚದೆ, ನೋಡಬೇಕೊ ತಿನ್ನಬೇಕೊ—ತಿಳಿಯದೆ, ಬೆರಗುಬಡಿದು ಕೂತು ಬಿಟ್ಟೆವು. (ಈ ವರ್ಣನೆ ಓದಿ, ಕಳ್ಳರಾರೂ ಕನ್ನ ಇಕ್ಕಬೇಡಿ ಭಯ್ಯಂಗಾರ್ರ ಮನೆಗೆ. ಅಲ್ಲಿ ಕಳ್ಳರ ಕೈಗೆ ಸಿಕ್ಕುವುದು ಬಿದಿರಂಡೆ, ನಾವದುಂಡೆ ಅಷ್ಟೇ.) ಕೊಂಚ ಕೊಂಚವಾಗಿ ಚೇತರಿಸಿಕೊಂಡು ಕಣ್ಣು ಬಿಟ್ಟು ನೋಡಿದರೆ, ಮುಂದೆ ಬಿದ್ದಿದೆ ಕರಗಲಾರದ ರಾಶಿ ನಮ್ಮ ಗಂಡನ್ನುಕೆಣಕಿ ಕರೆಯುತ್ತ. ಮಾಡಿದ ಕರ್ಮ ಅನುಭವಿಸಲೇ ಬೇಕು ಎಂದುಕೊಂಡು ಕರ್ಮಕ್ಷಯಕ್ಕೆ ತೊಡಗಿದೆವು. ಆದರೇನು? ಎಷ್ಟು ತಿಂದರೂ ನವೆಯುವಂತೆ ಕಾಣಲಿಲ್ಲ. ಯಾವ ಮಾಯದಲ್ಲೊ, ಬರಿಯದಾದ ತಟ್ಟೆ ತುಂಬಿಬರುತ್ತಿತ್ತು. ಬಿಡುಗಡೆ ಕಾಣದೆ ನಮ್ಮಲ್ಲಿ ಮೇಧಾವಿಗಳೊಬ್ಬರು ಉಪಾಯವೊಂದನ್ನು ಹುಡುಕ ತೊಡಗಿದರು. ಅಯ್ಯಂಗಾರ್ರನ್ನು ಬೇಸ್ತುಬೀಳಿಸಬಗೆದರು. ತುಂಬಿದ ತಟ್ಟೆಗಳ ತಂಡದಲ್ಲಿ ಏನೋ ಒಂದು ಅರಕೆ ಕಂಡು, ಸರಿ ಸಿಕ್ಕಿತು ಪಟ್ಟು' ಎಂದು ಹಿಗ್ಗಿ "ಎಲ್ರಿ! ಪುಳ್ಳಂಗಾಯುಂಡೆ ಇಲ್ಲವೇ ಇಲ್ಲ. ಈಸಲ ಗೋಕುಲಾಷ್ಟಮಿ ಪೂರ್ತಿಯಾಗಲಿಲ್ಲ" ಎಂದು ಮೆತ್ತಗೆ ತಿಂಡಿಯಿಂದ ಮಾತಿಗೆ ಹೊರಳಿಕೊಂಡರು. ಭಯ್ಯಂಗಾರ್ರು ಸಾಮಾನ್ಯರೇ? ಬೇಸ್ತುಬೀಳುವ ಕುಳ ಅಲ್ಲ. 'ತಟ್ಟೆ ಬರಿದಾಗಲಿ ತರೋಣ ಎಂದು ಕಾದಿದ್ದೆ" ಎಂದು ಹೇಳಿ ಒಳಗೆ ಹೋದರು. ಅವರು ಬರುವುದರೊಳಗೆ ನಮ್ಮಲ್ಲಿ ಜರ್ಜರಿತ ಗರಬಿಭವಾಗಿತ್ತು. 'ಪುಳ್ಳಂಗಾಯುಂಡೆ ಎಂದರೇನು?' 'ಏನು ಎಂದರೆ ಹೇಗೆ ಹೇಳುವುದು? ಕಣ್ಣಲ್ಲಿ ನೋಡಬೇಕು, ಬಾಯಲ್ಲಿ ತಿನ್ನಬೇಕು; ಆಗ ತಿಳಿಯಬೇಕು!'.. ಅಷ್ಟು ಹೊತ್ತಿಗೆ ತಟ್ಟೆ ತುಂಬ ಉಂಡೆಗಳು ಉರುಳಾಡಿದುವು.

'ಇದೇನ್ರಿ! ಕಲ್ಲುಂಡೆಗಳು!' ಎಂದರೊಬ್ಬರು. 'ಸಿಮೆಂಟ್ ಲಾಡುಗಳು ಬಂತೊ?' ಎಂದರಿನ್ನೊಬ್ಬರು. 'ಎಲ್ರಿ! ಆ ಪರಮಾಯಿಷಿ ಪುಳ್ಳಂಗಾಯುಂಡೆ?' ಎಂದು ಮತ್ತೊಬ್ಬರು ಕೇಳಿದರು. "ತಟ್ಟೆಯಲ್ಲಿರುವುದೇ ಪುಳ್ಳಂಗಾಯುಂಡೆ" ಎಂದು ಭಯ್ಯಂಗಾರ್ರು ಹೇಳಿದರೊ ಇಲ್ಲವೊ, ಹೆಸರ ಜಗಳಕ್ಕೆ ಮೊದಲಿಟ್ಟಿತು ನಮ್ಮಲ್ಲಿ. ಪುಳ್ಳಂಗಾಯುಂಡೆಯನ್ನು 'ಕಲ್ಲುಂಡೆ' 'ಸಿಮೆಂಟ್ ಲಾಡು' ಎಂದು ಸಿಕ್ಕಾಬಟ್ಟೆ ಕರೆಯುವುದನ್ನು ಕೇಳಿ ನಮ್ಮ ರಸಿಕರೊಬ್ಬರಿಗೆ ರೇಗಿತು. (ರಸಿಕ ರೇಗುತ್ತಾನೆಯೆ? ಎಂದು ಕೇಳಬೇಡಿ). ನಮ್ಮ ಹೆಸರುಗಳ ಸೊಗಸನ್ನು ಕುರಿತು ಪುಟ್ಟ ಉಪನ್ಯಾಸವನ್ನೇ ಆರಂಭಿಸಿಬಿಟ್ಟರು. ಕಿಲಾಡಿಗಳು ಕೆಲವರು "ಕಲ್ಲುಂಡೆ, ಸಿಮೆಂಟ್ ಲಾಡು ಎಂಬುವು ಅನ್ವರ್ಥನಾಮಗಳು; ಈ ಉಂಡೆಗಳು ಕಲ್ಲಿಗೆ ಒಡೆಯುವುದಿಲ್ಲ, ಹಲ್ಲಿಗೆ ಮಸೆಯುವುದಿಲ್ಲ; ಆದ್ದರಿಂದ, ಆ ಹೆಸರುಗಳು ಬಲು ಜೆನ್ನಾಗಿ ಒಪ್ಪುತ್ತವೆ. ಪುಳ್ಳಂಗಾಯುಂಡೆ ಎಂದರೇನು? ಅರ್ಥವಿಲ್ಲದ ಮಾತು" ಎಂದೊಡನೆ, ಮಾತುಗಳು ಕೊಂಚ ಕೊಂಚವಾಗಿ ಕಾವೇರಿದುವು. ರಸಿಕರು ನಮ್ಮ ಪಾಣಿನಿಯನ್ನು ಜೊ ಬಿಟ್ಟರು ಮುಂದಿನ ಕೆಲಸಕ್ಕೆ. ಸರಿ. ಎಲ್ಲರೂ "ಎಲ್ರಿ! ಮಹೇಂಜೊದಾರೊ! ಪುಳ್ಳಂಗಾಯುಂಡೆ ಯಾವ ಮಾತು? ವ್ಯುತ್ಪತ್ತಿಯೇನು? ಹೇಳಿರಿ" ಎಂದು ನಮ್ಮ ವೈಯಾಕರಣಿಯನ್ನು ಕೆಣಕಿದರು. ಅವರ ಕನ್ನಡ ಹರಪ್ಪ—ಮಹೇಂಜೊದಾರೊವಿನ ಕಾಲದ್ದಾದ್ದರಿಂದ, ಅವರಿಗೆ ಆ ಹೆಸರನ್ನು ನಾವೆಲ್ಲ ಒಪ್ಪಿಕೊಟ್ಟಿದ್ದೇವೆ. ಅವರು ಅವರ ವ್ಯುತ್ಪತ್ತಿ ಹೇಳುವುದು ಬಿಟ್ಟು ನಿಟ್ಟುಸಿರೆಳೆದು "ಅಯ್ಯೋ! ನಮ್ಮ ಹಿರಿಯರು ಎಂಥೆಂಥ ಒಳ್ಳೆಯ ಸ್ವಾರಸ್ಯವಾದ ಅರ್ಥವತ್ತಾದ ಹೆಸರುಗಳನ್ನಿಡುತ್ತಿದ್ದರು. ಈ ಪಾಪಿಗಳು 'ಕಲ್ಲುಂಡೆ' 'ಸಿಮೆಂಟ್ ಲಾಡು' ಎಂದು ಬಾಯಿಗೆ ಬಂದಹಾಗೆ ಒದರುತ್ತಾರಲ್ಲ" ಎಂದು ಮರುಗಿದರು. "ಏನು ನಿಮ್ಮ ಪುಳ್ಳಂಗಾಯುಂಡೆ ಸ್ವಾರಸ್ಯ? ಮಣ್ಣು!" ಎಂದು ಗಾಯಕ್ಕೆ ಉಪ್ಪುಹಾಕಿದರು ಕೆಲವು ಎಳನಿಂಬೇಕಾಯಿಗಳು. ಅವರ ವೈಯಾಕರಣಿಯ ಅಂತರಾತ್ಮ 'ಪೊಯ್ತೆತ್ತ ಪಾವಂತೆ ಪೊರೆದೆದ್ದು', ಎಲ್ಲರನ್ನೂ ಅಳ್ಳಾಡದಂತೆ ಬಿರುನೋಟದಿಂದ ಕೂರಿಸಿ, ತಮ್ಮ ಪ್ರವಚನಕ್ಕೆ ಪ್ರಾರಂಭಿಸಿಯೇ ಬಿಟ್ಟರು. 'ಯಾಕಾರೆ ಕೆರಳಿಸಿದೆವೋ ಅವರನ್ನು' ಎನ್ನಿಸಿಬಿಟ್ಟಿತು ನಮ್ಮೆಲ್ಲರಿಗೂ. ಆದರೂ ಅವರು ಬಿಡಲಿಲ್ಲ. ನಮ್ಮ ಬಿರಿಹೊಟ್ಟೆಯ ತಲೆಗೆ ವ್ಯಾಕರಣವನ್ನು ಗಿಡಿಯುವುದಕ್ಕೆ ತೊಡಗಿದರು:

'ಪುಳ್ಳಂಗಾಯುಂಡೆ' ಎಂಬುದು ಆವಂಸ್ಕೃತರ ಅವಭ್ರಂಶ. ಬಾಯಿ ಹೊರಳದೆ ಹುರುಳರಿಯದೆ ಹಾಗೆ ತಪ್ಪಾಗಿ ನುಡಿಯುತ್ತಾರಷ್ಟೆ. ಇದರ ಸರಿಯಾದ ರೂಪ 'ಪೊರಿವಿಳಂಗಾಯ್ ಉರುಂಡ್ಯೆ!' ಇದು ಶುದ್ಧ ದ್ರಾವಿಡ ಪದ.'ಪೊರಿ ವಿಳಾಂಗಾಯ್' ಎಂದೂ ಹೇಳುವುದುಂಟು. ನಮ್ಮ ಉಂಡೆಯ ನಿಜವಾದ ಮೂಲ ರೂಪ ಉರುಂಡ್ಯೆ. ಉರುಂಡ್ಯೆ ಎಂದರೆ ಉರುಳುವ ಪದಾರ್ಥ ಎಂದರ್ಥ. ಜನರ ಉಚ್ಚಾರದ ಅವಸರದಲ್ಲಿ ರಕಾರ ತೇದುಹೋಗಿ, ಉರುಂಡೆ 'ಉಂಡೆ'ಯಾಗಿದೆ. ("ಇದೇನ್ರಿ! ಪುಳ್ಳಂಗಾಯುಂಡೆಯ ಸ್ವಾರಸ್ಯ ಕೇಳಿದರೆ ಏನೇನೋ ಆರಂಭಿಸಿಬಿಟ್ಟಿರಿ" ಎಂದು ಯಾರೋ ತಡೆಯಲಾರದೆ ಕೇಳಿಬಿಟ್ಟರು. "ಕೊಂಚ ತಾಳಿರಿ. ಆದನ್ನೇ ಹೇಳುತ್ತಿರುವುದು. ನಮ್ಮನೆ ಜಾಯಿಮುಚ್ಚಿಕೊಂಡು ಕೇಳಿ" ಎಂದು ಗದರಿಸಿ, ಕೊಂಚವೂ ಅಧೀರರಾಗದೆ ಎಳ್ಳಷ್ಟೂ ಬಿಡದೆ ತಮ್ಮ ಪುರಾಣವನ್ನು ಓದಿಯೇ ಮುಗಿಸಿದರು. ಪುರಾಣಕ್ಕೂ ಪುರಾತನವಾದುದ್ದು ಅವರ ವ್ಯುತ್ಪತ್ತಿಯ ಕಥೆ). ಪುಳ್ಳಂಗಾಯುಂಡೆಗೆ ಏನೇನು ಹಾಕುತ್ತಾರೆ ಗೊತ್ತೆ? ಅಕ್ಕಿ, ಗೋದಿ, ಹೆಸರು.

ನಿಮಗೆ ಗೊತ್ತಿಲ್ಲವೆ?

ಹೊಸಕಾಲದ ಬೆಡಗು-ಬೆಡಗಿನ ಹೊಲಿಗೆಯನ್ನು ಅಪೇಕ್ಷಿಸು ವವರು ನನ್ನಲ್ಲಿಗೆ ಬರಬೇಕು. ಮುಕ್ಕಳ ಸರಕಿನಂಗಿ, ಫ್ರಾಕುಗಳು; ಮಹಿಳೆಯರ ಹೊಸ ಹೊಸ ಮಾದರಿಯ ರವಿಕೆಗಳು; ತರುಣರ ಕೋಟು-ಪ್ಯಾಂಟು-ಶರ್ಟುಗಳು; ಎಲ್ಲವೂ ಸೊಬಗು, ಸೊಗಸು!

ಸಿ. ಡಿ. ಹಳಪೇಟಿ, ಜೆಂಟ್ಸ್ ಸ್ಪೆಶಾಲಿಸ್ಟ್,
ಗಾಂಧೀಚೌಕು—ಧಾರವಾಡ.

ಇವನ್ನೆಲ್ಲಾ ಹಸಿಯಾಗಿ ಉಂಡುಂಡೆಯೇ ಕಲಸುವುದಿಲ್ಲ. ಹದವಾಗಿ ಹುರಿದು, ನಯವಾಗಿ ಬೀಸಿ, ಒಳತೆಯಾಗಿ ಸೇರಿಸುತ್ತಾನೆ. 'ಹುರಿ' ಎನ್ನುವುದರ ಹಳಗನ್ನಡ ರೂಪ 'ಪುರಿ'. (ಪುರಿಗಡಲೆ ಕೇಳಿಲ್ಲವೆ? — ಹುರುಗಡಲೆ. ನಮ್ಮ 'ಪುರಿ, ಬುರುಗಲು' ಇದರಿಂದಲೇ ಬಂದದ್ದು; ಹುರಿದದ್ದು ಎಂದು ಅರ್ಥ). ಪುರಿ ಎನ್ನುವುದಕ್ಕೆ ತಮಿಳ ಮಾತು 'ಪೊರಿ', ಪೊರಿ ಎಂದರೆ ಹುರಿದದ್ದು. ವಿಳ(ಳಾ)ಂಗಾಯ್ ಎಂದರೆ ಬೇಲದಕಾಯಿ. ಕಾಯೊಳಗೆಲ್ಲ (ತೆಂಗಿನಕಾಯಿ ಬಿಟ್ಟು) ಅದರಷ್ಟು ಗಡುಸಾದ್ದು ಬೇರೆಯಿಲ್ಲ. ಉಂಡೆಗಳಲ್ಲಿ ಪುಳ್ಳಂಗಾಯುಂಡೆಯಷ್ಟು ಗಡುಸಾದ್ದು ಮತ್ತೊಂದಿಲ್ಲ. ನಿಮ್ಮ ಆ ಅನಿಷ್ಟ ಅಭಿನವ ಅರಸಿಕ ಅಭಿಧಾನವೇ ಅದಕ್ಕೆ ಸಾಕ್ಷಿ. ಆದರೆ, ಮತ್ತೂ ಸ್ವಾರಸ್ಯವಾದ್ದು ಇನ್ನೊಂದುಂಟು. ಬೇಲದ ಕಾಯ ಚಿಪ್ಪನ್ನು ಒಡೆದು ಒಳಗಿನ ತಿರುಳನ್ನು ತೆಗೆದರೆ ಹೇಗೆ ಕಾಣುತ್ತದೆ? ಸೀತಿರುಳಿನ ತಕ್ಕೆಯಲ್ಲಿ, ಅಲ್ಲಲ್ಲಿ ಮಣಿಮಣಿಯಾಗಿ ಬಿತ್ತ ಅಂಟಿಕೊಂಡಿರುತ್ತದೆ. ಕೊಂಚ ನಾರೂ ಸೇರಿಕೊಂಡಿರುತ್ತದೆ. ಎಲ್ಲಿ! ಈಗ ಈ ಉಂಡೆ ಒಡೆಯಿರಿ. ಹುರಿಗಡಲೆ ಕಾಳೂ ನೆಲಗಡಲೆ ಕಾಳೂ ಹಿಟ್ಟಿನ ನಡು-ನಡುವೆ ಬಿತ್ತದಂತೆ ಬೆಲ್ಲದ ಪಾಕದ ಬಲದಿಂದ ಅಂಟಿಕೊಂಡಿವೆ ನೋಡಿ. ಈ ಕೊಬ್ಬರಿಯ ತುರಿಗಳು ನಾರು ಇದ್ದ ಹಾಗೆ. ತಿಳಿಯಿತೋ ಪೊರಿವಿಳಂಗಾಯ—ಪುಳ್ಳಂಗಾಯ—ಸ್ವಾರಸ್ಯ! ಹೊರಗುಣ, ಒಳಗುಣಗಳೆರಡರಿಂದಲೂ ಈ ಉಂಡೆ ಬೇಲದಕಾಯನ್ನು ಹೋಲುತ್ತದಾದ್ದರಿಂದ, ಇದಕ್ಕೆ ಈ ಹೆಸರು ಬಂತು ನೋಡಿ! ನಮ್ಮಲ್ಲಿ ಹೇಗೆ ಹೆಸರಿಡುತ್ತಿದ್ದರು! ಕಲ್ಲುಂಡೆಯಂತೆ; ಸಿಮೆಂಟ್ ಲಾಡು ವಂತೆ!"

"ಎಷ್ಟು ಬೇಕರಿ, ಇಂಥ ಹೆಸರುಗಳು?" ಎಂದು ಮತ್ತೊಂದು ಪ್ರಪಂಚನಕ್ಕೆ ಉಪಕ್ರಮಿಸುವಂತೆ ತೋರಿತು. "ಸಾಕವ್ವಾ ಸಾಕು. ಹೊಟ್ಟೆಯಲ್ಲಿ ಪದಾರ್ಥವೇ ಇರುವಾಗ ಹೆಸರು ಕಟ್ಟಿ ಕೊಂಡೇನು ತಲೆಗೆ?" ಎಂದು ಎಲ್ಲರೂ ಎದ್ದರು. ಎಳುವುದರೊಳಗೆ ನೆಲದ ಮೇಲೆ ಆ ಹಾಳು ತೇಂಕೊಳ್ಳು ಚೂರು ಚೂರು ಬೇಕೆ? ಆದರಲ್ಲಿಯೂ ಆ ಮಹಾರಾಯ ಮಹೇಂಜೋದಾರೋ ಸಿನ ಕಣ್ಣಿಗೆ? "ನೋಡಿರಿ! ಇದರ ಹೆಸರು ಎಷ್ಟು ಸೊಗಸಾಗಿದೆ." ಎಂದು ಮೊದಲು ಮಾಡಿಯೇ ಬಿಟ್ಟರು. ಅವರ ಪಟ್ಟು ಕೋಲ್. ರಿಜ್ ಚಿತ್ರಿಸಿರುವ ಪುರಾತನ ನಾವಿಕನ ಪಟ್ಟಿನಂತೆ. ಹಿಡಿದರೆ ಬಿಡುವುದಿಲ್ಲ. ಆದರೆ, ಒಂದೇ ವ್ಯತ್ಯಾಸ ಆ ನಾವಿಕನಿಗೂ ನಮ್ಮ ವೈಯಾಕರಣಿಗೂ. ನಾವಿಕನಿಗೆ ಗೊತ್ತಿತ್ತು...ಕಥೆ ಯಾರಿಗೆ ಹೇಳಬೇಕೆಂದು. ನಮ್ಮವರಿಗೆ ಗೊತ್ತಿರಲಿಲ್ಲ ಯಾರಿಗೆ ಉಪನ್ಯಾಸ ಮಾಡಬೇಕೆಂದು. "ಇದೂ ತಮಿಳು ಮಾತು. ಸರಿಯಾದ ರೂಪ ತೇನ್‌ಕುಬಿಲ್. ತೇನ್ ಎಂದರೆ ಜೇನು; ಸೀಯಾದುದು ಎಂದರ್ಥ. ಕುಬಿಲ್ ಎಂದರೆ ಗುಂಗುರು. ಕೂದಲು, ಕುರುಳು. ತೇಂಕೊಳ್ಳಿನ ಸುರುಳಿ ಹೇಗಿರುತ್ತದೆ ನೋಡಿ. ಗುಂಗುರು ಗುಂಗುರಾಗಿ, ಕುರುಳಿನಂತೆ ಸುತ್ತಿ ಕೊಂಡಿರುತ್ತದೆ. ಸಪ್ಪೆನಾರಿನ ಸುರುಳಿಯಲ್ಲ; ಜೇನು ಸವಿಯ ಸುರುಳಿ. ಅದಕ್ಕೇ ಇದನ್ನು ತೇಂಗೊಳಲು (ತೇಂ ಕುಬಿಲ್) ಎಂದು ಕರೆದದ್ದು."

"ಅಯ್ಯಂಗಾರ್ರು ಇನ್ನೊಂದು ತೇಂಗೊಳಲು ಮಾಡುತ್ತಾರೆ, ತುಣಿತೇಂಗೊಳಲು; ಹೋಟಲಿನಲ್ಲಿ ಜಾಂಗೀರೋ ಷಾಜಹಾನೋ ಎನ್ನುತ್ತೀರಲ್ಲ!" ಎಂದು ಮತ್ತೆ ಏನನ್ನೊ ಆರಂಭಿಸಿದರು. ರಾತ್ರಿ ಬಹಳ ಹೊತ್ತಾಗಿತ್ತು; ಹೊಟ್ಟೆ ಭಾರವಾಗಿತ್ತು; ಕಣ್ಣು ಎಳೆಯುತ್ತಿತ್ತು; ಪುದುಳಂತೂ ಸೊರಗಿ ಸೋತು ಹೋಗಿತ್ತು. ಆದ್ದರಿಂದ, ಅವರ ವ್ಯಾಖ್ಯಾನ ಮುಂದಿನ ಗೋಕುಲಾಷ್ಟಮಿಗೆ ಆಗತಕ್ಕದ್ದೆಂದು ಸರ್ವಾನುಮತದಿಂದ ತೀರ್ಮಾನವಾಗಿ, ಯತ್ನವಿಲ್ಲದೆ ಅವರ ಬಾಯಿ ಮುಚ್ಚಿತು.

———o———



ಸ್ನಾನದ ಸಮಸ್ಯೆ

ಶ್ರೀ. ಎಸ್. ಜಿ. ಕೆ.

★

"ಈ ಹಾಳು ಬ್ರಾಹ್ಮಣಜನ್ಮ ಬಂದುದೇಕೋ .. ಎಂದು ಅಡಿಕೊಳ್ಳದ ದಿನವಿಲ್ಲ; ನಿಟ್ಟುಸಿರು ಬಿಡದ ಸಮಯವಿಲ್ಲ. ಸಾಕಾಗಿಹೋಗಿದೆ. ಉಳಿದ ಜಾತಿಗಳಿಗೇನು ಕಡಿಮೆ ನಮ್ಮ ಭರತವರ್ಷದಲ್ಲಿ? ಯಾವುದಕ್ಕೂ ಪಡೆದು ಬರಬೇಕು!! ಪುಣ್ಯ ಮಾಡಿರಬೇಕು!!!"

ಅದೇಕೆ ನಾನು ಹೀಗೆ ಅಂದುಕೊಳ್ಳುತ್ತಿರಬೇಕೆಂಬುದು ಯಾರಿಗೂ ಹೊಳೆಯಲಾರದು. ಪ್ರಾಯಶಃ ಸರಕಾರದಲ್ಲಿ ಸೊಟ್ಟ ಒಂದು ಕಾರಕೂನಿಕೆಗಾಗಿ ಅಶೆಮಾಡಿ .. ನಿರಾಶನಾಗಿ ಹೀಗೆ ಬಡಬಡಿಸುತ್ತಿರಬೇಕೆಂದು ಸೂಕ್ಷ್ಮಬುದ್ಧಿಯ ಕೆಲವರು ತರ್ಕಿಸಿರಬೇಕು. ಅಥವಾ ಡಿ. ಎಲ್. ಬಿ. ಗಾಗಲಿ, ಕೆ. ಪಿ. ಸಿ. ಸಿ. ಗಾಗಲಿ, ಪ್ರೆಸಿಡೆಂಟ್ ಆಗುವುದಕ್ಕೆ ಆಗದೆ ಹೀಗೆ ಅಂದಿರ ಬಹುದು ಎಂದೂ ಕೆಲವರು ಕಲ್ಪಿಸಿರಲು ಸಾಕು. ಜೊಟ್ಟೆ-ಬಟ್ಟೆಯ ಚಿಂತೆ ಇಲ್ಲದ ನಾಲ್ಕು ಜನ 'ಇರಬಹುದು' ನಮ್ಮಂತೆ ರಾವ್‌ಸಾಹೇಬ, ರಾವಬಹಾದ್ದೂರ್ ಆಗಬೇಕೆಂದು ಪ್ರಯತ್ನ ನಡೆಯಿಸಿರಬಹುದು' ಎಂದು ಲೆಕ್ಕಹಾಕಬಹುದು. ಆದರೆ ನನ್ನ ವ್ಯಸನದ ಕಾರಣ ಮಾತ್ರ ನಾನು ಹೇಳದೆ ಯಾರಿಗೂ ತಿಳಿದು ಬರುವುದು ಶಕ್ಯವೇ ಇಲ್ಲ.

ಹಸೀ ವೈಷ್ಣವರಲ್ಲಿ ಹುಟ್ಟಿದ ನನಗೆ ತೀರ ಸಣ್ಣವನಿರುವಾಗಲೆ ಸ್ನಾನವೆಂಬ ಶಿಕ್ಷೆ ಗಂಟುಬಿದ್ದಿತ್ತು. ಜಳಿ ಇರಲಿ, ಮಳೆ ಇರಲಿ, ಉಪನಯನವಾದ ಮೇಲೆ ಸ್ನಾನಬಿಡುವಂತಿಲ್ಲ. ಅದಕ್ಕೆ ಮೊದಲು, ವರ್ಷಕ್ಕೆ ಒಂದೆರಡೇ ಅವರೂ, ಗ್ರಹಣದ ಕಾಲಕ್ಕೆ ಮಧ್ಯರಾತ್ರಿಯಲ್ಲ, ಅರ್ಧನಿದ್ರೆಯಲ್ಲಿ ಮಾಡಿಸಿದ ಸ್ನಾನ ಇಡಿಯೆ ವರ್ಷವೆಲ್ಲ ನೆನಪುಳಿಯುತ್ತಿತ್ತು. ಹೀಗೆ ನೆನಪುಳಿಯುವುದಕ್ಕೆ ಕಾರಣವಿಲ್ಲದೆ ಇಲ್ಲ. ಒಮ್ಮಿಂದೊಮ್ಮೆ— ರಾತ್ರಿಯಲ್ಲಿ ಬೆಚ್ಚನ್ನ ಮುಸುಕು ನಿಂದೆಬ್ಬಿಸಿ— ನೀರು ಸುರುವಿದರೆ ಜಳಿಜ್ವರ ಬಾರದೆ ಹೇಗೆಬಿಟ್ಟೀತು? ಶೀತಜ್ವರ ಪ್ರಾರಂಭವಾಗಿ ನಾಲ್ಕಾರು ತಿಂಗಳುಗಳ ವರೆಗೂ ಸ್ಟ್ರೀನೀನು ನುಂಗಿದ ನೆನಪೂ ಜೊತೆಗಿಯೆ ಇದೆ. 'ಅಂತೂ ಒಮ್ಮೆ ಗುಣವಾಯಿತು!' ಎನ್ನುವಷ್ಟರಲ್ಲಿ ಇನ್ನೊಂದು ಗ್ರಹಣವೋ, ಸೂತಕವೋ, ವೈದ್ಧಿಯೊ ಬರುತ್ತಿತ್ತು. ಇಂತಹ ಬಾಲ್ಯವನ್ನು ಸಾಟುವುದಕ್ಕೆ ಮೊದಲೇ ಮುಂಜಿಯಾಯಿತು. ಕೇಳುವುದೇನು? ಈ ಅಧಿಕಸ್ನಾನಗಳ ಜೊತೆಗೆ ನಿತ್ಯಸ್ನಾನ ಪ್ರಾರಂಭವಾಯಿತು.

ಮೈಸೂರಿನವರಿಗೆ ಈ ನನ್ನ ಮಾತುಗಳು ಆಶ್ಚರ್ಯವನ್ನುಂಟು ಮಾಡಬಹುದು. ಏಕೆಂದರೆ, ಅವರು ಎಣ್ಣೆ-ನೀರಿನ ಅಭ್ಯಂಗ ಸ್ನಾನಕ್ಕೆ ಮೈಸೋತವರು. ಆದರೆ ಅವರೇನು ಒಲ್ಲರು ಧಾರವಾಡದ ಜಳಿಯಲ್ಲಿಯ ತಣ್ಣೀರ ಸ್ನಾನವನ್ನು? ಅಸಹಕಾರ

ನಮ್ಮಲ್ಲೊಂದು ಪರಂಪರೆಯ ನಗೆಮಾತಿದೆ ಗೊತ್ತೇ? 'ಸ್ನಾನದಂತಹ ಶತ್ರುವಿಲ್ಲ; ಸಂಧ್ಯಾನ ದಂತಹ ಮಿತ್ರನಿಲ್ಲ' ಎಂದು. ಸ್ನಾನವು ಶತ್ರುವಾಗಿ ಪರಿಣಮಿಸುವುದು ಯಾರಿಗೆ? ಯಾವಾಗ?

●

ಜಳವಳಿಯ ಕಾಲದಲ್ಲಿ ಹೊರಟ ರಾಷ್ಟ್ರೀಯ ಶಾಲೆಯ — ಆಶ್ರಮವಾಸಿಗಳಾದ— ಆದರ್ಶವಿದ್ಯಾರ್ಥಿಗಳಿಗಂತೂ ಈ ಅನುಭವ ಇನ್ನೂ ಹೆಚ್ಚು. ನನ್ನ ಮಾತನ್ನೇ ಹೇಳುತ್ತೇನೆ: ಡಿಸೆಂಬರ್ ತಿಂಗಳು; ಮಾಳಮಡ್ಡಿಯಲ್ಲಿ ಲಕ್ಷ್ಮೀಸಿಂಗನ ಕೆರೆಯ ಮೇಲಿನ ಬಂಗ್ಲೆ; ನಾಲ್ಕು ಗಂಟೆಗೆ ಎದ್ದು ಆದಿಶೇಷನ ಗಂಟಲಿನಿಂದ ಜಿಮ್ಮುವ ಪಾತಾಳಲೋಕದ ನೀರನ್ನು ಸೇದಿಕೊಂಡು ಸುರುವಿಕೊಳ್ಳುವ ಆ ಅನುಭವ! ಅಬ್ಬಾ! ಅನುಭವಿಸಿದವರಿಗೇ ಗೊತ್ತು, ಸ್ನಾನದ ಸುಖವೆಂದರೆ ಏನು ಎಂಬುದು.

ಒಂದು ಪ್ರಸಂಗ ತೀರ ನೆನಪಿನಲ್ಲಿದೆ. ನಮಗಿಂತಲೂ ನಮ್ಮ ಅಧ್ಯಾಪಕರು ಕಷ್ಟಸಹಿಷ್ಣುಗಳೆಂದು ಆಗಂತೂ ನಮ್ಮ ಕಲ್ಪನೆಯಾಗಿತ್ತು. ಅದೇಕೆ, ನಮ್ಮ ಅಧ್ಯಾಪಕರೇ ಹಾಗೆ ನಮ್ಮಲ್ಲಿ ಕಲ್ಪನೆಯನ್ನು ತುಂಬಿದ್ದರು. ಒಮ್ಮೆ ಅವರೇ ಬೆಳಗಿನ ಐದು ಗಂಟೆಗೆ ಸ್ನಾನಮಾಡುವಾಗ 'ಏನಪಾ, ಹಾಳು ಬ್ರಾಹ್ಮಣಜನ್ಮ!' ಎಂದು ಉಸುರುಗರೆದರು.

* * *

ಮೈಸೂರಿನ **ಎಣ್ಣೆ ಸ್ನಾನ** (oil balh) ವೆಂದೆನಲ್ಲ! ಅದೇನೆಂದು ಧಾರವಾಡದ ಮಿತ್ರರನೇಕರು ದಿಗಿಲುಗೊಂಡು ಕೇಳಬಹುದು. ಒಂದು ಸಲ ಸ್ಕೌಟ್ ಟ್ರೇನಿಂಗಿಗೆಂದು ಚಿಕ್ಕಮಗಳೂರ ಕ್ಯಾಂಪಿಗೆ ಹೋಗಿದ್ದೆವು. ಇಲ್ಲಿಂದ ಹೋದವರು ನಾವು ಆರು ಜನ. ಉಳಿದ ಮೂವತ್ತು ಜನರೂ ಮೈಸೂರಿನವರೇ. ಆಡವಿಯಲ್ಲಿ ಕ್ಯಾಂಪ್‌ವಾಸ, ನವಂಬರ್ ತಿಂಗಳು, ಜಳಿಮಳಿ ಎರಡೂ ಇದ್ದುವು. ಅಲ್ಲಿಯೇ ದೀಪಾವಳಿಯ ಹಬ್ಬವೂ ಆಯಿತು. ಕ್ಯಾಂಪ್-ಜೀವನದಲ್ಲಿ ಹಬ್ಬಬಂದರೆ ಅದಕ್ಕೆಲ್ಲಿ ಮಹತ್ವ? ಆದರೂ ನಮ್ಮ ಬ್ರದರ್ ಸ್ಕೌಟು (ಕ್ಯಾಂಪಿನ ಅಧಿಕಾರಿ), ಒಂದು ದಿನ ಹಬ್ಬ-ಮಾಡುವುದೆಂದೂ, ಒಂದು ಉಳಿದ ಕಾರ್ಯಕ್ರಮಕ್ಕೆ ಬಿಡುವು ಎಂದೂ ಮೇಲಿನ ಅಧಿಕಾರಿಗಳಿಗೆ ಬರೆದು ಅಪ್ಪಣೆತರಿಸಿಕೊಂಡಿದ್ದರು. ಅಲ್ಲದೆ ಹಬ್ಬಕ್ಕೆ ಎಂದು ಬೇರೆ ಸ್ವಲ್ಪ ಹಣವೂ ಮಂಜೂರಾಗಿ ಬಂದಿತ್ತು.

ಈ ಆನಂದದ ಸುದ್ದಿ ಕ್ಯಾಂಪಿನಲ್ಲಿ ಕೂಡಲೆ ಹಬ್ಬಿತು. ಮುನ್ನಾದಿನ ಕ್ಯಾಂಪ್‌ಫಾಯರಿನ ಮುಂದೆ ನಾವೆಲ್ಲ ಕುಳಿತು, ಮರುದಿನದ ಹಬ್ಬದ ಬಗ್ಗೆ ವಿಚಾರಮಾಡಿದೆವು.

ಬ್ರದರ್ ಸ್ಕೌಟು ಹಬ್ಬದ ಮಾತೆತ್ತಿ "ಆಯಿಲ್‌ಬಾಥ್, ನಿತ್ಯದ ಊಟ; ಇಲ್ಲವೇ ಪುರಿ-ಬೀರಿನ ಊಟ, ನಿತ್ಯದಂತೆ ಕೆರೆಯ ಸ್ನಾನ!" ಎಂದು ಅಂದರು. ಮೈಸೂರಿನ ಕಾರ-ಹುಳಿಯ ಊಟ

ಬೇಸರವಾಗಿದ್ದ ನಮಗೆ, ಪುರಿ-ಖೀರಿನ ಹೆಸರು ಕಿವಿಗೆಬೀಳುತ್ತಲೆ ಬಾಯಲ್ಲಿ ನೀರುಬಿಟ್ಟುವು. ಅಷ್ಟರಲ್ಲಿ ಳ-ಆ ಜನರು 'ಆಯಿಲ್ ಬಾಥೇ ಇರಲಿ ಸರ್' ಎಂದು ಆಂದದ್ದು — ಸಂಗೀತದಲ್ಲಿಯ ಅಪಶ್ರುತಿಯಂತೆ— ಏಕಕಾಲಕ್ಕೆ ಕೇಳಿಸಿತು. ಹೋಟೆಗೆ ಹಾಕ ಲಾಗಿ ನಮ್ಮ ಆರು ಜನರನ್ನು ಬಿಟ್ಟರೆ ಮೂವರು ಮೈಸೂರಿ ನವರು ಮಾತ್ರ ಪುರೀ-ಖೀರಿಗೆ; ಉಳಿದವರೆಲ್ಲ ಆಯಿಲ್ ಬಾಧಿಗೆ. ಆ ಮೂವರು ಕೂಡ ಹರಿಹರ, ಡಾವಣಗೇರಿಯವರು. ಆದರೂ ಬ್ರದರ್‌ಸ್ಕಾಟು ಧೋರವಾಡದಿಂದ ಬಂದ ನಮಗೆ ಮನ್ನಣೆ ಕೊಡ-ಬೇಕೆಂದು ಬಯಸಿ, ಪುರಿ-ಖೀರಿಗೆ ರೂಲಿಂಗ್ ಕೊಟ್ಟರು.

ಮೂರನೆಯ ದಿನ ಊಟಮಾಡಿ ಎಳ್ಳು ಸೇವಿಸುವಾಗ, ಹಬ್ಬ ಹೇಗಾಯಿತೆಂದು ಮೈಸೂರಿನವರನ್ನು ಕೇಳಿದರೆ, 'ಏನ್ ಸ್ವಾಮಿ ಆಯಿಲ್‌ಬಾಥ್ ಇಲ್ಲದೆ ಹಬ್ಬಾ ಎಂದರೇನು?' ಎಂದರು. ಕೇಳಿ ಗಾಬರಿಯಾದೆ. ಆಯಿಲ್ ಬಾಧಿನ ಅರ್ಧವಾಗವೆ ಹೋಯಿತು.

* * *

'ಈ ತಣ್ಣೀರಿನ ಸ್ನಾನದಿಂದ ಬಿಡುಗಡೆ ಇಲ್ಲವೆ?' ಎಂದು ನಾನು ಅದೆಷ್ಟೋ ಸಲ ಯೋಚಿಸಿದ್ದುಂಟು. ಆ ದ ರ ಲ್ಲಿ ಯ ಂ ತೂ ಬೆಳಗಾಂವಿಯ ಕಾಂಗ್ರೆಸ್ಸಿನ ಕಾಲಕ್ಕೆ, ಪ್ರತಿನಿತ್ಯ ಸ್ನಾನಮಾಡಲೆ ಬೇಕೆಂಬ ನಮ್ಮ ನಿರ್ಧಾರಕ್ಕೆಪರೀಕ್ಷೆಯ ಕಾಲವೆ ಬಂದಂತಾಗಿತ್ತು.

ಮುಂದೆ ಮರುವರ್ಷವೇ ಶಾಂತಿನಿಕೇತನಕ್ಕೆ ಹೊ ೀ ದ ರೆ ಅಲ್ಲಿಯೂ ಇದೇ ಹಾಡು. ಸಾಕಷ್ಟು ಸ್ವಾತಂತ್ರ್ಯವಿದ್ದರೂ ಸ್ನಾನ-ಎಲುವು ಕೊರೆಯುವ ಚಳಿಯಲ್ಲಿಯೂ ತಣ್ಣೀರ ಸ್ನಾನ ತಪ್ಪಲಿಲ್ಲ.

ಒಂದುದಿನ, ಅಲ್ಲಿಯ ಜಳಿಗೆ ಹೆದರಿದ ನಾನು ಎಂಟು ದಿನ ಸ್ನಾನ ಮಾಡದೆ ಹಾಗೆಯೆ ಬಿಟ್ಟೆ. ಆದರೆ ಬ್ರಾಹ್ಮಣ ಜನ್ಮ! ಜನ್ಮದಾರಭ್ಯ ಜೊತೆಗೆ ಬಂದ ಜಟ ಜೇರೆ. ಹೆಚ್ಚು ದಿನ ಸ್ನಾನ ಬಿಡಲು ಮನಸ್ಸು ಒಪ್ಪಲಿಲ್ಲ. ಸಾಮಾನ್ಯವಾಗಿ ಇಡಿಯೆ ಡಿಸೆಂಬರ್ ತಿಂಗಳೆಲ್ಲ ಸ್ನಾನ ಮಾಡದವರಿಗೆ ಅಲ್ಲಿ ಕೊರತೆ ಇರಲಿಲ್ಲ. ಅಂತೂ ಸ್ನಾನಕ್ಕೆ ಸಿದ್ದನಾದೆ; ಆದರೆ ತಣ್ಣೀರ ಸ್ನಾನಕ್ಕೆ ದೇಹವು ಒಪ್ಪಿಕೊಳ್ಳಲಿಲ್ಲ. ಆಯಿಲ್-ಬಾಧಿನ ನೆನಪಾಯಿತು. ಉತ್ಸಾಹದಿಂದೆದ್ದು ನೀರು ಕಾಯಿಸಿ ಕೊಂಡು ಸಿದ್ಧನಾದೆ. ಸಳಮಳ ನೀರು ಕಾಯ್ದಿವೆ. ಹೆಪ್ಪುಗಟ್ಟಿ ಕಲ್ಲಿನಂತಾದ ಕೊಬ್ಬರಿ ಎಣ್ಣೆಯನ್ನು ಜೆನ್ನಾಗಿ ಬಸಿಮಾಡಿ, ತಲೆಗೆ ಹಚ್ಚಿಕೊಂಡೆ; ಮರುಕ್ಷಣದಲ್ಲಿಯೇ ನನ್ನ ತಲೆ ಹಿಮಾಚ್ಛಾದಿತ ವಾದಂತಾಯಿತು. ಇದನ್ನು ನೋಡಿಕೊಂಡು ನೀರು ತುಸ ಹೆಚ್ಚಾಗಿಯೆ ಬಿಸಿ ಇರಲೆಂದು ಮತ್ತಿಷ್ಟು ಕಾಯಿಸಿ ಆಯಿತು. ಸರಿ, ಎಲ್ಲವೂ ಸಿದ್ಧವಾಗುವ ಹೊತ್ತಿಗೆ ಅಧ್ಯಾಪಕರೊಬ್ಬರು ಅಲ್ಲಿಗೆ ಬಂದರು. ಅವರು ನನ್ನೆಲ್ಲ ಸಿದ್ದತೆಯನ್ನೂ ಹೆಪ್ಪುಗಟ್ಟಿದ ತಲೆಯನ್ನೂ ನೋಡಿ ಗಾಬರಿಯಿಂದ (ಏಕೆಂದರೆ ಬಂಗಾಲದಲ್ಲಿ ಸಾಸಿವೆ ಎಣ್ಣೆ ಹಚ್ಚಿಕೊಳ್ಳುವರು) ಇದೇನೆಂದು ನನ್ನನ್ನು ಕೇಳಿದರು. ನಾನು 'ಆಯಿಲ್‌ಬಾಥ್' ಎಂದೆ. ಅದಕ್ಕೆ ಅವರು ಮತ್ತಿಷ್ಟು ಗಾಬರಿಯಾಗಿ 'ಏನು? ಚಳಿಗಾಲದಲ್ಲಿ, ಎಣ್ಣೆ ಹಚ್ಚಿಕೊಂಡು,..ತಲೆಯ ಮೇಲೆ..ಬಿಸಿ ನೀರು ಸ್ನಾನ? ಛೀಛೀ ಇರಬೇಕೆನ್ನುವೆಯೋ ಏನು ಸಾಯಬೇಕೆನ್ನುವೆಯೋ' ಎಂದು ಗಟ್ಟಿಯಾಗಿ ಕಿರಿಚಿಕೊಳ್ಳುತ್ತ, ನನ್ನ ಕೈಯಲ್ಲಿದ್ದ ಸಣ್ಣ ಬಕೇಟನ್ನು ಕಿತ್ತುಕೊಂಡು, ಬಿಸಿನೀರನ್ನು ಉರುಳಿಸಿ ಬಿಟ್ಟರು. ಸಾಲದುದಕ್ಕೆ ತಾವೇ ಬಾವಿಯಿಂದ ಸೇದಿ ಎರಡು ಬಕೇಟು ನೀರನ್ನು ಸುರುವಿ ಬಿಟ್ಟರು..ತಲೆಯ ಮೇಲೆ.

ಆಯಿಲ್ ಬಾಥ್ ಮೈಸೂರು ದೇಶದಲ್ಲಿ ಅಯುಷ್ಯ ಹೆಚ್ಚಿಸು ತ್ತದೆ; ಆದರೆ ಅದೇ ಬಂಗಾಲದಲ್ಲಿ ಕಡಿಮೆ ಮಾಡುತ್ತದೆ. ಇದನ್ನು ನೆನೆದರೆ 'ಟೀ ನೀರು ಚಳಿಗಾಲದಲ್ಲಿ ಕಾಪನ್ನೂ ಬೇಸಗೆಯಲ್ಲಿ ತಂಪನ್ನೂ ಮಾಡುವುದು' ಎಂಬ ಜಾಹೀರಾತು..ನಿಜವಿರಬೇಕೆಂದು ಏಕೆ ತೋರಬಾರದು?

* * *

ಕೊನೆಗೂ ಆಯಿಲ್‌ಬಾಥಿನ ಅರ್ಥವಾಗದ್ದಕ್ಕೆ, ಸುಖ ತಿಳಿ ಯದ್ದಕ್ಕೆ ತುಂಬ ಕೆಡಕೆನಿಸಿತು. ಬಹಳ ದಿನಗಳ ಮೇಲೆ ಮೈಸೂರು ಪ್ರಾಂತ್ಯದಲ್ಲಿಯೇ ಕೆಲವು ದಿನ ಸುತ್ತಬೇಕಾಗಿ ಒಂತು. ಅಲ್ಲಿ ನನ್ನ ಮಿತ್ರರು—ಹೆಂಗರುಳಿನವರು 'ದಣಿದು ಬಂದಿದ್ದೀಯ ಆಯಿಲ್ ಬಾಥ್ ಆಗಲಿ' ಎಂದರು. ನಾನು ಕೂಡಲೆ ಒಪ್ಪಿಕೊಂಡೆ.

ಔಡಲ ಎಣ್ಣೆ—ಅದರ ವಾಸನೆಯೇ ನನಗೆ ಆಗುತ್ತಿರಲಿಲ್ಲ—ಸೀಗೇಕಾಯಿ ಪುಡಿ..ಅನೇಕ ವರ್ಷಗಳ ಮೇಲೆ ಅದರ ಸಮಾಗಮ! ಚಿಕ್ಕವನಿದ್ದಾಗಿನ ಬಾವಾ. ರಾತ್ರಿ ಮಲಗದಿರುವುದನ್ನು ನೋಡಿ ಅಕ್ಕ 'ಕಣ್ಣುಮುಚ್ಚು ಸಿಗೀಕಾಯಿ ಹಾಕತೀನಿ ನೋಡು!' ಎಂದೊಡನೆ ಹೆದರಿ ಕಣ್ಣುಮುಚ್ಚುತ್ತಿದ್ದ ನೆನಪು ಬಂದಿತು. ಇಂದು ಧೈರ್ಯತಾಳಿದೆ. ನನ್ನ ಮಿತ್ರ ಜೆನ್ನಾಗಿ ಉಜ್ಜಿ ಉಜ್ಜಿ ತಾನೇ ಎಣ್ಣೆಯನ್ನು ಹಚ್ಚಿದ..ಅಲ್ಲ, ಎಣ್ಣೆಯಲ್ಲಿ ನನ್ನನ್ನು ಅದ್ದಿ ಇಟ್ಟ. ಔಡಲೆಣ್ಣೆಯ ಮಡಪನ್ನು ಬೇಡವೆಂದು ಉಸಿರಾಡಿಸಿದ್ದರೂ ಅದರಿಂದಲೆ ಒಡಲು ತುಂಬಿತ್ತು.

ಗಳೆಯನ ಅಪ್ಪಣೆಯ ಮೇರೆಗೆ ಬಚ್ಚಲಲ್ಲಿ ಕುಳಿತೆ. ನೀರು ಎಂತಪ ವಿದ್ದುವೆಂಬುದನ್ನು ನೋಡುವುದಾಗಲಿಲ್ಲ. ಗೆ ಳೆ ಯ ನಿ ಗೂ ಗೊತ್ತಾಗಲಿಲ್ಲವೆಂದು ತೋರುತ್ತದೆ. ದೊಡ್ಡದೊಂದು ಕೊಳಗ ತಪ್ಪೇಲಿ ತುಂಬಿ ನುಗ್ಗುವಿದ. ಅಂದು ಬಂಗಾಲಿ ಬಾಬುಗಳು ಅಂದ ಮಾತು ನೆನಪಿಗೆ ಬಂದಿತು. ಆದರೆ ನಾನು ಆಗ ಇದ್ದದ್ದು ಮೈಸೂರು ಸೀಮೆಯಲ್ಲಿ— ಎಂದು ಸುಮ್ಮನಿರಲು ಯತ್ನಿಸಿದೆ. ಅಷ್ಟರಲ್ಲಿ ಇನ್ನೊಂದು ತಪ್ಪೇಲಿ ಎಸರು ನೀರು ಮೈಮೇಲೆ ಬಿದ್ದೇಬಿಟ್ಟಿತು. ಹೇಳಲು ಬಾಯಿ ಬರದ್ದಕ್ಕೆ ಕೈಸನ್ನೆಯನ್ನು ಮಾಡಿ ಎದ್ದು ಬಿಟ್ಟೆ. ಗೆಳೆಯ ನೋಡುತ್ತಾನೆ ಮೈಯ ತುಂಬೆಲ್ಲ ನೀರಿನಿಂದ ಸುಟ್ಟ ಗುಳ್ಳೆಗಳು. ಆಯಿಲ್‌ಬಾಥ್ ಅಷ್ಟಕ್ಕೇ ನಿಂತಿತು. ಔಷಧೋಪ ಚಾರ ನಡೆಯಿತು. ಕೊನೆಗೊಮ್ಮೆ ಆಯಿಲ್‌ಬಾಥಿನ ಅನುಭವ ವಾಯಿತು.

* * *

ಸ್ನಾನಗಳಲ್ಲಿ ಇನ್ನೂ ಅನೇಕ ಪ್ರಕಾರದ ಸ್ನಾನಗಳಿವೆಯಂತೆ. ಅಭ್ಯಂಗಸ್ನಾನದ ಜೊತೆಗೆ 'ಸಾಧನೀದ್ವಾದಶಿಯ ದಿನ ನದಿಯ ದಂಡೆಯ ಬ್ರಾಹ್ಮಣರು ಹಾಕುವ ಕಾಗೀ ಮುಳುಗು, ಬಯಲ ಸೀಮೆಯ ಜನರ ಬಂಕಾಪೂರಸ್ನಾನ, ಉದರನಿಮಿತ್ತವಾಗಿ

(೪೭೦ ನೆಯ ಪುಟ ನೋಡಿರಿ.)

ಜಂಬದ ಜಾನಕಿ ★

ಶ್ರೀ. ಶಿವರಾಮ ಕಾರಂತ

(ಒಂದೆ ದೃಶ್ಯದ ನಾಟಕ)

ಪಾತ್ರಗಳು:

ಜಾನಕಿ, ಯೌವನೆ. ಮನೆಯಲ್ಲಿ ಬಡತನವಿದ್ದರೂ. ಹೊರಗೆ ಸಿರಿವಂತಿಕೆಯ ಸೋಗು ಬಿಡಲಾರದವಳು. ಸೀತು, ಅವಳ ಮನೆಯಲ್ಲಿ ಹಿಂದೆ ಸೇವೆ ಮಾಡುತ್ತಿದ್ದು, ಜಗಳಾಡಿ, ಅಲ್ಲಿಂದ **ನೂತನಿ**ಯ ಮನೆಯನ್ನು ಸೇರಿದವಳು; ಈ ಸೀತು ಮೋಂಟುಗಾಲಿನ ತಲೆಹಿಡುಕಿ. **ನೂತನಿ,** ಶ್ರೀಮಂತರ ಕನ್ಯೆ— ಜಾನಕಿಯ ವೈರಿ; ಜಾನಕಿಯ ಪ್ರಾಯದವಳು; ಖರ್ಚಿಲ್ಲದ ಡೌಲು ತೋರಿಸಲು ಆತುರಪಡುವವಳು. **ನೀರದೆ**— ಎಲ್ಲರ ಮಾತಿಗೂ ಕಿವಿಗೊಡುವ ಹೆಂಗುಸು; ಎಲ್ಲರನ್ನು ಕೇಳಿ, ಆಗಾಗ ಅವರವರನ್ನು ಒಪ್ಪಿ, ಮುಂದೆ ಮರೆಯುವವಳು. (**ಜಾನಕಿಯ ಅಣ್ಣ, ಜಾನಕಿಯ ಅತ್ತಿಗೆ, ಜಾನಕಿಯ ಕೆಲಸದ ಹುಡುಗ ಈ ನಾಟಕದ ಇತರ ಪಾತ್ರಗಳು.**)

[ಸ್ಥಳ— ನೀರದೆಯ ಮನೆಯ ಮುಂದಿನ ಜಗುಲಿಯಲ್ಲಿ ಕುಳಿತು, ನಿಂತು, ಎದುರಿನ ಹಾದಿಯನ್ನು ಪಂಥಿಸಿ ನಡೆಯುವ ಮಾತುಕತೆಗಳಿವು. ಕಥೆಯ ಮೊದಲಿಗೆ ಜಾನಕಿ-ನೀರದೆಯರು ಹರಟುತ್ತಿರುವರು. ಉಳಿದವರು ಕ್ರಮೇಣ ಬಂದು ಹೋಗುವವರು.]

ನೀರದೆ :— ಜಾನಕಿ, ಅದು ಯಾರೇ ಬರುವುದು— ಆ ಕಡೆ ಯಿಂದ? ನೂತನಿಯಲ್ಲವೆ? ಈ ನೂತನಿಗೆ ದಿನಕ್ಕೊಂದು ಸೀರೆ ಎಂದು ಕಾಣುತ್ತದೆ. ಇವತ್ತು ಬೇರೆಯೇ ಒಂದನ್ನು ಉಟ್ಟು ಬಂದಿದ್ದಾಳೆ. ಅವರ ಮನೆಯವರಿಗೇನು ಕಡಿಮೆ— ಅಲ್ಲವೆ ಜಾನಕಿ?

ಜಾನಕಿ :— ಹೌದು 'ಏನು ಕಡಿಮೆ'! ಅವರ ಮನೆಯ ಅಂಗಳದಲ್ಲೆಲ್ಲ ದುಡ್ಡು ಚೆಲ್ಲಾಡುತ್ತದೆ. ನಿನಗೆ ಕೆಲಸವಿಲ್ಲ, ನೀರದೆ! ದಿನಕ್ಕೊಂದು ಸೀರೆ ಉಟ್ಟರೆ ಶ್ರೀಮಂತರಾಗಿಬಿಟ್ಟರೇನು! ಈಗೀಗ ಎಂಟಾಣೆಗೂ ಒಂದು ಸೀರೆ ಸಿಕ್ಕುತ್ತದೆ. ಅಂಥ ಸೀರೆ ಉಡುವುದಾದರೆ, ದಿನಕ್ಕೆ ಒಂದಲ್ಲ— ನಾನಾದರೆ ಹತ್ತು ಉಡುತ್ತಿದ್ದೆ. ಮೊನ್ನೆ ನಾನು ಉಟ್ಟುಕೊಂಡು ಬರಲಿಲ್ಲವೇ— ಅದು ಒಂದಕ್ಕೆ, ಇವು ನೂರು ಸೀರೆ ಸಮ!

ನೀರದೆ :— ಯಾವ ಸೀರೆಯೇ ಜಾನಕಿ? ನಾನು ನೋಡಲೇ ಇಲ್ಲ.

ಜಾನಕಿ :— ನನಗೆ ಇವರ ಹಾಗೆ ಗಳಿಗೆಗೆ ಒಂದೊಂದು ಸೀರೆ ಮೆರವಣಿಗೆ ಮಾಡುವುದೆಂದರೆ ಆಗದು. ನಾನು ಉಡುವುದೆಂದರೆ ನಮ್ಮವರ ಒತ್ತಾಯಕ್ಕೆ!

ನೀರದೆ :— ನೀನೂ ಒಬ್ಬಳು. ನಮಗಾದರೆ ತೆಗೆಯಿಸಿ ಕೊಡುವವರಿಲ್ಲ..ಎಂದು ಉಡುವ ಹಾಗಿಲ್ಲ. ನಿನಗೇನು ಧಾಡಿ. ಬೇಕಾದ್ದನ್ನು ಕೊಡುವ ಗಂಡುಸಿರುವಾಗ? ಅದಿರಲಿ—ನೀನು ಹೇಳಿದ್ದು ಯಾವ ಸೀರೆ ಅದು?

ಜಾನಕಿ:—ಮೊನ್ನೆ ಉಟ್ಟು ಬರಲಿಲ್ಲವೆ? ನೇರಿಳೇಬಣ್ಣದ್ದು— ಜಗಲಿ ಜರೀ ಸೀರೆ! ಅದನ್ನು ನಮ್ಮ ಮಾವನವರು ಡೆಲ್ಲಿಯಿಂದ ತಳುಹಿಸಿದ್ದು. ನಮ್ಮ ಮಾವನಿಗೆ ಈ ಕೊಯಂಬುತ್ತೂರು, ಸೇಲಂ ನ ತೆವಳು ತೆವಳು ಸೀರೆ ನೋಡಿದರೇ ಆಗುವುದಿಲ್ಲ!

ನಾನೀಗ ಬಾಯಿ ತೆರೆದರೆ ಸಾಕು— ಬೆನಾರಿಸ್, ಕಾನ್ಪುರ, ಬಂಗಾಲ—ಯಾವ ಊರಿನದು ಬೇಕೋ ಆ ಊರಿನವನ್ನು ತರಿಸಿ ಕೊಡುತ್ತಾರೆ. ನನಗೇ, ಈ ಗಳಿಗೆಗೆ ಒಂದೊಂದು ಅವತಾರ, ಹಿಡಿಸುವುದಿಲ್ಲ. ಅಷ್ಟು ಸೀರೆ ಬಿಚ್ಚಿ ಉಟ್ಟು, ಬಿಚ್ಚಿ ಉಟ್ಟುಕೊಳ್ಳುವುದರಲ್ಲಿ ನಾಲ್ಕು ನಾವೆಲ್ ಓದಬಹುದು!

(ಆಷ್ಟರಲ್ಲಿ ನೂತನಿ ಬರುತ್ತಾಳೆ. ತನಗೆ ಕೇಳಿದ ಕೊನೆಯ ಮಾತಿನ ಸೆರಗನ್ನು ಹಿಡಿದು:)

ನೂತನಿ :—ನೀ—ವೆಲ್ಲು? ಏನು ಜಾನಕಿಗೆ ವೆಲ್—ಜೇಕೇ? ಇದೇನು ಬಾವಿ ಹಾರುವಂಥ ವಿಪತ್ತು ಬಂತು?

ಜಾನಕಿ :— ನೋಡೇ ನೀರದೆ, ಹಿಂದು ಪಂಜರಂಗಿ ಸೀರೆ ಉಟ್ಟದ್ದಕ್ಕೆ ಇಷ್ಟೆಲ್ಲ ಜಂಬದ ಮಾತು!

ನೀರದೆ :— ನೂತನಿ, ಇದೇನು ಸೀರೆಯೇ? ನಿನ್ನೆ ಎಂಥ ಸೀರೆ ತಂದದ್ದು? ವಿನಾಲ್‌ಕೋಡಿ-ಆಲ್ಲ-ಪಿಟ್ಲ್‌ಬಾಂಬೇ? ಇದಕ್ಕೆ ಹೆಸರೇನು? ಇದೂ ಒಳ್ಳೆ ಒಳ್ಳೆ ಅಬ್ಬರವಾಗಿದೆ!

ಜಾನಕಿ :— ಇದು 'ಟಾರ್ಪೆಡೋ ಬೊಂಬು' ಸೀರೆ..ಅಂತ ಕಾಣುತ್ತದೆ—ಅಲ್ಲವೆ 'ಸಬ್‌ಮೆರೀನೋ'—ಏನೋ. ನೀನು ಏನೇ ಹೇಳು ನೀರದೆ, ನನಗೆ ಈ ಸೀರೆ ಬಣ್ಣವೇ ಹಿಡಿಯುವುದಿಲ್ಲ. ಇದನ್ನು ನೀರಿನ ಹತ್ತಿರ ಹಿಡಿಯುವುದೇ ತಡ, ಬಣ್ಣ ಪರಾರಿ!

(ಆ ಸೀರೆ ಹಿಡಿದುನೋಡಿ) ಅಲ್ಲದೆ ಇದೆಂಥ ಅಂಚು—ಎಂಥ ಸೆರಗು! ಸೀರೆಗೆ ಮೈಯೇ ಇಲ್ಲ—ಎಲ್ಲಾ ಅಂಚೇ ಆಯ್ತು.

ನೀರದೆ :— ಹೌದಕ್ಕಾ—ನಮ್ಮ ಅಮ್ಮ, ಧರ್ಮಾವರ ಸೀರೆ ಉಟ್ಟರೆ ಇವರೆಲ್ಲ 'ಹಳೆ ಫೆಶನ್' ಎಂದು ನಗುತ್ತಾರೆ. ಇದೆಂಥ ಫೇಶನೋ?

ಜಾನಕಿ :— ಇದು ಡಿಸ್ಟ್ರಾಕ್ಟ್ ಬೋರ್ಡು ಫೇಶ್‌ನ್.

ನೂತನಿ :— ಡಿಸ್ಟ್ರಾಕ್ಟ್ ಬೋರ್ಡು ಫೇಶನು!

ಜಾನಕಿ :— ಸುಟ್ಟು ಮಾಡಬೇಡವೆ ನೂತನಿ—ಇದರ ಅಂಚು ಡಿ. ಬೋರ್ಡು ರಸ್ತೆ ಹಾಗಿದೇ ಅಂದೆ!

ನೂತನಿ:— ನಿನಗೆ ಬೇರೆಯವರ ಒಡವೆ ನೋಡಿದರೆ ಹಾಗೇ ಸರಿ. ಸೀರೆ ಆಗಲ ಹೆಚ್ಚಾದರೆ ಡಿಸ್ಟ್ರಿಕ್ಟ್ ಬೋರ್ಡು ರಸ್ತೆ; ಆಗಲ ಕಿರಿದಾದರೆ ಪಂಚಾಯತ್ ಓಣಿ....

ಜಾನಕಿ:— ಇಲ್ಲವೆ ಜೆನ್ನಾಗಿದೆ....ನಿನ್ನ ಸೀರೆ ಹಾಳಿರುವುದುಂಟೇ? ಹೋಗಲಿಬಿಡು; ದೋಸ್ತಿಯೆಂದು ಚೇಷ್ಟೆ ಮಾಡಿದರೆ ಕೆಂಡವಾಗಬೇಡ!

ನೀರದೆ:— ನೂತನಿ, ನಿನಗೆ ಜಾನಕಿಯ ಗುಣ ಗೊತ್ತು; ಅವಳಿಗೆ ತುಸು ಚೇಷ್ಟೆ ಹೆಚ್ಚು.... ಹೋಗಲಿ ಬಿಡು.. ಈ ಸೀರೆಗೆ ಏನು ಹೆಸರು? ಅದನ್ನು ಹೇಳು!

ನೂತನಿ:— 'ಮೆರೀನಾ'—ಅಂತ. ಹಾಗೆ ಆಗಲದ ಅಂಚಿನ ಸೀರೆಗೆ 'ಮೆರಿನಾ' ಅನ್ನುತ್ತಾರೆ.

ಜಾನಕಿ:— ಹೇ ಇದು 'ಮೆರಿನಾ'! 'ಟಾರ್ಪೆಡೋವೂ' ಅಲ್ಲ, 'ಮೆಶಿನ್‌ಗನ್ಸ್, ಸ್ಟಿಟ್ ಫಯರ್' ಯಾವುದೂ ಅಲ್ಲ. ನಾನು ಕೇಳಿದೆ: ಚೆಟ್ಟಿಯಾರ್ ಅಂಗಡಿಯಲ್ಲಿ ಡ್ರೊನಿಯರು, ಹಿಸನಲ್, ಬ್ಲೆನ್‌ಹೀಮು — ಅಂತ ಎಪರೀತ ಹೊಸ ಫೇಶನಿನ ಸೀರೆಗಳು ಬಂದಿವೆಯಂತೆ.

ನೂತನಿ:— ಇದೆಲ್ಲ ಆ ಎರಡು ಪಾವಾಣೆ ಡೇಲೀಪೇಪರು ಓದುವುದರ ಸೊಕ್ಕು!

ಜಾನಕಿ:— ಎರಡು ಪಾವಾಣೆ ಪೇಪರು ಯಾಕೆ? ನಮ್ಮ ಮನೆಗೆ 'ಹಿಂದೂ'ವೇ ಬರುತ್ತದೆ. ಭರ್ತಿ ಒಂದಾಣೆ ಕ್ರಯ!

ನೀರದೆ:— ಅಯ್ಯೋ ಅಯ್ಯೋ—ನಮ್ಮ ಜಾನಕಿಯೂ ನೂತನಿಯೂ ಸೇರಿಬಿಟ್ಟರೆ ಕೋಳೇ ಅಂಕವೇ ಬೇಡ. ಸುಮ್ಮನಿರೇ ಜಾನಕೀ; ಸುಮ್ಮನಾಗು ನೂತನಿ— ಅವಳು ಮೂಗು ಅರಳಿಸಿದರೆ ನೀನು ಕಣ್ಣು ಕೆರಳಿಸುತ್ತೀ..ನೀನು ನಸ್ಯ ವಾತಾಪಿಗೆ ಕಿವೀ ಕೊಡು ನೂತನೀ! ನಿನ್ನ ಈ ಸೀರೆ ಕ್ರಯ ಹೇಳು!

ನೂತನಿ:— ನಿನ್ನ ಜಾನಕಿಯನ್ನು ಕೇಳು. ಅವಳು ಹಿಂದೂ ಪೇಪರು ಓದುವವಳು. ಸೀರೆ ಧಾರಣೆಯೂ ಅದರಲ್ಲಿ ನಿತ್ಯ ಬರಬಹುದು.

ಜಾನಕಿ:— ಅದೇನೆ ನೂತನಿ—'ಸಾಸ' ಎಂದರೆ 'ಸರಿಗಮ ಪದನಿಸಾ'—ಪೂರ್ಣ ಮಾಡುತ್ತೀಯಲ್ಲ! ಸುಮ್ಮನೆ ಚೇಷ್ಟೆಗೆ 'ಟಾರ್ಪೆಡೋ' ಅಂದದ್ದಕ್ಕೆ ಇಷ್ಟು ಉರಿದು ಬಿದ್ದರೆ ಹೇಗೆ?

ನೂತನಿ:— ಎಲ್ಲ ನನಗೆ ಗೊತ್ತು ಜಾನಕೀ! ಎದುರಿಗೇನಿ ಇಷ್ಟು ಚೇಷ್ಟೆ ಮಾಡುವ ನೀನು, ನಾನು ಬೆನ್ನು ತಿರುಗಿಸಿದರೆ ಎಷ್ಟೆಲ್ಲ ನಕಲಿ ಮಾಡುವೆಯೆಂಬುದು ನನಗೆ ತಿಳಿಯದೇ?

ಜಾನಕಿ:— ಹೌದು..ನನಗೆ ನಿನ್ನನ್ನು ಲೇವಡಿ ಮಾಡುವುದೇ ಕೆಲಸ!

ನೂತನಿ:— ನನಗೆ ಗೊತ್ತು. ನಾನು ಆ ದಿವಸ ಹಾವಂಚನ ಸೀರೆ ಉಟ್ಟು ಬಂದ ದಿನ, ನೀನು ನನ್ನ ಬೆನ್ನಾರೆ ಏನೇನು ಆಂಧೆಯೆಂಬುದೆಲ್ಲ ಗೊತ್ತು!

ಜಾನಕಿ:— ನೀನು ಆ 'ಕೋಬ್ರಾ' ಬಾರ್ಡರ್ ಸೀರೆ ಉಟ್ಟ ದಿನವೇ? ಅದು ಸಾಧಾರಣ ಜೆನ್ನಾಗಿದೆ ಎನ್ನಲಿಲ್ಲವೇ?

ನೂತನಿ:— ಹೌದು ಅಂದೆ, ನನ್ನೆದುರಿಗೆ 'ಈ ಗೋಲ್ಡ್ ಬಾರ್ಡರು ಜೆಂದ' ಅಂದುಬಿಟ್ಟು, ಬೆನ್ನು ತಿರುಗಿಸಿದ್ದು ತಡ— ಇದು 'ಕೋಬ್ರಾ' ಅಲ್ಲ 'ಕೇರೆ'—ಬಾರ್ಡರು ಅಂದೆ. 'ನೂತನಿ ಉಡುವ ಯಾವ ಸೀರೆಗೂ ಒಂದೂವರೆ ರೂಪಾಯಿ ಮೇರೆ ಕ್ರಯವೇ ಇಲ್ಲ' ಅನ್ನುತ್ತೀಯಂತೆ ನೀನು! ನನ್ನ ಕಿವಿಯ ಲೋಲಕ್ಕಿಗೆ ಬರೀ ಎರಡೇ ಆಣೆ ಕ್ರಯವಂತೆ; ಆದರೆ ನಿನ್ನ ಕಿವಿಯ ಓಲೆ ತಾಜಾ—ತಾಜಾ—ನಜ್ಜ!

ಜಾನಕಿ:— ನನಗೆಲ್ಲ ಗೊತ್ತಿದೆ ನೂತನೀ! ನಿನಗೆ ಬೆಸಗೆ ಬೆಸೆಯಲಿಕ್ಕೆ ಆ ಜನ ಸಿಕ್ಕಿದುದರ ಫಲ ಇದು. ನೀರದೇ—ನೀನು ಹೇಳು. ನಾನು ಈ ತನಕ ಇವಳನ್ನು ನಿನ್ನೆದುರು, ಬೇಡ—ಯಾರ ಎದುರಿಗಾದರೂ ಬಯ್ದುದು, ಉಂಟೇ? ಇವಳಿಗೀಗ ಒಬ್ಬಳು ಒಳ್ಳೆ ಚಾಡಿಗಿತ್ತಿ ಗಂಟು ಬಿದ್ದು.....

ನೀರದೆ:— ಯಾರನ್ನ ನೀನು ಅನ್ನುವುದು?

ಜಾನಕಿ:— ಯಾರನ್ನನ್ನುವುದೇ—ಆ ಸೊಣಗಿ ಇಲ್ಲವೇ?.. ಕಾಲು ಎಳೆದುಕೊಂಡು ನಿಮ್ಮ ಮನೆ ಮುಂದಿಂದ ನಿತ್ಯ ಹೋಗುವುದಿಲ್ಲವೇ?

ನೀರದೆ:— ಯಾರೇ ಜಾನಕೀ?

ಜಾನಕಿ:— ಯಾರೇ ಅಂದರೆ ಅದು—. ಒಂದಷ್ಟು ದಿನ ನಮ್ಮ ಮನೆಗೂ ಅದು ಕೆಲಸಕ್ಕೆ ಬಂದುಕೊಂಡಿತ್ತು. ಕೊನೆಗೆ ಮುಸುರೆ ತಿಕ್ಕುವಾಗ ಒಂದೊಂದೇ ಪಾತ್ರೆ ಪಾಯಕ ಆಯಿತೆಂದು ಓಡಿಸಿದೆವು!

(೪೦೫ ನೆಯ ಪುಟದಿಂದ ಮುಂದುವರಿದುದು.)

ನೂರಾರು ಕೊಡ ಮಾಡುವ..ಆಚಾರ್ಯ ಸ್ನಾನ, ಅಲ್ಲದೆ ಶಿಷ್ಟ ಜನರಲ್ಲಿಯ ಶುಷ್ಕ ಮಂತ್ರಸ್ನಾನ, ಆಜಮನ ಸ್ನಾನ, ಭಸ್ಮಸ್ನಾನಗಳು ಇವೆಲ್ಲ ಇವೆ. ಇವುಗಳಲ್ಲದೆ—ಆಧುನಿಕ ಪದ್ಧತಿಯ ಸ್ನಾನಗಳು ಬೇರೆ. ವಿಲಾಸಿಗಳ ಫ್ರೆಂಚ್‌ಬಾಥ್, ಶಾವರ್‌ಬಾಥ್‌ಗಳು. ಆರೋಗ್ಯಕ್ಕಾಗಿ ಎಂದು ಕೊಡುವ ಟಬ್‌ಬಾಥ್ ಕೂಡ ಪ್ರಸಿದ್ಧಿಗೆ ಬಂದಿದೆ. ಮೊನ್ನೆ ಹೊಲ ಒಕ್ಕಿಸುವುದಕ್ಕೆಂದು ನಮ್ಮ ಹಳ್ಳಿಗೆ ಹೋಗಿದ್ದೆ. ಹಂತಿಯನ್ನು ಕಟ್ಟಿ ನಮ್ಮ ರೈತ ವಾಡಿಕೆಯಂತೆ ಹಾಡಹತ್ತಿದ:—

'ಹಾರುವನ ಗೆಣೆತಾನ ಮಾಡದಿರೊ ನೀ ಹುಡಗ!
ನೀರಬೇಕವನ ಜಳಕಕ್ಕ'

ಇದನ್ನು ಕೇಳಿದ ನಾನು ದಿಗಿಲುಗೊಂಡೆ; 'ಒಕ್ಕಲಿಗರ ಸ್ನಾನದ ಕಲ್ಪನೆ ನೀರು ಇಲ್ಲದುದು ಇರಬಹುದೇ?' ಎಂದು ನನ್ನನ್ನೆ ನಾನು ಕೇಳಿಕೊಂಡೆ. ನಿಜ ಅವರದು ಧೂಳಿಸ್ನಾನ—ಬಿಸಿಲು ಸ್ನಾನ. ಭೂಮಿತಾಯಿಯು ತನ್ನ ಹೊಚ್ಚಲ ಮಕ್ಕಳಿಗೆ ಮಮತೆಯಿಂದ ನಿತ್ಯ ಎರೆಯುವ ಅಮೃತಸ್ನಾನ ಅದು!

ನೀರದೆ— ಯಾರು ? ಮೋಂಟುಸೀತುವೇ ?

ಜಾನಕಿ:— ಅದೇ ಮೋಂಟವ್ಮ ಈ ನೂತನಿಗೆ ಈಗ ಮಂತ್ರಿ! ಮಂತ್ರಿಯೇನು ಮಂಧರೆ! ಅವಳಿಗೆ ತಕ್ಕ ಕೈಕೇಯಿ ಇವಳು. ಅಲ್ಲ ನೀರದೆ–ನಮನಮಗೆ ಇಷ್ಟು ಮಾತು ಕತೆಯಿರುತ್ತ, ನಾವು ಒಡಿಸಿದ ಜನವನ್ನು ತಾನು ಸೇರಿಸಿಕೊಳ್ಳುವ ಮೊದಲು, 'ಹ್ಯಾಗೆ, ಏನು' ಎಂದು ಒಂದು ಮಾತನ್ನೂ ಕೇಳಬೇಡವೇ ? ಈಗ ಅದೇ ಮೋಂಟೆಯ ಚಾಡಿಗೆ ಕಿವಿಕೊಟ್ಟು, ನನ್ನನ್ನು ದೂರುವುದೇ ? ನನ್ನು ಹಸಿ ಹಸಿ ಸುಳ್ಳು ಬೆಸೆಯಲಿಕ್ಕೆ ಸೀತು ಬಿಟ್ಟರೆ ಇನ್ನಿಲ್ಲ–

ನೀರದೆ:— ನೂತನೀ, ಈಗ ಮೋಂಟೆ ನಿಮ್ಮ ಮನೆಗೆ ಕೆಲಸಕ್ಕೆ ಬರುತ್ತಾಳೆಯೇನು !

ನೂತನಿ:— ಬಾರದೆ ಏನು ಮಾಡಿಯಾಳು ? ಅವಳು ಉಣ್ಣು ಉಡು ಬೇಡವೆ? ಅಲ್ಲ—ಇವರು ತಮ್ಮಲ್ಲಿಂದ ಸುಮ್ಮನೆ ಓಡಿಸಿ ಮೇಲೂ ಚಿಂತೆ ಇಲ್ಲವಿತ್ತು; ಮೇಲೆ 'ಪಾಕ್ಕೆ, ಪರಡಿ ಕದ್ದಳು' ಎಂದು ಅಪವಾದ ಹೊರಿಸಬೇಕೋ ? ಈಗ ನಮ್ಮ ಮನೆಗೆ ಬಂದು ಎಂಗಳು ತಿಂಗಳಾದುವಲ್ಲ–ಈತನಕ ಒಂದು ಕಸದ ಡೂರು ತೋರ್ದಿಲ್ಲ.

ಜಾನಕಿ:— ಕಸದ ಡೂರು ಅವಳಿಗೇಕೆ !

ನೂತನಿ:— ನೀನು ಬಿಡೇ ! ಮೊನ್ನೆ ನಾನೇ ಬಚ್ಚಲಲ್ಲಿ ನನ್ನ ಮಜ್ಜದ ಬೆಂಡೋಲೆ ಮರೆತಿಟ್ಟು ಬಂದಿದ್ದೆ. ಅವಳು ಅದನ್ನು ಅವಸರ ಅವಸರವಾಗಿ ಹೆಕ್ಕಿತಂದು, " ಅಮ್ಮ, ಹಾಗೆಲ್ಲ ಅದನ್ನು ಇರಿಸಬೇಡಿ" ಅಂದಳು.

ಜಾನಕಿ:—ಹೌದು, 'ಹೊಸಕತ್ತಿ ಲಾಯಕ್ಕು ಹರಿಯುತ್ತದೆ' ಎಂತ ಗಾದೇ ಉಂಟಲ್ಲ! ನಾಲ್ಕು ದಿವಸ ಹೋಗಲಿ,ನಿಧಾನವಾಗಿ ತೋರಿಸುತ್ತದೆ.. ಪುಣುಗಿನ ಪರಿಮಳ ! ನೀರದೆ– ಈ ಸೀತು, ಎಂದು ತಿಂಗಳ ಸಂಬಳ ಮುಂಗಡ—ಅವಳ ಹತ್ತಿರವೇ ಇರುತ್ತ, ನಾವು ಮೂರು ತಿಂಗಳ ಸಂಬಳ ಕೊಡದೆ ಓಡಿಸಿದೆವು ಅನ್ನಬೇಕಾ ನೀ....ಹೌದು—ಕದ್ದಗುಟ್ಟು ಮರೆಯಾಗಲಿಕ್ಕೆ ಒಂದು ಜನ್ಮವೆ ಸಾಜವೇ ? ನನಗೆ ಸಮನಾಗಿ ಸಿಗಲಿ—ಅವಳ ಮುಸುಡಿನ ಮೇಲೆಲ್ಲ ಜಾಡಿಸಿ ಬಿಡುತ್ತೇನೆ–ಒಂದು ದಿನ !

ನೀರದೆ:— ಅಯ್ಯಯ್ಯೋ–ಇದು ಒಂದು ಗ್ರಹಚಾರವೇ ಆಯಿತಲ್ಲ ! ಇಟ್ಲೇರು ಗಿಟ್ಲೇರು ಅಲ್ಲಿ ಯುದ್ಧಮಾಡಿದರೆ, ನೀವು ನಮ್ಮ ಮನೆ ಜಗುಲಿ ಮುಂದೆ ಕತ್ತೀಕಟ್ಟಬೇಕೆ ? ಹೋಗಲಿ ಬಿಡಿ-ಮಾರ್ಯಾರ ಮಾತು ನಂಬಿ..

ನೂತನಿ:— ನಿನಗೆ ತಿಳಿಯದು ನೀರದೆ. ನೀನು ಬಿಪ್ಪಿ ! ನೀನು ಎಂದು ದಿನ ಪುರುಸೊತ್ತು ಮಾಡಿಕೊಂಡು ಬಾ—ನಮ್ಮ ಮನೆಗೆ: ಎಲ್ಲಾ ರಾಮಾಯಣ ಹೇಳುತ್ತೇನೆ. ಇಲ್ಲಿ ಬೀದಿಯಲ್ಲಿ ಯಾಕೆ ?

ಜಾನಕಿ:— ನೀನು ನಮ್ಮ ಮನೆಗೆ ಬಂದರೆ ಮಹಾಭಾರತ ನಿನ್ನೇ ಹೇಳುತ್ತೇನೆ.

ನೂತನಿ:— ನಾನು ಹೋಗಲೇ !

ನೀರದೆ:—ಹೋಗುತ್ತೀಯಾ, ನೂತನಿ ? ನಿನಗೆ ಸಿಟ್ಟುಬಂತೂ ಅಂತ ಕಾಣುತ್ತದೆ. ನಾನು ಮಾತಾಡಿಸಿ ಇಷ್ಟೆಲ್ಲ ರಂಪ ಆಯಿತು.

[ನೂತನಿ ಹೊರಟುಹೋಗುವಳು; ಜಾನಕಿ ನಗುವಳು.]

ಜಾನಕಿ:— ನೀರದೆ, ಯಾರಿರಬಹುದು ಹೇಳು— ನಾವಿಲ್ಲಿ ಬೆಂಗಡೆ ಮಾತಾಡಿದ್ದನ್ನು ಚಾಡೂ ತಪ್ಪದೆ ಅವಳ ಕಿವಿಯಲ್ಲಿ ಊದಿದವಳು ! ಆ ಕೋಬ್ರಾಬಾರ್ಡರು ಸೀರೆ ಉಟ್ಟು ಬಂದದಿನ ಯಾರಾರು ಇದ್ದರು—ಎಂಬುದು ನೆನಪಿದೆಯೆ ?

ನೀರದೆ:— ಯಾರು.. ಯಾರವ್ವ– ಒಂದು ನಾನು, ಒಂದು ನೀನು. ಇನ್ನು ವರದೆಯೋ, ರಮಣಿಯೋ.. ಸೀತೂ ಇರಲಿಲ್ಲ ಅದು ಖಂಡಿತ !

ಜಾನಕಿ:— ರಮಣಿ.. ಹೌದೌದು ರಮಣಿಯೇ ? ಅವಳಿಗೂ ಈ ಮೊಂಡಿಗೂ ಭಾರೀ ದೋಸ್ತಿ. ಅಲ್ಲದೆ ನನಗೂ ಅವಳಿಗೂ ಎಣ್ಣೆಸೀಗೆ. ಅದಕ್ಕೆನೆ ತಾನು ಕೇಳಿದ್ದನ್ನು ಒಂದಕ್ಕೆ ಹತ್ತುಮಾಡಿ– ಉಪ್ಪು ಕಾರ ಸೇರಿಸಿ, ಬೆಸೆದಿರಬೇಕು !

ನೀರದೆ:— ಅದೇಕೆ ಜಾನಕೀ, ನಿನಗೆ ಊರೊಳಗಿನ ಒಬ್ಬರನ್ನು ಕಂಡರೂ ಆಗದು ? — ನೂತನಿ ಹಾಗಾಯ್ತು, ಸೀತು ಹೀಗೆ; ರಮಣಿ....

ಜಾನಕಿ:—ಒಳ್ಳೆ ವ್ಯಾಪಾರ ನಿನ್ನದು ನೀರು! ನನಗೆ ಒಬ್ಬರನ್ನು ಕಂಡರೆ ಆಗದೇ, ಆವರಿಗೇ ನನ್ನನ್ನು ಕಂಡರೆ ಆಗದೇ ?

ನೀರದೆ:— ಅದು ಅವರಿಗೇ ಅಂತ ಇಟ್ಟುಕೊಳ್ಳುವ; ಆದರೆ, ಈ ರಮಣಿಗೂ ನಿನಗೂ ಯಾಕೆ ಜಗಳ ಹೇಳು. ನೀವು ನೆರೆಮನೆಯವರು. ಅವರಲ್ಲಿ ಕಾಫಿಗೆ ಪುಡಿ ಕಡಿಮೆಯಾದರೆ ನೀವು ಕೊಡಬೇಕು, ನಿಮ್ಮಲ್ಲಿ ಕಾಫಿಗೆ ಸಕ್ಕರೆ ಜಾಸ್ತಿ ಆದರೆ ಅವಳು ಕೊಡಬೇಕು. ಹೀಗಿರುತ್ತಾ.....

ಜಾನಕಿ:— ಮೊದಲೆಲ್ಲ ಹಾಗೇ ಇತ್ತು. ಈಗೀಗ ಎದುರಿಗೆ ಮಾತ್ರ ಸ್ನೇಹ— ಹಿಂದಿನಿಂದ ಹಾವು–ಮುಂಗುಸಿ !

ನೀರದೆ:— ಹಾಗೆಂದರೆ ! ನಿನ್ನ ಯಜಮಾನರೂ, ರಮಣಿಯ ಗಂಡನೂ ನಿತ್ಯ ಜತೆಯಲ್ಲಿ ತಿರುಗಾಟಕ್ಕೆ ಹೋಗುತ್ತಾರೆ; ನಿನ್ನೆ ತಾನೇ ಹಾಗೆ ಜತೆಯಲ್ಲಿ ತಿರುಗಾಡುವುದನ್ನು ನೋಡಿದ್ದೇನೆ!

ಜಾನಕಿ:— ಅದು ಸರಿಯೆ, ನಮ್ಮ ಮನೆಯವರು ಅವರ ಮನೆಗೆ ಹೋಗುತ್ತಾರೆ, ಹೋದಾಗ ಒಳ್ಳೇ ತಣ್ಣೀರು ಕುಡಿದೇ ಬರುತ್ತಾರೆ. ರಮಣಿಯ ಗಂಡ ನಮ್ಮ ಮನೆಗೆ ಬಂದರೆ, ಬಿಸಿ ಕಾಫಿ ಕುಡಿದೇ ಹೋಗುತ್ತಾರೆ !

ನೀರದೆ:— ಅದನ್ನೆಲ್ಲ ನಾನು ನಂಬಲಿಕ್ಕಿಲ್ಲ. ನಾನು ರಮಣಿಯೊಡನೆ ಕೇಳಿದ್ದೇನೆ. ಅವಳಿಗೆ ನಿನ್ನ ಮೇಲೆ ಎಂತಹ ಬೇಸರ ವಿದ್ದರೂ, ನಿನ್ನ ಗಂಡನ ವಿಷಯ ತುಂಬ ಮರ್ಯಾದೆ !

ಜಾನಕಿ:— ಹೌದು ಹೌದು. ಮರ್ಯಾದೆಗೆ ಬರಗಾಲವೇ ಇಲ್ಲ. ಇದೆಲ್ಲ ನನ್ನ ಗ್ರಹಚಾರ ನೀರದೆ ! ಎಲ್ಲರ ಬಾಯಿಂದಲೂ ನಾನು " ಛಟಿಂಗೆ " ಅನಿಸಿಕೊಳ್ಳುವ ಕಾಲಬಂದಿದೆ. ಅದಕ್ಕೆ

ಸರಿಯಾಗಿ ನಮ್ಮ ಯಜಮಾನರು! ಅವರಿಗೆ ಹಾಲಾಹವುದು ನೀರಾವುದು ಎಂದು ತಿಳಿಯುವುದಿಲ್ಲ. ಅವರು ಅಪ್ಪಿತಪ್ಪಿ— 'ನಮ್ಮ ಜಾನಕಿ ಅಂಬಟಿಗೆ ಉಪ್ಪು ಕಡಿಮೆಹಾಕಿದಳು' ಎಂದರೆ, ರಮಣಿಗೆ ಒಂದು ಯುದ್ಧದ ಹಡಗೇ ಮುಳುಗಿದಷ್ಟು ಸುದ್ದಿ ಯಾಗುತ್ತದೆ. 'ಇವತ್ತು ಜಾನಕಿ ಗಂಡ, ಅವಳ ಅಡುಗೆಯನ್ನು ಮೆಚ್ಚಿ ಏಕಾದಶಿ ಮಾಡಿದರು. ಆಫೀಸಿಂದ ಬಂದವರು ನಮ್ಮ ಮನೆ ಯಲ್ಲಿ ಟಿಫಿನು ಮಾಡಿದರು' ಅನ್ನುತ್ತಾಳೆ?

ನೀರದೆ:— ಅಲ್ಲ— ಹಾಗೇನೋ ಸುದ್ದಿ ಮೊನ್ನೆ ಹೊರಟಿತ್ತು: ನಿನ್ನವರಿಗೆ ಮನೆಯಲ್ಲಿ ಮೂರು ದಿವಸ ಊಟ ಇಡಲಿಲ್ಲವೆಂದು!

ಜಾನಕಿ.— ಹೌದು— ಈಗ ಒಂದು ತಿಂಗಳಿನಿಂದ ತೊಡಗಿ ಅವರು ಹೋಟೇಲಿಂದಲೇ ಊಟ ತರಿಸಿ ತಿನ್ನುವುದು.

ನೀರದೆ:— ಹೋಗಲಿ ಬಿಡು, ಸುಮ್ಮನಿರು— ನಿನ್ನ ದೋಸ್ತಿ ರಮಣಿಯೇ ಬರುತ್ತಿದ್ದಾಳೆ ನೋಡು—

(ರಮಣಿ ಬರುವಳು.)

ಜಾನಕಿ:— ನೋಡಲ್ಲಿ—ಅವಳೀಗ ಉಟ್ಟಿರುವ ಸೀರೆ, ಅವಳ ಅತ್ತೆಯದು. ಹಳೇ ಕೋನಾರ್ಡು ಸೀರೆ. ಆದರೆ ಊರಲ್ಲಿ ಹೇಳುವಾಗ—ಜಾನಕಿಗೆ ಒಂದೇ ಒಂದು ಸಿಲ್ಕಿನ ಸೀರೆ- ಇಲ್ಲಾ ಎಂದು. ಅವಳು ಹೀಗೆ ಕಂಡಾಪಟ್ಟೆ ಮಾತನಾಡುವುದನ್ನು ಕಂಡರೆ—ಒಂದು ದಿವಸ ಅವಳನ್ನು ಹಿಡಿದು, ನನ್ನ ಸೀರೆಯ ಟ್ರಂಕಿನಲ್ಲಿ ತುಂಬಿಸಿಡಬೇಕೆಂದು ಅನಿಸುತ್ತದೆ.

ರಮಣಿ:— ನೀರದೆ, ನಮ್ಮ ಮನೆಗೆ ಬರುತ್ತೀ ಬರುತ್ತೀ ಎಂದು ಹೇಳುತ್ತ ನಾಲ್ಕು ತಿಂಗಳಾಯಿತು. ಇನ್ನೂ, ಬಂದಡ್ಡು ಪಾತ್ರ ಕಾಣೆ.

ನೀರದೆ:— ನಿನ್ನ ಷ್ಟು ಪುರುಸೊತ್ತು ನನಗೆಲ್ಲಿದೆಯೇ? ನಾನು ಇಲ್ಲಿ ಮನೆ ಜಗುಲಿಯ ಮೇಲೆ ಕುಳಿತು, ಏನಾದರೂ ಅನ್ನುತ್ತಿರ ಬೇಕು. ಇವತ್ತೇ ವಾಸಿ; ಮಗು ನಿದ್ದೆ ಮಾಡಿದೆ. ಇಲ್ಲ ವಾಹರೆ ಧಟ್ಟನೆ "ಹ್ಯಾಂ" ಎಂದು ಕಿರುಚಿದರೆ, ಬಳಕ್ಕೆ ಓಡಬೇಕು.

ರಮಣಿ:— ಮಗುವಿನ ಜ್ವರ ಗುಣವಾಗಲಿಲ್ಲವೆ? ನಿನ್ನ ನಾರಾಯಣ ಹೇಗಿದ್ದಾನೆ? ಅವನಿಗೆ ಜ್ವರವಿಲ್ಲವಷ್ಟೆ!

ನೀರದೆ:— ಜ್ವರವಿಲ್ಲದಿದ್ದರೆ ಸಾಕೆ? ನಡಿಯಲಿಕ್ಕೆ ತ್ರಾಣ ಬೇಕೆ? ಡಾಕ್ಟರು ಹೇಳಿ— ಕಾಡಲಿವರೋ, ಏನು ಸುಟ್ಟ ವಿಾನೆಣ್ಣೆಯನ್ನೋ ಕೊಡಿಸುತಿದ್ದಾರೆ. ಅದನ್ನು ಒಂದೆರಡು ಬೊಟ್ಟು ಕುಡಿಸಿದ್ದಕ್ಕೆ ತ್ರಾಣ ಬರುತ್ತದೆಯೆ! ಎಲ್ಲ ಭ್ರಮೆ.

ಜಾನಕಿ:— ಎಡಾಕ್ಸಲೀನೋ! ಹೆಲಿಬಟ್ ಆಯಿಲೋ.

ನೀರದೆ:— ಹೆಲಿಬಟ್ಟನೋ ಮು ಂ ಜ ಭ ಟ್ಟ ನೋ—ಎರಡು ಬೊಟ್ಟು ಕುಡಿಸಿದರೆ ಎಲ್ಲಿಗೆ ಮುಟ್ಟೀತು?

ಜಾನಕಿ:— ಕಾಡ್‌ಲೀವರಿಗಿಂತ ಅದರಲ್ಲಿ ಸತ್ವ ಜಾಸ್ತಿ!

ನೀರದೆ:— ಏನು ಕರ್ಮವೊ..ಡಾಕ್ಟರು ಹೇಳಿದ್ದಾರೆ, ಅವರು ಕಂದಿದ್ದಾರೆ, ಈಗ ಕೊಡುತ್ತಾ ಇದೆ..ಲೆಕ್ಕ ಮಾಡಿ ಎರಡೆರಡು ಬೊಟ್ಟು..

ರಮಣಿ:— ಸ್ವಲ್ಪ ಜಾಸ್ತಿ ಕುಡಿಸು.

ಜಾನಕಿ:— ಅವಲಕ್ಕಿ ಮೊಸರಾದರೆ ಮುದ್ದೆ ಮುದ್ದೆ ತಿನ್ನಿ ಬಹುದು!

ರಮಣಿ:— ಇವಳ ಟೀಂಕಾರ ಹೋದಲ್ಲಿದೆ..ನೀರದೆ, ಇವತ್ತು ಮಧ್ಯಾಹ್ನ ತಪ್ಪಿಸಬಾರದಾ—ನಾನು ಸಮಯಕ್ಕೆ ನೆನಪು ಹುಟ್ಟಿಸಲು, ಸೀತಾ ಹತ್ತಿರ ಹೇಳುತ್ತೇನೆ.

ನೀರದೆ:— ನಾಳೆ ಬಂದರಾಗದೇ?

ರಮಣಿ:— ಇವತ್ತು ನಮ್ಮಲ್ಲಿ ಏನೋ ವಿಶೇಷವಿದೆ. ಅದಕ್ಕೆ ಬಾ ಬಾ ಎಂದೆ—ಇಷ್ಟು ದಿವಸ ತಪ್ಪಿಸಿಕೊಂಡೆ. ಇವತ್ತಾದರೂ ಬಂದಿದ್ದರೆ—

ನೀರದೆ:— ಆಯಿತು, ಬರುತ್ತೇನೆ.

ರಮಣಿ:— ಹಾಗಾದರೆ ಖಂಡಿತವಷ್ಟೆ? ನಾನೀ ಹೋಗಲೇ?

ಜಾನಕಿ:— ನೀರೂ— ನನಗೆ ರಾಜೀವಿಯ ಮನೆಯಲ್ಲಿ ಸ್ವಲ್ಪ ಕೆಲಸವಿದೆ; ಈಗ ಹೋಗಿ ಬರುತ್ತೇನೆ..ಹಿಂದೆ ಬರುವಾಗ ಸಿಕ್ಕುತ್ತೇನೆ. [ತೆರಳುವಳು.]

ನೀರದೆ:— ಹೋಗಿಯೇ ಆಯಿತು, ರಮಣಿ,—ಜಾನಕಿ ನೀನು ಬಂದದ್ದು ಹಿಡಿಸಲಿಲ್ಲಾ ಎಂದು ಕಾಣುತ್ತದೆ!

ರಮಣಿ:— ಅವಳಿಗೆ ಯಾರೊಡನೆ ಯಾರು ಮಾತನಾಡಿದರೂ ಆಗುವುದಿಲ್ಲ. ನಾನು ನಿನ್ನನ್ನು ಮನೆಗೆ ಕರೆದೆಸಲ್ಲವೇ—ಅದಕ್ಕೆ ಹೊಟ್ಟೆಯುರಿ! ಅಲ್ಲದೆ, ಮೊನ್ನೆಯಿಂದಂತಲೂ ನನ್ನನ್ನು ಕಂಡಾಬಹಳ..

ನೀರದೆ:— ಏಕೆ?— ಜಾನಕಿಗೆ ಬಾಯಿಸಿಡುಕು ಜಾಸ್ತಿ ಎಂಬುದೇ ಹೊರತು ಮನಸ್ಸಿನಲ್ಲಿ ಏನೂ ಇಲ್ಲ. ನನಗೆ ನಿನೆರೆಮನೆಯವರು ಚೆಂದವಾಗಿರುವುದನ್ನು ಕಾಣಬೇಕೂ—ಎಂ ಹಂಬಲ. ಆದರೆ ನಿಮ್ಮ ಮಜೀರಯೊ, ನಿಮ್ಮ ಗಂಡಂದಿ ಒಟ್ಟಿಗೆ ತಿರುಗಾಡಿದರೂ ನೀವು ಮುಖನೋಡಿ ಮುಮುರಿವವರು.

ರಮಣಿ:— ಬೇಡ ನೀರದೆ— ಇವಳ ಸುದ್ದಿಯೇ ನ ಬೇಡ. ಅವಳ ವಿಷಯ ಯಾರು ಏನನ್ನೇ ಹೇಳಲಿ—ಆ ಪುಕ ನನ್ನಿಂದಲೇ ಹೊರಟಿತೂ—ಎನ್ನುವವಳು ಅವಳು..ಈಗೆ ಹೊತ್ತಾಯಿತು..ನಿನಗೆ ಮಾತನಾಡಲು ಜನವೂ ಬಂದಿ ಸೀತೂ ಬಂದಳಲ್ಲ! (ತಾನು ಹೋಗುವಳು)

ನೀರದೆ:— ಸೀತು ಬಂದದ್ದು ಸಮ..ಮಗು ಕರೆದರೆ ಎ ಬಿಟ್ಟು ಓಡಬೇಕು. ಈಗ ಕಣ್ಣು ಬಾಡಿಸಿದೆ ಎಂದು, ನಿಂತಿದ್ದೇನೆ..ಏನು ಸೀತು—ನಿನ್ನ ಹೊಸ ಮನೆಯ ಕೆಲಸ ಇ ಬೇಗ ಮುಗಿಯಿತೇನು?

(ಸೀತು ಬಂದು ಸೇರಿ)

ಸೀತು :— ಹೊಸಮನೆಯೆಂದರೆ ದೇವರ ಗುಡಿ. ಎಲ್ಲ ಗಂಟೆಯ ಪ್ರಕಾರ—ಪೂಜೆ, ನೈವೇದ್ಯ—ಪ್ರತಿಯೊಂದೂ! ಜಾನಕಿಯಮ್ಮನ ಮನೆ ಹಾಗಲ್ಲ; ಅಲ್ಲಿ ಕೆಲಸದವರು ಆಚೆ ಹೋದರೆ ಆಗದು, ಈಚೆ ಬಂದರೆ ಆಗದು!

ನೀರದೆ :— ಏನು ಸೀತು, ನೀನಂತು ಜಾನಕಿಯ ಮೇಲೆ ಕತ್ತಿ ಕಟ್ಟಿಯೇ ನಿಂತಿದ್ದೀಯಲ್ಲ !

ಸೀತು :— ನನಗೆ ಅವರ ಹಂಗೇನು ಅಮ್ಮಾ ? ನನ್ನ ಮೇಲೆ ಅವರು ಯಾವಾಗ ಕಳವಿನ ದೂರು ಹಾಕಿ ಊರೆಲ್ಲ ರಂಪ ಮಾಡಿದರೋ ಅವರ ಮುಲಾಜು ನನಗಿಲ್ಲ. ನಾನು ಅವರ ಮನೆಯ ಪಾತ್ರೆ ಕದ್ದಿದ್ದರೆ ಧರ್ಮಸ್ಥಳಕ್ಕೇನೆ ಹಾಕಬೇಕು. ಮೊನ್ನೆ ದಿವಸ ನೂತನಮ್ಮ ಬಚ್ಚಲಲ್ಲಿ ಬೆಂಡೋಲಿ ಇರಿಸಿ ಹೋಗಿದ್ದರು. ನಾನು ತಕ್ಷಣ ತೆಗೆದುಕೊಂಡು ಹೋಗಿ, ಅವರಿಗೆ ಕೊಟ್ಟೆ— ಇನ್ನೊಬ್ಬರಾಗಿದ್ದರೆ..ಅವರು ಹಾಗೇ ನನ್ನಲ್ಲಿ ನಂಬಿಕೆ ಇಟ್ಟಿದ್ದಾರೆ. ಆದರೆ ಈ ಅಮ್ಮನೇ....

ನೀರದೆ :— ಅದಿರಲಿ ಸೀತೂ—ನ್ಯಾಯಕ್ಕೂ ಜಾನಕಿಗೆ ನಿನ್ನ ಮೇಲೆ ಯಾಕೆ ಸಿಟ್ಟು ?

ಸೀತು :— ಯಾಕೆ ಸಿಟ್ಟೂ ಅಂದರೆ-ಸಿಟ್ಟಪ್ಪ-ನನ್ನನ್ನು ಅವರಿಗೆ ಕಂಡರೆ ಆಗದು !

ನೀರದೆ :— ಯಾಕೆಂದು ಬೇಡವೇ ? ಸುಮ್ಮನೆ ಯಾರಾದರೂ ಸಿಟ್ಟುಮಾಡುತ್ತಾರೆಯೆ ?

ಸೀತು :— ಇದು ಸುರುವಾದದ್ದು ಬಂದು 'ಲೋಲಕ'ನಿಂದ.

ನೀರದೆ :— ಯಾವ ಲೋಲಕು ?

ಸೀತು :— ಆ ದೊಡ್ಡ ಕಾಜಿನ ಓಡಿನದು ಹಾಕಿಕೊಳ್ಳುತ್ತಾರಲ್ಲ, ಅದರಿಂದ !

ನೀರದೆ :— ಕಾಜಿನ ಹರಳೇ ? ಅವರ ನೀಲ ಲೋಲಕು ಕಾಜಿನ ಓಡೆ ? ನಿನಗೆ ಕಣ್ಣೇ ಇಲ್ಲ. ಎಷ್ಟು ಚಂದವಿದೆ ಅದು ! ಅವರ ಮಾವ ಡೆಲ್ಲಿಯಿಂದ ಕಳುಹಿಸಿದ್ದಂತೆ ! ಒಂದು ನೀಲ ರೇಶ್ಮೆ ಸೀರೆಯನ್ನು ಮತ್ತು ಇದನ್ನು.

ಸೀತು :— ನನಗೆಲ್ಲಾ ಗೊತ್ತು.. ಅವರ ಮನೆ ದರ್ಬಾರು ನನಗೆ ಗೊತ್ತು.. ಇವರು ತನಗೆ ಅದು ಬೇಕು, ಇದು ಬೇಕು— ಎಂದು ಗಂಡನ ಜೀವತಿನ್ನುವುದೂ ನನಗೆ ಗೊತ್ತು. ಗಂಡ ಇವಳಿಗೆ ಸಮನಾಗಿ ಬಯ್ಯುವುದೂ ನನಗೆ ಗೊತ್ತು. ಅಮ್ಮಾ, ಯಾರಿಗೂ ತಿಳಿಯದ್ದಿಲ್ಲ ಈ ಕೆಲಸದವರಿಗೆ ಗೊತ್ತಿರುತ್ತದೆ. ಆ ಲೋಲಕನ್ನು ಅವಳು ಮಂಗಳೂರಿಂದ ೧೪ ರೂಪಾಯಿಗೆ ತರಿಸಿದ್ದು! ಅಷ್ಟಕ್ಕೆ ಅವರು ಗಂಡ-ಹೆಂಡರಲ್ಲಿ ಜಗಳವೂ ಆಯಿತು. 'ನಮಗೆ ಇಲ್ಲದ ಯೋಗ್ಯತೆಯೇಕೆ? ಕಾಜಿನ ಹರಳು ಹಾಕಿ ಮೆರೆದು ಏನಾಗಬೇಕು? ಇದ್ದರೆ ಬಳ್ಳೇದು ಇರಿಸಿಕೊಳ್ಳಬೇಕು, ಇಲ್ಲದೆ ಇದ್ದರೆ ಬೇಡ— ಈ ಜಂಬ ಬೇಡ ನಮಗೆ' ಅಂದರು. ಇವರು ಅಷ್ಟಕ್ಕೇ ಅತ್ತರು. ಅದರ ಸುದ್ದಿಯನ್ನು ನಾನು ರಮಣಿಯಮ್ಮನಿಗೆ ಹೇಳಿದೆ. ಈ ರಮಣಿಯದೇನು ಬಾಯಿ ಸುಮ್ಮನಿರಬೇಕೇ— ಊರಿಗೇ ಬಟ್ಟಾಡೆ ಮಾಡಿತು. ಅಲ್ಲಿಯವರೆಗೆ ಆದು ಮುನ್ನೂರು ರೂಪಾಯಿ ಲೋಲಕು—ಎಂದು ಊರಿನ ಮೇಲೆ ಇವರು ಸಾರಿದ್ದರು. ನಾನು ಒಂದೂವರೆ ರೂಪಾಯಿ ಅಂದುದು—ತಿಳಿಯಿತೇ ಇಲ್ಲವೆ—ಕಿವಿಗೆ ಬಿದ್ದು, ಕೆಂಡವಾಗಿ, ನನ್ನನ್ನು ಮನೆಬಿಡಿಸಿ ಬಿಟ್ಟರು. ನಾನು ಒಂದು ಪಾತ್ರೆ ಕದ್ದಿರಿಸಿದೆ ಎಂದು ಗಂಡನಿಗೆ ಚುಚ್ಚಿ ಕೊಟ್ಟು, ನನ್ನ ಮರ್ಯಾದೆ ತೆಗೆಯಿಸಿದರು.

ನೀರದೆ :— ಈ ಲೋಲಕಿನ ಕಥೆ ಹಾಗೇನು !

ಸೀತು :—ಈ ಲೋಲಕು ಹಾಗೇ, ನೀಲ ಸೀರೆಯು ಹಾಗೇನೆ.. ಆದಕ್ಕೇ ಐವತ್ತು ರೂಪಾಯಿಯಂತೆ !

ನೀರದೆ :— ಅದಕ್ಕೆ ಐವತ್ತು ಬೇಡವೇನೆ—ರೇಷ್ಮೆ ಸೀರೆ ಅಲ್ಲವೆ ಆದು ?

ಸೀತು :— ಅದರ ಕ್ರಯ ನೂರೂ ಇರಬಹುದು; ಆದರೆ ಮ್ಹಾಲು ಮಾತ್ರ ಇವರದಲ್ಲ ! ಅವರ ಅತ್ತಿಗೆ ಮೊನ್ನೆ ಬಂದಿರಲಿಲ್ಲವೆ? ಅವರದ್ದನ್ನು ಬೇಡಿ ಇವರು ಹಾಕಿಕೊಂಡರು....ಅವರಿಗನ್ನುತ್ತೇನೆ ಸೀರೆ-ಚಿನ್ನಾ ಎಂದರೆ ಕುತ್ತಿಗೆ ವರೆಗೆ ಆಸೆ. ಆದರೆ ಅಷ್ಟೆಲ್ಲ ಹಾಕಿ ಮೆರೆಯಲಿಕ್ಕೆ ಗಂಡನಿಗೆ ಸಂಬಳವೆಷ್ಟು ಎಂದು ಬೇಡವೇ!

ನೀರದೆ :— ಇಲ್ಲ, ಜಾನಕೀ ಗಂಡನಿಗೆ ಏನು ಸಂಬಳ ?

ಸೀತು :—ನನಗೆ ಯಾಕೆ ಅವರ ಸುದ್ದಿ, ಅವರು ಬಂದರಲ್ಲಿ—ಕೇಳಿ..ಅವರ ಸೊಡ್ಡು ನೋಡಿದರೆ ನನಗೆ ಸೇರದು !

(ಸೀತು ಹೋಗುವಳು, ಜಾನಕಿ ಬರುವಳು.)

ಜಾನಕಿ :— ಯಾರ ಹತ್ತಿರ ಮಾತಾಡುತ್ತಿದ್ದೆ ನೀರದೆ ? ಆ ನೋಟುಕಾಲಿನವಳ ಹತ್ತಿರ ಅಲ್ಲವೆ ? ಅವಳಿಗೆ ತೆರೆದ ಬಾಯಿಗೆ ಬರುವುದೇ ಸುಳ್ಳು, ಪರರ ದೂರು ! ನಾವು ನೂರು ನೂರು ಖರ್ಚು ಮಾಡಿ ಸೀರೆ ತಂದರೆ, ಎರಡೂವರೆ ರೂಪಾಯಿ ಥಕಾರಿ ಸೀರೆ ಅನ್ನುವುದು—ಅವಳ ಕೆಲಸ. ಆದರೆ ನೂತನ ಮನೆಯವರು ಒಂದೂವರೆ ರೂಪಾಯಿ ಮಗ್ಗದ ಸೀರೆ ಉಟ್ಟರೆ, ಅದು ತಾಜಾ ರೇಶ್ಮೆಯಾಗಿಬಿಡುತ್ತದೆ..ಇಂಥಾ ತಲೆಹಿಡುಕಿ !

ನೀರದೆ:— ನೂತನ ಮನೆಯವರಿಗೆ ಏನು ಕಡಿಮೆ ? ನೂತನ ದಿನಕ್ಕೆ ನಾಲ್ಕು ಸೀರೆ ಉಡುವುದಾದರೂ ದರಿದ್ರ ಉಂಟೋ ?

ಜಾನಕಿ:— ದರಿದ್ರ ಇಲ್ಲ ಏನಿಲ್ಲ, ಆದರೆ ಉಡುವುದೂ ಇಲ್ಲ! ಉಡುವುದು ಮಾತ್ರ ಮಗ್ಗದ ಸೀರೆ—ಮೂರು ರೂಪಾಯಿ ಬಾಬ್ತು! ತೊಡುವುದು ನ್ಯಾಪೆಟರ್ನ್ ಅಂತ ಗಿಲಿಟಿನ ಬಳೆ! ಎಲ್ಲ ಹೊರಗಿನ ಡಬ್ಬು ನೋಡೇ. ಕಾಸು ಬಿಚ್ಚಲಿಕ್ಕೆ ಪ್ರಾಣ ಹೋದೀತು. ನಾನು ಇಪ್ಪತ್ತು ಸಾಯಂಕಾಲ ಒಂದು ಸೀರೆ ಉಟ್ಟು ಬರುತ್ತೇನೆ ನೋಡು; ಅದನ್ನು ಕಂಡರೇ ಅವಳಿಗೆ ಸಂಕಟ ಆಗಬೇಕು. ನಮ್ಮ ಅಣ್ಣ ಮದ್ರಾಸಿನಿಂದ ತಂದದ್ದು..ಎಂಥಾ ಸೀರೆ ಅನ್ನುತ್ತೀ..ತೆಳ್ಳಗಿನ..ಗೀಟು ಗೀಟು..ಲೈಟ್ ಕಲರು.. ನೆರಿಗೆ ಕಾಷ್ಮೀನ ಬಿಲ್ಲು..ಹೆಸರು ಏನೋ ಇದೆ; ನೆನಪೇ ಆಗುವುದಿಲ್ಲ!

ನೀರದೆ:— ಹೆಸರೂ ಲಾಯಕ್ಕು ಇದ್ದೀತು.

ಜಾನಕಿ:— ಇದೆ, ನೂತನಿಯ ಮೆಶಿನ್‌ಗನ್ನು, ಟಾರ್ಪೆಡೋ ಟ್ಯೂಬಿನಂಥ ಹೆಸರಲ್ಲ ಮಾತ್ರ—

ನೀರದೆ:— ಎಷ್ಟು ಕ್ರಯವಂತೆ?

ಜಾನಕಿ:— ಅಣ್ಣ ಕ್ರಯ ಮಾತ್ರ ಹೇಳುವುದಿಲ್ಲ. ತುಂಬಾ ಕೊಟ್ಟಿರಬೇಕು. ಅಷ್ಟೆಲ್ಲ ಕೊಟ್ಟು ಏಕೆ ತರಬೇಕೆಂದು—ನಮ್ಮ ವರು ಸಿಟ್ಟಾದರೆಂದು 'ಕ್ರಯ ಗ್ರಿಯ ನಿನಗೆ ಏಕೆ? ನೀನು ಉಟ್ಟುಕೋ' ಎಂದ. ನಾನೀಗ ಕೇಳಿದರೆ, ವಾರಕ್ಕೆ ಒಂದೊಂದು ಸೀರೆ ಅಣ್ಣ ಕಳುಹಿಸಿಯಾನು—ಆದರೆ ಅವೆಲ್ಲಾ ತೊಟ್ಟು ಪೂಡುವುದೇನು? ಇಲ್ಲೇ ಈ ಊರಿನ ನಾಲ್ಕು ಸಂದುಮೂಲೆ ತಿರುಗಬೇಕು. ನೋಡುವವರು ಯಾರೆಂದು ಬೇಡವೆ? ಹಾಗೆ ಉಟ್ಟು ತಿರುಗಿದರೆ ನೂತನಿಯಂಥವರಿಗೆ ಎರಡೂವರೆಯಾಣೆ ಸೀರೆಯಾಗಿ ಕಾಣಿಸಬಹುದು..ಅವಳ ಗುಣಕ್ಕಾಗಿ ನಾನು ಹಂಗಿಸುವುದು!

ನೀರದೆ:— ಜಾನಕಿ, ನಿಮ್ಮ ಮನೆಯವರಿಗೆ ಗುಮಾಸ್ತಿಕೆ ಅಲ್ಲದೆ ಬೇರೆ ಏನು ಸಂಪಾದನೆ?

ಜಾನಕಿ:— ಅವರಿಗೆ ಈ ಪಿಂಚಿಟ್ಟು ಗುಮಾಸ್ತಿಕೆಯಿಂದೇನಾಗಬೇಕು? ಸುಮ್ಮನೆ ಮನೆಯಲ್ಲಿ ಕೂತಿರಬಾರದೆಂದು ಆಫೀಸಿಗೆ ಹೋಗುವುದು. ಅವರಿಗೆ ಬೇಕೆನ್ನುವಷ್ಟು ಬ್ಯಾಂಕಿನಲ್ಲಿದೆ. ನಮ್ಮ ಮಾವ, ವರದಕ್ಷಿಣೆ ೫,೦೦೦ ಕೊಟ್ಟಿರಲಿಲ್ಲವೆ?

ನೀರದೆ — ಹಾ..ಅವರ ಹತ್ತಿರ ಸುಮಾರು ಎಷ್ಟು ಸಾವಿರ ವಿರಬಹುದು?

ಜಾನಕಿ:— ಅದೆಲ್ಲ ನನಗೆ ತಿಳಿಯುತ್ತದೆಯೇ? ಅಂತು ಮಾವ ತಿಂಗಳಾ ನೂರು ನೂರು ಕಳುಹಿಸುತ್ತಾರೆ. ಈ ಗುಮಾಸ್ತಿಕೆಯದು ಇದ್ದೇ ಇದೆ. ಈಗ ಮನೆಯಲ್ಲಿರುವವರು ಯಾರು—ನಾವಿಬ್ಬರೇ ಅಲ್ಲವೆ? ಕಾಗದ ಗೀಚಿದರೆ ಡಿಲ್ಲಿಯಿಂದ ಬರುತ್ತದೆ.. ಮಾವನನ್ನು ಕೇಳಿದರೆ ದಿನಕ್ಕೊಂದು ನಗ ಮಾಡಿಸಿಕೊಟ್ಟಾರು!

ನೀರದೆ:— ಹಾಗೆ ಇರುವಾಗ, ಮಾಡಿಸುವವರು ಕೊಡುವಾಗ, ಹೆಣ್ಣುಮಕ್ಕಳು ಇಡಬೇಕು, ತೊಡಬೇಕು. ಅಲ್ಲದಿದ್ದರೆ ಹಣ ಯಾವ ಮಣ್ಣಿಗೆ ಇರುವುದು! ನಮ್ಮಂಥವರಾದರೆ ಏನೂ ಬೇಡ—ಬೇಕೆಂದರೂ ಇಲ್ಲ, ಬೇಡೆಂದರೂ ಇಲ್ಲ—

ಜಾನಕಿ:— ನಾನು, ಹಾಗೆಂದೇ, ಒಂದೆರಡು ಸಾರೆ ಒಳ್ಳೊಳ್ಳೆ ಸೀರೆ ಉಟ್ಟು, ಮಾಡಿ, ನೋಡಿದೆ. ನಮ್ಮವರ ಕಣ್ಣಿಗೆ ಮೆಣಸು ನುರಿದ ಹಾಗೆ ಆಗುತ್ತದೆ. ಒಂದು ಹೊಸ ಚಿಸ್ಸ ಹಾಕಿದರೆ ಮರುದಿನವೇ ನಕಲಿಗೆ ಶುರುವಾಯಿತು. ಕಳೆದ ವರ್ಷ ಅಣ್ಣನ ಮದುವೆಗೆ ಹೋದೆವಲ್ಲ. ಅದಕ್ಕೆಂದು ಹೊಸ ಬೈನು ನೀಲ-ಕೆಂಪು ಹರಳಿನದು ಮಾಡಿಸಿದರು. ಎಂಥ ಸರ ಎನ್ನುತ್ತಿ. ಗುರುತು ಅಲ್ಲವೇ ಎಂದು ರಮಣಿಯನ್ನು ಕರೆದು ತೋರಿಸಿದೆ. ಆವಳಿಗಾಯಿತು-ಒಂದು ಸಂಕಟ....

ಏನಿಲ್ಲ, ಆ ಸಾಯಂಕಾಲ ದೇವಸ್ಥಾನಕ್ಕೆ ಅದನ್ನು ತೊಟ್ಟು ಕೊಂಡು ಹೋದರೆ—ಈ ಗಿರಣಿ, ನೂತನಿ, ಬಿರಿಣಿ—ಎಲ್ಲ ಸೇರಿ, ನಾನು ಸೆರಗಿನೊಳಗೆ ಇರಿಸಿದ್ದ ಸರ ಹೊರಗೆಳೆದು, ತೆಗೆದು, "ಥೇಟು ಗಾಜಿನ ಮಣಿಯ ಹಾಗಿದೆ"— ಎಂದರು. ಇವಕ್ಕೆ ಗಾಜಿನ ಮಣಿಗಳನ್ನು ಕಂಡು ಗೊತ್ತೇ ವಿನಹ, ಮುತ್ತು ರತ್ನ ಕಂಡು ಏನುಗೊತ್ತು? ಅಂದಿನಿಂದ ಇವರ ಕಣ್ಣಿಗೆ ಬೀಳುವ ಒಂದೇ ಒಂದು ಚೂರು ಉಡುವುದಿಲ್ಲ.... ಚೆಂದ ಉಡುವ ಹಾಗಿದ್ದರೆ, ಮನೆ ಒಳಗೇ ಸರಿ.... ಇನ್ನು ಮಂಗಳೂರಿಗೆ ಹೋದರೆ ಏನಾದರೂ....

ಹೋಗಲಿ, ಆವರ ಸುದ್ದಿ ಬಿಡು..ಒಂದು ರಾಮಾಯಣವೇ ಆದೀತು. ನಾನೀಗ ಒಂದು ಮಾತು ಕೇಳಲೇ?

ನೀರದೆ:— ಏನು ಜಾನಕೀ, ನನ್ನ ಹತ್ತಿರ ನಿನಗೊಂದು ದಾಕ್ಷಿಣ್ಯವೇ!

ಜಾನಕಿ:— ನೀನು, ಇವತ್ತು, ಮಧ್ಯಾಹ್ನ ಎರಡು ಘಂಟೆಗೆ ನಮ್ಮ ಮನೆಗೆ ಬರಬೇಕು—

ನೀರದೆ:— ರಮಣಿಗೆ, ಬರುತ್ತೇನೆ ಎಂದಾಯಿತಲ್ಲ!

ಜಾನಕಿ:— ಆವಳ ಮನೆಗೆ ನಾಳೆ ಹೋದರಾಯಿತು.... ಏನು? ಬಂದೇ ತೀರಬೇಕು..ಇಲ್ಲಾ ಅಂದರೆ ನಾನು ಕೇಳಲಿಕ್ಕಿಲ್ಲ!

ನೀರದೆ:— ಆಯ್ಯೋ, ಅವಳ ಹತ್ತಿರ ಒಪ್ಪಿಕೊಂಡಾಯಿತಲ್ಲ!

ಜಾನಕಿ:— ಅವಳಲ್ಲಿ ಆಗುವುದು ಅಷ್ಟರಲ್ಲೇ ಇದೆ..ನಿನಗೆ ಗಡದ್ದು ಕಾಫಿ, ಟಿಪಿನ್ ಕೊಡಿಸುವ; ನೀನು ಹಾಗೆಂದಾದರೂ ನಮ್ಮ ಮನೆಗೆ ಬಂದಿದ್ದೀಯಾ!

ನೀರದೆ:— ಆಯಿತು, ನೋಡುತ್ತೇನೆ.

ಜಾನಕಿ:— ನೀನು ಬಾರದಿದ್ದರೆ ನನ್ನಾಣೆಯಿದೆ ನೋಡು!

ನೀರದೆ:— ನೀನು ಹಾಗೆ ಹಟಮಾಡಿದರೆ..

ಜಾನಕಿ:— ನೀನು ಜಾರದೆ ಕಳೆಯದು..ಆಯಿತೆನ್ನು.

ನೀರದೆ:— ಆಯಿತಮ್ಮಾ ಆಯಿತು, ಆ ಮೇಲೆ ರಮಣಿಯ ಮನೆಗೆ ಹೋಗುತ್ತೇನೆ!

ಜಾನಕಿ:— ನಮ್ಮಲ್ಲಿಗೆ ಬಾ ಮೊದಲು; ಆ ಮೇಲೆ ಹೊತ್ತು ಉಳಿದರೆ ಅಲ್ಲಿಗೆ ಹೋಗು–ಎಲ್ಲಿಗೂ ಹೋಗು.

ನೀರದೆ:— ಯಾಕೆ ಇಷ್ಟು ಹಟ ಜಾನಕೀ?

ಜಾನಕಿ:— ಯಾಕೆಂಬುದು ಬಂದಮೇಲೆ ತಿಳಿಯುತ್ತದೆ. ಮತ್ತೇನಿಲ್ಲ! ನೀನು ಯಾರಿಗೂ ಹೇಳುವುದಿಲ್ಲಾ ಎಂದರೆ ಹೇಳುತ್ತೇನೆ.

ನೀರದೆ:— ನಾನು ಯಾರಿಗೆ ಯಾಕ ಹೇಳುತ್ತೇನೆಯೆ?

ಜಾನಕಿ:— ಅಲ್ಲ, ಮಾತು ಆಡುತ್ತ ಆಡುತ್ತ ಬಾಯಿತಪ್ಪಿ, ಮೊಂಟುಸೀತುವಿನ ಕಿವಿಗೆ ಬೀಳಬಾರದು—ಎಂದು. ಆದು ದೊಡ್ಡ ಆಮಟಾಡಿ ಗಜೀಟು.

ನೀರದೆ:— ಇಲ್ಲಮ್ಮಾ ಯಾರಿಗೂ ಹೇಳುವುದಿಲ್ಲ....ಏನು ವಿಶೇಷ?

ಜಾನಕಿ:— ಏನಿಲ್ಲ, ಡೆಲ್ಲಿಯಿಂದ ಹೊಸ ಸೀರೆ ಎಂಟು ಹತ್ತು ಬಂದಿದೆ; ಬೇಕಾದ್ದು ನಾಲ್ಕು ಇರಿಸಿ, ಉಳಿದದ್ದು ಹಿಂದೆ ಕಳುಹಿಸು-ಎಂದು ಮಾವ ಬರೆದಿದ್ದಾರೆ. ಇವತ್ತೇ ಆರಿಸಿ ನಾಳೆಗೆ ಕಳುಹಿಸ

ಟ್ಲೇಕು—ಆದರ ಒಳಗೆ ನಿನಗೆ ತೋರಿಸಿ, ನಿನ್ನ ಶಿಫಾರಸು ನೋಡುವ—ಎಂದು ಕೇಳಿದೆ.

ಎಂಥೆಂಥಾ ಪೇಟರ್ನ್ ಎನ್ನುತ್ತೀ—ಕಾಂಚಿನ್ ಜಂಗಾ, ಅಂತೆ ಜೆಕ್ಕಾನ್ ಕ್ವೀನ್, ಮತ್ತೊಂದು ಷಾ—ಸಿಕಂದರ್....

ನೀರದೆ:— ಸಿಕಂದರು ಗಿಕಂದರು ಮುಸಲ್ಮಾನ ತರಹಾ ಇರಬೇಕು.

ಜಾನಕಿ:— ನೀನು ಬಂದು ನೋಡು—ಒಬ್ಬರೇ ಅರಿಸುವು ದಕ್ಕಿಂತ ಇಬ್ಬರು ಸೇರಿ ಹುಡುಕುವ—

ನೀರದೆ:— ಎಂಥ ನಮೂನೆಯೆಂದು ಕಣ್ಣಿಂದಾದರೂ ನೋಡ ಬಹುದಲ್ಲ!

ಜಾನಕಿ:— ಕಂಡಮೇಲೆ ನೀನೇ ಅನ್ನುವಿ 'ನಮ್ಮ ದರ್ಬೇತಿ ಊರಿನಲ್ಲಿ, ಅಷ್ಟು ಪಸಂದ ಸೀರೆ ಇರಲಿ, ಆಂಧ್ರ ಹೆಸರು ಸಹ ಇರಲಿಕ್ಕಿಲ್ಲ—ಎಂದು. ಆ ಕಾಂಚಿನ ಜಂಗಾ ಬಂದು ಇದೆ. ಬಿಳೀ ಆಚು, ನೀಲ ನೀಲ್ ಆಗಿ ಹೇಗೆ ಮೈ—ಆಗುತ್ತದೆ ಅನ್ನುವಿ.. ಇನ್ನೊಂದು ಸೀರೆ ಹೆಸರು 'ಜರೀನಾ'.. ಅದಂತೂ ಮಳೆಗಾಲದಲ್ಲಿ ಎಂಜಲುಮೂಡಿದ ಹಾಗೆ.

ನೀರದೆ:— ಖಂಡಿತಕ್ಕೂ ಬರುತ್ತೇನೆ; ನೀನೆನ್ನುವುದು ಕೇಳಿ ಬಾಯಿ ನೀರೂರುತ್ತದೆ..

ಜಾನಕಿ:— ಬರಬೇಕು, ಎರಡು ಗಂಟೆಗೆ ಸಮನಾಗಿ!

ನೀರದೆ:— ಆಯಿತೇ?

[ಜಾನಕಿ ಹೊರಡುವಳು. ಆ ದಾರಿಯಾಗಿ ಇಬ್ಬರು ಹೊಸ ದಂಪತಿಗಳು ಬರುವರು. ಹುಡುಗಿ ಸೀಮಂತಿನಿ, ಜಾನಕಿಯ ನಾದಿನಿ. ಇನ್ನೊಬ್ಬರು—ಜಾನಕಿಯ ಅಣ್ಣ, ಸೀಮಂತಿನಿಯ ಗಂಡ—ಪ್ರೇಮ]

ಪ್ರೇಮು:— ಸೀಮು, ಬೇಗ ಬೇಗ ಕಾಲು ತೆಗೆ, ಮನೆಗೆ ಹೋಗಿ..ಸ್ನಾನ, ಊಟ ಆಗಬೇಡವೇ?

ಸೀಮು:—ಹೊರಡಲು ಇನ್ನೂ ಒಂದು ದಿವಸ ಇದೆ ಎಂದು, ನೂತನಿಯ ಮನೆಗೆ ಮಧ್ಯಾಹ್ನ ಬರಲು ಒಪ್ಪಿದ್ದೆ..ಈಗ ತಂತಿ ಬಂದು ಎಲ್ಲ ತಲೆ ಕೆಳಗೆ ಆಯಿತು.

ಪ್ರೇಮು:— ನಾನೇನು ಮಾಡಲಿ ಹೇಳು—ಇವತ್ತು ಮಂಗಳೂರು ಸೇರಿ, ನಾಳೆ ಬೆಳಗಿನ ಟ್ರೈನಿಗೆ ಹೊರಟರೆ ಗುರುವಾರ ಡಿಲ್ಲಿ ಸೇರಬಹುದು. ನಾನು ತಡವಾಗಿ ಹೋದರೆ, ಕೆಲಸ ಇನ್ನೊಬ್ಬರ ಪಾಲಿಗೆ ಸೇರಬಹುದಲ್ಲ!

ಸೀಮು:— ಹೌದು..ಕೈಗೆ ಸಿಕ್ಕಿದ್ದನ್ನು ತಪ್ಪಿಸಬಾರದು, ಅದೂ ಡಿಲ್ಲಿಯಲ್ಲಿ ಸಿಗುವ ಕೆಲಸ...

[ತೆರಳುವರು....]

ನೀರದೆ:— ಯಾರಪ್ಪಾ ಅದು! ಎಂಥಾ ಸೀರೆಯದು? ನಮ್ಮ ದರ್ಬೇತಿ ಊರಿನಲ್ಲಿ, ಈ ವರೆಗೆ ಅಂಥ ಸೀರೆ ಉಟ್ಟವರಿಲ್ಲ! ಯಾರೋ ಹೊರಗಿನವರು ಇರಬೇಕು—ಆ ಹುಡುಗ ನಮ್ಮ ಊರಿನವನ ಹಾಗೆ ಕಾಣುವುದೇ ಇಲ್ಲ;..ಹುಡುಗನ ಮುಖ ಸುಮ-ಸುಮಾರು ಜಾನಕಿ ಹಾಗೆ ಇಲ್ಲವೇ..

[ಅವಳು ಯೋಚಿಸುವಷ್ಟರಲ್ಲಿ ಸೀತು ಬರುತ್ತಾಳೆ]

ಏನು ಸೀತು, ಓಡಿಬಂದೆ?

ಸೀತು:— ನೀವು ಈಗ ರಸ್ತೆಯಲ್ಲಿ ಹೋದವರನ್ನು ನೋಡಿಲ್ಲವೆ? ಗಂಡ-ಹೆಂಡರು. ಮೊನ್ನೆ, ಅಂದರೆ ಕಳೆದ ವರ್ಷ ಮದುವೆಯಾಯಿತು.

ನೀರದೆ:— ಅದೇ ಯಾರಿರಬಹುದೂ—ಎಂದು ಎಣ್ಸಿ ಎಣ್ಸಿ—ನಾಕಾಯಿತು.

ಸೀತು:— ಅದು ಯಾರೆಂದು ತಿಳಿಯದೇ? ಆ ಹುಡುಗ ಜಾನಕಿ ಅಣ್ಣ..ಅವಳು ಅವನ ಹೆಂಡತಿ. ಅವರಿಗೆ ತುಂಬಾ ಇರಬೇಕು..ಇರುವುದು ಮದ್ರಾಸೋ, ಡಿಲ್ಲಿಯೋ ಅಂತೆ! ಕಳೆದ ವರ್ಷ ಜಾನಕಿಯ ಮನೆಗೆ ಬಂದು, ಒಂದು ದಿನ ಇದ್ದು ಹೋಗಿದ್ದರು. ಒಂದೇ ಒಂದು ದಿವಸ..ಜಾನಕಿಗೂ, ಈ ಸೀಮೂಗು ಇಷ್ಟು ಹಿಡಿಯದೆ—ಹಾಗೆಯೇ ಹೋದರು. ಈ ನಾರಿಯೇ, ಏನೋ ನಾಲ್ಕು ದಿವಸ ಬಂದು ಇದ್ದಂತೆ ಕಾಣುತ್ತದೆ—ಇವರ ಗಂಡನ ದಾಕ್ಷಿಣ್ಯಕ್ಕಿರಬಹುದು; ಇವರ ಬುದ್ಧಿಯನ್ನು ಕಂಡಲ್ಲ!

ನೀರದೆ:— ನಿನಗೆ ಬಾಯಿ ಬಹಳ ಸೀತು, ಅವರು ಏನು ಮಾಡಿದರೆ ನಿನಗೇನು?

ಸೀತು:— ನನ್ನ ಮೇಲೆ ಪಾತ್ರೆ ಕದ್ದಳೆಂಬ ಅಪವಾದ ಹೊರಿಸಿದ್ದು ಎಂದಾದರೂ ಮರೆತೀತೆ?

ನೀರದೆ:— ಅದಕ್ಕೆ ಇಷ್ಟು ವೈರವೇನು?

ಸೀತು:— ಇದರ ಹತ್ತುಮಡಿ ಮಾಡಿ ತೋರಿಸಬಲ್ಲೆ.

ನೀರದೆ:— ನೀನು ಹೇಳಿಕೋ..ಏನನ್ನಾದರು! ನಾನಂತು ಅವರ ಮನೆಗೆ ಇವತ್ತು ಹೋಗಬೇಕೆಂದಿದೆ. ಅವಳು ಆಗತ್ಯ ಬರಬೇಕು ಎಂದಿದ್ದಾಳೆ. ಕಾಫಿ ಗೀಫಿ ಜೋರಿರಬಹುದು!

ಸೀತು:—ಅದು ಇದ್ದೀತು. ಉಳಿದ ದಿವಸ ಕಾಫಿ ಮಾಫಿಯೇ! ಇವತ್ತು ಹೇಗೂ ನಂಟರು ಬಂದಿದ್ದಾರೆ. ಆಲ್ಲದೆ ಅವರ ಸ್ಥಿತಿಯೂ ದೊಡ್ಡದು!

ನೀರದೆ:— ಹೇಗೂ ಇರಲಿ. ದೊಡ್ಡವರು ತಮ್ಮ ಮನೆಗೆ ಬಂದಾಗಲೇ, ನನ್ನನ್ನು ಮನೆಗೆ ಕರೆಯುವ ಮನಸ್ಸು ಆಯಿತಲ್ಲ ಅವಳಿಗೆ.. ಅದರಲ್ಲೂ ತನಗೆ ಬಂದಿರುವ ಹೊಸ ಸೀರೆಯನ್ನು ತೋರಿಸುತ್ತೇನೆ..ಎಂದಿದ್ದಾಳೆ.

ಸೀತು:— ಇವತ್ತಾದರೆ ಎಷ್ಟೂ ಸೀರೆ ತೋರಿಸಬಹುದು.

ನೀರದೆ:— ಹಾಗೆಂದರೆ?

ಸೀತು:—ಹಾಗೆಂದರೆ ಹಾಗೇ; ಆದರೆ ನೀವು ರಮಣಿಯಮ್ಮನ ಮನೆಗೆ ಹೋಗುವುದಿಲ್ಲವೇ? ಅವರು ನಿಮ್ಮನ್ನು ಬರಹೇಳಿಲ್ಲವೆ!

ನೀರದೆ:— ನನಗೆ ಜಾನಕಿಯ ಮನೆಯಲ್ಲಿ ಬಿಡಾರವೇ? ಅಲ್ಲಿ ಮುಗಿಸಿಕೊಂಡು ಇಲ್ಲಿಗೂ ಹೋಗುತ್ತೇನೆ.

[ಆಗಲೇ ಒಬ್ಬ ಚಿಕ್ಕ ಬಾಲಕ ಬಂದು]

(೪೫ನೆಯ ಪುಟ ನೋಡಿರಿ.)

ನಮ್ಮ ಹಬ್ಬಗಳು

ಶ್ರೀ. ವೆಂಕಟರಾವ ಬಿದರಕುಂದಿ

ಕಾರ್ಪಬ್ಬ ಕರುನೀಗೆ, ನೂಲ್ಹಬ್ಬ ಜಾಡ್ಸಗೆ!
ಮಾನವನಿಹಬ್ಬ ಮಗನಿಗೆ—ಮುಂದಿರುವ
ದೀವಳಿಗೆ ಹಬ್ಬ ಅಳಿಯನಿಗೆ!

—ಜಾನಪದ ಸಾಹಿತ್ಯ

★

ಹಬ್ಬಗಳ ಗುರಿಯು ಅರಿವಿ ಇಲ್ಲದೆ, ಕೇವಲ ರೂಢಿ-ಮೂಢತೆಯಿಂದ ದುಂದುಗಾರಿಕೆ ನಡೆಯಿಸಿ, ನಮ ಸಮಾಜವಿಂದು ಸೋತು ಸುಣ್ಣವಾಗಿದೆ. ಎಂತಲೆ 'ಹಬ್ಬ ಎಂದರೆ ಉತ್ಸವದ ದಿನ' ಎಂಬ ಅರ್ಥ ಹೋಗಿ, ಇಂದು 'ಹಬ್ಬ ಎಂದರೆ ಸಾಲಮಾಡಬೇಕಾದ ದಿನ' ಎಂಬ ಹೊಸ ಅರ್ಥ ಬಂದು ನಿಂತಿದೆ.

★

ಈ ಹಿಗ್ಗನ್ನು ಹಬ್ಬಕ್ಕಾಗಿ ಕೊಂಡುತರಬೇಕಾಗುತ್ತದೆ ಇದಕ್ಕೆ ಕೊಡಬೇಕಾಗುವಷ್ಟು ಬೆಲೆಯು ಹಣ ನಮ್ಮ ಸಾಮಾನ್ಯ ಸಂಸಾರಗಳಲ್ಲಿದೆಯೆ? ಇಲ್ಲದಿದ್ದರೇನಾಯಿತು? ಸಾಲಮಾಡಿಯಾದರೂ ಹಬ್ಬಮಾಡಿ, ಬಳಿಕ ತೂಲದಮೇಲೆ ಬದುಕಬೇಕು.

ಹಬ್ಬವೆಂದರೆ ಜೀವನದ ಉಚ್ಚವಾದ ಧ್ಯೇಯವನ್ನು ಸಾಧಿಸುವುದಕ್ಕೆಂದಿರುವ ಒಂದು ಮಹತ್ತ್ವವಾದ ಸಾಧನವು. ಈ ಸಾಧನವನ್ನು ಸರಿಯಾಗಿ ಸಾಧಿಸಿಕೊಳ್ಳಬೇಕಾದರೆ, ನಮ್ಮ ಸಮಾಜವು ಒಳ್ಳೆಯ ಸಂಸ್ಕಾರವನ್ನು ಪಡೆಯಬೇಕು. ಸಮಾಜದಲ್ಲಿರುವ ಮೂಢರೂಢಿಗಳೂ ಅಪಾಯಕರವಾದ ಪದ್ಧತಿಗಳೂ ನಾಶಹೊಂದಿ, ಬಾಳುವೆಯು ಜೀವನವಿಕಾಸಕ್ಕೆ ತಕ್ಕುದಾದ ಎಡೆಯನ್ನು ಉಂಟುಮಾಡಬೇಕಾದರೆ, ಹಬ್ಬಗಳಲ್ಲಿಯೂ ಸಮಯಕ್ಕೆ ತಕ್ಕ ಮೂಲಾರ್ಥಗಳನ್ನು ಅಗತ್ಯವಾಗಿ ಮೂಡಲೇ ಬೇಕು. ಸ್ವಾಚೀನ ಕಾಲದಿಂದಲೂ ಪರಂಪರೆಯಿಂದ ಬಂದ ನಮ್ಮ ಹಬ್ಬಗಳು, ಹಿಂದೆ ಒಂದು ಉನ್ನತವಾದ ಮಟ್ಟವನ್ನು ಮುಟ್ಟಿ, ಆ ಕಾಲದಲ್ಲಿ ಜನರಿಗೆ ಆನಂದಕರವಾಗಿಯೂ ಸನ್ಮಾರ್ಗದರ್ಶಕವಾಗಿಯೂ ಇದ್ದಿರಬಹುದು. ಆದರೆ ಇಂದು ನಾವು ಕೇವಲ ಅದೇ ಹಬ್ಬಗಳಿಂದಲೇ ಗುರಿಯನ್ನು ಮುಟ್ಟಲಾರೆವು. ಯುಗ-ಯುಗಕ್ಕೂ ಕಾಲಮಾನ ಪರಿಸ್ಥಿತಿಗನುಸರಿಸಿ ಹೊಸ ಹಬ್ಬಗಳು ನಮಗೆ ಬೇಕಾಗುವುವು. ಆದುದರಿಂದ ಈಗ ಕೂಡ ನಮಗೆ ಹಬ್ಬ ಬೇಕೇಬೇಕು. ಕಾಲಪರಿವರ್ತನೆಯಾದಂತೆ ಹಬ್ಬಗಳ ವಿಧಿ-ವಿಧಾನಗಳಲ್ಲಿಯೂ ಬದಲಾವಣೆಗಳಾಗಬೇಕಾದುದು ಅತ್ಯವಶ್ಯವು. ಕೇವಲ ಹಿಂದಿನ ಹಬ್ಬಗಳಲ್ಲಿಯೇ ಮಗ್ನರಾಗಿ, ರೂಢಿಯ ಕಾಲುದಾರಿಯನ್ನೇ ತುಳಿದು, ಅದರಿಂದಲೇ ಆನಂದವನ್ನು ಹೊಂದಿ ಸಮಾಧಾನವನ್ನು ಹಚ್ಚಿಕೊಳ್ಳುವ ಜನಾಂಗವು, ಇಂದು ನವಜಾಗೃತವಾದ ಜನಾಂಗಗಳಲ್ಲಿ ಎಣಿಸಲ್ಪಡಲಾರದು.

ನಮ್ಮ ಪ್ರಾಚೀನರ ಹಬ್ಬಗಳೆಂದೆ

ಯಾವುದಾದರೊಂದು ದಿವ್ಯಶಕ್ತಿ, ಏನಾದರೂ ಒಂದು ಅಘಟಿತ ಘಟನೆ ಎಂದರೆ ಲೋಕಕಲ್ಯಾಣಕಾರಕ ಮಹತ್ಕಾರ್ಯಗಳನ್ನು ಮಾಡಿದ ದಿನಗಳು. ಅವೆಲ್ಲ ಈಗ ನಮ್ಮ ಹೆಣ್ಣುಮಕ್ಕಳ ಮನೋರಂಜನಕ್ಕಾಗಿ, ಮನೆಯ ರಂಜನಕ್ಕಾಗಿ, ಅಭ್ಯಂಗ-ಸ್ನಾನ ಪಕ್ವಾನ್ನಗಳ ಭೋಜನಗಳಿಗಾಗಿ ಇರುವುವೆಂಬ ಸಮಾಧಾನ ಹಚ್ಚಿಕೊಂಡು, ಸ್ವರ್ಧೆ ಪೈಪೋಟಿ ಮಾಡಿ, ಆಡಂಬರದಿಂದ ಹಬ್ಬಗಳೆಯುವ ದಿನಗಳಾಗಿವೆ.

ಇಂದಿನ ಕಾಲದ ಬಾಳುವೆಯ ಅರಿವು ನಮಗೆ ಬೇಕು. ಬಾಳುವೆಯ ಬೆಳಕಿಗಾಗಿ ಲೌಕಿಕದೃಷ್ಟಿಯವರಿಗೆಲ್ಲ ಬೇಕಾದುದು ಪ್ರಾಮುಖ್ಯವಾಗಿ ಹಣ. ಇಂದಿನ ಮುಗ್ಗಟ್ಟಿನ ಆರ್ಥಿಕ ಪರಿಸ್ಥಿತಿಯಲ್ಲಿ ಲೆಕ್ಕಹಾಕಿ, ಗಳಿಕೆಯಂತೆ ಬಳಕೆ ಮಾಡುವುದೇ ಬಾಳುವೆ-ವಂತನ ಧರ್ಮ. ಇಂದಿನ ಪ್ರಪಂಚದಲ್ಲಿ ಈ ಧರ್ಮವನ್ನು ಕಾಯ್ದುಕೊಂಡುಬರಸನ್ನಿ ಪಾಸಪಂತ, ಸುರ್ಯಾದೆವಂತ, ದೊಡ್ಡಪ ಇತ್ಯಾದಿ ಗೌರವ ಸಂಕೇತಗಳಿಂದ ಕರೆಯಲಾಗುವುದು.

ಹಬ್ಬದ ಗೊತ್ತು-ಗುರಿಗಳ ಅರಿವಿಲ್ಲದೆ, ದುಂದುಗಾರಿಕೆಯಿಂದ ಸಾಲಮಾಡಿ ಕೂಡ ಹಬ್ಬವನ್ನು ಆಚರಿಸುವ ಕುಟುಂಬಗಳು ಈಗ ನಿತ್ಯವೂ ನಮ್ಮ ಕಣ್ಣಿಗೆ ಬೀಳುತ್ತಲಿವೆ. ಇಂತಹ ಬಾಳುವೆಯೆಂದರೆ ಜುಕ್ಕಾಣಿಯಿಲ್ಲದ ನಾವೆಯನ್ನು ಹೊಡೆಯುವ ಅಂಬಿಗನ ಅವಸ್ಥೆಯಂತಿರುವುದು.

'ಕಾರಹುಣ್ಣಿಮೆಯು ಹಬ್ಬಗಳನ್ನು ಕರೆತಂದಿತು; ಯುಗಾದಿಯು ಉಡುಗಿ ಕೊಂಡು ಹೋಯಿತು' ಎಂಬ ರೂಢಿಯ ಮಾತಿನಲ್ಲಿ ಹೇಳಿದಂತೆ, ಆ ಗಡುವಿನಲ್ಲಿಯು ಹಬ್ಬಗಳ ಸರವು ಯಜಮಾನನ ಕೊರಳಿಗೆ ಬಿದ್ದು, ಗಂಡು ಸರಿಗಾಗಿ ಕಾದಿಟ್ಟ ಹೋಳಿಯ ಹಬ್ಬದ ಧ್ವನಿಯನ್ನು ಅವರಿಂದ ಹೊರಡಿಸುತ್ತದೆ.

ಸಂಪತ್ತು ಬೆಳೆಯುವುದಕ್ಕಾಗಿ ಸಂಪತ್ತಾ ಕುಸ್ಯವಾರ– ಶನಿವಾರಗಳನ್ನು ಆಚರಿಸುತ್ತೇವೆ; ಆದರೆ ಇದ್ದ ಸಂಪತ್ತೂ ಹೋಗಿ ಅಂಗಡಿಕಾರನ ಖಾತೆಯ ಬುಕ್ಕುಗಳಲ್ಲಿ ಉದ್ದರಿ ಲೆಕ್ಕ ಮಾತ್ರ ಬೆಳೆಯುವುದು ಅನುಭವದ ಮಾತು. ಆದರೂ ಅದನ್ನು ಸರಿಮಾಡುವ ಗೊಡವೆಗೆ ನಾವಿಂದು ಹೋಗುವುದಿಲ್ಲ. ನವರಾತ್ರಿಯಲ್ಲಿ ಭಕ್ಕರಿ ಸುಡಬಾರದೆಂದು ರೂಢಿಯ ಕಟ್ಟಳೆ. ನಿಸ್ವಾರ್ಥಿಗಳೂ ಗಟ್ಟಿಗರೂ ಆಗಿ, ಕಾಯದೇ ಭಂಗ ಮಾಡಿ ಜೇಲಿಗೆ ಹೋದವರು ಕೂಡ ಈ ಮನೆಯ ಕಟ್ಟಳೆಯನ್ನು ಮುರಿಯಲು ಅಂಜುವರು. ದೀಪಾವಳಿಯಲ್ಲಿ ಹಿಂದೆ ನರಕಾಸುರನ ವಧೆಯಾಗಿದ್ದರೂ ಇಂದು ಮನೆ-ಮನೆಯಲ್ಲಿ ಬಕಾಸುರನ ಅವತಾರವಾಗುತ್ತಿರುವುದು ನಮಗೊಂದು ಹೆಮ್ಮೆಯ ಮಾತು. ಅಂತೆಯೇ ಹೊಟ್ಟೆಯ ಮೇಲೆ ಕೈಯಾಡಿಸುತ್ತ "ಅವನು ಎರಡು ಪಾತೀಲಿ ಪಾಯಸ ಕುಡಿದನು. ಮತ್ತೊಬ್ಬನು ಇಪ್ಪತ್ತೈದು ಉಂಡಿಗಳನ್ನು ತಿಂದನು" ಎಂಬ ಹರಟೆಗಳು ನಗುನಗುತ್ತಾ ನಡೆದಿರುತ್ತವೆ— ದೀಪಾವಳಿಯ ಕಾಲದ ಗುಂಪುಗುಂಪುಗಳಲ್ಲಿ. ದೀಪಾವಳಿಗೆ 'ಎಲ್ಲ ಹಬ್ಬಗಳ ಸಾರ' ಎನ್ನುವುದಕ್ಕಿಂತ–"ಎಲ್ಲ ಹಬ್ಬಗಳ ಕಾರ" ಎನ್ನುವದೇ ಉಚಿತ. ಎಲ್ಲ ಹಬ್ಬಗಳಲ್ಲಿ ಆಗುವ ವಿಧಾನಗಳನ್ನೂ ಇದೊಂದೇ ಹಬ್ಬದಲ್ಲಿ ಕಾಣುವೆವು.

ಈ ಹಬ್ಬದ ಇನ್ನೊಂದು ವೈಶಿಷ್ಟ್ಯವೆಂದರೆ: ಹೆಣ್ಣುಮಕ್ಕಳಿಗೆ ತಂದೆಯ ನೆನಪು, ಅಕ್ಕ-ತಂಗಿಯರಿಗೆ ಅಣ್ಣ–ತಮ್ಮಂದಿರ ನೆನಪು ವರುಷದಲ್ಲಿ ಒಂದು ದಿನವಾದರೂ ಆಗುತ್ತಿದ್ದರೆ ಅದು ದೀಪಾವಳಿಯಲ್ಲಿ. ಆಳಿಯತನಕ್ಕಾಗಿ ದೀಪಾವಳಿಯಲ್ಲಿ ಕರೆಯಿಸಿದ ಆಳಿಯನೆಂದರೆ, ಪ್ರತ್ಯಕ್ಷ ಹಿಟ್ಲರನೇ ಅವನು ಮಾವನಿಗೆ (ದೀಪಾವಳಿ ಹಿಟ್ಲರ್). ಮನೆಯ ಯಜಮಾನರಿಗೆ ಇವರು ಹತ್ತಿರದ ಬಳಗದವರಾದರೂ ದೀಪಾವಳಿಯಲ್ಲಿ ಪರಕೀಯರು.

ದೀಪಾವಳಿಯಲ್ಲಿ ಅಡಿಗೆಯ ಮನೆಯೆಂದರೆ ಅದೊಂದು ಪಾಕ-ಪ್ರದರ್ಶನದ ಹಾಲು. ಎಲ್ಲರಿಗೂ ಚೆಲ್ಲಾಟ, ಯಜಮಾನನ ಗೋಳಾಟ ಈ ಹಬ್ಬದಲ್ಲಿ. ತಿನ್ನುವುದಕ್ಕಾಗಿ ಖರ್ಚು ಮಾಡುವ ಹಣಕ್ಕಿಂತ ಹೆಚ್ಚು ಹಣವನ್ನು, ದೀಪಾವಳಿಯನಂತರ ವೈದ್ಯರಿಗೆ ಸಲ್ಲಿಸಬೇಕಾಗುವುದು. ಆದುದರಿಂದಲೆ ದೀಪಾವಳಿಯಲ್ಲಿ ಯಮರಾಜ ಸಹೋದರರಾದ ವೈದ್ಯರಿಗೂ ಒಂದು ಸ್ನಾನವಿದೆ. ಭಾವಬಿದಿಗೆಯೆಂದರೆ 'ಯಮದ್ವಿತಿಯೆ'! ಯಮನಿಗೆ ಈ ಹಬ್ಬದಲ್ಲಿ ಸ್ನಾನವಿರುವಾಗ, ಆತನ ಸಹೋದರರಿಗೇಕೆ ಬೇಡ?

ದೀಪಗಳ ಧಳಧಳಾಟ, ಮಕ್ಕಳ ಮದ್ದು-ಬಾಣಗಳ ಸರಸರಾಟ, ಆಕಾಶಬುಟ್ಟಿಗಳ ಆದ್ಭುತ ನೋಟ ಇವೆಲ್ಲವುಗಳನ್ನೂ ನೋಡಬಹುದು ಈ ಹಬ್ಬದಲ್ಲಿ. ಇದಲ್ಲದೆ ಇನ್ನೂ ಎಷ್ಟೋ ಸಂಭ್ರಮಗಳಾಗುತ್ತವೆ.. ಈ 'ದೀವಾಳಿ'ಯಲ್ಲಿ!

ಮಧ್ಯಮ ತರಗತಿಯ ಜನರು ಈ ಹಬ್ಬದ ಶಬ್ದಾರ್ಥವನ್ನು ಹೇಳಬೇಕಾದರೆ, 'ಹಬ್ಬ=ಸಾಲ ಮಾಡಬೇಕಾದ ದಿನ' ಎಂದು ಹೇಳುವ ಸಂದರ್ಭವಿದೆಯಾಗ.

ಹಬ್ಬಗಳ ವಿಷಯಕ್ಕೆ ಕೆಳಗೆ ಬರೆದ ಪ್ರಶ್ನೆಗಳಿಗೆ ಉತ್ತರಗಳನ್ನು, ಬಂದೂ ತಿಂಗಳೊಳಗಾಗಿ "ಜಯಂತಿ ಕಾರ್ಯಾಲಯ ಧಾರವಾಡ" ಈ ವಿಳಾಸಕ್ಕೆ ಕಳುಹಬೇಕಾಗಿ ಓದುಗರಲ್ಲಿ ವಿನಂತಿ. ಇಷ್ಟವಿಲ್ಲದವರು ತಮ್ಮ ಅಂಕಿತ ಹೆಸರು, ವಿಳಾಸ ಯಾವುದನ್ನೂ ಬರೆಯದಿರಬಹುದು.

ಪ್ರಶ್ನಾವಳಿಯ ಪ್ರತಿ
(ಸಂಸಾರಿಗಳಿಗಾಗಿ ಮಾತ್ರ)

೧. ನಿಮ್ಮ ವಯಸ್ಸು ..... ಜಾತಿ? .....

ಸೇಫ್ಟಿ ರೇಝರ್ ೨ ಬ್ಲೇಡು ಸಮೇತ, ೬ ಆಣೆಗೆ ಒಂದು ಸೆಟ್ಟು.



೧ ಬ್ಲೇಡಿಗೆ ೬ ಉತ್ತಮ ಕ್ಷೌರ!
೫ ಬ್ಲೇಡಿಗೆ ೬ ಆಣೆಗಳು.

೨. ಬಾಳುವೆ ಮಾಡಿದ ಹತ್ತಿ ಎಷ್ಟು ವರುಷಗಳಾದುವು? .....

೩. ನಿಮ್ಮ ತಿಂಗಳ/ವರುಷದ ಆದಾಯ ಎಷ್ಟು? .....

೪. ನಿಮ್ಮ ತಿಂಗಳ/ವರುಷದ ಖರ್ಚು ಎಷ್ಟು? .....

*೫. ವರುಷದಲ್ಲಿ ಎಷ್ಟು ಹಬ್ಬಗಳನ್ನು ಮಾಡುವಿರಿ? .....

೬. ಮಕ್ಕಳೆಷ್ಟು? .....
ಗಂಡು ... ಹೆಣ್ಣು ...

೭. ಮದುವೆಯಾದ ಹೆಣ್ಣುಮಕ್ಕಳು? .....

*೮. ಅಳಿಯನಿಗಾಗಿ ಹಬ್ಬಗಳಲ್ಲಿ ಖರ್ಚು? .....

*೯. ಮದುವೆಯಾದ ಹೆಣ್ಣುಮಕ್ಕಳನ್ನು ಕರೆಯುವ, ಕಳುಹುವ ಖರ್ಚು, ಅವರಿಗೆ ಕೊಟ್ಟ, ಉಡುಗೊರೆಯ ಖರ್ಚು ಎಷ್ಟು?....

೧೦. ಹಬ್ಬಗಳನ್ನು ಯಾರ ಸಲುವಾಗಿ ಮಾಡುವಿರಿ?....

(ಅ) ಹೆಂಡತಿಯ ಪ್ರೀತ್ಯರ್ಥವಾಗಿ....

(ಆ) ಮಕ್ಕಳ ಸಮಾಧಾನಕ್ಕಾಗಿ...

(ಇ) ಸಮಾಜದ ಅಂಜಿಕೆಗಾಗಿ ...

(ಈ) ಸಂಪ್ರದಾಯವೆಂದು .....

(ಉ) ಇಷ್ಟ ದೇವತೆಯ ಪ್ರೀತ್ಯರ್ಥವಾಗಿ ... ಇತ್ಯಾದಿ.

*೧೧. ಹಬ್ಬಕ್ಕಾಗಿ ಸಾಲವಾಗುವುದೋ? .....

೧೨. ಹಬ್ಬಗಳಲ್ಲಿ ನಿಮ್ಮ ಮನಸ್ಸು ಶಾಂತವಿರುವುದೋ? .....

೧೩. ಹಬ್ಬಗಳಲ್ಲಿ ಆಘಾತುಗಳಾಗಿದ್ದರೆ ಏತರಿಂದಾಗಿವೆ?

(ಅ) ಮದ್ದುಬಾಣ, ಪಟಾಕ್ಷಿ, ದೀಪ, ಬೆಂಕಿಗಳಿಂದ ಅಪಘಾತ.

(ಆ) ಮನೆಯಲ್ಲಿಯ ಶಾನರಿದಾದ ಮನಸ್ತಾಪ.

(ಇ) ಆಟಗಳಲ್ಲಿ ಬಡಿದಾಟ.

(ಈ) ಅಳಿಯ, ಮಕ್ಕಳ ಸಿಟ್ಟು

(ಉ) ಜಜ್ಜು ... ಅಲ್ಲದೆ ಮತ್ತಾವುದಾದರೂ ಇದ್ದರೆ? ಇವು ನಿಮ್ಮ ಮನೆಯಲ್ಲಿ ಸಂಭವಿಸಿದುವೋ? .. ಊರಲ್ಲಿ ಎರಡನೆಯವರ ಮನೆಯಲ್ಲಿ ಸಂಭವಿಸಿರುವುವೋ.... ಅಥವಾ ಕೇಳಿರುವಿರೊ?

*೧೪. ಹಬ್ಬಗಳ ಊಟದಿಂದ ಅಸ್ವಾಸ್ಥ್ಯವುಂಟಾಗಿ, ವೈದ್ಯರಿಗೆ ಕೊಟ್ಟ ಹಣವೆಷ್ಟು?

*೧೫. ಹಬ್ಬಕ್ಕಾಗಿ ಲಂಚ, ಸುಳ್ಳುಸಾಕ್ಷಿಗಳಿಂದ ಗಳಿಸಿದ ಹಣವೆಷ್ಟು?

೧೬. ಹಬ್ಬಕ್ಕಾಗಿ ಮನೆ, ಹೊಲ, ಭಂಗಾರ ಕಳೆದಿರುವಿರಾ?

೧೭. ಇವಲ್ಲದೆ ನಿಮ್ಮ ಆಯುಷ್ಯದಲ್ಲಿ ಸಂಭವಿಸಿದ ಅನುಭವವೇನು?

ಟೀಪು— ಬಹಳ ಜನರಿಂದ ಬಂದ ಉತ್ತರಗಳನ್ನು ಏಮರ್ಶೆಮಾಡಿ, ಹಬ್ಬಗಳ ವಿಷಯಕ್ಕೆ ಒಂದು ಹೊಸ ದಾರಿಯನ್ನು ತೋರಿಸುವುದೇ ಇದರ ಉದ್ದೇಶ.

ವರುಷಕ್ಕೆ ೨೦೦ ರುಪಾಯಿಗಿಂತ ಕಡಿಮೆ ಉತ್ಪನ್ನ ಅಥವಾ ಗಳಿಕೆ ಇಲ್ಲದವರೂ, ೧೫೦೦ ರುಪಾಯಿಗಿಂತ ಹೆಚ್ಚು ಉತ್ಪನ್ನ ಅಥವಾ ಗಳಿಕೆ ಇದ್ದವರೂ. ೧೧, ೧೫, ೧೬ ಈ ಪ್ರಶ್ನೆಗಳನ್ನು ಬಿಡಬಹುದು.†

† ಇವುಗಳ ಉತ್ತರ ಒಂದು ವರುಷಕ್ಕೆ ಸಂಬಂಧಿಸಿದುವು ಮಾತ್ರ ಇರಬೇಕು. ಲೇ

(೪೫೫ ನೆಯ ಪುಟದಿಂದ ಮುಂದುವರಿದದ್ದು.)

ಹುಡುಗ:— ನೀರದಮ್ಮ ಅಂದರೆ—

ಸೀತು:— ಹೌದು ಇವಳೇ..ನೀನು ನಮ್ಮ ನಾಗು ಮಗಸಲ್ಲವೆ! ಈಗ ಜಾನಕಿಯಮ್ಮನ ಮನೆಯಲ್ಲಿರಬೇಕು ಎಂದು ಕಾಣುತ್ತದೆ.

ಹುಡುಗ:— ಹೌದು.. ನೀರದಮ್ಮ, ಅಮ್ಮ ನಿಮ್ಮನ್ನು ಮಧ್ಯಾಹ್ನ ಬರಲಿಕ್ಕೆ ಹೇಳಿದ್ದರಂತೆ ಅಲ್ಲ—ಬರುವುದು ಬೇಡವಂತೆ! ಪಕ್ಕನೆ ಅವರು ಮಂಗಳೂರಿಗೆ ಹೋಗಬೇಕಾದೀತು.. ಮನೆಗೆ ಸಂಟರು ಬಂದಿದ್ದಾರೆ.. ಅವರೊಟ್ಟಿಗೆ.. ಇನ್ನೊಮ್ಮೆ ಬರಲು ಹೇಳುತ್ತೇನೆ—ಅಂದರು.

ಸೀತು:— ಅವರ ಅತ್ತಿಗೆ ಇವತ್ತು ಬೊಂಬಾಯಿಗೆ ಹೊರಡುವುದೇನು?

ಹುಡುಗ:— ನನಗೆ ಗೊತ್ತಿಲ್ಲ..ಈಗ ಬಂದರು..ಇದ್ದಾರೆ. ಹೋಗುತ್ತಾರೋ ಇರುತ್ತಾರೋ! ಅಮ್ಮ ಇಷ್ಟು ಹೇಳೂ ಅಂದರು. ಹೇಳಿದೆ..ಹೋಗುತ್ತೇನೆ.

[ಓಡಿ ಹೋಗುವನು.]

ನೀರದೆ:— ಹೌದೌದು—ಈ ಹೋದ ಅವರು ಮುಂಬಯಿ, ಡಿಲ್ಲಿ ಎಂದು ಮಾತಾಡುತ್ತ ಹೋಗುತ್ತಿದ್ದರು. ಜಾನಕಿಯ ಅತ್ತಿಗೆ, ನೋಡಲಿಕ್ಕೆ ರತಿದೇವಿ ಅಲ್ಲವೆ ಸೀತು? ಅವಳು ಉಟ್ಟ ಸೀರೆ—ಎಂಥಾ ಚೆಂದ ಅನ್ನುತ್ತೇನೆ!

ಸೀತು:— ಅವರು ಮುಂಬಯಿಗೋ ಡಿಲ್ಲಿಗೋ ಹೋದರೆ ಅವರ ಸೀರೆಯೂ ಹೋಗುತ್ತದೆ! ಹಾಗಿದ್ದರೆ ನಿಮಗೆ ತೋರಿಸುವುದೇನನ್ನು? ನೀವು ಬರುವುದೇತಕ್ಕೆ?

ನೀರದೆ:— ಅಬ್ಬಬ್ಬಾ ಸೀತು—ನಿನ್ನ ಬುದ್ಧಿ ಎಲ್ಲಿಂದೆಲ್ಲಿಗೆ!

—o—

ನಾಲ್ಕೂ ನಿಟ್ಟಿನ ನೋಟ

ಆತ್ಮವಿಶ್ವಾಸವೊ? ಅಂಧಶ್ರದ್ಧೆಯೊ?

ಕಳೆದ ತಿಂಗಳು ಹಿಂದುಸ್ತಾನದ ರಾಜಕಾರಣದಲ್ಲಿ ಎರಡು ಮಹತ್ವದ ಘಟನೆಗಳು ನಡೆದುಹೋದುವು. ಎಷ್ಟು ಜನರು ಅವುಗಳ ಮಹತ್ವವನ್ನು ಅರಿತಿರಬಹುದೆಂಬುದು ಸಂಶಯದ ಮಾತಾಗಿದೆ. ಯಾಕೆಂದರೆ ನಮ್ಮ ರಾಜಕಾರಣದಲ್ಲಿ ಇಂದು ತತ್ತ್ವಕ್ಕಿಂತ ವ್ಯಕ್ತಿಗೇ ಹೆಚ್ಚು ಯೋಗ್ಯತೆ ಇದೆ. ಯಾವುದೆ ಘಟನೆಯನ್ನು ರಾಜಕಾರಣದ ವಿಶಾಲಹಿನ್ನೆಲೆಯಲ್ಲಿ ನೋಡದೆ, ವ್ಯಕ್ತಿಯ ಸಂಕುಚಿತ ಪ್ರಭಾವ-ಪ್ರಕಾಶದಲ್ಲಿ ನೋಡುವುದು, ಕಳೆದ ಇಪ್ಪತ್ತು ವರ್ಷಗಳಿಂದ ನಮ್ಮ ರೂಢಿಯಾಗಿದೆ. ಉದಾಹರಣೆಗಾಗಿ, ಮೇಲೆ ಹೇಳಿದ ಎರಡು ಘಟನೆಗಳಲ್ಲಿ ಒಂದಾದ ಮಹಾತ್ಮರ ಸತ್ಯಾಗ್ರಹ-ಪ್ರಯೋಗವನ್ನು ನೋಡಬಹುದು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಯುದ್ಧಪ್ರಾರಂಭವಾದ ಮೇಲೆ, ಸದ್ಯದ ಸ್ಥಿತಿಯಲ್ಲಿ ಅಹಿಂಸೆಯಾಗಲಿ ಸತ್ಯಾಗ್ರಹವಾಗಲಿ ಫಲಕಾರಿಯಾಗುವುದಿಲ್ಲ ಎಂದು ಸ್ಪಷ್ಟವಾಗಿ ತನ್ನ ಅಭಿಪ್ರಾಯವನ್ನು ಹೇಳಿತು. ಕೊನೆಗೆ ಗತಿಗಾಣದಂತಾಗಿ, ಅವೇ ತತ್ತ್ವಗಳಲ್ಲಿ ತನ್ನ ಅಚಲವಾದ ವಿಶ್ವಾಸ ಐದೆ ಎಂದು ಸಾರಿ, ಮಹಾತ್ಮರ ಮುಂದಾಳುತನ (=ಸರ್ವಾಧಿಕಾರಿತ್ವ) ವನ್ನು ಒಪ್ಪಿಕೊಂಡಿತು! ಇಡಿಯ ದೇಶದ ಪ್ರತಿನಿಧಿ ಎಂದುಕೊಂಡು, ಜನರಿಗೆ ದಾರಿಯನ್ನು ತೋರಿಸಬೇಕಾದ ಸಂಸ್ಥೆಯ ಈ ಧೋರಣವು ಆತ್ಮವಿಶ್ವಾಸದ ಲಕ್ಷಣವೆ? ಇಲ್ಲವೆ ಅಂಧಶ್ರದ್ಧೆಯ ಲಕ್ಷಣವೆ? ಒಂದು ಕಡೆ ಜಗತ್ತಿನಲ್ಲಿ ಮಾನವ-ಸ್ವಾತಂತ್ರ್ಯದ ಅಸ್ತಿತ್ವಕ್ಕೆ ದೊಡ್ಡ ಗಂಡಾಂತರ ಒದಗಿದೆ; ಇತ್ತ ನಮ್ಮ ದೇಶದಲ್ಲಿ ಫಾಸಿಝಂ (ಸರ್ವಾಧಿಕಾರಿತ್ವ) ದ ಮೂಪಾಂತರದಂತಿದ್ದ ಜಾತೀಯ ಸಂಸ್ಥೆಗಳ ಪ್ರಾಬಲ್ಯ ಹೆಚ್ಚುತ್ತಿದೆ. ಈ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸು ಧೈರ್ಯದ ಸರಳ ಧೋರಣವನ್ನು ಅವಲಂಬಿಸಬೇಕಲ್ಲದೆ, ಶುಕ್ಲ-ಕೃಷ್ಣಪಕ್ಷಗಳಂತೆ ತಿಂಗಳು-ತಿಂಗಳುಗಳಿಗೆ ಎರಿಳಿತದ ಬೇರೆ ಬೇರೆ ವೃತ್ತಿಯನ್ನು ಅವಲಂಬಿಸಕೂಡದು.

ಮಹಾತ್ಮರ ಪ್ರಯೋಗ

ಆದರೂ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮತ್ತು ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿಗಳು—ಮತ್ತೆ ಮಹಾತ್ಮರಲ್ಲಿ ಸಂಪೂರ್ಣ ವಿಶ್ವಾಸವನ್ನು ವ್ಯಕ್ತಪಡಿಸಿ, ಎಲ್ಲ ಕಾರ್ಯಸ್ವಾತಂತ್ರ್ಯವನ್ನೂ ಅವರಿಗೆ ಒಪ್ಪಿಸಿ, ತಾವು ಕೈಕಟ್ಟಿಕೊಂದು ಕುಳಿತಿವೆ! ಇತ್ತ ಮಹಾತ್ಮರು ತಮ್ಮ ಸತ್ಯಾಗ್ರಹ ತತ್ತ್ವದಂತೆ, ಮೊದಲು ವೈಸ್‌ರಾಯರೊಡನೆ ಮನಬಿಚ್ಚಿ ಮಾತನಾಡಿ, ಒಪ್ಪಂದದ ಯಾವ ಮಾರ್ಗವನ್ನೂ ಕಾಣದಂತಾಗಿ, ತಮ್ಮ ಬತ್ತಳಿಕೆಯಲ್ಲಿ ಕೈಯಸ್ಟಿಟ್ಟು, ಮೊದಲ ಬಾಣವನ್ನು ಬಿಟ್ಟಿದ್ದಾರೆ. ಅದೆಂದರೆ, ವೈಯಕ್ತಿಕ ಸತ್ಯಾಗ್ರಹ—ಎಂದರೆ ವ್ಯಕ್ತಿಗೆ ಸತ್ಯಾಗ್ರಹದ ಅಧಿಕಾರವಿಲ್ಲ; ಆ ಎಲ್ಲ ಅಧಿಕಾರ ಮತ್ತು ನಿರ್ಣಯ ಮಹಾತ್ಮರಿಗೆಯೆ ಇದೆ! ಈ ಸತ್ಯಾಗ್ರಹವು ಭಾಷಣಸ್ವಾತಂತ್ರ್ಯದ ಹಕ್ಕನ್ನು ಸಿದ್ಧಪಡಿಸುವುದಕ್ಕಾಗಿ. ಆ ಸ್ವಾತಂತ್ರ್ಯವಾದರೂ ಅನೇಕ ಸಂಗತಿಗಳಿಂದ ಮೇರೆಗಟ್ಟಿದ ಸ್ವಾತಂತ್ರ್ಯ! ಬ್ರಿಟಿಶರನ್ನು ಪೀಚಿಸಲ್ಲಿ ತರುವಂತಿಲ್ಲ, ಮಾತನಾಡಿದಂತೆ ಮಾಡಬೇಕಾಗಿಲ್ಲ, ತಮ್ಮ ತತ್ತ್ವದ ಪ್ರಚಾರವನ್ನು ಕೂಡ ಮಾಡುವಂತಿಲ್ಲ! 'ಕೇವಲ ಅಹಿಂಸೆ ಶ್ರೇಷ್ಠ ತತ್ತ್ವ, ಸದ್ಯದ ಯುದ್ಧ ಹಿಂಸಾಮಯ, ಅಹಿಂಸೆಯಲ್ಲಿ ವಿಶ್ವಾಸವಿದ್ದವರು ಈ ಯುದ್ಧಕ್ಕೆ ಸಹಾಯ ಮಾಡಬಾರದು'—ಎಂದು ಸವಿನಯವಾಗಿ ಬೇಡಿಕೊಳ್ಳುವುದು! ಹೀಗೆ ಕಾರ್ಯನಿರೋಧಕ ಕರಾರುಗಳಿಂದ ಕುಂಠಿತವಾದ ಭಾಷಣಸ್ವಾತಂತ್ರ್ಯದಿಂದ, ಇಂದಿನ ಸಂದರ್ಭದಲ್ಲಿ ಪ್ರಯೋಗದ ಚಾತುರ್ಯವಲ್ಲದೆ ಮತ್ತೇನು ಲಾಭ ಏದೆ?

ಸತ್ಯಾಗ್ರಹಿಯ ಸಮಾಧಾನ

ಮಹಾತ್ಮರಲ್ಲೂ ಒಂದು ತರ್ಕಸರಣಿ ಇದೆ! ಮೊದಲು ಅವರು ತಮ್ಮ ಅಹಿಂಸೆಯ ಶ್ರೇಷ್ಠತೆಯನ್ನು ಸಾರಿ, ಆ ಮೇಲೆ ಈ ಪ್ರಯೋಗದ ಅವಶ್ಯಕತೆಯನ್ನು ಈ ಪ್ರಕಾರ ಬಲಪಡಿಸುತ್ತಾರೆ. ಅಹಿಂಸೆಯಲ್ಲಿ ನಿಮ್ಮ ವಿಶ್ವಾಸವಿದೆಯೊ ಇಲ್ಲವೊ? ಇದ್ದುದೆ ಆದರೆ ಈ ಹಿಂಸಾಮಯಯುದ್ಧವನ್ನು ನೀವು ಸಮರ್ಥಿಸುವುದು ಶಕ್ಯವೆ ಇಲ್ಲ. ಆದರೆ ಮೊತ್ತಮೊದಲು ತಾವೇ ಬ್ರಿಟಿಶರಿಗೆ ಸಹಾಯ ಮಾಡಬೇಕೆಂದು ಹೇಳಿದ್ದಿಲ್ಲವೆ? ಅಹುದು, ಆದರೆ ಅದು ಕೇವಲ ನೈತಿಕಸಹಾಯ; ಆಯುಧಗಳ ಸಹಾಯವಲ್ಲ, ಆಶೀರ್ವಾದಗಳ ಸಹಾಯ. ಯಾವುದೆ ಆದರೂ ಅಹಿಂಸಾವ್ರತಬದ್ಧನು ಸಹಾಯ-ಸಹಾನುಭೂತಿಗಳನ್ನು ತೋರಿಸಬಹುದೆ? ಬ್ರಿಟಿಶರು ಸ್ವಾತಂತ್ರ್ಯಕ್ಕಾಗಿ ಹೆಣಗುತ್ತಿರುವುದರಿಂದ ತೋರಿಸಬಹುದು— ಎಂದು ಮಹಾತ್ಮರು ವಾದಿಸಿದರು. ಆದರೆ ಈಗ ಅದೇ ಧೋರಣದಲ್ಲಿ ಬದಲಾವಣೆಯಾಗಲು ಕಾರಣವೇನು? "ನಾನು ವೈಸ್‌ರಾಯರೊಡನೆ ಮಾತನಾಡಿದೆ; ಬ್ರಿಟಿಶರು ಕೇವಲ ತಮ್ಮ ಸ್ವಾತಂತ್ರ್ಯಕ್ಕಾಗಿ ಹೆಣಗುತ್ತಲಿದ್ದಾರೆ. ಸ್ವಾತಂತ್ರ್ಯದ ತತ್ತ್ವಕ್ಕಾಗಿ ಅಲ್ಲ, ಹಿಂದುಸ್ತಾನಕ್ಕೆ ಸ್ವಾತಂತ್ರ್ಯವನ್ನು ಈಗಲೂ ಅವರು ಒಪ್ಪಲು; ಸಿದ್ಧರಿಲ್ಲ. ಆದುದರಿಂದ ನನ್ನ ಅಭಿಪ್ರಾಯವನ್ನು ಬದಲಾಯಿಸಿನ್ನೇನೆ" ಎಂದು ಈಗ ಹೇಳುತ್ತಾರೆ. ಆದಕಾಗಿ ಈಗ ಅವರು ವಿರೋಧವನ್ನು ಹೂಡಬಯಸಿವ್ದಾರೆ. ಹೋಗಲಿ. ಸಹಾಯಕೊಡುವಾಗ ನೈತಿಕಸಹಾಯದ ಹೊರತು ಇನ್ನೊಂದು ತಮಗೆ ಶಕ್ಯವಿಲ್ಲವೆಂದಾಗ, ವಿರೋಧವಾದರೂ ನೈತಿಕವಿರೋಧವೆ ಆಗುವುದಲ್ಲವೆ? ಅರ್ಥಾತ್, ನೈತಿಕಸಹಾಯದಿಂದ ಬ್ರಿಟಿಶರಿಗೆ

ಎಷ್ಟು ಲಾಭವಾಗಬಹುದಾಗಿತ್ತೊ ಅದೇ ಪ್ರಮಾಣದ ತೊಂದರೆ ನೈತಿಕವಿರೋಧದಿಂದಾಗಬಹುದಲ್ಲ?

ತತ್ತ್ವಗಳ ಗೊಂದಲ

ಮಹಾತ್ಮರ ವಿಚಾರಸರಣಿಯಿಂದ ಸಾಮಾನ್ಯಮನುಷ್ಯನಿಗೆ ಇನ್ನೂ ಗೊಂದಲವಾಗುವಂತಿದೆ. ಯಾಕೆಂದರೆ, ಯಾವ ರೀತಿಯಿಂದಲೂ ಇಂಗ್ಲಂಡಿನ ಈ ಪರಿಸ್ಥಿತಿಯಲ್ಲಿ ಬ್ರಿಟಿಶರಿಗೆ ತೊಂದರೆಯನ್ನುಂಟುಮಾಡಬಾರದೆಂದೂ ಮಹಾತ್ಮರ ನಿಶ್ಚಯವಿದೆ. ಇದರರ್ಥವೇನು? ಮಹಾತ್ಮರಂತಹ ಜಗತ್‌ಪ್ರಸಿದ್ಧ ವ್ಯಕ್ತಿಯು ಬ್ರಿಟಿಶರ ಯುದ್ಧನೀತಿಗೆ ವಿರೋಧವನ್ನು ಹೂಡಿದೆ ಎಂಬ ಸಂಗತಿಯೆ ಬ್ರಿಟಿಶರಿಗೆ ತೊಂದರೆಯಾಗಬಹುದಲ್ಲವೆ? 'ಬ್ರಿಟಿಶರಲ್ಲಿ ಪ್ರಾಮಾಣಿಕತನವಿಲ್ಲ' ಎಂದು ಮಹಾತ್ಮಾ ಗಾಂದಿಯಂತಹ ಸಾದುಪುರುಷನು ಕೂಡ ಹೇಳುತ್ತಿದ್ದಾನೆಂದು ಹಿಟ್ಲರನು ತನ್ನ ಅಪಪ್ರಚಾರವನ್ನು ಬಲವಡಿಸಬಹುದಲ್ಲವೆ? ಜರ್ಮನಿಯಲ್ಲಿ ಕೂಡ ಅನೇಕ ಪ್ರಾಮಾಣಿಕ ವ್ಯಕ್ತಿಗಳು ಹಿಟ್ಲರನ ನೀತಿಯನ್ನು ಒಪ್ಪುತ್ತಿರಲಿಕ್ಕಿಲ್ಲ; ಅಂತಹರಲ್ಲಿ ವಿಚಾರಗೊಂದಲವೇಳಬಹುದಲ್ಲವೆ? ಹಿಟ್ಲರನು ವ್ಯಕ್ತಿಸ್ವಾತಂತ್ರ್ಯಕ್ಕೆ ರೋಗದಂತಿದ್ದಾನೆ; ಆ ರೋಗದಲ್ಲಿ ಮಹಾತ್ಮರ ಧೋರಣವು ಅಪಥ್ಯದಂತಾಗಬಹುದಲ್ಲವೆ? ಬ್ರಿಟಿಶರಿಗೆ ಯಾವ ರೀತಿಯಿಂದಲೂ ತೊಂದರೆಕೊಡಬಯಸುವುದಿಲ್ಲ ಎಂಬ ಮಾತನ್ನು ಸದ್ಯದ ಸತ್ಯಾಗ್ರಹ ಪ್ರಯೋಗಕ್ಕೆ ಹೊಂದಿಸುವುದು ಹೇಗೆ? ಆದರೆ ಮಹಾತ್ಮರ ನೇತೃತ್ವದಲ್ಲಿ ಹೇಗೆ-ಯಾಕೆ ಎಂದು ಕೇಳುವ ಯೋಗ್ಯತೆಯಾಗಲಿ ಅಧಿಕಾರವಾಗಲಿ ಎಷ್ಟುವರಿಗಿಲ್ಲ. ಇಷ್ಟೇಕೆ? ಸತ್ಯಾಗ್ರಹದಿಂದ ನೈತಿಕ ವಿರೋಧವನ್ನು ನನ್ನ ಜೊರತು, ನನ್ನ ಅಪ್ಪಣೆ ಇಲ್ಲದೆ ಯಾರೂ ಹೂಡತಕ್ಕದ್ದಲ್ಲ ಎಂಬ ಕರಾರನ್ನು ತಮ್ಮ ನೇತೃತ್ವಕ್ಕೆ ಜೋಡಿಸಿದ್ದಾರೆ!

ಇನ್ನೊಂದು ಮಹತ್ತ್ವದ ಘಟನೆ

ಈ ಸತ್ಯಾಗ್ರಹದ ಅಧಿಕಾರ ತಮಗೆಯೆ ಯಾಕೆದೆ ಎಂಬುದಕ್ಕೆ ಮಹಾತ್ಮರು ತೋರಿಸಿದ ಅನೇಕ ಕಾರಣಗಳು, ಒಂದೆರಡು ನಾವು ಹೇಳುವ ಇನ್ನೊಂದು ಮಹತ್ತ್ವದ ಘಟನೆಗೆ ಸಂಬಂಧಿಸಿವೆ. ಸತ್ಯಾಗ್ರಹಕ್ಕೆ ಅಧಿಕಾರವಿರಬೇಕಾದರೆ ಆ ವ್ಯಕ್ತಿಗೆ (೧) ಅಹಿಂಸೆಯಲ್ಲಿ ಅಚಲಶ್ರದ್ಧೆ ಬೇಕು, (೨) ಖಾದಿಯಲ್ಲಿ (ಎಂದರೆ ಚರಕಾದಲ್ಲಿ) ದುಡಿವೆ ಇರಬೇಕು. (೩) ಅಸ್ಪೃಶ್ಯತೆ ಪಾಪ ಎಂಬ ಭಾವನೆ ಬೇಕು. ಇಪ್ಪತ್ತು ವರ್ಷಗಳಿಂದ ತಮ್ಮ ಪ್ರಚಾರವನ್ನು ಮಹಾತ್ಮರು ನಡೆಯಿಸಿದ್ದರೂ ಸಾಮಾನ್ಯ ಮಾನವನಿಗೆ ಈ ಮೇಲೆ ಕಾಣಿಸಿದ ಸಂಗತಿಗಳಿಗೂ ಸತ್ಯಾಗ್ರಹಕ್ಕೂ ಯಾವ ಸಂಬಂಧವಿದೆ. ಎಂಬುದು ತಿಳಿಯದಂತಾಗಿದೆ. ಸತ್ಯಾಗ್ರಹವು ಒಂದು ಮನೋವೃತ್ತಿ ಎನಿಸದೆ, ಸಾಂಪ್ರದಾಯಿಕ ಧರ್ಮಗಳಂತೆ ಖಾದಿ ಮೊದಲಾದ ಬಾಹ್ಯಸಂಕೇತಗಳಿಗೆಯೆ ಹೆಚ್ಚಾಗಿ ಸಂಬಂಧಿಸಿದೆಯೆ? ಆರ್ಥಿಕ ದೃಷ್ಟಿಯಿಂದ ರಾಷ್ಟ್ರಗಳ ಪರಸ್ಪರ ಸಂಬಂಧ ಬೆಳೆಯುತ್ತಿರುವಾಗ, ರಾಷ್ಟ್ರದ ಸಂಪತ್ತಿಗೆ ನಾಗರಿಕನು ಹೆಚ್ಚು ಹಣವನ್ನು ವೆಚ್ಚಮಾಡಲು ಶಕ್ತನಾಗಬೇಕಾದಾಗ, ವ್ಯಾಪಾರದ ವಿನಿಮಯವು ಅನಿವಾರ್ಯವೆನಿಸುತ್ತಿರುವಾಗ, ಜೀವನದ ಪದ್ಧತಿಯೆ ನಮಗೆ ತಿಳಿಯದೆ ತಾನಾಗಿಯೆ ಬದಲಾಯಿಸುತ್ತಿರುವಾಗ, ಔದ್ಯೋಗಿಕ ಮೇಲಾಟದಲ್ಲಿ ನಮ್ಮ ಸಂಪತ್ತನ್ನು ಮಿಕ್ಕವರು ಸೂರೆಗೊಳ್ಳುತ್ತಿರುವಾಗ—ನಾವು ಇಡಿಯ ವರ್ಷ ನಮಗೆ ಸಾಕಾಗುವಷ್ಟು ಬಟ್ಟೆಗಾಗಿ ಮಾತ್ರ ಚರಕ ತಿರುಗಿಸಿ ಬೆಮರು ಸುರಿಸಬೇಕೆ? ಅದರಂತೆಯೆ—ಅಸ್ಪೃಶ್ಯತಾನಿವಾರಣೆಯು ಸಾಮಾಜಿಕ ಪ್ರಶ್ನೆಯಾಗಿದೆ ಎಂಬುದನ್ನರಿಯದೆ, ಅದಕ್ಕೆ ನೈತಿಕ ಸ್ವರೂಪವನ್ನು ಕೊಟ್ಟು ಪಾಪ—ಪುಣ್ಯದ ಭಾವಿಕತನಕ್ಕೆ ಅದನ್ನಿಳಿಸಬಹುದೆ? ಕೊನೆಗೆ ಇದನ್ನೆಲ್ಲ ಕೂಡಿಸಿ ರಾಜಕಾರಣಕ್ಕೆ ತಿಲಕಾಷ್ಟಮಹಿಷ ಬಂದಸ ಶಾಸ್ತ್ರದಂತೆ ಜೋಡಿಸಬೇಕೆ? ಇತ್ತ ನಮ್ಮ ಈ 'ಅನರ್ಥ ಶಾಸ್ತ್ರದ ಪ್ರಯೋಗ ನಡೆದಾಗ ಅತ್ತ ಆಳರಸರು ಪ್ರಾಪ್ತ ಸಾಮ್ರಾಜ್ಯದೇಶಗಳ ಔದ್ಯೋಗಿಕ ಪರಿಷತ್ತನ್ನು ನೆರೆಯಿಸಿದ್ದಾರೆ. ನಾವು ಹೇಳುವ ಎರಡನೆಯ ಮಹತ್ತ್ವದ ಘಟನೆ ಎಂದರೆ ಇದೇ.

ಕಾಂಗ್ರೆಸಿನ ಕೂಪಮಂಡೂಕ ವೃತ್ತಿ

ಕಳೆದ ತಿಂಗಳು ಖಾನೆಯ ತಾಣ ಗೆ ಹೊಸದಿಲ್ಲಿಯಲ್ಲಿ ಬ್ರಿಟಿಶ ಸಾಮ್ರಾಜ್ಯದ ಪ್ರಾಜ್ಯದೇಶಗಳ ಪರಿಷತ್ತು ಕೂಟ ತ. ನಾವಿದನ್ನು ಬರೆಯುವಾಗ ಪರಿಷತ್ತು ಇನ್ನೂ ನಡೆದಿಲ್ಲ, ಆದರೆ ನಿರ್ಣಯಗಳ ಸೂಚನೆ ಇಲ್ಲ. ಆದರೂ ಆ ನಿರ್ಣಯಗಳು ಎಂತಹವಾಗುವುವೆಂಬುದು ರಾಜಕಾರಣವನ್ನು ಅರಿತ, ವಿಚಾರಮಾಡಬಲ್ಲ ಪ್ರತಿಯೊಬ್ಬ ಭಾರತೀಯನಿಗೆ ಸ್ಪಷ್ಟವಾಗಿ ತಿಳಿದಿದೆ. ಪರಿಷತ್ತಿನ ಉದ್ಘಾಟನೆಯ ಕಾಲಕ್ಕೆ ವೈಸರಾಯರು ಮಾಡಿದ ಭಾಷಣದಿಂದಲೂ ಆ ನಿರ್ಣಯಗಳ ಕಲ್ಪನೆ ಬರುವಂತಿದೆ. ಸದ್ಯದ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಇಂಗ್ಲಂಡಿಗೆ ಶಕ್ಯವಾದಷ್ಟು ಸಹಾಯ ಮಾಡುವುದು ಈ ಪರಿಷತ್ತಿನ ಉದ್ದೇಶವಾಗಿದೆ ಈ ಉದ್ದೇಶದ ತತ್ತ್ವಕ್ಕಾಗಿ ಯಾರಿಗೂ ವಿರೋಧವಿಲ್ಲ. ಆದರೆ ಆ ಸಹಾಯವು ಎಂತಹದು, ಅದರಲ್ಲಿ ಹಿಂದುಸ್ತಾನದ ಬಾಗವೆಂತಹದು ಎಂಬುದು ನಮ್ಮ ದೃಷ್ಟಿಯಿಂದ ಮುಖ್ಯವಾದ ಮಾತು. (೧) ಇಂಗ್ಲಂಡಿಗೆ ಯುದ್ಧಸಾಮಗ್ರಿಗಳನ್ನು ಒದಗಿಸುವುದು ಒಂದು, (೨) ಜೆಜ್ಜಾಗಿ ಯುದ್ಧಕಾರ್ಯದಲ್ಲಿ ತೊಡಗಿದ ಇಂಗ್ಲಂಡಿಗೆ ಆಹಾರ-ಬಟ್ಟೆ ಮೊದಲಾದ ಜೀವನ-ಆವಶ್ಯಕತೆಗಳನ್ನು ಒದಗಿಸುವುದು—ಇನ್ನೊಂದು. ಈ ಎರಡು ಕಾರ್ಯಗಳಿಗಾಗಿ ಪರಿಷತ್ತು ಉಪಾಯ ಉದ್ಯಮ-ಉತ್ಪತ್ತಿಗಳ ಕೇಂದ್ರೀಕರಣಕ್ಕೆ ಉಪಾಯಗಳನ್ನು ಶೋಧಿಸುವುದು. ಉದ್ಯಮ ಮತ್ತು ಉತ್ಪತ್ತಿಗಳ ಬೆಳವಣಿಗೆಗೆ ಇನ್ನೂ ನಮ್ಮ ದೇಶದಲ್ಲಿ ಅಪಾರ ದ್ರವ್ಯಸಂಪತ್ತಿಯಿದೆ, ಅದರ ಜೊತೆಗೆ ತಕ್ಷಣವನ್ನು ಪಡೆದು, ತಜ್ಞರನ್ನು ಸಿದ್ಧಮಾಡಿ ಆತಸ್ತತೋಭ್ರಷ್ಟರಾದ ಸಾವಿರಾರು ಯುವಕರು ಹೊಟ್ಟೆಗಿಲ್ಲದೆ ಅಲೆಯುತ್ತಿದ್ದಾರೆ. ನಮ್ಮ ದೇಶದ ಉದ್ಯಮಸಂಪತ್ತನ್ನೂ ಉದ್ಯೋಗತಜ್ಞರನ್ನೂ ಬೆಳೆಯಿಸುವ ಕಾಲವಿದು. ಇಂತಹ ಕಾಲದಲ್ಲಿ ನಮ್ಮ ಸರಕಾರದ ಮೇಲೆ ಜನತೆಯ ನಿಯಂತ್ರಣವಿಲ್ಲ; ಆ ನಿಯಂತ್ರಣವನ್ನಿಡಬಹುದಾದ ಕಾಂಗ್ರೆಸು ತನ್ನ ತತ್ತ್ವಕೂಪದಲ್ಲಿ ಮಂಡೂಕವೃತ್ತಿಯನ್ನು ಧರಿಸಿದೆ! ಇದು ಸರಿಯೆ?

ಕನ್ನಡನೀರರಿಗೆ ಅಭಿನಂದನೆಗಳು

★

ಶ್ರೀ. ಆರ್. ಎಸ್. ಒಡೆಯರ್

ಇವರು ಉತ್ತರಕರ್ನಾಟಕದಲ್ಲೆಲ್ಲ ಸುಪರಿಚಿತರಾದ ಎಸ್. ಕೆ. ಒಡೆಯರ್ ಬಿ. ಸಿ. ಎಸ್. ರಿಟಾಯರ್ಡ್ ಆಕ್ಟಿಂಗ್ ಕಲೆಕ್ಟರ್ ಆವರ ಚಿರಂಜೀವರು. ಚಾಡದಾನಪುರದ ರಾಜಗುರು ಒಡೆಯರ್ ಮನೆತನಕ್ಕೆ ಸೇರಿದವರು. ಇವರು ಸೊನ್ನೆ ಸೊನ್ನೆಯೆ ದಿಲ್ಲಿಯಲ್ಲಿ ನಡೆದ ಫೆಡರಲ್ ಪಬ್ಲಿಕ್ ಕಮಿಶನ್ ಎಗ್ಜಾಮಿನೇಶನಲ್ಲಿ ತೇರ್ಗಡೆ ಹೊಂದಿ, ಡೆಪರಾಡೂನಿನ ಇಂಡಿಯನ್ ಮಿಲಿಟರಿ ಅಕ್ಯಾಡಮಿಯಲ್ಲಿ ಸೈನ್ಯಶಿಕ್ಷಣ ಪಡೆಯುವುದಕ್ಕೆಂದು ಆಯ್ಕೆ ಹೊಂದಿದ್ದಾರೆ. ಈ ಮರ್ಯಾದೆ ಪಡೆದವರಲ್ಲಿ ಮುಂಬಯಿ ಇಲಾಖೆಗೆ ಇವರೇ ಮೊದಲಿಗರು. ಶಿಕ್ಷಣ ಪಡೆದಾಪ ಮೇಲೆ, ಹಿಂದುಸ್ತಾನದ ಸೈನ್ಯವಾತೆಯಲ್ಲಿ ಇವರಿ ಮಾನದ ಸ್ಥಾನ ಪೊರೆಯಲಿದೆ.

★

★

ಇವರು ಉತ್ತರಕನ್ನಡ ಜಿಲ್ಲೆಯ ಕಾರವಾರನಗರದಲ್ಲಿ ಹುಟ್ಟಿ ಬೆಳೆದವರು. ಧಾರವಾಡ ಸೈನ್ಸ್‌ಸ್ಕೂಲಿನಲ್ಲಿ ವಿದ್ಯಾರ್ಥಿಗಳಾಗಿದ್ದರು. ಮೊದಲಿನಿಂದಲೂ ಇವರು ಕ್ರೀಡಾಪಟುಗಳಲ್ಲದೆ, ಈಜುವಿಕೆಯನ್ನು ಪ್ರೀತಿಸುವವರಾಗಿದ್ದರು. ೧೯೪೭ ರಲ್ಲಿ ಇವರು ನೌಕಾಸೈನ್ಯವನ್ನು ಸೇರಿ, ಬೊಂಬಾಯಿಯ ಇಂಡಿಯನ್ ಮರ್ಚಂಟಾಯಿಲ್ ಟ್ರೇನಿಂಗ್‌ಶಿಪ್ 'ದಫರಿನ್' ಸಂಸ್ಥೆಗೆ ಸೇರಿ, ಯಶಸ್ಸು ಪೊರೆಕಿಸಿದ ಮೇಲೆ, ಹಿಂದುಸ್ತಾನ್ ಸರಕಾರದವರು ರಾಯಲ್ ಇಂಡಿಯನ್ ನೇವ್ಲಿ ಆಫೀಸರ್ಸ್ ಟ್ರೇನಿಂಗ್ ಕೋರ್ಸಿಗಾಗಿ ಆರಿ ಕಾಲೇಜಿಗೆ ಕಳುಹಿಸಿದರು. ಕಳೆದ ಜುಲೈ ತಿಂಗಳಲ್ಲಿ ನಡೆದ ಆಲ್ಲಿಯ ಯಶಸ್ಸನ್ನು ಇವರು ಸಂಪಾದಿಸಿದುದು ಕನ್ನಡಿಗರಿಗೆಲ್ಲ ತುಂಬ ಆ

★



ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆವೆಚ್ಚಸೇರಿ ೩—೦—೦ ..... ವ್ಹಿ. ಪಿ. ಯಿಂದ ೩–೫–೦ ..... ಬಿಡಿಸಂಚಿಕೆಗೆ ೪ ಆಣೆ

ಸಂಪಾದಕರು :

ಪಾಟೀಲ ಮಾಧವರಾಯರು ಬೆಟಗೇರಿ ಕೃಷ್ಣಶರ್ಮರು

೩ನೆಯ ವರ್ಷ	ಡಿಸೆಂಬರ್ ೧೯೪೦	೩ನೆಯ ಸಂಚಿಕೆ

ಮುಖ್ಯವಿಷಯಗಳ ಪರಿವಿಡಿ

ಸ್ವಪ್ನಸೌಂದರ್ಯ (ಕವನ)	ಶ್ರೀ. ಶ್ರೀಧರಶರ್ಮ, ಮೈಸೂರು	೪೬೧
ಸಂಪಾದಕೀಯ	ಸಂಪಾದಕರು	೪೬೨
ಮಂಗನ ಮಲ್ಲಿನಾಥತನ	ಶ್ರೀ. 'ಮಲ್ಲಿನಾಥ'	೪೬೩
ವಿವೇದಾರರ ಹಿತಕ್ಕಾಗಿ (ವಿವೇಚನಾತ್ಮಕ)	ಶ್ರೀ. ಎಂ. ಪಿ. ಭಾಗವತ, ಮುಂಬಯಿ	೪೬೫
ಬೆಳುದಿಂಗಳ ರಾಣಿ (ಕವನ)	ಶ್ರೀ. 'ಶ್ರೀಧರ' ಪೂನಾ	೪೭೪
ಬಡವರು (ಸಣ್ಣಕತೆ)	ಶ್ರೀ. 'ಜಾರತೀಸುತ' ಮೈನಾಡು	೪೭೫
ಸಿಹಿನೀರು (ಜಾಳಿನ ಒಳನೋಟ)	ಶ್ರೀ. ಎಲ್. ಎನ್. ನಾರಾಯಣರಾವ್ ಬಿ. ಎ.	೪೮೬
ಭಿಕ್ಷು ಉತ್ತಮ (ವ್ಯಕ್ತಿ ಪರಿಚಯ)	ಶ್ರೀ. ಎಸ್. ಕೃಷ್ಣಶರ್ಮ, ಮುಂಬಯಿ	೪೮೯
ನವೀನಗಾನ (ಕವನ)	ಶ್ರೀ. 'ಪಲ್ಲಾಲ'	೪೯೦
ಕನ್ನಡಮ್ಮನ ಉದಯರಾಗ (ಕವನ)	ಶ್ರೀ. ಟಿ. ಎನ್. ಶ್ರೀನಿವಾಸಮೂರ್ತಿ	೪೯೪
ಅಂತರಾತ್ಮನ ಕರೆ (ಜೀವನಕಲಾವಿಷಯಕ)	ಶ್ರೀ. ವಿಶ್ವನಾಥ ಹೆಗಡೆ, ಮುಂಬಯಿ	೪೯೫
ಗರುಡಪುರಾಣ ಅದವಾ ಯಮನ ಭಜೀತಿ (ಹುಚ್ಚಾಟ) ..	ಶ್ರೀ. 'ಬೀಚಿ' ಬಳ್ಳಾರಿ	೫೦೮
ಹಿರಣ್ಯಗರ್ಭ (ಸಂಶೋಧನ)	ಶ್ರೀ. ಬೆಂಗೇರಿ ಹುಚ್ಚರಾಯರು, ಎಂ. ಎ, ಬಿ. ಟಿ.	೫೨೦
ಬಡುಗಜೆ (ಸಣ್ಣಕತೆ)	ಶ್ರೀ. ಪಿ. ಆರ್. ಸುಬ್ಬರಾವ, ಚಿತ್ರದುರ್ಗ	೫೨೪
'ದಿನಚರಿ' ಎಂದರೆ 'ಸೈರ' (ಪರಿಚಯಾತ್ಮಕ)	ಶ್ರೀ. ಬಿದರಕುಂದಿ ವೆಂಕಟರಾಯರು	೫೩೪
ಸನ್ನ ಕಳವು (ವಿನೋದ ಪ್ರಬಂಧ)	ಶ್ರೀ. ಜೆ. ವಾಮನಭಟ್ಟ, ಬಿ. ಎ., ಬಿ. ಟಿ.	೫೩೫
ದೇಹಸೌಂದರ್ಯಕ್ಕೆ ಉಡುಪಿನ ಮುಡುಪು	ಶ್ರೀ. ಹಳಪೇಟಿ ಚಿಂತಾಮಣಿರಾಯರು	೫೪೪
ಪುಸ್ತಕ ವಿಮರ್ಶೆ	ಬೇರೆ ಬೇರೆಯ ವಿಮರ್ಶಕರು	೫೪೬
ಸಾದರಸ್ವೀಕಾರ	.. ..	೫೫೦
ನಗೀಗೆ ನೇವಿದ್ಯ	ಶ್ರೀ. 'ಸಕಲೇ ನಾರಾಯಣಾಚಾರಿ'	೫೫೦
ನಾಲ್ಕೂ ನಿಟ್ಟಿನ ನೋಟ	'ನಿರೀಕ್ಷಕರು'	೫೫೦
ಅಭಿನಂದನೆಗಳು	.. .. .. ಮೇಲೋಲೆಯ ೩ನೆಯ ಪುಟದಲ್ಲಿ	



೩ನೆಯ ವರ್ಷ | ಡಿಸಂಬರ್ ೧೯೪೦ | ೮ನೆಯ ಸಂಚಿಕೆ

ಸ್ವಪ್ನ ಸೌಂದರ್ಯ

ಲೇ. ಶ್ರೀಧರಶರ್ಮ

★

ಸೌಂದರ್ಯ, ಸೌಂದರ್ಯ! ಕಂಗೊಳಿಸುತಿದೆ ಕನಸಿ-
ನಾನಂದನಂದನದ ನಟ್ಟನಡುವೆ!
ಮಾಧುರ್ಯವೊಸರುತಿದೆಯೊಂದೆ ತಡವೆ,
ಮನದ— ರಾಜಹಂಸಕ್ಕಿನ್ನು ತಡೆಯಲಳವೆ?

ಸುತ್ತಲಿನ ಸುಕುಮಾರ ಕುಸುಮದೊಳ್ಸಾಸಿನಲಿ
ಕಲೆಯೊರಗಿ ನಿದ್ರಿಸುವ ಸೌಖ್ಯನೇನು!
ಮನವಮೋಹಿಸುವ ಮೆಲುಗಾಳಿಯೇನು,
ಮದವ— ಮೇರೆವರಿಸುವ ಕಂಪಿನುಣಿಸದೇನು!

ನೈಸರ್ಗಿಕಾಮಳ ಸರೋವರದ ಸೋಪಾನ
ಸಾಲಾಗಿ ಶೋಭಿಸುವ ದೃಶ್ಯದೊಡನೆ,
ಮೇಲೇಳ್ವ ಮರಿದೆರೆಗಳಾಟದೊಡನೆ
ಮನವು— ಮೈಮರೆದು ಹಾಡಿ ಹಾಡಾಗದಿಹುದೆ?

ಬೆಳ್ಳಗೆಯೆ ಬೆಳ್ದಿಂಗಳಾಗಿ ಹರಿಯಲು ಲೋಕ-
ವೆಲ್ಲ ತಣಿಹವನುಂಡು ಸುಖಿಸುತಿಹುದು!
'ಒಳ್ಳಿತೊಳ್ಳಿತು ಎಲ್ಲ' ಎಂಬ ಮಾತೆ,
ಸೊಗವೆ— ಎಲ್ಲ ಮತ್ತೊಂದಿಲ್ಲವೆಂಬ ಗೀತೆ!

ಇಂದ್ರಿಯಂಗಳ ಹಸಿವನಿಂಗಿಸುತ ವಿಶ್ವದಲಿ
ತುಂಬಿ ತುಳುಕದೆ ನಿಲುವುದಮರವಾಗಿ!
ಹೊಂದಿ ಹೂವಾಗಿ ಹಣ್ಣಾಗಿ ಮಾಗಿ
ಬಗೆಯು— ಕಂದನಂತಹುದು ಹೊಲ್ಲಮೆಯು ಹೋಗಿ!

ಬೊಮ್ಮ ಮಾಡಿದುದೆಲ್ಲ ಕನ್ನಡಿಯೊಳಿಹ ಗಂಟು
ಮರುಳುಗೊಳಿಸುವ ನಂಟು, ಮಯಣದಂಟು!
ನಮ್ಮ ಚಿತ್ತಕೆ ಬೇಡವದರ ಬೇಟ,
ಸಿಗದ— ಜೊಳ್ಳು ಸೊಗವರಸಿ ಅಂಡಲೆಯುವಾಟ!

ಕನಸೆ ನನಸೀ ಜಗಕೆ, ನನಸೆ ಕನಸೀ ದಿನಕೆ,
ಕನಸಿನಾಟವೆ ಆಟ ದಿವ್ಯಲೀಲೆ!
ಇನಿದೆಲ್ಲ ಕವಿಕರ್ಮದಲರಮಾಲೆ,
ಮತ್ತೆ— ಉಳಿದುದೆಲ್ಲವು ಮಾಯೆ ತೆರೆದ ಸಾಲೆ!

ಕನಸಿನೊಳಗೆಲ್ಲೆಡೆಯು ಪ್ರೇಮಬಂಧನ, ಪುಳಕ,
ಆನಂದ, ಶಾಂತರಸ, ಅಮರಗಾನ!
ಮಾನವ್ಯ ನಾಟ್ಯದಲಿ ವಿಷಮತಾಲ,
ಕನಸಿ— ನಾಲಯದಿ ಲಯಬದ್ಧವೆಲ್ಲ ಲಾಸ್ಯ!

ಕರ್ನಾಟಕದಲ್ಲಿಯ ಕಾರ್ಯಕರ್ತರು

ಯಾವುದೆ ಒಂದು ರಾಷ್ಟ್ರವನ್ನು ಅಥವಾ ದೇಶವನ್ನು ತೆಗೆದು ಕೊಂಡು ನೋಡಿದರೆ, ಅಲ್ಲಿಯ ಜನಸಮಾಜದಲ್ಲಿ ಬಹುಸಂಖ್ಯಾಕರು ಸಾಮಾನ್ಯ ಜನರೆ ಇರುವರು. ರಾಷ್ಟ್ರದ ಇಲ್ಲವೆ ದೇಶದ ಉನ್ನತಿಯ ಬಗೆಗೆ ವಿವಿಧ ಆದರ್ಶಗಳನ್ನಿಟ್ಟುಕೊಂಡು ಕಾರ್ಯಮಾಡುವ ಮುಂದುವರಿದ ಜನರು, ಯಾವ ರಾಷ್ಟ್ರದಲ್ಲಿಯೂ ಅಲ್ಪಸಂಖ್ಯಾಕರೆ ಆಗಿರುವರು. ಈ ಅಲ್ಪಸಂಖ್ಯಾಕರಾದ ಕಾರ್ಯಕರ್ತರಲ್ಲಿ ಕೂಡ ಎಲ್ಲರೂ ಒಂದೆ ಬಗೆಯ ಕಾರ್ಯಕ್ಷೇತ್ರದಲ್ಲಿ ಇರದೆ, ನಾಡಿನ ಉನ್ನತಿಗೆ ಆವಶ್ಯಕವಾದ ಬೇರೆಬೇರೆ ಕಾರ್ಯಕ್ಷೇತ್ರಗಳನ್ನು ನಿರ್ಮಿಸಿ ಕೊಂಡು, ಅಲ್ಲಲ್ಲಿ ಕೆಲಸಮಾಡುತ್ತಿರುವರು. ದೇಶದ ವಿವಿಧ-ಮುಖದ ಉನ್ನತಿಯ ದೃಷ್ಟಿಯಿಂದ ವಿಚಾರಮಾಡಿದರೆ, ಎಲ್ಲವಿಧದ ಕಾರ್ಯಕರ್ತರ ಕಾರ್ಯವೂ ದೇಶಕ್ಕೆ ಆವಶ್ಯಕವಾಗಿರುವುದು.

ನಾಡಿನ ಜನರಲ್ಲಿ ಸಂಸ್ಕೃತಿಯನ್ನು ಬಳೆಯಿಸಿ, ಅವರ ಜೀವನವು ಸುಖ-ಶಾಂತಿಗಳ ದಾರಿಯಲ್ಲಿ ಸಾಗುವಂತೆ ಕೆಲವು ಜನ ಕಾರ್ಯಕರ್ತರು ಕೆಲಸದ ಹೊಣೆಯನ್ನು ಹೊತ್ತಿರುವರು. ನಾಡಿನ ಬಹು-ಸಂಖ್ಯಾಕರಿಗೆ ಯಾವುದೊಂದು ವ್ಯಕ್ತಿಯಿಂದಲೊ, ಸಂಸ್ಥೆಯಿಂದಲೊ, ಸಮುದಾಯದಿಂದಲೊ, ಅಡಚಿತದಿಂದಲೊ ಬಲುಮೆ-ಒತ್ತಾಯಗಳು ಆಗುತ್ತಿದ್ದರೆ, ಹಾಗೆ ಆಗದಂತೆ ಜನಸಾಮಾನ್ಯರನ್ನು ಎಚ್ಚರು ಗೊಳಿಸುವ — ಅವರಲ್ಲಿ ಕರ್ತವ್ಯಜಾಗೃತಿಯನ್ನು ಹುಟ್ಟಿಸುವ — ಕಾರ್ಯವನ್ನು ಇನ್ನು ಕೆಲವು ಕಾರ್ಯಕರ್ತರು ಮಾಡಬೇಕಾಗುತ್ತದೆ. ನಾಡಿನಲ್ಲಿ ಆರ್ಥಿಕಶಾಂತಿ ನೆಲೆಗೊಳ್ಳುವಂತೆ ಧನೋತ್ಪಾದಕ ಉದ್ಯಮ-ಗಳನ್ನೂ, ಕೈಗಾರಿಕೆಗಳನ್ನೂ, ವ್ಯಾಪಾರವನ್ನೂ, ಬೇಸಾಯವನ್ನೂ ಹಬ್ಬಿಸುವ ಕಾರ್ಯದಲ್ಲಿ ಕೆಲವು ಜನ ಧುರೀಣರು ಕಾರ್ಯಮಾಡ ಬೇಕಾಗುತ್ತದೆ. ದೇಶದ ಅಭ್ಯುದಯದ ದೃಷ್ಟಿಯಿಂದ ನೋಡಿದರೆ ಇಲ್ಲಿ ಹೇಳಿದ ಮೂರು ಬಗೆಯ ಕಾರ್ಯಕರ್ತರೂ ಆವಶ್ಯವಾಗಿ ಬೇಕು. ಒಬ್ಬರ ಕೆಲಸ ಹೆಚ್ಚಿನದು, ಇನ್ನೊಬ್ಬರ ಕೆಲಸ ಕಡಿಮೆಯದು ಎಂದು ಯಾರೂ ಯಾರೊಡನೆಯೂ ತಾರತಮ್ಯಭಾವದಿಂದ ನಡೆದುಕೊಳ್ಳ ಬಾರದು. ದೇಶದ ಅಭ್ಯುದಯದ ಆದರ್ಶದಿಂದ ಕಾರ್ಯಮಾಡು-ತ್ತಿರುವ ಪ್ರತಿಯೊಬ್ಬ ಕಾರ್ಯಕರ್ತನಲ್ಲಿಯೂ ಒಂದೊಂದು ಬಗೆಯ ತ್ಯಾಗ, ಸೇವಾಬುದ್ಧಿಗಳನ್ನು ನಾವು ಕಾಣಬಹುದು. ಅಂತಹ ತ್ಯಾಗ-ಸೇವಾ ಬುದ್ಧಿಗಳಿಲ್ಲದವರಿಂದ ಕಾರ್ಯವಾಗುವುದು ಶಕ್ಯವೆ ಇಲ್ಲ. ಸಂಸ್ಕೃತಿ-ಕ್ಷೇತ್ರ, ಆರ್ಥಿಕ ಕ್ಷೇತ್ರದಲ್ಲಿ ದುಡಿಯುವವರು ಅವಿರತವಾಗಿ ಕಾರ್ಯಮಾಡುತ್ತಿರಬೇಕಾಗುವುದರಿಂದ, ಅವರ ಕಾರ್ಯಕ್ಕೆ ನಂದಾ-ದೀಪದ ಉಪಮೆಯನ್ನು ಕೊಡಬಹುದು. ಅಡಚಿತ, ಅಧಿಕಾರ, ಸಿರಿ-ವಂತಿಕೆ, ದೇಹದಕ್ಕಿ ಇವುಗಳೊಂದಿಗೆ ಕಾದಾಡುವ ಸಂದರ್ಭವಿದ್ದು, ಯುದ್ಧಕ್ಷೇತ್ರದಲ್ಲಿ ಕೆಲಸಮಾಡುವವರ ನೈಮಿತ್ತಿಕ ಕಾರ್ಯಕ್ಕೆ ಮಿಂಚಿನ ಉಪಮೆ ಕೊಡಬಹುದು. ಮಿಂಚು ಜನಸಾಮಾನ್ಯರನ್ನು ಬೆರಗುಗೊಳಿಸುವಂತು; ನಂದಾದೀಪ ಬೆರಗುಗೊಳಿಸಲಾರದು. ಎಂತಲೆ ನಮ್ಮಲ್ಲಿ ಇಂದು, ರಾಜಕಾರ್ಯದಲ್ಲಿ ದುಡಿಯುವವರಿಗೊಂದು ವಿಶೇಷ ಬೆಲೆಯಿದ್ದಂತೆ ವಿಶಿಷ್ಟ ಕಾರ್ಯಕ್ಷೇತ್ರಗಳಲ್ಲಿ ಕಾರ್ಯಮಾಡುವವರಿಗೂ ಇದೆಯೆಂಬುದು, ಬಹುಜನರಿಗೆ ತಿಳಿಯದೆ ಇದೆ. ಈ ತಿಳಿಗೇಡಿತನವನ್ನು ನಮ್ಮ ನಾಡಿನ ಕಾರ್ಯಕರ್ತರಲ್ಲಿ ಇಲ್ಲದ ತಾರತಮ್ಯವನ್ನು ಕಲ್ಪಿಸಿ ಹಚ್ಚಿ, ಪರಸ್ಪರರಲ್ಲಿ ವೈಷಮ್ಯ—ವಿಮನಸ್ಕತೆಗಳು ಉಂಟಾಗುವಂತೆ ಮಾಡಿಬಿಟ್ಟಿದೆ. ಕನ್ನಡನಾಡಿನ ಅಭ್ಯುದಯದ ರೀತಿಯಲ್ಲಿ ನೋಡಿದರೆ ಹೀಗಾಗುವುದು ಬೇರ ಘಾತುಕವಾದುದು; ದುಷ್ಪರಿಣಾಮಕಾರಿಯಾದುದು.

ನಮ್ಮ ನೆರೆಯ ನಾಡಾದ ಮುಂದುವರಿದ ಮಹಾರಾಷ್ಟ್ರವನ್ನೆ ಉದಾಹರಣೆಗೆ ತೆಗೆದುಕೊಳ್ಳೋಣ: ಅಲ್ಲಿ ನವೀನ ರಾಷ್ಟ್ರನಿರ್ಮಾಣ-ಕ್ಕಾಗಿ ಹಲವರು ಹಲವು ವಿಧದಿಂದ ಕಾರ್ಯಮಾಡಿದರು; ನಾಡುತ್ತಲಿದ್ದಾರೆ. ಉಗ್ರರಾಜಕಾರಣಿಗಳಾಗಿ ಅಲ್ಲಿ ಲೋಕಮಾನ್ಯ ತಿಲಕರೂ ಅವರ ಅನುಯಾಯಿಗಳೂ ಕಾರ್ಯಮಾಡಿದರು. ಪ್ರಾಗತಿಕ ರಾಜ-ಕಾರಣಿಗಳಾಗಿ ಕೈ. ವಾ. ಗೋ. ಕೈ. ಗೋಖಲೆ ಮತ್ತು ಅವರ ಅನುಯಾಯಿಗಳು ಕಾರ್ಯಮಾಡಿದರು. ಸಾಮಾಜಿಕ ಸುಧಾರಣೆಗಾಗಿ ರಾನಡೆ, ಆಗರಕರ್ ಅವರು ಹೆಣಗಿದರು. ಹೆಂಗುಸರನ್ನೆಲ್ಲ ವಿದ್ಯಾ-ವತಿಯರನ್ನಾಗಿ ಮಾಡುವುದಕ್ಕಾಗಿ ಶ್ರೀ. ಕರ್ವೆಯವರು ಕಾರ್ಯ-ಕ್ಕೆ ಕೈಕೊಂಡರು. ಇತಿಹಾಸ ಸಂಶೋಧನೆಗಾಗಿ ಶ್ರೀ. ರಾಜವಾಡೆಯವರು ದೇಹ ಸವಿಸಿದರು; ಸಾಹಿತ್ಯನಿರ್ಮಿತಿಗಾಗಿ ಶ್ರೀ. ಹರಿ ನಾರಾಯಣ ಆಪಟೆ ಮೊದಲಾದವರು ಕಷ್ಟಪಟ್ಟರು. ಮಹಾರಾಷ್ಟ್ರದ ಆರ್ಥಿಕ ಶಾಂತಿಯ ಹೊಣೆ ಹೊತ್ತು ಕಾರ್ಯಮಾಡಿ ಯಶಸ್ಸು ಗಳಿಸಿದವರೂ ಹಲವುಜನರು. ಇವರೆಲ್ಲ ನೆಯ್ದ ನೆಯ್ಮೆಯ ಫಲವೆ ಇಂದಿನ ಮಹಾ-ರಾಷ್ಟ್ರ. ಅಲ್ಲಿಯ ಕಾರ್ಯಕರ್ತರಲ್ಲಿ 'ಇವರ ಕೆಲಸ ಕಡಿಮೆಯದು ಇವರ ಕೆಲಸ ಹೆಚ್ಚಿನದು' ಎಂಬುದನ್ನು ಹೇಗೆ ಹೇಳಲಿಕ್ಕಾದೀತು! ನಾಡಿಗೆ ಆವಶ್ಯಕವಿದ್ದ ಕಾರ್ಯಗಳನ್ನು ಅನೇಕರು ಅನೇಕ ವಿಧದಿಂದ-ತಂತಮ್ಮ ಒಲವಿಗೆ ಅನುಸಾರವಾಗಿ ಕೈಕೊಂಡು—ಮಾಡಿದರೆಂತಲೆ ಅದೊಂದು ಇಂದು ವರ್ತಮಾನ ಭಾರತದಲ್ಲಿ ಎಚ್ಚೆತ್ತ ದೇಶವೆಂದು ಪರಿಗಣಿತವಾಗುತ್ತಲಿದೆ. ಅಲ್ಲಿಯ ಜನಸಾಮಾನ್ಯರು ಕೂಡ ತಮ್ಮಲ್ಲಿಯ ಎಲ್ಲ ಕ್ಷೇತ್ರದ ಕಾರ್ಯಕರ್ತರಲ್ಲಿ ಯಾವ ತಾರತಮ್ಯವನ್ನೂ ತೋರಿಸದೆ ಎಲ್ಲರನ್ನೂ ವಿಭೂತಿಭಾವದಿಂದ ಪೂಜಿಸುತ್ತಲಿದ್ದಾರೆ.

ಮಹಾರಾಷ್ಟ್ರದ ಮಾನದಿಂದ ನೋಡಿದರೆ ಕನ್ನಡನಾಡಿನಲ್ಲಿ ಕಾರ್ಯ-ಕರ್ತರ ಕಡಿಮೆ; ಇದ್ದ ಕಾರ್ಯಕರ್ತರಲ್ಲಿ ರಾಜಕೀಯ ಕ್ಷೇತ್ರದಲ್ಲಿ ಕಾರ್ಯಮಾಡುವವರ ಸಂಖ್ಯೆಯೆ ವಿಶೇಷವಾಗಿದೆ. ಸದ್ಯದ ಉಗ್ರ-ಸಂದರ್ಭವು ಅವರ ಉತ್ಸಾಹಮಯ ಕಾರ್ಯಕ್ಕೆ ಹೆಚ್ಚಿನ ಬೆಲೆ ತಂದುಕೊಟ್ಟುದರಿಂದ, ವಿಶಿಷ್ಟವರ ಕಾರ್ಯವು ಕಾರ್ಯವೆ ಅಲ್ಲವೆನಿಸು-ವಂತಹ ಮನಃಸ್ಥಿತಿ ಬಹುಜನ ಕನ್ನಡಿಗರದಿದೆ. ಈ ಮನಃಸ್ಥಿತಿ ಹೋಗುವವರೆಗೂ ಕನ್ನಡನಾಡಿನಲ್ಲಿ ವಿಧಾಯಕ ಕಾರ್ಯಕರ್ತರ ಹೆಚ್ಚುವುದಿಲ್ಲ; ವಿಧಾಯಕ ಕಾರ್ಯಕರ್ತರು ಹೆಚ್ಚುವವರೆಗೂ

(೪೩೬ನೆಯ ಪುಟ ನೋಡಿರಿ)

ಅಧ್ಯಕ್ಷರಿಗೆ ಅಭಿನಂದನೆ

ಪೂಜೆಪಲ್ಲರು ಅಮೇರಿಕೆಯ ಅಧ್ಯಕ್ಷರಾದಾಗ ಆಶ್ಚರ್ಯ ಆಸಂದವಿರಲಿಲ್ಲ, ಆದರೆ ವ್ಯಾಕರಣತೀರ್ಥ ರುದ್ರಶೇಖರ ಶಾಸ್ತ್ರಿಗಳು ಸಾಹಿತ್ಯಸಮ್ಮೇಳನದ ಅಧ್ಯಕ್ಷರಾದುದಕ್ಕೆ ಆತ್ಯಾನಂದವಾಗಿದೆ ...ಮುಂಗರಾಯನಿಗೆ. ಭಾಷೆಗೆ ವ್ಯಾಕರಣ ಮೊದಲಿದ್ದಂತೆ, ಕೊಸ ಘಟನೆಗೆ ಶಾಸ್ತ್ರಿಗಳೇ ಮೊದಲ ಅಧ್ಯಕ್ಷರು. ಖಿಲಕರ್ನಾಟಕದ ಸಾಹಿತ್ಯಪರಿಷತ್ತಿನ ಸರ್ವಸಕಲ ಸದಸ್ಯರೂ ಬಹುಮತದಿಂದ ಚುನಾಯಿಸಿದ ಅಧ್ಯಕ್ಷರು. ಶಾಸ್ತ್ರಿಗಳನ್ನು ಮುಂಗರಾಯನು ಪೂರ್ವಕವಾಗಿ ಅಭಿನಂದಿಸುತ್ತಾನೆ. ಇಂತಹ ಉತ್ತಮ ಪುರುಷರು ಇಂದಿನ ವರ್ತಮಾನ ಕಾಲದಲ್ಲಿ ಸಮ್ಮೇಳನದ ಕ್ರಿಯಾಪದವನ್ನು ನ್ನು ಆಗಮ-ಆದೇಶಗಳಿಂದ ಹೆಚ್ಚಿಸಿ ಮುಂಗರಾಯನು ಹಾರೈಸುತ್ತಾನೆ. ಬಿದರಾಸ್ ಕರ್ನಾಟಕದಲ್ಲಿ ಹುಟ್ಟಿ, ಮುಂಬಯಿ ರ್ನಾಟಕದಲ್ಲಿ ಬೆಳೆದು, ನಿಜಾಂ ಕರ್ನಾಟಕದಲ್ಲಿ ಳಸಿ, ಮೈಸೂರು ಕರ್ನಾಟಕದಲ್ಲಿ ಚುನಾಯಿತ ನದ ಶಾಸ್ತ್ರಿಗಳು ಅಖಿಲ ಕರ್ನಾಟಕತ್ವದ ಸೂರ್ತಿಗಳಾಗಿದ್ದಾರೆ. ವ್ಯಾಕರಣದ ಸ್ಪಷ್ಟತೆ, ತೈಪದ ಶೈಲಿ-ಇವು ವ್ಯಾಕರಣತೀರ್ಥರ ವೈಶಿಷ್ಟ್ಯ ಗಾಗಿವೆ. ಪಾಣಿನಿಯ ಸೂತ್ರಜ್ಞರು ಸಮ್ಮೇಳನದ ಸೂತ್ರಗಳನ್ನರಿಯರೇ ? ಆದಕಾಗಿಯೆ ಅವರ ಅಧ್ಯಕ್ಷತ್ವಕ್ಕಾಗಿ ಮುಂಗರಾಯನಿಗೆ ಹರ್ಷವಿಶ್ವಾಸ !

* * *

ಮುಂಗರಾಯನಿಗೆ ಸೋಜಿಗ

ಸರಕಾರದವರು ವೃತ್ತಪತ್ರಗಳು ಸುದ್ದಿಯನ್ನು ಪ್ರಕಟಿಸುವ ವಿಷಯದಲ್ಲಿ ಕೆಲವು ನಿರ್ಬಂಧ ಗಳನ್ನು ಹಾಕಿದ್ದರಷ್ಟೆ ! ಆಗ ಮುಂಗರಾಯನಿಗೆ ಅದು ಕಾರಣಗಳಿಗಾಗಿ ಆನಂದವಾಗಿತ್ತು. ಇಂದು, ಕಾಗದ ತುಟ್ಟಿಯಾದ ಈ ದಿನದಲ್ಲಿ ಸ್ವಲ್ಪ ಕಡಮೆಯಾದರೆ ವೃತ್ತಪತ್ರಿಕಾ ವ್ಯವಸಾಯಕ್ಕೆ ಸಂತೋಷ. ಹೀಗಿರುವಾಗ ಅನೇಕ ಪತ್ರಿಕಾಕರ್ತರು ಅದನ್ನು ವಿರೋಧಿಸಲು ಮುಂಗರಾಯನಿಗೆ ಆಶ್ಚರ್ಯವಾಯಿತು. ಈ ವಿರೋಧ ಯಾಕಿರಬಹುದು ? ಕೊನೆಗೆ ತೊಡಕು ಬಗೆಹರಿಯಿತು. 'ನೀವು ಸರ್ಟಿಫಾಯ್ ಮಾಡಿ ಕೊಟ್ಟ ಸುದ್ದಿಯನ್ನೆ ನಾವು ಇಂದಿಗೂ ಪ್ರಕಟಿಸುತ್ತೇವೆ; ಇಷ್ಟಿದ್ದೂ ನಮ್ಮ ಮೇಲೆ ನಿರ್ಬಂಧವೆ?' ಎಂದು ಪತ್ರಿಕೋದ್ಯಮಿಗಳು ಸರಕಾರಕ್ಕೆ ತಿಳುಹಿಸಿದರು. ಆಗ ಸರಕಾರವು ಇನ್ನೊಂದು ನೋಜನ್ನು ಮಾಡಿತು. 'ಸತ್ಯಾಗ್ರಹದ ಸುದ್ದಿಯನ್ನು ಪ್ರಕಟಿಸಲು ಅಡ್ಡಿ ಇಲ್ಲ' ಎಂದಿತು ಸರಕಾರ. ಮುಂದೆ ಸತ್ಯಾಗ್ರಹ ಪ್ರಾರಂಭವಾಯಿತು, ಆಥವಾ ಪ್ರಾರಂಭವಾಗುವುದಿದೆ ಎನ್ನೋಣ. ಯಾಕೆಂದರೆ, ಸತ್ಯಾಗ್ರಹ ಮಾಡುವ ಮುಂಚೆಯೆ ಬಂಧನವಾಗುವುದು. ಹೀಗಾಗಿ ಸತ್ಯಾಗ್ರಹದ ಸುದ್ದಿಯೆ ಇಲ್ಲದಂತಾಗಿದೆ. ಅಂತೂ ಸತ್ಯಾಗ್ರಹಿಗಳಾಗುವವರಿಗೆ ನೋಟೀಸನ್ನು ಕೊಡುವ ಸ್ವಾತಂತ್ರ್ಯ. ಪತ್ರಿಕೆಗಳಿಗೆ ಆ ಸುದ್ದಿಯನ್ನು ಪ್ರಕಟಿಸುವ ಸ್ವಾತಂತ್ರ್ಯ-ಹೀಗಾಗಿ ಎಲ್ಲರಿಗೂ ಸಮಾಧಾನ ವಾದಂತಿದೆ.

* * *

ಪತ್ತೆ ಇಲ್ಲದ ಪಾಕಿಸ್ತಾನ್

ಮೊನ್ನಿನ ಅಸೆಂಬ್ಲಿಯ ಅಧಿವೇಶನದಲ್ಲಿ ಬ್ಯಾರಿಸ್ಟರ್ ಜಿನ್ನಾ ಇವರು 'ಪಾಕಿಸ್ತಾನಕ್ಕಾಗಿ ನಾವು ಜೀವಿಸುವೆವು ; ಪಾಕಿಸ್ತಾನಕ್ಕಾಗಿ ನಾವು ಸಾಯುವೆವು !' ಎಂದು ಹೇಳಿದರು. ಅವರ ಅವೇಶದ ಭಾಷಣವನ್ನು ಓದಿ ಒಬ್ಬ ಪಾಶ್ಚಾತ್ಯ ಮಹಾಶಯರು, ಲಗಬಗೆಯಿಂದ ಜಗತ್ತಿನ ನಕಾಶೆಯನ್ನು ನೋಡಿದರಂತೆ- ಪಾಕಿಸ್ತಾನವನ್ನು ಶೋಧಿಸಿ ನೋಡುವುದಕ್ಕೆ. ಪಾಪ ! ಇಲ್ಲದ ವಸ್ತು ಅಲ್ಲಿ ಹೇಗೆ ಕಂಡೀತು ! ಅವರಿಂದ ಗಾಬರಿಗೊಂಡು ಅವರೀಗ ಮುಂಗರಾಯನಿಗೆ ಶರಣು ಬಂದಿದ್ದಾರೆ. ಪಾಕಿಸ್ತಾನ ಎಲ್ಲಿದೆ ಎಂಬುದನ್ನು ಅವರಿಗೆ ತೋರಿಸಿ ಕೊಡಬೇಕಂತೆ. ಆದರೆ ಮುಂಗರಾಯನು ಸರ್ಜನನಾಗಿದ್ದರೆ ಅದನ್ನು ತೋರಿಸಬಹುದಾಗಿತ್ತು; ಆದರೆ ಅದಿಲ್ಲದ್ದಕ್ಕೆ 'ಪಾಕಿಸ್ತಾನವೆಂಬುದು ಜಿನ್ನಾ ಇವರ ತಲೆಯಲ್ಲಿದೆ' ಎಂದು ಹೇಳಿ ಮಾತ್ರ ಸುಮ್ಮನಾಗಬೇಕಾಗಿದೆ. ಈಗಾದರೂ ಜಿನ್ನಾ ಇವರ ಆವೇಶ ಅರ್ಥವಾಗಬಹುದಲ್ಲವೆ? ಪಾಕಿಸ್ತಾನ್ ಎಲ್ಲಿ ಎಂಬುದನ್ನು ಲಕ್ಷ್ಯಪಲ್ಲಿಟ್ಟರೆ 'ಆದಕಾಗಿ ಜೀವಿಸುವೆವು, ಅದಕಾಗಿ ಸಾಯುವೆವು' ಎಂಬುದು ಮರ್ಮ ಹೊಳೆಯಬಹುದಲ್ಲವೆ ?

ಬೋಲೋ, ಹಿಂದುಸ್ತಾನ್ ಮಾತಾಕೀ ಜ_
ಕಲೆಯೋಳ್ ಪಾಕಿಸ್ತಾನದ ಥೈಥೈ ! ||

* * *

ಕನ್ನಡಿಗನ ಕಡಿಗೇಡಿತನ

ಹೋದ ತಿಂಗಳು ಒಂದು ದಿನ ರಶಿಯಾದ ಪರರಾಷ್ಟ್ರ ಮಂತ್ರಿಯಾದ ಮೊಲೊತೋಫ್‌ನು ಹಿಟ್ಲರನನ್ನು ಭೆಟ್ಟಿಯಾದನು. ನಾಝಿ ಮತ್ತು ಬೊಲ್‌ಶೆವಿಕರ ಪರಸ್ಪರ ಅತ್ಯಂತ ದ್ವೇಷವನ್ನೆರಿತ ವಾಚಕ ಮಹಾಶಯರೊಬ್ಬರು ಈ ಸಂದರ್ಭದಲ್ಲಿ ಮುಂಗರಾಯನಿಗೆ ಹೀಗೆ ಪತ್ರ ಬರೆದಿದ್ದಾರೆ.

'ಶ್ರೀಮತ್ಸಮಸ್ತ ಶ್ರೀಲಕ್ಷ್ಮೀ ಮುಂಗರಾಯರ ಹಲ್ಲುಬೆಳಕಿನ ಸನ್ನಿಧಿಗೆ—

ವಾಚಕನೊಬ್ಬನ ಆರಿಕೆ : ಹಿಟ್ಲರ- ಮೊಲೊತೊಫ್‌ರ ಭೆಟ್ಟಿಯಾದಂದಿನಿಂದ ಕನ್ನಡಿಗನಾದ ನನಗೊಂದು ವಿಚಾರ ಬಂದಿದೆ.ಇವರಿಬ್ಬರೂ ಒಬ್ಬರನ್ನೊಬ್ಬರು ಮನಸಾ ದ್ವೇಷಿಸುವವರು, ಒಬ್ಬರೊಬ್ಬರ ದೇಶಕ್ಕೆ ಬಾಯಿಗೆ ಬಂದ ಬೈಗಳನ್ನುಸಿರಿದವರು. ಹೀಗಿದ್ದೂ ಇವರು ಪರಸ್ಪರ ಮಾತನಾಡಲು, ಶಕ್ಯವಾದರೆ ಸಂಧಿಯನ್ನು ಮಾಡಿಕೊಳ್ಳಲು ಸಿದ್ಧರಾದರು. ಈ ದೃಷ್ಟಾಂತದಿಂದ ಕರ್ನಾಟಕದಲ್ಲೂ ಬ್ರಾಹ್ಮಣ-ಬ್ರಾಹ್ಮಣೇತರರು ಪರಸ್ಪರ ಸಂಧಿಸುವುದು ಶಕ್ಯವೆಂದು ತೋರುವುದಿಲ್ಲವೆ ? ಹಿಟ್ಲರ-ಮೊಲೊತೊಫರಂತೆ ಇವರೂ ಪರಸ್ಪರ-ಆಥವಾ, ಇದ್ದದ್ದನ್ನು ಬರೆದು ವ್ಯರ್ಥ ನಮಗೇಕೆ ಓದುವ ಶ್ರಮ ? ದಯವಿಟ್ಟು ನನ್ನ ಸೂಚನೆಗಾಗಿ ತಮ್ಮ ಅಭಿಪ್ರಾಯವನ್ನು ಬರೆಯಬೇಕೆಂದು ಬಿನ್ನವಿಸುವ, ತಮ್ಮ' ಇತ್ಯಾದಿ. ಕ್ಷಮಿಸಬೇಕು ವಿಷಯ ತಿಳಿಯದೆ ಅಭಿಪ್ರಾಯ ಕೊಡುವ ರೂಢಿ ಮುಂಗರಾಯನಿಗಿಲ್ಲ. ಪ್ರಕೃತ

ದೃಷ್ಟಾಂತದಲ್ಲಿ ಹಿಟ್ಲರ ಯಾತು, ಮೊಲೊತೊಫ್ ಯಾರು ಎಂಬುದರ ಸ್ಪಷ್ಟೀಕರಣವಿಲ್ಲ. ಹಿಟ್ಲರೋ-ಪಾಯಿಯಲ್ಲಿದ್ದವರು ಮೊಲೊತೊಫ್ಪುಪಾದಿಯಲ್ಲಿದ್ದವರಿಗೆ ವಿನಂತಿಯನ್ನು ಕಳುಹಿಸಿದಾಗ, ಮೊಲೊತೊಫ್‌ನು ಹಿಟ್ಲರನ ಕಡೆಗೆ ಬರಬೇಕಾಗುವುದು. ಈ ವಿಷಯವನ್ನು ಸ್ಪಷ್ಟಮಾಡಿದಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರರು ಕೂಡಿ ನಿಜವಾದ 'ಸಂಯುಕ್ತ ಕರ್ನಾಟಕ'ವನ್ನು ನಿರ್ಮಿಸುವುದರ ಬಗ್ಗೆ ಮಂಗರಾಯನು ತನ್ನ ಅಭಿಪ್ರಾಯವನ್ನು ಕೊಡುವನು. ಆದ್ದರಿಂದ, ಬ್ರಾಹ್ಮಣ ಸತ್ಯಾಗ್ರಹಿಗಳೂ ಬ್ರಾಹ್ಮಣೇತರ ಸತ್ಯಾಗ್ರಹಿಗಳೂ ಬಿಡುವನ್ನು ಹೊಂದುವವರೆಗೆ ಸಾಜಕಮಹಾಶಯರ ಸೈರಣೆ ಇರಲಿ!

* * *

ಮಂಗರಾಯನ 'ಪಿತ್ಸಾಗ್ರಹ'

'ಹಿಂದುಸ್ತಾನದ ಭವಿತವ್ಯವನ್ನು ತರುಣರೆ ನಿರ್ಧರಿಸಬೇಕು, ಹಳಬರಂತೆ ಜಾತಿ-ಮತ-ಪಂಥ-ಪಕ್ಷಗಳಿಗೆ ಅಧೀನರಾಗದೆ ತರುಣರ ಕೆಲಸವಿದು-ಎಂಬ ಆಶಯದ ಭಾಷಣವನ್ನು ಭಾರತಮಂತ್ರಿಗಳಾದ ಅಮೆರಿಯನರು ಮಾಡಿದ್ದಾರೆ. ಇಂತಹ ಉಪದೇಶವನ್ನು ಮಂಗರಾಯನು ತೀವ್ರವಾಗಿ ನಿರಾಕರಿಸಬಯಸುತ್ತಾನೆ. ನಮ್ಮ ಸಂಸ್ಕೃತಿಯ ಜೀವಾಳವಾದ ಮತ್ತು ತನ್ನ ಸ್ವಭಾವಧರ್ಮವಾದ ಮಂಗತನಕ್ಕೆ, ಇಂತಹ ಉಪದೇಶ ಘಾತುಕವಿದೆ ಎಂದು ಅವನ ದೃಢಾಭಿಪ್ರಾಯ. ನಮ್ಮಲ್ಲಿ ಯಾವುದಕ್ಕೂ ತಾರುಣ್ಯಾವಸ್ಥೆಇಲ್ಲ; ಎಂದರೆ ಹಳೆಯದಾಗದ ಹೊರತು ನಮ್ಮ ಜೀವನದಲ್ಲಿ ಯಾವುದಕ್ಕೂ ಸ್ವಾಸ-ಮಾನಗಳಿಲ್ಲ. ಸನಾತನ ಸಂಪ್ರದಾಯದ ಅಡಿಗಲ್ಲು ಇವು; ನಮ್ಮ ಮುಂದಾಳುಗಳು ಹೆಚ್ಚೆಚ್ಚು ಮುಪ್ಪಿನವರಾದಂತೆ ನಾವು ಹೆಚ್ಚು ಭಕ್ತಿಯಿಂದ ಅವರ ಹಿಂದಾಳಾಗುವುದರ ರಹಸ್ಯವಿದು. ಹಿರಿಯರು ತೋರಿಸಿದ ಹಾದಿ, ಹಿರಿಯರು ನಡೆದ ರೀತಿ, ಹಿರಿಯರು ಹಿಡಿದ ಕಾರ್ಯ ಇವುಗಳ 'ಮಂಗೀಕರಣ'ದೆ ಹುಡುಗರ ಕರ್ತವ್ಯವಾಗಿದ್ದಾಗ---ಹಿರಿಯರಿಗೆ ಒಪ್ಪದ ಮಾತನ್ನು ತರುಣರು ಮಾಡುವುದೆಂತು? ಇಲ್ಲವಾದರೆ ಸನಾತನ ಪಿತ್ಸಾಗ್ರಹ'ಕ್ಕೆ ಪ್ರಾರಂಭವಾಗಿ ಅನವಸ್ಥೆ ಒದಗೀತು. ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ ಎಂಬ ಸನಾತನ ಧರ್ಮವು ಸಂಪೂರ್ಣಕ್ಕೆ ಬಂದೀತು.'

* * *

ಕನ್ನಡದ ಜಿನ್ನಾವತಾರ

ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷತೆವಹಿಸಿದ್ದ ಬ್ಯಾ. ಸರದಾರ್ ಅವರು, ಬರಲಿರುವ ಜನಗಣತಿಯ ಕಾಲದಲ್ಲಿ ವೀರಶೈವರು ತಾವು ಹಿಂದುಗಳಿಂದು ಹೇಳಲಾಗದೆಂದೂ ಜಾತಿ, ಮತ, ಧರ್ಮ ಎಲ್ಲವೂ 'ಲಿಂಗಾಯತ' ಎಂದು ಹೇಳಬೇಕೆಂಬೂ ಸರ್ವಾಧಿಕಾರಿತ್ವದ ಪ್ರಕಟನೆ ಹೊರಡಿಸಿದ್ದಾರಷ್ಟೆ! ಅದನ್ನು ನೋಡಿದ ಮಿಕ್ಕ ಜಾತಿಯ ಕೆಲವರೂ ತಾವೂ ಹಿಂದುಗಳಲ್ಲ ಎಂಬರ್ಥದ ಪತ್ರಗಳನ್ನು ಮಂಗರಾಯನಿಗೆ ಬರೆದಿದ್ದಾರೆ ಶ್ರೀಮಾನ್ ಸರದಾರರು ಬ್ಯಾರಿಸ್ಟರರು; ಕಾಯದೆ ಕಾನೂನು ಬಲ್ಲವರು. ವಿಲಾಯತಿಗೆ ಹೋಗಿ ಶಿಕ್ಷಣ ಪಡೆದು ವಿದ್ಯಾಬುದ್ಧಿಗಳಿಸಿಕೊಂಡು ಬಂದವರು. ಅಂಥವರು ಕುಳಿತು 'ಲಿಂಗಾಯತರು ಹಿಂದುಗಳಲ್ಲ' ಎಂದು ಬರೆಯಿಸಬೇಕೆಂದು ಹೇಳುತ್ತಿರುವುದನ್ನು ಕಂಡು, ತಾವು ಹಿಂದುಗಳಲ್ಲ ಎಂದು ಹೇಳುವುದರಲ್ಲಿ ಏನೋ ಲಾಭವಿದೆಯೆಂದು ಹಲವರಿಗೆ ಎನಿಸಿರಬಹುದಾಗಿದೆ. ಹಿಂದುಗಳಾಗಿರದ ಬ್ಯಾ. ಜಿನ್ನಾ ಅವರ ಹಟವನ್ನೂ, ಅವರು ಕಾಂಗ್ರೆಸಿನವರನ್ನೂ ಸರಕಾರದವರನ್ನೂ ಹಿಂದುಗಳನ್ನೂ ಬಗ್ಗಿಸುತ್ತಿರುವ ಗುಂಡನ್ನೂ ಕಂಡ, ಇನ್ನೊಬ್ಬ ಬ್ಯಾರಿಸ್ಟರ್ ಸರದಾರ್ ಅವರಿಗೆ, ತಾವೂ ಜಿನ್ನಾ ಅವರಂತಹ ಕೀರ್ತಿಯನ್ನೂ ಬಲ್ಮೆಯನ್ನೂ ಗಳಿಸಬೇಕೆಂಬ ಮೋಹವುಂಟಾಗಿರುವುದು ಸಹಜ. ಜಿನ್ನಾ ಅವರು ಅಖಿಲ ಭಾರತದಲ್ಲಿ ಪಾಕಿಸ್ತಾನದ ಪಾಲು ಬೇಡಿದಂತೆ, ಬ್ಯಾರಿಸ್ಟರ್ ಸರದಾರ್‌ಅವರು ಅಖಿಲ ಕರ್ನಾಟಕದಲ್ಲಿ 'ಲಿಂಗಸ್ತಾನ್' ನಿರ್ಮಿಸಬೇಕೆಂಬುದಕ್ಕೆ ಪೂರ್ವಭಾವಿಯಾಗಿ ಈ ಪ್ರಕಟನೆ ಹೊರಡಿಸಿರಬಹುದೆಂದು ಮಂಗರಾಯನ ಅನುಕರಣಬುದ್ಧಿಯ ಊಹೆಯಾಗಿದೆ. ಮಂಗರಾಯನ ಊಹೆ ನಿಜವಾದರೆ....

ಬೋಲೋ ಕನ್ನಡ ಜಿನ್ನಾಕೀ ಜಯ್!
ಕನ್ನಡನಾಡನ್ ಎರಡಾಗಿ ಕೊಯ್!

* * *

ಬ್ರಾಹ್ಮಣರು ಹಿಂದುಗಳಲ್ಲ!

ಮಂಗರಾಯನಿಗೆ ಬಂದಿರುವ ಕಾಗದಗಳಲ್ಲಿ ಮಾದರಿಗಾಗಿ ಒಂದೆರಡನ್ನು ಇಲ್ಲಿ ಕೊಡಬೇಕೆಂದು ಆಶೆ. ಹೈದರಾಬಾದ್ ಸಂಸ್ಥಾನದಲ್ಲಿದ್ದ ಬ್ರಾಹ್ಮಣ ಮುಂದಾಳೊಬ್ಬರಿಂದ ಬಂದ ಕಾಗದವನ್ನು ಇಲ್ಲಿ ಕೊಡಲಾಗಿದೆ. ನೋಡಿ ಎಲ್ಲರೂ ವಿಚಾರ ಮಾಡಿ, ಅವರಿಗೇನು ಉತ್ತರ ಕೊಡಬೇಕೆಂಬುದನ್ನು ಮಂಗರಾಯನಿಗೆ ತಿಳಿಸಬೇಕು:

"ಮಂಗಣ್ಣಾ, ಲಿಂಗಾಯತರು ಹಿಂದುಗಳಲ್ಲ ಎಂದು ಹೇಳಬೇಕೆಂದು ಪ್ರಕಟಿಸಿದ ವೀರಶೈವ ಮಹಾಸಭೆಯ ಆಧ್ಯಕ್ಷರ ಪರಿಸತ್ರ ನೋಡಿದೆನು; ಓದಿ ತುಂಬ ಸಂತೋಷಪಟ್ಟೆನು. ಅದನ್ನೋದಿಯೆ ಸ್ಫೂರ್ತಿ ಪಡೆದವನಾಗಿ ನಿನಗೆ ಈ ಕಾಗದ ಬರೆದಿದ್ದೇನೆ ಬ್ರಾಹ್ಮಣರು ಕೂಡ ಹಿಂದುಗಳಲ್ಲ. ಬರಲಿರುವ ಜನಗಣತಿಯ ಕಾಲದಲ್ಲಿ ಇವರು ಕೂಡ ತಮ್ಮ ಜಾತಿ-ಧರ್ಮ ಎಲ್ಲವೂ 'ಬ್ರಾಹ್ಮಣ' ಎಂದು ಬರೆಯಿಸಬೇಕು ಬ್ರಾಹ್ಮಣರು ಹಿಂದುಗಳಲ್ಲವೆಂಬುದಕ್ಕೆ ಪ್ರತ್ಯಕ್ಷವಾದ ಉದಾಹರಣೆ ಬೇಕಾದವರು, ಹೈದರಾಬಾದ್ ಪ್ರಾಂತ್ಯಕ್ಕೆ ಬಂದು ನೋಡಬೇಕು ಇಲ್ಲಿಯ ಜನರಲ್ಲಿ ಮೂರು ವರ್ಗಗಳಿವೆ. ಅವಾವುವೆಂದರೆ 'ಮುಸಲ್ಮಾನ್ ಬಮ್ಮನ್, ಹಿಂದು, ! ಇಲ್ಲಿಯ ಅಳುವ ಜನರಲ್ಲಿ ಯಾವ ಮುಸಲ್ಮಾನರಿಂದ 'ಬಮ್ಮನ್' ಜಾತಿಯವರು ಹಿಂದುಗಳಿಂದ ಎಂದೋ ಪ್ರತ್ಯೇಕಿಸಲ್ಪಟ್ಟಿದ್ದಾರೆ. ಅವರು ಹಿಂದುಗಳಲ್ಲವೆಂತಲೆ ನಮ್ಮ ಸರಕಾರ ಅವರಿಗೆ ಹೆಚ್ಚಾಗಿ ನೌಕರಿ, ಚಾಕರಿ, ಮಾನ, ಮರ್ಯಾದೆ ಕೊಡುತ್ತಲಿದೆ. ಆದುದರಿಂದಲೆ ಎಲ್ಲ ಬ್ರಾಹ್ಮಣರು— ವಿಶೇಷವಾಗಿ ಹೈದರಾಬಾದ್ ಸಂಸ್ಥಾನದ ಬ್ರಾಹ್ಮಣರು, ಬರಲಿರುವ ಜನಗಣನೆಯ ಕಾಲದಲ್ಲಿ ತಾವು ಹಿಂದುಗಳಲ್ಲವೆಂದೇ ಹೇಳಿ 'ಮುದ್ದಾಂ'ಹಾಗೆ ಬರೆಯಿಸಬೇಕು."

ಹೀಗೆಯೆ ರಡ್ಡಿ, ಕುರುಬ ಮುಂದಾಳುಗಳಿಂದಲೂ ಕಾಗದ ಬಂದಿವೆ.

* * *

ಕುರುಬರು ಹಿಂದುಗಳು ಹೇಗೆ?

ಕುರುಬರ ಸಮಾಜದಲ್ಲಿಯ ತರುಣ ಪದವೀಧರರೊಬ್ಬರ ಕಾಗದ ಹೀಗಿದೆ:—

"ಮಂಗರಾಯರೆ, ವೀರಶೈವರು ತಾವು ಹಿಂದುಗಳಲ್ಲವೆಂದು ಹೇಳಿಕೊಳ್ಳುವರೆಂದ ಮೇಲೆ ಕುರುಬರಾದ ನಾವೇಕೆ ಹಿಂದುಗಳೆಂದು ಹೇಳಿಕೊಳ್ಳಬೇಕು? ಹಿಂದೂ ದೇವತೆಗಳಾದ ಶಿವ-ವಿಷ್ಣು-ಬ್ರಹ್ಮ-ಶಕ್ತಿ ಮೊದಲಾದ ಯಾವ ಗಂಡು ಹೆಣ್ಣು ದೇವರನ್ನೂ ನಾವು ಪೂಜಿಸುವುದಿಲ್ಲ. ನಮ್ಮ ದೇವರೇ ಬೇರೆ. ವೀರಪೂಜಕರು ನಾವು. ನಮ್ಮ ದೇವರು ವೀರಪ್ಪ. ಹಿಂದುಗಳಾರೂ ನಮ್ಮ ದೇವರನ್ನು ಪೂಜಿಸುವುದಿಲ್ಲ. ನಮ್ಮಲ್ಲಿ ವರ್ಣಾಶ್ರಮಧರ್ಮದ ವೈದಿಕ ವಿಚಾರವಾವುವೂ ಸುಳಿದಾಟವೂ ಇಲ್ಲ. ನಾವು ದ್ರಾವಿಡ ಪಂಗಡಕ್ಕೆ ಸೇರಿದವರೆಂದು ಜನಾಂಗವಿಜ್ಞಾನಿಗಳು ಹೇಳುವುದರಿಂದ, ವೈದಿಕರಾದ ಆರ್ಯರ ಎಂದೆಂದಿಗೂ ಹಿಂದುಗಳ ಸಂಬಂಧ ನಮಗೆ ಯಾವ ರೀತಿಯಿಂದಲೂ ಬರುವುದಿಲ್ಲ. ಆದುದರಿಂದ ಕುರುಬರು ಹಿಂದುಗಳಲ್ಲವೆ ಅಲ್ಲ. ಅವರು ಕೂಡ ಜನಗಣನೆಯ ಕಾಲದಲ್ಲಿ ತಾವು ಹಿಂದುಗಳೆಂದು ಬರೆಯಿಸಬೇಕಾದ ಕಾರಣವಿಲ್ಲ!"

ಇವೆರಡೂ ಪತ್ರಗಳನ್ನು ಓದಿ ತೋರಿಸಿದಾಗ ಮಂಗಣ್ಣನ ಮಿತ್ರನೊಬ್ಬನಿಗೆ ಬಂದು ಕನಸು ಸ್ಫೂರ್ತವಾಯಿತು:

ಹಿಂದೂಸ್ತಾನ್ ದೇಶದೊಳಗಽ ಯಾರಿಲ್ಲ ಹಿಂದು!
ಅದಕ್ಕಽ ಅದನ್ನಾಳ್ತಾರೆ ಯಾರ್ಯಾರೋ! ಬಂದು!

ವಿಮೋದಾರರ ಹಿತಕ್ಕಾಗಿ:---

ವಿಮಾಪದ್ಧತಿಯಲ್ಲಿ ಅವಶ್ಯವಿರುವ ಸುಧಾರಣೆಗಳು

ಶ್ರೀ. ಎಮ್. ಪಿ. ಭಾಗವತ, ಮುಂಬಯಿ

★

ಜೀವವಿಮೆ ಮಾಡಿದವರು, ಜೀವವಿಮಾ ಜೀವನದಲ್ಲಿ ಎದುರಿಸಬೇಕಾದ ಸಂಕಟಗಳು ಹಲವು ಇರುವುವು. ಪ್ರತಿಯೊಬ್ಬ ವಿಮೋದಾರನೂ ಮೊದಲೆ ಆ ಸಂಕಟಗಳ ಬಗೆಗೆ ಸರಿಯಾದ ಕಲ್ಪನೆಯುಳ್ಳವನಾಗಬೇಕು; ಇಲ್ಲದಿದ್ದರೆ ಕುಟುಂಬದ ಲಾಭಕ್ಕೆಂದು ಕುಟುಂಬದ ನಷ್ಟಕ್ಕೆ ಕಾರಣವಾಗುವ ಸಂಭವವಿರುವುದು.

★

ಈ ಲೇಖನವು ಜೀವವಿಮೆಯ ಸಂಬಂಧವಾಗಿ ಮಾತ್ರವೇ ಇದ್ದು, ಇದನ್ನು ಮುಖ್ಯವಾಗಿ ವಿಮೋದಾರರ ಅಪೇಕ್ಷೆಗಳನ್ನು ಮುಂದಿಡುವ ಹೇತುವಿನಿಂದಲೆ ಬರೆದುದಾಗಿದೆ. ವಿಮಾಸಂಸ್ಥೆಗಳ ವಿರುದ್ಧವಾಗಿ ಪ್ರತಿಪಾದಿಸಿ, ವಿಮೆಯ ವಿಷಯಕ್ಕೆ ಬಹುಜನ ಸಮಾಜದಲ್ಲಿ ಆನಾದರವನ್ನು ಹುಟ್ಟಿಸುವ ಉದ್ದೇಶವು ಇದರಲ್ಲಿ ಲೇಶಮಾತ್ರವೂ ಇಲ್ಲ. ವಿಮಾಕಂಪನಿಗಳು ಸರ್ವಪ್ರಕಾರಗಳಿಂದಲೂ ತಮ್ಮ ಉದ್ಯಮವನ್ನು ಜೀವದಿಂದಿರಿಸುವುದಕ್ಕೆ ಪ್ರಯತ್ನಿಸುತ್ತಿರುವುದು, ವಿಮೋದಾರರ ಹಿತದ ದೃಷ್ಟಿಯಿಂದಲೂ ಶ್ಲಾಘ್ಯವೇ ಸರಿ; ಹೀಗಿರುವುದರಿಂದ ವಾಚಕನು ಹಾಶಯರು ತಪ್ಪುಗ್ರಹಿಕೆಯನ್ನು ಮಾಡಿಕೊಳ್ಳದೆ, ಇದನ್ನು ವಿಚಾರಪೂರ್ವಕವಾಗಿ ಓದಬೇಕೆಂದು ಲೇಖಕನ ಸವಿನಯ ಪ್ರಾರ್ಥನೆಯಿದೆ.

ವಿಮಾಕಂಪನಿಗಳು ತಮ್ಮ ಅಸ್ತಿತ್ವವನ್ನು ಭದ್ರವಾಗಿರಿಸಲು ಪ್ರಯತ್ನಪಡುತ್ತಿರುವಾಗ, ಅದಕ್ಕೇ ಆಧಾರಭೂತರಾಗಿರುವ ವಿಮೋದಾರರೊಡನೆ ಅವರಿಗೆ ಅಸಹ್ಯವಾಗುವಂತಹ ರೀತಿಯಿಂದ ನಡೆಯುವುದೆಂದರೆ, ತಮ್ಮ ಬುಡಕ್ಕೇ ಕೊಡಲಿಯನ್ನು ಹಚ್ಚಿದಂತಾಗಬಹುದೆಂಬದು, ಸುವಿಚಾರಿಗಳಿಗೆಲ್ಲ ಒಪ್ಪಿಗೆಯಾಗುವಂತಹ ಮಾತೇ ಸರಿ. ವಿಮಾಕಂಪನಿಗಳು ತಮಗೆ ನಷ್ಟವನ್ನು ಮಾಡಿಕೊಳ್ಳದೆ ವಿಮೋದಾರರ ತೊಂದರೆಗಳನ್ನು ಕಡಿಮೆಮಾಡಲು ಬರುವಂತಿದ್ದರೆ, ಅದನ್ನು ಅವು ಅವಶ್ಯವಾಗಿ ಮಾಡಬೇಕು. ಇಂತಹ ಸುಧಾರಣೆಗಳನ್ನು ನೂಡುವುದರಿಂದ ಎಂದಿಗೂ ಕೆಡುಕಾಗದೆಂಬ ಮಾತನ್ನು ಒತ್ತಿಹೇಳುವ ಅವಶ್ಯವಿಲ್ಲ.

ವಿಮಾಶಾಸ್ತ್ರದ ದೃಷ್ಟಿಯಿಂದಾಗಲಿ ಅಥವಾ ಇಂದಿನ ತನಕ ನಡೆದುಬಂದ ಮತ್ತು ಈಗ ನಡೆಯುತ್ತಿರುವ ರೂಢಿಯಂತೆಯಾಗಲಿ, ಈಗಿರುವ ರೀತಿಗಳೆಲ್ಲವೂ ವಿಮಾವ್ಯವಸಾಯದಲ್ಲಿ ತೊಡಗಿರುವ ಜನರಿಗೆ ಯೋಗ್ಯವಾಗಿಯೇ ಇವೆಯೆಂದು ತೋರುತ್ತಿರಬಹುದು; ಆದರೆ ಆ ರೀತಿಗಳಲ್ಲಿಯೇ ಕೆಲವು ರೀತಿಗಳು, ವಿಮೋದಾರರ ದೃಷ್ಟಿಯಿಂದ ಹೇಗೆ ಕಷ್ಟಕಾರಕವೂ ವಿಪರೀತವೂ ಆಗಿ ಕಾಣುತ್ತವೆ; ಮತ್ತು ಆ ಸಂಬಂಧ ಯಾವತರದ ಸುಧಾರಣೆಗಳು ಆಗಬೇಕಾಗಿವೆ– ಎಂಬ ವಿಚಾರವನ್ನೇ ಈ ಲೇಖನದಲ್ಲಿ ಮಾಡುವ ಪ್ರಯತ್ನ ಮಾಡಿದೆ.

ಪ್ರಾಸ್ಪೆಕ್ಟಸುಗಳು (ಮಾಹಿತೀ ಪತ್ರಿಕೆ)

ಈಗ ಪ್ರಚಾರದಲ್ಲಿ ಇರುವ ಮಾಹಿತೀಪತ್ರಿಕೆಗಳು ಸಾಮಾನ್ಯವಾಗಿ ಎಲ್ಲತರದ ವಿಮೇಚ್ಛುಗಳಿಗೂ ಸ್ಪಷ್ಟವಾಗಿ ತಿಳಿಯುವಂತೆ ಇರುವುದಿಲ್ಲ. ಆದುದರಿಂದ ಅವುಗಳನ್ನು ವಿಮೇಚ್ಛುಗಳಿಗೂ ವಿಮೋದಾರರಿಗೂ ತಿಳಿಯಲು ಸುಲಭವಾಗುವಂತೆ ಬರೆದು ಪ್ರಕಟಿಸುವುದು ಅಗತ್ಯವಿದೆ. ವಿಮೆ ಇಳಿಸುವುದೆಂದರೆ ವಿಮೋದಾರರು ಮತ್ತು ಕಂಪನಿಗಳು ಇವರೊಳಗಿನ ಕರಾರು ಇರುವುದರಿಂದ, ಕಾಯಿದೆ ಮತ್ತು ನೀತಿಯಿಂದ ಸಹ ಕರಾರುಮಾಡಿಕೊಳ್ಳುವ ಉಭಯಪಕ್ಷಗಳಿಗೂ ಕರಾರಿನೊಳಗಿನ ವಿಷಯವು (ಮಜಕೂರು) ಸಂಪೂರ್ಣವಾಗಿ ತಿಳಿದಿರಲೆ ಬೇಕು. (ಒಳ್ಳೆಯ ಸುತಿಕ್ಷಿತರಿಗೂ ಸಹ ಸ್ಪಷ್ಟವಾಗಿ ತಿಳಿಯಲು ಕಠಿನವಾಗುವ ರೀತಿಯಿಂದ ಬರೆಯಲ್ಪಡುವ ಈಗಿನ ಮಾಹಿತೀಪತ್ರಿಕೆಗಳ ಆಧಾರದ ಮೇಲೆ ಮಾಡಿದ ಕರಾರುಗಳು, ಎಷ್ಟರಮಟ್ಟಿಗೆ ಕಾಯಿದೆಗೆ ಸಮ್ಮತವೋ ಎಂಬುದನ್ನು ತಿಳಿಯುವುದು ಕಷ್ಟವಾಗಿದೆ).

ವಿಮಾಪಾಲಿಸಿಗಳ ಮತ್ತು ಸಾಲದ ಕರಾರುಗಳ ಸರ್ವಸಾಧಾರಣ ನಮೂನೆಗಳನ್ನು ಮಾಹಿತೀ ಪತ್ರಿಕೆಗಳಲ್ಲಿ ಕೊಡಲೇ ಬೇಕು. ಯಾಕೆಂದರೆ ಅವುಗಳ ಮೇಲಿಂದ ವಿಮೇಚ್ಛುಗಳಿಗೆ ತಾವು ವಿಮಾಕಂಪನಿಯವರ ಕೂಡ ಯಾವತರದ ಕರಾರುಮಾಡಿಕೊಳ್ಳುವೆವೆಂಬುದರ ಕಲ್ಪನೆಯು ಸರಿಯಾಗಿ ಆಗುವುದು. ಸಾಲದ ಕರಾರಿನ ಉಪಯೋಗವಂತೂ ಸ್ಪಷ್ಟವೇ ಇದೆ.

ಏಜಂಟರುಗಳು

ವಿಮಾಕಂಪನಿಗಳು ತಮ್ಮ ಏಜಂಟರಿಗೆ ವಿಮೆಯ ವ್ಯವಹಾರದ ವಿಷಯಕ್ಕೆ ಯೋಗ್ಯಪ್ರಕಾರದ ಶಿಕ್ಷಣವನ್ನು ಕೊಡುವುದು ಅತ್ಯಾವಶ್ಯಕವಿದೆ. ವಿಮೇಚ್ಛುಗಳಿಗೆ ಬೇಕಾಗುವ ಎಲ್ಲತರದ ಯೋಗ್ಯ ಮಾಹಿತಿಗಳನ್ನು ಪೂರಯಿಸಿ, ಅವರನ್ನು ನಿಸ್ಸಂದೇಹಿ ಗಳನ್ನಾಗಿ ಮಾಡುವ ಯೋಗ್ಯತೆಯು ಏಜಂಟರಿಗೆ ಇರಲಿಕ್ಕೇ ಬೇಕು. ಅದು ಇಲ್ಲದಿದ್ದರೆ, ಮುಂದೆ ವಿಮೇದಾರರ ತಪ್ಪು ತಿಳುವಳಿಕೆಯ ಪರಿಣಾಮವಾಗಿ, ರದ್ದಾಗುವ ಪಾಲಿಸಿಗಳ ಪ್ರಮಾಣವು ಹೆಚ್ಚುವ ಸಂಭವವಿದೆ. ಇದರಿಂದ ವಿಮೇದಾರರಿಗೆ ನಷ್ಟಸಂಭವಿಸುವುದೊಂದೇ ಅಲ್ಲ— ಕಂಪನಿಯವರಿಗೂ ಲಾಭ ವಾಗುವುದಿಲ್ಲ. ಕಂಪನಿಗಳಿಗೆ ಈ ಬಗ್ಗೆ ವಿಶೇಷ ಅನುಭವ ವಿದ್ದರೂ ಕೂಡ, ಇದುವರೆಗೂ ಸಮಾಧಾನಕರವಾದ ಸುಧಾರಣೆ ಯಾದುದೂ ಕಂಡುಬರುವುದಿಲ್ಲ.

ಪುನಃ ಮೆಡಿಕಲ್ ಸರ್ಟಿಫಿಕೇಟಿನ ಸಂಕಟವು

Surrender Value ಎಂದರೆ "ಬಿಡುಬೆಲೆ" ಯು ಉತ್ಪನ್ನ ವಾಗುವುದಕ್ಕಿಂತ ಮುಂಚೆ— ಎಂದರೆ ಸರ್ವಸಾಮಾನ್ಯವಾಗಿ ಮೂರು ವರ್ಷಗಳ ಒಳಗೆ—ಒಂದೇ ಒಂದು ಮೂರು ತಿಂಗಳಿನ ಪ್ರೀಮಿಯಮ್ಮಿನ ಸರತಿ ತಪ್ಪಿದರೂ,ಪಾಲಿಸಿಯು ರದ್ದಾಗಿ,ಅದನ್ನು ಪುನಃ ಚಾಲೂ ಮಾಡುವುದಕ್ಕೆ ಕೆಲವು ಕಾಲದ ವರೆಗೆ ಆರೋಗ್ಯದ ಪ್ರತಿಜ್ಞಾಪತ್ರವನ್ನೂ ಅನಂತರ ಪುನಃ ಮೆಡಿಕಲ್ ಸರ್ಟಿಫಿಕೇಟನ್ನೂ (ಎಂದರೆ ಕಂಪನಿಯು ನಿಯಮದಂತೆ ಆರೋಗ್ಯದ ಪ್ರತಿಜ್ಞಾಪತ್ರ ವನ್ನೂ ಹಾಜರುಪಡಿಸುವ ಅವಧಿಯು ತೀರಿಹೋದರೆ) ಬೇಡುವ ಪದ್ಧತಿಯಿದೆ. ಈ ಪದ್ಧತಿಯು ಎಲ್ಲ ಕಡೆಗಳಲ್ಲಿ ಒಂದೇ ಇರ ದಿದ್ದರೂ, ಒಟ್ಟಿನ ಮೇಲೆ ಎಲ್ಲ ಕಂಪನಿಗಳ ತತ್ತ್ವವೂ ಒಂದೇ ಸರಿ. ಈ ಪದ್ಧತಿಯು ಅತ್ಯಂತ ಕಹಿಅನುಭವವು ಲೇಖಕನಿಗೆ ಬಂದೇ ಬಿಟ್ಟಿದೆ. ಆದರ ವಿಷಯವು ಹೀಗಿದೆ:— ಲೇಖಕನ ತೀರ್ಥರೂಪರವರು ಬೇಸೆಬಿದ್ದ ವಿಷಯದಲ್ಲಿ ಅಕಸ್ಮಾತ್ತಾಗಿ ತಂತಿ ಬಂದುದರಿಂದ, ಊರಿಗೆ ಹೋಗಬೇಕಾಗಿ ಬಂತು. ಅಲ್ಲಿಗೆ ಹೋದ ನಂತರ, ನಾನಾತರದ ತಾಪತ್ರಯಗಳ ಮೂಲಕವಾಗಿ ಪ್ರೀಮಿಯಂ ಕೊಡಬೇಕಾದ ತಾರೀಕು ಸೆನಪಿನಲ್ಲಿ ಉಳಿಯದೆ ತಪ್ಪಿಹೋಯಿತು. ಈ ತಾರೀಕು ಮೂರುತಿಂಗಳಿನ ಕಂತಿನದೇ ಇತ್ತು. ಹೀಗಾ ದುದರಿಂದ ಕಂಪನಿಯಲ್ಲಿ ಪಾಲಿಸಿಯು ರದ್ದಾಗಿ (ಆಗ ವಿಮೆ ಇಳಿಸಿ ಮೂರು ವರ್ಷಗಳಾಗಿರಲಿಲ್ಲ) ಕುಳಿತುದಲ್ಲದೆ, ಆ ಬಗ್ಗೆ ಮಾಹಿತಿಯು ಕೂಡ ತಾರೀಕು ತಪ್ಪಿ ಮೂರು ತಿಂಗಳುಗಳಾದ ಮೇಲೆ ದೊರೆಯಿತು. ಸದರೀ ಕಂಪನಿಯ ನಿಯಮದ ಪ್ರಕಾರ (ಕೆಲವು ಕಂಪನಿಗಳಲ್ಲಿ ಈ ಅವಧಿಯು ಆರು ತಿಂಗಳಿನದು ಇದೆ. ಒಂದು ವರ್ಷ ಇರುವುದೂ ಉಂಟು) ಆರೋಗ್ಯದ ಪ್ರತಿಜ್ಞಾ-ಲೇಖನದ ಅವಧಿಯು ಕಳೆದುಹೋದುದರಿಂದ, ಮೆಡಿಕಲ್ ಸರ್ಟಿ-ಫಿಕೇಟಿನ ಪ್ರಾಮುಖ್ಯ ಬಂದೇ ಬಂದಿತು. (ನಾನು ಸ್ವತಃ ವಿಮೆ ಇಳಿಸಿದ ಮೇಲೆ ಬೇನೆ ಬಿದ್ದಿರಲಿಲ್ಲವೆಂದೂ, ಆ ಬಗ್ಗೆ ಒಳ್ಳೊಳ್ಳೆಯ 'ವಜನದಾರ' ಸದ್ಗೃಹಸ್ಥರ ಮತ್ತು ನಾನು ಎಲ್ಲಿ ನ ವು ಕ ರಿ ಮಾಡುತ್ತೇನೋ ಅಲ್ಲಿಯ ಮೂಲಕರ ಸರ್ಟಿಫಿಕೇಟನ್ನು ಕಳು ಹಿಸಲು ತಯಾರಿದ್ದೇನೆಂದೂ, ವಿಷಯವನ್ನು ಕಂಪನಿಗೆ ತಿಳಿಸಿದೆನು. ಆದರೂ ಅವರು ತಮ್ಮ ಮೆಡಿಕಲ್ ಸರ್ಟಿಫಿಕೇಟಿನ ಹಟವನ್ನು ಬಿಡಲೇ ಇಲ್ಲ. (ಎಂದರೆ ತೀರ್ಥರೂಪರವರು ಬೇನೆ ಬಿದ್ದ ತಪ್ಪಿಗೆ ಸ್ವತಃ ಡಾಕ್ಟರ ಪರೀಕ್ಷೆ ಮಾಡಿಸಿಕೊಂಡು, ಮೆಡಿಕಲ್ ಸರ್ಟಿ ಫಿಕೇಟು ಹಾಜರ್ ಪಡಿಸುವ ಪ್ರಸಂಗ ಬಂತು!) ಆ ಫಾರ್ಮನ್ನು ಡಾಕ್ಟರರ ಕಡೆಯಿಂದ ತುಂಬಿಸಿ ಕಳಿಸಿಯಾದ ಮೇಲೆ, ಕಂಪನಿ ಯವರು ತೂಕದಲ್ಲಿ ಹೆಚ್ಚುಕಡಿಮೆಯಾಗಿದೆಯೆಂಬ ನೆಪವನ್ನೊಡ್ಡಿ, ನಿಮ್ಮ ಪಾಲಿಸಿಯನ್ನು ಮುಂದುವರಿಸಲು ಬರುವುದಿಲ್ಲವೆಂದು ಉತ್ತರ ಕೊಟ್ಟೇಬಿಟ್ಟರು. ಕಟ್ಟಕಡೆಗೆ ಕಂಪನಿಯ ಸಂಬಂಧ ವಿರುವ ಸದ್ಗೃಹಸ್ಥರೊಬ್ಬರು ಅನೇಕ ರೀತಿಗಳಿಂದ ಕಂಪನಿಯವರ ಮನವೊಲಿಸುವ ಪ್ರಯತ್ನ ಮಾಡಿದ ಮೇಲೆ, ಹಾಗೂ ಹೀಗೂ ಕಂಪನಿಯವರು ಪ್ರೀಮಿಯಂ ಸ್ವಲ್ಪ ಹೆಚ್ಚಿಸಿ, ಪಾಲಿಸಿಯನ್ನು ಮುಂದುವರಿಸಿದರು.

ಮೇಲೆ ಬರೆದ ವರ್ಣನೆಯು ಅಕ್ಷರಶಃ ನಿಜವಾದದ್ದಿದೆ. ಕಂಪನಿ ಯವರು ತಮ್ಮ ಪದ್ಧತಿಯಂತೆ ಮಾಡಿದ್ದೆಲ್ಲ ಯೋಗ್ಯವೇ ಸರಿ. ಆದರೆ ಇಂತಹ ಅನುಭವಗಳಿಂದ ವಿಮೇದಾರರ ಮನಸ್ಸಿನ ಮೇಲೆ ಯಾವ ತರದ ಪರಿಣಾಮವಾಗಬಹುದೆಂಬುದನ್ನು ಅವರು ಅವಶ್ಯ ವಾಗಿಯೂ ವಿಚಾರಮಾಡಬೇಕು.

ಒಮ್ಮೆ ಇಂತಿಷ್ಟು ವರ್ಷಗಳ ಅವಧಿಯ ಸಲುವಾಗಿಯೆಂದು ಮೆಡಿಕಲ್ ಸರ್ಟಿಫಿಕೇಟಿನ ಆಧಾರದ ಮೇಲಿಂದ ಮಾಡಿದ ಕರಾರನ್ನು, ಯಾವುದೊಂದು ಕ್ಷುದ್ರ ಕಾರಣದ ಸಲುವಾಗಿ ರದ್ದು ಪಡಿಸಿ, ಅದನ್ನು ಪುನಃ ಮುಂದುವರಿಸುವುದಕ್ಕೆ ಆರೋಗ್ಯದ ದಾಖಲೆ, ಮೆಡಿಕಲ್ ಸರ್ಟಿಫಿಕೇಟು ಮೊದಲಾದ ತೊಂದರೆಗಳನ್ನು ತಂದೊಡ್ಡುವುದು—ಏನೇ ಇರಲಿ, ನಿರಂತರವೂ ದುಡ್ಡಿನಕೊರತೆಯ ಮೂಲಕವಾಗಿ ತೊಳಲುತ್ತಿರುವ ಸಾಮಾನ್ಯ ಪರಿಸ್ಥಿತಿಯ ವಿಮೇ ದಾರರ ದೃಷ್ಟಿಯಿಂದಲಾದರೂ ಉಚಿತವಾಗಿ ತೋರುವುದಿಲ್ಲ. ಯಾಕೆಂದರೆ, ಇಂತಹ ಪ್ರಕಾರಗಳಿಂದ ವಿಮೇದಾರರಿಗೆ ನಿಷ್ಕಾರಣ ವಾಗಿ ಅಸಹನೀಯ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಮತ್ತು ತಮ್ಮ ಕ್ಲೇಶಕಾರಕ ನಿಯಮಗಳಿಗೇ ಅಂಟಿಕೊಂಡು, ಆದರಂತೆಯೇ ಕೃತಿಗಳನ್ನು ನಡೆಯಿಸುತ್ತ ಹೋದರೆ, ಕಂಪನಿ ಗಳಿಗೂ ವಿಶೇಷ ಲಾಭವಾಗುವುದು ಅಷ್ಟಕ್ಕಷ್ಟೇ ಸರಿ! ಲಾಭ ವಾಗುವುದು ಹಾಗಿರಲಿ, ಇಂತಹ ಕೃತಿಗಳಿಂದ ವಿಮಾಸಂಸ್ಥೆಗಳ ಬಗೆಗೆ ಅನಾದರವು ಮಾತ್ರ ಉತ್ಪನ್ನವಾಗಲು ಬೇಕಾದಷ್ಟು ಅವಕಾಶವಿದೆ.

ಸಣ್ಣಪುಟ್ಟ ನಿರರ್ಥಕ ಕಾರಣಗಳನ್ನೇ ಮುಂದೆಮಾಡಿ, ವಿಮಾ-ಪಾಲಿಸಿಗಳನ್ನು ರದ್ದುಪಡಿಸುತ್ತ ಹೋಗುವುದರಿಂದ, ಕಂಪನಿಗಳ ಹಿತವು ಎಷ್ಟರಮಟ್ಟಿಗೆ ಸಾಧಿಸಬಹುದೆಂಬುದರ ಮರ್ಮವು, ವಿಮಾ ವ್ಯವಸಾಯಿಗಳಿಗೆ ಅನುಭವದಿಂದ ತಿಳಿದುಬಂದುದರಿಂದಲೇ ದಿನ ದಿನಕ್ಕೆ ಹೊಸಮಾದರಿಯ ಸವಲತ್ತುಗಳು ಉತ್ಪನ್ನವಾಗುತ್ತಿರು ವುದೆಂಬ ವಿಷಯವನ್ನು ಕಣ್ಮರೆಮಾಡುವಂತಿಲ್ಲ. ಆದರೆ ಕೆಲವು

ಕಂಪನಿಗಳು ಮಾತ್ರ ಇನ್ನೂ ತಮ್ಮ ಹಳೆಯ ಪದ್ಧತಿಗಳನ್ನು ಬಿಡಲು ತಯಾರಾಗುವ ಲಕ್ಷಣವು ತೋರುವುದಿಲ್ಲ.

ತಾವು ಸ್ವೀಕರಿಸುವುದು ಆಯುಷ್ಯದ ವಿಮೆಯೊ, ಆರೋಗ್ಯದ ವಿಮೆಯೊ?—ಎಂಬುದರ ವಿಚಾರವನ್ನು ಕಂಪನಿಗಳು ಮಾಡಿದರೆ ಒಳ್ಳೆಯದಾಗುವುದು. ಒಬ್ಬ ಮನುಷ್ಯನದೇ ತಿರುತಿರುಗಿ ಮೆಡಿಕಲ್ ಸರ್ಟಿಫಿಕೇಟು ಬೇಡುವುದರ ಅರ್ಥವೇನು? ಒಮ್ಮೆ ಮೆಡಿಕಲ್ ಸರ್ಟಿಫಿಕೇಟಿನ ಆಧಾರದ ಮೇಲಿಂದ ರಚಾಯಿಸಿದ ಆಯುಷ್ಯದ ಅಂದಾಜು—ವಿಮೇದಾರನು ಒಂದು ಸಣ್ಣ ಪ್ರೀಮಿಯಮ್ ಕೊಡಲು ಮರೆತನೆಂಬ ಕ್ಷುದ್ರಕಾರಣದಿಂದ ಬದಲಾಗುವುದು ಹೇಗೆ? ಯಾವ ವಿಮೇದಾರನ ವಿಮೆಯನ್ನು ಸ್ವೀಕರಿಸುವುದು ಎರಡು ವರ್ಷಗಳಿಗೆ ಮೊದಲು ಸುರಕ್ಷಿತವಾಗಿತ್ತೋರಿತ್ತೋ ಅದು, ಪ್ರೀಮಿಯಮ್ ತಪ್ಪಿದ್ದರಿಂದ ಒಮ್ಮೆಲೆ ಇಲ್ಲದಂತಾಗಿ, ನೋದಲು ಮಾಡಿದ ಅಂದಾಜೆಲ್ಲವೂ ಸುಳ್ಳೆಂದು ಸಿದ್ಧವಾಗುತ್ತದೆಯೇನು? ಆಯುಷ್ಯದ ಎಂದರೆ ಜೀವವಿಮೆಯನ್ನು ಸ್ವೀಕರಿಸುವ ಕಂಪನಿಗಳಿಗೆ ಬೇಕಾದುದಾದರೂ ಏನು? ವಿಮೇದಾರರ ಆಯುಷ್ಯವೋ ಆರೋಗ್ಯವೋ?

ಇನ್ನು ಕಂಪನಿಗಳಿಗೆ, ವಿಮೇದಾರರ ವಿಮೆಯ ಅವಧಿಯು ಮುಗಿಯುವ ತನಕ ಇಲ್ಲವೆ ವಿಮೇದಾರರು ಸಾಯುವ ತನಕ ಅವರ ಆರೋಗ್ಯವು ಕೆಡದ ಬಗೆಗೆ ಗ್ಯಾರಂಟಿಯು ಬೇಕಾಗಿದ್ದರೆ, ಅವುಗಳ ಇಚ್ಛೆಯು ಸಫಲವಾಗುವುದು ಶಕ್ಯವೇ ಇಲ್ಲ. ಯಾಕೆಂದರೆ ವಿಮೆ ಇಳಿಸಿದ ಮೇಲೆ ಕಡೆತನದ ನಿರೋಗಿಯಾಗಿರುವೆನೆಂದು ಖಾತ್ರಿಯನ್ನು ಕೊಡಬಲ್ಲ ಒಬ್ಬ ವಿಮೇದಾರನೂ ಈ ಜಗತ್ತಿನಲ್ಲಿ ಹೊರೆಯುವ ಸಂಭವವಿಲ್ಲ.

ಮತ್ತೊಂದು ಮಾತೇನೆಂದರೆ, ಅದೇ ಕಾಲದಲ್ಲಿ (ಎಂದರೆ ಪುನಃ ಮೆಡಿಕಲ್ ಸರ್ಟಿಫಿಕೇಟು ಬೇಡುವ ಮೂರು ವರ್ಷಗಳ ಕಾಲದಲ್ಲಿ) ಪ್ರೀಮಿಯಮ್ ತಪ್ಪಿಸದ ವಿಮೇದಾರರು ಯಾವುದೇ ಕಾರಣದಿಂದ ಮರಣಹೊಂದಿದರೂ, ಅವರು ಸಾಯುವ ಕಾಲಕ್ಕೆ ಆರೋಗ್ಯದಲ್ಲಿದ್ದರೋ ಅನಾರೋಗ್ಯದಲ್ಲಿದ್ದರೋ ಎಂಬುದರ ಚಿಕಿತ್ಸೆಯನ್ನು ತೆಗೆಯಲು ಕಂಪನಿಗಳಿಗೆ ಅಧಿಕಾರವೇ ಇಲ್ಲ. ಯಾವುದೇ ಕಾರಣವಿದ್ದರೂ ಪಾಲಿಸಿಯ ಪೂರಾ ರಕಮನ್ನು ಪಾವತಿ ಮಾಡಲೇ ಬೇಕಾಗುತ್ತದೆ. ಹೀಗಿರುತ್ತ ಒಳ್ಳೆಯ ರೀತಿಯಿಂದ ಜೀವಿಸಿರುವ ವಿಮೇದಾರರಿಗೇ ಉಪದ್ರವವು ಯಾಕೆ? ಕಂಪನಿಗಳ ದೃಷ್ಟಿಯಿಂದ ಬೇಗ ಸಾಯುವ ವಿಮೇದಾರರು ಲಾಭಕಾರಕರೋ, ಜೀವಿಸಿರುವವರೋ?

ಈ ವಿಷಯಕ್ಕೆ ವಿಮಾಕಂಪನಿಗಳು ಜನರ ಬುದ್ಧಿಗೆ ಗ್ರಾಹ್ಯವಾಗುವಂತಹ ಸಮಂಜಸವಾದ ನಿಯಮಗಳನ್ನು ಮಾಡಬೇಕು. ಅಂತಹ ನಿಯಮವು ಕಾಯಿದೆಯಿಂದಲೇ ಆದರೆ ಬಹಳ ಒಳ್ಳೆಯದು.

ಸಾಲ ತಕ್ಕೊಂಡ ಮೇಲಿನ ಸಂಕಟವು

ಸಾಲವನ್ನು ತಕ್ಕೊಂಡರೆ ಮುಂದೆ ಪ್ರೀಮಿಯಂ ಮತ್ತು ಬಡ್ಡಿಯ ತಾರೀಕುಗಳನ್ನು ತಪ್ಪಿಸಬಾರದೆಂತಲೂ, ತಪ್ಪಿಸಿದರೆ ಪಾಲಿಸಿಯು ರದ್ದಾಗುವುದೆಂತಲೂ ವಿಮಾಕಂಪನಿಗಳ ನಿಯಮವಿದೆ. ಆದರೆ—ರದ್ದಾದರೆ ಮುಂದೆ ಏನು ಮಾಡುವರೆಂಬ ಬಗ್ಗೆ ನಿಸ್ಸಂದಿಗ್ಧವಾದ ಮಾಹಿತಿಯು, ಯಾವ ಕಂಪನಿಯ ಪ್ರಾಸ್ಪೆಕ್ಟಸ್ಸಿನಲ್ಲಿಯೂ ಇಲ್ಲ. ವಿಮಾಕಂಪನಿಯವರು ಈ ಬಗ್ಗೆ ತೊಡಕಿಲ್ಲದಂತೆ ಯೋಗ್ಯವಾದ ಮಾಹಿತಿಯನ್ನು ಪ್ರಸಿದ್ಧಮಾಡುವುದು ವಿಮೇದಾರರ ಹಿತದ ದೃಷ್ಟಿಯಿಂದ ಅತ್ಯವಶ್ಯವಿದೆ. ಈಗಿರುವ ನಿಯಮಗಳಿಗಿಂತ ಸುಲಭವಾದ ನಿಯಮಗಳು ಆಗದಿದ್ದರೆ, ಸಾಲತಕ್ಕೊಳ್ಳುವ ವಿಮೇದಾರರಿಗೆ ಬಹಳ ತೊಂದರೆಗಳಾಗುವ ಸಂಭವವಿರುವುದರಿಂದ, ಅಂತಹ ನಿಯಮಗಳು ಕಾಯಿದೆಯಿಂದಲೇ ಆಗಬೇಕು.

ವಿಮೇದಾರರ ಡಾಯರೆಕ್ಟರರನ್ನು ಚುನಾಯಿಸುವ ಮಾರ್ಗದಲ್ಲಿ ತೊಂದರೆಗಳು

ಈಗಿನ ಪದ್ಧತಿಯಂತೆಯೂ ಕಾಯಿದೆಯಂತೆಯೂ ಪ್ರತಿಯೊಬ್ಬ ವಿಮೇದಾರನಿಗೆ "ವಿಮೇದಾರರ ಡಾಯರೆಕ್ಟರ"ರನ್ನು ಆರಿಸುವ ಕೆಲಸದಲ್ಲಿ ಮತವನ್ನು ಕೊಡುವ ಅಧಿಕಾರವು ಹೊರೆಯುವುದು ಕಷ್ಟವೇ ಸರಿ. ಈ ಬಗ್ಗೆ ನಿಯಮಗಳನ್ನು ಮಾಡುವ ಅಧಿಕಾರವು, ಕಂಪನಿಗಳ ಕಡೆಗೇ ಇದೆಯೆಂದು ಹೇಳಬಹುದು. 'ಇಂತಿಷ್ಟು ರಕಮಿನ ಮೇಲಿನ ವಿಮೇದಾರರು ಮಾತ್ರ ಮತಕೊಡಲಿಕ್ಕೆ ಅರ್ಹರು' ಎಂಬ ನಿಯಮವನ್ನು ತಮ್ಮ ಪರಿಸ್ಥಿತಿಯಂತೆ ಕಂಪನಿಗಳೇ ಮಾಡುತ್ತವೆ. ಇದರ ಹೊರತು ಸಾಲ ತಕ್ಕೊಂಡ

(೪೬ನೆಯ ಪುಟದಿಂದ ಮುಂದುವರಿದುದು)

ದೇಶದ ಸರ್ವತೋಮುಖ ಉನ್ನತಿಗೆ ಸರಿಯಾದ ಕಾಲವಿಲ್ಲ. ಕನ್ನಡನಾಡಿನಲ್ಲಿ ವಿಧಾಯಕ ಕಾರ್ಯಗಳನ್ನು ಮಾಡುವ ಸಾಂಸ್ಕೃತಿಕ ಸಂಸ್ಥೆಗಳು ಹೆಚ್ಚಬೇಕು; ಒಂದೊಂದು ಸಂಸ್ಥೆಯಲ್ಲಿಯೂ ದೇಶಹಿತದ ಆದರ್ಶವಿಟ್ಟುಕೊಂಡು ಕೆಲಸಮಾಡುವ ವಿದ್ಯಾವಂತ ಕೆಲಸಗಾರರ ಬಳಗ ಹಿಂಡುಹಿಂಡಾಗಿ ತುಂಬಿಕೊಳಬೇಕು. ಅವರ ಕೆಲಸಕ್ಕೆ ನಾಡಿನ ಜನರಿಂದ ಸಹಕಾರ-ಸಾನುಭೂತಿ-ಮನ್ನಣೆಗಳು ಯುಕ್ತರೀತಿಯಿಂದ ಸಲ್ಲುತ್ತಿರಬೇಕು. ಆಗ ನೋಡಿರಿ, ಕನ್ನಡನಾಡಿನ ಬಾಳಿನ ಮುಖವನ್ನು! ರಾಜಕೀಯ ಕೆಲಸಗಾರರು ತಮ್ಮ ಉಗ್ರಕಾರ್ಯದಿಂದ ಜೇಲಿಗೆ ಹೋದರೆ, ಹೊರಗಿದ್ದ ವಿಧಾಯಕಕಾರ್ಯಕರ್ತರು ಗಾಬರಿಗೊಳ್ಳಬೇಕೇಕೆ? ಎದೆಗುಂದಬೇಕೇಕೆ? ಉತ್ಸಾಹಹೀನರಾಗಬೇಕೇಕೆ? ಇದೊಂದನ್ನೂ ಮಾಡಲಾಗದು. ನಿಮ್ಮ ಕಾರ್ಯಕರ್ತರು ಕರ್ತವ್ಯಬುದ್ಧಿಯಿಂದ ತಮ್ಮ ಕಾರ್ಯವನ್ನುಮಾಡುತ್ತಿರಬೇಕು; ನಾಡಿನ ಜನತೆ ಇವರ ಕಾರ್ಯಕ್ಕೂ ಒಂದು ಸ್ಥಾನವುಂಟೆಂಬ ತಿಳಿವಳಿಕೆಯಿಂದ ನೋಡುತ್ತಿರಬೇಕು.

ದೀಪಾವಳಿ ಸಂಚಿಕೆ

ಈ ಸಲದ ದೀಪಾವಳಿ ಸಂಚಿಕೆಯು ಮುಚ್ಚಿಕೆಯಾದುದರ ಬಗೆಗೆ ಜಯಂತಿಯ ವಾಚಕರನೇಕರಿಂದ ಕಾಗದಗಳು ಬಂದಿವೆ. ಕಾಗದ ಬರೆದು ಪ್ರೋತ್ಸಾಹವಿತ್ತವರಿಗೆಲ್ಲ ನಮ್ಮ ಅಭಿನಂದನೆಗಳು. ದೀಪಾವಳಿ ಸಂಚಿಕೆಗಳು ಇನ್ನು ಬೇರ ಕ್ವಲ್ಪ ಉಳಿದಿವೆ. ಬೇಕಾದವರು ಬೇಗನೆ ಕಾಗದ ಬರೆದು ತರಿಸಿಕೊಳ್ಳಬೇಕು.

—ಸಂಪಾದಕರು

ವಿಮೋದಾರರಿಗೆ ಮತದಾನದ ಅಧಿಕಾರವಿಲ್ಲ. ಹೀಗಾಗಿ ಮತದಾನದ ಅಧಿಕಾರವು ತೀರ ಕಡಿಮೆ ಸಂಖ್ಯೆಯ ಜನರ ಪಾಲಿಗೆ ಬಂದು, ಬಹುಸಂಖ್ಯಾಕ ವಿಮೋದಾರರಿಗೆ ಮತವನ್ನು ಕೊಡುವ ಹಕ್ಕೇ ದೊರೆಯುವುದಿಲ್ಲ. ಇದರಲ್ಲಿ ಸುಧಾರಣೆಯಾಗುವುದು ಹೇಗೋ ದೇವರಿಗೇ ಗೋಚರ.

ಕ್ಲೇಮ್ (ಬಾಧ್ಯತೆಯ) ಬಗ್ಗೆ ಪುರಾವೆಗಳು

ವಿಮೋದಾರರು ಮೃತರಾದರೆ, ಅವರ ಪಾಲಿಸಿಯ ಹಣವನ್ನು ವಾರಸದಾರರಿಗೆ ಪಾವತಿ ಮಾಡುವುದಕ್ಕಾಗಿ "ಮನಸಿಗೆ ಬಂದಂತೆ ಪುರಾವೆಗಳನ್ನು ಬೇಡುವ ಅಧಿಕಾರವು ಕಂಪನಿಗಳಿಗೆ ಇರಬಾರದು. "ಮಾಲಕರ ಸರ್ಟಿಫಿಕೇಟಿ"ನಂತಹ ಉಪದ್ರವಕಾರಣ ಪುರಾವೆಗಳನ್ನು ಬೇಡುವ ಪದ್ಧತಿಯು ಕಾಯಿದೆಯಿಂದಲೇ ನಿಲ್ಲಿಸಲ್ಪಡಬೇಕು. ಈ ವಿಷಯದಲ್ಲಿ ಸರಕಾರದವರು ಸಮಂಜಸವಾದ ನಿಯಮಗಳನ್ನು ಮಾಡಬೇಕು.

ಪ್ರೋಬೇಟ್ (ಅಧಿಕಾರಪತ್ರ)

ಈಗ 'ಪ್ರೋಬೇಟ್' ಎಂದರೆ ಅಧಿಕಾರಪತ್ರಗಳು ಜಿಲ್ಲಾ ಕೋರ್ಟಿನ ಮುಖಾಂತರವಾಗಿ ಮಾತ್ರವೇ ದೊರೆಯುತ್ತಿರುವುದರಿಂದ, Assign ಎಂದರೆ ಹೆಸರಲ್ಲಿ ಮಾಡದ ಸಂದರ್ಭದಲ್ಲಿ ವಾರಸದಾರರು ಬಹಳ ಕಷ್ಟ-ನಷ್ಟಗಳಿಗೆ ಗುರಿಯಾಗಬೇಕಾಗುತ್ತದೆ. ಆದ್ದರಿಂದ ಇಂತಹ ವಾರಸದಾರರ ಸೌಕರ್ಯಕ್ಕಾಗಿ ತಾಲ್ಲೂಕು ಅಥವಾ ಸಬಾರ್ಡಿನೇಟ್ ಕೋರ್ಟುಗಳ ಕಚೆಯಿಂದ ಅಧಿಕಾರಪತ್ರಗಳು ದೊರೆಯುವ ವ್ಯವಸ್ಥೆಯಾಗಬೇಕು.

ಮುಂಗಡವಾಗಿ ಬಡ್ಡಿಯನ್ನು ತಕ್ಕೊಳ್ಳುವ ಪದ್ಧತಿ

ಕೆಲವು ಕಂಪನಿಗಳು ಸಾಲ ತಕ್ಕೊಂಡ ವಿಮೋದಾರರ ಕಡೆಯಿಂದ ಮುಂಗಡವಾಗಿ ಬಡ್ಡಿಯನ್ನು ತಕ್ಕೊಳ್ಳುತ್ತವೆ. ಈ ಪದ್ಧತಿಯು ಕಾಯಿದೆಗೆ ವಿರುದ್ಧವಿರುವುದೆಂಬದರ ಬಗ್ಗೆ ಮತಭೇದವಾಗಲಾರದು. ಸರಕಾರದವರು ಇಂತಹ ಹೊಲಸು ಪದ್ಧತಿಯನ್ನು ನಡೆಯಗೊಡುವುದು ಎಂದಿಗೂ ಇಷ್ಟವಲ್ಲ. ಈ ಪದ್ಧತಿಯನ್ನು ನಿಲ್ಲಿಸುವುದು ವಿಮೋದಾರರ ಹಿತದ ದೃಷ್ಟಿಯಿಂದ ಯೋಗ್ಯವೇ ಇದೆ. ಎಲ್ಲಿಯೂ ಸಾಲ ದೊರೆಯದೆ ಕೈ ನಡೆಯದಂತಾದ ಸಂದರ್ಭದಲ್ಲಿ ಸಾಲ ತಕ್ಕೊಳ್ಳಲು ಬರುವ ವಿಮೋದಾರನನ್ನು, ಮುಂಗಡವಾಗಿ ಬಡ್ಡಿ ತಕ್ಕೊಂಡು ಮತ್ತು ಹಿಂಡಿ ತೆಗೆಯುವುದರಲ್ಲಿಯೂ ಕಂಪನಿಗಳು ವಿಮೋದಾರರ ಹಿತವನ್ನೇ ಬಯಸುತ್ತವೇನು ?

ಒಟ್ಟಿನ ಮೇಲೆ ವಿಮಾವ್ಯವಹಾರದ ಪದ್ಧತಿಗಳಲ್ಲಿ ಯೋಗ್ಯವಾದ ಸುಧಾರಣೆಗಳಾದ ವಿನಾ ವಿಮೆಯ ನಿಜವಾದ ಮಹತ್ತ್ವವು ಸ್ಥಾಪಿತವಾಗಲಿಕ್ಕಿಲ್ಲವೆಂಬ ಮಾತು ನಿಜವೇ ಸರಿ. ಜೀವದ ವಿಮೆಯನ್ನಿಳಿಸಿ, ತನ್ನ ವಾರಸದಾರರ ಕಲ್ಯಾಣ ಮಾಡುವುದಕ್ಕೆ ಹೊರಟ ವಿಮೋದಾರರಿಗೆ

"ಯತ್ತದಗ್ರೇ—ಅಮೃತೋಪಮಂ |
ಪರಿಣಾಮೇ ವಿಷಮಿವ"

ಹೀಗೆ ಅನುಭವವು ಬರುವುದು ಸರ್ವಥಾ ಯೋಗ್ಯವಲ್ಲ.

ವಿಮಾವ್ಯವಸಾಯದಲ್ಲಿರುವ ಜನರು, ಮೇಲೆ ಬರೆದ ವಿಷಯಗಳ ಬಗ್ಗೆ ಸಹಾನುಭೂತಿಯಿಂದ ವಿಚಾರಮಾಡಿ, ನ್ಯಾಯಕ್ಕೆ ಒಪ್ಪುವ ಸುಧಾರಣೆಗಳನ್ನು ಪ್ರಚಾರದಲ್ಲಿ ತರುವರೆಂದು ಹಾರೈಸುತ್ತೇನೆ.

ಬೆಳುದಿಂಗಳ ರಾಣಿ

ಶ್ರೀ. ಶ್ರೀಧರ

★

೧

ಯಾರಿವಳು ಹೊರಟಿವಳು ಕಾರಿನೊಳಗೇ, ತನ್ನ
ಕಾಂತಿಯನ್ನೆರಚುತ್ತ ಗಗನದೊಳಗೆ ?
ಮಾರನಂಬುಗಳಂತೆ ಸನಿಯಾದ ಸಂತೋಷ
ಸೋನೆಯನು ಸುರಿಸುತ್ತ ಧರಣಿಯೊಳಗೆ !

೨

ತಲೆಯೊಳಗೆ ಕಳಕಳಿಪ ನವಮಲ್ಲಿಗೆಯ ಹೂವ
ಹೆಣೆದಂಥ ಸೊಗಸಾದ ಮುಡಿಯ ಧರಿಸಿ,
ನೆಲೆಯಿಲ್ಲದಲೆಯಮೃತ ಸೋನೆಯನು ಕರೆಯುತ್ತ
ಸೆರೆವಂಥ ಬಾಂದಳದ ಹೂವ ನಗಿಸಿ !

೩

ಸರಸತಿಯು ಇವಳಲ್ಲ ! ಇವಳಿಗೆಲ್ಲಿದೆ ಹಂಸ ?
ಸುಸ್ವರದ ರಸವೀಣೆ, ಜೀವದರಳು ;
ವರಮಹಾಲಕುಮಿಯೀನಿವಳಲ್ಲ ! ಮದವೆತ್ತ
ಗಜದ ಮೇಲಿರುವಂಥ ದೇವಿಯವಳು !

೪

ಚಂದ್ರಕಾಂತದ ಸರಸ ಪುತ್ಥಳಿಯೆ ? ಇವಳಲ್ಲ;
ಒಸರುವುದು ಬದುಗಲ್ಲು ಶಶಿಯ ನೋಡಿ ;
ಚಂದ್ರಕಾಂತಿಯ ತೆರೆಯ ಸೌಂದರ್ಯನಿಧಿಯಲ್ಲ,
ನೀರಾಗಿ ಹರಿದಿಹನೊ ಚಂದ್ರ ಕೂಡಿ !

ಬ ಡ ವ ರು

(ಒಂದು ಪತ್ರಕಥೆ)

★

ಶ್ರೀ "ಭಾರತೀಸುತ" ವೈನಾಡು

"ಹಣಗಾರರ ಸಹಾಯಕ್ಕೆ ಪೋಲೀಸಿದೆ; ನ್ಯಾಯವುಂದಿರವಿದೆ; ಎಲ್ಲಾ ಇದೆ. ಆದರೆ ಬಡವರಿಗೆ ಯಾರ ನೆರವೂ ಇಲ್ಲ. ಅವರ ಪೊರೆಯನ್ನು ಕೇಳುವವರೆಂದರೆ ಚಂದ್ರ-ಸೂರ್ಯರು, ಗ್ರಹ-ತಾರಕೆಗಳು! ....."

★

೧

ಸರಳಾ,

ತಾ. ೧೨–೮–೨೯

ನಿನ್ನ ಎರಡು ಕಾಗದಗಳೂ ದೊರೆತುವು; ನಿನ್ನ ಹಳೆಯ ಗೆಳತಿಯ ನನಪು ಇನ್ನೂ ಉಳಿದಿರುವುದನ್ನು ಕಂಡು ಸಂತೋಷವಾಯಿತು. ನೀನು ಬರೆದ ಕಾಗದಗಳು ನಮ್ಮ ಕಳೆದ ದಿನಗಳ ಸ್ಮರಣೆಗಳನ್ನು ನನ್ನಲ್ಲುಂಟುಮಾಡಿ, ಇರುಳು ಕವಿದ ಈ ಬಾಳುವೆಯಲ್ಲಿ ನನುಪೆ ಬೆಳಕು ಗೋಚರಿಸುವಂತೆ ಮಾಡಿದುವು. ನಿನ್ನ ಮುಮತೆಯನ್ನು ಮಿಸಿಕೊಂಡು ಬಂದಿರುವ ಆ ಓಲೆಗಳು, ನನ್ನ ಎದೆಯ ಭಾರವನ್ನು ಸ್ವಲ್ಪ ಹಗುರುಗೊಳಿಸಿವೆ. ನಿನ್ನ ಉಪಕಾರಕ್ಕೆ ನಾನು ಕೃತಜ್ಞಳಾಗಿರುತ್ತೇನೆ.

ಸರಳಾ, ನನ್ನ ದುಃಖಿದ ಕತೆಯನ್ನು ನಿನಗರುಹಿ, ನಿನ್ನ ಮನಸ್ಸನ್ನೇಕೆ ನೋಯಿಸಬೇಕೆಂದು ಯೋಚಿಸಿ, ಈ ತನಕ ನಿನಗೆ ಪತ್ರಗಳನ್ನು ಬರೆಯಲಿಲ್ಲ; ಅದಕ್ಕಾಗಿ ಕ್ಷಮಿಸು. ನೀನು ಸುಖವಲ್ಲಿರುವೆಯೆಂದು ತಿಳಿಯಲು ನನಗೆ ಹರುಷವಾಗುತ್ತದೆ. ನಿನ್ನ ಜೀವನವು ಮಂಗಳಕರವಾಗಿರಲಿ!

ನನ್ನ ಹರುಷವಾರ್ತೆಗಳನ್ನು ತಿಳಿಯಲು ನೀನು ಉತ್ಸುಕಳಾಗಿರುವೆ. ಆದರೆ ಗಂಡನನ್ನು ಕಳೆದುಕೊಂಡ ಬ್ರಾಹ್ಮಣವಿಧವೆಗೆ ಎಲ್ಲಿಯ ಹರುಷ? ಪೋರೆಯನ್ನು ಕಣ್ಣೀರಿನಿಂದ ತೊಳೆಯುವುದಲ್ಲದೆ ಬೇರೆ ಯಾವ ದಾರಿಯಿದೆ? ಸುಖಿಸುವುದಕ್ಕಾಗಲಿ, ಇತರ ಹೆಂಗುಸರಂತೆ ಜೀವಿಸುವುದಕ್ಕಾಗಲಿ, ನನಗೆ ಅಧಿಕಾರವಿಲ್ಲ; ಜೊತೆಯ ಹೆಂಗುಸರೊಡನೆ ತಲೆಯೆತ್ತಿ ನಡೆಯಲೂ ನನಗೆ ಸ್ವಾತಂತ್ರ್ಯವಿಲ್ಲ. ಅಹುದು, ಇರುಳು ಮುಸುಕಿದ ಒಂದು ಗುಹೆಯಂತಿದೆ..ವಿಧವೆಯ ಬದುಕು.

ಕಳೆದ ಸಲ ನಾವಿಬ್ಬರೂ ಪರಸ್ಪರರನ್ನು ಕಂಡು ಮಾತನಾಡಿ ಆಗಲಿದ ಮೇಲೆ,– ನೀನು ಗಂಡನ ಮನೆಗೆ ತೆರಳಿದನಂತರ– ನನ್ನ ಕುಟುಂಬದಲ್ಲಿ ಹಲವು ಮಾರ್ಪುಗಳುಂಟಾದುವು; ಕೆಲವು ಅಸಾಧಾರಣ ಘಟನೆಗಳು ಜರುಗಿ ನನ್ನನ್ನು ಕತ್ತಲೆಯ ಗವಿಯಲ್ಲಿ ದೂಡಿದುವು. ಕಳೆದ ಸಲ ನೀನಿಲ್ಲಿದ್ದಾಗ ನನಗೆ "ನನ್ನವರು" ಎಂಬವರೊಬ್ಬರಿದ್ದರು. ಮುದುಕರಾದರೂ ಅವರ ಮೋರೆಯನ್ನು ನೋಡಿ ಸ್ವಲ್ಪ ಸಂತಸವನ್ನುಣ್ಣುತ್ತಲಿದ್ದೆ. ಆದರೆ ಈಗ,– ನನ್ನವರು ಹಿಂದಿರುಗಿ ಬರಲಾರದ ಸ್ಥಳಕ್ಕೆ ಹೊರಟುಹೋದರು. ಗತಿಶೂನ್ಯೆಯಾದೆ; ದಿಕ್ಕಿಲ್ಲದವಳಾದೆ; ಜೀವನದ ಸವಿರುಚಿಯನ್ನು ತಿಳಿಯಲಿರುವ ಸ್ವಾತಂತ್ರ್ಯವನ್ನು ಕಳೆದುಕೊಂಡೆ!

ನೀನು ಹೀಗೆ ಕೂಡ ನನ್ನನ್ನು ಪ್ರಶ್ನಿಸಬಹುದು : 'ದೂರಾಲೋಚನೆಯಿಲ್ಲದೆ ಮುದುಕನನ್ನು ಮದುವೆಯಾದುದೇಕೆ?' ಎಂದು. ಆದರೆ ನೋಡು, ಈ ನಮ್ಮ ವರ್ಗದಲ್ಲಿ 'ವರದಕ್ಷಿಣೆ' ಎಂಬ ಉರುಳುಗಣ್ಣಿ ಹೆಣ್ಣುಮಕ್ಕಳ ತಾಯ್ತಂದೆಗಳ ಕೊರಳುಗಳನ್ನು ಹೇಗೆ ಬಿಗಿಯುತ್ತಲಿದೆಯೆಂಬುದನ್ನು! ಅಂಗಡಿಯೊಂದರಲ್ಲಿ ನೌಕರಿಮಾಡಿ, ತಿಂಗಳಿಗೆ ಹತ್ತಿಪ್ಪತ್ತು ರೂಪಾಯಿಗಳನ್ನು ಸಂಪಾದಿಸುತ್ತಲಿರುವ ನನ್ನ ಅಣ್ಣನು, ಕೈತುಂಬ ವರದಕ್ಷಿಣೆಯನ್ನು ಕೊಟ್ಟು ಒಬ್ಬ ಒಳ್ಳೆಯ ತರುಣನನ್ನು ತನ್ನ ತಂಗಿಗೆ ಸಂಪಾದಿಸಿ ಕೊಡಲು ಹೇಗೆ ಶಕ್ತನಾಗುವನು? ನಾಲ್ಕುಜನರ ತುತ್ತಿನ ಜೀಲಗಳನ್ನು ತುಂಬಲು ಅವನು ಪಾಡುಪಡುತ್ತಿರುವುದನ್ನು ನಾನು ಜೆನ್ಮಾಗಿ ಬಲ್ಲೆ. ಇಪ್ಪತ್ತು ರೂಪಾಯಿಗಳಲ್ಲಿ ನಾಲ್ಕು ಹೊಟ್ಟೆಗಳನ್ನು ತುಂಬಬೇಕು! ಆ ಹಣದಿಂದಲೇ ಪುಟ್ಟಶ್ಯಾಮುವಿನ ವಿದ್ಯಾಭ್ಯಾಸ ಮುಂದೆ ಸಾಗಬೇಕು! ಅಣ್ಣನ ತೊಂದರೆಗಳನ್ನು ತಿಳಿದಿರುವೆ; ಆದುದರಿಂದ ಅವನೂ ಅಮ್ಮನೂ ನನ್ನ ಮದುವೆಯ ವಿಷಯದಲ್ಲಿ ಕೈಕೊಂಡ ರೀತಿಗೆ ನಾನು ಪ್ರತಿ ಹೇಳಲಿಲ್ಲ; ಅವರ ತಲೆಯ ಮೇಲಿರುವ ಹೊರೆಯನ್ನು ಕಡಿಮೆಮಾಡುವುದಕ್ಕಾಗಿ ಮುದುಕನನ್ನು ಮದುವೆಯಾಗಲು ಸಿದ್ಧಳಾದೆ. ಆ ತಪ್ಪಿಗಾಗಿ ಈಗ ಅವರನ್ನು ಕಳೆದುಕೊಂಡೆ. ಅದಕ್ಕಾಗಿ ನಾನು ಹೆಚ್ಚಿಗೆ ಖೇದಿಸುವುದಿಲ್ಲ. ಹುಟ್ಟಿದ ಮನುಷ್ಯನು ಸಾಯುವುದು ಸಹಜ. ಬ್ರಾಹ್ಮಣವಂಶದಲ್ಲಿ ಹುಟ್ಟಿದ ತಪ್ಪಿಗೆ ತಲೆ ಮುಂಡನಮಾಡಿಸಿಕೊಂಡು, ಅವಲಕ್ಕಿ–ಪಂಡಿಸಿಕಾಯಿಗಳಿಂದ ಹೊಟ್ಟೆಯನ್ನು ಹೊರೆಯಬೇಕಾಗಿ ಒಂದಿದೆ. ಆದರೆ ಗಂಡುಸರ ದಯೆಯಿಲ್ಲದ ಹೃದಯಗಳನ್ನು ನೋಡುವಾಗ, ನನಗೆ ದಿಗಿಲಾಗುತ್ತದೆ; ಎದೆಯು ನುಡುಚುತ್ತದೆ. ಅವರ ಮಂಡಿಯಂತೆ ಎರಡು ಪರುಷ ಕಾಲ ಜೀವಿಸಿದೆ, ಒಬ್ಬ ಹಿಂದೂ ಹೆಂಗುಸಿನಂತೆ ಅವರನ್ನು ಶುಶ್ರೂಷಿಸಿದೆ: ಅಂತ್ಯಕಾಲದಲ್ಲಿ ನನ್ನ ಕೈಯಿಂದ ಆಗಬಹುದಾದುದನ್ನೆಲ್ಲಾ ಸಲ್ಲಿಸಿದೆ. ಆದರೆ ಅವರು ಕಾಲವಾಗಲು, ನನ್ನ ಮಲಮಕ್ಕಳು ನನ್ನೊಡನೆ ಹೇಗೆ ವರ್ತಿಸಿದರೆಂಬುದನ್ನು ವಿಚಾರಿಸುವಾಗ....

ಅವರ ಮೊದಲನೆಯ ಹೆಂಡತಿಯ ಮಕ್ಕಳು, ಉಟ್ಟ ವಸ್ತ್ರಗಳೊಡನೆ ನನ್ನನ್ನು ಮನೆಯಿಂದ ಹೊರದೂಡಿದರು. ನನ್ನನ್ನು ಸಲಹುವುದು ಅವರ ಕರ್ತವ್ಯವಾಗಿತ್ತು. ಮರಣಕಾಲದಲ್ಲಿ ನನ್ನವರು ನನಗೆ ಯಾವ ತೊಂದರೆಯನ್ನೂ ಕೊಡಕೂಡದೆಂದು ತಮ್ಮ

ಮಕ್ಕಳಿಗೆ ಹೇಳಿದ್ದರು; ಆದರೆ ಮಕ್ಕಳು, ಅವರು ಮಡಿದು ಒಂದು ತಿಂಗಳು ಗತಿಸುವ ಮುನ್ನ ನನ್ನನ್ನು ಮನೆಯಿಂದ ಹೊರಕ್ಕೆ ದೂಡಿದರು. ಉಪಜೀವನಕ್ಕೆ ಯಾವ ಮಾರ್ಗವನ್ನೂ ಕಲ್ಪಿಸಿ ಕೊಡಲಿಲ್ಲ. ನ್ಯಾಯಮಂದಿರಕ್ಕೆ ತೆರಳಿದರೆ ಉಪಜೀವನಕ್ಕಾಗಿ ಪತಿಕುಟುಂಬದಿಂದ ಏನಾದರೂ ಲಭಿಸಬಹುದು; ಆದರೆ ಸರಳಾ, ಅನಾಥೆಯೆನಿಸಿಕೊಂಡ ನನಗೆ ಒಂದು ವ್ಯವಹಾರವನ್ನು ನಡೆಯಿಸಲು ಹೇಗೆ ಸಾಧ್ಯವಾಗಬೇಕು? ನ್ಯಾಯ ದೊರೆಯಬೇಕಾದರೂ ಹಣಬೇಕು; ಹಣವನ್ನು ವ್ಯಯಗೊಳಿಸುವ ಬಲವಿದ್ದರೆ ಮಾತ್ರವೆ ನ್ಯಾಯದೇವತೆ ಪ್ರಸನ್ನಳಾಗುತ್ತಾಳೆ! ಕೈಯಲ್ಲಿ ಕಾಸಿಲ್ಲದ ವಿಧವೆ, ಹೇಗೆ ನ್ಯಾಯದೇವತೆಯ ಅನುಗ್ರಹವನ್ನು ಪಡೆಯುವುದು?

ಈಗ ಅಣ್ಣನನ್ನು ಶರಣು ಹೊಕ್ಕಿದ್ದೇನೆ. ೮ ಮುದುಕಿ ನನ್ನ ತಾಯಿ, ಮಮತೆಯ ಅಣ್ಣ, ಪುಟ್ಟಶ್ಯಾಮು ಈ ಮೂರು ಮಂದಿಯಲ್ಲದೆ ಇತರ ಬಂಧು-ಬಾಂಧವರಿಲ್ಲ ನನಗೆ. ನನ್ನ ಅಣ್ಣ ತನಗೆ ದೊರೆಯುತ್ತಿರುವ ಇಪ್ಪತ್ತು ರೂಪಾಯಿಗಳಿಂದ ನಾಲ್ಕುಮಂದಿಯ ಹೊಟ್ಟೆಗಳನ್ನು ತುಂಬುತ್ತಿದ್ದಾನೆ. ಮುಂದೆ ಏನುಮಾಡಬೇಕೆಂಬುದು ನನಗೆ ಹೊಳೆಯಲೊಲ್ಲದಾಗಿದೆ. ಸುತ್ತಲೂ ಕತ್ತಲೆ ಕವಿದಂತಾಗಿದೆ. ಹೊಟ್ಟೆಯನ್ನು ತುಂಬುವುದು ಹೇಗೆ? ಸರಳಾ, ಈಗಿನ ಸ್ಥಿತಿ-ಗತಿಗಳಿಂದ ನನಗೆ ಮನಃಸ್ವಾಸ್ಥ್ಯವೇ ಉಳಿಯದಂತಾಗಿದೆ.

ನನ್ನ ಈ ರಗಳೆಯಿಂದ ನಿನಗೆ ಬೇಸರವಾಗಬಹುದು; ನನ್ನ ಬಾಲ್ಯದ ಗೆಳತಿಯೆಂದು ಯೋಚಿಸು, ಈ ಸಂಗತಿಯನ್ನು ಮನಸ್ಸು ಬಿಚ್ಚಿ ಆಡಿರುವೆ. ಜೊಂಗುಸಿನ ಜೀವನವೆಂದರೆ ಅದೊಂದು ಕತ್ತಲೆಯ ನೆರಿಮನೆ!

ಕಳೆದ ಎರಡು-ಮೂರುದಿನಗಳಿಂದ ತಾಯಿಗೆ ಆರೋಗ್ಯವಿಲ್ಲ; ಸ್ವಲ್ಪ ಜ್ವರ ಬರುತ್ತಲಿದೆ. ನಾವೆಲ್ಲರೂ ಆರೋಗ್ಯದಲ್ಲಿದ್ದೇವೆ. ನಿನ್ನ ಕ್ಷೇಮವಾರ್ತೆಗಳನ್ನು ಆಗಾಗ ತಿಳಿಸುತ್ತಿರು.

ನಿನ್ನ
ಮುತ್ತು

೨

ಸರಳಾ ತಾ. ೨೫-೬-೨೯

ನೀನು ಮಮತೆಯಿಂದ ಒರೆದ ಓಲೆ ತಲುಪಿತು; ನನ್ನ ದುಃಖಮಯ ಜೀವನದಲ್ಲಿ ಅನುತಾಪವನ್ನು ಸೂಚಿಸಲು ಗೆಳತಿಯೊಬ್ಬಳಿರುವಳೆಂಬುದನ್ನು ನೆನೆವಾಗ, ಎದೆಯ ಉರಿಯು ನಸು ಕಡಿಮೆಯಾಯಿತು.

ಕಳೆದ ಕಾಗದದಲ್ಲಿ ಅಮ್ಮನಿಗೆ ಕಾಹಿಲೆಯೆಂಬುದನ್ನು ಸೂಚಿಸಿದ್ದೆನಷ್ಟೆ? ಮೊದಲು ಸ್ವಲ್ಪ ಜ್ವರವಿತ್ತು; ಈಗ ಕೆಮ್ಮಲೂ ಪ್ರಾರಂಭವಾಗಿದೆ. ಎದ್ದು ನಡೆಯಲಾಗುವುದಿಲ್ಲ; ದೇಹವು ಸೊರಗಿದೆ. ಆಕೆಯ ಕಾಹಿಲೆಯು ಪ್ರಬಲಿಸುತ್ತಿರುವುದನ್ನು ನೋಡುವಾಗ ನನಗೆ ದಿಗಿಲಾಗುತ್ತದೆ. ಅಣ್ಣ ದಿನವೂ ಜನರಲ್ ಆಸ್ಪತ್ರೆಯಿಂದ ಔಷಧಿ ತರುತ್ತಲಿದ್ದಾನೆ. ಆದರೆ ನೋಡು, ಆಸ್ಪತ್ರೆಯವರ ಕೈಗೆ ನಾಲ್ಕು ಕಾಸುಗಳು ಜೇಳದಿದ್ದರೆ ಒಳ್ಳೆಯ ಮದ್ದು ದೊರಕುವುದಿಲ್ಲ. ವೈದ್ಯರಿಗೆ ಹಣಕೊಡಲು ನಮ್ಮಿಂದ ಹೇಗೆ ಸಾಧ್ಯವಾಗುವುದು? ಬಡತನ! ಆಸ್ಪತ್ರೆಯ ಮದ್ದನ್ನು ಸೇವಿಸಿದುದರಿಂದ ತಾಯಿಯ ಕಾಹಿಲೆ ವಾಸಿಯಾಗಲಿಲ್ಲ. ದಿನದಿನಕ್ಕೂ ಅವರ ಕೆಮ್ಮಲು ಹೆಚ್ಚುತ್ತಲಿದೆ. ಏನು ಮಾಡಬೇಕೆಂಬುದು ನನಗೆ ತೋಚುವುದಿಲ್ಲ.

ತಾಯಿ, ಮೂರು ಮಂದಿಯನ್ನು ಹೆತ್ತು ಸಲಹಿ, ದೊಡ್ಡದು ಮಾಡಿದರು. ಅವರ ವೈದ್ಯಾಪ್ಯದಲ್ಲಿ ಸರಿಯಾಗಿ ಆರೈಕೆ ಮಾಡಲು ನಮಗೆ ಸಾಧ್ಯವಾಗುವುದಿಲ್ಲ. ಆಕೆ ಜ್ವರದಿಂದ ನರಳುತ್ತಿರುವಾಗ, ಹೊದೆಯಲು ಕಂಬಳಿ ಕೂಡ ಇಲ್ಲ. ನಿನ್ನೆ ಅಣ್ಣನು ಮೂರು ರೂಪಾಯಿಗಳನ್ನು ಕೊಟ್ಟು ಒಬ್ಬ ಡಾಕ್ಟರನ್ನು ಮನೆಗೆ ಕರೆದುಕೊಂಡು ಬಂದ. ಅವರು ಅಮ್ಮನ ದೇಹವನ್ನು ಪರೀಕ್ಷಿಸಿದ ಮೇಲೆ ತಲೆಯಲ್ಲಾಡಿಸಿ ನುಡಿದರು: 'ನ್ಯುಮೋನಿಯಾ ಆಗಿದೆ' ಎಂದು.

ನ್ಯುಮೋನಿಯಾ! ಮದ್ದು! ಹಣ! ಮೂರು ದಿನಗಳಿಗಾಗಿ ಉಪಯೋಗಿಸಲಿರುವ ಔಷಧಿಯ ಬೆಲೆ ೧ ರೂ. ೮ ಆಣೆಯಂತೆ. ಅಣ್ಣ ಹಣಕೊಟ್ಟು ಔಷಧಿಯನ್ನು ತೆಗೆದುಕೊಂಡು ಬಂದ. ಅಮ್ಮನಿಗೆ ಬಾರ್ಲಿಗಂಜಿಯನ್ನು ಆಹಾರವಾಗಿ ಕೊಡಬೇಕೆಂದು ಹೇಳಿದ್ದರು ಡಾಕ್ಟರರು. ಎಲ್ಲಿಂದ ಬಾರ್ಲಿ ಅಕ್ಕಿಯನ್ನು ತರುವುದು? ಕಳೆದ ತಿಂಗಳ ಸಾಲವನ್ನು ತೀರಿಸದುದರಿಂದ, ಅಂಗಡಿಯವನು ಈಗ ಸಾಮಗ್ರಿಗಳನ್ನು ನಮಗೆ ಸಾಲಕೊಡುತ್ತಲಿಲ್ಲ. ಈ ದಿನ ಬೆಳಿಗಿಗೆ ಯಾರಿಗೂ ಆಹಾರವಿಲ್ಲ; ಕಾರಣವೆಂದರೆ ಅಕ್ಕಿ ತೀರಿ ಹೋಗಿತ್ತು. ಶ್ಯಾಮು ಬರಿಹೊಟ್ಟೆಯಲ್ಲಿ ಶಾಲೆಗೆ ಹೋದ; ಅಣ್ಣ ಹಸಿದುಕೊಂಡು ಅಂಗಡಿಗೆ ತೆರಳಿದ. ಹೀಗೆ ಒಂದು ವಾರದಲ್ಲಿ ಒಂದೆರಡು ಏಕಾದಶಿಗಳನ್ನು ಮಾಡಬೇಕಾಗಿಯೆ ಬರುತ್ತದೆ.. ನಮಗೆ.

ಇದೆಲ್ಲಾ ಬರೆಯುವುದರಿಂದ ನಿನಗೆ ಬೇಸರವಾಗಬಹುದು. ಆದರೆ ಸರಳಾ, ನಾವು ಅನುಭವಿಸುತ್ತಿರುವ ಸಂಕಟಗಳನ್ನು ನಿನಗಲ್ಲದೆ ಬೇರಿನ್ನಾರಿಗುಸುರಿ ಎದೆಯ ಭಾರವನ್ನು ಇಳುಹಿಕೊಳ್ಳಲಿ?

ನಿನ್ನ
ಮುತ್ತು

೩

ಗೆಳತಿ, ತಾ. ೭-೯-೨೯

ನೀನು ಕಳುಹಿದ ಐದು ರೂಪಾಯಿಗಳು ತಲುಪಿದುವು. ಈ ಉಪಕಾರಕ್ಕೆ ಕೃತಜ್ಞಳಿರುವೆ ನಾನು. ನೀನು ಕಳುಹಿದ ಐದು ರೂಪಾಯಿಗಳಿಂದ ಒಂದು ಕಂಬಳಿಯನ್ನೂ, ಒಂದು ದುಪ್ಪಟಿಯನ್ನೂ ಕ್ರಯಕ್ಕೆ ತೆಗೆದುಕೊಂಡೆ. ಅಮ್ಮನ ಕಾಹಿಲೆ ವಾಸಿಯಾಗಿರುವುದಿಲ್ಲ. ಆವರಿಗೆ ತೇವು ತಟ್ಟಕೂಡದೆಂದು ಡಾಕ್ಟರರು ಹೇಳಿದ್ದರು; ಆದುದರಿಂದ ಕಂಬಳಿಯನ್ನೂ ದುಪ್ಪಟಿಯನ್ನೂ ತೆಗೆದುಕೊಂಡು, ಅವುಗಳನ್ನು ಅಮ್ಮನಿಗೆ ಹೊದಿಸಿದೆ. ನೀನು ಐದುರೂಪಾಯಿಗಳನ್ನು ಕಳುಹಿದೆಯೆಂಬ ಸಂಗತಿಯನ್ನು ಆಕೆಗೆ ಅರುಹಲು, ಅವರ ಕಣ್ಣುಗಳಲ್ಲಿ ನೀರು ತುಂಬಿತು. ಮೆಲ್ಲನೆ 'ಆ

ಹುಡುಗಿಗೆ ದೇವರು ಒಳ್ಳೆಯದನ್ನು ಮಾಡಲಿ' ಎಂದು ನುಡಿದರು. ಮಾತನಾಡಲು ತ್ರಾಣವಿಲ್ಲದಿದ್ದರೂ, ತಾಯಿ ಬಹು ಶ್ರಮಪಟ್ಟು ನಿನ್ನ ಕ್ಷೇಮವಾರ್ತೆಗಳನ್ನು ಕೇಳಿ ತಿಳಿದುಕೊಂಡರು. ಆಕೆ ನಿನ್ನನ್ನು ನೋಡ ಬಯಸುತಿದ್ದಾರೆ; ನೀನು ತಂದೆ ಮನೆಗೆ ಬರುವಾಗ ತಪ್ಪದೆ ಇಲ್ಲಿಗೆ ಬಾ.

ನಮ್ಮ ಕೈಯಲ್ಲಾಗುವ ಎಲ್ಲಾ ಆರಯಿಕೆಗಳನ್ನೂ ಮಾಡುತ್ತಿದ್ದೇವೆ; ಅಮ್ಮನಿಗೆ ಕಾಹಿಲೆಯಾದಂದಿನಿಂದ ಅಣ್ಣ ಮಧ್ಯಾಹ್ನ ಹೋಟೆಲಿನಲ್ಲಿ ಚಹ ಕುಡಿಯುವುದನ್ನೂ ನಿಲ್ಲಿಸಿರುತ್ತಾನೆ. ಪಾಪ, ಅವನು ಪಡುತ್ತಿರುವ ತೊಂದರೆಗಳು ಅಷ್ಟಿಷ್ಟಲ್ಲ. ಬೆಳಗು ಒಂದು ತುತ್ತು ಅನ್ನ ತಿಂದುಕೊಂಡು ಸಾಹುಕಾರನ ಅಂಗಡಿಗೆ ತನಗೆ ಒಂದು ಅಂಗಿ ಬೇಕೆಂದು ಅಂಗಲಾಚಿ ಬೇಡಿದ. ಸರಳಾ, ನೀನೇ ಆಲೋಚಿಸು, ಆ ಕಂದನಿಗೆ ಏನೆಂದು ಉತ್ತರ ಹೇಳಲಿ? ಅವನ ಬೇಡಿಕೆಯನ್ನು ಕೇಳುವಾಗ ನನ್ನ ಕಣ್ಣುಗಳಲ್ಲಿ ನೀರು ತುಂಬಿತು; ಉಕ್ಕಿಬರುತ್ತಿರುವ ಕಂಬನಿಯನ್ನು ತಡೆಯಲು ಪ್ರಯತ್ನಿಸಿದೆ. ಆದರೆ ಅದು ಸಾಧ್ಯವಾಗಲಿಲ್ಲ; ಶ್ಯಾಮು ನನ್ನ ಕಣ್ಣುಗಳಲ್ಲಿ ನೀರು ತುಂಬಿರುವುದನ್ನು ನೋಡಿದ. ಆವನು ನನ್ನ ಕೈಯನ್ನು ಹಿಡಿದು ಮರುಕದಿಂದ ಹೀಗೆ ನುಡಿದ: ''ಅಕ್ಕ, ನೀನು ಅಳುತ್ತಿರುವುದೇಕೆ?''

''ಇಲ್ಲ, ನಾನು ಅಳುತ್ತಿಲ್ಲ.'' ನೀರೆಯ ಸೆರಗಿನಿಂದ ಕಣ್ಣುಗಳನ್ನು ಒರಸಿಕೊಂಡೆ.



ಶ್ಯಾಮುವಿನ ಬೆನ್ನಮೇಲೆ ಗುದ್ದುಬಿದ್ದುದನ್ನು ನೋಡಿ, ಸುಮ್ಮನಿರಲು ಅಣ್ಣನಿಗೆ ಸಾಧ್ಯವಾಗಲಿಲ್ಲ.. ಮನುಷ್ಯನ ಸಹನಶಕ್ತಿಗೆ ಒಂದು ಮೇರೆಯಿದೆ.

ಹೋದರೆ, ಹಿಂದಿರುಗಿ ಮನೆಗೆ ಬರುವಾಗ ರಾತ್ರಿ ಎಂಟು ಗಂಟೆಯಾಗುತ್ತದೆ. ಅಮ್ಮನಿಗೆ ಕಾಹಿಲೆಯಾಗುವ ಮುನ್ನ ಅಣ್ಣ ಮಧ್ಯಾಹ್ನ ಹೋಟೆಲಿನಲ್ಲಿ ಒಂದಿಷ್ಟು ಚಹಾ ಕುಡಿಯುತ್ತಿದ್ದ. ಆದರೆ ಈಗ ದಿನವೆಲ್ಲ ಉಪವಾಸವಿದ್ದು ದಣಿದು ಮನೆಗೆ ಹಿಂದಿರುಗಿ ಬರುತ್ತಿರುವ ಅವನನ್ನು ಕಾಣುತ್ತಲೆ ನನ್ನ ಎದೆಯು ಉರಿಯುತ್ತದೆ. ಈ ಕುಟುಂಬ ಭಾರದಿಂದ ಅವನ ದೇಹವು ಕಂಗಾಲಾಗಿದೆ.

ಶ್ಯಾಮು,—ಪಾಪ, ಅವನ ಅಂಗಿಯೆಲ್ಲ ಹರಿದುಹೋಗಿದೆ. ಅವನ ಹರುಕಲು ಅಂಗಿಯನ್ನು ನೋಡಿ, ಶಾಲೆಯಲ್ಲಿ ಇತರ ಹುಡುಗರು ಹಾಸ್ಯಮಾಡುವರಂತೆ. ನಿನ್ನೆಯ ದಿನ ಆತ ಈ ಸಂಗತಿಯನ್ನು ಹೇಳಿದ; ಕಣ್ಣುಗಳಲ್ಲಿ ನೀರು ತಂದುಕೊಂಡು

''ಸುಳ್ಳು; ನೀನು ಅಳುತ್ತಿರುವೆ!''

''ಇಲ್ಲ!''

''ಅಕ್ಕ ನಂಗೆ ಅಂಗಿಯೇ ಬೇಡ!''

''ಯಾಕೆ, ಶ್ಯಾಮು?''

''ಬೇಡ, ಅಂಗಿ ಬೇಕೆಂದು ಕೇಳಿದರೆ ನೀನು ಅಳುತ್ತೀಯೆ! ನನಗೆ ಹರುಕಲು ಅಂಗಿಯೇ ಸಾಕು!'' ಪಾಪ, ಅವನಿಗೂ ಗೊತ್ತು ನಮ್ಮ ತೊಂದರೆಗಳು.

ಅಣ್ಣನಿಗೂ ಮನಶ್ಶಾಂತಿಯಿಲ್ಲ; ಅಮ್ಮನ ಕಾಹಿಲೆಯು ಅವನಿಗೆ ಒಂದು ದೊಡ್ಡ ಚಿಂತೆಯಾಗಿದೆ. ಈ ತಿಂಗಳ ಸಂಬಳವೆಲ್ಲ ಡಾಕ್ಟರರಿಗೆ ಕೊಟ್ಟು ತೀರಿತು. ಮನೆಯ ಬಾಡಿಗೆಯನ್ನು ಕಳೆದ

ಎರಡು ತಿಂಗಳು ಕೊಟ್ಟೆಲ್ಲ. ಈ ದಿನ ಬೆಳಗಾಗುತ್ತಲೆ ಮನೆಯ ಮಾಳೀಕನು ಬಂದು ಬಾಡಿಗೆ ಕೊಡದಿದ್ದುದಕ್ಕಾಗಿ ಅಣ್ಣನನ್ನು ಹೀಯ್ಯಾಳಿಸಿ ನುಡಿದ. ಅಣ್ಣನು ಮಾಲೀಕನ ನಿಂದೆಯಿಂದ ಸಿಟ್ಟಿಗೇಳದೆ, ಬಾಡಿಗೆ ಹಣವನ್ನು ನಿಲ್ಲಿಸಬೇಕೆಂದು ನಿಂಗಪ್ಪನನ್ನು—ಮಾಲೀಕನ ಹೆಸರಿದು—ಬೇಡಿಕೊಂಡ. ಆದರೆ ನೋಡು, ಈ ಹಣಗಾರರಿಗೆ ದಯೆಯೆಂಬುದು ಎಳ್ಳಷ್ಟಿಲ್ಲ; ಅವರ ಎದೆಗಳು ಕಗ್ಗಲ್ಲುಗಳಾಗಿರಬಹುದು! ನಮ್ಮ ತೊಂದರೆಗಳನ್ನು ಬಲ್ಲ ಆ ಹಣಗಾರ, ಅಣ್ಣನ ಬೇಡಿಕೆಯನ್ನು ಸ್ವೀಕರಿಸಲಿಲ್ಲ; ಮನಸ್ವಿಯಾಗಿ ಅಣ್ಣನನ್ನು ತೆಗಳಿದ. ಇನ್ನೊಂದು ವಾರದೊಳಗಾಗಿ ಬಾಡಿಗೆ ಹಣವನ್ನು ಕೊಡದಿನ್ನರೆ, ನಮ್ಮನ್ನೆಲ್ಲಾ ಮನೆಯಿಂದ ಹೊರಕ್ಕೆ ಹಾಕುವೆನೆಂದು ಬೆದರಿಸಿದ್ದಾನೆ ಆತ.

ಈ ಘಟನೆಗಳೆಲ್ಲಾ ಒಂದೊಂದು ಮುಳ್ಳುಗಳಂತೆ ತೀವ್ರವಾಗಿ ನನ್ನ ಎದೆಯನ್ನು ಜುಚ್ಚುತ್ತಲಿರುವುವು. ಈ ನರಕದ ಬಾಳನ್ನು ಅನುಭವಿಸುವುದಕ್ಕಾಗಿಯೆ ದೇವರು ಈ ಹುಳುಗಳನ್ನು ಸೃಷ್ಟಿಸಿದನೇ? ನಮಗೆ ಬಂದೊದಗುತ್ತಿರುವ ಸಂಕಟಗಳನ್ನು ನೋಡುವಾಗ ನನಗೆ ದೇವರಲ್ಲಿರುವ ವಿಶ್ವಾಸ ಹಾರಿಹೋಗುತ್ತಲಿದೆ? ಸತ್ಯ-ನೀತಿಗಳನ್ನು ನಾವು ಬಿಟ್ಟು ಸಂಚರಿಸುತ್ತಲಿಲ್ಲ; ಆದರೂ ಹೊಸ ಆಪತ್ತುಗಳು! ನಮ್ಮ ಮನೆಯ ಪಕ್ಕದಲ್ಲಿರುವ ಯಶವಂತ ರಾಯರು ನಿನಗೆ ಗೊತ್ತಿರಬಹುದು. ಅವರು ಸುಳ್ಳಾಡದ ದಿನವಿಲ್ಲ; ೫೫ ರೂಪಾಯಿಗಳನ್ನು ಕೊಟ್ಟು ೧೦೦ ರೂಪಾಯಿಗಳಿಗೆ ಪ್ರೋನೋಟು ಬರೆಯಿಸಿಕೊಳ್ಳುತ್ತಿದ್ದಾರೆ; ಇನ್ನೊಬ್ಬರ ಆಸ್ತಿಯನ್ನು ತಮ್ಮದೆಂದು ವಾದಿಸುತ್ತಿದ್ದಾರೆ. ಅವರಿಗೆ ಯಾವ ಅನರ್ಥಗಳೂ ಬರುವುದಿಲ್ಲ; ಅವರ ಸಂಪತ್ತು ದಿನದಿನಕ್ಕೂ ಹೆಚ್ಚುತ್ತಲಿದೆ. ಸತ್ಯವನ್ನು ಹಿಡಿದು ನಡೆವವರಿಗೆ ನರಕದ ವಾಸ; ಅಸತ್ಯ-ಅನ್ಯಾಯಗಳನ್ನು ಆಚರಿಸುತ್ತಿರುವವರಿಗೆ ಸ್ವರ್ಗವಿದು! ಈ ವೈಪರೀತ್ಯಗಳಿಗೆಲ್ಲಾ ಕಾರಣವೇನು?

ತಂಗೀ ನರಳಾ, ನಾನು ಮನಬಿಚ್ಚಿ ನುಡಿಯುವುದನ್ನು ಕಂಡು ಕೋಪಗೊಳ್ಳಬೇಡ; ದಿಗಿಲುಪಡಬೇಡ. ನಾವು ಅನುಭವಿಸುತ್ತಿರುವ ಸಂಕಟಗಳನ್ನು ಕುರಿತು ಆಲೋಚಿಸುವಾಗ, ನನ್ನ ಮೆದುಳಿನಲ್ಲಿ ಈ ವಿಚಾರಗಳೆಲ್ಲಾ ಮೂಡುತ್ತವೆ; ಈ ಪ್ರಶ್ನೆಗಳೆಲ್ಲಾ ಉದ್ಭವಿಸುತ್ತವೆ. ಹಲವು ಸಲ ಈ ಪ್ರಪಂಚಕ್ಕೆ ಯಾವ ವ್ಯವಸ್ಥೆಯೂ ಇಲ್ಲವೆಂದು ನನಗೆ ತೋಚುತ್ತಲಿದೆ; ಸತ್ಯ, ನ್ಯಾಯ, ಧರ್ಮ ಇವುಗಳೆಲ್ಲಾ ಬರೀ ಜೊಳ್ಳುಪಾತುಗಳೆಂದು ನನಗೆ ಎನಿಸುತ್ತಲಿದೆ. ಈಗ ಬಿಡುಗಾಳಿಯಲ್ಲಿ ಸಿಕ್ಕಿ ನಾವು ಸಂಕಟಪಡುತ್ತಿದ್ದೇವೆ; ಈ ಗಾಳಿಯಿಂದ ನನಗೆ ಕಣ್ಣಾ ಕಾಣದಂತಾಗಿದೆ. ಕತ್ತಲೆಯಲ್ಲದೆ ಇನ್ನಾವುದೂ ಗೋಚರಿಸುತ್ತಲಿಲ್ಲ. ಕುನ್ನಿಬಾಳಿಗೂ, ನಮ್ಮ ಒಡಂಬಿಕಿಗೂ ಯಾವ ವ್ಯತ್ಯಾಸವೂ ಇಲ್ಲ. ಕುನ್ನಿಗೆ ಬುದ್ಧಿಯಿಲ್ಲ; ನಮಗೆ ಆಲೋಚಿಸುವ ಶಕ್ತಿಯಿದೆ. ಈ ಆಲೋಚನೆಯ ಶಕ್ತಿ ಎದೆಯಲ್ಲಿ ಉರಿಯುತ್ತಿರುವ ಕಿಚ್ಚನ್ನು ಇನ್ನಿಷ್ಟು ತೀವ್ರವಾಗಿ ಪ್ರಜ್ವಲಿಸುವಂತೆ ಮಾಡುತ್ತಲಿದೆ!

ಸದ್ಯ ಇಷ್ಟು ಸಾಕು; ಇನ್ನು ಮುಂದೆಯೂ ಆಗಾಗ ಬರೆಯುತ್ತಲಿರು.

ನಿನ್ನ
ಮುತ್ತು

ತಂಗೀ, ತಾ. ೨೪-೯-೧೯೩೯

ಒಂದೊಂದು ದಿನವು ಕಳೆದಂತೆ ಅಮ್ಮನ ಕಾಹಿಲೆಯು ಹೆಚ್ಚುತ್ತಲಿದೆ. ಈಗ ಹಾಸಿಗೆಯಲ್ಲಿ ಎದ್ದು ಕುಳಿತುಕೊಳ್ಳಲು ಆಕೆಗೆ ಸಾಧ್ಯವಾಗುವುದಿಲ್ಲ. ಕೆಮ್ಮಲು ಹೆಚ್ಚಾಗಿದೆ; ಕಫದೊಡನೆ ರಕ್ತವು ಬರುತ್ತಲಿದೆ. ನಿನ್ನೆಯ ದಿನ ಅಣ್ಣನು ಕರೆದುಕೊಂಡು ಬಂದಿದ್ದ ಡಾಕ್ಟರರು, ತಾಯಿ ಇನ್ನು ಬದುಕುವ ಆಶೆಯಿಲ್ಲವೆಂಬುದನ್ನು ಸೂಚಿಸಿದರು. ಅಮ್ಮ ಮಡಿಯುವರು ಎಂಬುದನ್ನು ಕುರಿತು ನನಗೆ ಹೆಚ್ಚಿನ ಶೋಕವಿಲ್ಲ. ಎಲ್ಲ ಜೀವಿಗಳೂ ಕೊನೆಯಲ್ಲಿ ಸಾಯುತ್ತವೆ; ಇದು ಸೃಷ್ಟಿಯಲ್ಲಿ ಅಡಗಿರುವ ಒಂದು ಕಟ್ಟಳೆ; ಇದನ್ನು ಮಾರಲು ಮನುಷ್ಯನಿಗೆ ಈ ವರೆಗೆ ಸಾಧಿಸಿರುವುದಿಲ್ಲ. ಆದರೆ ನನ್ನ ಎದೆಯನ್ನು ಸುಡುತ್ತಿರುವುದು ಕಳೆದ ಒಂದು ತಿಂಗಳಿನಿಂದ ಕಾಹಿಲೆಯಾಗಿ ಹಾಸಿಗೆಯನ್ನು ಹಿಡಿದ ಅಮ್ಮನನ್ನು, ಉಚಿತರೀತಿಯಲ್ಲಿ ಆರಯಿಕೆಮಾಡಲು ನಮ್ಮಿಂದ ಸಾಧ್ಯವಾಗಲಿಲ್ಲವಲ್ಲಾ—ಎಂಬ ಚಿಂತೆ.

ಹೆತ್ತ ತಾಯಿ; ಈ ವರೆಗೆ ಮೂರುಮಂದಿ ಮಕ್ಕಳನ್ನು ಸಲಹಿ ದೊಡ್ಡವರನ್ನಾಗಿ ಮಾಡಿದವಳು. ಚಿಕ್ಕಂದಿನಲ್ಲಿ ತಂದೆ ತೀರಿ ಹೋಗಲು, ಪಡಬಾರದ ಕಷ್ಟಗಳನ್ನು ಅನುಭವಿಸಿ, ಇನ್ನೊಬ್ಬರ ಮನೆಯಲ್ಲಿ ದಾಸಿಯಾಗಿದ್ದು, ಆ ವೃತ್ತಿಯಿಂದ ಲಭ್ಯವಾಗಬಹುದಾದ ಅಲ್ಪ ಸಂಪಾದನೆಯಿಂದ ನಮ್ಮನ್ನು ಸಾಕಿದಳು. ನನಗೂ, ಅಣ್ಣನಿಗೂ ವಿದ್ಯಾಬುದ್ಧಿಗಳನ್ನು ಕಲಿಸಿದಳು. ಮಕ್ಕಳು ಉಂಡ ನಂತರ ಎಷ್ಟೊ ಸಾರಿ, ಆಕೆಯ ಹಸಿವೆಯನ್ನಡಗಿಸಲು ಅನ್ನವೇ ಉಳಿಯುತ್ತಿರಲಿಲ್ಲ. ಎಷ್ಟೊ ಏಕಾದಶಿಗಳನ್ನೂ, ಷಷ್ಠಿಗಳನ್ನೂ ಒಂದು ವಾರದಲ್ಲಿ ಆಕೆ ಮಾಡಬೇಕಾಗಿ ಬರುತ್ತಿದ್ದಿತು. ಈ ತೊಂದರೆಗಳನ್ನೆಲ್ಲಾ ತಾಯಿ ಯಾರಿಗೂ ತಿಳಿಸುತ್ತಿರಲಿಲ್ಲ. ಹೀಗೆ ನಮ್ಮನ್ನು ದೊಡ್ಡವರನ್ನಾಗಿ ಮಾಡಲು ಹಲವು ಸಂಕಟಗಳನ್ನು ಅನುಭವಿಸಿದ ತಾಯನ್ನು ಸರಿಯಾಗಿ ಆರಯಿಕೆ ಮಾಡಲು ನಮ್ಮಿಂದ ಸಾಧ್ಯವಾಗುವುದಿಲ್ಲವಲ್ಲಾ...ಎಂಬುದನ್ನು ವಿಚಾರಿಸುವಾಗ, ನನ್ನ ಎದೆಯನ್ನು ಸೀಳಿದಂತಾಗುತ್ತದೆ.

ಕಳೆದ ಕಾಗದದಲ್ಲಿಯೇ ಮನೆಯ ಯಜಮಾನನು ಬಾಡಿಗೆ ಹಣವನ್ನು ಕೊಡದಿದ್ದುದಕ್ಕೆ ಅಣ್ಣನನ್ನು ಹೇಗೆ ನಿಂದಿಸಿದನೆಂಬುದನ್ನೂ, ಇನ್ನೊಂದು ವಾರದೊಳಗೆ ಹಣಕೊಡದಿದ್ದರೆ ಮನೆಯಿಂದ ನಮ್ಮನ್ನು ಹೊರದೂಡುವೆನೆಂದು ಹೆದರಿಸಿದುದನ್ನೂ ಬರೆದಿದ್ದೆನಷ್ಟೆ. ಈಗ ಅವನ ಗಲಾಟೆ ವಿಪರೀತವಾಗಿದೆ. ನಿನ್ನೆಯ ದಿನ ಅವನು ಬಂದಿದ್ದ; ರಾತ್ರಿ ಒಂಭತ್ತು ಗಂಟೆಯಾಗಿರಬಹುದು. ಅಣ್ಣ ತಾಯ ಹಾಸಿಗೆಯ ಪಕ್ಕದಲ್ಲಿ ಕುಳಿತು ಅಮ್ಮನ ಕಾಲುಗಳನ್ನು ಒತ್ತುತ್ತಲಿದ್ದ. ಅಮ್ಮನಿಗೆ ಆಗ ದೇಹದಲ್ಲಿ ಸರಿಯಾದ ಪ್ರಜ್ಞೆಯಿರಲಿಲ್ಲ. ನಾನು ಅಡಿಗೆಯ ಕೋಣೆಯಲ್ಲಿ ರಾತ್ರಿಯ

ಓಟದ ವಿಷಯಾಡುಗಳನ್ನು ಮಾಡುತ್ತಿದ್ದೆ. ಶ್ಯಾಮೂ ನಡುಮನೆಯಲ್ಲಿ ದೀಪದಮುಂದೆ ಕುಳಿತು ಆ ದಿನದ ಪಾಠಗಳನ್ನು ಓದುತ್ತಲಿದ್ದ.

"ರಾಮಕೃಷ್ಣ ಮನೆಯೊಳಗಿರುವನೇ?" ಎಂಬ ಗರ್ಜನೆ ಯೊಂದು ಹೊರಗಿನಿಂದ ಕೇಳಿಬಂದಿತು. "ಇದ್ದಾನೆ" ಎಂದು ಪಾಠಗಳನ್ನು ಓದುತಿದ್ದ ಶ್ಯಾಮು ಉತ್ತರಕೊಟ್ಟ. ಇನ್ನೊಂದು ನಿಮಿಷದಲ್ಲಿಯೆ ಹೊರಗೆ ಸಪ್ಪಳವಾಡುತ್ತಿದ್ದ ವ್ಯಕ್ತಿಯು ಮನೆ ಒಳಗೆ ಪ್ರವೇಶಿಸಿತು. ಅವ ನಿಂಗಪ್ಪನಲ್ಲದೆ ಬೇರೆ ಯಾರೂ ಆಗಿರಲಿಲ್ಲ. ಆತ ಮನೆಯೊಳಗೆ ಬಂದು "ರಾಮಕೃಷ್ಣನೆಲ್ಲಿ?" ಎಂದು ಪುನಃ ಗಟ್ಟಿಯಾಗಿ ಕೇಳಿದ.

ಈ ಗಲಾಟೆಯನ್ನು ಕೇಳಲು, ತಾಯಿ ಕಾಲುಗಳನ್ನು ಒತ್ತುತ್ತಿದ್ದ ಅಣ್ಣ ತನ್ನ ಕೆಲಸವನ್ನು ನಿಲ್ಲಿಸಿ ಹೊರಗೆ ಬಂದ. ಅಣ್ಣನನ್ನು ಕಾಣುತ್ತಲೆ ನಿಂಗಪ್ಪನ ಸಿಟ್ಟು ಜಾಸ್ತಿಯಾಯಿತು; ಸ್ವಲ್ಪ ಸರಾಯಿ ಕುಡಿದುಕೊಂಡೂ ಬಂದಿದ್ದನೆಂದು ತೋರುತ್ತದೆ. "ಲೋ, ಸೂಳೆಮಗನೆ, ನನ್ನ ಮನೆಬಾಡಿಗೆ ಕೊಡು; ಇಲ್ಲದಿದ್ದರೆ ಈ ಕ್ಷಣದಲ್ಲಿಯೇ ಮನೆಬಿಟ್ಟು ಹೊರಡು." ಎಂದು ಕೂಗಿದ.

ನಿಂಗಪ್ಪನ ಈ ಮಾತುಗಳನ್ನು ಕೇಳಲು ಅಣ್ಣನಿಗೆ ಸ್ವಲ್ಪ ಸಿಟ್ಟು ಬಂದಿತು; ಆದರೂ ಅವನು ತನ್ನ ಕೋಪವನ್ನು ತಡೆದುಕೊಂಡ. ಅದಷ್ಟು ಸೌಮ್ಯಸ್ವರದಲ್ಲಿಯೆ ನುಡಿದ. "ನಿಂಗಪ್ಪನವರೇ, ಸಿಟ್ಟಾಗಬೇಡಿ; ಬಾಡಿಗೆಹಣವನ್ನು ಅದಷ್ಟು ಬೇಗನೆ ತೀರಿಸಬೇಕೆಂದಿರುವೆ. ಬಂದೊದಗಿದ ಆಪತ್ತನ್ನು ತಡೆಯಲು ಯಾರಿಗೆ ಶಕ್ಯವಿದೆ? ತಾಯಿ ಕಾಹಿಲೆಯಿಂದ ಹಾಸಿಗೆಯನ್ನು ಹಿಡಿದಿದ್ದಾರೆ; ಅವರ ಆರಯಿಕೆಗೆ ಈ ತಿಂಗಳ ಸಂಬಳ ವೆಚ್ಚವಾಯಿತು. ಸ್ವಲ್ಪ ತಡೆಯಿರಿ, ಮುಂದಿನ ತಿಂಗಳಲ್ಲಿ ನಿಮಗೆ ಕೊಡಬೇಕಾದುದನ್ನು ಕೊಟ್ಟು ತೀರಿಸುತ್ತೇನೆ!"

ಅಣ್ಣನ ಈ ಬಿನ್ನಹದಿಂದೇನೂ ನಿಂಗಪ್ಪನ ಸಿಟ್ಟು ಕಡಿಮೆಯಾಗಲಿಲ್ಲ. ಮೊದಲಿಗಿಂತ ಬಿರುಸಾಗಿ ಅವ ಮಾತನಾಡಲು ಪ್ರಾರಂಭಿಸಿದ: "ಲೋ, ಬದ್ಮಾವ್! ನಿನ್ನ ಕುತಂತ್ರಗಳಿಗೆ ಬೆರಗಾಗುವವರಿ ನಾನಲ್ಲ. ನಿನ್ನ ತಾಯಿಗೆ ಕಾಹಿಲೆಯಾದರೆ, ಅವಳನ್ನು ಆರಯಿಕೆಮಾಡುವುದು ನಿನ್ನ ಕರ್ತವ್ಯ. ನಿನ್ನ ಪುರಾಣ ಕೇಳಿಕೊಂಡು ನನಗೇನಾಗಬೇಕು? ಊರ ಜನರ ಕಷ್ಟಸುಖಗಳನ್ನು ತಿಳಿಯಬೇಕಾದ ಅವಶ್ಯಕತೆ ನನಗಿಲ್ಲ. ನನಗೆ ಬೇಕಾದುದು ಮನೆಯ ಬಾಡಿಗೆ; ಇಂದಿಗೆ ತಾರೀಕು ಇಪ್ಪತ್ತಾದುವು; ಇನ್ನು ತಾಳಲು ಸಾಧ್ಯವಿಲ್ಲ. ಈಗಲೆ ಹಣಕೊಡು; ಇಲ್ಲದಿದ್ದರೆ ಮನೆ ಬಿಟ್ಟು ಹೋಗು!"

"ನಿಂಗಪ್ಪನವರೇ, ನೀವು ಹೀಗೆ ಹೇಳಿದರೆ ಹೇಗೆ? ತಾಯಿಗೆ ಕಾಹಿಲೆ; ಪ್ರಾಣಹೋಗುವುದು ಈಗಲೋ ಇನ್ನೊಂದು ಗಳಿಗೆ ಯಲ್ಲಿಯೋ ಎಂಬ ಅವಸ್ಥೆಗೆ ಅವರು ತಲುಪಿದ್ದಾರೆ. ಇಂತಹ ಹೊತ್ತಿನಲ್ಲಿ ಮನೆಬಿಟ್ಟು ಹೋಗಬೇಕೆಂದು ನೀವು ಹೇಳಿದರೆ, ತಾಯಿಯನ್ನು ಕರೆದುಕೊಂಡು ಎಲ್ಲಿಗೆ ತೆರಳಲಿ? ಹೇಗಿದ್ದರೂ ಈ ತಿಂಗಳು ಇಪ್ಪತ್ತನೆಯ ತಾರೀಕಿನ ವರೆಗೆ ಕಾದಿರಿ; ಇನ್ನೊಂದು ಹದಿನೈದು ದಿನಗಳ ತನಕ ತಡೆಯಕೂಡದೇ? ನೀವು ತಿಳಿದವರು; ನಿಮಗೂ ತಾಯಿ ಇದ್ದಾರೆ; ಮಕ್ಕಳೂ ಇದ್ದಾರೆ. ಈ ವರೆಗೆ ಬಾಡಿಗೆ ಹಣವನ್ನು ನಿಮಗೆ ಸರಿಯಾಗಿ ಸಲ್ಲಿಸುತ್ತಾ ಬಂದಿದ್ದೇನೆ. ಈ ಎರಡು ತಿಂಗಳುಗಳಿಂದ ಮಾತ್ರ ಸಾಧ್ಯವಾಗಲಿಲ್ಲ. ದಯೆ ತೋರಿಸಿರಿ: ನಾವು ಹಣಗಾರರಲ್ಲ; ಬಡವರು."

"ನಿನ್ನ ಪುರಾಣಕೇಳಲಿಕ್ಕೆ ನನಗೆ ಸಮಯವಿಲ್ಲ; ನಿನಗೆ ನಾನು ದಯೆ ತೋರಿಸಬೇಕಾದ ಅವಶ್ಯಕತೆಯೇನು? ನೀನೇನೂ ನನ್ನ ಅತ್ತೆಯ ಮಗನಲ್ಲ. ಮರ್ಯಾದೆಯಿಂದ ನಾನು ನಿನಗೆ ಹೇಳುವುದಿಷ್ಟೆ; ನನ್ನ ಹಣ ಕೊಡು. ಇನ್ನೊಂದು ದಿನ ತಡಮಾಡಲು ನನಗೆ ಸಾಧ್ಯವಿಲ್ಲ. ನಿನಗೆ ನಿನ್ನ ತೊಂದರೆಗಳಿರುವಂತೆಯೇ, ನನಗೂ ನನ್ನ ತೊಂದರೆಗಳಿವೆ. ಇದುವರೆಗೆ ತಡೆದುದು ನನ್ನ ತಪ್ಪು. ರಾಮಕೃಷ್ಣಾ, ಒಳ್ಳೆಯ ಮಾತಿನಲ್ಲಿ ನಾನು ಹೇಳುತ್ತಿದ್ದೇನೆ; ಇದೇನೂ ನಿನ್ನ ಆಜ್ಞೆ ಸಂಪಾದಿಸಿದುದಲ್ಲ. ಈಗ ನಾನು ಹೇಳಿದುದನ್ನು ಕೇಳು; ಅನಂತರ ಗಲಾಟೆಯಾದರೆ ನನ್ನನ್ನು ಹೇಳಿ ಪ್ರಯೋಜನವಿಲ್ಲ!" ತನ್ನ ಮರ್ಕಟಮುಷ್ಟಿಯನ್ನು ಬಿಡದೆ ನಿಂಗಪ್ಪನಾಡುತ್ತಿರುವುದನ್ನು ನಾನು ಕೇಳಿದೆ. ಅಣ್ಣನು ನಿಂಗಪ್ಪನನ್ನು ಹಲವು ರೀತಿಗಳಲ್ಲಿ ಬೇಡಿಕೊಂಡರೂ ಯಾವ ಪ್ರಯೋಜನವೂ ಆಗಲಿಲ್ಲ. ಇನ್ನೇನು ಅನಾಹುತ ಜರುಗುವುದೋ ಎಂದು ನನಗೆ ದಿಗಿಲಾಯಿತು; ಅಡಿಗೆ ಕೋಣೆಯ ಬಾಗಿಲುಗಳ ಬಳಿಗೆ ಬಂದು ಇಣಿಕಿ ನೋಡಿದೆ.

"ಲೋ ಜಾರಪ್ಪ" ನಿಂಗಪ್ಪನು ಹೇಳುತ್ತಿದ್ದ; ಥಾಂಡಿಗ ನಾಡ ಒಬ್ಬ ಆಳುಮಗನು ಮನೆಯೊಳಗೆ ಪ್ರವೇಶಿಸುತ್ತಿರುವುದನ್ನು ನಾನು ನೋಡಿದೆ.

"ಏನು ಬುದ್ಧಿ" ಎಂದು ಪ್ರಶ್ನಿಸಿದ; ಮನೆಯೊಳಗೆ ಪ್ರವೇಶಿಸಿದ ಆಳುಮಗ.

"ನಿಂಗಪ್ಪನವರೇ, ಹೀಗೆ ಕಠಿಣ ಮನಸ್ಸನ್ನು ಮಾಡಬೇಡಿರಿ" ಅಣ್ಣನ ದೈನ್ಯದ ಸ್ವರ ಹೊರಟಿತು.

"ಸಾಕು ಮಾಡು ನಿನ್ನ ಹರಟೇನು; ನಿನ್ನ ಉದ್ದ ನಾಲಗೆಯನ್ನು ಹೊರಚಾಚ ಬೇಡ ಎಚ್ಚರಿಕೆ!" ಎಂದು ಗರ್ಜಿಸಿದ ನಿಂಗಪ್ಪ.

ನಿಂಗಪ್ಪನ ಆಜ್ಞೆಯು ಹೊರಬಿದ್ದುದೇ ತಡ; ಜಾರಪ್ಪ ತನ್ನ ಕೆಲಸವನ್ನು ಆರಂಭಿಸಿದ. ನಡುಮನೆಯಲ್ಲಿ ಉರಿಯುತ್ತಿದ್ದ ಕಂದೀಲನ್ನು ಬೀದಿಗೆಸೆದುದೂ, ಶಾಮುವಿನ ಕಿವಿ ಹಿಡಿದೆಳೆದು ಕುಳಿತಲ್ಲಿಂದ ಎಬ್ಬಿಸಿದುದೂ, ಒಂದು ನಿಮಿಷದಲ್ಲಿ ಜರುಗಿದುವು. ಕಿವಿ ಹಿಡಿದುದರಿಂದುಂಟಾದ ನೋವಿನಿಂದ ಶಾಮು ಅಳಲು ಪ್ರಾರಂಭಿಸಿದ. ಮಗುವಿನ ಅಳುವನ್ನು ಕೇಳಿಯೂ ನಿಂಗಪ್ಪನ ಕಲ್ಲೆದೆ ಕರಗಲಿಲ್ಲ. ಅವನು ಜಾರಪ್ಪನಿಗೆ ಹೇಳಿದ: "ಆ ಪೋರನ ಕವಾಳದ ಮೇಲೆ ಎರಡು ಹಾಕಿ ಹೊರದೂಡು."

ಶಾಮುವಿನ ಬೆನ್ನ ಮೇಲೆ ಜಾರಪ್ಪ ಗುದ್ದಿದ. ಆ ಏಟನ್ನು ತಾಳಲಾರದೆ ಮಗುವು ನೆಲದ ಮೇಲೆ ಬಿದ್ದಿತು. ಈ ವರೆಗೆ ಜಾರಪ್ಪನ ವರ್ತನೆಗಳನ್ನು ನೋಡುತ್ತಾ ಅಣ್ಣ ಎಲ್ಲವನ್ನೂ ಸಹಿಸಿ ನಿಂತಿದ್ದ. ಆದರೆ ಶಾಮುವಿನ ಬೆನ್ನ ಮೇಲೆ ಗುದ್ದು ಬಿದ್ದುದನ್ನು

ನೋಡಿ ಸುಮ್ಮನಿರಲು ಅಣ್ಣನಿಗೆ ಸಾಧ್ಯವಾಗಲಿಲ್ಲ. ಸರಳಾ, ಮನುಷ್ಯನ ಸಹನಶಕ್ತಿಗೆ ಒಂದು ಮೇರೆಯಿದೆ; ಒಂದು ಪರಿಧಿಯ ವರೆಗೆ ಮನುಷ್ಯ ನೋವನ್ನು ಸಹಿಸುತ್ತಾನೆ. ಆದರೆ ಅನ್ಯರಿಂದ ಬಂದೊದಗುವ ಪೀಡನೆಯು ಆ ಪರಿಧಿಯನ್ನು ಅತಿಕ್ರಮಿಸಿದರೆ, ಮನುಷ್ಯತನಗೊದಗಿದ ಹಿಂಸೆಗಳನ್ನು ಎದುರಿಸಲು ಉದ್ಯುಕ್ತನಾಗುತ್ತಾನೆ. ಅದರಂತೆಯೇ ಆಯಿತು ಅಣ್ಣನ ಅವಸ್ಥೆ. ಈ ವರೆಗೆ ಅವನು ಶಾಂತಚಿತ್ತನಾಗಿದ್ದ; ನಿಂಗಪ್ಪನ ನಿಂದನೆಗಳನ್ನೆಲ್ಲವನ್ನೂ ಸಹಿಸಿದ್ದ. ನಿಂಗಪ್ಪನ ಹೇಳಿಕೆಯಂತೆ ಜಾರಪ್ಪನು ಶಾಮುವಿನ ಮೇಲೆ ಕೈ-ಮಾಡಲು ಅಣ್ಣನ ಸಹನಶಕ್ತಿಯು ನೆಲೆನಿಲ್ಲಲಿಲ್ಲ; ಅವನು ಇದುವರೆಗೆ ಅಡಗಿಸಿದ್ದ ಸಿಟ್ಟು, ತನ್ನ ಕಟ್ಟುಗಳನ್ನು ಸಡಿಲಿಸಿ ಹೊರಕ್ಕೆ ಬಂದಿತು.

ಜಾರಪ್ಪನು ಶಾಮುವಿನ ಕೈಹಿಡಿದು ಅವನನ್ನು ಹೊರದೂಡುವುದರಲ್ಲಿ ಉದ್ಯುಕ್ತನಾಗಿದ್ದ; ಅಷ್ಟರಲ್ಲಿ ಅಣ್ಣನ ಕರವು ಜಾರಪ್ಪನ ಕೈಹಿಡಿದು ಅವನ ಕೆಲಸವನ್ನು ಅಷ್ಟಕ್ಕೆ ನಿಲ್ಲಿಸಿತು. ಅಣ್ಣನ ಹಿಡಿತದಿಂದ ತನ್ನ ಕೈ ಬಿಡಿಸಿಕೊಳ್ಳಲು ಜಾರಪ್ಪನಿಗೆ ಆಗಲಿಲ್ಲ. ಅವನು ತನ್ನ ಕಣ್ಣುಗಳನ್ನು ಹೊರಳಿಸುತ್ತಾ ನಿಂತ; ತನ್ನ ಆಳು ಅಣ್ಣನ ಹಿಡಿತಕ್ಕೆ ಸಿಕ್ಕಿರುವುದನ್ನು ಕಾಣಲು ನಿಂಗಪ್ಪನ ಪಿತ್ತವು ನೆತ್ತಿಗೆ ಏರಿತು. ಅವನು ತನ್ನ ಮುಷ್ಟಿಯನ್ನು ಗಟ್ಟಿಹಿಡಿದು ಅಣ್ಣನ ಬೆನ್ನ ಮೇಲೆ ಗುದ್ದುಹಾಕಿದ.

ನಿಂಗಪ್ಪನ ಗುದ್ದು ಅಣ್ಣನ ಮೇಲೆ ಬೀಳಲು ಅವನು ಕೆರಳಿದ ಸರ್ಪದಂತಾದ. ಜಾರಪ್ಪನ ಕೈಯನ್ನು ಬಿಡದೆ, ಅಣ್ಣ ನಿಂಗಪ್ಪನ ಕಡೆಗೆ ತಿರುಗಿ ಹೀಗೆ ಹೇಳಿದ: ''ನಿಂಗಪ್ಪನವರೇ, ಇದುವರೆಗೆ ನೀವು ಒಬ್ಬ ಮನುಷ್ಯರೆಂದು ನಾನು ಭಾವಿಸಿದ್ದೆ; ಆದರೆ ನೀವು ಮನುಷ್ಯರಲ್ಲ! ನೀವು ಆಡಿದ ನಿಂದೆಯ ಮಾತುಗಳನ್ನು ಸಹಿಸಿದೆ; ಇನ್ನು ಅದು ಸಾಧ್ಯವಾಗದು. ನನ್ನ ತಮ್ಮನ ಮೇಲೆ ಕೈಮಾಡ ಹೊರಟರೆ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ. ಇಲ್ಲಿಂದ ಹೊರಟು ಹೋಗಿ; ನಿಮ್ಮ ಒಳ್ಳೆಯದಕ್ಕೆ ಹೇಳುತ್ತಿದ್ದೇನೆ.''

''ಹೂಂ, ನೀನೇನು ಮಾಡುವಿಯೋ ಬದನೇಕಾಯಿ? ನಿನ್ನ ಮಾತುಗಳನ್ನು ಕೇಳುವಾಗ ನೀನು ಮಾರುತಿಯಿರುವೆಯೆಂದು ತೋರಿಹೋಗುತ್ತದೆ!''

''ನೋಡು, ಮಹಾರಾಯ! ಬದನೆಕಾಯಿ ಹೇಗಿದೆಯೆಂಬುದನ್ನ!'' ಈ ಮಾತುಗಳು ಅಣ್ಣನ ತುಟಿಗಳಿಂದ ಉದುರಿದುವು; ಅಣ್ಣನ ಮೋರೆಯಿಂದ ನಿಂಗಪ್ಪ ತನ್ನ ದೃಷ್ಟಿಯನ್ನು ಬೇರೆಕಡೆಗೆ ತಿರುಗಿಸುವುದರೊಳಗಾಗಿ, ಅಣ್ಣನ ಒಂದು ಪ್ರಹಾರವು ನಿಂಗಪ್ಪನ ಕಪಾಳದ ಮೇಲೆ ಬಿತ್ತು. ನೋವನ್ನು ತಾಳಲಾರದೆ ನಿಂಗಪ 'ಅಯ್ಯೋ' ಎಂದು ಕಿರಿಚಿಕೊಂಡ.

ಆನಂತರ ನಡೆದುದನ್ನೆಲ್ಲಾ ಇಲ್ಲಿ ವಿವರಿಸಿ ಬರೆಯುವುದು ಅನಾವಶ್ಯಕ; ಈ ಜಗಳವನ್ನು ನೋಡಿ ನನಗೆ ದಿಗಿಲಾಯಿತು ಅಣ್ಣನಿಗೆ ಏನಾದರೂ ಅಪಾಯ ಸಂಭವಿಸಿದರೆ?

ಹಾಗೇನೂ ಆಗಲಿಲ್ಲ; ನಿಂಗಪ್ಪನ ಬಾಯಿಯಿಂದ ಒಂದು ಹಲ್ಲು ಮಾತ್ರ ಕೆಳಕ್ಕೆ ಉದುರಿತು. ನೆರೆಹೊರೆಯವರು ಈ ಕೋಲಾಹಲವನ್ನು ಕೇಳಿ ನಮ್ಮ ಮನೆಗೆ ಓಡಿಬಂದರು. ಅವರು ಜಗಳ ಬಿಡಿಸಿ ನಿಂಗಪ್ಪನನ್ನೂ ಚಾರಪ್ಪನನ್ನೂ ಹೊರಕ್ಕೆ ಕಳುಹಿಸಿದರು.

ಮನುಷ್ಯನಿಗೆ ಹೃದಯವಿಲ್ಲ; ಇಲ್ಲದಿದ್ದರೆ ನಿರಪರಾಧಿ ನನ್ನ ವಿಗೆ ಗುದ್ದುಹಾಕಲು ಅವನು ಹೊರಡುತ್ತಿದ್ದನೇ? ತಾಯಿ ಕಾಹಿಲೆಯಿಂದ ನರಳುತ್ತಾ ಮೃತ್ಯುವಿನ ಮನೆಯ ಬಾಗಿಲಲ್ಲಿ ಬಿದ್ದಿರುವಾಗ, ನಮ್ಮನ್ನು ಮನೆಯಿಂದ ಹೊರದೂಡಲು ಪ್ರಯತ್ನಿಸುತ್ತಿದ್ದನೇ? ಬಡವರು ನಾವು; ಬಡವರಾಗಿ ಬದುಕಬಾರದು, ಅವರ ಸಂಕಟಗಳನ್ನು ಕೇಳುವವರಾರು?

ನೋಡು, ಹೀಗೆ ಪ್ರತಿಯೊಂದು ದಿನವೂ ಒಂದೊಂದು ಹೊಸ ನೋವನ್ನು ನಮಗೆ ತರುತ್ತಲಿದೆ! ಈ ಜಗಳದಿಂದ ತಾಯಿಯೆಷ್ಟು ನೊಂದಿರಬಹುದು; ಅವರ ಮನವೆಷ್ಟು ಅಸ್ವಾಸ್ಥ್ಯವನ್ನು ಪಡೆದಿರಬಹುದು! ಅವರ ಕಾಹಿಲೆ ನಾಶವಾಗದು ನಿಜ; ಆದರೆ ಅವರು ತಮ್ಮ ಕೊನೆಯ ನಿಮಿಷಗಳನ್ನಾದರೂ ಶಾಂತಿಯಲ್ಲಿದ್ದು ಕಳೆಯಕೂಡದೇ? ಸಾಧ್ಯವಿಲ್ಲ; ಬಡವರಾಗಿ ಹುಟ್ಟಿದರೆ ನೆಮ್ಮದಿಯಿಂದ ಸಾಯಲು ಕೂಡ ಸಾಧ್ಯವಿಲ್ಲ! ಇರಲಿ, ಕಾಗದವು ಉದ್ದವಾಯಿತು; ಇಷ್ಟಕ್ಕೆ ಸಾಕುಮಾಡುತ್ತೇನೆ. ಮೇಲೆ ಹೇಳಿದ ಕೆಲಾಪಗಳಿಂದ ನನ್ನ ಮನದ ಸ್ವಾಸ್ಥ್ಯವು ಅಳಿದಿದೆ. ತಾಯಿಯ ಕಾಹಿಲೆಯು ನಿಮಿಷನಿಮಿಷಕ್ಕೂ ಹೆಚ್ಚುತ್ತಲಿದೆ.

ನಿನ್ನ
ಮುತ್ತು

ಶ್ರೀ

ಮಮತೆಯ ಸೋದರಿ, ತಾ. ೧೦–೧೦–೧೯೨೯

ಮುಗಿಯಿತು, ಮುಗಿಯಿತು; ಅಮ್ಮನ ಜೀವನದ ಯಾತ್ರೆಯು ಮುಗಿಯಿತು! ನಮಗೆಲ್ಲ ಸ್ನೇಹ–ಮಮತೆಗಳ ಸವಿನೀರನ್ನು ಕುಡಿಸಿದ ತಾಯಿ ಹೊರಟುಹೋದರು; ಹಿಂದಿರುಗಿ ಬರಲಾಗದಲ್ಲಿಗೆ ಹೊರಟು ಹೋದರು! ಈ ಜೀವನದ ವಿಷಜ್ವಾಲೆಯು ಇನ್ನು ಅವರನ್ನು ಬಾಧಿಸದು!

ಆದರೆ ನಾವು ಜೀವಿಸುತ್ತಿರುವೆವು; ಕೆಸರ ಕೂಪದಲ್ಲಿ ಹೊರಳುತ್ತಿರುವೆವು; ನರಳುತ್ತಿರುವೆವು. ಸ್ವಾಸ್ಥ್ಯವಿಲ್ಲ; ನೆಮ್ಮದಿಯಿಲ್ಲ, ಚಿತ್ತಶಾಂತಿಯನ್ನು ಕಳೆದುಕೊಂಡ ಹುಚ್ಚಿಯಂತಿದ್ದೇನೆ ನಾನು.

ತಾಯಿ ಹೊರಟುಹೋದರು ನಿಜ; ಅವರ ಹತ್ತು–ಹನ್ನೊಂದು ಗಳನ್ನು ಮಾಡಬೇಕು. ಹಣವೆಲ್ಲಿಂದ? ತಾಯಿಯ ವಿಯೋಗದುಃಖವು ಆರುವುದಕ್ಕೆ ಮುನ್ನ ತಾಯಿಯ ತಿಥಿ-ಕರ್ಮಾಂತರಗಳ ಹೆಸರು ಹೇಳಿ ಈ ಪುರೋಹಿತರ ಡೊಳ್ಳುಹೊಟ್ಟೆಗಳನ್ನು ಆರ್ಚಿಸುವುದಕ್ಕೆ ಹೊರಡಬೇಕು; ಸಾಯದೆ ಉಳಿದವರಲ್ಲಿ ಉಳಿದ ಒಂದೆರಡು ಹುಡಿಕಾಸುಗಳು ಕರಗಿ ನೀರಾಗಬೇಕು!

ಸರಳಾ, ಇವುಗಳ ತಾತ್ಪರ್ಯವು ನನಗೆ ಹೊಳೆಯುವುದಿಲ್ಲ ಸತ್ವರನ್ನು ನೆನೆಯಬೇಕಾದುದೂ, ಅವರ ಆತ್ಮಶಾಂತಿಗಾಗಿ ಪ್ರಾರ್ಥಿಸುವುದೂ ಅತ್ಯಾವಶ್ಯಕ. ಈ ಕೆಲಸವನ್ನು ಕಾಸುವ್ಯಯ ಗೊಳಿಸದೆ ನೆರವೇರಿಸಲು ಸಾಧ್ಯವಿಲ್ಲವೇ? ಸಾಲವೆಂಬ ಶೂಲದ ತಿವಿತಗಳಿಗೊಳಗಾಗದೆ, ಈ ಅವಾಂತರಗಳಿಲ್ಲದೆ ಹೋದರೆ ಸತ್ವರ

ತ್ಮಗಳಿಗೆ ಶಾಂತಿದೊರಕದೇ ? ಹೋದವರು ಹೋದರು; ಇನ್ನುಳಿ
ದವರು ಈ ತಿಥಿಕರ್ಮಾಂತರಗಳಿಂದ ಹೊಸ ಸಂಕಟಗಳ
ತಕ್ಕೆಗಳನ್ನು ಏಕೆ ನಿರ್ಮಿಸಬೇಕು ?

ತಿಥಿಕರ್ಮಾಂತರಗಳನ್ನು ನೆರವೇರಿಸದಿದ್ದರೆ, ಸತ್ತವರು ಸ್ವರ್ಗ
ದಲ್ಲಿ ಪ್ರವೇಶಿಸುವುದಿಲ್ಲವಂತೆ; ವ್ಯಂತರ-ಪಿಶಾಚಿಗಳಾಗಿ ಅಲೆ
ಯುತ್ತಾರಂತೆ ! ಅಲ್ಲಿಗೆ ಹೋಗಿ ಇವುಗಳನೆಲ್ಲಾ ತಿಳಿದು ಬಂದವರು
ಯಾರು ?

ತಾಯಿ ಮೈತರಾದರು; ನಮ್ಮ ಸ್ಥಿತಿ-ಗತಿಗಳನ್ನು ನೀನು ಬಲ್ಲೆ.
ಹಣದ ಅಭಾವ; ಸೂರಾರು ರೂಪಾಯಿಗಳು ನಮ್ಮಂಥವರಿಗೆ
ಎಲ್ಲಿಂದ ಸಾಲಸಿಗುವುವು ? ಹಣವಿಲ್ಲದೆ ತಾಯಿಯ ತಿಥಿಕರ್ಮ
ಗಳನ್ನು ನೆರವೇರಿಸುವುದು ಹೇಗೆ ? ದಕ್ಷಿಣೆ, ವಿಷ್ಟಾನ್ನಭೋಜನ
ಇವುಗಳಿಲ್ಲದೆ ಶಾಸ್ತ್ರೋಕ್ತಕ್ರಿಯೆಗಳನ್ನು ನಮ್ಮ ಪುರೋಹಿತರು
ನೆರವೇರಿಸುವಂತಿಲ್ಲ. ಕೈಯತುಂಬ ದಕ್ಷಿಣೆ, ಹೊಟ್ಟೆತುಂಬ
ವಿಷ್ಟಾನ್ನ ಇವುಗಳನ್ನು ಕೊಟ್ಟರೆ ಮಾತ್ರ ಪುರೋಹಿತರು
ಸತ್ತವರಿಗೆ ಸ್ವರ್ಗಕ್ಕೆ ಪಾಸ್ ಪೋರ್ಟ್ (Pass-Port)
ಕೊಡುತ್ತಾರೆ.

ಅಣ್ಣನಿಗೆ ಹಣ ಸಾಲ ದೊರೆಯಲಿಲ್ಲ; ಪುರೋಹಿತರನ್ನು
ಸಾಸಿನ ಕೈತುಂಬ ದಕ್ಷಿಣೆ, ಹೊಟ್ಟೆತುಂಬ ವಿಷ್ಟಾನ್ನಗಳಿಂದ
ತೃಪ್ತಿಪಡಿಸಲು ನಮಗೆ ಸಾಧ್ಯವಾಗಲಿಲ್ಲ. ಇದು ಧರ್ಮ-
ದ್ರೋಹವಾಯಿತು; ಸಮಾಜದ ದೃಷ್ಟಿಯಲ್ಲಿ ನಾವು ಧರ್ಮಲಂಡ
ರಾದೆವು. ನಮ್ಮ ಧರ್ಮಾಭಿಮಾನಿಗಳು ಧರ್ಮವನ್ನು ಸಂರಕ್ಷಿ
ಸುವುದಕ್ಕಾಗಿ ನಮ್ಮನ್ನು ಹೊರದೂಡಿದರು; ನಮ್ಮನ್ನು
ಬಹಿಷ್ಕರಿಸಿ ದೂರಮಾಡಿದರು. ನಾವು ಮೂವರು ಇತರರಿಂದ
ದೂರವಾದೆವು.

ವಾಸಿಸಲು ಮನೆಯಿಲ್ಲ; ಪೋಲೀಸರ ಸಾಹಾಯ್ಯದೊಡನೆ
ಅಣ್ಣಪ್ಪ ಬಂದು ನಮ್ಮನ್ನು ಮನೆಯಿಂದ ಹೊರಕ್ಕೆ ಮಾಡಿದ.
ಅಣಗಾರರ ಸಾಹಾಯ್ಯಕ್ಕೆ ಪೋಲೀಸಿದೆ; ನ್ಯಾಯಮಂದಿರವಿದೆ;
ಎಲ್ಲಾ ಇವೆ. ಆದರೆ ಬಡವರಿಗೆ ಯಾರ ನೆರವೂ ಇಲ್ಲ; ಅವರ
ಕೂರೆಯನ್ನು ಕೇಳುವವರೆಂದರೆ ಚಂದ್ರ-ಸೂರ್ಯರು, ಗ್ರಹ-
ನಕ್ಷತ್ರಕೆಗಳು.

ಈಗ ನಾವು ಮುರುಕುಗುಡಿಸಲಿನಲ್ಲಿ ಜೀವಿಸುತಿದ್ದೇವೆ;
ದಿನಗಳನ್ನು ದೂಡುತಿದ್ದೇವೆ. ನಮ್ಮ ದುಃಖದ ಕತೆಯನ್ನು
ಕೇಳಲು ನೀನೊಬ್ಬಳಿರುವುದು ನನಗೆ ಸಂತಸವು; ನಾವು ಮೂವರು
ಇತರರಿಂದ ದೂರವಾದರೂ, ನಮ್ಮ ವ್ಯಥೆಗಳನ್ನು ಹೇಳಿಕೊಳ್ಳಲು
ನೀನೊಬ್ಬಳಿರುವುದು ನಮ್ಮ ಭಾಗ್ಯವೇ ಸರಿ.

ಇದಕ್ಕಿಂತ ಹೆಚ್ಚು ಬರೆಯಲಾರೆ; ನಿನ್ನ ಕಾಗದವನ್ನು ಇದಿರು
ನೋಡುತ್ತಿರುವೆನು.

ನಿನ್ನ
ಮುತ್ತು

೬

ಸರಳಾ, ತಾ. ೨೨-೧೦-೧೯೬೯

ನೀನು ಬರೆದ ಕಾಗದವು ದೊರೆಕಿತು; ಸಮಾಜವು ನಮ್ಮನ್ನು ಹೊರದೂಡಿದ್ದರೂ, ನೀನು ನಮ್ಮ ಮೇಲೆ ಸ್ನೇಹ-ಮಮತೆಗಳ ನಿಟ್ಟಿರುವುದನ್ನರಿತು ಅಪಾರ ಸಂತೋಷವಾಯಿತು. ನಿನ್ನ ವಿಶಾಲ ಮನಸ್ಸನ್ನು ನೋಡುವಾಗ ನನ್ನ ಎದೆ ಅರಳುತ್ತದೆ; ನಾನು ಜೀವಿಸಲು ಧೈರ್ಯ ಪಡುತ್ತಿರುವೆ.

ಆದರೆ ನಮ್ಮ ಶನಿದಶೆಯು ಇನ್ನೂ ಮುಕ್ತಾಯವಾಗಲಿಲ್ಲ; ಬಡವರ ಜಾತಕಗಳಲ್ಲಿರುವುದು ಶನಿದಶೆಮಾತ್ರ ! ಇದುವರೆಗೆ ನಮ್ಮನ್ನು ಸಂರಕ್ಷಿಸಲು ಅಣ್ಣನೊಬ್ಬನಿದ್ದ; ಈಗ ಆವನು ತುರಂಗದ ಗೊಡೆಗಳ ಹಿಂದೆ ಮರೆಯಾಗಿದ್ದಾನೆ.

ಹಿಂದೆ ಬರೆದ ಕಾಗದ ಒಂದರಲ್ಲಿ ನಿಂಗಪ್ಪನಿಗೂ ಅಣ್ಣನಿಗೂ ಆದ ಜಗಳವನ್ನು ಅರುಹಿದ್ದೆನಷ್ಟೆ. ನಿಂಗಪ್ಪ ತನ್ನನ್ನು ಹೊಡೆದು ಪೀಡಿಸಿದನೆಂದು ಅಣ್ಣನ ಮೇಲೆ (ಖಟ್ಲೆಯನ್ನು) ಹೂಡಿದ. ನೆರೆ-ಮನೆಯ ಯಶವಂತರಾಯರು ಕೋರ್ಟಿನಲ್ಲಿ ನಿಂಗಪ್ಪನ ಪರವಾಗಿ ಸಾಕ್ಷಿ ಹೇಳಿದರು. ನಿಜ ಹೇಳುವುದಾದರೆ, ಆ ಕಲಹ ನಡೆದ ದಿನ ಅವರು ಊರಲ್ಲಿ ಕೂಡ ಇರಲಿಲ್ಲ. ಆದರೆ ಕೋರ್ಟಿನಲ್ಲಿ, ಸತ್ಯವನ್ನೇ ನುಡಿವೆವೆಂದು ಪ್ರಮಾಣಮಾಡಿ, ಅನಂತರ ಸುಳ್ಳನ್ನು ಮಾತ್ರ ಹೇಳಿದರು. ನಮ್ಮ ಮನೆಯಲ್ಲಾಗುತ್ತಿರುವ ಗಲಭೆಯ ಸದ್ದು ಕೇಳಿ, ತಾವು ನಮ್ಮ ಮನೆಗೆ ಓಡಿಬಂದರೆಂದೂ, ಆಗ ಬಾಡಿಗೆ ಹಣವನ್ನು ಕೇಳಬಂದಿದ್ದ ನಿಂಗಪ್ಪನನ್ನು ಅಣ್ಣ ದೊಣ್ಣೆಯಿಂದ ಹೊಡೆಯುತ್ತಿರುವುದನ್ನು ತಾವು ನೋಡಿದೆವೆಂದೂ ಅವರು ಕೋರ್ಟಿನಲ್ಲಿ ಸಾಕ್ಷಿಕೊಟ್ಟರು. ಈ ಸುಳ್ಳುಸಾಕ್ಷ್ಯವನ್ನು ಆಧಾರವಾಗಿಟ್ಟುಕೊಂಡು ನಿಂಗಪ್ಪನ ವಕೀಲರು ವಾದಿಸಿದರು. ನಿಯಮದ ದೃಷ್ಟಿಯಲ್ಲಿ ಅಣ್ಣ ಅಪರಾಧಿಯಾಗಿ ಪರಿಣಮಿಸಿದ. ಮುದ್ದು ಶ್ಯಾಮುವನ್ನು ಜಾರಪ್ಪನ ಪೀಡನೆಯಿಂದ ತಪ್ಪಿಸಿದುದು ಅಪರಾಧವಾಯಿತು. ಆ ತಪ್ಪಿಗೆ ಅಣ್ಣನಿಗೆ ಮೂರುತಿಂಗಳು ಸಶ್ರಮ ಕಾರಾಗೃಹವಾಸವನ್ನು ವಿಧಿಸಿದರು ನ್ಯಾಯಾಧೀಶರು. ಅಣ್ಣನು ತಪ್ಪುಗಾರನಲ್ಲವೆಂಬುದನ್ನು ರುಜುವಾತು ಪಡಿಸಲು ಸಾಕ್ಷಿಗಳಾಗಲಿ, ವಕೀಲರಾಗಲಿ ಇರಲಿಲ್ಲ. ಮೂರು ಹೊತ್ತಿನ ಹಿಟ್ಟಿಗೆ ಗತಿಯಿಲ್ಲದ ನಾವು ಸಾಕ್ಷಿಗಳಿಗೂ ವಕೀಲರಿಗೂ ಫೀ ಕೊಟ್ಟು ಕೋರ್ಟಿನಲ್ಲಿ ವಾದಿಸಲು ಸಾಧ್ಯವಾಗುವುದೆಂತು !

ಅಣ್ಣ ಜೀಲಿಗೆ ತೆರಳಿದ; ಕುಟುಂಬಭಾರವನ್ನು ನಾನು ಹೊರ-ಬೇಕಾಗಿ ಬಂದಿತು. ಮುದ್ದುಶ್ಯಾಮುವನ್ನು ಕಾಪಾಡುವ ಕೆಲಸವನ್ನು ಅಣ್ಣ ನನಗೆ ವಹಿಸಿದ್ದಾನೆ. ಅನ್ಯರ ಮನೆಗಳಲ್ಲಿ ಊಳಿಗ ಮಾಡಿ, ಅಣ್ಣನು ನನಗೆ ವಹಿಸಿರುವ ಕೆಲಸವನ್ನು ನೆರವೇರಿಸುತ್ತಲಿರುವೆ. ನೊಂದಿರುವ ಈ ಎದೆಗೆ ಸ್ವಲ್ಪ ಶಾಂತಿಯನ್ನು ನೀಡುತ್ತಿರುವುದು ಶ್ಯಾಮುವಿನ ನಿಷ್ಕಲಂಕಮುಖವಾಗಿದೆ. ಎಳನಗೆಯಿಂದ ಕೂಡಿದ ಆ ಮೋರೆಯನ್ನು ನೋಡಿ ನನ್ನ ಕ್ಲೇಶಗಳನ್ನು ಮರೆಯುತ್ತಲಿರುವೆ.

ಇನ್ನು ಹೆಚ್ಚಿಗೇನು ಬರೆಯಲಿ ?

ನಿನ್ನ
ಮುತ್ತು

ಸಿಂಹನೀರು

ಶ್ರೀ. ಎಲ್. ಎಸ್. ನಾರಾಯಣರಾವ್, ಬಿ. ಎ.,
ಮೈಸೂರು

ದೂರದಿಂದ ನೋಡಿದರೆ ನುಣ್ಣಗಾಗಿ ತೋರುವ ಗಂಭೀರ ಗಿರಿಗಳೆಲ್ಲ, ಹತ್ತಿರ ಹೋಗಿ ನೋಡಿದಾಗ ಹಲವುಬಗೆಯ ಮುಳ್ಳುಪೊದೆಗಳಿಂದ ಕೂಡಿಬುದನ್ನು ಕಾಣುವೆವು. ನಾಗರಿಕ ಮನುಷ್ಯ ಯಾವಾಗಲೂ ಎಚ್ಚರಿಕೆಯಿಂದ ಹೊದ್ದುಕೊಂಡಿರುವ ಸಂಸ್ಕೃತಿಯ ಪರದೆಯ ಮರೆಯಲ್ಲಿ ಕಾಣುವುದು ಆತನ ಅಶಾಂತಜೀವನ ಮಾತ್ರ!

(ಬಾಳಿನ ಒಳನೋಟ)

★

ತನ್ನ ನಲವತ್ತೈದನೆಯ ವರ್ಷದಲ್ಲಿ ಕೂಡ ಕಮಲೇಶನು, ತಾನು ಚಿಕ್ಕಂದಿನಿಂದಲೂ ಆದರಿಸುತ್ತಿದ್ದ ಆದರ್ಶಗಳನ್ನು ಬಿಟ್ಟಿರಲಿಲ್ಲ. ಆದರೂ ಅವನ ಆದರ್ಶಗಳಲ್ಲಿ ಒಂದನ್ನೂ ಅವನು ನಿತ್ಯ-ಜೀವನದಲ್ಲಿ ಕಾಣಲಿಲ್ಲ. ಭೂಮಿ ಮತ್ತು ಆಕಾಶ ಸ್ವಲ್ಪ ದೂರದಲ್ಲಿಯೇ ಒಂದಾದಂತೆ ಕಾಣುತ್ತದೆ; ಆದರೆ ಹತ್ತಿರ ಹತ್ತಿರ ಹೋದಂತೆಲ್ಲಾ ಅದು ದೂರವಾಗುತ್ತಲೇ ಹೋಗುತ್ತದೆ. ಕಮಲೇಶನ ಜೀವನದ ಆಶೆಗಳೂ ಹಾಗೆಯೇ ಆಗಿದ್ದುವು.

ಕಮಲೇಶನು ವಿದ್ಯಾವಂತನು. ಮೈಸೂರಿನ ಕಾಲೇಜಿನಲ್ಲಿ ಓದಿ ಎಂ. ಎ. ಪ್ಯಾಸುಮಾಡಿದ್ದನು. ಪ್ರಾಪಂಚಿಕ ವ್ಯವಹಾರಗಳಲ್ಲಿ ನಿಪುಣನಾಗಿದ್ದನು. ಅವನು ಜೀವನದಲ್ಲಿ ಆದಷ್ಟು ಎಚ್ಚರದಿಂದ ಸಾಗುತ್ತಿದ್ದನು. ಅವನಲ್ಲಿ ವಿಚಾರಪರತೆ ಮತ್ತು ಬಾಧ್ಯಕತೆಯು ಸಮೃದ್ಧವಿತ್ತು. ಆದರೆ ಅವನು ಚಿಂತಿಸುತ್ತಿದ್ದುದಕ್ಕೂ ಮಾತ್ತು ಮಾಡುತ್ತಿದ್ದುದಕ್ಕೂ ಬಹಳ ಅಂತರವಿತ್ತು. ಬಿರುಗಾಳಿಗೆ ಸಿಕ್ಕಿದ ಹಡಗಿನವರು ನಡನಡನೆ ನಡುಗಿ, ಆನಂತರ ತನಗೆ ತಾನೇ ಸ್ವಬ್ದವಾಗುವಂತೆ, ಅವನ ಉದಾತ್ತ ಆದರ್ಶಗಳೂ, ಉನ್ನತಬಯಕೆಗಳೂ ಕರ್ಮಮಯ ಜೀವನದ ಯಂತ್ರದಲ್ಲಿ ಸಿಲುಕಿ ಪುಡಿಪುಡಿಯಾಗುತ್ತಿದ್ದುವು; ಮತ್ತೆ ಕೆಲಕಾಲದ ಮೇಲೆ ಪುನಃ ಮೂಡುತ್ತಿದ್ದವು.

ಪಲವುಸಾರಿ ತನ್ನ ತಪ್ಪಿತಕ್ಕೆ ತಾನೇ ಕಮಲೇಶನು ಪಶ್ಚಾತ್ತಾಪ ಪಡುತ್ತಿದ್ದನು. ಕಾಮ ಮತ್ತು ಪಶ್ಚಾತ್ತಾಪ ಒಂದೇ ಚಿತ್ರದ ಎರಡುಮುಖಗಳು. ಒಂದು ಪಾಪಕ್ಕೆ ಮುಂಚೆ ಜನಿಸುತ್ತದೆ; ಇನ್ನೊಂದು ಆ ಮೇಲೆ. ಇವೆರಡೂ ಅಗಸದ ನೀಹಾರಿಕೆಯಂತೆ ಗೋಚರವಾದರೂ ಅಗ್ರಾಹ್ಯವಾದುವು.

ಕಮಲೇಶನು ಯೋಚಿಸುವನು.— ಮುಳ್ಳಮೇಲಿನ ತಪಸ್ಸು, ಉಭಯಸಂಕಟದ ಜೀವನ ಎಲ್ಲಿಯತನಕ? ತನ್ನ ಜೀವನದ ಧಾಟಿಯನ್ನು ಒದಲಾಯಿಸಿ, ಆದನ್ನು ಸಂಪೂರ್ಣವಾಗಿ ಅಳಿಸಿ, ಬೇರೊಂದು ಉಜ್ವಲವಾದ ಹಿರಿಯ ಬಾಳನ್ನು ಏಕೆ ಬದುಕಬಾರದು? ಒಟ್ಟಿ ಕೊಳೆಯಾದರೆ ಏನುಟು ಬೇರೆ ನಿರ್ಮಲವಾದ ಬಟ್ಟೆಯನ್ನು ಧರಿಸುತ್ತೇವೆ. ಕಮಲೇಶನಿಗೆ ಶಕ್ತಿಯಿದ್ದರೆ ತನ್ನ ಈ ಕೊಳಕು ಬಾಳನ್ನು ಏನುಟು ಬೇರೊಂದು ಸ್ವಚ್ಛವಾದ ಜೀವನವನ್ನು ಧರಿಸುತ್ತಿದ್ದನು. ಆದರೆ ಜೀವನವನ್ನು ಬಟ್ಟೆಯಂತೆ ಬದಲಾಯಿಸುವುದು ಸಾಧ್ಯವೇ? ಹಾಗೆಯೇ ಮತ್ತೊಂದು ಚಿಂತೆ ಅವನನ್ನು ಮುತ್ತುತ್ತಿತ್ತು. ಜೀವನದಲ್ಲಿ ಕೊಳಕಿದ್ದರೆ ಅದು ನನ್ನೊಬ್ಬನಲ್ಲಿಯೇ ಇದೆಯೇ? ಪ್ರಪಂಚದಲ್ಲಿ ಮಿಕ್ಕವರೆಲ್ಲಾ ನಿಷ್ಕಳಂಕರೇ? ಆದರ್ಶಸ್ಥಲನೆ ಬೇರೆಲ್ಲೂ ಇಲ್ಲವೇ? ನಾನೊಬ್ಬನು ದುಃಖಿಯಾದರೆ ಉಳಿದವರೆಲ್ಲರೂ ಸುಖಿಗಳೇ?

ಹೀಗೆ ಪ್ರಶ್ನೆಗಳು ಪುಂಖಾನುಪುಂಖವಾಗಿ ಎದ್ದು, ಕಮಲೇಶನ ಮನಸ್ಸನ್ನು ಕೆಡಿಸುತ್ತಿದ್ದುವು. ಅವನು ಸುಖಜೀವನಗಳ ಪಟ್ಟಿಯೊಂದನ್ನು ತಯಾರಿಸಿ, ಅವುಗಳನ್ನೆಲ್ಲಾ ಒಂದೊಂದಾಗಿ ಪರೀಕ್ಷಿಸಲು ಹವಣಿಸಿದನು. ಇದರಿಂದಲಾದರೂ ತನ್ನ ಬದುಕಿನಲ್ಲಿ ಸುಖವು ಅರಿವಾಗಬಹುದೆಂದು ಅವನ ಎಣಿಕೆ.

ವಿಶ್ವದ ಪ್ರಯೋಗಶಾಲೆಯಲ್ಲಿ ಸುಖದ ಬಾಳನ್ನು ಅರಸಿ ಹೊರಟ ಕಮಲೇಶನಿಗೆ, ಮೊಟ್ಟಮೊದಲು ಶ್ರೀ. ವೆಂಕಟಪತಿರಾಯರ ಗಂಟು ಬಿತ್ತು. ಶ್ರೀ. ವೆಂಕಟಪತಿರಾಯರು ಕಮಲೇಶನ ನಿಕಟ ಪರಿಚಯಸ್ಥರಲ್ಲೊಬ್ಬರು; ಶ್ರೀಮಂತರು. ಅವರು ಮೈಸೂರಿನ ಹಳೆಯ ಅಗ್ರಹಾರದ ಒಂದು ದೊಡ್ಡ ಓಗಲೆಯಲ್ಲಿ ವಾಸಿಸುತ್ತಿದ್ದರು. ಕಷ್ಟದಲ್ಲಿ ಹೆಣಗಿ, ಅತಿ ಪರಿಶ್ರಮದಿಂದ ಕಾಸಿಗೆ ಕಾಸು ಗಂಟುಹಾಕಿ, ಹೇರಳವಾಗಿ ಆಸ್ತಿಯನ್ನು ಸಂಪಾದಿಸಿದ್ದ ತಂದೆಗೆ ಇವರೊಬ್ಬರೇ ಮಕ್ಕಳು. ಲೌಕಿಕಜೀವನದ ಕಹಿ-ಸಿಹಿಗಳ ಎಂಪೆ ನೋಡಿದ್ದ ವ್ಯವಹಾರನಿಪುಣರು. ಕಮಲೇಶನು ಇವರ ಬಳಿ ಹೆಚ್ಚಾಗಿ ಹೋಗಿಬರುತ್ತಿದ್ದನು. ವೆಂಕಟಪತಿರಾಯರ ಬಳಿ ವಿಪುಲೈಶ್ವರ್ಯವಿತ್ತು. ಮೋಟಾರುಗಳಿದ್ದುವು; ಆಳುಕಾಳುಗಳಿದ್ದುವು. ಹಿರೋಡೆ,- ಶ್ರೀರಂಗಪಟ್ಟಣಗಳ ಬಳಿ ಸುಮಾರು ಇನ್ನೂರು ಎಕರೆ ಗದ್ದೆ ಇತ್ತು. ಸ್ವಂತ ಕಟ್ಟಡಗಳ ಬಾಡಿಗೆಯಿಂದ ಪ್ರತಿ ತಿಂಗಳೂ ೭೦೦-೮೦೦ ರೂಪಾಯಿಗಳ ಆದಾಯವಿತ್ತು. ಸುಗಮವಾದ ಜೀವನದ ಎಲ್ಲಾ ಸಲಕರಣೆಗಳೂ, ಅನುಕೂಲಗಳೂ ಅವರ ಬಳಿ ಇದ್ದುವು. ಆದ್ದರಿಂದ ವೆಂಕಟಪತಿರಾಯರು ಸುಖವಾಗಿರಲೇಬೇಕು. ಅವರ ಮನಕ್ಕೆ ಶಾಂತಿ, ಬಗೆಗೆ ಕಾಂತಿ ಇದ್ದಿರಲೇಬೇಕು.

ಕಮಲೇಶನು ಗಾಂಭೀರ್ಯದ ಕೃತ್ರಿಮದ ಪರದೆಯನ್ನು ಮೇಲಕ್ಕೆತ್ತಿ, ಅವರ ನೈಜವಾದ ಆಂತರಿಕಜೀವನದ ಒಳಹೊಕ್ಕನು.

ಅಲ್ಲಿಯೂ ಅಶಾಂತಿ ಇತ್ತು; ಕೋಲಾಹಲವಿತ್ತು; ಉಜ್ವಲ ಜೀವನದ ಆತುರತೆ ಇರಲಿಲ್ಲ. ಆದರೆ ಅಲ್ಲಿ ಕಮಲೇಶನ ಜೀವನದ ಅಶಾಂತಿ ಇರಲಿಲ್ಲ; ಅಲ್ಲಿಯದು ಭೋಗದ, ಚಪಲತೆಯ ಅಶಾಂತಿ. ಕವರು ಯಾವಾಗಲೂ ತಾವು ಎಂದಿಗೆ ಅರ್ಧಕೋಟಿ ರೂಪಾಯಿ ಗಳಷ್ಟು ಕೂಡಿಹಾಕುವುದು?....ಎಂದು ಯೋಚಿಸುತ್ತಿದ್ದರು. ಬೆಳಗಿನಿಂದ ಬೈಗಿನ ವರೆಗೂ ಆಸಾಮಿಗಳನ್ನು ಹುಡುಕಿಕೊಂಡು ಕೋರ್ಟುಗಳಿಗೆ ಅಲೆಯುತ್ತಿದ್ದರು. ಸರ್ಕಾರದವರ ಕೃಪೆಬಿದ್ದು ಬಿರುದು-ಬಾವಲಿಗಳು ಬರಲೆಂದು, ಬಂದ ಬಡ್ಡಿಯಲ್ಲಿ ಅಲ್ಪಸ್ವಲ್ಪ ಹಣವನ್ನು ದಾನಮಾಡುತ್ತಿದ್ದರು. ಸಮಯ ಸಿಕ್ಕಿದಾಗಲೆಲ್ಲಾ ಕುದುರೆಯ ಜೂಜಾಟಕ್ಕೆ ಹಣಸುರಿಯುತ್ತಾ, ಬಾಯಲ್ಲಿ ನೀರೂರಿ ಕೊಂಡು ಬಂದಕ್ಕೆ ಹತ್ತರಷ್ಟು ಬರುವುದನ್ನೇ ನಿರೀಕ್ಷಿಸುತ್ತಿದ್ದರು. ವೆಂಕಟಪತಿರಾಯರಿಗೆ ಜೂಜಿನಲ್ಲಿ ಸೋಲಾಗಲಿ, ಜಯವಾಗಲಿ; ಹಣದ ತೃಷೆಮಾತ್ರ ಕುಗ್ಗುತ್ತಿರಲಿಲ್ಲ. ಸುಳ್ಳುಮಾತು ಉಸಿರಾಡುವಂತೆ ನಿರಾಯಾಸವಾಗಿ ಅವರ ಬಾಯಿಂದ ಬರುತ್ತಿತ್ತು. ಹಣದ ವಿಷಯವಷ್ಟೇ ಅಲ್ಲ; ಸ್ತ್ರೀಯರ ವಿಷಯದಲ್ಲೂ ರಾಯರ ಮನಸ್ಸು ಅಷ್ಟೇ ಆತುರ-ಚಂಚಲತೆಗಳಿಂದ ಕೂಡಿತ್ತು. ವ್ಯಾಪಂಚಿಕ ಬಯಕೆಗಳು ಕ್ಷಣಕ್ಷಣಕ್ಕೂ ಸಮುದ್ರದ ಅಲೆಗಳಂತೆ ಅವರ ಮನಸ್ಸನ್ನು ಅಪ್ಪಳಿಸುತ್ತಿದ್ದುವು. ತಮ್ಮ ಮಾವನವರೊಡನೆ ಮನಸ್ತಾಪ ಬಂದು, ತಮ್ಮ ಹೆಂಡತಿಯನ್ನು ಎಂದೋ ಬಿಟ್ಟುಬಿಟ್ಟಿದ್ದರು.

ರಾಯರ ಸ್ವಾರ್ಥಜೀವನದಲ್ಲೂ ಒಂದುಬಗೆಯ ನಿಸ್ವಾರ್ಥತೆ ಇತ್ತು; ಪ್ರಣಯದ ತಲ್ಲೀನತೆಯಲ್ಲಿ ಲೋಭದ ಸೋಂಕಿತ್ತು. ಕಾಮಜೀವನದಲ್ಲಿ ಜ್ಞಾನದ ಗುರುತು ಇತ್ತು. ಅಂತೂ ರಾಯರು ತಮ್ಮ ಅತೃಪ್ತಜೀವನಪಥದಲ್ಲಿ ಮುಂದೆ ಮುಂದೆ ಓಡುತ್ತಿದ್ದರು. ಕಮಲೇಶನ ದೃಷ್ಟಿಯಿಂದ ಇಂತಹ ಜೀವನವನ್ನು ಏನೆಂದು ತಿಳಿಯಬೇಕು? ಕಮಲೇಶನು ಯಾವುದನ್ನು ಜೀವನದ ಮಲಿನತೆ ಎಂದು ಬಗೆದಿದ್ದನೋ, ಅದಕ್ಕಿಂತಲೂ ಎಗ್ಗಿಲಾಗಿ ರಾಯರ ಜೀವನದ ಕೊಳಕು ದುರ್ಗಂಧ ನಾರುತ್ತಿತ್ತು.

— ಸುಖಜೀವನದ ಆನ್ವೇಷಿಯಾದ ಕಮಲೇಶನು ಮುಂದೆ ಸಾಗಿದನು. ಲಕ್ಷ್ಮಿಯ ಕೃಪೆಯಿದ್ದವರ ಜೀವನದ ಪರಿಚಯವಾಯಿತು. ಆದರಿಂದ ನಿರಾಶೆಗೊಂಡ ಕಮಲೇಶನು ಸುಖವನ್ನು ಅರಸುತ್ತ ಸರಸ್ವತಿಯ, ಆರಾಧಕರನ್ನು ಶರಣುಹೋದನು. ಕಮಲೇಶನು ವಾಸಿಸುತ್ತಿದ್ದ ಬೀದಿಯಲ್ಲಿಯೇ ಪಂಡಿತ ಶ್ರೀನಿವಾಸ ಶಾಸ್ತ್ರಿಗಳು ಇದ್ದರು. ಅವರ ವಿದ್ವತ್ತಿನ ಖ್ಯಾತಿ ಮೈಸೂರು ದೇಶದ ಮೂಲೆಮೂಲೆಗೂ ಹಬ್ಬಿತ್ತು. ಇವರ ವಿದ್ವತ್ತಿಗೆ ಮೆಚ್ಚಿ ವಿಶ್ವವಿದ್ಯಾನಿಲಯವು ಇವರಿಗೆ ಮಹಾಮಹೋಪಾಧ್ಯಾಯ ರೆಂಬ ಗೌರವಪ್ರಶಸ್ತಿಯನ್ನು ದಯಪಾಲಿಸಿತ್ತು. ಇವರ ಮನೆಯಲ್ಲಿ ಜಿಜ್ಞಾಸುಗಳೂ, ಶಿಷ್ಯರೂ ಸದಾ ತುಂಬಿರುತ್ತಿದ್ದರು. ಪಂಡಿತೋತ್ತಮ ಶಾಸ್ತ್ರಿಗಳು ಸರಳಜೀವಿಗಳೂ, ಮೃದುಸ್ವಭಾವದವರೂ, ಗಂಭೀರಪ್ರಕೃತಿಗಳೂ ಆಗಿದ್ದರು.

ಕಮಲೇಶನು ಶಾಸ್ತ್ರಿಗಳ ಜೀವನದ ಮರ್ಮವರಿಯಲು ಹವಣಿಸಿದನು. ಶಾಸ್ತ್ರಿಗಳು ತಮ್ಮ ಶಿಷ್ಯವೃಂದಕ್ಕೆ ಆಪ್ತಣೆ ಕೊಡಿಸುತ್ತಿದ್ದರು:— "ಶಾಂತಿ ಸಿಕ್ಕಬೇಕಾದರೆ, ಮುಕ್ತಾತ್ಮನಾಗಬೇಕಾದರೆ, ಮಾನವನಿಗೆ ಜ್ಞಾನದಿಂದಲೇ ಸಾಧ್ಯ. ಪಾಪ-ಪುಣ್ಯಗಳಿಂದ ದೂರವಿರುವಾತನೇ ಧನ್ಯನು. ಆದರೆ ಲೌಕಿಕವ್ಯವಹಾರದಲ್ಲಿ ಪಾಪವನ್ನು ತ್ಯಜಿಸಿ ಪುಣ್ಯವನ್ನು ಗ್ರಹಿಸುವುದೇ ಶ್ರೇಯಸ್ಕರವು." ಶಾಸ್ತ್ರಿಗಳ ಈ ಉಪದೇಶವು ಕಮಲೇಶನ ಚಿತ್ತದ ಅಶಾಂತಿಯು ಆರುವುದಕ್ಕೆ ಸ್ವಲ್ಪ ಸಹಾಯವಾಯಿತು.

ಎರಡು ಮೂರು ತಿಂಗಳ ನಿಕಟಪರಿಚಯವಾದ ಮೇಲೆ ಕಮಲೇಶನಿಗೆ ಶಾಸ್ತ್ರಿಗಳ ನಿಜಸ್ವರೂಪದ ದರ್ಶನವಾಯಿತು. ಅವರ ಮಾತಿನಲ್ಲಿದ್ದ ತ್ಯಾಗ ಅವರ ನಡತೆಯಲ್ಲಿರಲಿಲ್ಲ. ಅವರ ಶಾಸ್ತ್ರಜೀವನದಲ್ಲಿದ್ದ ಪ್ರತಿಚ್ಛಾಯೆ ಅವರ ವ್ಯವಹಾರದಲ್ಲಿರಲಿಲ್ಲ. ಅವರ ಕಾರ್ಯಪ್ರೇರಣೆಯಲ್ಲಿ ಅಸ್ವಾಭಾವಿಕತೆಯಿತ್ತು, ಸ್ವಾರ್ಥತೆಯ ಕಿಸುರಿತ್ತು. ಜೇಡರ ಹುಳುವು ತನ್ನ ವಿಷದ ಎಳೆಯಿಂದ ಗೂಡನ್ನು ನಿರ್ಮಿಸಿ, ಅದರ ಮಧ್ಯೆ ವಾಸಿಸುವಂತೆ ಶಾಸ್ತ್ರಿಗಳು ತಮ್ಮ ಶುಷ್ಕಪಾಂಡಿತ್ಯದಿಂದ ನೆಯ್ದ ಕೃತ್ರಿಮತೆಯ ಗೂಡಿನಲ್ಲಿ ತಮ್ಮ ನೀರಸಜೀವನವನ್ನು ಬಂಧಿಸಿಟ್ಟಿದ್ದರು. 'ದೇಶದಲ್ಲೆಲ್ಲಾ ಅತ್ಯಂತ ದೊಡ್ಡ ಪರಿಣತರೆಂದು, ಎಂದು ಜನರು ಗಣಿಸುವರು?' ಎಂಬ ಹಂಬಲು, ತಮ್ಮ ಪುಸ್ತಕಗಳೇ ಪ್ರಮಾಣಗ್ರಂಥಗಳೆಂದು ಎಂದಿಗೆ ಜನರಲ್ಲಿ ನಂಬುಗೆ ಬರುವುದೆಂದು ಆತುರ, ಶಾಸ್ತ್ರಿಗಳನ್ನು ಹಗಲಿರಳೂ ಬಾಧಿಸುತ್ತಿತ್ತು. ಇದಕ್ಕಾಗಿ ವಂಚನೆ, ಸುಳ್ಳು ತಟಪಟಗಳನ್ನು ಹಿಂದೆಗೆಯದೆ ಉಪಯೋಗಿಸುತ್ತಿದ್ದರು. ಅವರ

ವೀರಪ್ಪ ಶಿವಪ್ಪ ಅರಬಳ್ಳಿ, ರಬಕವಿ

ಬಣ್ಣದ ನೂಲು ಮತ್ತು ಇರಕಲ್

ನಮೂನೆಯ ರಬಕವಿ ಸೀರೆಯ ವ್ಯಾಪಾರಿಗಳು.

ನಮ್ಮಲ್ಲಿ ಕೈಪುಗ್ಗಗಳ ಮೇಲೆ ಇರಕಲ್, ಧನಪಡೀ ಮತ್ತು ನಾರಾಯಣಪೇಟೆ ಅಂಚಿನ ಉತ್ತಮ ಮತ್ತು ಬಣ್ಣದ ಖಾತ್ರಿಯ ಸೀರೆಗಳು ಯೋಗ್ಯಬೆಲೆಗೆ ಸಿಕ್ಕುತ್ತವೆ.

ಎಲ್ಲಕ್ಕಿಂತ ಅಗ್ಗ ! ಎಲ್ಲಕ್ಕಿಂತ ಉತ್ತಮ !
ಮಿಕ್ಕ ಬ್ಲೇಡುಗಳಿಗಿಂತ ಅಚ್ಚುಕಟ್ಟಾದ ಹೆಚ್ಚಿನ ಕೆಲಸ !

೫ ಆಣೆಗೆ ೧೦ ಬ್ಲೇಡು !

ಕ್ಕುಬ್ಬ ಜೀವನದಿಂದ ಅಸಹ್ಯಗೊಂಡು ಕಮಲೇಶನು ಮುಂದೆ ನಡೆದನು.

ಬೇಸರಗೊಂಡ ಕಮಲೇಶನು, ಮುಂದೆ ಎರಡುಮೂರು ವರ್ಷಗಳ ವರೆಗೆ ತನ್ನ ಪ್ರಯೋಗವನ್ನು ಅವಕಾಶವಿಲ್ಲದೆ ನಿಲ್ಲಿಸಬೇಕಾಯಿತು. ಅವನ ಮನಸ್ಸಿನ ತಳಮಳ ಹಾಗೆಯೆ ಇತ್ತು. ಒಂದು ಸಲ ಅವನು ವಾಸಿಸುತ್ತಿದ್ದ ಮನೆಯ ಎದುರಿಗೆ ಒಂದು ಮನೆ ಖಾಲಿ ಬಿತ್ತು. ಆ ಮನೆಯಲ್ಲಿ ೮-೧೦ ವರ್ಷಗಳಿಂದ ಮುಲ್ತಾನಿ ಸೇಠೋಬ್ಬನು ಸೇರಿಕೊಂಡಿದ್ದು, ಸರ್ಕಾರದವರು ತಂದ ಲೇವಾದೇವಿಯ ಕಾನೂನು ತನ್ನ ಹಣದ ವ್ಯವಹಾರಕ್ಕೆ ಕುಠಾರಪ್ರಾಯವಾದ ಕಾರಣ, ಮನೆಯನ್ನು ಬಿಟ್ಟು ತನ್ನ ಜನ್ಮಸ್ಥಳಕ್ಕೆ ಹೊರಟು ಹೋದನು. ಖಾಲಿಬಿದ್ದ ಮನೆಗೆ ಮೈಸೂರಿನ ಪ್ರಸಿದ್ಧ ಲಾಯರೊಬ್ಬರು ಬಾಡಿಗೆಗೆ ಬಂದರು.

ಕಮಲೇಶನ ದೃಷ್ಟಿ ಆ ಕಡೆ ಬಿತ್ತು. ಲಾಯರು ಧನವಂತರು, ಗುಣಾಢ್ಯರು. ಆಷ್ಟು ಆರೋಗ್ಯದೃಢಕಾಯರಾಗಿರದಿದ್ದರೂ ಪ್ರತಿಭಾಶಾಲಿಗಳು. ಸ್ವಲ್ಪ ರೋಗಗ್ರಸ್ತರಾದರೆ ಅವರ ಔಷಧೋಪಚಾರಕ್ಕೆ ಡಾಕ್ಟರೂ, ಹಕೀಮರೂ, ಪಂಡಿತರೂ ಸಿದ್ಧರಾಗುತ್ತಿದ್ದರು. ಆಷ್ಟು ಔಷಧಿಗಳಲ್ಲಿ ಲಾಯರಿಗೆ ಯಾವುದರಲ್ಲಿ ನಂಬಿಕೆ ಇರುತ್ತಿತ್ತೋ ಅದನ್ನೇ ಸೇವಿಸುತ್ತಿದ್ದರು. ಪತ್ನೀ-ಪುತ್ರರ ಮೇಲೆ ಆಷ್ಟು ಮಮತೆ ಕಾಣಲಿಲ್ಲ. ಅವರಲ್ಲಿ ಐಶ್ವರ್ಯವಿದ್ದರೂ ಬಡತನವಿತ್ತು. ' ಲಾಯರಿಗೂ ಪ್ರಶಾಂತಜೀವನಕ್ಕೂ ಆಕಾಶ-ಪಾತಾಳದಷ್ಟು ಅಂತರವಿತ್ತು.

ಬಡತನದ ಸಂಸಾರದಲ್ಲಿ ಚಿತ್ತಕ್ಕೆ ಶಾಂತಿ ಇಲ್ಲವೆಂದು ಮನಗಂಡಿದ್ದರೂ ಕಮಲೇಶನು ಸುಣ್ಣದ ನಿಂಗಯ್ಯನವರ ಪರಿಚಯವನ್ನು ಬೆಳೆಸಿದನು. ಅವರ ಸರಳ ಜೀವನದಲ್ಲಿ ತೋರಿಕೆ, ಕೃತ್ರಿಮತೆ ಇರಲಿಲ್ಲ. ಸಾಮಾನ್ಯ ಓದುಬಲ್ಲವರಾಗಿದ್ದರೂ ಯೋಗ್ಯರಾಗಿದ್ದರು. ಅವರಿಗೆ ಜನರು ಯಾವುದನ್ನು ಕೆಟ್ಟುದೆಂದು ತಿಳಿದು ಆಡಿಕೊಳ್ಳುತ್ತಿದ್ದರೋ ಅದೇ ಪಾಪ, ಯಾವುದು ಶ್ರೇಷ್ಠವೆಂದು ಪ್ರಶಂಸಿಸುತ್ತಿದ್ದರೋ ಅದೇ ಪುಣ್ಯ. ನೀತಿ, ಜ್ಞಾನ, ದರ್ಶನಶಾಸ್ತ್ರಗಳಿಗೂ ನಿಂಗಯ್ಯನವರಿಗೂ ಸಂಬಂಧವೇ ಇರಲಿಲ್ಲ.

ಹತಾಶನಾದ ಕಮಲೇಶನಲ್ಲಿ ಕ್ಲೇಶವು ಮತ್ತೂ ಬೆಳೆಸಾಯಿತು. ಹಾಗಾದರೇನು, ಇದೇ ಜೀವನವೆ? ಅಶಾಂತಿಯ ಮೂಲ ಪರಮಾಣುಗಳು ಒಂದೊಂದು ಸಲ ಒಂದೊಂದು ರೂಪದಲ್ಲಿ ತೋರುತ್ತಿದ್ದುವು. ಹಾಗೆ ಎಲ್ಲೆಲ್ಲೂ ಅಶಾಂತಿಯೇ ಇದ್ದ ಶಾಂತಿದಾಯಕ ಜೀವನಕಲೆಯನ್ನು ಹುಡುಕುವುದು ಸುಮ್ಮನೆ ವ್ಯರ್ಥ.

* * *

ಕಮಲೇಶನ ಹಿರಿಯ ಮಗ ಅಶ್ವತ್ಥನು, ಮೈಸೂರು ಇಂಟರ್ ಕಾಲೇಜಿನಲ್ಲಿ ಸೈನ್ಸ್ ತೆಗೆದುಕೊಂಡು ಓದುತ್ತಿದ್ದನು. ಬಾತಿಕ ಶಾಸ್ತ್ರದ ಅಧ್ಯಾಪಕರು ಕಮಲೇಶನ ದೂರದ ಸ್ನೇಹಿತರಲ್ಲೊಬ್ಬರು. ಒಂದುಸಲ ಕಮಲೇಶನು ಅಧ್ಯಾಪಕರ ಪ್ರಯೋಗಶಾಲೆಯಲ್ಲಿ ಕುಳಿತಿದ್ದನು. ಅಧ್ಯಾಪಕರು ಒಂದು ಗಾಜಿನ ಕೊಳವೆಯಲ್ಲಿ ನೀರನ್ನು ತುಂಬಿ ಏನೋ ಪ್ರಯೋಗ ನಡೆಯಿಸುತ್ತಿದ್ದರು. ಒಂದು ಗಾಜಿನ ಕೊಳವೆಯಿಂದ ಆವಿ ಬಂದು, ಮತ್ತೊಂದು ಕಣ್ಣಿಗಿರುವ ಗಾಜಿನ ಲೋಟದಲ್ಲಿ ನೀರಿನ ರೂಪವನ್ನು ಹೊಂದುತ್ತಿತ್ತು. ಅಧ್ಯಾಪಕರು ಕಮಲೇಶನಿಗೆ ಆ ನೀರನ್ನು ಕುಡಿಯಲು ಕೊಟ್ಟರು.

ಕಮಲೇಶನು ಒಂದು ಗುಟುಕು ನೀರು ಕುಡಿದು ಅಲ್ಲಿಯೇ ಇಟ್ಟುಬಿಟ್ಟನು. ಆ ನೀರಿನಲ್ಲಿ ರುಚಿಯೇ ಇಲ್ಲದಿದ್ದ ಕಾರಣ ಕಮಲೇಶನಿಗೆ ಸೇರದೆ ಆದನ್ನು ಹಾಗೇ ಇಟ್ಟುಬಿಟ್ಟನು. ಅಧ್ಯಾಪಕರು ಮತ್ತೊಂದು ಲೋಟದಲ್ಲಿ ನೀರು ತಂದುಕೊಟ್ಟರು. ಅದು ಬಾವಿಯ ನೀರಾಗಿದ್ದು ತುಂಬಾ ಸಿಹಿಯಾಗಿತ್ತು. ಕಮಲೇಶನಿಗೆ ಇದರ ಅರ್ಥ ತಿಳಿಯಲಿಲ್ಲ. ಅಧ್ಯಾಪಕರು ಹೇಳಿದರು :— " ಮೊದಲನೆಯದು ಪರಿಶುದ್ಧವಾದ ನೀರು. ಇದು ಬಾವಿಯ ನೀರು. ಇದರಲ್ಲಿ ಎಲ್ಲ ಪದಾರ್ಥಗಳ ಹಿತವಿಶ್ರಣವಿದೆ. ಭೂಮಿಯ ಕೆಳಗಡೆ ಗುಪ್ತಗಾಮಿನಿಯಾಗಿ ಅನೇಕ ಮೈಲಿಗಳು ಹರಿದು, ಪೃಥ್ವಿಯ ಅನೇಕ ಕ್ಷಾರಗಳನ್ನು ಹೀರಿ, ಕಡೆಗೆ ಬಾವಿಗೆ ಬಂದಿದೆ. ಇದರಲ್ಲಿ ಎಷ್ಟು ಮಲಿನತೆ ಇದೆಯೋ, ಎಷ್ಟು ಲೋಹಗಳು ಬೆರತಿವೆಯೋ, ಎಷ್ಟು ಪದಾರ್ಥಗಳು ಇದರಲ್ಲಿ ಅಡಗಿವೆಯೋ ! ಶುದ್ಧವೆನ್ನಿ, ಅಶುದ್ಧವೆನ್ನಿ, ಅಂತೂ ಇವೆಲ್ಲಾ ಇದರಲ್ಲಿವೆ.

ಕಮಲೇಶ :— ಆದರೂ ಏಕೆ ಸಿಹಿಯಾಗಿದೆ ?

ಅಧ್ಯಾಪಕರು :— ಇದರಲ್ಲಿ ಒಳ್ಳೆಯ ಮತ್ತು ಕೆಟ್ಟ ಪದಾರ್ಥಗಳ ಹಿತಮಿಶ್ರಣವಿರುವುದರಿಂದ. ಇದೇ ಆದರಲ್ಲಿನ ರುಚಿಯ ರಹಸ್ಯ.

ಸಿಹಿನೀರಿನ ರುಚಿಯ ರಹಸ್ಯವನ್ನರಿತ ಕಮಲೇಶನು ಸಂಪೂರ್ಣ ಜೀವನದ ಮರ್ಮವನ್ನು ಮತ್ತೆ ಚಿಂತಿಸತೊಡಗಿದನು. ' ಒಳ್ಳೆಯ ಮತ್ತು ಕೆಟ್ಟ ಪದಾರ್ಥಗಳ ವಿಶ್ಲೇಷಣದಿಂದ ನೀರು ಸಿಹಿಯಾಗುವಂತೆ, ಶಾಂತಿ ಮತ್ತು ಅಶಾಂತಿಯ ಹಿತವಿಶ್ಲೇಷಣದಿಂದ ಜೀವನವೂ ಏಕೆ ಸುಖಮಯವಾಗಬಾರದು ? ' ಎಂದು ಅವನಿಗೆ ಹೊಳೆಯಿತು.

ಹಾಗಾದರೆ ಜೀವನವೂ ಒಂದುಬಗೆಯ ಸಿಹಿನೀರೇ ?

ಭಿಕ್ಷು ಉತ್ತಮ

ಆಳಾದನನ ಕೈಯಲ್ಲಿರುವ ಜೀವರತ್ನವು ಮೊರಡಿಯ ಬೆಣಚು ಗಲ್ಲು; ಅರಸಾಗಿರುವನ ಮುಟ್ಟಿದ ಕಾಡುಗಲ್ಲೂ ವಜ್ರದ ಹರಳು. ಭಿಕ್ಷು ಉತ್ತಮ ಬೋಧಿಸಿದ ಬೌದ್ಧಧರ್ಮ ಒಳ್ಳೆಯ ದಾದರೂ 'ಗುಲಾಮರ ಧರ್ಮ' ಎಂಬ ಹೀಯಾಳಿಕೆಗೆ ಗುರಿಯಾಯಿತು. ಈ ಹೀಯಾಳಿಕೆಯೆ ಉತ್ತಮನಿಗೆ ಸ್ವಾತಂತ್ರ್ಯದ ಹಸಿವನ್ನು ಹೆಚ್ಚಿಸಿತು.

★

ಶ್ರೀ. ಎಸ್. ಕೃಷ್ಣಶರ್ಮ

ಬುದರಾಸು ಕಾಂಗ್ರೆಸ್ಸಿಗೆ ಹೋದ ಜನ, ಮುಂದಾಳುಗಳ ಗುಂಪಿನಲ್ಲಿ ಒಬ್ಬ ವಿಚಿತ್ರ ಸಂನ್ಯಾಸಿಯನ್ನು ನೋಡಿದರು. ಪ್ಯೆನೇಲೆ ಕೇಸರಿ ಬಣ್ಣದ ವಸ್ತ್ರ; ಕೈಯಲ್ಲಿ ಬರ್ಮಾ ಛತ್ರಿ; ಕಸುವಿನ ಕಾಲುಗೊರಸಿನಂಥ ಆ ಮೆಟ್ಟು. ನುಣ್ಣಗೆ ಮಿಂಡುತ್ತಿದ್ದ ತಲೆ. ಮೋರೆಯಲ್ಲಿ ವಿಲಕ್ಷಣ ತೇಜಸ್ಸು.

ಆ ವ್ಯಕ್ತಿಯೇ ಬೌದ್ಧ ಭಿಕ್ಷು **ಉತ್ತಮ**. ಭಿಕ್ಷು ಉತ್ತಮ ಸಬಾಗಿ ಉತ್ತಮ ಭಿಕ್ಷು. ಹಿಂದು ಸಂಸ್ಕೃತಿಯ ಉತ್ತಮ ಫಲ.

ಯಾರೋ ಒಮ್ಮೆ ಭಿಕ್ಷುವನ್ನು ಕೇಳಿದರಂತೆ: 'ನೀವು ಯಾವ ದೂವ ದೇಶಕ್ಕೆ ಹೋಗಿದ್ದಿರಿ, ಭಿಕ್ಷು?' ಎಂತ. ಉತ್ತಮ ಕೇಳಿದರು:—'ಎರಡೇ ಎರಡು ಪ್ರದೇಶಕ್ಕೆ ಹೋಗಿಲ್ಲ, ಉಳಿದುವೆಲ್ಲ ನೋಡಿದೇನೆ.' 'ಅವೆರಡು ಯಾವುವು?' 'ಒಂದು ಸ್ವರ್ಗ, ಕನ್ನಿಂದು ನರಕ.' ಎಲ್ಲರೂ ಬಿದ್ದುಬಿದ್ದು ನಕ್ಕರು.

ಹೌದು. ಭಿಕ್ಷು ಉತ್ತಮ ಜಗತ್ಸಂಚಾರಿ. ಅವರು ಕಾಲಿಡದ ದೇಶವೇ ಇಲ್ಲ. ನೂರು ಲೋಕಗಳು ನಮ್ಮ ತಿಳಿವಿಗೆ ಸಿಕ್ಕಿದ್ದರೆ, ಸಾಂಪನನ್ನೂ ವಿಹಾರಿಸಿಬಿಡುತ್ತಿದ್ದರೋ ಏನೋ. ಜಗತ್ತನ್ನು ಕುಣಾ ನೋಡಿದರು. ೨–೩ ಸಲ ಅದನ್ನು ಸುತ್ತಿದರು. ಸುಮ್ಮನೆ ವಿಲಾಸವಿನೋದಕ್ಕಾಗಿ ಅವರು ಲೋಕಯಾತ್ರೆ ಮಾಡಿಲ್ಲ. ಚೆನ್ನಾಗಿ ಕಣ್ಣುಬಿಟ್ಟು ನೋಡಿದರು. ಅವರ ಪ್ರಪಂಚಯಾತ್ರೆಯೇ ಅವರಿಗೆ ದೊಡ್ಡ ವಿದ್ಯಾಭ್ಯಾಸವಾಯಿತು.

ಉತ್ತಮ ಬರ್ಮಾ ಜನ. ಹುಟ್ಟಿದುದು ಆಕ್‌ಯಾಬಿನಲ್ಲಿ. ಏಳನೆಯ ವರ್ಷಕ್ಕೇ ಅವರ ತಂದೆ ತೀರಿಕೊಂಡರು. ತಾಯಿಯೇ ಎಲ್ಲ ಹೊಣೆಯನ್ನೂ ಹೊತ್ತರು. ಮಗುವನ್ನು ಪಾಠಧಮಿಕ ಶಾಲೆಗೆ ಹಾಕಿದ್ದಾಯಿತು. ಉತ್ತಮ ಬುದ್ಧಿಯಲ್ಲಿ ಚುರುಕು. ಆಗ ಬರ್ಮಾದೇಶದಲ್ಲಿದ್ದ ನಾರ್ಮಲ್ ಸ್ಕೂಲನ್ನು ಮುಗಿಸಿ ಸ್ಟ್ರೇಂಡ್ ಆಗಿ ಹೊರಬಿದ್ದ. ವಿದ್ಯಾಭ್ಯಾಸ ಮುಗಿದ ಮೇಲೆ ಸಮ್ಮಲ್ಲಿ ಮಾಡುವುದೇನು–ಗೊತ್ತೇ ಇದೆ. ನೌಕರಿ ಹಿಡಿಯುವುದು. ಉತ್ತಮನೂ ಬರ್ಮಾ ಹೆಣ್ಣುಮಕ್ಕಳ ಶಾಲೆಯೊಂದರಲ್ಲಿ ಶಿಕ್ಷಕನಾದ. ಆದರೆ ಆ ಸಪ್ಪೆಬಾಳಿನ ಗುಲಾಮಗಿರಿ ಈ ಧೀರ ಜೀವಕ್ಕೆ ಹೇಗೆ ಒಗ್ಗಬೇಕು. ಆಗ ಉತ್ತಮನಿಗೆ ಇನ್ನೂ ಹರಯ. ರಕ್ತದಲ್ಲಿ ಜಗತ್ತನ್ನೇ ಗೆಲ್ಲುವ ಬಿಸಿ. ಮನಸಿನಲ್ಲಿ ಐಶ್ವರಹಸ್ಯವನ್ನು ತಿಳಿಯಬೇಕೆಂಬ ಕುತೂಹಲ. ಉರ್ದೂ ಕವಿಯೊಬ್ಬ ಹೇಳಿದಾನೆ: 'ಹರೆಯ ಬಂದಿದೆ. ಜಗತ್ತೆಲ್ಲ ಸೂರ್ಯನ ಬಂಗಾರದ ಕಿರಣಗಳಿಂದ ಬೆಳಗುತ್ತಿದೆ. ಈಗಲೇ ಹೊರಡು. ಯಾತ್ರೆ ಮಾಡಿನೋಡು. ಸಂಜೆಯಾದ ಮೇಲೆ ಬರೀ ಕತ್ತಲು!' ಉತ್ತಮನಿಗೂ ಆತರದ ಹಂಬಲ.

ಕೆಲಸಕ್ಕೆ ಶರಣುಹೊಡೆದು, ಹೇಳದೆ ಕೇಳದೆ ಉತ್ತಮ ಬರ್ಮಾದಿಂದ ಜಾರಿ ಬಂಗಾಲಕ್ಕೆ ಬಂದ. ಕಲಿಕತ್ತೆಗೆ ತಲುಪಿದ. ಕೈಯಲ್ಲಿ ಕಾಸಿಲ್ಲ, ಊರಲ್ಲಿ ಗುರುತಿಲ್ಲ. ಬೇರೆ ಒಂದು ಪ್ರಪಂಚಕ್ಕೇ ಬಂದಹಾಗಿತ್ತು. ಜನ ಹೊಸಬರು, ನುಡಿ ಹೊಸದು. ರೀತಿ ರಿವಾಜು ಹೊಸ. ಎಲ್ಲಾ ಹೊಸದು. ಊರೆಲ್ಲ ಆಲೆದಲೆದು ಕಟ್ಟಕಡೆಗೆ ಯಾವ್ದೋ ಒಂದು ಚಿನಿವಾಲರ ಅಂಗಡಿಯಲ್ಲಿ ಲೆಕ್ಕಬರೆಯುವ ಕೆಲಸ ಸಂಪಾದಿಸಿಕೊಂಡ. ಹೊಟ್ಟೆಯ ಪಾಡಿಗಾಗಿ ಉತ್ತಮ ಆಲ್ಲಿಗೆ ಬಂದಿದ್ದನೇ? ಅವನ ಜೀವ ಹೊಸ ಅನುಭವಕ್ಕಾಗಿ ಹಂಬಲಿಸುತ್ತಿತ್ತು. ಕಲಿಕತ್ತೆಯ ಡಫ್ ಕಾಲೇಜಿಗೆ ಸೇರಿದ. ಅದರಲ್ಲಿ ಓಮುಕಲಿಸುತ್ತಿದ್ದುದು ಬಂಗಾಲಿಭಾಷೆಯಲ್ಲಿ. ಇವನಿಗೆ ಗೊತ್ತಿದ್ದುದು ಬರ್ಮಾಭಾಷೆ. ಈ ಮಹಾ ಸಾಹಸಿಗೆ ಅದೊಂದು ಲಕ್ಷ್ಯವೇ? ಬಂಗಾಲಿ ಕಲಿತ. ಅದರಲ್ಲೇ ಪರೀಕ್ಷೆಗೂ ಕುಳಿತ. ತೇರ್ಗಡೆಯೂ ಆದ.

ಉತ್ತಮನ ಓದು ಮುಂದೆ ಸಾಗಲಿಲ್ಲ. ಮುಂದೆಯೂ ಸಾಗಲಿಲ್ಲ. ಪದವೀಧರನಾಗಿ ಬೆಳೆಯಲೇ ಇಲ್ಲ. ಉತ್ತಮನ ಪಾಂಡಿತ್ಯ ಅವರ ಲೋಕಾನುಭವದ್ದು. ಅವರ ಪರಿವ್ರಾಜಕತನದಲ್ಲಿ ಹತ್ತೂ ಕಡೆ ಸಾವಿರಾರು ಜನರನ್ನು ನೋಡಿದರು. ಅವರೊಡನೆ ವ್ಯವಹಾರ ಮಾಡಿದರು. ಆ ಅನುಭವ ಅವರಿಗೆ ಬೆಳಕಾಯಿತು. ಅಂತೆಯೆ ಅವರ ಮಾತಿನಲ್ಲಿ ಅಮೇರಿಕಾ, ಯೂರೋಪು, ಚೀನ-ಜಪಾನುಗಳು ಸಹಾ ಬರುತ್ತಿದ್ದುವು. ಅಲ್ಲಿಯ ಸಂಪ್ರದಾಯಗಳ ಮಾತು, ಅಲ್ಲಿಯ ಉದ್ಯೋಗಶೀಲತೆಯ ವಿಷಯ ಅವರಿಗೆ ತುಂಬಾ ಪ್ರೀತಿ. ಅವರ ಜೊತೆಗೆ ಕುಳಿತು

ಗಂಟೆಗಟ್ಟಲೆ ಮಾತಾಡಿದರೂ ಬೇಸರ ಬರುತ್ತಿದ್ದಿಲ್ಲ. ಮಾತಿನಲ್ಲಿ ಆಷ್ಟು ಸರಸ.

ಅವರ ಮಾತಿನ ಸರಸಕ್ಕಿಂತ ಸ್ವಭಾವದ ಉತ್ಸಾಹ ದೊಡ್ಡದು. ಯಾವಾಗಲೂ ನಿಶ್ಚಿಂತರಾಗಿ ಪ್ರಸನ್ನಹೃದಯರಾಗಿ ಇರುತ್ತಿದ್ದರು. ಹಾಗಿರಲು ಬೇಕಾದ ನಿಸ್ಪೃಹತೆ ಅವರಿಗೆ ತುಂಬಾ ಇತ್ತು. ನಿಷ್ಕಾಮಕ್ಕೂ ಪ್ರಸನ್ನತೆಗೂ ತುಂಬಾ ಹತ್ತಿರದ ನಂಟು. ಆದರೆ ಉತ್ತಮನ ಸ್ವಭಾವದ ಪ್ರಸನ್ನತೆ ಬರಿಯ ಗಾಂಭೀರ್ಯವಲ್ಲ. ಆ ಜೀವ ಯಾವಾಗಲೂ ತುಂಬಿ ತುಳುಕುತ್ತಿತ್ತು. ನಾಲ್ಕು ದೇಶ ನೋಡಿ, ನಾಲ್ಕು ತರದ ಅನುಭವ ಗಳಿಸಿದವರಿಗೆ ಸ್ವಭಾವದಲ್ಲಿ ಸರಸತೆ ಇದ್ದರೂ ಉಲ್ಲಾಸ ಕಡಮೆಯಾಗಿರುತ್ತದೆ. ಆಲ್ಲೊಂದು ಇಲ್ಲೊಂದು ಪೆಟ್ಟು ತಿಂದವರಿಗಂತೂ ಸ್ವಭಾವದಲ್ಲಿ ಹುಳಿ ಸೇರಿ ಬಿಡುತ್ತದೆ. ಮೊಹರಂ ಹಬ್ಬದಲ್ಲಿ ಮುಸಲ್ಮಾನರು ಇರುವಂತೆ. ಉತ್ತಮನ ಹತ್ತಿರ ಆಂಥ ಗೋಳು ಸುಳಿಯದು. ಹತ್ತಿರ ಬಂದವರ ಮೊಹರವಿಾ ಸ್ವಭಾವವೂ ಬದಲಾಗುತ್ತದೆ.

ಒಮ್ಮೆ ಉತ್ತಮ ಇರುತ್ತಿದ್ದ ಚಾಪಾಸೀ ಮಂದಿರದಲ್ಲಿ ಕಳವಾಯಿತು. ಎಲ್ಲವನ್ನೂ ಹೊತ್ತಿದ್ದರು ಕಳ್ಳರು. ಏನೋ ಒಂದು ಕೆಲಸಕ್ಕಾಗಿ ೨೫೦ ರೂಪಾಯಿ ಕೂಡಿಸಿಟ್ಟಿದ್ದರು. ಒಂದು ಟೈಪುರಯಿಟರು ಯಂತ್ರ, ಕಾಗದ-ಪತ್ರಗಳ ಪೆಟ್ಟಿಗೆ. ಅವನ್ನೂ ಬಟ್ಟೆ ಬರೆ, ವಾತ್ರೆ ಪದಾರ್ಥ ಎಲ್ಲವನ್ನೂ ಕದ್ದರು. ಉಳಿದಿದ್ದು ದೆಂದರೆ ಪ್ಯೂಮೇಲಿನ ಅರಿವೆ ಮಾತ್ರ. ಮಾರನೆಯ ದಿನ ಬರ್ಮಾ ಪತ್ರಿಕೆಗಳಲ್ಲಿ ಒಂದು ಪ್ರಕಟನೆ ಬಂದಿತು: 'ಯಾರು ನನ್ನ ಸಾಮಾನು ಕದ್ದರೋ ಅವರು ಒಟ್ಟೆಯ ಕೆಲಸವನ್ನೇ ಮಾಡಿದರು. ಅದೇನು ತಪ್ಪಲ್ಲ; ಸಾಮಾನು ಅತನಿಗೆ ಉಪಯೋಗಕ್ಕೆ ಬರುತ್ತವೆ. ಅವ್ಯ ಅತನಿಗೇ ಇರಲಿ. ಆದರೆ ನನ್ನ ಪೆಟ್ಟಿಗೆಯಲ್ಲಿ ಕಾಗದ-ಪತ್ರ ಕೆಲವು ಇವೆ. ಅವು ನನಗೆ ಅತ್ಯಗತ್ಯ. ಅತನಿಗಂತೂ ಅವುಗಳಿಂದ ಏನೂ ಉಪಯೋಗವಿಲ್ಲ. ಅವನ್ನು ಹಿಂದಿರುಗಿ ತಲುಪಿಸಿದರೆ ನಾನು ಕೃತಜ್ಞನಾಗಿರುತ್ತೇನೆ. ಪೋಲೀಸರಿಗೆ ತಿಳಿಸುವುದೂ ಇಲ್ಲ, ಹೇಳುವುದೂ ಇಲ್ಲ!' ಕೆಳಗೆ ಸಹಿ—'ಭಿಕ್ಷು ಉತ್ತಮ.'

ಯಾರೋ ಕೇಳಿದರು: 'ಭಿಕ್ಷು, ಹೀಗೇಕೆ ಮಾಡಿದಿರಿ?' ಭಿಕ್ಷು ಒಡನೆಯೆ ಹೇಳಿದರು: 'ಅದಡ್ಡಿಲ್ಲ ಒಳಿತೇ ಆಯಿತು. ಭಿಕ್ಷುವಿಗೇಕೆ ಬೇಕು ಆ ಆಟ್ಟಹಾಸ? ಹಣ ಕಾಸು ಸಾಮಾನು ನನಗೇಕೆ? ದೇವರಿಗೆ ಹಾಗೆ ಅನಿಸಿರಬೇಕು. ಸರಿ, ಕಳ್ಳತನ ಮಾಡಿಸಿದ. ಜೆನ್ನಾಯಿತು, ಬಹಳ ಜೆಲೋ!' ಉತ್ತಮ ಮತ್ತೆ ಭಿಕ್ಷು ಆದ.

ಕಲಕತ್ತೆಯಲ್ಲಿ ಓದುಬಟ್ಟು ಒರ್ಮಾಕ್ಕೆ ಹಿಂದಿರುಗಿದ ಮೇಲೆಯೆ ಉತ್ತಮ ಭಿಕ್ಷು ಆದದ್ದು. ಆಲ್ಲಿ ಓದುವಾಗ ಇತಿಹಾಸವನ್ನು ಕೂಲಂಕಷವಾಗಿ ಓದಬೇಕಾಯಿತು. ಹಾಗೆ ಓದುವಾಗ ಬೌದ್ಧಕಾಲದ ಸ್ವರ್ಣಯುಗದ ದಿವ್ಯಕಳೆ ಉತ್ತಮನ ಮನಸ್ಸನ್ನು ಪೂರಾ ಸೆಳೆಯಿತು. ಹಿಂದುಸ್ತಾನದ ಗುಡಿ ಇತರ ಖಂಡಗಳಲ್ಲಿ ಹಾರುತ್ತಿದ್ದ ಕಾಲ ಅದು. ಹಿಂದುಸ್ತಾನದೊಳಗೂ ಅದು ಎಂಥ ಸಮಯ! ಭಾರತವೆಲ್ಲ ಒಂದೇ ಅರಸೊತ್ತಿಗೆ, ಸಾರ್ವಭೌಮ ಮೌರ್ಯರ ದಿನ. ಒಂದೇ ನಾಡು, ಒಂದೇ ರಾಜ್ಯ, ಒಂದೇ ಸಂಸ್ಕೃತಿ. ಆ ಬಲವಾದರೂ ಎಂಥದು. ನಮ್ಮ ಸಂಸ್ಕೃತಿ ಚೀನ-ಜಪಾನುಗಳಲ್ಲಿ ಹರಡಿತ್ತು. ನಮ್ಮ ಧರ್ಮ ಆವರಿಗೆ ಹಾದಿ ತೋರಿಸಿತ್ತು. ಈಗಲೂ ಆ ವಿಶಾಲಭಾರತದ ಕುರುಹು ಕಾಣುತ್ತಿವೆ. ಬುದ್ಧದೇವನ ಸಂದೇಶ, ಭಾರತಕ್ಕೆ ಒಂದು ಹೊಸ ಜೀವ ಕೊಟ್ಟಿತು. ಧರ್ಮ, ಸಂಸ್ಕೃತಿ, ಸಾಹಿತ್ಯ ಕಲೆ, ರಾಜ್ಯ, ವಾಣಿಜ್ಯ ಎಲ್ಲದರಲ್ಲಿಯೂ ಒಂದು ಹೊಸ ಪೈಪು ಬೆಳೆದು ಬಂದಿತು. ಆ ಕಾಲ ಮತ್ತೆ ಬರಲಾರದೇ? ಪಾತಾಳಕ್ಕೆ ಇಳಿದಿರುವ ಇಂದಿನ ಹಿಂದುಸ್ತಾನಕ್ಕೆ ಭಗವಾನ್ ಬುದ್ಧದೇವನ ಸಂದೇಶವನ್ನು ಮತ್ತೆ ಸಾರಿದರೆ ಆ ದಿನ ಮರಳಿ ಬಂದಾವೇನು? ಮತ್ತೆ ಭಾರತ ಬೆಳಗೀತೇ?.. ಹೀಗೊಂದು ಕನಸು ಉತ್ತಮನ ಮನಸಿನಲ್ಲಿ ಹೃದಯದಲ್ಲಿ ರೂಪುಗೊಂಡಿತು.

ಉತ್ತಮ ಸಂಕಲ್ಪಶಾಲಿ ಮನುಷ್ಯ. ಮನಸಿಗೆ ತೋರಿದುದನ್ನು ಮಾಡುವ ಜಾಣ್ಮನಿ. ಅದನ್ನು ಸಾಧಿಸುವುದರಲ್ಲಿಯೂ ಉಡಚ ಹಿಡಿತ. ಹಿಡಿದುದನ್ನು ಮಾಡಿಯೇತೀರಬೇಕು. ಹಿಂದುಸ್ತಾನದ ಪುನರುಜ್ಜೀವನದ ಸವಿಗನಸು. ಅದಕ್ಕೆ ಬೌದ್ಧಧರ್ಮಪ್ರಸಾರವೆ ಹಾದಿ ಎಂಬ ವಿಚಾರ. ಕೂಡಲೆ ಕಲಿಕತ್ತೆಗೆ ಕೈ ಮುಗಿದು. ಉತ್ತಮ ಬರ್ಮಾಕ್ಕೆ ಮರಳಿದರು. ಅಲ್ಲಿ ಭಿಕ್ಷುದೀಕ್ಷೆ ಸ್ವೀಕರಿಸಿದರು. ತನ್ನ ಕನಸನ್ನು ಸಾಧಿಸಲು ಮನೆಮಾರು, ಮುದುಪಿ, ಮಕ್ಕಳು ಎಲ್ಲವನ್ನೂ ಬಿಟ್ಟರು. ನಾಲ್ಕುವರ್ಷದ ದಿನ ಪಾಲಿ ಭಾಷೆಯ ಅಭ್ಯಾಸ, ಬೌದ್ಧದರ್ಶನದ ಅಧ್ಯಯನ ಮಾಡಿದರು. ಆದರಲ್ಲಿ ಸಾಕಷ್ಟು ಪಾಂಡಿತ್ಯ ಗಳಿಸಿದ ಮೇಲೆ ಮರಳಿ ಹಿಂದುಸ್ತಾನಕ್ಕೆ ಬಂದರು.

ಹಿಂದುಸ್ತಾನದಲ್ಲಿ ತಥಾಗತಸಂದೇಶದ ಪ್ರಚಾರ ನಡೆಯಿತು. ಆ ಭಾಷಣಗಳಲ್ಲಿ ಉತ್ತಮನ ದೇಶಾಭಿಮಾನ, ರಾಷ್ಟ್ರ ನಿರ್ಮಾಣದ ಹಂಬಲ ವಿಂಚಿನಂತೆ ಹೊಳಪುಗೊಂಡು ತೋರುತ್ತಿದ್ದುವು. ಜನರಿಗೆ ಎಲ್ಲಿಂದಲೋ ಹೊಸದೊಂದು ಅಪೂರ್ವಜನ ಕೇಳಿಸಿದ ಹಾಗೆ ಆಗಿತ್ತು. ಆದರೆ ಅದು ಬೌದ್ಧರ ಮಾತು. ಆದರಲ್ಲಿ ಹಿಂದೂ ಧರ್ಮದ ಬಣ್ಣವಿಲ್ಲ. ಪಂಡಿತರು ಭಿಕ್ಷುವಿಗೆ ಇದಿರು ಬಂದರು. 'ಸಂಸ್ಕೃತಭಾಷೆ ದೇವಭಾಷೆ, ಧರ್ಮಭಾಷೆ. ಅದೇ ಬಾರದೆ ಧರ್ಮೋಪದೇಶವೆಂತದು?' ಎಂದರು. ಉತ್ತಮನಿಗೆ ಸಂಸ್ಕೃತ ಬಾರದು. ಅಂಥ ಸಣ್ಣ ಬಾಯಿಗೆ ಧರ್ಮ ದೊಡ್ಡ ತುತ್ತು. ಈ ಗುಲ್ಲಿಗೆ ಭಿಕ್ಷು ಹೆದರಲಿಲ್ಲ. ಯಾವುದಕ್ಕೂ ಆಂಜದ ಸ್ವಾಮಿ. ಸರಿ, ಒಡನೆಯೇ ಕಾತಿಗೆ ತಿಕೀಟು ತೆಗೆದರು. ಕಾತಿಗೆ ಬಂದು ಅಲ್ಲಿ Queen's College ಸೇರಿದರು. ಮೂರುವರ್ಷ ಅಖಂಡವಾಗಿ ಸಂಸ್ಕೃತ, ಹಿಂದೀ ಕಲಿತರು.

ಅಲ್ಲಿಗೆ ಮುಗಿಯಲಿಲ್ಲ. ಸಜೀವ ಭಾರತದ ಸಮಗ್ರದರ್ಶನದಿಂದ ಹಿಂದೂ ಸಂಸ್ಕೃತಿಯ ಸಂಪೂರ್ಣ ಪರಿಚಯಮಾಡಿಕೊಳ್ಳುವ ಬಯಕೆಯಾಯಿತು. ಹಿಂದುಸ್ತಾನವನ್ನೆಲ್ಲ ಸುತ್ತಿದರು. ಕಾಶ್ಮೀರದಿಂದ ತಿರುವಾಂಕೂರಿನವರೆಗೆ—ಬಂಗಾಲದಿಂದ ಪಂಜಾಬಿನವರೆಗೆ ಒಂದು ವರ್ಷ ಕಾಲ ಓಡಾಡಿದರು.

ಈ ಭಾರತಪ್ರವಾಸದಲ್ಲಿ ಹುಟ್ಟಿದ ದೇಶಾಟನೆಯ ರುಚಿ, ಭಿಕ್ಷು ವನ್ನು ಆಲ್ಲಿಗೇ ಬಿಡದೆ ಪರದೇಶಯಾತ್ರೆಗೆ ಹಚ್ಚಿತು. ಅಲ್ಲಿ ಇಲ್ಲಿ ತಿರುಗಿ, ಕಡೆಗೆ ಇಂಗ್ಲೆಂಡಿಗೆ ಹೋಗಿ ಮುಟ್ಟಿದರು. ಅಲ್ಲಿ ಕೇಂಬ್ರಿಜ್ ಆಕ್ಸ್‌ಫರ್ಡಿಗೆ ಮಣ್ಣುಹಾಕಿದರು. ಲಂಡನ್‌ಗೆ ಬಂದು ಬ್ಯಾರಿಸ್ಟರಿ ಕಲಿಯಹತ್ತಿದರು. ಈ ಸುದ್ದಿ ಅವರ ತಾಯಿಗೆ ತಿಳಿದಾಗ ಆಕೆ ಬರೆದರು: 'ನೀನು ಸರ್ವಸಂಗ ಬಿಟ್ಟ ಸಂನ್ಯಾಸಿ. ಈ ವಕೀಲಿಯ ಕೆಲಸ ಸುಳ್ಳು-ಮೋಸದ್ದು, ಛಲದ್ದು. ಅದನ್ನು ಕಲಿಯಲೇಕೆ? ಬೇಡ' ಎಂದು. ಭಿಕ್ಷುವಿಗೆ ತಾಯಮಾತು ಸರಿ ಎನಿಸಿತು. ಇಂಗ್ಲೆಂಡು ಬಿಟ್ಟು ಹಿಂದಿರುಗಿದರು.

ಹಿಂದಿರುಗಿದಾಗ ೧೯೦೫. ವಂಗಭಂಗ ಚಳುವಳಿಯ ಸಮಯ. ಬಂಗಾಲದ ಹುಡುಗರೆಲ್ಲ ಒಟ್ಟಾಗಿ ಶಾಲೆ-ಕಾಲೇಜಿಗೆ ಬಹಿಷ್ಕಾರ ಹಾಕಿದ್ದರು. ಒಂದು ಪಿಳ್ಳೆಯೂ ಶಾಲೆಗೆ ಹೋಗುತ್ತಿರಲಿಲ್ಲ. ಅವರಿಗಾಗಿ ಒಂದು ವಿದ್ಯಾಪೀಠವನ್ನು ತೆರೆಯುವ ಏರ್ಪಾಟು ಮಾಡಿದರು. ಆ ರಾಷ್ಟ್ರೀಯ ವಿದ್ಯಾಪೀಠಕ್ಕೆ ಅರವಿಂದಘೋಷರೇ ಪ್ರಿನ್ಸಿಪಾಲರು. ಭಿಕ್ಷು ಭಾರತಕ್ಕೆ ತಿರುಗಿ ಬಂದಕೂಡಲೆ, ಆ ವಿದ್ಯಾಪೀಠದಲ್ಲಿ ಪಾಲೀ ಪ್ರೊಫೆಸರ್ ಆದರು. ಅಲ್ಲಿ ಒಂದು ವರ್ಷ ಕಳೆಯಿತು.

ಆಮೇಲೆ ಮತ್ತೆ ಬರ್ಮಾಕ್ಕೆ ಹಿಂದಿರುಗಿದರು. ಮೊದಲೇ ಧೀರಜೀವಿ, ದೇಶಾಭಿಮಾನ ಇದ್ದೇ ಇತ್ತು. ಬಂಗಾಲದಲ್ಲಿ ರಾಷ್ಟ್ರೀಯತೆಯ ಪರಿಚಯವೂ ಆಯಿತು. ಆ ಹೃದಯಕ್ಕೆ ಬರ್ಮಾದ ನೀರಸಜೀವನ ಸಹಿಸಲಿಲ್ಲ. ರಾಷ್ಟ್ರೀಯತೆ ದೇಶಾಭಿಮಾನಗಳು ಇಲ್ಲದ ಬರ್ಮಾ ಜನಜೀವನಕ್ಕೆ ಮರುಗಿದರು. ಆ ಮರುಕ ದೊಡ್ಡ ಬಿರುಗಾಳಿಯಾಗಿ ಪರಿಣಮಿಸಿತು. ಸ್ವದೇಶೀ, ರಾಷ್ಟ್ರೀಯತೆ, ಸಮಾಜಸುಧಾರಣೆಗಳ ಸಂದೇಶಗಳನ್ನು ಸಾರುತ್ತ ಊರೂರು ತಿರುಗಿದರು. ಬರ್ಮಾದೇಶ ಹೊಸ ಕಳೆಯಿಂದ ಬೆಳಗಿತು. ಹೊಸ ಹುರುಪಿನ ತೆರೆಯೊಂದು ಎದ್ದಿತು.

ಮೊದಲೇ ಪೋಲೀಸರಿಗೆ ಭಿಕ್ಷುವಿನ ಮೇಲೆ ಕಣ್ಣು. 'ಬಂಗಾಲದಲ್ಲಿ ಸುರೇಂದ್ರನಾಥ ಬ್ಯಾನರ್ಜಿ, ಅರವಿಂದಘೋಷರ ಜೊತೆ ಜಟ್ಟಿ ಇದ್ದರು' ಎಂದು ಆಪ್ತವಾದ ವರದಿ ಬಂದಿದ್ದುಷ್ಟೆ. ಅಲ್ಲದೆ ಬಂಗಾಲದಲ್ಲಿ ಸಂನ್ಯಾಸಿಗಳಿಂದರೆ ಸರಕಾರಕ್ಕೆ ಅಂಜಿಕೆ. ಒಬ್ಬೊಬ್ಬ ಸಂನ್ಯಾಸಿಗಳ ದಂಗೆಯೇ ಒಂದು ಆಗಿ ಸರಕಾರಕ್ಕೆ ತೇಲುಗಣ್ಣು ಮೇಲುಗಣ್ಣಾಗಿತ್ತು. ಈ ಭಿಕ್ಷು ಇಷ್ಟೆಲ್ಲ ಸಾಲದೆ, ದೊಡ್ಡ ಸಂಟರಗಾಳಿಯಂಥ ಚಳುವಳಿಯನ್ನೇ ಹೂಡಿದ್ದಾನೆ. ಬರ್ಮಾ-ಪೋಲೀಸರ ಕಣ್ಣು ಭಿಕ್ಷುವಿನ ಸುತ್ತಲೂ ಪಂಜರದಂತೆ ಹೆಣೆದು ಕೊಂಡುಬಿಟ್ಟಿತು. ಜನರಿಗೆ ಇಂತಹವು ಬೇಗನೆ ಗೊತ್ತಾಗುತ್ತವೆ. ಭಿಕ್ಷುವಿಗಿಂತ ಮೊದಲೇ ಅವರಿಗೆ ಇದು ತಿಳಿಯಿತು. ಜನರು 'ಭಿಕ್ಷುವಿನೊಡನೆ ಮಾತಾಡಿದರೆ ಏನೋ' ಎಂದು ಹೆದರಿದರು. ಗೆಳೆಯರು, ಬಳಗ ಎಲ್ಲರೂ ದೂರ ಸರಿದರು. ಇಂಥ ಪರಿಸ್ಥಿತಿ ಯಲ್ಲಿಯೂ ಭಿಕ್ಷು ಹಿಡಿದ ಕೆಲಸ ಬಿಡಲಿಲ್ಲ. ಒಂದುವರ್ಷದ ವರೆಗೆ ಪ್ರಚಾರ ನಡೆಯಿಸಿದರು.

ಇಷ್ಟು ಹೊತ್ತಿಗೆ ಜಪಾನಿಗೆ ಹೋಗುವ ಬಯಕೆ ಆಗಿತ್ತು ಭಿಕ್ಷುವಿಗೆ. ಜಪಾನು ಬೌದ್ಧಧರ್ಮಕ್ಕೆ ಇನ್ನೂವರೆಗೆ ಆಸರೆ ಯಾಗಿದೆ. ಅದನ್ನು ನೋಡಿ, ಆ ಧರ್ಮದ ಈಗಿನ ರೂಪ ತಿಳಿದು ಕೊಳ್ಳಬೇಕು. ಜಪಾನಿಗೆ ಹೋದ ಮೇಲೆ ಭಿಕ್ಷು ಅಗಸ್ತ್ಯ-ಭ್ರಾತರಾಗಿ ಉಳಿಯಲಿಲ್ಲ. ಕ್ಯೋಟೋ ನಗರದಲ್ಲಿನ ಜಾಪಾನೀ ವಿಶ್ವವಿದ್ಯಾನಿಲಯದಲ್ಲಿ ಪಾಲೀ ಪ್ರೊಫೆಸರ್ ಆದರು. ಬೌದ್ಧ-ದರ್ಶನಕ್ಕೂ ಆವರೇ. ಜಾಪಾನೀ ಹುಡುಗರಿಗೆ ಬೌದ್ಧದರ್ಶನ ವನ್ನು ಜಾಪಾನೀ ನುಡಿಯಲ್ಲಿಯೇ ಕಲಿಸುವುದು ಉತ್ತಮವೆಂದು ಅವರಿಗೆ ತೋರಿತು. ಸರಿ; ಕೂಡಲೆ ಜಾಪಾನೀ ಭಾಷೆಯನ್ನು ಕಲಿತರು. ಆಗ ಚೀಣದ ಕೆಲವು ವಿದ್ಯಾರ್ಥಿಗಳು ಜಪಾನಿನಲ್ಲಿ ಓದುತ್ತಿದ್ದರು. ಅವರೆಲ್ಲರೊಡನೆ ಭಿಕ್ಷುವಿನ ನಿಕಟಪರಿಚಯ ವಾಯಿತು. ಆ ಗುಂಪಿನಲ್ಲಿ ಚೀಣದ ಸರ್ವೋದ್ಧಾರಕ್ಕೆ ಕಾರಣ ನಾದ ಸನ್-ಯಾಟ್-ಸೇನನೂ ಇದ್ದ.

ಕ್ಯೋಟೋ ವಿಶ್ವವಿದ್ಯಾಲಯದಲ್ಲಿ ಮೂರುವರ್ಷ ಕರಾರು. ಆ ಅವಧಿಯಲ್ಲಿ ಬಂದ ಸಂಬಳವನ್ನು ಕೂಡಿಟ್ಟು, ಗಡುವು ಮುಗಿ-ಯುತ್ತಲೇ ಮತ್ತೆ ಯಾತ್ರೆಗೆ ಮೊದಲುಮಾಡಿದರು. ಚೀನ, ಕೊರಿಯಾ, ಮಂಗೋಲಿಯಾ, ಮಂಚೂರಿಯಾ, ಸೈಬೀರಿಯಾ ಗಳನ್ನೂ ಸುತ್ತಿದರು. ಸೈಬೀರಿಯಾದ ಹಾದಿಯಿಂದ ಯೂರೋಪಿಗೆ ಹೋಗಿ, ಅದನ್ನೆಲ್ಲಾ ನೋಡಿ ಅಮೇರಿಕಾಕ್ಕೆ ಹೋದರು. ಹೊರಟ

ಮಕ್ಕಳಿಗೆ

ಡೋಂಗರೆ ಬಾಲಾಮೃತವು

ಆದರ್ಶಕರವಾದ ಪೌಷ್ಟಿಕ.

ಮತ್ತು ಇದರಿಂದ

ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ.

ಅವರು ಹಾಗೆಯೇ ಪ್ರಪಂಚವನ್ನು ಒಂದು ಸುತ್ತು ಹಾಕಿದರು. ಕೆನಡಾ, ಆಸ್ಟ್ರೇಲಿಯಾ, ಆಫ್ರಿಕಾ–ತಿರುಗಿ ಬರ್ಮಾಕ್ಕೆ ಸೇರಿದರು. ಆದರೂ ಬರ್ಮಾದಲ್ಲಿ ನಿಲ್ಲಲಿಲ್ಲ. ಪಡುವಣ ದೇಶಗಳ ಉದ್ಯೋಗ-ಕುಶಲತೆಯನ್ನು ನೋಡಿ, ಹಿಂದುಸ್ತಾನದ ಮುಂದಾಳುಗಳು ಬೆರಗಾಗಿ, ನಮ್ಮವರೂ ಹಾಗೆಯೆ ಯಂತ್ರಚಾಲಸಕುಶಲರಾಗ ಬೇಕೆಂದು ಲೆಕ್ಕಹಾಕುತ್ತಿದ್ದ ಕಾಲ. ಆ ಕಲೆಯನ್ನು ಕಲಿಯಲು ಎಷ್ಟೋಜನ ಕಷ್ಟಪಟ್ಟು ಪರದೇಶಗಳಿಗೆ ಹೋಗಿ, ಅಲ್ಲಿ ಕೂಲಿ ಮಾಡಿಯಾದರೂ ಕಲಿತು ಬರುತ್ತಿದ್ದರು. ಭಿಕ್ಕುವಿಗೂ ಆ ಹಾದಿಯಲ್ಲಿ ರುಚಿಕಂಡಿತು. ಬರ್ಮಾದಿಂದ ಹನ್ನೆರಡು ಜನರ ಗುಂಪೊಂದನ್ನು–ವಿದ್ಯಾರ್ಥಿಗಳದು–ಕರೆದು ಕೊಂಡು, ಭಿಕ್ಕು ಮತ್ತೆ ವಿಲಾಯತಿಗೆ ಹೊರಟರು. ಆದರಲ್ಲಿ ಅವರ ತಂಗಿಯು ಒಬ್ಬಳು. ಭಿಕ್ಕುವು 'ಹೆಣ್ಣು ಕಸ'ಎಂದು ತಿಳಿದಿರಲಿಲ್ಲ. 'ರಾಷ್ಟ್ರ'ನಿರ್ಮಾಣದ ಕೆಲಸದಲ್ಲಿ ಆಕೆಯ ನೆರವೂ ಅಗತ್ಯ. ಆಕೆಗೂ ಅದೊಂದು ಕರ್ತವ್ಯ' ಎಂಬುದು ಅವರ ಭಾವನೆ. ಅರ್ಧಜನವನ್ನು ಜಪಾನಿನಲ್ಲಿ ಸೇರಿಸಿದರು. ಉಳಿದವರನ್ನು ಅಮೇರಿಕಾಕ್ಕೆ ಕರೆದು ಕೊಂಡು ಹೋದರು. ಅಲ್ಲಿಂದ ಮರಳಿ ಜಪಾನಿಗೆ ಬಂದು ಆಸ್ಟ್ರೇಲಿಯಾ ಪೂರ್ವ ಹಿಂದೀದ್ವೀಪಗಳು, ಜಾವಾ, ಸುಮಾತ್ರಾ, ಇಂಡೋಚೀನ್ ಕ್ಯಾಂಬೋಡಿಯಾ, ಸಯಾಂಗಳ ಮಾರ್ಗವಾಗಿ ಹಿಂದುಸ್ತಾನಕ್ಕೆ ತಿರುಗಿ ಬಂದರು.

ಮರಳಿ ಬರುವಾಗ ಮಹಾಯುದ್ಧ ಪ್ರಾರಂಭವಾಗಿತ್ತು. ರಹದಾರಿ ಸಿಗುವುದು ಕಷ್ಟ. ಜಪಾನಿನಿಂದ ಆಸ್ಟ್ರೇಲಿಯಾಕ್ಕೆ ಬರುವಾಗ, ರಹದಾರಿಯ ಅಧಿಕಾರಿ ಭಿಕ್ಕುವನ್ನು ಹೆದರಿಸಿದ. 'ಆಸ್ಟ್ರೇಲಿಯಾಕ್ಕೆ ಯಾಕೆ ಹೋಗುತ್ತೀ? ಜರ್ಮನ ಎಮ್ಡೆನ್ ಎಲ್ಲಾದರೂ ಮುಳುಗಿಸಿ ಬಿಟ್ಟೀತು' ಎಂದ. ಉತ್ತಮನಿಗೆ ಈ 'ನಾವ ಭೀತಿ'ಯೇ? 'ಸತ್ತರೆ ಹಲವು ಬಾರಿಯಲ್ಲ, ಬಂದೇ ಸಲ, ಅದೂ ಸನ್ನ ಜೀವ ತಾನೆ! ನಿನಗೆ ಏಕರ ಅಂಜಿಕೆ?'ಎಂದು ಕೇಳಿದರು.

ಪ್ರಪಂಚಯಾತ್ರೆಯನ್ನು ವಿಲಾಸ-ವಿನೋದಗಳಿಗಾಗಿ ಭಿಕ್ಕು ನಡೆಯಿಸಲಿಲ್ಲ. ಹೋದ-ಹೋದಲ್ಲೆಲ್ಲ ಭಾರತೀಯ ಸಂಸ್ಕೃತಿಯ ಬಗ್ಗೆ ಜನರಿಗೆ ಹೇಳಿದರು. ಎಲ್ಲ ಕಡೆಯೂ ಜನ ಬಹಳ ಆದರದಿಂದ ಇವರ ಭಾಷಣಗಳನ್ನು ಕೇಳುತ್ತಿದ್ದರು. ಮೆಚ್ಚಿಯೂ ಮೆಚ್ಚುತ್ತಿದ್ದರು. ಆದರೇನು? ಕಡೆಗೆ ಫಲ ಮಾತ್ರ ಬೂದಿಯಲ್ಲಿ ಮಾಡಿದ ಹೋಮ. 'ಎಲ್ಲಾ ಜೆನ್ನಾಗಿದೆ. ಸರಿ. ಬಹಳ ಸೊಗಸು. ಆದರೆ ಇದಕ್ಕೆ ನಾವೇಕೆ ಮನ್ನಣೆ ಕೊಡಬೇಕು? ಇದು ಗುಲಾಮರ ಧರ್ಮ' ಅಂದು ಬಿಡುತ್ತಿದ್ದರು.

ಈ ಪರಾಧೀನತೆಯ ಕಹಿಅನುಭವ, ಹೋದ ಹೋದಲ್ಲೆಲ್ಲ ಭಿಕ್ಕುವಿಗೆ ಆಯಿತು. 'ಎಷ್ಟೇ ಉತ್ತಮ ಧರ್ಮವಿರಲಿ, ಸ್ವತಂತ್ರ ಜನಾಂಗವಲ್ಲದವರ ಧರ್ಮಕ್ಕೂ ಬೆಲೆಯಿಲ್ಲ' ಎಂಬುದು ಮನವರಿಕೆಯಾಯಿತು. 'ಸ್ವಾತಂತ್ರ್ಯ ಬರುವವರೆಗೆ ನಮ್ಮ ಧರ್ಮದ ಪ್ರಚಾರ ಮಾಡುವುದು ಕೂಡಾ ಅಸಾಧ್ಯ–ಅಸಂಭವ' ಎಂಬ ನಿಲುಕಿಗೆ ಬಂದರು. ಬೌದ್ಧಧರ್ಮ ಪ್ರಚಾರಕನಾಗಿದ್ದ ಭಿಕ್ಕು ಆ ವಿಚಾರವನ್ನು ನೆನೆನೆನೆದು, ಸ್ವಾತಂತ್ರ್ಯಸೇನೆಯ ಸಿವಾಯಿ ಆದರು. ಮರ-ಮುಂದಿಕಗಳನ್ನು ಬಿಟ್ಟು ಸಾರ್ವಜನಿಕ ಸೇವೆಯ ಸಮುದ್ರದಲ್ಲಿ ಧುಮುಕಿದರು.

ಕೆಲವುದಿನ ಸ್ವತಂತ್ರವಾಗಿ ತಮ್ಮಷ್ಟಕ್ಕೆ ತಾವೇ ಏನಾದರೂ ಸೇವೆಯನ್ನು ಮಾಡುತ್ತಿದ್ದರು. ಗಾಂಧೀಜಿ ಕಾಂಗ್ರೆಸ್ಸಿಗೆ ಕಾರ್ಯೋತ್ತೇಜನವನ್ನು ದಾನನಾಡಿದಾಗ (೧೯೨೦ರಲ್ಲಿ), ಭಿಕ್ಕುವಿಗೂ ಹಿಂದುಸ್ತಾನದ ಸಮರೋತ್ಸಾಹ ತಿಳಿಯಿತು. ತಾವೂ ಕಾಂಗ್ರೆಸ್ಸಿಗೆ ಸೇರಿದರು. ೧ ವರ್ಷ ಶಿಕ್ಷೆಯು ಆಯಿತು. ಆ ಗದ್ದಲದಲ್ಲಿ ಜೈಲಿನಿಂದ ಹೊರಗೆ ಬಂದಾಗ ಗಯಾ ಕಾಂಗ್ರೆಸ್. ಮೊದಲನೆಯ ಸಲ ಕಾಂಗ್ರೆಸ್ಸಿನ ಜನ ಈ ಕೇಸರೀ ಬಣ್ಣದ ಸಂನ್ಯಾಸಿಯನ್ನು ನೋಡಿದುದು ಈ ಬೌದ್ಧಕ್ಷೇತ್ರದಲ್ಲಿಯೇ. ಮುಂದೆ ೨–೩ ವರುಷಗಳೊಳಗಾಗಿಯೆ ಬರ್ಮಾದಲ್ಲಿ ಬಲವಾದ ರಾಜಕೀಯ ಜಳುವಳ್ಳಿಪ್ರಾರಂಭವಾಯಿತು. ಕೆಲವು ದಿನಗಳೊಳಗಾಗಿಯೆ ೩ ವರ್ಷದ ಶಿಕ್ಷೆಯಾಯಿತು ಭಿಕ್ಕುವಿಗೆ. ಆ ಮೂರು ವರ್ಷ ಮುಗಿಸಿ ಹೊರಗೆ ಬಂದಾಗ ಮದರಾಸುಕಾಂಗ್ರೆಸ್ಸು.

ಗಯಾ ಕಾಂಗ್ರೆಸಿನ ತರುವಾಯ, ಯುದ್ಧಾನಂತರ ಯುರೋಪಿನ ಪರಿಸ್ಥಿತಿಯನ್ನು ನೋಡಲು ವಿಲಾಯತಿಗೆ ಹೋಗಿ ಬಂದಿದ್ದರು. ಈಗ ಮತ್ತೆ ಜಪಾನಿಗೆ ಹೊರಟರು. ಚೀಣಕ್ಕೂ ಹೋದರು. ಚೀಣದಲ್ಲಿ ಭಾರತಕಾಂಗ್ರೆಸ್ಸಿನ ಪ್ರತಿನಿಧಿಯಾಗಿ ಸನ್-ಯಾಟ-ಸೇನನ ಸಮಾಧಿಗೆ ಪುಷ್ಪಾಂಜಲಿಯ ಉತ್ಸವಕ್ಕೆ ಹೋಗಿದ್ದರು. ತಿರುಗಿ ಬಂದಾಗ ಲಾಹೋರ್ ಕಾಂಗ್ರೆಸ್; ಮುಂದೆ ಭಿಕ್ಕುವಿನ ದೇಶಾಟನೆ ನಿಂತುಹೋಯಿತು. ಕಲಿಕತ್ತೆಯ ಪೋಲೀಸರು ಅವರನ್ನು ಸೆರೆಹಿಡಿದು, ಅವರಲ್ಲಿದ್ದ ರಹದಾರಿಯನ್ನು ಕಿತ್ತು-ಕೊಂಡರು. ಮತ್ತೆ ಕೊಡಲೇ ಇಲ್ಲ. ಜಪಾನ್, ಜರ್ಮನಿ, ಅಮೇರಿಕಾ ದೇಶಗಳಿಂದ ಕರೆಬಂದಿತ್ತು. ಆದರೆ ರಹದಾರಿ ಮತ್ತೆ ಸಿಕ್ಕಲೇ ಇಲ್ಲ.

ಧರ್ಮವೇ ತನ್ನ ಸರ್ವಸ್ವವೆಂದು ನಂಬಿದ್ದ ಭಿಕ್ಕುವಿಗೆ ಕಾಂಗ್ರೆಸ್ಸಿನಲ್ಲಿ ನಿಲ್ಲುವುದು ಆಗಲಿಲ್ಲ. ಪಂಡಿತ ಮಾಲವೀಯರಂತೆ ಅವರಿಗೂ ಹಿಂದೂ ಮಹಾಸಭೆಯ ಬಗ್ಗೆ ಅಭಿಮಾನವಿತ್ತು. ಆ ನೆಲೆತವೇ ೧೯೩೫ ರಲ್ಲಿ ಉತ್ತಮನನ್ನು ಹಿಂದೂಮಹಾಸಭೆಯ ಅಧ್ಯಕ್ಷಸನ್ನಾಗಿ ಮಾಡಿದ್ದು. ಮಹಾಸಭೆಯ ಅಧ್ಯಕ್ಷರಾಗಿ ಬಂದುವರುಷ ಭಾರತವನ್ನೆಲ್ಲ ಸುತ್ತಿದರು. ಅದುವರೆಗೆ ಹಾಗೆ ಯಾರೂ ಸುತ್ತಿರಲಿಲ್ಲ. ಉತ್ಸಾಹ, ಸರಲತೆ, ದೇಶಾಭಿಮಾನಗಳ ಮೂರ್ತಿಯೊಂದು. ದೇಶದಲ್ಲಿ ಗಾಳಿಗಾಲಿಂದ ಸುಳಿದಾಡಿದಂತಾಯಿತು. ಮಹಾಸಭೆಯಲ್ಲಿ ರಾಷ್ಟ್ರೀಯ ಭಾವನೆ ಕಂಡುಬಂತು. ಆದರೆ ಅದು ಬಹುಕಾಲ ನಿಲ್ಲಲಿಲ್ಲ. ನಿಲ್ಲಿಸಬಲ್ಲ ವ್ಯಕ್ತಿ ಮತ್ಸರ್ತ್ವವನ್ನು ನೀಗಿ ಅಮರರಾದರು.

ಸನ್-ಯಾಟ-ಸೇನರ ಸಮಾಧಿಗೆ ಪುಷ್ಪಾಂಜಲಿ ಅರ್ಪಿಸಿದ ಮಾತು ಬಂತಷ್ಟೆ. ಆ ಪ್ರಸಂಗದಲ್ಲಿ ಭಿಕ್ಕು ಉತ್ತಮ ನಡೆಸಿ-ಕೊಂಡ ರೀತಿ ಹಿಂದುಸ್ತಾನಕ್ಕೆ ಎಂದೆಂದಿಗೂ ಗೌರವಬರುವ ರೀತಿ. ಆ ಚಿತ್ರ ಹಿಂದೀ ಜನ ಎಂದೂ ಮರೆಯಲಾರದ ಚಿತ್ರ. ಚೀಣದ ಜನರು ತಮ್ಮ ದೇಶದ ಪುನರುಜ್ಜೀವನಕ್ಕೆ ಮುಖ್ಯ

ಕಾರಣನಾದ ಸನ್-ಯಾಟ-ಸೇನನಿಗೆ ತೋರಬೇಕೆಂದು ಮಾಡಿದ ಗೌರವದ ಸಂದರ್ಭ. ಜಗತ್ತಿನ ಎಲ್ಲ ದೇಶಗಳ ಪ್ರತಿನಿಧಿಗಳನ್ನೂ ಕರೆಯಿಸಿದ್ದರು. ಭಾರತಕ್ಕೂ ಕರೆಬಂತು. ಆಗ ಕಾಂಗ್ರೆಸ್ಸಿಗೆ ಪಂಡಿತ ಮೋತೀಲಾಲರು ಅಧ್ಯಕ್ಷರು. ಭಾರತದ ಪ್ರತಿನಿಧಿಯಾಗಿ ಆ ಉತ್ಸವದಲ್ಲಿ ಪಾಲುಗೊಳ್ಳಲು, ಭಿಕ್ಷು ಉತ್ತಮರಿಗೆ ಅವರು ತಿಳಿಸಿದರು. ಉತ್ತಮ ಹೋದಾಗ ಅಲ್ಲಿಯ ಎಲ್ಲ ಏರ್ಪಾಡನ್ನೂ ತಿಳಿದುಕೊಂಡರು. ಎಲ್ಲಿ ಯಾರು ನಿಲ್ಲಬೇಕು, ಯಾರು ಮೊದಲು ಸಮಾಧಿಗೆ ಹೂ ಏರಿಸಬೇಕು, ಯಾರು ಕಡೆಗೆ, ಎಲ್ಲಾ ಕ್ರಮವಾಗಿ ನಿಶ್ಚಿತವಾಗಿತ್ತು. ಹಿಂದುಸ್ತಾನ ಪರಾಧೀನವಾದ ನಾಡು. ಅದಕ್ಕೆ ಕೊನೆಯುಸ್ತಾನ. ಭಿಕ್ಷುವಿಗೆ ಇದು ಸಹನವಾಗುವುದು ಸಾಧ್ಯವೇ? ಚೀನದ ಮಂತ್ರಿಮಂಡಲ ದೊಡನೆ ಜಗಳವಾಡಿದರು. ತಮಗೆ ಪ್ರಥಮಸ್ಥಾನ ಸಿಗಬೇಕೆಂದು ವಾದಿಸಿದರು. 'ತಾವು ಜಗತ್ತಿನ ಜನಾಂಗಗಳಲ್ಲಿ ಎಲ್ಲಕ್ಕಿಂತ ದೊಡ್ಡ ಜನಾಂಗದ– ಕಿಲ ಕೋಟಿಯ– ಪ್ರತಿನಿಧಿ. ಹಿಂದುಸ್ತಾನ ದೊಡನೆ ಚೀನಕ್ಕೆ ಪುರಾತನ ಸಂಬಂಧ. ಅದೂ ಬಹಳ ಅಪ್ಯರೀತಿಯದು. ಭಾರತವು ಚೀನಕ್ಕೆ ಧರ್ಮಗುರು. ಈ ಕಾರಣ ನಾಲವೆ? ಈಗಂತೂ ಭಾರತ ಪರಾಧೀನ. ಎಂತಲೇ ಚೀನದ ಅತ್ಯಧಿಕ ಸಾನುಭೂತಿಗೆ ಪಾತ್ರ. ನಾಲದುದಕ್ಕೆ ತಾವು ಚೀನದ ಧರ್ಮ-ಬಾಂಧವ್ಯ– ಬೌದ್ಧ. ಬೌದ್ಧರಲ್ಲಿಯೂ ಭಿಕ್ಷು. ಹೀಗೆ ಎಲ್ಲ ರೀತಿಯಿಂದಲೂ ಭಾರತಕಾಂಗ್ರೆಸ್ ಪ್ರತಿನಿಧಿಗೆ ಯೋಗ್ಯ ಮರ್ಯಾದೆ ಸಿಗಬೇಕು' ಹೀಗೆ ವಾದಿಸಿದರು. ಆ ಮಂತ್ರಿಮಂಡಲ ಒಳ್ಳೆಯ ಪೇಚಿಗೆ ಬಿತ್ತು. ಆಂತೂ ಕಡೆಗೆ ಹಿಂದುಸ್ತಾನಕ್ಕೆ ದ್ವಿತೀಯ ಸ್ಥಾನ ಕೊಟ್ಟರು. ಮೊದಲನೆಯದ ರೋಮಿನ ಪೋಪನ ಪ್ರತಿನಿಧಿಗೆ. ಸನ್-ಯಾಟ್-ಸೇನ್ ಕಿರಸ್ತಾನರಲ್ಲವೆ?

ಪುಷ್ಪಾಂಜಲಿಯ ದೃಶ್ಯ ಬಹು ಗಂಭೀರವಾಗಿತ್ತು. ಎಲ್ಲರೂ ಸಜ್ಜಾಗಿ ನಿಂತಿದ್ದರು. ಎಲ್ಲಾ ಕಪ್ಪುಬಟ್ಟೆಗಳ ಕಡಲು. ನಡುವೆ ಬಿಕ್ಕು ಒಬ್ಬನೇ ಹಳದಿಯ ಬಣ್ಣದ ಕಪನಿಯವರು. ಪೋಪನ ಪ್ರತಿನಿಧಿ ಸದ್ದಿಲ್ಲದೆ ಹೋಗಿ ಮೊದಲು ಹೂ ಏರಿಸಿಬಂದ. ತರುವಾಯ ಈ ಸಂನ್ಯಾಸಿ ಹೆಜ್ಜೆಯಿಟ್ಟರು. ಜೊತೆಗೆ ನಾಲ್ಕು ಮಂದಿ ಶಿಷ್ಯರು. ಇವರು ಹೆಜ್ಜೆಯಿಟ್ಟಹಾಗೆ ಚೀನದ ರಾಷ್ಟ್ರೀಯ ಬ್ಯಾಂಡ್ ಅಕಸ್ಮಾತ್ತಾಗಿ ಬಾರಿಸಿತು. ಅದು ಏರ್ಪಾಡಿನಲ್ಲಿರಲಿಲ್ಲ. ಆದರೆ ಆ ಗಾಂಭೀರ್ಯದ ನೆಳಿತ ಅಂಥದು. ಸಮಾಧಿಯ ಬಳಿ ಹೋದವರು ಸುಮ್ಮನೆ ಹೂ ಏರಿಸಲಿಲ್ಲ. ಮೂರು ಸಲ ಅದಕ್ಕೆ ಪ್ರದಕ್ಷಿಣೆ ಮಾಡಿದರು. ಜನ ಬೆರಗಾಗಿ ನೋಡುತ್ತಿತ್ತು. ಪ್ರದಕ್ಷಿಣೆ ಮುಗಿಸಿ, ನಮಸ್ಕಾರವಾಡಿ ಬೊಗಸೆ ಹೂ ಅರ್ಪಿಸಿದರು. ತಟ್ಟನೆ ಬ್ಯಾಂಡು ನಿಂತಿತು. ಜನ ಪರವಶತೆಯಿಂದ ಭಿಕ್ಷುವನ್ನು ನಾಲ್ಕು ಉಪದೇಶದ ಮಾತಾಡೆಂದು ಕೂಗಿದರು. ಹಸಿಗಣ್ಣಿಂದ ಉತ್ತಮ 'ಚೀನಾಕ್ಕಾಗಿ ಭಾರತದ ಸಂಪೂರ್ಣ ಸಾನುಭೂತಿ ಇದೆ' ಎಂಬುದನ್ನು ತಿಳಿಸಿದರು.

ಶಾಂಘಾಯ ಪಟ್ಟಣದಲ್ಲಿ ಒಮ್ಮೆ ಆವರು ಸೀಖಗುರುದ್ವಾರದಲ್ಲಿ ವ್ಯಾಖ್ಯಾನಕೊಟ್ಟರು. ಅದರ ಪರಿಣಾಮವಾಗಿ ಬ್ರಿಟಿಷ್ ಪೋಲೀಸರು ಇವರ ಮನೆ ಹುಡುಕಬಂದರು. ಇವರು ಇದ್ದದ್ದು ಶಾಂಘಾಯಿಯ ಜಪಾನೀ ಭಾಗದಲ್ಲಿ. ಅದು ಆಂತರರಾಷ್ಟ್ರೀಯ ಪಟ್ಟಣ. ಹತ್ತು ಅಧಿಕಾರ ಅಲ್ಲಿ. ಬ್ರಿಟಿಷ ಅಧಿಕಾರಿ ಕೇಳಿದ: 'ನಿಮ್ಮಲ್ಲಿ ರಾಜದ್ರೋಹಕರ ಪುಸ್ತಕ ಇವೆಯೇ?' ಇವರ ಜೊತೆಗೆ ಇವರು ಇಳಿದಿದ್ದ ಮನೆಯ ಯಜಮಾನನೂ ಇದ್ದ. ಭಿಕ್ಷು 'ಬೇಕಾದಷ್ಟು ಇವೆ' ಎಂದರು. ಮನೆಯಾತ, ಅಧಿಕಾರಿ ಇಬ್ಬರೂ ಬೆದರಿದರು. ಅಧಿಕಾರಿ 'ಎಲ್ಲಿ, ಎಲ್ಲಿ' ಎಂದು ಒಟಗುಟ್ಟಿದ. 'ಇಲ್ಲಿ ನೋಡಿ, ಇಲ್ಲಿ ಇದರೊಳಗೆ' ಎಂದು ಭಿಕ್ಷು ತನ್ನ ಎದೆಯನ್ನು ತೋರಿದರು.

"ಆ ಧೈರ್ಯ, ಆ ಉದ್ವೇಗವೇ ಭಿಕ್ಷುವಿನ ಜೀವನಕ್ಕೆ ಆ ಸೊಬಗನ್ನು ಕೊಟ್ಟುವು. ಬರ್ಮಾದಲ್ಲಿ ಹಣವಂತರಿಗೇನು ಕಡಿಮೆಯಿಲ್ಲ. ವಿದ್ಯಾವಂತರಿಗೇನೂ ಕೊರತೆಯಿಲ್ಲ. ಭಿಕ್ಷುಗಳಿಗೆ ಅದು ತೌರುಮನೆ. ಆದರೂ ಉತ್ತಮ– ಬೌದ್ಧ ಸಂನ್ಯಾಸಿ– ಬರ್ಮಾದ ಸ್ವಾತಂತ್ರ್ಯಸಮರದ ಬಾಸಿಗ ಕಟ್ಟಿಸಿಕೊಂಡರು.

ಹಿಂದುಸ್ತಾನದ ಶ್ರೇಷ್ಠತರಗತಿಯ ವಿಮಾಸಂಸ್ಥೆಗಳಲ್ಲಿ ಒಂದಾದ

ದಿ ಏಶಿಯಾಟಿಕ್ ಗವ್ಹರ್ನ್‌ಮೆಂಟ್ ಸೆಕ್ಯೂರಿಟಿ

ಲೈಫ್ ಅಶ್ಯೂರನ್ಸ್ ಕಂಪನಿ, ಲಿ. ಬೆಂಗಳೂರು

ಇದುವರೆಗೆ ರೂ. ೨,೫೦,೦೦೦,೦೦ ವಿಮಾಕಾರ್ಯ ಮಾಡಿದೆ. ★ ೨೫,೦೦೦ ಸಂಸಾರಗಳಿಗೆ ವಿಮಾರಕ್ಷಣೆ ಜೊರಕಿಸಿದೆ.

ಕಡಿಮೆದರದ ಪಪ್ತೆಯ ಮೇಲೆ ವಿಮಾ ಇಳಿಸಬಹುದು.

ಏಶಿಯಾಟಿಕ್ ಕಂಪನಿಯ ಪ್ರಗತಿಯು ಕನ್ನಡಿಗರು ಹೆಮ್ಮೆ ಪಡತಕ್ಕದ್ದಾಗಿದೆ. ವಿಮೆ ಇಳಿಸಲು ಸುರಕ್ಷಿತವಾದ, ಭದ್ರವಾದ ಮೈಸೂರಿನ ವಿಮಾ ಸಂಸ್ಥೆ. ಹೆಚ್ಚಿನ ವಿವರಕ್ಕೆ ಬರೆಯಿರಿ.

ಏಜನ್ಸಿ ಸುಪರಿಂಟಿಂಡೆಂಟ್,

ಏಶಿಯಾಟಿಕ್ ಲೈಫ್ ಆಫೀಸ್, ಧಾರವಾಡ.

ನವೀನ ಗಾನ

ಶ್ರೀ. 'ಬೆಲ್ಲಾಲ'

೧

ಆಲಿಸಿರೆಲ್ಲರು, ಆಲಿಸಿರೆಲ್ಲರು,
ಸಗ್ಗದ ಇನಿದನಿಯಾಲಿಸಿರಿ!
ನವೀನರೀತಿಯ ನವೀನಗೀತದ
ಮಂಜುಲ ಗಾನವನಾಲಿಸಿರಿ!

೨

ಶ್ರುತಿರವನೇತಕೆ, ತಂಬುರಿನಾದವು
ನಾಚಿಪ ಗಾನದ ಇಂಚರಕೆ!
ಮೌನವ ಮನ್ನಿಸಿ ತನ್ನಯ ಕೀರ್ತಿಯ
ಕೆಡಿಸದೆ ಉಳಿಸಲು ಸುಮ್ಮನಿದೆ!

೩

ತಾಳದ ಭೀಷಣರವನಿನಿತಿಲ್ಲವು
ಲಯದ ಘರ್ಷಣರವವಿಲ್ಲ!
ಪಕ್ಕದ ವಾದ್ಯದ ಮೇಳನವಿಲ್ಲವು
ಗಾನದ ಇನಿದನಿ ಕುಂದಿಲ್ಲ!

೪

ಕೆಚ್ಚಿನ ಸಾಧನೆ ಗೈದಿಹೆನೆನ್ನುತ
ಹುಚ್ಚನ ತೆರದೊಳು ಅ ಅ ಅ—
ಎನ್ನುತ ತನ್ನಯ ಸಾಧನೆ ತೋರುವ
ನೀರಸಗಾಯನ ಗಾಯನನೆ?

೫

ಭಾವದ ಭರದೊಳು ತಾನೇ ತನ್ನನು
ಮರೆಯದ ಗಾಯಕ ಗಾಯಕನೆ?
ಇತರರ ಮನಗಳ ತನ್ನಯ ನಾದಿಗೆ
ಒಯ್ಯದ ಗಾಯಕ ಗಾಯಕನೆ?

೬

ನೋಡಿರಿ, ನಿಂದಿಹನಾಜೆಜೆಯಲ್ಲಿಯೆ
ನವೀನಗಾನದ ನವಪುರುಷ;
ಹುಚ್ಚನ ಕುಣಿತಕೆ ಕೈಗಳ ಹೊರಳಿಪ
ವಿಕಾರಚೇಷ್ಟೆಗಳಿನಿತಿಲ್ಲ!

೭

ಕಲ್ಲೊಳು ಕನೆದಿಹ ಮೂರ್ತಿಯಿದೆನ್ನುವ
ಭ್ರಾಂತಿಯ ಬೀರುತಲಿಹನಲ್ಲಿ;
ನವೀನ ರೀತಿಯ ನವೀನ ಗೀತೆಯ
ಹಾಡುತಲಿರುವನು ಮುದದಲ್ಲಿ!

ಕನ್ನಡಮ್ಮನ ಉದಯರಾಗ

ಶ್ರೀ. ಟಿ. ಎನ್. ಶ್ರೀನಿವಾಸಮೂರ್ತಿ

೧

ಏಳು, ಎಚ್ಚರಗೊಳ್ಳು, ಕನ್ನಡದ ಸಿರಿಗುವರ!
ಏಳು, ನಿದ್ದೆಯ ಮಾಣು: ಬೆಳಗಾಯಿತು!
ಏಳೆನ್ನ ಬಯಕೆ ಸಿರಿ, ಏಳೆನ್ನ ಬಾಳುಸಿರೆ,
ಏಳೆನ್ನ ಮುದ್ದೆ, ನೂರ್ಕಾಲ ಬಾಳು!

೨

ಮುಂಬೆಳಕು, ಹೊಂಬೆಳಕು ಅಂಬರದಿ ಬಿಂಬಿಸಿದೆ;
ಕೊಂಬಿಟ್ಟು ಕೂಗುತಿದೆ ಹಕ್ಕಿಮೇಳ:
ಕಮ್ಮಲರ ನರುಗಂಪು; ಬಣ್ಣ ಬಣ್ಣದ ಸೊಂಪು;
ಸುಮ್ಮಾನ ವೆರ್ಜಿಹುದು.. ಏಳು ಬಾಳ!

೩

ಹಿಮದ ಮುಕ್ತಾವಳಿಯ ಎಲೆಯ ಬಟ್ಟಲುಗಳಲಿ
ತರುರಾಜ ನಿರುತಿಗೆ ನಿವೇದಿಸಿಹುದು:
ಚೇತನ ತರಂಗಿಣಿಯ ಅಮಲ ಗಂಗಾಸ್ರೋತ
ಎಲ್ಲೆಡೆಯ ಜಡತೆಯನು ನೀಗಿಸಿಹುದು!

೪

ಕರುನಾಡ ಹೆಸ್ಮೆಯೇ, ಏಳೆನ್ನ ಬಲ್ಮೆಯೇ,
ಏಳಯ್ಯ ರಸಹೃದಯ, ಏಳು ಕಲಿಯೆ!
ವೀರಕಬ್ಬವ ಮಾಡು; ಜಡತೆಯನು ನೀಡಾಡು;
ಸೋದರರ್ಕಳೊಳಿಲ್ಲ ವೀರ್ಯವೂಡು!

೫

ನಾಡ ಕೀರ್ತಿಯ ಪಾಡು; ಕನ್ನಡದ ಸಿರಿಗುಡಿಯ
ನಭನೀಲಕೇರಿಸೈ: ಹಾರಿಸಯ್ಯ!
ಕರ್ನಾಡ ಚೆಲ್ವಿನವ ದಶದಿಸೆಗು ಹಬ್ಬಿಸೈ:
ಕನ್ನಡದ ತಾಯ್-ಆರತಿ ಪೂರ್ತಿಮಾಡು!

ಅಂತರಾತ್ಮನ ಕರೆ

ಶ್ರೀ. ವಿಶ್ವನಾಥ ಹೆಗಡೆ, ಮುಂಬಯಿ

ನಮ್ಮ ಬದುಕನ್ನು ತಿದ್ದಿಕೊಳ್ಳುವವರು ನಾವು. ನಮ್ಮ ನಮ್ಮ ಆದರ್ಶಗಳನ್ನು ಕಂಡುಕೊಂಡು ಅದಕ್ಕನುಸಾರವಾಗಿ ಕಾರ್ಯಪಥದಲ್ಲಿ ಕಾಲಿಡುತ್ತಿರಬೇಕು ನಾವು. ಇನ್ನೊಬ್ಬರ ಸೊಂಡೆಯಿಂದ ನೀರುಕುಡಿಯಬೇಕೆನ್ನುವವನು ತಾನೂ ಗುರಿಯನ್ನು ತಲ್ಪಲಾರ; ತನ್ನ ಸಮಾಜವನ್ನೂ ಗುರಿಗೆ ಮುಟ್ಟಿಸಲಾರ!

ನಮ್ಮ ಬಾಳುವೆಯು ಸಫಲವಾಗಬೇಕಾದರೆ ನಾವು ಮಾಡಬೇಕಾದ ಮುಖ್ಯಕಾರ್ಯವೇನೆಂಬುದನ್ನು ತಿಳಿದುಕೊಳ್ಳುವುದು ಅತ್ಯವಶ್ಯವಾಗಿದೆ

ಜೀವನಸಾಫಲ್ಯವನ್ನು ಎಲ್ಲರೂ ಒಂದೇ ದೃಷ್ಟಿಯಿಂದ ನೋಡುತ್ತಿರುವುದಿಲ್ಲ. ಈ ವಿಷಯದಲ್ಲಿ ಒಬ್ಬೊಬ್ಬರ ವಿಚಾರವು ಒಂದೊಂದು ಮಾದರಿಯದು. ಬೇರೆ ಬೇರೆ ಕಾಲಗಳಲ್ಲಿ, ಬೇರೆ ಬೇರೆ ಸಮಾಜಗಳಲ್ಲಿ, ಜೀವನಸಾರ್ಥಕ್ಯವು ಬೇರೆ ಬೇರೆ ಅರ್ಥದಿಂದ ಪೆರೆಯುವುದು. ಹಲವೆಡೆಗಳಲ್ಲಿ ಧನಿಕರಾಗುವುದೇ ಬಾಳುವೆಯಲ್ಲಿ ಮುಖ್ಯಕಾರ್ಯವೆಂದು ತಿಳಿಯುವುದುಂಟು. ಕೆಲವರು ಆಧ್ಯಾತ್ಮಿಕ ಉನ್ನತಿಯಾದರೆ ಜೀವನವು ಸಫಲವಾಯಿತೆಂದು ತಿಳಿಯುವರು. ಇನ್ನಿಷ್ಟು ಜನರು, ಬುದ್ಧಿಯನ್ನು ಬೆಳೆಯಿಸಿ ಹೆಚ್ಚು ಹೆಚ್ಚು ಜ್ಞಾನವನ್ನು ಸಂಪಾದಿಸಿದರೆ ಕೆಲಸತೀರಿತೆನ್ನುವರು. ದೇಶಸೇವೆಯು ಕೆಲವರ ಕಣ್ಣುಗಳಲ್ಲಿ ತುಂಬುವುದು. ಕೆಲವು ಸಮಾಜಗಳಲ್ಲಿ, ಸರಕಾರಿ ನೌಕರಿಯಲ್ಲಿ ಮೇಲುಮೇಲಿನ ಹುದ್ದೆಗೇರುವುದೇ ಸ್ತುತ್ಯವೆನ್ನುವವರಿದ್ದಾರೆ. ಹೀಗಿರುವುದರಿಂದ 'ಜೀವನಸಾಫಲ್ಯವೆಂದರೇನು?' ಎಂಬ ಪ್ರಶ್ನೆಗೆ ಎಲ್ಲರಿಗೂ ಸರಿಬೀಳುವ ಉತ್ತರ ಕೊಡುವುದೆಂದರೆ ಧಾರ್ಷ್ಟ್ಯವೇ ಸರಿ. ಏಕೆಂದರೆ ಅದನ್ನು ನಿರ್ಧರಿಸಲಿಕ್ಕೆ ಸರ್ವಸಮ್ಮತವಾದ ತಕ್ಕಡಿಯಾಗಲಿ, ಅಳೆಗೋಲಾಗಲಿ ಎಲ್ಲಿಯೂ ಇಲ್ಲ. ಆದರೂ, ಉಂಡು-ಉಟ್ಟು ಸಾಧ್ಯವಿದ್ದವರಿಟ್ಟಿಗೆ ಸುಖವಾಗಿದ್ದು, ತಮ್ಮ ಜನತೆಗೆ ಕೈಯಲ್ಲಾದ ಸಹಾಯಮಾಡಿ, ತನ್ನು ತಮ್ಮ ಜೀವನಕಾರ್ಯದಲ್ಲಿ ಶ್ರೇಯಸ್ಸು ಹೊಂದುವುದೇ ಜೀವನಸಾಫಲ್ಯವೆಂದು ಹೆಚ್ಚಿನ ಆತಂಕವಿಲ್ಲದೆ ಹೇಳಬಹುದು.

ಪ್ರತಿಯೊಂದು ವ್ಯಕ್ತಿಗೆ ಒಂದು ಸ್ಥಾನವಿದೆ. ಒಂದು ಕೆಲಸವಿದೆ. ನಮ್ಮ ಸಲುವಾಗಿ, ನಮ್ಮ ಸಮಾಜದ ಸಲುವಾಗಿ, ನಮ್ಮ ನಾಡಿನ ಸಲುವಾಗಿ, ನಾವು ಎಷ್ಟೋ ಚಿಕ್ಕ ಪುಟ್ಟ ಕೆಲಸಗಳನ್ನು ಮಾಡಬೇಕಾಗುತ್ತದೆಯಷ್ಟೆ! ನಮ್ಮ ಆಕಾಂಕ್ಷೆಗಳನ್ನು ನೆರವೇರಿಸಲೋಸುಗ ನಾವು ಹಲವು ಕಾರ್ಯಗಳನ್ನು ಕೈಕೊಳ್ಳುತ್ತೇವೆ. ಇವೆಲ್ಲವುಗಳಲ್ಲಿ ಅತಿಮಹತ್ತ್ವದ ಕೆಲಸವಾವುದೋ, ಗೌಣವಾವುದರಲ್ಲಿ ನಮ್ಮ ಒಲವಿದೆಯೋ, ಯಾವುದನ್ನು ಮಾಡಲೋಸುಗ ನಮ್ಮ ಶಕ್ತಿಯುಕ್ತಿಗಳು ಹಿಗ್ಗಿನಿಂದ ಧಾವಿಸುವುವೋ, ಅದೇ ನಮ್ಮ ಜೀವನಕಾರ್ಯವೆನ್ನಬಹುದು. ನಮ್ಮ ಅಳವು-ಒಲವುಗಳನ್ನು ಅರಿತು, ನಮ್ಮ ಮನಸ್ಸೊಪ್ಪುವ ಜೀವನಕಾರ್ಯವನ್ನು ಕಂಡುಕೊಳ್ಳದ ವಿನಾ, ನಮ್ಮ ಬಾಳುವೆಯು ಸುಗಮವಾಗದು; ನಮಗೆ ಸುಖವು ದೊರೆಯದು.

ಗೊತ್ತು-ಗುರಿಯಿಲ್ಲದೆ ತೇಲಿಹೋಗುವ ಹಡಗವು ಎತ್ತಲಾದರೂ ತಂಗಬೇಕಾಗುವುದು; ತೆರೆ-ಗಾಳಿಗಳು ಒಯ್ದ ಕಡೆಗೆ ಸಾಗಬೇಕಾಗುವುದು. ಅಂತಹ ಪ್ರಸಂಗ ಬಂದರೆ ಒಂಡೆಗೆ ಅಪ್ಪಳಿಸಿಯೊ, ಮಡುವಿನಲ್ಲಿ ಸಿಕ್ಕಿ, ಅನರ್ಥಕ್ಕೀಡಾಗ ಬೇಕಾಗುವುದು. ಆದರೆ ಒಂದು ನಿರ್ದಿಷ್ಟಸ್ಥಾನವಿದ್ದರೆ ಶಕ್ತಿ-ಯುಕ್ತಿಯಿಂದ ಅದನ್ನು ಸೇರಬಹುದು. ಅದರಂತೆಯೆ ಮನುಷ್ಯನಿಗಾದರೂ ಒಂದು ಧ್ಯೇಯವಿರಬೇಕು. ಧ್ಯೇಯವನ್ನು ಸಾಧಿಸುವುದರಲ್ಲಿ ಸ್ವಂತ ಕಲ್ಯಾಣವಾಗುವುದಲ್ಲದೆ, ಜಗತ್ತಿನ ಕಲ್ಯಾಣವೂ ಆಗುವುದು. ಸಾಧಕನ ಪ್ರತಿಯೊಂದು ನಡೆ-ನುಡಿಯಲ್ಲಿ ಆತ್ಮವಿಶ್ವಾಸದ ಕಳೆಯಿರುವುದು. ಅರಸರೂ ತಲೆಬಾಗಿಸುವಂತಹ ಗೌರವವು ಅವನಿಗೆ ಲಭಿಸುವುದು. ಎಲ್ಲೂ ದೊರೆಯದ ಆನಂದಕ್ಕೆ ಅವನು ಪಾತ್ರಸ್ಥನಾಗುವನು.

ಸಾಮಾನ್ಯವಾಗಿ ಚಿಕ್ಕಂದಿನಲ್ಲಿಯೇ ನಮ್ಮ ಒಲವು ಯೋಗ್ಯತೆಯೂ ಕಾಣಿಸಿಕೊಳ್ಳುವುವು. ಆಟ-ಪಾಟಗಳಲ್ಲಿ,ಮಾತು-ಕತೆಯಲ್ಲಿ ಅದು ಆಗಾಗ ವಿುಂಚುವುದು. ತಾರುಣ್ಯದಲ್ಲಿ ಅದು ಒಡೆದು ಕಾಣುವುದುಂಟು. ಅಂತರಾತ್ಮನು ಪ್ರತಿಯೊಂದು ವ್ಯಕ್ತಿಯನ್ನೂ ಕುರಿತು "ಇದೋ, ನಿನ್ನ ದಾರಿಯಿದು; ಹೀಗೆ ನಡೆ, ಇದು ನಿನ್ನ ಕೆಲಸ!" ಎಂದು ಆಗಾಗ ಹೇಳುವನು. ಆದರೆ ಅಂತರಾತ್ಮನ ಕಿರುದನಿಯನ್ನು ಆಲಿಸುವವರು ತೀರ ಕಡಿಮೆ. ಆ ಕಿರುದನಿಯನ್ನು ಹಿಸುಕಿ, ಬಾಳುವೆಯ ಹರಿಯು ಸೆಳೆದತ್ತ ಹೋಗುವವರೆ ಬಹಳ ಮಂದಿ. ಹೀಗಾಗಿ, ಅನುಕೂಲವಾದ ಇಲ್ಲವೆ ಸುಲಭಸಾಧ್ಯವಾಗುವ ಯಾವುದಾದರೊಂದು ಆಶ್ರಯವನ್ನು ಹೊಂದಿ, ಅನಪೇಕ್ಷಿತ ವಾತಾವರಣದಲ್ಲಿದ್ದು, ಹೊಟ್ಟೆಯ ಪಾಡಿಗಾಗಿ ಮನಸ್ಸೊಪ್ಪದ ಕೆಲಸವನ್ನಾದರೂ ಅಂಗೀಕರಿಸಿ, ಶಾಂತಿಯಿಂದ ವಂಚಿತರಾಗುವರು. ಇಂತಹರಿಗೆ ಸುಖವು ಹೇಗೆ ಸಿಕ್ಕಬೇಕು? ಇಂತಹರ ಬಾಳುವೆ ಒರಡಾಗದೆ ಉಳಿಯುವುದೆಂತು? ಇವರು ತಮ್ಮ ಶಕ್ತಿಯ ಪ್ರತಿಯೊಂದು ಗುಂಜಿಯನ್ನೂ ತಮ್ಮ ಕೆಲಸದಲ್ಲಿ ಹೇಗೆ ಉಪಯೋಗಿಸಬಲ್ಲರು? ಹೇಗೆ ಬೆಳಕಿಗೆ ಬಂದಾರು?

ಮೇಲ್ತರಗತಿಯ

ಹಳುಕು (Concentrated) ಬಣ್ಣಗಳು

- ಬರೆಯುವ ಮಸಿಗಳು
- ಟಾಯಿಪ್‌ರಾಯಿಟಿಂಗ್ ರಿಬನ್ನುಗಳು
- ಸಾಬೂನುಗಳು
- ಮಿತಾಯಿಗಳು

ಇವುಗಳನ್ನೆಲ್ಲ ತಯಾರಿಸುವುದಕ್ಕೆ ಬಳಸುವ ಬಣ್ಣಗಳು. ವಿಶೇಷವಿವರಗಳಿಗಾಗಿ ಇಂಗ್ಲಿಷ್ ಭಾಷೆಯಲ್ಲಿ ಬರೆದು ಕೇಳಿಕೊಳ್ಳಿರಿ.

ಕ್ರಿಪಾಗ್ ಲಿಮಿಟೆಡ್,

ಪೋ. ಬಾ. ನಂ. ೨೧೦, ಮುಂಬಯಿ.

ಜಗತ್ತಿನ ನೆಮ್ಮದಿಗೆ ಕಾರಣರಾದ ಕರ್ತೃತ್ವಶಾಲಿಗಳೆಲ್ಲ ಒಂದೊಂದು ವಿಷಯದಲ್ಲಿ ತಲೆಹಾಕಿ, ಅದರಲ್ಲೇ ಮಗ್ನರಾಗಿ, ಒಮ್ಮನಸ್ಸಿನಿಂದ ದುಡಿದು, ತಮ್ಮ ಹೆಗ್ಗುರಿಯನ್ನು ಕಂಡು ಧನ್ಯರಾದರು. ವಿಮಾನ, ಆಕಾಶವಾಣಿ, ಉಗೆಬಂಡಿ, ತಂತಿ, ಟೆಲಿಫೋನು, ರಸಾಯನ, ಔಷಧಿಗಳು, ಉದ್ಗ್ರಂಥಗಳು, ಲಲಿತ-ಕಲೆಗಳು, ಸಂಘಗಳು, ಸಂಸ್ಥೆಗಳು—ಈಗ ಸಹಜವೆಂದು ನಮಗೆ ತೋರುವ ಸಾಕಾರ್ಯಗಳೆಲ್ಲ—ಆಯಾ ಮಹಾನುಭಾವರು ಮಾಡಿದ ಧ್ಯೇಯಸಾಧನೆಯ ಪರಿಣಾಮಗಳು. ಒಂದೊಂದು ಧ್ಯೇಯಕ್ಕೆ ಸರ್ವಸ್ವವನ್ನೂ ವಿನಿಯೋಗಿಟ್ಟು, ಎಂತಹ ಎಡರನ್ನೂ ಲಕ್ಷಿಸದೆ, ಎಂತಹ ಉಪಹಾಸಕ್ಕೂ ಸೊಪ್ಪುಹಾಕದೆ, ಅದನ್ನು ಕೊನೆ-ಗಾಣಿಸುವವರೆಗೂ ತಡೆಯದೆ ದುಡಿದುದರ ಫಲವು. ನಾಗರಿಕತೆಯು ಈಗಿನ ಮಟ್ಟಕ್ಕೆ ಬಂದುದು ಅವರ ಪರಿಶ್ರಮದಿಂದಲೆ, ಅಲ್ಲವೆ?

ನಿಮ್ಮ ಜೀವನಕ್ಕೆ ಒಂದು ವಿಶಿಷ್ಟಸ್ವರೂಪ ಬರಬೇಕಾದರೆ, ಅದಕ್ಕೆ ಒಂದು ಅರ್ಥವಾಗುವುದಿದ್ದರೆ, ನಿಮ್ಮ ಬುದ್ಧಿ-ಉತ್ಸಾಹಗಳ ಸದುಪಯೋಗವಾಗಬೇಕಾಗಿದ್ದರೆ, ನಿಮಗೆ ನಿಜವಾದ ಸುಖವು ಬೇಕೆಂದಿದ್ದರೆ, ನಿಮ್ಮ ಜೀವನ ಕಾರ್ಯವಾವುದೆಂಬುದನ್ನು ಗೊತ್ತು ಮಾಡಿಕೊಳ್ಳಿ. ಅಥವಾ ನೀವು ಯಾವ ಮುಖ್ಯ ಕೆಲಸಕ್ಕೆ ಯೋಗ್ಯರು, ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಿ. (ಒಂದೇ ಒಂದು ಕೆಲಸವೆಂದಲ್ಲ; ನಿಮಗೆ ಒಗ್ಗುವಂತಹ ಉದ್ಯೋಗ, ಇಲ್ಲವೆ ಅದಕ್ಕೆ ಸಂಬಂಧಿಸಿದ ಕೆಲಸಗಳು ಎಂಬ ಅರ್ಥ) ಆದಕ್ಕಾ-ದುಡಿಯುವುದೆಂದರೆ ಆನಂದವಾಗಬೇಕು; ಆ ಕೆಲಸಕ್ಕಾ-ಬದುಕಿದ್ದೀರಿ ಎಂದೆನಿಸಬೇಕು.

ಇದೀಗ ಸುಲಭವಾದ ಕೆಲಸವಲ್ಲವೆಂದು ಅನೇಕರು ಹೇಳುವರು; ಅವರ ಹೇಳಿಕೆಯಲ್ಲಿ ತಥ್ಯವಿಲ್ಲದೆ ಇಲ್ಲ. ಆದರೆ ಹಾಗೆ ನೋಡಿದರೆ ಯಾವುದೂ ಸುಲಭವಲ್ಲ. ಧ್ಯೇಯಸಿದ್ಧಿಗಾಗಿ ಕಷ್ಟಪಡಬೇಕಾ-ಗುವುದು. ಸುಖ-ಸಂಪತ್ತುಗಳು ಸಿಕ್ಕಬೇಕಾದರೆ ಪ್ರತಿಯೊಬ್ಬನು ಪರಿಶ್ರಮರೂಪದ ಬೆಲೆಯನ್ನು ತೆರಲೇಬೇಕಲ್ಲವೆ?

ನಿಮಗೂ ನಿಮ್ಮ ಒರಗೆಯವರಿಗೂ ಇರುವ ಗುಣ-ದೋಷಗಳ ತಾರತಮ್ಯವನ್ನು ನೋಡಿರಿ. ಒಂದು ಚಿಕ್ಕ ಪಟ್ಟಿಯನ್ನು ಮಾಡಿ ಅದರಲ್ಲಿ ನಿಮ್ಮ ಪ್ರವೃತ್ತಿಗಳಾವುವು, ದೋಷಗಳಾವುವು, ನಿಮ್ಮ ಸರಿಕರಿಗಿಂತ ನೀವು ಯಾವ ಯಾವ ಕೆಲಸಗಳನ್ನು ಹೆಚ್ಚು ಚೆನ್ನಾಗಿ ಮಾಡಬಲ್ಲಿರಿ, ಯಾವ ವಿಷಯ ಅಥವಾ ವಿಷಯಗಳಲ್ಲಿ ನಿಮ್ಮ ಆಸಕ್ತಿಯಿದೆ—ಎಂಬುದನ್ನು ಬರೆದು ನೋಡಿರಿ. ನಿಮ್ಮ ಚಿಕ್ಕಂದಿನ ಹಾಗೂ ತಾರುಣ್ಯದ ಹೊಂಗನಸುಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿರಿ. ಆಗ ನಿಮ್ಮ ಜೀವನಕಾರ್ಯದ ರೂಪರೇಷೆಯು ಗೋಚರವಾಗುವುದು. ನಿಮ್ಮ ಒಳನುಡಿಗೆ ಕಿವಿಗೊಟ್ಟು ಕೇಳಿದರೆ, ಆಗಾಗ ವಿಚಾರವಂತರಾಗಿ ನೋಡಿದರೆ, ನಿಮ್ಮ ದಾರಿಯು ಕ್ರಮೇಣ ಸ್ಪಷ್ಟವಾಗಿ ಕಾಣಿಸುವುದು.

ನಿಮ್ಮ ಜೀವನಕಾರ್ಯವನ್ನು ನೀವೇ ತಿಳಿದುಕೊಳ್ಳಬೇಕಲ್ಲದೆ, ಎಂತಹ ಜಾಣರೇ ಆಗಲಿ, ಎಷ್ಟು ಸವಿವಾದ ಆಪ್ತರೇ ಆಗಲಿ, ಅದನ್ನು ನಿಮಗೆ ಹೇಳಲಾರರು. ನಿಮ್ಮ ಬಲವುಗಳನ್ನೂ, ಆಸಕ್ತಿ-ಯನ್ನೂ, ನಿಮಗೆ ಸೇರುವ ವಿಷಯಗಳನ್ನೂ ನೀವು ಬಲ್ಲಂತೆ ಮತ್ತಾರೂ ಅರಿಯರು. ಅನುಭವಿಕರಿಂದಾಗಲಿ, ವಿಮರ್ಶಕರಿಂದಾ-ಗಲಿ, ಕೆಲವು ಸಂಗತಿಗಳು ತಿಳಿದಾವು; ಆದರೆ ಈ ಕೆಲಸವು ಮುಖ್ಯವಾಗಿ ನಿಮ್ಮನ್ನೇ ಕೂಡಿದೆ. ನಿಮ್ಮ ಕರ್ತವ್ಯವನ್ನು ನೀವೇ ಗೊತ್ತುಮಾಡಿಕೊಳ್ಳಬೇಕು. ಯಾರೊಬ್ಬರ ಬಲವಂತ-ದಿಂದ ಅಥವಾ ತಂದೆ-ತಾಯಂದಿರ ಜಲದಿಂದ ನಿಮಗೆ ಸರಿದೋರದ ಕೆಲಸವನ್ನು ಕೈಕೊಂಡರೆ, ನಿಮಗೆ ಬೇಡವಾದ ಫಲವು ದೊರೆಯು-ವುದರಲ್ಲಿ ಆಶ್ಚರ್ಯವಿಲ್ಲ. ಹಿತಚಿಂತಕರು ಸದ್ಬುದ್ಧಿಯಿಂದಾಗಲಿ, ಅಜ್ಞಾನದಿಂದಾಗಲಿ, ಅಥವಾ ತಮ್ಮ ಅನುಕೂಲತೆಯ ದೆಸೆ-ಯಿಂದಾಗಲಿ ಹೇಳುವ "ನೀನು ಇಂತಹ ಕೆಲಸವನ್ನೇ ಮಾಡು; ಹೀಗೆ ಮಾಡಿದರೆ ನಮಗೆ ಸಂತೋಷ" ಎಂಬ ಮಾತುಗಳನ್ನು, ಈ ವಿಷಯದಲ್ಲಿ ಕೇಳಬೇಡಿರಿ. ಅದೂ ಅಲ್ಲದೆ, ಹಿರಿಯರಿಂದಲೂ ನಡೆದುಬಂದಿದೆ ಎಂದಮಾತ್ರಕ್ಕೆ ಯಾವ ಉದ್ಯೋಗವನ್ನೂ ಅಂಗೀಕರಿಸಬೇಡಿರಿ! 'ಒಬ್ಬರು ಹೀಗೆ ಮಾಡಿದ್ದಾರೆ, ನೀವೂ ಅದನ್ನೇ ಮಾಡಬೇಕು' ಎಂಬುದೂ ಸರಿಯಲ್ಲ. 'ಸುಲಭವಾಗಿ ಸಾಧ್ಯವಿದೆ; ಹೆಚ್ಚಿಗೆ ಹಣ ಸಿಕ್ಕುತ್ತದೆ' ಎಂದು ನಿಮ್ಮ ಮನಸ್ಸನ್ನು ವಿರುದ್ಧ ಹೋಗಬೇಡಿ. ಹಣಬೇಕು, ಆದರೆ ಹಣವೇ ಸರ್ವ-ಪ್ರಾಧಾನ್ಯವಲ್ಲ. ಮುಖ್ಯವಾದುದು ನಿಮ್ಮ ಒಲವು, ಶಕ್ತಿ-ಯುಕ್ತಿ, ನಿಮ್ಮ ಅಭಿರುಚಿಗಳಿಗೆ ಒಸಗುಗುಣವಾದ ಕೆಲಸ, ನಿಮ್ಮ ಜೀವನ-

ಪುಷ್ಪವನ್ನು ಅರಳಿಸಿ ಪರಿಮಳವನ್ನು ಬೀರಿಸುವಂತಹ ಕೆಲಸ. ಇಂತಹ ಕಾರ್ಯದಲ್ಲೇ ನಿಮ್ಮ ಊರ್ಜಿತವಿದೆ ಎಂಬುದನ್ನು ಮರೆಯಬೇಡಿರಿ!

ಈಗಿನ ಶಿಕ್ಷಣಪದ್ಧತಿಯು ನಮ್ಮ ವ್ಯಕ್ತಿತ್ವವನ್ನು ಹಿಂಡುತ್ತಿದೆ; ಆರ್ಥಿಕ-ರಾಜಕೀಯ ಪರಿಸ್ಥಿತಿಗಳು ನಮ್ಮನ್ನು ಗುಲಾಮರನ್ನಾಗಿ ಮಾಡುತ್ತಲಿವೆ; ಮೂವತ್ತು ರೂಪಾಯಿಯ ಗುಮಾಸ್ತಿಕೆ ಮಾಡುವುದೇ ಹಲವರ ಧ್ಯೇಯವಾಗಿದೆ. ಏನುಮಾಡಬೇಕು? ಕಾಲವು ಕಠಿನವಾಗಿದೆ— ಎಂದು ಮುಂತಾಗಿ ಹಲವರು ಹೇಳುವರು. ಪರಿಸ್ಥಿತಿ ಕಠಿನವೆಂಬದು ನಿಜ. ಅದು ಯಾವಾಗಲೂ ಕಠಿನವೆ. ನಮ್ಮ ಹಿಂದಿನವರ ಕಾಲವು ಇಡಕ್ಕಿಂತಲೂ ಸುಲಭವಾಗಿದ್ದಿತೆಂಬುದು ಎಲ್ಲಿಯೂ ಕಂಡುಬರುವುದಿಲ್ಲ. ಒಂದೊಂದು ಕಾಲದಲ್ಲಿ ಒಂದಿಲ್ಲ ಒಂದು ತೊಂದರೆ ಇರುವುದೇ. ಇಂದಿನಂತಹ ಕಾಲವು ಮತ್ತಿಲ್ಲ. ನಮ್ಮ ಪೌರುಷವನ್ನು ತೆರೆಗೆಹಚ್ಚುವ ಕಾಲವು ಇದೇ. "ಮನಮುಂಳ್ಕೊಡಂಟು ಮಾರ್ಗಂ"! ದೃಷ್ಟಿಯಿಂದ ಮುಂದೆ ನುಗ್ಗುವವರನ್ನು ಯಾರೂ ತಡೆಯುವರು.

ಒಂದು ದಿನ **ಸೆಯ್ಜಿ ನೋಮು** ಎಂಬ ಜಪಾನೀ ತರುಣನು, ಜಪಾನು ನೇದುತ್ತ ಒಂದು 'ಹೊಟೆಲಿ'ನಲ್ಲಿ ಕುಳಿತಿರುವಾಗ, ಅಮೆರಿಕದ ಪ್ರಕಾಶಕನೊಬ್ಬನು ಒಂದೇ ಮಾಸಪತ್ರಿಕೆಯ ಹತ್ತು ಕೋಟಿ ಪ್ರತಿಗಳನ್ನು ಹೊರಡಿಸುತ್ತಿದ್ದ ಸಮಾಚಾರವನ್ನು ಕೇಳಿದನು. ತರುಣನಿಗೆ ಆಶ್ಚರ್ಯವಾಗಲಿಲ್ಲ; ಅವನ ಸ್ಫೂರ್ತಿಯು ಉತ್ಕೃರಿತು. ನೋಮುನು ಉದ್ಗರಿಸಿದ: "ಆದೇಕೆ? ಜಪಾನಿನಲ್ಲೂ ಮಾಡಬಹುದಲ್ಲ! ನನಗೆ ಪ್ರಕಾಶನ ಕಾರ್ಯದಲ್ಲಿ ಇನ್ನೂ ಏನೂ ಗೊತ್ತಿಲ್ಲ. ಆದರೆ ನಾನು ಅದನ್ನು ಕಲಿಯುವೆನು. ಅದನ್ನು ಮಾಡಿಯೇ ಬಿಡುವೆನು." ಅನೇಕ ತೊಂದರೆಗಳು ಅವನನ್ನು ಮುತ್ತಿದುವು. ಎದೆಗುಂದದೆ, ಮುಂದಡಿಯಿಡುತ್ತ, ತನ್ನ ಧ್ಯೇಯದಿಂದ ಕದಲದೆ, ನೋಮುನು ಪ್ರತಿಜ್ಞೆಯನ್ನು ಪಾಲಿಸಿದನು. ಅವನಿಗೆ ಕಾಲೇಜಿನ ಶಿಕ್ಷಣವಿರಲಿಲ್ಲ; ಐಶ್ವರ್ಯವಿರಲಿಲ್ಲ. ಚೀನಿ, ಜಪಾನಿ ಭಾಷೆಗಳ ಹೊರತು ಬೇರೆ ಭಾಷೆಯೂ ಬರುತ್ತಿರಲಿಲ್ಲ. ಅಂಧವನು ಈಗ ೮೦ ಮಾಸಿಕಗಳ ಕಾರಭಾರವನ್ನು ನಡೆಯಿಸುತ್ತ, ಪ್ರಕಾಶನ ಕ್ಷೇತ್ರದಲ್ಲಿ ಅಗ್ರಗಣ್ಯನೆನಿಸಿಕೊಂಡಿದ್ದಾನೆ! ಇದು ಗಟ್ಟಿಮನಸ್ಸು, ದೀರ್ಘಪ್ರಯತ್ನದ ಫಲವಲ್ಲವೆ?

ಎಮರ್ಸನ್ನನು ಹೇಳುವಂತೆ "ನಿಮ್ಮ ಧ್ಯೇಯವು ತಾರೆಗಳನ್ನು ಮುಟ್ಟುವಷ್ಟು ಉನ್ನತವಾಗಿರಲಿ! ಅದನ್ನು ಕಣ್ಣಿದುರಿಗಿಟ್ಟು, ಆಶೆಯ ಬೆಳಕಿನಲ್ಲಿ ಕೆಲಸಕ್ಕೆ ತೊಡಗಿದರೆ ನಿಮ್ಮ ಹೊಂಗನಸುಗಳು ನಿಜವಾಗುವುವು"

ಈ ಸಂದರ್ಭದಲ್ಲಿ ಇನ್ನೊಂದು ಮಾತು ಹೇಳಬೇಕಾಗಿದೆ: ನಮಗೆ ಬೇಕಾದಷ್ಟು ಆಕಾಂಕ್ಷೆಗಳಿರಬಹುದು. ಆದರೆ ಅವೆಲ್ಲವನ್ನೂ ಸೇರವೇರಿಸಲಿಕ್ಕೆ ಸಾಕಷ್ಟು ವೇಳೆಯೂ ಉತ್ಸಾಹವೂ ಮಾತ್ರ ಇರುವುದಿಲ್ಲ. ಬಹಳ ಆಕಾಂಕ್ಷೆಗಳನ್ನು ಇಟ್ಟುಕೊಂಡರೆ ನಮಗೆ ಬಹಳ ವೇಳೆಯೂ ಹೆಚ್ಚಿನ ಸಾಮರ್ಥ್ಯವೂ ಬೇಕೇಬೇಕು. ನಮ್ಮ ಶಕ್ತಿ-ಯುಕ್ತಿಗಳು ಹಲವು ಕಡೆಗೆ ಹರಿದು ಹಂಚಿಹೋದರೆ, ಯಾವುದೊಂದು ಕ್ಷೇತ್ರಕ್ಕೂ ಸಾಲುವುದಿಲ್ಲ. ಹಲವಾರು ಉದ್ಯೋಗಗಳಲ್ಲಿ ಮನಸ್ಸನ್ನಿಟ್ಟರೆ ಯಾವುದರಲ್ಲಿಯೂ ಯಶಸ್ಸು ಸಿಕ್ಕಲಿಕ್ಕಿಲ್ಲ. ಆದುದರಿಂದ ಕೆಲವು ಆಕಾಂಕ್ಷೆಗಳನ್ನಷ್ಟೆ ಇಟ್ಟುಕೊಳ್ಳುವುದು ಬುದ್ಧಿವಂತಿಕೆಯು. ನಮ್ಮ ಜೀವನಕಾರ್ಯಕ್ಕೆ ಎಂದಿಗೂ ಸಂಬಂಧಪಟ್ಟಿಲ್ಲದ, ಹುರಳಿಲ್ಲದ, ಆಕಾಂಕ್ಷೆಗಳಿಂದ ದೂರವಿರುವುದು ಲೇಸು. ನಮ್ಮ ಉತ್ಸಾಹದ ಬಹುಭಾಗವು ನಮ್ಮ ಜೀವನಕಾರ್ಯದ ಸಲುವಾಗಿ ವೆಚ್ಚವಾಗಬೇಕು.

ಸಾಧನ ಮುದ್ರಣಾಲಯದ ಸುಂದರ ಪ್ರಕಟನೆಗಳು

ಮೈಸೂರು ವಿದ್ಯಾಖಾತೆಯವರಿಂದ ಮಂಜೂರಾಗಿದೆ.

T.B.C. No. 162 of 39-40.

ವರ್ಧಾಯಾತ್ರೆ: ಲೇ. ಶ್ರೀ. ಎಸ್. ಕೃಷ್ಣಶರ್ಮ. ಬೆಲೆ ೧-೦-೦

ಅಭಿಪ್ರಾಯಗಳು

೧) ಈ ಪುಸ್ತಕವನ್ನು ಗಾಂಧೀಜಿಯವರ ಸತ್ಯಶೋಧನೆ, ಜವಾಹರ ಲಾಲರ ಆತ್ಮಕಥೆ, ಪಟ್ಟಾಭಿಯವರ ಕಾಂಗ್ರೆಸ್ ಇತಿಹಾಸ ಇವುಗಳೊಡನೆ ಓದಿನೋಡಬೇಕು.

—ವಿಶ್ವಕರ್ನಾಟಕ: ಶ್ರೀ. ತಿ. ತಾ. ಶರ್ಮನ್.

೨) WARDHA YATRA is a new departure in Kannada Literature. —*Indian P.E.N.*

ಇದೇ ಲೇಖಕರ **ಹರ್ಣಕುಟಿ** ಅಚ್ಚಿನಲ್ಲಿದೆ.

ಭಾರತೀಯ ಕಥಾವಳಿ

ಭಾರತದಲ್ಲಿರುವ ಸುಪ್ರಸಿದ್ಧ ಭಾಷೆಗಳಿಂದ ಆಯ್ದ ಉತ್ತಮವಾದ ಕಥೆಗಳ ಸಂಗ್ರಹದ ಹೊಸಯೋಜನೆ. ಅಖಿಲಭಾರತದ ಸಾಂಸ್ಕೃತಿಕ ತಿಳುವಳಿಕೆಗೆ ತುಂಬ ಅವಶ್ಯವಾದ ಸಂಗ್ರಹ. ಪ್ರತಿ ಮನೆಮನೆಗೂ ಇರಬೇಕಾದ ಅತ್ಯವಶ್ಯ ಸಾಹಿತ್ಯ.

೧. ತೆಲುಗಿನ ಕತೆಗಳು .. ೦-೮-೦

೨. ಅಸಾಮೀ ಕತೆಗಳು .. ೦-೮-೦

ಉಳಿದ ಕತೆಗಳ ಸಂಗ್ರಹಗಳಾದರೂ ಬೇಗ ಪ್ರಕಟಿಸಲ್ಪಡುವುವು.

ದೊರೆಯುವ ಸ್ಥಳ:— **ಸಾಧನ ಮುದ್ರಣಾಲಯ, ಧಾರವಾಡ**

⁂ ಗರುಡ ಪುರಾಣ ⁂

ಅಥವಾ

ಯಮುನ ಫಜೀತಿ

(ಒಂದು ಹುಚ್ಚಾಟ) ★ ಬಳ್ಳಾರಿ 'ಬೀಚಿ' ಬರೆದುದು

ಪಾತ್ರಗಳು :

ಯಮ (ಪರಲೋಕದ ಅಧಿನಾಯಕ)
ಚಿತ್ರ (ಯಮನ ಕಾರಕೂನ)
ಗುಪ್ತ (ಇನ್ನೊಬ್ಬ ಕಾರಕೂನ)
ರಂಗನಾಥ (ಪರಲೋಕಕ್ಕೆ ಬಂದ ಭೂಲೋಕದವ)
ಸಿರಿಯಪ್ಪ (ಭೂಲೋಕದ ಒಬ್ಬ ಬಡವ)
ಲಾವಣ್ಯ (ಭೂಲೋಕದ ಒಬ್ಬ ವಿಧವೆ)

ಅಲ್ಲದೆ ಯಮದೂತರಿಬ್ಬರು

[ತೆರೆಯೇಳುವುದು. ಸಿಂಹಾಸನದಲ್ಲಿ ಯಮನು ಕುಳಿತಿರುವನು. ಪಂಚೆಗಚ್ಚೆ, ಕ್ಲೋಜುಕಾಲರ್ ಬಿಳಿಯಕೋಟು, ಕಾಲಲ್ಲಿ ಪಾಪೋಸು, ಕಡ್ಡಿಗೆರೆಯ ಜರಿ ರುಮಾಲು, ಕಂಕುಳಲ್ಲಿ ಕೊಡೆಧರಿಸಿದ ಚಿತ್ರಗುಪ್ತರ ಪ್ರವೇಶ.]

ಚಿತ್ರ-ಗುಪ್ತ:— (ಇಬ್ಬರೂ ಒಮ್ಮೆಲೆ) ಯಮಧರ್ಮ ಮಹಾರಾಜಕೀ ಜೈ !

ಯಮ:— ಜೈ ಇರಲಯ್ಯಾ ಚಿತ್ರಗುಪ್ತರೇ ! ಕೆಲಸವನ್ನು ಬೇಗನೆ ಸುರು ಮಾಡೋಣ. ಎಷ್ಟು ಕೇಸುಗಳಿವೆಯೋ ನೋಡಿ.. ಈ ದಿನಕ್ಕೆ ?

ಚಿತ್ರ:— (ಕಿಸೆಯಲ್ಲಿಯ ದಾರ ಕಟ್ಟಿದ ಕನ್ನಡಕವನ್ನು ಹೊರಕ್ಕೆ ತೆಗೆದುಕೊಂಡು ಮೂಗಿಗೇರಿಸಿ, ದಾರದಲ್ಲಿ ತಲೆ ತೂರಿಸಿ, ಕನ್ನಡಕದ ಮೇಲಿಂದ ದೊಡ್ಡ ಡೈರಿ ಒಂದರಲ್ಲಿ ನೋಡಿ) ಮೂರು ಕೇಸುಗಳಿವೆ ಪ್ರಭೂ..ಇವತ್ತು.(ಎದುರು ಬದುರು ಇರುವ ಕುರ್ಚಿಗಳಲ್ಲಿ, ಮೇಜುಗಳ ಮುಂದೆ ಇಬ್ಬರೂ ಕೂಡುವರು.)

ಯಮ:— ಬಹುಶಃ ಚಿಕ್ಕವೇ ಇರಬಹುದು; ಬೇಗನೆ ಮುಗಿಸಿ ಸ್ವಲ್ಪ ನರ್ತನಸಕ್ಕೆ ಹೋಗಬೇಕಯ್ಯಾ ಇವತ್ತು. ಬಹಳ ಒತ್ತಾಯ ಮಾಡಿದಾನೆ. ಪಾಪ, ಇಂದ್ರ ! ಈ ಹಾಳು ಯುದ್ಧ ಸುರುವಾದಂದಿನಿಂದಂತೂ ಆದಿತ್ಯವಾರವಿಲ್ಲ, ಹಬ್ಬವಿಲ್ಲ, ಹುಣ್ಣಿವೆಯಿಲ್ಲ... (ಆಪ್ತರಲ್ಲಿಯೆ)

(ನಾಮಧಾರಿಯಾದ ರಂಗನಾಥನನ್ನು ಎಳೆದುಕೊಂಡು ಇಬ್ಬರು ದೂತರು ಬರುವರು.)

ದೂತರು:— (ಇಬ್ಬರೂ ಒಮ್ಮೆಲೆ) ಯಮಧರ್ಮ ಮಹಾರಾಜ್ಕೀ ಜೈ !

ಯಮ:—(ರಂಗನಾಥನನ್ನು ನೋಡಿ ನಗುತ್ತ)ಇವನಾರಯ್ಯಾ? ತಿರುಪತೀ ವೆಂಕಟರಮಣನ ಡೂಪ್ಲಿಕೇಟ್ ಇದ್ದಂತಿದ್ದಾನೆ. ಊರಲಗಲಿ, ಮತ್ತೆ ಶ್ರಾದ್ಧನೇಮ !

(ದೂತರು ರಂಗನಾಥನನ್ನು ಬಾಕ್ಸ್‌ನಲ್ಲಿ ನಿಲ್ಲಿಸುವರು.)

ಗುಪ್ತ:— ಹೂಂ. ಹೇಳಯ್ಯಾ !

ರಂಗ:— ದೇವರೆದುರಿಗೆ, ಪ್ರಮಾಣಮಾಡಿ ನಿಜವನ್ನೇ ಹೇಳುತ್ತೇನೆ.

ಚಿತ್ರ:— (ನಡುವೇ ಬಾಯಿಹಾಕಿ ಸಿಟ್ಟಿನಿಂದ) ಬಾಯಿ ಮುಚ್ಚೋ, ಭೂಲೋಕದವನಂತೆ-ನಿಜವನ್ನೇ ಹೇಳುತ್ತಾನಂತೆ-ದೇವರಂತೆ ! ಪ್ರಭೂ, ಈ ಪ್ರಮಾಣ ಭೂಲೋಕದವರಿಂದ ಮಾಡಿಸುವುದರಲ್ಲಿ ಏನೂ ಅರ್ಥವಿಲ್ಲ. ನಿಜವನ್ನೇ ಹೇಳುತ್ತೇನೆಂದು ಪ್ರಮಾಣಮಾಡಿ, ಸಹಸ್ರ ಸುಳ್ಳುಗಳನ್ನೂ ಹೇಳಿ ಹೇಳಿ ಅಭ್ಯಾಸವಾಗಿದೆ ಇವರಿಗೆ.

ಯಮ:— ಅಹುದಯ್ಯಾ ಚಿತ್ರಾ, ಸರಿಯಾಗಿ ಹೇಳಿದೆ. ಅವನೇಕೆ ನಿಜ ಹೇಳಬೇಕು ? ನಿಮ್ಮ ರಿಜಿಸ್ಟರುಗಳಿಲ್ಲವೇನು ? ಉಂ. ಜರುಗಲಿ ಜರುಗಲಿ, ಮುಂದಿನ ಕೆಲಸ !

ಚಿತ್ರ:— (ರಂಗನಾಥನನ್ನು ಕುರಿತು ಗಂಭೀರವಾಣಿಯಿಂದ) ಹೆಸರೂ ?

ರಂಗ:— ರಂಗನಾಥ !

ಗುಪ್ತ:— (ಗಟ್ಟಿಯಾಗಿ ತನ್ನಲ್ಲಿಯೇ) ಪ ಫ ಬ ಭ ಮ ಯ ರ-ರ-ರಂಗನಾಥ (ಪುಸ್ತಕದಲ್ಲಿ ಹುಡುಕುವನು.)

ಚಿತ್ರ:— ವಯಸ್ಸು ?

ರಂಗ:— ಐವತ್ತೈರಡು !

ಯಮ:— (ಸಿಟ್ಟಿನಿಂದ) ಆ ಮಗಳ ಗಂಡನಾದ ಬ್ರಹ್ಮಗೆ ಬುದ್ಧಿ ಇದ್ದರಲ್ಲೆ ! ಒಂದು ಸಾವಿರ ಸಲ ಹೇಳಿದ್ದೇನೆ, ಈ ಭೂಲೋಕದವರಿಗೆ ಹೆಚ್ಚಿಗೆ ಆಯುಸ್ಸು ಹಾಕ್ಬೇಡಯ್ಯಾ ಅಂತ ! ಒಂದೊಂದು ದಿನಕ್ಕೇ ಒಂದು ರಿಜಿಸ್ಟರು ತುಂಬಿಸೋ ಮಹಾರಾಯರು ತುಂಬಿದ್ದಾರೆ ಭೂಲೋಕದ ತುಂಬಾ !

ಚಿತ್ರ:— ಜೀವನೋಪಾಯ ?

ರಂಗ:— ದೇವರ ನಾಮ !

ಯಮ:— (ಆಶ್ಚರ್ಯದಿಂದ) ದೇವರ ನಾಮ! ಇದೇನಯ್ಯಾ, ಹೊಸ ಮಾದರಿ? (ಗುಪ್ತನನ್ನು ಕುರಿತು) ಓದಯ್ಯಾ ಗುಪ್ತಾ, ಇವನ ಕತೆ ಏನಿದೆ ?

ಗುಪ್ತ:— (ಓದುವನು) ವಿಷ್ಣುವಿನ ಗುಡಿಯ ಅರ್ಚಕ. ವಿಗ್ರಹವನ್ನು ತೊಳೆಯುವುದು, ಬಟ್ಟೆ ಉಡಿಸಿ ಒಡವೆಗಳನ್ನಿಡುವುದು— ಇವನ ದಿನವಹಿ ಕೆಲಸ. ಬಂದ ವೇಷಧಾರಿಗಳಿಂದ ತೆಂಗಿನಕಾಯಿ ಯನ್ನೂ ಒಂದಾಣೆಯ ದಕ್ಷಿಣೆಯನ್ನೂ ವಸೂಲು ಮಾಡಿ, ಅರ್ಧಾಣೆಯಷ್ಟು ಮಾತ್ರ ಕೊಬ್ಬರಿ ಕೆಳಚಿಪ್ಪಿಗೆ ಪತ್ತಿರುವಂತೆ ಕಾಯಿ ಒಡೆದು, ಆ ಕೆಳಗಿನ ಬಟ್ಟಲುಗಳನ್ನು ಅವರಿಗೆ ಕೊಡುವನು.

ಯಮ:— (ನಗುತ್ತ) ಶಾಬಾಸ್ ! ಬಹಳವಿದ್ದಂತಿದೆ ಇವನ ಕತೆ..ಕಡೆಯ ಪುಟವನ್ನೊಮ್ಮೆ ನೋಡೋಣ! ಅಲ್ಲಲ್ಲಿ ಟೂಕಿ ಓದಿ ಬಿಡು !

ಗುಪ್ತ:— (ಪುಟಗಳನ್ನು ಉಗುಳುಹಚ್ಚಿ ತಿರುವುತ್ತಾ) ದೇವರ ವಿಗ್ರಹದ ಮೇಲಿದ್ದ ಬಂಗಾರದ ನಾಮಗಳನ್ನು ಇವನು ಕದ್ದು, ಶಿಕ್ಕಸಾಲಿಗರ ಆರ್ಜುನಾಚಾರಿಯ ಹತ್ತಿರ ಕರಗಿಸಿ, ಎರಡು ಪವಿತ್ರದ ಉಂಗುರಗಳನ್ನು ಮಾಡಿಸಿಕೊಂಡು ಜನಿವಾರದಲ್ಲಿ ಹಾಕಿಕೊಂಡಿದ್ದಾನೆ.

ಯಮ :— ಸಾಕು ಸಾಕು; ಹಾಗಾದರೆ ನಿಜವಾಗಿಯೂ ದೇವರ ನಾಮವೇ ಇವನ ಜೀವನೋಪಾಯ ! ಏನಯ್ಯಾ ರಂಗನಾಥಾ, ಕೇಳಿದೆಯಲ್ಲ, ಇದೆಲ್ಲ ನಿಜವೇನು ?

ರಂಗ:— ನಿಜ ಪ್ರಭೂ; ಆದರೆ..

ಯಮ:— (ಆಶ್ಚರ್ಯದಲ್ಲಿಯೇ) ಆದರೆ ಏನಯ್ಯಾ ಗೀದರೆ? ಏನು ನಿನ್ನ ಸವಾಲು ?

ರಂಗ:— ಮಹಾಪ್ರಭೂ ! ಅನೇಕ ಪುಣ್ಯಕಾರ್ಯಗಳನ್ನೂ ಮಾಡಿದ್ದೇನೆ. ಹೊಸದಾಗಿ ಕಟ್ಟಿಸುತ್ತಿದ್ದ ಆಂಜನೇಯನ ಗುಡಿಗೆ ಕಂದಾಪಣದಿಂದ ಒಂದು ಮಂಟಪ ಹಾಕಿಸಿದ್ದೇನೆ. ವಡ್ಡರು ನನ್ನ ಶಾಲಗಾರರಾಗಿದ್ದರಿಂದ, ಅರ್ಧ ಖರ್ಚಿನಲ್ಲಿಯೇ ಹಾಕಿಸಿದ್ದೇನೆ !

ಚಿತ್ರ:—' ರಂಗನಾಥನ ಸೇವಾ ' ಎಂದು ಹೆಸರು ಹಾಕಿಸಿರುವೀ ಯೇನು..ಗೋಡೆಯ ಮೇಲೆ?

ರಂಗ:—(ಹೆಮ್ಮೆಯಿಂದ)ಆಹುದು ಸ್ವಾಮಿ; ಐದುರೂಪಾಯಿ ಕೊಟ್ಟು ಹಾಕಿಸಿದ್ದೇನೆ !

ಯಮ:—ಸರಿ..ಮುಗಿಯಿತು ಹಾಗಾದರೆ! ಒಡ್ಡರ ಮೇಲಿನ ಮೊಜನೆಯೊಂದು, ಹೆಸರು ಹಾಕಿಸಿದುದು ಎರಡು ! ಉಂ, ಇನ್ನು.

ರಂಗ:— (ನೆನಪು ಮಾಡಿಕೊಂಡು) ಆದರಲ್ಲಿ ಉಳಿದ ಹಣದಿಂದ, ಸೂರುಸಲ..ದೇವರಿಗೆ ಏಕಾಂತಸೇವಾ ಮಾಡಿಸಿದ್ದೇನೆ ಪ್ರಭೂ !

ಗುಪ್ತ:— (ಒಮ್ಮೆಲೆ ಎದ್ದು) ಆ ಪುಣ್ಯ ವಡ್ಡರ ಹುಲಗಪ್ಪನಿಗೆ ಸೇರಿದೆ ಪ್ರಭೂ !

ಯಮ:— ಏನಯ್ಯಾ, ಏನು ಮುಗಿಯಿತೋ ಇಲ್ಲವೋ.. ನಿನ್ನ ಸವಾಲು ?

ರಂಗ :— ಆದ್ವೈತಮತ ಖಂಡನಮಾಡಿ, ಕಾಶೀ ಮತ್ತು ಶೃಂಗೇರಿ ಪೀಠದ ಮಹಾಮಹಾಪಂಡಿತರನ್ನು ವಾದದಲ್ಲಿ ಗೆದ್ದಿದ್ದೇನೆ ಸ್ವಾಮಿ !

ಯಮ:— ಒಳ್ಳೇದು. ಮುಂದಿನ ಜನ್ಮದಲ್ಲಿ ಮೋಟಾರು-ಹಾರ್ನು ಆಗಿ ಹುಟ್ಟು! (ಚಿತ್ರಗುಪ್ತರನ್ನು ಕುರಿತು) ಇವನು ಏಕಯ್ಯಾ ಸತ್ತ ?

ಚಿತ್ರ:— (ರಿಜಿಸ್ತರು ನೋಡಿ) ಅಜೀರ್ಣದಿಂದ ಮಹಾಸ್ವಾಮಿ !

ಯಮ:— ಅಜೀರ್ಣದಿಂದ ಸಾಯುವಾಗಲೂ ಬಂಗಾರವನ್ನು ಕಳವುಮಾಡಿದ ಇವನನ್ನು, ಬಂಗಾರದಂತೆ ಪುಟಕ್ಕೆ ಹಾಕಿರಿ !

[ದೂತರು ಎಳೆದು ಒಯ್ಯುವರು. ರಂಗನಾಥನು ಕುಯ್ಯೋ ಮರ್ಮ್ರೋ ಎನ್ನುತ್ತ ಅಳುವನು.]

(ಚಿತ್ರಗುಪ್ತರನ್ನು ಕುರಿತು) ಒಳ್ಳೆ ಚಮತ್ಕಾರವಲ್ಲಯ್ಯಾ ಇದು ! ಭೂಲೋಕದಲ್ಲೆಲ್ಲ ಬರ, ಬಡ್ತನದ ಚಿಂತೆ ಅಳ್ತಾಯಿದ್ರೆ, ಇವನು ಹೇಗಯ್ಯಾ ಅಜೀರ್ಣದಿಂದ ಸತ್ತ ?

ಚಿತ್ರ:—ಅಹುದು ಪ್ರಭೂ, ಇವನೊಬ್ಬ ಅಜೀರ್ಣದಿಂದ ಸತ್ತಿದ್ದಕ್ಕೆ ಅಲ್ವೇ, ಮೊನ್ನೆ ನಾಲ್ಕು ಮಂದಿ ಅನ್ನ ಇಲ್ಲದಲೆ ಸತ್ತದ್ದು ! ಅದೇ ಅನ್ನಾ ಎಲ್ಲರೂ ಉಂಡ್ರೆ ಹೀಗೇಕಾಗುತ್ತಿತ್ತು ಭೂಲೋಕದ ಹಸೇ ಬರಹ ?

[ಆಸ್ಥಿಗತ ಬಡತನವಾದ, ಬಡಕಲು ಮೈಯ ಸಿರಿಯಪ್ಪನನ್ನು ಇಬ್ಬರು ದೂತರು ಎಳೆದುಕೊಂಡು ಬಂದು]

ದೂತರು:— ಯಮಧರ್ಮ ಮಹಾರಾಜಕೀ ಜೈ !

ಯಮ:— ಇವನೇನಯ್ಯಾ, ಅಖಂಡ ಮಂಡಿತ ರಾಜಮಾನ್ಯ ರಾಜೇಶ್ರೀ ಬರದಾಗ್ರಗಣ್ಯ ಬಿರುದಾಂಕಿತನಂತಿದ್ದಾನೆ ! ಸತ್ಯಾಗ್ರಹಮಾಡಿ ಸತ್ತನೇನು ? ಗಾಳಿಯೇ ಇವನ ಆಹಾರವಿರಬಹುದು; ಊಂ ! ಜರುಗಲಿ. ಶುಕ ಉವಾಚ..

(ಬಾಕ್ಸ್‌ನಲ್ಲಿ ದೂತರು ನಿಲ್ಲಿಸುವರು)

ಚಿತ್ರ:— ಹೆಸರು ?

ಸಿರಿಯಪ್ಪ:— ರಂಗನಾತಪ್ಪೋವ್ರೀ ಅವರ ಹೆಸರು !

ಗುಪ್ತ:— (ಸಿಟ್ಟಿನಿಂದ) ನಿನ್ನ ಹೆಸರ್ಹೇಳೋ ಅಂದರೆ! ಅವರು ಯಾರೋ ?

ಸಿರಿ:— ನನಗ್ ಗಲ್ಮಾಡಿಸಿದವರು ಬುದ್ದೀ !

ಯಮ:— (ನಗುತ್ತ) ಓಹೋ ಗಲ್ಲು ಬೇರೆ ಆಯಿತೋ..ಈ ಅಸ್ಥಿಪಂಜರಕ್ಕೆ ?

ಚಿತ್ರ:— ನಿನ್ನ ಹೆಸರೇನೋ ?

ಸಿರಿ:— ನಾನು ಸಿರಿಯಪ್ಪನ್ರೀ !

ಯಮ:— ದರಿದ್ರಪ್ಪನಾದ ಸಿರಿಯಪ್ಪನೇ ! ಯಾಕೋ ಸತ್ತಿ ?

ಸಿರಿ:— ಗಲ್ಲಾಗಿ, ಪ್ರಾಣದ ಜೀವೋಗಿ, ನಾಡಿನಿಂತು ಸತ್ತೆ ಮಾಸೋಯಿ !

ಯಮು :— ಗಲ್ಲೀಕಾಯಿತೋ ನಿನಗೆ ?

ಸಿರಿ :— ಏಳಿದ್ನೆಲ್ಲ ಬುದ್ದೀ, ರಂಗ್ನಾತಪ್ಪೋರು ಮಾಡ್ಸಿದ್ದೂ ಅಂತ !

ಯಮು :— ಯಾಕೋ ?

ಸಿರಿ :— ಮತ್ತೆ, ಕೊಂದ್ನೆಲ್ಲ ಸಾವಿಸಾ, ಆ ಯಮ್ಮನ ಗೆಣಿಕಾರನ್ನ !

ಚಿತ್ರ :— ಯಾ ಅವ್ಮನ ಗೆಣಿಕಾರನನ್ನೋ ?

ಸಿರಿ :— ಆಯಮ್ಮ ಬುದ್ದೀ, ರಂಡೆಮುಂಡೆ. ರಂಗನಾತಪ್ಪೋರ ಅಣ್ಣನ ಎಡ್ತಿ !

ಯಮು :— ಅವನನ್ನು ಏಕೋ ಕೊಂದಿ ?

ಸಿರಿ :— ಮತ್ತೆ ರಂಗನಾತಪ್ಪೋರ ಮಾತಿನ ಮ್ಯಾಗೆ.

ಯಮು :— ಅಂತಹ ಕೆಲಸ ಏಕಯ್ಯಾ ಮಾಡ್ಬಿಟ್ಟೆ ?

ಸಿರಿ :— ಈಗಾರ ಏನನ್ಯಾಯ ಆತು ಮಾಸಾಮಿ ? ನಾನಿದ್ರೆ ದಿನಕ್ಕೆರಡಾಣೆ ಕೂಡಾ ತರ್ತಿದ್ದಿಲ್ಲ. ಒಮ್ಮೆಲೆ ಇನ್ನೂರು ರೂಪಾಯಿ ಗಂಟು ಕೊಟ್ಬಿಟ್ಟು ಬಂದೆ ಸಾವಿಸಾ, ನನ್ನ ಎಡ್ತಿ ಕರೇ ಲಚ್ಮೀಗೆ.

ಯಮು :— ಎಲ್ಲಿಯವಯ್ಯಾ ಇನ್ನೂರು ರೂಪಾಯಿ ?

ಸಿರಿ :— ಏಳಿದ್ನೆಲ್ಲ ಸಾಮಿ, ರಂಗನಾತಪ್ಪೋರ್ವು ಅಂತ ! " ಕುಡುದು ಕೊಲ್ಲಲೆ ಸಿರಿಯಾ, ಈಗೇನು ವಕೀಲ್ರು ಬರೀ ಜಟ್ಕಾ ಬಾಡಿಗ್ಗೆ ಬರ್ತಾರೆ; ನಾನಿರ್ತೀನಿ ' ಅಂದ್ರು. ಮುದ್ದಿಲ್ದಾನಸ ಒಂದು ಮಗಾ ಸತ್ತು ಬುದ್ದೀ ನಂದೂ. ' ರೊಟ್ಟೀಗೆ ಯಿಟ್ಟಲ್ದಾಗ, ಸೆಟ್ಟಿ ಗ್ಯಾಕ ಸಿಂಗಾರದ ಪೇಟ ' ಅಂತ ಅನಿಸ್ತು ಸಾವಿಸಾ ! ' ಏನಾರ ಮಾಡಿ ಬಿಡ್ಸಿಗೊಂತೀನೇಳಲೆ ' ಅಂದ ರಂಗನಾತಪ್ಪೋರು, ಬೆಳಗಾಗೋದ್ರೊಳಗೆ ಪೋಲೀಸರನ್ನ ತಂದು, ನನ್ನ ಜಮಾಯಿಸಿ ಬಿಟ್ರಲ್ಲ ಜೇಲಿನಲ್ಲಿ !

ನಾನೇನು ಎದರಲಿಲ್ಲ ಸಾಮಿ. ಇಂತಿಂತವರು ಇಂಗೀಂಗೆ ಅಂತ ಜಡ್ಜೀ ಮುಂದೆ ರಂಗನಾತಪ್ಪೋರ ಕಿತಾಪತಿ ಎಲ್ಲಾ ಬೈಲಿಗೆಳೆದು ಬಿಟ್ಟೆ; ಅಂದರೆ ಮಂಕುಗಳೆಲ್ಲ ಕೋರ್ಟಿನಲ್ಲಿ ನನ್ನ ನೋಡಿ ನಕ್ಕು ಬಿಡೋದಾ ! ಇನ್ನೂರೆಕರೆ ಜಮೀನು ಐತೆ, ಅದೇನೋ ರೂಪಾಯಿ ಗಾರ್ಮೆಂಟು ಸರ್ಕಾರಕ್ಕೆ ಅದೇನೋ ಕಟ್ತಾನ, ಬ್ಯಾಂಬ್ಯಾತ, ಅಂತಾ ದೊಡ್ಡ ಮನಿಶಾ ಯಿಂತಾದ್ಯಾಕೆ ಮಾತ್ಯಾನೂ ಅಂತ ಆ ಬೆರಿಕಿ ವಕೀಲ ಅಂದು ಮೇಜು ಗುದ್ದಿದ್ನೆ; ತನ್ನ ಬುಕ್ಕೊಡಿ ಜಡ್ಜಿ ನನಗೆ ' ಗಲ್ಲು ' ಅಂದ್ಬುಜೋದಾ ? ಆತು ಈಗೆ ಮಾಡಾತು, ಇಲ್ಲೆ ನಿನ್ಮಾಗೂ ಬಲು ಮೈಮುರಿಯ ದುಡ್ತ ಅಂತಲ್ಲ ಸಾವಿಸಾ ! ಆತು ಬಿಡು; ದುಡಿಸಿ ಆನ್ನ ಹಾಕಂಗಿದ್ದರೆ, ಇಲ್ಲೇ ಮಾಡು. (ದೂತರ ಕಡೆಗೆ ಕೈತೋರಿಸಿ) ಇವರ್ನ ಕಳಿಸು, ನನ್ನ ಕರೇ ಲಚ್ಮೀನ್ನೂ ಕರೆಸಿ ಬಿಡಬಾರ್ದೆ ? ಆತ್ತು ಆತ್ತು ಸಾಯ್ತು ಕೋಡಿ, ನಾನ್ಬಿಟ್ಟು ಬಂದೇ ಅಂತ !

ಯಮು :— ಸರಿ, ಜೆನ್ನಾಯಿತು, ಏನಯ್ಯಾ ಚಿತ್ರಗುಪ್ತರೆ; ನನಗೇ ತಂದೊಡ್ಡಿದನಲ್ಲ. ಏನು ಉಪಾಯ ?

ಚಿತ್ರ :— ಇದೂ ವಿಷ್ಣುನ ಕೋರ್ಟಿಗೆ ಕಳೀಸಿಬಿಡೋದು ಮೇಲು. ನನಗೇನೂ ತೋಚವ್ವೊಲ್ಲದು !

ಯಮು :—(ಸಿಟ್ಟಿನಿಂದ) ತೋಚೋ ಹಾಕಿದ್ರೆ ನೀನೂ ಒಬ್ಬ ಯಮನೇ ಆಗ್ತಿದ್ದಿ, ಗುಮಾಸ್ತನೇಕಾಗ್ತಿದ್ದಿ ? ಯಾರೋ ತಲೆಯಿಲ್ಲದವನು ಅಂದಿದಾನೆ ' ಅರಿಯೆ ಆನ್ನುವುದು, ಅರಸಿನ ಕೆಲಸ ' ಅಂತ. ' ಅರಿಯೆ ಆನ್ನೋದು ಆಳಿನ ಕೆಲಸ, ಅವನೊಟ್ಟಿಗೆ ಆಳೋದು ಅರಸಿನ ಕೆಲಸ '. ಒಳ್ಳೇ ಫಜೀತಿ ಆಲ್ಲಯ್ಯಾ. ಇದು ! ಊಂ, ಇರಲಿ ನೋಡೋಣ; ನೀನೊಳಗಿರಯ್ಯಾ.

[ದೂತರು ಸಿರಿಯಪ್ಪನನ್ನು ಒಳಗೆ ಒಯ್ಯುವರು. ಲಾವಣ್ಯವನ್ನು ಕರೆದುಕೊಂಡು ಬರುವರು.]

ದೂತರು :— ಯಮಧರ್ಮ ಮಹಾರಾಜಕೀ ಜೈ !

ಯಮು :— ಇದೇನಯ್ಯಾ ! ಯಾರೋ ಹೆಂಗುಸನ್ನು ತಂದು ಬಿಟ್ಟೆ ? ಊಂ, ಆಗಲಿ ಶಿಷ್ಟಾಚಾರ ಮತ್ತೆ.

(ಬಾಕ್ಸಿನಲ್ಲಿ ನಿಲ್ಲಿಸುವರು)

ಚಿತ್ರ :— ನಿನ್ನ ಹೆಸರೇನವ್ವಾ ?

ಲಾ :— ಲಾವಣ್ಯ ಅಂತ ಕರಿತಿದ್ರು ನನ್ನೊಡೆಯಾ!

ಗುಪ್ತ :— ವಯಸ್ಸು ?

ಲಾ :— ಹತ್ತೊಂಬತ್ತು !

ಯಮು :— ಅಯ್ಯೋ, ಚಿಕ್ಕವಳಲ್ಲಯ್ಯಾ ಪಾಪ ! ನೀನು ಹೇಗವ್ವಾ ಸತ್ತೆ ?

ಲಾ :— ನೇಣು ಹಾಕಿಕೊಂಡೆ ಒಡೆಯಾ !

ಯಮು :— ಅಯ್ಯಯ್ಯೋ ! ಅಂತಹುದೇನು ಬಂದಿತವ್ವಾ ? ನೋಡಯ್ಯಾ ಗುಪ್ತಾ, ಲಾವಣ್ಯ ಅಂತೆ ಹೆಸರು !

ಗುಪ್ತ :— ಪ ಫ ಬ ಭ ಮ ಯ ರ ಲ ವ ಶ ಷ ಸ . .

ಚಿತ್ರ :— (ಸಿಟ್ಟಿನಿಂದ) ಹೂಂ ಹೂಂ ಹೂಂ–ಹಳಕ್ಸ ಜಿ. ಏನಯ್ಯಾ, ಕಕಾ ಕಿಕೀ ಕೂಡಾ ಹೇಳ್ಬಿಡ್ತೀ ಏನು ? ರಂಗನಾಥನ ಪುಟದ ಮೇಲೆ ಇರುತ್ತೀ ನೋಡಯ್ಯಾ.

ಲಾ:— (ಗಾಬರಿಯಿಂದ) ಅವರೂ ಇಲ್ಲಿಗೆ ಬರ್ತಾರೇನು ಸ್ವಾವಿಸಾ ? ಹಾಗಾದರೆ ನನ್ನನ್ನು ಕಳಿಸಿಬಿಡಿ ಬೇಗ !

ಯಮು:— ಏಕವ್ವಾ; ರಂಗನಾಥನೆಂದರೆ ಭಯಪಡುತ್ತೀ ? ಏನು ವಿಷಯ ?

ಲಾ:— ಅವರೇ ನನ್ನ ಈ ಗತಿಗೆ ತಂದದ್ದು, ಹಾಳುಮಾಡಿದ್ದು ಎಲ್ಲ ! ನನ್ನೊಡೆಯಾ, ಅವರ ನೆನಪು ಬಂದರೆ ಮೈಯೆಲ್ಲ ಜುಂ ಎನ್ನುತ್ತೆ.

ಯಮು:— ಏನೂ ಭಯಪಡಬೇಡವ್ವಾ. ಅವನು ಆಗಲೆ ಬೇಯುತ್ತಿದ್ದಾನೆ. ಒದಯ್ಯಾ ಗುಪ್ತಾ, ಈ ಕೂಸಿನ ಕತೆಯಾದರೂ ಏನಿದೆ ?

ಗುಪ್ತ:— (ಓದುವನು) ಏಳನೇ ವರ್ಷದಲ್ಲಿ ಇವಳನ್ನು, ರಂಗನಾಥನ ಅಣ್ಣನಾದ ನಲವತ್ತೈದು ವರ್ಷದ ತಿರುವೆಂಕಟನಿಗೆ ಮೂರನೇ ಸಂಬಂದಕ್ಕೆ ಕೊಟ್ಟಿದ್ದರು. ಐದಾರು ವರ್ಷಗಳಲ್ಲಿಯೇ ತಿರುವೆಂಕಟನು ಸತ್ತನು. ಸ್ವಲ್ಪ ದಿವಸಗಳಲ್ಲಿಯೇ, ಇವಳ ಗುಣ ನಡತೆಗಳು ಸರಿಯಾಗಿಲ್ಲವೆಂದೂ, ಕೇಶವುಂಡನಕ್ಕೆ ಒಪ್ಪಲಿಲ್ಲವೆಂದೂ, ರಂಗನಾಥನು ಇವಳನ್ನು ಮನೆಯಿಂದ ದೂಡಿ, ಕುಲಗುರುಗಳಿಂದ ಬಹಿಷ್ಕಾರವನ್ನು ಹಾಕಿಸಿದನು. ಇವಳ ಹೆತ್ತ ತಾಯ್ತಂದೆಗಳು ಸಹ ಇವಳನ್ನು ತೆಗೆದುಕೊಳ್ಳಲು ಸಂಕೋಚ ಪಟ್ಟು, ಬುದ್ದಿ ಹೇಳಿ, ಹೊರಕೋಣೆಯಲ್ಲಿಟ್ಟರು. ಕಡೆಗೊಂದು ದಿನ ಇವಳು ಒಂದು ಮಗುವನ್ನೇ ಹೆತ್ತು..

ಲಾ:— (ಅಳುವಳು.)

ಲಾ:— (ನೀರುಗಣ್ಣನ್ನು ಒರಸುತ್ತ) ಗಂಡು ಕೂಸು ಒಡೆಯಾ, ಬಹಳ ಚೆನ್ನಾಗಿತ್ತು. ಇದ್ದರೆ ಹೇಗೋ ಎಂದು ಭಯ ಬಿದ್ದು, ಅದನ್ನು ನನ್ನ ಕೈಯಿಂದಲೆ ಕುತ್ತಿಗೆ ಹಿಸುಗಿ ಕೊಂದು ಬಿಟ್ಟೆ. ಸತ್ತ ಕೂಸು ಅತ್ತಂತೆ ಕೇಳಿಸುವುದು..ನಾನೇ ಜೋಗುಳ ಹಾಡಿದಂತೆ ಕೇಳಿಸುವುದು ಆಗಿ..

ಯಮ:— ಅಯ್ಯಯ್ಯಾ ! ಸಾಕು ಬಿಡಮ್ಮಾ ಸಾಕು ! ಎಸು ಅನ್ಯಾಯಯಯ್ಯಾ ಭೂಲೋಕದಲ್ಲಿ ? ' ಕೆನ್ನೇಗೆ ಹೊಡೆದು ಅತ್ತರೆ ಏಟು ' ಅಂದಂತಿದೆ ವ್ಯವಹಾರ !

(ದೂತರನ್ನು ಕುರಿತು) ಹೇಳ್ಕಿಲ್ವೇನಯ್ಯಾ ನಿಮಗೆ ಆಗಲೆ ? ಇಂಥ ಕಂದಮ್ಮಗಳನ್ನು ತಂದು ನನ್ನ ಪೇಚಿನಲ್ಲಿ ಹಾಕ್ಬೇಡೀ ಅಂತ ! ಬಿಟ್ಟು ಬಂದ್ಬಿಡಿ ಇವಳನ್ನ ಭೂಲೋಕದಲ್ಲಿ !

ಲಾ:— (ಅಂಗಲಾಚಿ) ಬೇಡ ಮಾಸ್ವಾಮಿ ; ಬೇಕಾದರೆ ಗಲ್ಲಿಗೆ ಹಾಕಿರಿ, ಏನಾದರೂ ಶಿಕ್ಷೆ ಕೊಡಿರಿ. ಭೂಲೋಕಕ್ಕೆ ಮಾತ್ರ ಕಳಿಸಬೇಡಿ !

ಯಮ:— ನೀನೇಕವಮ್ಮಾ ಇಷ್ಟು ಭಯಪಡ್ತೀ. ರಂಗನಾಥ ಅಲ್ಲಿಲ್ಲ !

ಲಾ:— ಬೇಡ ಒಡೆಯಾ ! ಅವರಿಲ್ಲದಿದ್ದರೆ ಅವರಪ್ಪನಂತವ ರಿದ್ದಾರೆ ಅಲ್ಲಿ !

ಯಮ:— (ಮೈ ಮೈ ಹರಕೊಳ್ಳುತ್ತ) ಛಿಛೆಛೆಛೆ. (ದೂತರ ಕಡೆ ನೋಡಿ) ಒಂದು ಸಾವಿರ ಸಲ ಹೇಳಿದ್ದೇನೆ ನಿಮಗೆ: ಈ ಹೆಣ್ಮಕ್ಕಳ ಕಂಟೆ ತರಬೇಡ್ರಯ್ಯಾ ಅಂತ ! ಆ ಮಹರಾಯಳು ಸಾವಿತ್ರಿ ಆಗಲೆ ಇಮ್ಮೆ ಬುದ್ಧೀ ಕಲಿಸಿದ್ದಾಯಿತು. ಏನೋ, ಗಂಡನ ಜೀವಾ ಕೊಡು ಅಂತ ಸತಾಯಿಸ್ದಾ,ಕೊಟ್ಟುಬಿಟ್ಟೆ. ಪೀಡಾ ಬಗಿಹರೀತು. (ಲಾವಣ್ಯವನ್ನು ಕುರಿತು) ಏನಮ್ಮಾ ನಿನಗೂ ನಿನ್ನ ಗಂಡನ ಜೀವ ಕೊಟ್ಟರೆ ಭೂಲೋಕಕ್ಕೆ ಹೋಗ್ತೀಯೇನಮ್ಮಾ ?

ಲಾ:— ಅವರಾರೋ ಸಾವಿತಾ, ಹೆಚ್ಚು ಪರಿಚಯ ಸಹ ಇಲ್ಲ! ಅವರನ್ನೇಕೆ ಕೊಂಡು ಹೋಗಲಿ, ಸನ್ನೊಡೆಯಾ ? ಇಲ್ಲೇ ಏನಾದರೂ ಕೆಲಸ ಮಾಡಿಕೊಂಡು ಇರೂ ಅಂದರೆ..

ಯಮ:— ಚೆನ್ನಾಗಿದೆ, ವ್ಯವಹಾರ ! ಭೂಲೋಕದವರೆಲ್ಲ ಇಲ್ಲೇ ಇರ್ತೀನಿ ಅಂತ. ಏನಯ್ಯಾ ! ಚಿತ್ರಗುಪ್ತರೇ, ಏನಿದಕ್ಕೆ ಉಪಾಯ ?

ಚಿ. ಗು:— ಸಮ್ಮೀನೂ ತೋಚೋಲ್ಲ ಮಹಾಪ್ರಭೂ; ನೀವೇ ಹೇಳಬೀಕು !

ಯಮ:— ಭೇಷ್. ಇದಕ್ಕೇ ಅಯ್ಯಾ ಗುಮಾಸ್ತರನ್ನೆಲ್ಲ ಭೂಲೋಕದಲ್ಲಿ ಪ್ರಾಪರ್ಟಿ ಲಿಸ್ಟಿನಲ್ಲಿ ಸೇರಿಸಿದ್ದಾರೆ. ದೇವರು ನಿಮ್ಮೆ ತಲೀಕೊಡೋ ಬದಲು ಇನ್ನೆರಡು ಕೈಗಳನ್ನು ಕೊಟ್ಟಿದ್ರೆ ಚೆನ್ನಾಗಿರೋದು, ಬರೀತಾ ಕೂಡ್ಲಿಕ್ಕೆ ! ಮೇಲಿನವರು ಹೇಳಿದ್ದಕ್ಕೆಲ್ಲ ' ಹೂಂ ' ಅನ್ನುವ ನಿಮ್ಮಿಂತ ' ಉಹುಂ ' ಅಂದ ಅವಣ್ಯಾ ಮೇಲಯ್ಯಾ. ತೆಕ್ಕೊಂಡು ಸಡೀರಿ ನಿಮ್ಮ ದಫ್ತರಾನ, ಆ ವಿಷ್ಣುನ ಕೋರ್ಟಿಗೆ..ಆ ಕಂದಮ್ಮನ್ನೂ ಕರಕೊಂಡು. ನಾನು ಕಾರಿನಲ್ಲಿ ಬರ್ತೇನೆ ! ಒಳ್ಳೇ ಕೆಲಸ. ಭೂಲೋಕದ ಕತ್ತೆಗಳು ಮಾಡೋ ಅನ್ಯಾಯಕ್ಕೆ ನನ್ನ ಫಜೀತು. ಇನ್ನೆಲ್ಲಿ ಇನ್ನೆಲ್ಲೀ ನರ್ತನ? ಈ ತೊಡಕು ಬಿಡಿಸಿದರೆ ಸಾವಿರ ನರ್ತನ ನೋಡಿದಷ್ಟಾನಂದ ಆಗುತ್ತೆ. ಆ ಸಿರಿಯಪ್ಪನ್ನೂ ತನ್ನಿ, ಅವನ ಕೇಸೂ ಫೈನಲ್ಮಾಡಿಸೋಣ !

(ಎಲ್ಲರೂ ಹೋಗುವರು-ಇನ್ನೂ ವಾಪಸು ಬಂದಿಲ್ಲ.)

ಓರಿಯೆಂಟಲ್

ಗೌ. ಸೆಕ್ಯುರಿಟಿ ಲೈಫ್ ಇನ್ಶುರನ್ಸ್ ಕಂ., ಲಿ.

ಮುಖ್ಯ ಕಚೇರಿ : ಮುಂಬಯಿ

ವಿವೇಚನಾಶೀಲರಾದ ಸಾವಿರಾರು ಜನ ಸುಶಿಕ್ಷಿತರು, ತಮ್ಮ ಮುಪ್ಪಿನ ಕಾಲದಲ್ಲಿ ತಮಗಾಗಿಯೂ, ಇಲ್ಲವೆ ತಮ್ಮ ನಂತರ ತಮ್ಮ ಅವಲಂಬಿತ ಕುಟುಂಬಕ್ಕಾಗಿಯೂ ಆರ್ಥಿಕ-ಸ್ವಾತಂತ್ರ್ಯದ ಅಡಿಗಲ್ಲನ್ನು ಹಾಕಿ ಇರಿಸುತ್ತಿರುವರು.

ಎಂದರೆ

ಪ್ರತಿವರ್ಷವೂ ಸಾವಿರಾರು ಜನರು ' ಓರಿಯೆಂಟಲ್ ' ನಲ್ಲಿ ತಮ್ಮ ಜೀವವಿಮೆ ಮಾಡುತ್ತಿರುವರು.

ತಡಮಾಡಬೇಡಿರಿ! ಕೂಡಲೆ ನೀವೂ ಒಂದು ' ಓರಿಯೆಂಟಲ್ ' ಪಾಲಿಸಿ ಕೊಳ್ಳಿರಿ!

ವಿಶೇಷ ಸಂಗತಿಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ಟಿ. ಅಥಣಿಕರ್,
ರಚಕವಾಡಿ. ಬೆಳಗಾಂವಿ.

ಹಿರಣ್ಯಗರ್ಭ

(ಸಂಶೋಧನ ವಿಚಾರ)*

★

ಶ್ರೀ. ಬೆಂಗೇರಿ ಹುಚ್ಚರಾಯರು ಎಂ. ಎ., ಬಿ. ಟಿ.

ಹಿರಣ್ಯಗರ್ಭವೆಂಬ ಶಬ್ದವು, ವೆಂಗಿಯ ಆನಂದ ಮನೆತನದ ಪೀಳಿಗೆಯಲ್ಲಿಯ ಕೆಲವೊಂದು ಸಂಶಯ ದೂರಮಾಡುವುದರಿಂದ, ಆ ಶಬ್ದದ ನಿಜವಾದ ಅರ್ಥವೇನೆಂಬುದನ್ನು ಇಲ್ಲಿ ವಿಚಾರಿಸ ಬೇಕಾಗಿದೆ.

ಸಂಸ್ಕೃತ ಕೋಶಕಾರರ ಮತದಂತೆ 'ಹಿರಣ್ಯಗರ್ಭ' ಶಬ್ದಕ್ಕೆ ಎರಡರ್ಥಗಳಿವೆ. ೧. ರೂಢಿಯಲ್ಲಿದ್ದ ಬ್ರಹ್ಮಶಬ್ದದ ಪರ್ಯಾಯ ವಾಚಿ. ೨. ಮತ್ಸ್ಯಪುರಾಣ, ಹೇಮಾದ್ರಿಯ ವ್ರತಖಂಡ ಮತ್ತು ಬಲ್ಲಾಳಸೇನನ ದಾನಸಾಗರ ಮುಂತಾದ ಗ್ರಂಥಗಳಲ್ಲಿ ಕಾಣಿಸಿದ ಷೋಡಶ ಮಹಾದಾನಗಳಲ್ಲಿಯ ಒಂದರ ಹೆಸರು. ಈ ಷೋಡಶ ಮಹಾದಾನಗಳು ಯಾವುವೆಂದರೆ:—

೧. ತುಲಾಪುರುಷ	೨. ಹಿರಣ್ಯಗರ್ಭ
೩. ಬ್ರಹ್ಮಾಂಡ	೪. ಕಲ್ಪಪಾದಪ
೫. ಗೋಸಹಸ್ರ	೬. ಹಿರಣ್ಯಕಾಮಧೇನು
೭. ಹಿರಣ್ಯಾಶ್ವ	೮. ಪಂಚಲಾಂಗಲ
೯. ಧರಾ	೧೦. ಹಿರಣ್ಯಾಶ್ವರಥ
೧೧. ಹೇಮಹಸ್ತಿರಥ	೧೨. ವಿಷ್ಣುಚಕ್ರ
೧೩. ಕಲ್ಪಲತಾ	೧೪. ಸಪ್ತಸಾಗರ
೧೫. ರತ್ನಧೇನು	೧೬. ಮಹಾಭೂತಘಟ

ಇವೆಲ್ಲ ದಾನಗಳ ಹೆಸರುಗಳು ಪಾರಿಭಾಷಿಕ ಶಬ್ದಗಳಂತೆ ಬಳಸಲ್ಪಡುತ್ತವೆ. ಇವುಗಳ ವಿವರಗಳು ದಾನಸಾಗರದ ಮಹಾದಾನ-ವ್ರತವೆಂಬ ಅಧಿಕರಣದಲ್ಲಿಯೂ, ವ್ರತಖಂಡದ ೫ನೆಯ ಅಧಿಕರಣದಲ್ಲಿಯೂ ಮತ್ತು ಮತ್ಸ್ಯಪುರಾಣದ ೨೭೭ನೆಯ ಅಧ್ಯಾಯದಲ್ಲಿಯೂ ದೊರಕುತ್ತವೆ.

ಹಿರಣ್ಯಗರ್ಭವೆಂಬ ಶಬ್ದವು ದಕ್ಷಿಣದ ಅರಸರ ಶಿಲಾಲಿಪಿಗಳಲ್ಲಿ ಹಲವುಸಾರೆ ಕಂಡುಬರುತ್ತದೆ. ಆನಂದಮನೆತನದ ಅರಸನಾದ ಅತ್ತಿವರ್ಮ (ಹಸ್ತಿವರ್ಮ)ನ ಗೋರಂಟ್ಲದ (ಗುಂಟೂರು) ಶಿಲಾಲಿಪಿಯಲ್ಲಿ (Ind. Ant. IX. 102 F) ಅತ್ತಿವರ್ಮನು, "ಅಪ್ರಮೇಯ ಹಿರಣ್ಯಗರ್ಭಪ್ರಸವ"ನೆಂದು ಸಂಬೋಧಿಸಲ್ಪಟ್ಟಿದ್ದಾನೆ. ಈ ಲಿಪಿಯನ್ನು ಸಂಪಾದಿಸುವಾಗ ಡಾ. ಫ್ಲೀಟ್‌ರು "ಅಗಮ್ಯನಾದ ಹಿರಣ್ಯಗರ್ಭನ ಎಂದರೆ ಬ್ರಹ್ಮನ ಪೀಳಿಗೆಯವನು" ಎಂದು ಭಾಷಾಂತರಿಸಿದ್ದಾರೆ. ("Who is the-posterity of the inscrutable (god) Hiranyagarbha") ಮಂಗಳೇಶನ ಮಹಾಕೂಟ (ಬದಾಮಿ) ದ ಕಂಬದಶಾಸನದಲ್ಲಿ (Ind. Ant. XIX P. 9. F. F) 'ಹಿರಣ್ಯಗರ್ಭಸಂಭೂತ' ಎಂಬ ಶಬ್ದವು ಬಂದಿದೆ. ಇದನ್ನು ಸಂಪಾದಿಸಿದ ಡಾ. ಫ್ಲೀಟ್‌ರು ಈ ಶಬ್ದವು ಬಂದಿರುವ ವಾಕ್ಯವನ್ನು "ಹಿರಣ್ಯಗರ್ಭನಿಂದ (ಬ್ರಹ್ಮ) ಸಾಗಿಬಂದ ಮನೆತನದವರು" ಎಂದು ಅರ್ಥಮಾಡಿದ್ದಾರೆ. (who was descended from (the god) Hiranyagarbha.)

ಇನ್ನು "ಹಿರಣ್ಯಗರ್ಭಪ್ರಸವ, ಹಿರಣ್ಯಗರ್ಭಸಂಭೂತ" ಎಂಬ ವಿಶೇಷಣಗಳು ಕೆಲಕೆಲವು ಮನೆತನದ ಕೆಲವೊಂದು ಅರಸರಿಗೆ ಮಾತ್ರ ಅನ್ವಯಿಸಿದುದು, ಅವರ ಶಿಲಾಲಿಪಿಗಳಲ್ಲಿ ಕಂಡು ಬರುತ್ತದೆ. ಡಾ. ಫ್ಲೀಟರವರ ಮತವೇ ನಿಜವಾಗಿದ್ದರೆ, ಒಂದು ಮನೆತನದಲ್ಲಿ ಒಬ್ಬ ಅರಸನಿಗೆ ಈ ವಿಶೇಷಣವು ಅನ್ವಯಿಸಿದ್ದಕ್ಕೆ

★

ದಕ್ಷಿಣದ ಶಿಲಾಶಾಸನಗಳಲ್ಲಿ 'ಹಿರಣ್ಯಗರ್ಭ' ಎಂಬ ಮಾತು ಆಗಾಗ ಕಣ್ಣಿಗೆ ಬೀಳುತ್ತದೆ. ಅಲ್ಲಿಯ 'ಹಿರಣ್ಯಗರ್ಭ' ಎಂಬ ಮಾತು ಬ್ರಹ್ಮ ಎಂಬುದಕ್ಕೆ ಪರ್ಯಾಯಪದವಾಗಿಲ್ಲ. ಹಾಗಾದರೆ ಆ ಪದಕ್ಕಿರುವ ನಿಜವಾದ ಅರ್ಥವೇನು?

★

ಅವನಿಂದ ಸಾಗಿದ ಅವನ ಮನೆತನದವರಿಗೆ ತಪ್ಪದೇ ಈ ವಿಶೇಷಣವು ಪ್ರಯೋಗಿಸಲ್ಪಡಬೇಕಾಗಿತ್ತು. ಇದಲ್ಲದೆ ಮಹಾ ಕೂಟದ ಕಂಬದ ಲಿಪಿಯಲ್ಲಿ ಈ ವಿಶೇಷಣವು ಮೊದಲನೆಯ ಪುಲಿಕೇಶಿಗೆ ಅನ್ವಯಿಸಿರುವುದರಿಂದಲೂ; ಆ ಮನೆತನದ ಮೊದಲಿಗ ನಾದ ಜಯಸಿಂಹನಿಗಾಗಲಿ, ಇಲ್ಲವೆ ಆಗ ಆಳುತ್ತಿರುವ ಮಂಗಳೇಶನಿಗಾಗಲಿ, ಅನ್ವಯಿಸಲ್ಪಡದಿರುವುದರಿಂದಲೂ ಡಾ. ಫ್ಲೀಟರ ಸಿದ್ಧಾಂತವು ತಪ್ಪೆಂಬುದು ನಿಃಸಂದೇಹವಾಗಿದೆ. ಆದುದರಿಂದ ಡಾ. ಹೂಳ್ಟ್ಜರಂತೆ, ನಾನಾದರೂ ಮೇಲ್ಕಂಡ ಲಿಪಿಗಳಲ್ಲಿರುವ ಈ ಹಿರಣ್ಯಗರ್ಭವೆಂಬ ಶಬ್ದವು, ಷೋಡಶ ಮಹಾದಾನಗಳಲ್ಲಿಯ ಒಂದು ದಾನವೆಂದು ಅಭಿಪ್ರಾಯ ಪಡುತ್ತೇನೆ.

ದಾಮೋದರವರ್ಮನ (ಆನಂದಮನೆತನ) ಮತ್ತೇವಾಡಿನ ತಾಮ್ರಲಿಪಿಯನ್ನು ಸಂಪಾದಿಸುವಾಗ (E. Ind. XVII. P. 328 F. F.) ಡಾ. ಹೂಳ್ಟ್ಜರು, "ಇದೇ ತರದ ಬಂದು ಮಹತ್ಕಾರ್ಯವನ್ನು ಅತ್ತಿವರ್ಮನು ಮಾಡಿದನೆಂದು

(* ಶ್ರೀಯುತ ದಿನೇಶಚಂದ್ರ ಸರಕಾರ್ ಅವರ 'Successors of the Satavahanas' ಎಂಬ ಇತಿಹಾಸಗ್ರಂಥದ ೩ನೆಯ ಪ್ರಕರಣದ ಅನುವಾದವಿದು.)

ಗುಂಟೂರು ಜಿಲ್ಲೆಯ ಒಂದು ತಾಮ್ರಲಿಪಿಯಲ್ಲಿ ಹೇಳಿದೆ. ಅಲ್ಲಿ ಕೊಂಡ "ಅಪ್ಯನೇಕ ಹಿರಣ್ಯಗರ್ಭಪ್ರಸವೇನ" ಎಂಬ ವಿಶೇಷಣವನ್ನು 'ಅನೇಕ ಹಿರಣ್ಯಗರ್ಭಗಳನ್ನು ಉಂಟುಮಾಡಿದವನು (ಎಂದರೆ (ದಾನ) ಮಾಡಿದವನು.)' ಎಂದು ನಾನು ಭಾಷಾಂತರಿಸಿದ್ದೇನೆಂದು" ಅಂದಿದ್ದಾರೆ. ಈ ಸಮಸ್ತಪದವು ಷಷ್ಠೀತತ್ಪುರುಷ ಸಮಾಸವೆಂದು ಡಾ. ಹೂಳ್ಟ್ಜರ ಮತ. ಹಾಗಂತೇ ಅವರು ಇದರ ಅರ್ಥವನ್ನು "ಹಿರಣ್ಯಗರ್ಭಪ್ರಸವ" ಅಂದರೆ 'ಹಿರಣ್ಯಗರ್ಭವನ್ನು ಉಂಟುಮಾಡುವವನು' ಎಂದು ಅರ್ಥ ಮಾಡಿದ್ದಾರೆ. ವಿಷ್ಣುಕುಂಡೀ ಮನೆತನದ ಮಾಧವವರ್ಮನ (೧ನೆಯ) ಇಪ್ಪೂರ (ನಂ. ೧) ತಾಮ್ರಲಿಪಿಯಲ್ಲಿ ಬಂದಿರುವ "ಹಿರಣ್ಯಗರ್ಭಪ್ರಸೂತ" ಎಂಬುದನ್ನು ಅರ್ಥಮಾಡುವಾಗ ತೊಡಕಿನಲ್ಲಿ ಬಿದ್ದಿದ್ದಾರೆ. (E. P. Ind. XVII P. 335.F.) 'ಪ್ರಸೂತ' ಎಂಬ ಪದವು ವಿಶೇಷಣವಾಗಿರುವುದರಿಂದ, ಇದನ್ನೊಳಗೊಂಡ ಮೇಲಿನ ಸಮಸ್ತಪದವು ಷಷ್ಠೀತತ್ಪುರುಷವಾಗಲಾರದು. ಆದುದರಿಂದ ಡಾ. ಹೂಳ್ಟ್ಜರು ಇದನ್ನು "ಹಿರಣ್ಯಗರ್ಭ ಪ್ರಸೂತ" (ಎಂದರೆ ಹಿರಣ್ಯಗರ್ಭವನ್ನು ಪಡೆದವನು) ಎಂದು ತಿದ್ದಿ ಅರ್ಥಮಾಡಿದರು. (E. P. Ind. XVII P. 336. note 7) ಆದರೆ ವಿಷ್ಣುಕುಂಡೀ ಮನೆತನದ ಅದೇ ಅರಸನ ಪೊಲಮೂರಿನ ತಾಮ್ರಲಿಪಿಯಲ್ಲಿ (Journ. Andhra. His. Res. Soc VI P. 17 FF) ಯೂ 'ಹಿರಣ್ಯಗರ್ಭ ಪ್ರಸೂತ'ನೆಂಬ ಪದವೇ ಬಳಸಲ್ಪಟ್ಟಿರುವುದರಿಂದಲೂ, ಮಹಾಕೂಟದ ಕಂಬದ ಲಿಪಿಯಲ್ಲಿ ಬಂದ ಶಬ್ದವು ಹಿರಣ್ಯಗರ್ಭಸಂಭೂತವಾಗಿರುವುದರಿಂದಲೂ, ಡಾ. ಹೂಳ್ಟ್ಜರು ಇದನ್ನು ಷಷ್ಠೀತತ್ಪುರುಷಸಮಾಸವೆಂದು ತಿಳಿದು ಅರ್ಥಮಾಡಿದುದು ತಪ್ಪೆಂದು ನಾನೇ ಕಾಣಿಸುತ್ತದೆ. ಹಿರಣ್ಯಗರ್ಭಸಂಭೂತ, ಹಿರಣ್ಯಗರ್ಭಪ್ರಸೂತ ಶಬ್ದಗಳು ನಿಜವಾಗಿಯೂ ಪಂಚವಿಧಾತತ್ಪುರುಷದ ಉದಾಹರಣೆಗಳಾಗಿದ್ದು "ಹಿರಣ್ಯಗರ್ಭದಿಂದ ಹುಟ್ಟಿದವನು." ಎಂಬ ಅರ್ಥವನ್ನು ಕೊಡುತ್ತವೆ. ಹಿರಣ್ಯಗರ್ಭಪ್ರಸವವೆಂಬ ಪ್ರಯೋಗವಾದರೂ ಇದೇ ಅರ್ಥವುಳ್ಳದಾಗಿರಬೇಕು. ಆದುದರಿಂದ ಇದು ಬಹುವ್ರೀಹಿಸಮಾಸದ ಉದಾಹರಣೆಯೆಂದು (ಎಂದರೆ ಹಿರಣ್ಯಗರ್ಭದಿಂದ ಯಾವನು ಹುಟ್ಟಿದನೋ ಅವನು.") ನನ್ನ ಮತ. ಆದರೆ ಹಿರಣ್ಯಗರ್ಭವು ಮಹಾದಾನಗಳಲ್ಲಿ ಒಂದಾಗಿರುವುದರಿಂದ, ಹಿರಣ್ಯಗರ್ಭದಿಂದ ಹುಟ್ಟಿದವನೆಂದರೆ ಅರ್ಥವೇನು?

ಹಿರಣ್ಯಗರ್ಭ ಮಹಾದಾನವನ್ನು ಮಾಡುವಾಗ, ಬ್ರಾಹ್ಮಣರಿಗೆ ದಾನಕೊಡುವ ಒಡವೆಯು ಹಿರಣ್ಯಗರ್ಭವು, ಎಂದರೆ ಬಂಗಾರದ ಬಸಿರು" (ಗರ್ಭಾಕಾರವಾಗಿರುವುದರಿಂದ). ಹಿರಣ್ಯಗರ್ಭವೆಂದರೆ ಬಂಗಾರದ ಕುಂಡವೆಂಬ ಅರ್ಥ. ಇದರ ವಿವರವಾದ ವಿವರಣೆ ಇಂತು (ಎತ್ತರ) ಉದಾ:-

ಬ್ರಾಹ್ಮೈರಾನಯೇತ್ಕುಂಡಂ ಶತನೀಯ ಮಯಂ ಶುಭಂ।
ತ್ರಾಸಪ್ತತ್ಯಂಗುಲೋಚ್ಛ್ರಾಯಂ ಹೇಮಪಂಕಜ ಗರ್ಭವತ್॥

ಈ ದಾನದ ವಿವರಗಳೆಲ್ಲವನ್ನೂ ವಿವೇಚಿಸುವುದು ಈ ಲೇಖನದ ಉದ್ದೇಶವಲ್ಲ. ಕೆಳಗೆ ಕಾಣಿಸಿದ ವಾಕ್ಯಗಳು ಮತ್ಸ್ಯಪುರಾಣದ ೨೪೯ನೆಯ ಅಧ್ಯಾಯದಿಂದ ಆರಿಸಲ್ಪಟ್ಟಿವೆ. ಇವುಗಳಿಂದ ದಾನದ ಅರ್ಥವು ಸ್ಪಷ್ಟವಾಗುತ್ತದೆ.

ಈ ಮಹಾದಾನವನ್ನು ಮಾಡುವವನು ಹಿರಣ್ಯಗರ್ಭವನ್ನು ವಿಧಿಪೂರ್ವಕವಾಗಿ ಅರ್ಚಿಸಿ, ಹಿರಣ್ಯಗರ್ಭ (ವಿಷ್ಣು) ನನ್ನುದ್ದೇಶಿಸಿದ ಕೆಳಗಿನ ಶ್ಲೋಕವನ್ನು ಆಸ್ಥೆಬೇಕು:

ಭೂರ್ಲೋಕ-ಪ್ರಮುಖಾಲೋಕಾಸ್ತವಗರ್ಭೇ ವ್ಯವಸ್ಥಿತಾಃ।
ಬ್ರಹ್ಮಾದ್ಯಸ್ತಥಾದೇವಾ ನಮಸ್ತೇ ವಿಶ್ವಧಾರಿಣೇ॥

ಇದಾದ ತರುವಾಯ ದಾನಮಾಡುವವನು (ಆ ಬಂಗಾರದ ಕುಂಡ) ಹಿರಣ್ಯಗರ್ಭವನ್ನು ಸೇರುತ್ತಾನೆ. ಆ ಮೇಲೆ ಬ್ರಾಹ್ಮಣರು ಆ ಹಿರಣ್ಯಗರ್ಭಕ್ಕೆ ಗರ್ಭಾಧಾನ, ಪುಂಸವನ, ಸೀಮಂತೋನ್ನಯನ ಮೊದಲಾದ ಸಂಸ್ಕಾರಗಳನ್ನು ಗರ್ಭಿಣಿಯಾದ ಹೆಂಗುಸಿಗೆ ಮಾಡಿದಂತೆ ಮಾಡುತ್ತಾರೆ. ಉದಾ:-

ಏವಮಾಮಂತ್ರ್ಯತನ್ಮಧ್ಯಮಾವಿಶ್ಯಾಂಭ ಉದನ್ಮುಖಃ।
ಮುಷ್ಟಿಭ್ಯಾಂ ಪರಿಸಂಗೃಹ್ಯ ಧರ್ಮರಾಜ ಚತುರ್ಮುಖೌ।
ಜಾನುಮಧ್ಯೇ ಶಿರಃಕೃತ್ವಾ ತಿಷ್ಠೇತ ಶ್ವಾಸ-ಪಂಚಕಮ್।
ಗರ್ಭಾಧಾನಂ ಪುಂಸವನಂ ಸೀಮಂತೋನ್ನಯನಂ ತಥಾ।
ಕುರ್ಯುರ್ಹಿರಣ್ಯಗರ್ಭಸ್ಯ ತಪಸ್ತೇದ್ವಿಜಪುಂಗವಾಃ॥

ಆ ಮೇಲೆ ದಾನಮಾಡುವವನನ್ನು ಆ ಹಿರಣ್ಯಗರ್ಭದಿಂದ ಹೊರಗೆ ತೆಗೆದು, ಹುಟ್ಟಿದ ಕೂಸಿಗೆ ಮಾಡಿದಂತೆ ಅವನಿಗಾದರೂ ಜಾತಕರ್ಮಾದಿ ಸಂಸ್ಕಾರಗಳನ್ನು ಮಾಡುತ್ತಾರೆ. ಆನಂತರ (ದಾನ ಮಾಡುವವನು) ಅವನು ಕೆಳಗೆ ಕಾಣಿಸಿದ ಅರ್ಥಪೂರ್ಣ ಮಂತ್ರವನ್ನು ಅನ್ನಬೇಕು:—

ಮಾತ್ರಾಹಂ ಜನಿತಃ ಪೂರ್ವಂ ಮರ್ತ್ಯಧರ್ಮಾಸುರೋತ್ತಮ।
ತ್ವದ್ಗರ್ಭ ಸಂಭವಾದೇಷ ದಿವ್ಯದೇಹೋ ಭವಾಮ್ಯಹಮ್॥

"ಎಲ್ಲೆ ಸುರೋತ್ತಮನೆ, ಈ ಮೊದಲು ನಾನು ನನ್ನ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದನು, ಮತ್ತು ಮರ್ತ್ಯಧರ್ಮನಾಗಿದ್ದನು. (ಎಂದರೆ ಜಡದೇಹವುಳ್ಳವನಾಗಿದ್ದನು). ಆದರೆ ಈಗ ನಿನ್ನಿಂದ ನಾನು ಹುಟ್ಟಿರುವೆನಾದುದರಿಂದ, ನಾನು ದಿವ್ಯ ದೇಹಧಾರಿಯಾಗಿದ್ದೇನೆ."

ಹಿರಣ್ಯಗರ್ಭ ಮಹಾದಾನಮಾಡುವವನು, ಹಿರಣ್ಯಗರ್ಭದಿಂದ ಎಂದರೆ ಬಂಗಾರದ ಕುಂಡದಿಂದ ಹುಟ್ಟಿಬಂದಿರುವನೆಂಬ ಅರ್ಥವು ಕೆಳಗಿನ ಮಂತ್ರದಿಂದ ಸ್ಪಷ್ಟವಾಗುತ್ತದೆ.

ಅದ್ಯಜಾತಸ್ಯತೇಽಂಗಾನಿ ಅಭಿಷೇಕ್ಷ್ಯಾಮಹೇವಯಮ್॥

ಇವೆಲ್ಲ ಕೆಲಸ ಮುಗಿದ ಮೇಲೆ ಹಿರಣ್ಯಗರ್ಭವನ್ನೂ ಮತ್ತು ಬೇರೆ ಒಡವೆಗಳನ್ನೂ ಬ್ರಾಹ್ಮಣರು ಸ್ವೀಕರಿಸುತ್ತಾರೆ.

———(೦)———

ಬಿಡುಗಡೆ ★

ಶ್ರೀ. ಟಿ. ಆರ್. ಸುಬ್ಬರಾವ್, ಚಿತ್ರದುರ್ಗ

★

ಲೋಕಕಂಟಕನಾದ ಬಾರಬ್ಬಾಸ್ ಸೆರೆಯಾಳಾಗಿದ್ದು, ತಾನು ಶಿಲುಬೆಯನ್ನೇರಿ ಸಾಯುವುದು ನಿಶ್ಚಿತವೆಂದು ನುರುಗುತ್ತಿದ್ದ. ಆದರೆ ಆತನಿಗೆಂದಿದ್ದ ಶಿಲುಬೆ, ಲೋಕರಕ್ಷಕನಾದ ಏಸುವಿನ ಮೃತಕಲೇವರಕ್ಕೆ ಆಲಂಬನವಾಯಿತು. ಬಾರಬ್ಬಾಸ್ ಏನಾದ ? *

●

" ದಿನದಿನವು ಶಿಲುಬೆಯನು ಏರುವನು,
ಮಾನವನ ಪಾಪದಲಿ ಏಸು !
ದೀನನಂತವ ಬೇಡುವನು ದೇವನಡಿ,
ಮಾನವನ ಮೋಕ್ಷಕಾಗಿ ! "—

ಕಡೆಗೆ ಬೆಳಗಾಯ್ತು ! ಪೂರ್ವದಿಗಂತದಲ್ಲಿ ರಕ್ತಾರುಣ ಕಿರಣ-ರವಿಯು ಮಂಗಲ ಪ್ರಭಾತವಾಯಿತು !

ಬೇಸರದ ರಾತ್ರಿ; ಅತ್ಯಂದಿತ್ತ ಶತಪಥ ಹಾಕುತ್ತಾ ಕಳೆದ ರಾತ್ರಿ; ರೋಮನ್ ಪಹರೆಯವನ ಪದಶಬ್ದವನ್ನು ಆಲಿಸುತ್ತಾ ಕಳೆದ ರಾತ್ರಿ; ನಿರೀಕ್ಷಿತ ನೋವಿನ ಭೀತಿಯು— ಕ್ಷಣಕ್ಷಣಕ್ಕೂ ಬಳೆದು ಭಯಾನಕವಾದ ರಾತ್ರಿ !

ಕಡೆಗೆ ಕಾರಿರುಳಿಳಿದು ಬೆಳಗಾಯ್ತು !

ಅದರೆ ಪ್ರಭಾತ ಸಮಯದ ಹೊಂಬೆಳಕು ಬಾರಬ್ಬಾಸನ ಎದೆಗೆ ಶಾಂತಿಯನ್ನು ನೀಡುವಂತಿಲ್ಲ. ಕಾರಣ, ಇಂದು ಅವನಿಗೆ ಜೀವಿತ-ಜಗತ್ತಿನಿಂದ ಮುಕ್ತಿ.

ಈಗ ತನ್ನ ಹೂಬಿಸಿಲಿನಿಂದ ಚಳಿಯನ್ನೋಡಿಸಿ ನಗುವ ರವಿಯು, ಮದ್ಯಾಹ್ನದ ಮೇಲೆ ಗೋಲ್ಗೊಧದಲ್ಲಿ, ತಾನು ನೋವಿನಿಂದ ನರಳುತ್ತಿರುವಾಗ—ಭೂಮಿ ಬಾಂದಳಗಳ ಮಧ್ಯೆ ಅವುಗಳೆರಡರಿಂದಲೂ ತಿರಸ್ಕೃತನಾದವನಂತೆ-ಶಿಲುಬೆಯ ಮೇಲೆ ಕೂಗುತ್ತಿರುವಾಗ, ಬೆಂಕಿಯಂತೆ ಬೆಳಗುವನು.

ಬಾರಬ್ಬಾಸನ ದುರಂತವನ್ನು ಕಂಡು ಕಣ್ಣೀರಿಡುವವರಿಲ್ಲ. ಸಹಾಯಮಾಡುವವರಿಲ್ಲ. ಆಶೆಯಿಲ್ಲ.—ಉಂಹೂ.....ತನ್ನ ದೆನ್ನುವ ಪ್ರಾಣವೊಂದೂ ವಿಶಾಲ ವಿಶ್ವದಲ್ಲಿಲ್ಲ,....ಅವನ ಪಾಲಿಗೆ....ಯೋಚಿಸುತ್ತಾ ಯೋಚಿಸುತ್ತಾ ಅವನೆದೆಯಲ್ಲಿ ಮಾನವದ್ವೇಷದ ಕಿಚ್ಚು ಭೀಷಣವಾಗಿ ಜ್ವಲಿಸಿ, ಕಣ್ಣುಗಳು ಕೆಡಿಗಾರಾದುವು. ಕಾದಿನ ಹಾದಿಯಲ್ಲಿ ತನ್ನನ್ನು ಕಂಡು ನಡುಗುವ ಹೆಂಡಿ ಇಂದೆನ್ನ ನ್ಯಾಯಾಧಿಕಾರಿ ! ರಾತ್ರಿಯೆಲ್ಲಾ ಬೇಡವೆಂದರೂ, ಶಪಿಸಿದರೂ ಹಟತೊಟ್ಟವನಂತೆ ಬೆಳಗಿದ ಸುಧಾಂಶು—ಜಂದಿರ ನೀಕೆ ಚಿರಕಾಲದ ವರೆಗೆ ತನ್ನ ಕೋಣೆಯನ್ನು ತಿಂಗಳ ಬೆಳಕಿನಲ್ಲಿ ಬೆಳಗಿಸುತ್ತಿರಬಾರದು ?

ಅಂತೂ ಸುಧೀರ್ಘ ನಿಶೆಯಳಿದು ಅರುಣೋದಯವಾಯ್ತು; ಅದರ ಜೆಲುವಿನ ಆನಂದ ಅವನಿಗಿಲ್ಲ. ಉದಿಸುತ್ತಿರುವ ಕಮಲ-ಮಿತ್ರನು ಇಂದು ಅವನ ಮೃತ್ಯುದೂತ.

* * *

ಹಿಂದಿನ ರಾತ್ರಿ ಎಂದಿಲ್ಲದ ಅಪೂರ್ವಗಲಭೆಯೊಂದು ರಾತ್ರಿಯ ಗಭೀರಶಾಂತಿಯನ್ನು ಕಲಕಿತ್ತು. ಉರಿಪ ಪಂಜುಗಳನ್ನು ಹಿಡಿದ ಗುಂಪೊಂದು, ತಮ್ಮ ಕತ್ತಿ ದೊಣ್ಣೆಗಳನ್ನು ಕುಣಿಸುತ್ತಾ ವೇಗವಾಗಿ ಸೆರೆಮನೆಯ ಮುಂದೆಯೇ ಸಾಗಿಹೋಯ್ತು. ಪ್ರಶಾಂತ ವಾತಾವರಣದಲ್ಲಿ ಸ್ಪಷ್ಟವಾಗಿ ಕೇಳಬರುತ್ತಿದ್ದ ಉತ್ತೇಜಿತ ಪಿಸು-ಮಾತುಗಳಲ್ಲಿ, ತಮ್ಮ ಗುರಿಯನ್ನು ಸಾಧಿಸುವ ನಿರ್ಧಾರವ ಗಡುಸಿತ್ತು.

ಸರಿರಾತ್ರಿಯ ಹೊತ್ತಿಗೆ ಜನಜಂಗುಳಿಯು ಹಿಂದಿರುಗಿತು. ಅವರ ಗಟ್ಟಿಯಾದ ಕಟುಹಾಸ್ಯದ ಮಾತುಗಳೂ, ವಿಜಯದ ಅಟ್ಟಹಾಸವೂ, ಅವರ ಇಷ್ಟಾರ್ಥಸಿದ್ಧಿಯಾದುದನ್ನು ಸೂಚಿಸುತ್ತಿದ್ದುವು.

ಬೀದಿಯಲ್ಲಿಯ ಗಜಿಬಿಜಿಯಿಂದ, ಬಾರಬ್ಬಾಸನ ಹೃತ್ಪಟಲದ ಮೇಲೆ ತಾನು ಸೆರೆಯಾಳಾದ ದುರ್ದಿನವು ಚಿತ್ರಿತವಾಯ್ತು. ಅಂದು—ಅವನೊಡನೆ ಅವನ ಸಚ್ಚಿನ ಸಂಗಾತಿಗಳನೇಕರು ಸೆರೆಯಾಳುಗಳಾಗಿದ್ದರು. ಅವರಲ್ಲಿಬ್ಬರ ಜೀವಪಕ್ಷಿಗಳು ಮಾರನೆಯ ಪ್ರಾತಃಕಾಲ ಜಗತ್ತಿನ ನಿರ್ವಾಣದಿಂದ ತೆರಳಬೇಕು. ಇಂದು ಜನಜಂಗುಳಿಯ ಗೂಳಿಗಣ್ಣಿಗೆ ಕಂಡ ಕೆಂಪು, ಮತ್ತೊರ್ವ ಕಳ್ಳ ನಿರಬಹುದು. ಅವರ ಕತ್ತಿಗಳು ಪಾಪಿಯೊಬ್ಬನ ರಕ್ತಪಿಪಾಸೆಯಿಂದ ಹಾತೊರೆಯುತ್ತಿರುವುವು. ನಗರವನ್ನು ನಿರ್ಧನವನ್ನಾಗಿ ಮಾಡಲು ಪಣತೊಟ್ಟ ತನ್ನ ಗುಂಪಿನವನೇ ಇರಬಹುದೇನೋ ! ಹಾಗೆಯೇ ನೆನಪಿನ ರೆಕ್ಕೆಗಳ ಮೇಲೆ ಕುಳಿತು, ಅವನ ಮನಸ್ಸು ಸೆರೆಮನೆಯ ಭೀಷಣ ಏಕಾಂತತೆಯನ್ನು ತೊರೆದು ಹೊರಗೆ ಹಾರಿತು. ಕಾದಾಗಾರದ ಕತ್ತಲಿಗೆ ಹೆದರಿದವನಂತೆ, ಬಾರಬ್ಬಾಸನು ತನ್ನ ಸಂಗಾತಿಗಳ ಹೆಸರನ್ನು ಹಿಡಿದು ಗಟ್ಟಿಯಾಗಿ ಕೂಗಿದನು. ಏಕಾಂತತೆಯ ಭೂತ ಮೈ ಹೊಕ್ಕವನಂತೆ, ಬಾಗಿಲ ಕಬ್ಬಿಣದ ಕಂಬಿಗಳನ್ನು ಜಗ್ಗಿದ. ಆದರೆ ಅವನ ಕೂಗಿಗೆ ನಿರುತ್ತರದ ಆಣಕವಲ್ಲದೆ ಮತ್ತಾರೂ ದನಿಗೊಡಲಿಲ್ಲ....ಸರಳುಗಳು ಜಗ್ಗಲಿಲ್ಲ,

---

[ಇಂಗ್ಲಿಷ್ ಕತೆಯೊಂದರಿಂದ ಪ್ರೇರಿತವಾದದ್ದು.]

ಬೆಳಗಿನ ಗಂಟೆಗಳು ಎಂದಿಗಿಂತ ಜಾಗ್ರತೆ ಹಾರಿದುವು. ಸುತ್ತಲು ಕವಿದ ಪ್ರಶಾಂತ ಮೌನವನ್ನು ಭೇದಿಸಿ ಶಬ್ದವೊಂದು ಕೇಳಬಂತು. ಅದರ ಚಿರಪರಿಚಿತ ಧ್ವನಿಯು ಬಾರಬ್ಬಾಸನ ಪಾಷಾಣ ಹೃದಯವನ್ನೂ ಕಂಪಿಸುವಂತೆ ಮಾಡಿತು.....ಹೊರಗಡೆ ಕೋಳಿಯೊಂದು ಮೃತ್ಯುತೂರ್ಯದಂತೆ— ತನ್ನ ನೀಳವಾದ ಕಂಠದಲ್ಲಿ ಕೂಗಿ, ನಿದ್ರಾಮುದ್ರಿತ ಜಗತ್ತನ್ನೆಚ್ಚರಿಸಿತು.

* * *

ಈಗ ಚಂದ್ರನಳಿದು, ದಿನಮಣಿಯು ಜಗತ್ತಿನ ಹೃದಯದಲ್ಲಿ ನೂತನ ಆಶೆಯೊಂದನ್ನುದಿಸುತ್ತಾ ಉದಯಿಸುತ್ತಿರುವನು. ಆದರೆ ಅವನೆದೆಯಲ್ಲಿ ಆಶೆಯ ಸುಳಿವಿಲ್ಲ; ಸಹಾಯವಂತೂ ಅವನ ಪಾಲಿಗೆ ದೂರದ ಮರುಮರೀಚಿಕೆ.

ರಾತ್ರಿಯ ಕಾವಲು ಕದಲಿ, ಬೆಳಗಿನ ಸರದಿಯ ಸೈನಿಕರು ಸೆರೆಮನೆಯ ಹೆಬ್ಬಾಗಿಲನ್ನು ತೆರೆದು ಪ್ರವೇಶಿಸಿದರು. ಅವರಾಡುತ್ತಿದ್ದ ಮಾತುಗಳಿಂದ ಅವನಿಗೆ ತಿಳಿದು ಬಂದಿತು: ರಾತ್ರಿಯಲ್ಲಿ ಸೆರೆಯಾದವನಾರೆಂದು— ನಜರೇತಿನ ಏಸು. ಗ್ಯಾಲಿಲಿಯ ಯುವಕ ಬೋಧಕ. ಅವನಿಂದು ಯಹೂದ್ಯ ಪುರೋಹಿತರ ಕುಟಿಲಕಾರಸ್ಥಾನಕ್ಕೆ ಸಿಲುಕಿ ಸೆರೆಯಾಳಾಗಿದ್ದಾನೆ. ಕಲ್ಪಿತ ರಾಜದ್ರೋಹವೇ ಅವನ ಅಪರಾಧ. ಆದಕ್ಕಾಗಿ ಪ್ಯೆಲೇಟಿನ ಮುಂದೆ ಇಂದು ಅವನ ವಿಚಾರಣೆ.

ಇದನ್ನು ಕೇಳಿದೊಡನೆಯೆ ಆ ಪಾಪಿಯ ಹೃದಯದಲ್ಲಿದ್ದ ಕಡೆಯ ಆಶಾಕಿರಣವೂ ಕೂಡ ನಿರಾಶೆಯ ಮೃತ್ಯು ಮಹಾಂಧಕಾರದಲ್ಲಿ ಲೀನವಾಯ್ತು.

ನಿನ್ನೆಯ ರಾತ್ರಿ—ಅವನೆದೆಯಲ್ಲಿ ದೃಢವಲ್ಲದಿದ್ದರೂ ಹುಸಿಯಾಶೆಯೊಂದು ಮೊಳೆತಿತ್ತು. ಇಂದಿನ ದಿನ ಯುಹೂದಿಯರ ವಾರ್ಷಿಕ ಹಬ್ಬ—ನಾಗರಿಕರು ಹಬ್ಬದ ಸಂತೋಷಾರ್ಥವಾಗಿ ತಾವಿಚ್ಛಿಸಿದ ಪಿರ್ಯ ಮರಣಶಿಕ್ಷೆಗೊಳಗಾದವನ ಜೀವದಾನ ಪಡೆಯಬಹುದು. ತನ್ನ ಗತಚರಿತ್ರೆ ಎಷ್ಟೇ ದುಷ್ಕೃತ್ಯಗಳಿಂದ ಕಪ್ಪಾಗಿದ್ದರೂ, ತನ್ನ ಪಿಶಾಚಧೈರ್ಯವು ಜನಜಂಗುಳಿಯ ಕೆಲವೊಂದು ವಾಗಕ್ಕೆ ಮೆಚ್ಚಾಗಿ, ಅವರಾದರೂ ತನ್ನ ಜೀವದಾನ ಬೇಡಬಹುದಾಗಿತ್ತು. ಅವರ ಮಾತುಗಳಿಗೆ ಪುರೋಹಿತರ, ಶ್ರೀಮಂತ ವರ್ಗದವರ ಮಾತಿನೆದುರಿಗೆ ಬೆಲೆ ದೊರಕಲಾರದು. ಆದರೂ....

ಅದೊಂದು ಹುರುಳಿಲ್ಲದ ಆಶೆ. ಆದರೂ ಅದೇ ಅವನ ಆಧಾರ. ಈಗ ಅವನಿಗೆ ತಾನು ಅದನ್ನೇ ಎಷ್ಟು ಬಲವಾಗಿ ನಂಬಿದ್ದನೆಂಬುದರ ಅರಿವಾಗುತ್ತಿದೆ. ಆದರೆ ಈಗ?.....ಅವನಿಗೆ ಉಳಿವಿಲ್ಲ.

ರಾತ್ರಿಯ ಸೆರೆಯಾಳು ಇವನಿಗೆ ಚಿರಪರಿಚಿತ ವ್ಯಕ್ತಿ. ತಾನು ಕಳ್ಳು-ಕೊಲೆ-ಸುಲಿಗೆಗಳಲ್ಲಿ ಮಗ್ನನಾಗಿದ್ದಾಗ, ಈ ಯುವಕ ದ್ವೇಷೋದ್ಧಕ ಏಸುವು, ತನ್ನ ನವಧರ್ಮ ಪ್ರಚಾರದಿಂದ ಜಗತ್ತನ್ನಾಕರ್ಷಿಸುತ್ತಿದ್ದನು. ಕಳೆದ ಮೂರುವರ್ಷಗಳಿಂದ ತಾನು ಹೋದೆಡೆಯಲ್ಲಿ ಧರ್ಮದ ಸುದ್ದಿ ಸುರಿಸುತ್ತಾ ತಿರುಗುತ್ತಿದ್ದಾತನೀತ. ತನ್ನ ಪವಿತ್ರವಾಣಿಯಿಂದ ಪಾಪಿಗಳನ್ನು—ಕ್ರೂರಿಗಳನ್ನು—ತನ್ನೆಡೆಗೆ ಸೆಳೆದ ವ್ಯಕ್ತಿ ಏಸು. ಪುರುಷರು ಅವನ ಹಿಂಬಾಲಕರು. ಹೆಂಗುಸರ ಆರಾಧ್ಯ ದೈವವೀತ. ಮಕ್ಕಳಿವನ ಮೊಣಕಾಲು ಸುತ್ತಿ ಮುತ್ತಿಟ್ಟು ನಗುತ್ತಿದ್ದುವು. ಹೆಚ್ಚೇಕೆ, ಜಗತ್ತೇ ಈತನನ್ನು ಅನುಸರಿಸುತ್ತಿತ್ತು! ಅದೇ ಕಾಲದಲ್ಲಿ ತಾನೋ? ಹೋದೆಡೆಯಲ್ಲಿ ರಕ್ತದ ಕಾಲುವೆ ಹರಿಸಿ, ಕಣ್ಣೀರ ಮಳೆಗರಿಸಿ, ಎಲುಬಿನ ಹಂದರ ಕಟ್ಟಿ, ಪೈಶಾಚ್ಯ ನೃತ್ಯ ನಡೆಯಿಸುತ್ತಿದ್ದನು.

ಏಸುವಿನಂತಹ ಪವಿತ್ರ ಮಾನವನ ಮುಂದೆ ಬಾರಬ್ಬಾಸನಿಗೆಲ್ಲಿಯ ಅವಕಾಶ?

ಹಾಗೆಯೇ ಉಸಿರು ಬಿಗಿಹಿಡಿದು ಕೇಳಿದ: ನ್ಯಾಯಾಸ್ಥಾನಕ್ಕೆ ತೆರಳುತ್ತಿರುವವರ ಕಾಲಿನ ಶಬ್ದ—ಚೆನ್ನಾಗಿ ಕೇಳಬರುತ್ತಿತ್ತು. ಕುತೂಹಲದಿಂದ ಉತ್ತೇಜಿತವಾದ ಜನರ ಗುಂಪಿನ ಸದ್ದು, ನಾಗರದ ವೀಜಿಮಾಲೆಗಳ ಗಂಭೀರ ನಿರ್ಘೋಷದಂತಿತ್ತು. ಜೆರೂಸಲೆಂ ನಗರವೇ ಇಂದು ನ್ಯಾಯಾಸ್ಥಾನಕ್ಕೆ ಬಂದಿದೆಯೋ?

ಇಂದು ಜೆರೂಸಲೆಮಿನ ನಾಗರಿಕರು, ಏಸುವಿನ ಜೀವದಾನ ಬೇಡಿ ಪಡೆಯುವರು. ಕಲ್ಲೆದೆಗಳೂ ಕರಗಿ ಕ್ರಿಸ್ತನಿಗಾಗಿ ಮೊರೆಯಿಡುವುವು. ಏಸುವಿನ ಕಣ್ಣಿನ ಹೊಂಬೆಳಕಿನ ಪ್ರಭೆಯಿಂದ ಉದ್ದೀಪ್ತರಾದ ಜನರು, ಆ ಮಹಾತ್ಮನ ಪ್ರಾಣಕ್ಕಾಗಿ ಪ್ಯೆಲೇಟನನ್ನು ಪ್ರಾರ್ಥಿಸುವರು. ಇದುವರೆಗೂ ಅವನಿಗೆ ಮುಗಿಯದ ಕೈಗಳೂ, ಅವನನ್ನು ಕಾಪಾಡಲು ಮೇಲೇಳುವುವು.

ಮುಂಬಯಿ ಸರಕಾರದ ಔದ್ಯೋಗಿಕ
ಸಮಿತಿಯಿಂದ ಮನ್ನಣೆಯನ್ನು ಪಡೆದಿರುವ

ದಿ ನ್ಯಾಶನಲ್ ಟೇಲರಿಂಗ್ ಕಾಲೇಜ್

ಮರಾಠಾಗಲ್ಲಿ—ಹುಬ್ಬಳ್ಳಿ.

ಹಣವನ್ನು ವೆಚ್ಚಮಾಡಿ ಎಲ್ಲೆಲ್ಲಿಯೊ ಖಾಸಗೀ
ಸರ್ಟೀಫಿಕೆಟುಗಳನ್ನು ಪಡೆದುಕೊಳ್ಳುವುದಕ್ಕಿಂತ,
ಸರಕಾರದಿಂದ ದೊರೆಯುವ ಅಧಿಕೃತ ಸರ್ಟೀ-
ಫಿಕೇಟುಗಳನ್ನು ಪಡೆದುಕೊಂಡರೆ
ಒಳ್ಳೆಯದಲ್ಲವೆ?
ಈ ಸಲ ನಮ್ಮ ಕಾಲೇಜಿನ ಪರಿಣಾಮವು ಸರಕಾರೀ
ಪರೀಕ್ಷೆಯಲ್ಲಿ ೧೦೦ ಕ್ಕೆ ೯೦ ರಂತೆ ಆಗಿದೆ.
ಹೆಚ್ಚಿಗೆ ಮಾಹಿತಿ ಬೇಕಾಗಿದ್ದವರು
೧ ಆಣೆಯ ಸ್ಟ್ಯಾಂಪು ಇಟ್ಟು ಬರೆದು ಕೇಳಿರಿ.

ಎನ್. ಆರ್. ಬುಲ್‌ಬುಲೆ,
D.M.T.C.A. (London)
ಪ್ರಿನ್ಸಿಪಾಲ್

ರಾಜಯೋಗಿ

★

ಆನಂದಕಂದರ ಐತಿಹಾಸಿಕ ಕಾದಂಬರಿ

ವಿಜಯನಗರ ಸಾಮ್ರಾಜ್ಯವನ್ನಾಳಿದ, ಸಂಗಮ ವಂಶದಲ್ಲಿಯ ಕೊನೆಯ ದೊರೆ ೨ನೆಯ ವಿರೂಪಾಕ್ಷನ ಕರ್ತವ್ಯಚ್ಯುತಿಯ ದುಷ್ಪರಿಣಾಮ; ಅದನ್ನು ತಪಿಸಲು ಹೆಣಗಿದ ರಾಜಶೇಖರ, ನರಸಿಂಹನಾಯಕ, ಹೇಮಾಂಬಿಕೆ ಇವರ ಸಾಮ್ರಾಜ್ಯನಿಷ್ಠೆಯ ಸುಪರಿಣಾಮ ಇವುಗಳ ಹೃದಯಂಗಮ ಚಿತ್ರವಿದು. ಬೆಲೆ ೧–೦–೦. ಬೇಕಾದವರು ಜಯಂತಿ ಕಾರ್ಯಾಲಕ್ಕೆ ಬರೆಯಿರಿ.

ಇಂತಹದರಲ್ಲಿ ಬಾರಬ್ಬಾಸನಿಗೆಲ್ಲಿದೆ ಉಳಿವು!.....ಇದ್ದರೆ ಮಸಣದಲ್ಲಿ ಮಾತ್ರ.....

* * *

ನಿದ್ರೆಗೆಟ್ಟ ಬಾರಬ್ಬಾಸನಿಗೆ ನಿರಾಶೆಯಿಂದ ನಿದ್ರೆ ಬಂತು. ಕಣ್ಣು ಮುಚ್ಚುತ್ತಿದ್ದ ಹಾಗೆಯೆ ಕನಸೊಂದು ಕಾಣಬಂದಿತು–ಬಾರಬ್ಬಾಸನು ನರಕದ ಅಗ್ನಿಕುಂಡದ ಬಳಿ ನಿಂತಿದ್ದಾನೆ. ಸುತ್ತೆತ್ತಲೂ ಕತ್ತಲೆಯು ಕವಿದು, ಉಜ್ವಲವಾಗಿ ಪ್ರಜ್ವಲಿಸುವ ಅಗ್ನಿಜ್ವಾಲೆ ಮುತ್ತಷ್ಟು ಭೀಕರವಾಗಿದೆ. ಗುಣಿಯಿಂದೆದ್ದ ಭಯಂಕರ ಪ್ರಾಣಿಯೊಂದು ಬಾರಬ್ಬಾಸನನ್ನು ತಬ್ಬಲು ಬರುತ್ತಿದೆ. ಅವನು ತಪ್ಪಿಸಿಕೊಳ್ಳಲು ಓಡಿದ. ಆದರೆ ಸುತ್ತಲಿದ್ದ ನೂರಾರು ಕೈಗಳು ಅವನನ್ನು ತಡೆದುವು. ಕಾತರನಾಗಿ ಕೇಳಿದ: "ನೀವಾರು?" ಅವ್ಯಕ್ತವ್ಯಕ್ತಿಗಳು ಉತ್ತರಿಸಿದುವು "ನಿನ್ನ ಕರ್ತೃಗೆ ಸಿಕ್ಕಿ ಸತ್ತವರು ಬಾರಬ್ಬಾಸ್..... ಬಾರಬ್ಬಾಸ್" ಅವ್ಯಕ್ತವಾದ ಆ ವ್ಯಕ್ತಿಗಳ ಕಂಠರವವು ಜ್ವಾಲಾಜಲದಂತಿತ್ತು.

ಹೊರಗೆ ಜನರ ಗುಂಪು ಕೂಗಿತು: "ಬಾರಬ್ಬಾಸ್.... ಬಾರಬ್ಬಾಸ್!" ಕಿಟ್ಟನೆ ಕಿರುಚಿ ಬಾರಬ್ಬಾಸನು ಮೇಲೆದ್ದ. ತನ್ನ ಹೆಸರನ್ನೇಕೆ ಈ ರೀತಿ ಕೂಗುತ್ತಿರಬಹುದು?.....ಬಳಿಕ ಪ್ರಶಾಂತ ವೌನ. ಅವನು ಪುನಃ ಕಣ್ಣುಮುಚ್ಚಿದ.

ಮತ್ತೆ ಕನಸು ಮುಂದುವರಿಯಿತು–ಮೇರೆಯರಿಯದ ಮರಳುಗಾಡು. ಬಿಸಿಲು ಬೆಂಕಿಯ ಮಳೆಗರೆಯುತ್ತಿದೆ. ಮರದ ತಿಲುಬೆಗಳು ಕಾಡ ಮರಳಿನ ಮೇಲೆ ಬಿದ್ದಿವೆ. ಜನರು ಬಾರಬ್ಬಾಸನನ್ನೂ ಅವನ ಸಂಗಾತಿಗಳನ್ನೂ, ಹಿಡಿದೆಳೆತರುವರು. ಮೊದಲು ಅವನ ಸಂಗಾತಿಗಳನ್ನಿಬ್ಬರನ್ನು ತಿಲುಬೆಗೆ ಕಟ್ಟಿ, ಅವರ ಅಂಗೈ ಅಂಗಾಲುಗಳಿಗೆ ಮೊಳೆಯನ್ನು ಹೊಡೆಯುವರು. ನೋವನ್ನು ತಡೆಯಲಾರದೆ ಅವರಿಬ್ಬರೂ ವಿಕಾರವಾಗಿ ಕೂಗುವರು. ಬಳಿಕ ಬಾರಬ್ಬಾಸನನ್ನು ಹಿಡಿದೆಳೆಯುವರು. "ಅಯ್ಯೋ ನಾನೊಲ್ಲೆ.. ನಾನೊಲ್ಲೆ!" ಹೊರಗಿನಿಂದ ಜನರು ಮೊದಲಿಗಿಂತ ಎತ್ತರವಾದ ಸ್ವರದಲ್ಲಿ ಕೂಗಿದರು: "ಬಿಡಬೇಡಿ..ಅವನನ್ನು ತಿಲುಬೆಗೇರಿಸಿರಿ!. ತಿಲುಬೆಗೇರಿಸಿರಿ!"

ಕನಸೊಡೆದು ಬಾರಬ್ಬಾಸನು ಬೆಚ್ಚಿ ಮೇಲೆದ್ದ. ಹೊರಗಿನ ಕೂಗು ಇವನ ಕಿವಿಗೆ ಬಿದ್ದಿತು. ಏನು? ಇಲ್ಲಿಗೆ ಬಂದಿತೆ? ಜನ ಉತ್ಸಾಹಪೂರಿತ ಕಂಠರವವು ತನ್ನ ರಕ್ತದರ್ಶನಕ್ಕಾಗಿಯೇ ಬಾರಬ್ಬಾಸನು ಮೇಲೆದ್ದು, ಬೇಟೆಗಾರನಟ್ಟಿಸಿಕೊಂಡು ಬಂದ ಹುಲ್ಲೆಯಂತೆ ಉನ್ಮತ್ತನಾಗಿ ಕೋಣೆಯನ್ನು ಸುತ್ತಲಾರಂಭಿಸಿದ. ಕೈಗಳಿಂದ ಕಲ್ಲಿನ ಗೋಡೆಗಳನ್ನು ಕುಟ್ಟಿದ. ಬರಿಯೆ ಭಾವನೆಯಿಂದಲೇ ಕಾರೊಮ್ಮೆಗಳು ಅವನ ಮಾಂಸವನ್ನು ಹೊಕ್ಕಂತಾಗಾಯಿತು. ಕಲ್ಲಿಗೆ ಜಜ್ಜಿದ ಕೈಗಳಿಂದ ರಕ್ತವು ಸುರಿದುತ್ತಿತ್ತು. ಮುಖವು ಬೆವರಿಡುತ್ತಿತ್ತು. ಹಾಗೆಯೇ ಮುಖವನ್ನೊರೆಸಿಕೊಂಡನು. ಮುಖವು ರಕ್ತಸಿಕ್ತವಾಯ್ತು.

ಅದೋ!

ಬಂದರು!

ದೊಡ್ಡ ಗುಂಪೊಂದು ಸೆರೆಮನೆಯನ್ನು ಸುತ್ತಿ ನಿಂತಿತು. ಹೊರಗೆ ರೋಮನ್ ಸಿಪಾಯಿಗಳ ಪಾದರಕ್ಷೆಯ ಸದ್ದು ರಸ್ತೆಯ ಮೇಲೆ ಕೇಳಬಂತು. ಬಾರಬ್ಬಾಸನ ಹೃದಯದಲ್ಲಿ ಮುಂಜುಗರವು ಇಟ್ಟು ಬಡಿದಂತಾಯ್ತು. ತಣ್ಣನೆಯ ಬೆಮರು ಅವನ ಅಂಗಾಂಗಳಿಂದ ಬಸಿಯಿತು. ತನ್ನನ್ನು ಸಾವಿನ ಬಾಯಿಗೆ ನೂಕುವ ಜನತೆಯು ಸಿದ್ಧವಾಗಿ ನಿಂತಿದೆ!

ಸೆರೆಮನೆಯ ಬಾಗಿಲು ತೆರೆದು, ಹೊರಗಿನ ಹೊಂಬೆಳಕು ಕೋಣೆಯಲ್ಲಿ ಹರಡಿತು. ಪಹರೆಯವರ ನಾಯಕನು ಬಾಗಿಲಲ್ಲಿ ನಿಂತಿದ್ದಾನೆ. ಉನ್ಮತ್ತನಾಗಿ, ರಕ್ತಲೇಪಿತನಾದ ಬಾರಬ್ಬಾಸನು ಸಿದ್ಧನಾಗಿ ನಿಂತಿದ್ದಾನೆ!

'ಬಾರಬ್ಬಾಸ್.....'

ಬಾರಬ್ಬಾಸನ ಹೃದಯವು ಬಾಯಿಗೆಬಂದಿತು.

'ನೀನಿಂದು.....' ನಿರಾಶನಾಗಿ ಬಾರಬ್ಬಾಸನು ತಲೆಯಲ್ಲಾಡಿಸಿದ. 'ಬಂಧಮುಕ್ತ!'

'ಆಂ!..' ಆಶ್ಚರ್ಯದಿಂದ ಬಾರಬ್ಬಾಸನು ಸಿಡಿಲುಬಡಿದವನಂತೆ ನೆಲದ ಮೇಲೆ ಕುಸಿದ.

"ಬಂಧಮುಕ್ತ!" ಬಾರಬ್ಬಾಸನು ತಡವರಿಸುತ್ತಾ ಸುಡಿದ. 'ನಾನು....ಸ್ವತಂತ್ರ!.... ಸಾಧ್ಯವೇ?....ಹೂಂ– ಹಾ ಮಾಡಿ .... ಸಾಯಲು ಹೋಗುವವನಿಗೆಲ್ಲಿಯ ....ಸಂಕಟ

ನಾಯಕನು ಒಳಗೆ ಬಂದು ಬಾರಬ್ಬಾಸನ ಬೆನ್ನಿನ ಮೇಲೆ ಒದಟಾಗಿ ಕೈಯಿರಿಸಿದ. ಹೊರಗಿನ ಬೆಳಕು ಕೋಣೆಯನ್ನು ತುಂಬಿತು. ಬೀಗಗಳು .... ಶೃಂಖಲೆ .... ಕಾವಲು ... ಒಂದೊಂದಾಗಿ ಕಳಚಿಬಿದ್ದುವು. ನಾಯಕನು ಬಾಗಿಲನ್ನು ತೋರಿ ಹೇಳಿದ:— "ಬಾರಬ್ಬಾಸ್.. ನೀನು ಮುಕ್ತ. ನಿನಗಾ ನಿಲ್ಲಿಸಿದ ತಿಲುಬೆಯ ಮೇಲೆ ನಜರೇತಿನ ಏಸುವು ಸಾಯುವನೆ ನಿನಗಿಂದು .. .. ಜೀವದಾನ— ಶೃಂಖಲಾ ಮುಕ್ತಿ!"

"ನೀನಿಂದು ಬಂಧಮುಕ್ತ!"

ಬಾರಬ್ಬಾಸನು ಹುಚ್ಚನ ಹಾಗೆ ಸೆರೆಮನೆಯಿಂದ ಹೊರಗೋಡಿ ಬಂದ. ಬಯಲಿನ ಹೊಸಬಿಸಿಲು— ತಿಳಿಗಾಳಿ ಅವನ ಪಾಲಿ

ಸ್ವರ್ಗಸುಧೆಯಾಗಿತ್ತು. ಸುತ್ತಲೂ ಕೂಡಿದ ಜನರ ಕೂಗಿನ ಅಬ್ಬರವು ಅವನ ಆನಂದದ ಸಾಗರದಲ್ಲಿ ಎಲ್ಲಿಯೊ ಲೀನವಾಯ್ತು.

* * *

ಸೆರೆಮನೆಯ ಮುಂದೆ ಮೆರವಣಿಗೆಯೊಂದು ಹೋಗುತ್ತಿತ್ತು. ಮುಳ್ಳಿನ ಮುಕುಟವನ್ನು ಹೊತ್ತ ಏಸುವು ಕತ್ತೆಯ ಮೇಲೆ ಕುಳಿತಿದ್ದಾನೆ; ಪಕ್ಕದಲ್ಲಿ ಕುಚೋದ್ಯಗಾರರು ಈಚಲುಗರಿಗಳ ಚಾಮರ ಬೀಸುತ್ತಿದ್ದಾರೆ. ಮೃತ್ಯುವಿನ ಮುಖಕ್ಕೆ ತೆರೆಯುತ್ತಿರುವ ಏಸುವಿನ ಮುಖದ ಮೇಲೆ ಕಾತರತೆಯ ಕುರುಹಿಲ್ಲ; ಶಾಂತಿಯ ಸೊಬಗು ಸುಳಿದಾಡುತ್ತಿದೆ. ಸುತ್ತೆತ್ತಲೂ ಕೂಗುತ್ತಿರುವ ಕಟು-ಉಪಹಾಸ್ಯದಲ್ಲಿ ಅವನ ಆತ್ಮನಿರ್ಧಾರವು ವಿಜಯಿಯಾಗಿದೆ. ಒಲುಬೆ ಏರಲು ಹೊರಟಂತಿಲ್ಲ; ಏಸುವು ಮಾನವಹೃದಯದ ಮಣಿಪೀಠವನ್ನೇರಲು ಹೊರಟವನಂತಿರುವನು.

"ತಾನೆಂತಹ ಹೇಡಿ .. .. ಪರರನ್ನು ಸಾವಿಗೆ ದೂಡಲು ಹೆದರದ ತಾನು ಸಾಯಲು ಹೆದರಿ, ಹೆಣ್ಣಿನಂತೆ ಗೋಳಾಡಿದೆ ನಲ್ಲಾ! ನನಗಾಗಿ ಸಾಯುವನೀತ— ಸಂತಸದಿಂದ ಸ್ವಾವನ್ನಪ್ಪಲು ಹೋಗುತ್ತಿದ್ದಾನೆ. ನೊಂದ ಮಾನವನಿಗೆ ಮರುಗಿದ ಪಾಪಕ್ಕೀತನು ಇಂದು ಶಿಲುಬೆಯನ್ನೇರಬೇಕು. ಅಲ್ಲಿ— ಗೋಲ್ಗೊಥದ ಮರಳುಗಾಡಿನಲ್ಲಿ ಬೆಂಕಿಯಂತಹ ಬಿಸಿಲು ಇವನ ಬರಿತಲೆಯ ಮೇಲುರಿಯುವುದು. ಕಾರ್ಮೊಳೆಗಳವನ ಅಂಗಾಂಗಗಳನ್ನು ಭೇದಿಸುವುವು. ಇವನೆದೆಯ ಬಿಸಿರಕ್ತ ಚಿಮ್ಮುವುದು. ಗಿಡಗಗಳು .. .. .. ಹದ್ದುಗಳು .. .. .."

* * *

ಅಮಾನುಷಶಕ್ತಿಯೊಂದರಿಂದೆಳೆಯಲ್ಪಟ್ಟವನಂತೆ ಬಾರಬ್ಬಾಸನು ರುದ್ರಭೂಮಿಗೋಡಿದನು. ಮರು ಭೂ ವಿ ಯ ಲ್ಲಿ ಪ್ರ ಮಸಣದಲ್ಲಿ, ಸಂಜೆಯ ಹೂಬಿಸಿಲೂ ಬೆಂಕಿಯಾಗಿತ್ತು. ಒಂದರ ಪಕ್ಕದಲ್ಲೊಂದು ಮೂರು ಶಿಲುಬೆಗಳು, ತಮ್ಮ ಹೆಣದ ಹೊರೆ ಹೊತ್ತು ನಿಂತಿವೆ. ಮಧ್ಯದಲ್ಲಿ ಮಹಾತ್ಮಾ ಏಸು! ಅತ್ತಲಿತ್ತ ಬಾರಬ್ಬಾಸನ ಸಂಗಾತಿಗಳು; ಅವರ ಮುಖದ ಮೇಲೆ ಮರಣದ ತೀವ್ರವೇದನೆ ಮೂಡಿ ಆದನ್ನು ವಿಕಾರಗೊಳಿಸಿದೆ. ಆದರೆ—ಏಸು .. ಹೂವಿನಹಾಸಿಗೆಯ ಮೇಲೆ ಮಲಗಿರುವಂತಿದೆ. ನೋವಿನ ಬಾವನೆಯಿಲ್ಲ. ಮರಣದ ಆಮಂಗಳ ಭೀಷಣತೆಯಿಲ್ಲ. ಕೆಳಗಿನ ಮರಳು ಅವನ ಪವಿತ್ರರಕ್ತದಿಂದ ಕೆಂಪಾಗಿದೆ. ಒಂದೆರಡು ಮೋಡಗಳು ಸೂರ್ಯನನ್ನು ಮುಚ್ಚಿ ಮಂಕುಕವಿಸಿದುವು. ನಾಲ್ಕಾರು ರಣಹದ್ದುಗಳು .. .. ಕಾಗೆಗಳು— ವಿಕಟವಾಗಿ ಕೂಗುತ್ತಾ ಬಾಂದಳದಲ್ಲಿ ಸುತ್ತುತ್ತಿದ್ದುವು. ರಕ್ತವು ಗಾಯದಿಂದ ಜಿಮ್ಮು ಹನಿಹನಿಯಾಗಿ ನೆಲದ ಮೇಲೆ ಬೀಳುತ್ತಿತ್ತು. ಇದ್ದಕ್ಕಿದ್ದಂತೆಯೇ ಬಾರಬ್ಬಾಸನ ಹೃದಯದಲ್ಲೊಂದು ವಿದ್ಯುಲ್ಲತೆಯು ಬೆಳಗಿತು. ಅವನ ಶಿಲಾಹೃದಯವೂ ಕರಗಿ, ಅವನರಿಯದಂತೆಯೆ, ಅವನ ಮಸ್ತಕವು ರಕ್ತಸಿಕ್ತಮೃಣ್ಮಯವನ್ನಪ್ಪಿತು.

ಕವಿದ ಕಾರ್ಮೋಡಗಳು ಹರಿದು ಸಂಜೆಯ ಸೂರ್ಯನ ಹೊಂಬೆಳಕು ಏಸುವಿನ ಮುಖದಮೇಲೆ ಬಿದ್ದು, ಆತನ ವದನವನ್ನು ಮಂಗಳಪ್ರಕಾಶದಿಂದ ಬೆಳಗಿತು.

ವೈದ್ಯ ಮತ್ತು ★

★ ಡಾಕ್ಟರ್-

ಜನರಿಗೆ ಸೂಚನೆ

ನಿಮ್ಮ ಪೇಶಂಟರಿಗೆ ಕೆಳಗಿನ ಚರ್ಮರೋಗನಿದ್ದರೆ ಸ್ಟಾರ್ ಕಂಪನಿ, ಬೆಳಗಾಂವ (Regd.) ಇವರ

"ಗೋವಾ ಮಲಮ"

(GOA OINTMENT)

ಉಪಯೋಗಿಸಿದರೆ, ಒಂದೇ ಸಪ್ತಕದಲ್ಲಿ ಎಷ್ಟು ಬೇಗನೆ ಗುಣಬರುತ್ತದೆ ಎಂಬುದು ನಿಮ್ಮ ನಿದರ್ಶನಕ್ಕೆ ಬಂದೀತು. ಹಸಿ ಮತ್ತು ಒಣ ಖಜ್ಜಿ (ಹುರುಕು), ತದ್ದು ಮತ್ತು ನಿತಿವಿಾರಿದ ಗಜಕರ್ಣ

(RINGWORM)

ಮುಂತಾದ ತ್ವಚರೋಗದಿಂದ ಪೀಡಿತ ಜನರಿಗೆ

ಖಾತ್ರಿಯ ಉಪಾಯವು!

ಗುಣ ಬರದಿದ್ದಲ್ಲಿ
ಹಣ ಮರಳಿ ಕೊಡುವ
ಗ್ಯಾರಂಟಿಯಿಂದ ಮಾರಲ್ಪಡುತ್ತದೆ.

ಬಾ. ಕಿಂ. ೪ ಆಣೆ

★

ಸ್ಟಾರ್ ಕಂಪನಿ, ಬೆಳಗಾಂವ

STAR Co., BELGAUM

'ದಿನಚರಿ' ಎಂದರೆ 'ಡೈರಿ'

ಶ್ರೀ. ಬಿದರಕುಂದಿ ವೆಂಕಟರಾಯರು

ಹೊಸವರ್ಷ ಪ್ರಾರಂಭವಾಯಿತು. ಜೀವನದಲ್ಲಿ ಒಂದು ಬಗೆಯ ಓರಣವನ್ನೂ ಅದರ ಮೂಲಕ ಒಂದು ಬಗೆಯ ಶಾಂತಿ-ತುಷ್ಟಿಗಳನ್ನೂ ತಂದುಕೊಳ್ಳಬೇಕೆನ್ನುವವರು ಈ ಲೇಖನ ಓದಬೇಕು; ಓದಿ ಹೊಸವರ್ಷದಲ್ಲಿ ತಮ್ಮ ಜೀವನವನ್ನು ಅರೆದು ಒರೆದು, ತೂಗಿ-ಅಳೆದು ನೋಡುವ ಕಾರ್ಯಕ್ಕೆ ತೊಡಗಬೇಕು!

★

ಮನುಷ್ಯನು ಸಮಾಜಜೀವಿ. ತನ್ನ ಬಾಳುವೆ ಸುಖಕರವಾಗಿ ನಡೆಯಬೇಕಾದರೆ, ತನ್ನ ಜೀವನದ ತಪ್ಪುಒಪ್ಪುಗಳು ತನಗೆ ತಿಳಿಯಬೇಕು. ತಪ್ಪುಗಳನ್ನು ತಿದ್ದುಪಡಿಮಾಡಿಕೊಳ್ಳಬೇಕಾದರೆ ತಪ್ಪಿದ ದಿನಗಳ ನೆನಪು ಬೇಕು. ಈ ನೆನಪನ್ನು ದಿನಾಲು ಬರೆಯುತ್ತ ಹೋಗುವುದೇ ದಿನಚರಿ. ಇನ್ನೊಂದೆಂದರೆ, ಗಳಿಕೆ-ಬಳಕೆಗಳ ತಿಳಿಪಳಿಕೆಯಾಗಬೇಕಾದರೂ ನಿಯಮಿತತನದಿಂದ ಬರೆದ ಟಿಪ್ಪಣಿಗಳು ಬೇಕು. ಅನಾವಶ್ಯಕವಾದ ವ್ಯಯದ ಅರಿವು ಉಂಟಾಗಬೇಕಾದರೆ, ದಿನಚರಿಯ ಹಿಂದಿನ ಪುಟಗಳನ್ನು ತಿರುವಿದಾಗಲೇ ತಿಳಿಯುವುದು.

ಈ ವಿಷಯದಲ್ಲಿ ಮಾನವನು ಬಹಳ ಹಿಂದಿನಕಾಲದಿಂದಲೂ ಆಸಕ್ತಿಯನ್ನು ತೋರಿಸುತ್ತ ಬಂದಿರುವನು. ಆದುದರಿಂದಲೆ ಹಿಂದಿನ ಇತಿಹಾಸವನ್ನು ನಾವು ಇಂದು ಓದುತ್ತೇವೆ. ಹಿಂದಿನ ಇತಿಹಾಸವು ಮುಂದಿನ ಪೀಳಿಗೆಗೆ ತಳಹದಿ. ಇಂದಿನ ವ್ಯವಹಾರದ ಟಿಪ್ಪಣಿಗಳೇ ಮುಂದಿನ ಇತಿಹಾಸ; ಆದುದರಿಂದ ಪ್ರತಿಯೊಬ್ಬನೂ ತನ್ನ ದಿನಚರಿಯನ್ನು ಕಾಲಕ್ಕೆ ಸರಿಯಾಗಿ ಬರೆಯುವುದು ಅತ್ಯವಶ್ಯವು. ಸರಕಾರಿ ನೌಕರರು ತಮ್ಮ ದಿನಗೆಲಸಗಳ ಟಿಪ್ಪಣಿಗಳನ್ನು ವರಿಷ್ಠಾಧಿಕಾರಿಗಳಿಗೆ ತೋರಿಸಿದಾಗಲೆ ಸಂಬಳಕ್ಕೆ ರುಜು ಹಾಕುವರು. ಇದು ಒತ್ತಾಯದಿಂದ ಬರೆಯಿಸುವ ಡಾಯರಿ; ಎಂತಲೆ ಇಂತಹ 'ಡಾಯರಿ'ಗಳಲ್ಲಿ ಸತ್ಯಾಂಶವನ್ನು ಹೆಚ್ಚಿನ ಪ್ರಮಾಣದಿಂದ ಹುಡುಕುವ ಕಾರಣವಿಲ್ಲ.

ವೈದ್ಯರು, ಡಾಕ್ಟರರು, ವಕೀಲರು ಇತ್ಯಾದಿ ರೆಜಿಸ್ಟ್ರೇಶನ್ ಮಾಡಲ್ಪಟ್ಟ ವ್ಯವಹಾರಿಗರು, ತಮ್ಮ ವ್ಯವಹಾರದ ಗಳಿಕೆ, ಬಳಕೆ, ವ್ಯವಹಾರದಲ್ಲಿಯ ಅನುಭವ, ಎಂಗೇಜ್‌ಮೆಂಟ್ಸ್ ಇತ್ಯಾದಿಗಳನ್ನೂ ಬರೆಯುವುದುಂಟು. ಈ ಬಗೆಯ ಡೈರಿಗಳಲ್ಲಿ ಅನುಭವಗಳಿಗಿಂತ ಅಂಕಿ-ಸಂಖ್ಯೆಗಳ ಕುಣಿದಾಟವೆ ಹೆಚ್ಚಾಗಿರುವುದು.

ವ್ಯಾಪಾರಿಗಳಂತೂ ಖಾತೆ, ಕೀರ್ದಿ, ದಿನವಹಿಗಳಲ್ಲಿ ತಮ್ಮ ಆಯವ್ಯಯದ ಟಿಪ್ಪಣಿ, ಕೊಡು-ತೆಗೆದುಕೊಳ್ಳುವ ಜನರ ಹೆಸರು, ಹಣದ ವಿವರ ಇವುಗಳನ್ನು ಬರೆದೇ ಬರೆಯುವರು (ಕೆಲವರು ಹಿಂದೂ ಪದ್ಧತಿಯಂತೆ, ಕೆಲವರು ಇಂಗ್ಲಿಷ್ ಪದ್ಧತಿಯಂತೆ); ಆದರೆ ಅವರೂ ತಮ್ಮ ವ್ಯವಹಾರ ನಡೆಯಿಸುವುದಕ್ಕೆ ಬೇಕಾದು ದಷ್ಟನ್ನೆ ಬರೆಯುವರು. ಇದಕ್ಕಿಂತಲೂ ಹೆಚ್ಚಿನ ದಿನಚರಿಯನ್ನು ಬರೆಯುತ್ತ ಹೋದರೆ, ಅವರು ಸಂಪೂರ್ಣತೆಯನ್ನು ಹೊಂದುವರೆಂಬುದರಲ್ಲಿ ಸಂದೇಹವಿಲ್ಲ. ಉದಾಹರಣಾರ್ಥವಾಗಿ ಅಳವಾದ ಅನುಭವ, ಕಾರಣಸಹಿತ ಕಷ್ಟ-ನಷ್ಟ, ಶಾಂತಿ-ಸಮಾಧಾನದ ದಿನ ಇವುಗಳ ನೆನಪನ್ನು ಬರೆದಿಡುವುದು ಅತ್ಯವಶ್ಯವು.

ಮಹಾಪುರುಷರು, ತತ್ತ್ವಜ್ಞರು, ಅತಿ ಮಹತ್ತ್ವದ ವಿಷಯಗಳ ಅಭ್ಯಾಸಿಗಳು, ಶಾಸ್ತ್ರಜ್ಞರು ಇತ್ಯಾದಿ ಜನರು, ತಮ್ಮ ದಿನಚರಿಯಲ್ಲಿ ಒಂದು ನಿಮಿಷದ ವ್ಯವಹಾರವನ್ನು ಕೂಡ ಬಿಡದೆ ಬರೆದಿಡುವರು.

ಮೇಲಿನ ಜನಗಳು ತುಳಿಯುವ ಹಾದಿ ನಮ್ಮದಲ್ಲ; ನಮ್ಮ ದಾರಿ ಮಧ್ಯಮ ಸ್ಥಿತಿಯದು. ಎಂತಲೆ ನಮ್ಮ ದಿನಚರಿಯಾದರೂ ಮಧ್ಯಮ ತರಗತಿಯದೇ ಇರಬೇಕಾದುದು ವಾಸ್ತವ.

'ಇರುವಷ್ಟು ದಿನ ನೆಮ್ಮದಿಯಿಂದ ಬಾಳಬೇಕು; ಸತ್ತರೂ ನನ್ನ ನೆನಪು ಉಳಿಯಬೇಕು' ಎಂಬ ಹೆಬ್ಬಯಕೆಗಳು ಪ್ರತಿಯೊಬ್ಬ ಮಾನವನಿಗೂ ಇದ್ದೇ ಇರುವುವು. ಈ ಹೆಬ್ಬಯಕೆಗಳ ಕೈಗೂಡುವಿಕೆಗೆ ದಿನಚರಿಯೆ ಬಲವಾದ ಸಹಕಾರಿಯಾಗಿದೆಯೆನ್ನಬಹುದು.

ನಮ್ಮ ಜೀವನದ ಒಂದೊಂದು ಸಮಸ್ಯೆಯನ್ನೂ ಕುರಿತು, ಬೇರೆಬೇರೆಯಾಗಿ ಪ್ರಾಮಾಣಿಕತನದಿಂದ ದಿನಚರಿಯನ್ನು ಬರೆಯುತ್ತಾ ಹೋದರೆ, ಮಾನವನ ಸ್ವಭಾವ-ಸಂಸ್ಕೃತಿಗಳಲ್ಲಿ ಒಳ್ಳೆಯ ಪರಿವರ್ತನೆಯುಂಟಾಗಿ, ಅವನು ಜಗತ್ತಿನ ಸುಖವನ್ನು ಅನುಭವಿಸುವನು. ನಿತ್ಯವೂ ಡಾಯರಿಯನ್ನು ಬರೆಯುತ್ತಹೋದರೆ, ತನ್ನ ಆತ್ಮಚರಿತ್ರೆಯನ್ನೇ ಬರೆದಂತೆ ಆಗುವುದಲ್ಲದೆ, ತನ್ನ ಕಾಲದ ಮಹಾಪುರುಷರ ಚರಿತ್ರೆಯನ್ನು ಬರೆಯುವುದಕ್ಕೂ ಮಾರ್ಗಮಾಡಿಕೊಂಡಂತಾಗುತ್ತದೆ.

ಇನ್ನು ಬರೆದ ದಿನಚರಿಗಳಲ್ಲಿ ಕೆಲವನ್ನು ಗೌಪ್ಯವಾಗಿ, ಕೆಲವನ್ನು ಬಹಿರಂಗವಾಗಿ, ಕೆಲವನ್ನು ಫಾಯಿಲು ಹಚ್ಚಿ ಹೀಗೆ ಬೇರೆ ಬೇರೆಯಾಗಿ ಇರಿಸಬೇಕು. ದ್ವೇಷಿಗಳ, ಅಸೂಯೆಪಡುತ್ತಿರುವ

ಅಥವಾ ಕೆಡಿಸುವ ಚಟದ ಜನರ ಹೆಸರು, ವಾದ-ತಂಟೆ-ಬಡಿದಾಟ ಗಳಾದ ದಿನ, ಇವುಗಳನ್ನು ಸರಿಪಡಿಸುವ ಪ್ರಾಮಾಣಿಕ ವಿಚಾರ, ಹೆಂಡತಿ ಮಕ್ಕಳ ಅಥವಾ ಅಪೇಕ್ಷೆಗಳಿಂದ ಮನಸ್ತಾಪವಾದ ದಿನ, ಪ್ರಾಮಾಣಿಕ ವಿವೇಚನೆ ಇತ್ಯಾದಿಗಳನ್ನು ಬರೆದ ಡಾಯರಿಯನ್ನು ತಮ್ಮ ರೊಕ್ಕದ ಪೆಟ್ಟಿಗೆಯಲ್ಲಿಯೇ ಇಡಬೇಕು.

ಆಯುಷ್ಯದಲ್ಲಿಯ ಮಹತ್ವದ ಘಟನೆ, ಮನೆಯ ಜನನ-ಮರಣಗಳ ಟಿಪ್ಪಣಿ, ಹೊಳೆದ ವಿಚಾರ ಇವುಗಳನ್ನು ಬೇರೆ ದಿನಚರಿ ಪುಸ್ತಕದಲ್ಲಿ ಬರೆದಿಡಬೇಕು.

ಈ ಎರಡೂ ಘಟನೆಗಳು ದಿನಾಲು ಸಂಭವಿಸುವಂತಹವು ಇರುವುದಿಲ್ಲ. ಪ್ರಸಂಗದ ದಿನಗಳ ಟಿಪ್ಪಣಿಗಳನ್ನು ಮಾತ್ರ ಮಿತಿ ಅಥವಾ ತಾರೀಖು ಬರೆದು ಸ್ಪಷ್ಟೀಕರಿಸಬೇಕು. ಇವುಗಳ ವಹಿಯನ್ನು ಒಮ್ಮೆ ಕಟ್ಟಿದರೆ ಸಾಕು; ಪೂರ್ಣ ಆಯುಷ್ಯದ ವರೆಗೂ ನಡೆಯುವುದು.

ಗಳಿಕೆ-ಬಳಕೆಗಳನ್ನು ಒಂದು ನಿಮಿಷ ಸಹ ತಡಮಾಡದೆ ಆಗಿಂದಾಗ ಬರೆದಿಡಬೇಕು. ಇವುಗಳಲ್ಲಿ ಉಚ್ಚ-ನೀಚತನಗಳಿಂದ ದೊರೆಕಿಸಿದುದು, ಖರ್ಚಿನದು, ಎಲ್ಲವನ್ನೂ ನಾಚದೆ— ನಿಜವಾದ ಕಾರಣಗಳನ್ನೇ— ಬರೆಯಬೇಕು. ಳ-೬ ಸಾರೆ ನೀಚತನದ ಗಳಿಕೆ-ಬಳಕೆಗಳ ಬರೆಹದ ಅಕ್ಷರಗಳು ಕಣ್ಮುಂದೆ ಹಾಯ್ದರೆ, ತನ್ನ ಸ್ವಭಾವದಲ್ಲಿ ತಾನೇ ಸುಧಾರಣೆಯನ್ನು ಮಾಡಿಕೊಳ್ಳಬಹುದು. ಅದರಿಂದ ಇದನ್ನಾದರೂ ಯಾರಿಗೂ ತೋರಿಸದೆ ಗೌಪ್ಯವಾಗಿಡುವುದು ಒಳಿತು.

ಡೈರಿಯನ್ನು ಇಡುವ ಪದ್ಧತಿ

ಗೌಪ್ಯಡಾಯರಿ:— ೧. ಹೆಂಡತಿಯ ಸಂಗಡ ವಾದಮಾಡಿದ ದಿನ, ಯಾತರ ಬಗ್ಗೆ? ತಪ್ಪುಯಾರದು? ಇವುಗಳ ಬಗ್ಗೆ ಪ್ರಾಮಾಣಿಕ ವಿಚಾರ.

೨. ಮಕ್ಕಳಿಗೆ ಸಿಟ್ಟುಮಾಡಿದ ಬಡಿದ ದಿನ; ಯಾತರ ಬಗ್ಗೆ ತನ್ನ ಅನಾವಶ್ಯಕ ಸಿಟ್ಟಿನಿಂದಲೋ, ಮಕ್ಕಳ ಕಿಡಿಗೇಡಿತನದಿಂದಲೊ? ಇವುಗಳ ಬಗ್ಗೆ ಅಂತಃಕರಣದ ವಿವೇಚನೆ.

೩. ಮನೆಯೊಳಗೆ ಸಂಬಂಧಿಸಿದ ಬೇರೆ ಜನರ ಕೂಡ ಉದ ಮನಸ್ತಾಪ-ವಾದಗಳಿಂದ ಸಂಸಾರದಲ್ಲಿ ನಿರಾಶೆ; ಇದರ ಬಗ್ಗೆ ಪ್ರಾಮಾಣಿಕತನದ-ಜಾಣತನದ-ವಿಚಾರ.

೪. ಮನೆಯಲ್ಲಿ ಖರ್ಚು ಯಾರಿಂದ ಹೆಚ್ಚಾಯಿತು ಎಂಬುದು; ಬಳಗದಲ್ಲಿ ತೊಡಕಿದ ಮನುಷ್ಯರ ಬುದ್ಧಿಯನ್ನು ಸರಿಮಾಡುವ ಆಸ್ತಾಲೋಚನೆ.

೫. ಮನೆಯಹೊರಗೆ ಯಾರಿಂದಾದರೂ ಅಪಮಾನವಾಗಿದ್ದರೆ, ಅಸೂಯೆಪಡುವವರಿದ್ದರೆ ಅಥವಾ ವಾದವಾಗಿದ್ದರೆ, ಅವರ ಹೆಸರು ಸ್ಥಳ ಕಾರಣಗಳನ್ನು ಬರೆದು, ಅದರ ಸಾಧಕಬಾಧಕ ವಿಚಾರ ಮತ್ತು ನಿರ್ಣಯ ಬರೆಯಬೇಕು.

೬. ತಾನು ಮಾಡಿದ ಅವಿಚಾರತನ.

೭. ತಾನು ಮಾಡಿದ ಸುವಿಚಾರತನ.

೮. ತಾನು ತಪ್ಪಿದ ಹಾದಿ ಮತ್ತು

೯. ಪಶ್ಚಾತ್ತಾಪ. ಇವುಗಳನ್ನು ಸಾಧ್ಯಂತವಾಗಿ ಬರೆದಿಡಬೇಕು.

ಬಹಿರಂಗ ಡಾಯರಿ— ೧. ಮಹತ್ವದ ಘಟನೆ (ಮನೆಯಲ್ಲಿ ಅಥವಾ ಹೊರಗೆ ನಡೆದುವು) ೨. ಹೊಳೆದ ವಿಚಾರ. ೩. ಪ್ರೀತಿಯ ವಿಷಯದ ಪುಸ್ತಕ-ಲೇಖನ-ಪ್ರಬಂಧಗಳನ್ನು ಓದಿದ ಮಹತ್ವದ ಟಿಪ್ಪಣಿ. ೪. ಮನೆಯಲ್ಲಿಯ ಜನನ-ಮರಣಗಳ ಟಿಪ್ಪಣಿ. ೫. ಮನೆಗೆ ಯಾರಾದರೂ ಮಹಾಪುರುಷರು ಬಂದಿದ್ದರೆ ಅಥವಾ ಭೆಟ್ಟಿಯಾಗಿದ್ದರೆ ಅವರ ಹೆಸರು, ತಾರೀಖು. ೬. ಸಾರ್ವಜನಿಕ ಕೆಲಸವನ್ನು ಮಾಡಿದ ವಿವರ. ೭. ಸಾರ್ವಜನಿಕದಿಂದ ಅಥವಾ ವ್ಯಕ್ತಿಯಿಂದ ಮಾನ-ಮರ್ಯಾದೆ ಸಿಕ್ಕ ದಿನ. ಯಾತರ ಬಗ್ಗೆ? ೮. ಪ್ರವಾಸಕ್ಕೆ ಹೊರಟ— ನೋಡಿದ— ಅನುಭವಕ್ಕೆ ಬಂದ ಮಾತುಗಳ ಟಿಪ್ಪಣಿ. ತಾರೀಖು ಖರ್ಚು. ೯. ಜೀನಸುಗಳನ್ನು ತಂದ ಅಂಗಡಿ, ಕಂಪನಿ, ಫ್ಯಾಕ್ಟರಿ, ಊರುಗಳ ಹೆಸರು ವಿಳಾಸ. ಇದರಿಂದ (ಅನುಭವ ತೆಗೆದುಕೊಂಡನಂತರ) ಯಾವ ಸಮೂನೆಯ ಮಾಲು ಅಗ್ಗವಿದೆ, ತಾಳಿಕೆಯುಳ್ಳದಿದೆ, ರುಜಿಕರವಿದೆ- ಇತ್ಯಾದಿಗಳ ತಿಳಿವಳಿಕೆಯಾಗುತ್ತದೆ.

ಜಮಾಖರ್ಚಿನ ಟಿಪ್ಪಣಿ— ಇದನ್ನು ಸಾಮಾನ್ಯವಾಗಿ ಎಲ್ಲರೂ ಬರೆಯುವುದುಂಟು. ಆದರೂ ಖರ್ಚಿನ ತಪಸೀಲಿನಲ್ಲಿ ಸ್ಪಷ್ಟೀಕರಣವನ್ನು ಮಾಡಬೇಕು.

ಫಾಯಿಲುಗಳು— ೧. ಪರ್ತಮಾನಪತ್ರಗಳಲ್ಲಿಯ ಮಹತ್ವದ, ವಿಚಾರ ಪ್ರಚುರ ಲೇಖನ ಮತ್ತು ಹೃದಯಂಗಮ ಸುದ್ದಿಗಳ ತುಣುಕುಗಳ ಫಾಯಿಲು. ೨. ಅಭ್ಯಾಸಿಸುವ ಅಥವಾ ಪ್ರೀತಿಯ ವಿಷಯಗಳ ಲೇಖನಗಳ ಫಾಯಿಲು. ೩. ತಪುಗೆ ಬಂದ ಪತ್ರಗಳಲ್ಲಿ ಮಹತ್ವದುವೆನಿಸಿದ ಪತ್ರಗಳ ಫಾಯಿಲು. ೪. ಹಣವನ್ನು ಕೊಟ್ಟು ಸ್ವೀಕರಿಸಿದ ಪಾವತಿಗಳ ಫಾಯಿಲು. ೫. ಮದುವೆ-ಮುಂಜಿ ಇತ್ಯಾದಿ ಸಂಭ್ರಮದ ದಿನಗಳಲ್ಲಿ ಮುದ್ರಿಸಿದ ಆಮಂತ್ರಣ ಪತ್ರಿಕೆಗಳ ಫಾಯಿಲು.

ವೇಳಾಪತ್ರಿಕೆ— ೧. ವಾರಾನುಕ್ರಮದಂತೆ ಅಡಿಗೆಯ (ಫಲಾಹಾರ) ಜೀನಸುಗಳ ಪಟ್ಟಿ. ೨. ಎಲ್ಲರೂ ಏಳುವುದು, ದಿನಗೆಲಸಗಳ ವಿವರ, ಮಲಗುವ ವರೆಗೆ ತಮ್ಮ ಅನುಕೂಲತೆಯಂತೆ ದಿನದ ವೇಳಾಪತ್ರಿಕೆ. ೩. ಹುಡುಗರ ಶಾಲೆಯ ವೇಳಾಪತ್ರಿಕೆ; ಇವು ಮೂರೂ ವೇಳಾಪತ್ರಿಕೆಗಳನ್ನು ಒಂದೊಂದು ರಟ್ಟಿಗೆ ಹಚ್ಚಿ ಎಲ್ಲರಿಗೂ ಕಾಣುವಂತೆ ತೂಗುಹಾಕಬೇಕು.

ಡೆಡ್‌ಸ್ಟಾಕ್ ಸಾಮಾನಿನ ಪಟ್ಟಿ— ೧. ಕೊಂಡ ತಾರೀಖು. ೨ ಕ್ರಯ. ೩. ಅಳತೆ ಅಥವಾ ತೂಕ. ೪. ಸಾಮಾನುಗಳ ಸಂಪೂರ್ಣ ಹೆಸರು. ೫. ಕಳೆದ ಅಥವಾ ನಾಶವಾದ ದಿನಗಳ ತಾರೀಖು.

ಬೆಲೆಬಾಳುವ ವಸ್ತುಗಳ ತಪಶೀಲು— ಬೆಳ್ಳಿ, ಭಂಗಾರ, ಮುತ್ತು, ರತ್ನಗಳ ವಿವರ. ಯಾರ ಅಂಗಡಿಯಿಂದ ತಂದಿತು.

(೪೭೨ ನೆಯ ಪುಟ ನೋಡಿರಿ.)

ನನ್ನ ಕಳವು

(ವಿನೋದ ಪ್ರಬಂಧ)

ಶ್ರೀ. 'ಕೋದಂಡ' ಮಿತ್ರನುಂಡಳಿ

ಕಾಗೆ 'ಕಾ-ಕಾ-'ಎಂದರೆ ಲೋಳೆಯೆತ್ತು ಬೆದರಿ ಬಿದ್ದಿತಂತೆ. ವೇಷಧಾರಿಕದ ಜ್ಯೋತಿಷಿ ವಿನೋದ ಕ್ಕೆಂದು ಕಳವಿನ ಭವಿಷ್ಯ ಹೇಳಿದರೆ, ಕಳವು ಮಾಡಿದ ನಿಜವಾದ ಕಳ್ಳರೆಲ್ಲ 'ಕಬೂಲಿ ಜವಾಬ್' ಕೊಟ್ಟುಬಿಟ್ಟರು.

*

ಬಹಳ ಹಿಂದಿನ ಕಾಲದ ಮಾತಿದು. ಆ ಕಾಲಗಳ ನೆನಪಾಗುವುದೇ ತಡ,— ಅದೆಲ್ಲವೂ ಒಸರಾಗಿ, ಒಸರು ಹೊಳೆಯಾಗಿ, ಹೊಳೆಯು ನೆರೆಯಾಗಿ, ಅಕ್ಕಪಕ್ಕದ ಮನೆಗಳೂ ಮರಗಳೂ ಹಳ್ಳಿಗಳೂ ಪಳ್ಳಿಗಳೂ ನೆಲಸಮವಾಗುವುದುಂಟು. ಹಾಗೆ ಅವುಗಳು ಅಳಿಯದೆ, ಸ್ವಲ್ಪ ಉಳಿದುಕೊಂಡು ಬರಲಿ—ಎಂದು ನಾನಿದನ್ನು ಹೇಳುತ್ತಿದ್ದೇನೆ. ಹೇಳುತ್ತಿದ್ದಂತೆಯೆ, ಕಳೆದುಹೋದ ಆ ದಿನಗಳನ್ನು ನೆನೆಯಬಹುದಲ್ಲದೆ, ಜೀವಿಸಲಿಕ್ಕಾಗುತ್ತಿಲ್ಲವೆಂದು ದುಃಖಪಡುತ್ತಿದ್ದೇನೆ. ನಾನು ಕೂಡ ಭಾರವಿಯಂತೆಯೆ ಅರ್ಥಗೌರವವುಳ್ಳ ಕವಿಯಾಗಿದ್ದರೆ, "ತೇ ಹಿ ನೋ ದಿವಸಾಗತಾಃ" ಎಂದು ಕನ್ನಡದಲ್ಲಿ ಅದಕ್ಕಿಂತಲೂ ಹಿರಿಮೆಯುಳ್ಳ ಮಾತನ್ನು ಸೃಷ್ಟಿಸುತ್ತಿದ್ದೆನು. ಆದರೆ ಭಾರವಿಯ ದಿವಸಗಳೂ ಆಗಿಹೋಗಿವೆ. ಆ ಅರ್ಥಗೌರವದ ಕವಿತೆಯ ಕಾಲವೂ ಮಾಸಿಹೋಗಿದೆ.

ಬಹಳ ಚಿಕ್ಕವ್ಯಾಯದಲ್ಲಿ ಸೋದರಮಾವನ ಹಳ್ಳಿಗೆ ನಾನೊಂದು ಮದುವೆಯ ಮಂಗಲಕ್ಕಾಗಿ ಹೋಗಿದ್ದೆನು. ಆ ಕಾಲದ ಮದುವೆಗಳಿಗೂ ಈ ಕಾಲದ ಮದುವೆಗಳಿಗೂ ಅಜಗಜಾಂತರವಿದೆಯಷ್ಟೆ? ಏಳೆಂಟುದಿವಸಗಳು ಅವ್ಯಾಹತವಾಗಿ ಊಟಗಳು ಫಲಾಹಾರಗಳು, ವಾದ್ಯಗಳು ಇಸ್ಪೀಟುಗಳು, ಮಂತ್ರಗಳು ತಂತ್ರಗಳು, ಪುರೆಗಳು ಮೋಸಗಳು, ತಂಟೆಗಳು ಕಳವುಗಳು, ಎಂದು ಇವುಗಳೆಲ್ಲದರ ಏಕಸನ್ನಿಪಾತವಾಗಿ ಉದ್ದುದ್ದ ಬೆಳೆಯುತ್ತಿದ್ದುವು. ಇಂದಿನ ದಿನವೆಂದರೆ, ಬೆಳಗ್ಗೆ ಕಾಗೆ ಎದ್ದು ಕೂಗುವಂದು ಬಂದ ದಿಬ್ಬಣವು, ಕಾಗೆ ಮರಳಿ ಗೂಡಿಗೆ ಹಾರುವುದರೊಳಗೆ ಜದರಿಹೋಗುತ್ತಿದೆ. ಊಟವಿದ್ದರೂ ಉಣ್ಣುವುದಿಲ್ಲ; ವಾದ್ಯವಿದ್ದರೂ ಮಂತ್ರವಿಲ್ಲ; ಕಳವು ಇದ್ದರೂ ಮೋಸವಿರುವುದಿಲ್ಲ. ಇಂತಹ ಮದುವೆ ಸಂಭ್ರಮಗಳಲ್ಲಿ ಭಾಗಿಯಾಗಿ, ಸಂಸಾರವೆಲ್ಲ ನಿಸ್ಸಾರವಾಗುತ್ತಿದೆ, ಎಂದು ಭ್ರಮಿಸಿಕೊಳ್ಳುವಂತಹ ನನ್ನಂತಹವರಿಗೆ, ಸೋದರಮಾವನ ಹಳ್ಳಿಯಲ್ಲಿ ಸೋದರಮಾವನ ಮನೆಯಲ್ಲಿ ಸೋದರಮಾವನ ಮಗಳಿಗಾದ ಮದುವೆಯ ಸಂಭ್ರಮವನ್ನು ನೆನೆದು, ಬಾಯಲ್ಲಿ ನೀರು ತರುವುದು, ಭಾರವಿಯ ಮನೋಭಾವನೆಯನ್ನು ತಳೆಯುವುದಲ್ಲದೆ ಮತ್ತೇನಾಗಿದೆ?

ಮದುವೆಯ ಮನೆಯೆಂದರೆ, ಆ ಕಾಲಗಳಲ್ಲಿ, ಒಂದು ಚಿಕ್ಕ ಬ್ರಹ್ಮಾಂಡವೆ ಆಗಿದ್ದಿತು. ಯಾವ ಕೋಣೆ ನೋಡಿದರೂ, ಆ ಕೋಣೆ ಒಂದು ಉಗ್ರಾಣ. ಉಗ್ರಾಣದಲ್ಲಿ ಎಣ್ಣೆಯಲ್ಲಿಯೂ ತುಪ್ಪದಲ್ಲಿಯೂ ಹುರಿದ ಚಕ್ಕುಲಿ, ತಿಂಗಳೋಡೆ, ಕಾರುಕಡ್ಡಿ, ಶಾವಿಗೆ, ಅಂಬೋಡೆ, ಉಂಡೆ ಮೊದಲಾದ ತಿಂಡಿಗಳನ್ನು ಡಬ್ಬಿಗಳಲ್ಲಿ ತುಂಬಿಸಿಡುತ್ತಿದ್ದರು. ಒಕ್ಕಲುಗಳು ತಂದೊಪ್ಪಿಸಿದ ಕುಂಬಳ, ಸೌತೆಕಾಯಿ, ಚೀನಿಕಾಯಿ, ಬಾಳೆಹಣ್ಣು ಮೊದಲಾದ ಹಣ್ಣುಗಳನ್ನೂ ಕಾಯಿಗಳನ್ನೂ ಅಂಕೆಯಿಲ್ಲದಷ್ಟು ಕೂಡಿಸಿಡುತ್ತಿದ್ದರು. ಆದರೆ ಇವುಗಳೆಲ್ಲವನ್ನೂ ಭದ್ರವಾಗಿಟ್ಟುಕೊಂಡು, ನಿರರ್ಥಕವಾಗಿ ಹಾಳಾಗಬಿಟ್ಟರೂ, ದುರ್ವ್ಯಯವಾಗದ ಹಾಗೆ ತಕ್ಕ ತನಪಿಯನ್ನು ಯಾರಾದರೊಬ್ಬರಾದರೂ ಮಾಡದೆ ಇರುತ್ತಿದ್ದಿಲ್ಲ.

ಪಟ್ಟಣದಿಂದ ಬಂದ ನಾನು, ಹಳ್ಳಿಯ ಹುಡುಗರಿಗಿಂತ ಹೆಚ್ಚಿನ ಚಾತುರ್ಯದವನಿರಬೇಕೆಂದು ಎಲ್ಲವರ ಗ್ರಹಿಕೆಯಾಗಿದ್ದಿರಬೇಕು. ಬೇರೆಯವರ ಮಕ್ಕಳು ತೀರ ಹತ್ತಿರದ ಸಂಬಂಧವಾದರೆ, ಅವರ ಬುದ್ಧಿಶಕ್ತಿಯು ಇನ್ನು ಕಳೆಯೇರುವುದಿದೆ. ಆಂತೂ ನಾನು ಹಳ್ಳಿಗೆ ಬಂದದಿವಸವೆ ನನ್ನೆಡೆಗೆ ಅವರೆಲ್ಲರ ಮನಸ್ಸು ಹರಿಯುವಂತೆ ಮಾಡಿಬಿಟ್ಟೆನು. ಆಗಲಿಕ್ಕೆ ನಾನು ಪ್ರತ್ಯುತ್ಪನ್ನಮತಿಯೆ ಅಹುದು; ಪ್ರತ್ಯುತ್ಪನ್ನ ಮತಿಯಾಗಿ ಆದರ ಎಲ್ಲ ಹಕ್ಕುಬಾಧ್ಯತೆಗಳನ್ನು ಅನುಭವಿಸಿದ್ದೂ ಉಂಟು. ನಾನು ನಾಲ್ಕನೆಯ ತರಗತಿಯಲ್ಲಿ ಓದುತಿದ್ದೆನೆಂದೂ ಮಹಾತಂಟೆಖೋರನೆಂದೂ ಓದುಕಲುವಿನಲ್ಲಿ ಅಷ್ಟು ಮುಂದರಿದಿಲ್ಲವಾದರೂ ಏನುಮಾಡಲಿಕ್ಕೂ ಹೇಸನೆಂದೂ ಅವರವರು ಅವರವರಷ್ಟಕ್ಕೆ ಹೇಳುತ್ತಿದ್ದರು. ನಾನದನ್ನು ಕಿವಿಗೊಟ್ಟು ಕೇಳಿದರೂ ನಿರ್ಲಕ್ಷ್ಯದಂತೆ ವರ್ತಿಸುತ್ತಿದ್ದೆನು.

ಬಂದ ದಿವಸವೆ, ಊಟವಾದೊಡನೆಯೆ, ನನಗೆ ತಿನ್ನಲಿಕ್ಕೆ ಎರಡು ಮಾವಿನ ಹಣ್ಣುಗಳನ್ನು ಕೊಟ್ಟಿದ್ದರು. ಅಲ್ಲಿದ್ದವರೆಲ್ಲರೂ ತಮ್ಮ ಹಣ್ಣುಗಳನ್ನು ತಿನ್ನುತ್ತಿದ್ದಾಗ ನಾನು ಭಕ್ಕನೆ, "ಇಲ್ಲಿದ್ದ ಈ ಎರಡು ಹಣ್ಣುಗಳನ್ನು ಮೂರಾಗಿ ತೋರಿಸ ಬೇಕೆ?" ಎಂದು ಸವಾಲು ಮಾಡಿದೆನು. ನನ್ನನ್ನು ಹೊಗಳುವುದರಲ್ಲಿ ಮೊದಲಿಗನಾದ ನನ್ನ ಕಿರಿಯ ಸೋದರ ಮಾವನು "ಭಲೆ, ಮಾಡಿತೋರಿಸು! ಮೂರಾಗುವುದಾದರೆ, ಆ ಮೂರಕ್ಕೆ ಇನ್ನು ಮೂರನ್ನು ಸೇರಿಸಿ, ಆರುಮಾಡಿಕೊಡುತ್ತೇನೆ" ಎಂದನು. ಪಟ್ಟಣದ ಶಾಲೆಗಳಲ್ಲಿ ಇಂಗ್ಲಿಷ್ ಪದ್ಯದಲ್ಲಿ ಇದನ್ನು ನಾನು ಕಲಿತಿದ್ದೇನೆಂದು ಹಳ್ಳಿಯ ಸಾಲೆಯ ಮಕ್ಕಳೂ ಆದನ್ನು ಓದಿರಬಹುದೆಂದು ಊಹಿಸಲಾಗುತ್ತಿದ್ದಿಲ್ಲ. ನಾನು ಮಾಡಲಿಕ್ಕಿದ್ದ ಇಂದ್ರಜಾಲವನ್ನು ನೋಡುವುದಕ್ಕೆಂದು ನನ್ನ ವ್ಯಾಯದ ಮಕ್ಕಳೆಲ್ಲರೂ, ಬಾಯಲ್ಲಿ ಮಾವಿನ ಗೊರಟೆಯನ್ನು ಚೀಪುತ್ತಲೆ ಎದ್ದುನಿಂತರು. ಮನೆಯೊಳಗಿಂದ

ಚಿಕ್ಕಪ್ರಾಯದ ಹೆಂಗುಸರೆಲ್ಲರೂ ಹೊರಜಗುಲಿಗೆ ಓಡಿಬಂದರು. ಅಂಗಳದಲ್ಲಿ ಆಳುಗಳೆಲ್ಲರೂ ಕತ್ತನ್ನು ಉದ್ದಮಾಡಿ ನಿಂತರು.

"ನೋಡಿ—ಇಲ್ಲಿ ನೋಡಿ—ಎರಡು ಹಣ್ಣುಗಳಿವೆ" ಎಂದು ನಾನು ಮೊಡಲುಮಾಡಿದೆನು.

"ನೋಡುತ್ತಿದ್ದೇವಲ್ಲ!" ಎಂದು ಕಿರಿಯ ಸೋದರಮಾವನು ನಕ್ಕುಬಿಟ್ಟನು.

"ನೋಡಿ, ಇದು—ಒಂದು; ನೋಡಿ, ಇದು—ಎರಡು. ಈ ಒಂದನ್ನು ಈ ಎರಡಕ್ಕೆ ಕೂಡಿಸುತ್ತೇನೆ—ಮೂರಲ್ಲವೆ, ಈಗ?" ಎಂದು ನಿಧಾನವಾಗಿಯೆ ಹೇಳಿ ತೋರಿಸಿದೆನು.

ಕಿರಿಯ ಸೋದರಮಾವನು ತಲೆಯಲ್ಲಾಡಿಸಿ, "ಛೇಷ್" ಎಂದನು. ನನ್ನ ಓರಗೆಯ ಬಾಲಕರು ಇನ್ನೂ ಗೊರಟೆಯನ್ನು ತೀಡುತ್ತಿದ್ದು, ಅವರಲ್ಲಿ ಕೆಲವರ ಮೈಮೇಲೆ ಮಾವಿನರಸವು ಇನ್ನೂ ಇಳಿಯುತ್ತಿತ್ತು. ದೊಡ್ಡ ಮಕ್ಕಳು ಹುಬ್ಬುಗಳನ್ನು ಏಕುಂಚಿಸಿ, ನನ್ನನ್ನೆ ದಿಟ್ಟಿಸಹತ್ತಿದರು. ಹೆಂಗುಸರು ಇದೆಂತಹ "ಮೇಜಿಕ್" ಎಂದು ಅಯ್ಯೋ..ಯ್ಯೋ ಎಂದು ಈ ಶಬ್ದವನ್ನು ಖಿಲ ದ್ವಿತ್ವವನ್ನಾಗಿಯೆ ಉಚ್ಚರಿಸಿ ಒಳಸೇರಿದರು. ಆಳುಗಳು ಯಾವ ವಿಶೇಷವನ್ನೂ ಕಾಣದೆ, ತಮ್ಮ ತಮ್ಮ ಬಿಟ್ಟಿಬೇಗಾರಿಗೆ ಹೊಡೆದರು.

ಅದೇ ದಿನ ಸಾಯಂಕಾಲ ಮದುಮಗಳಿಗೆ ಮಂಗಲಸ್ನಾನದ ಉಪಚಾರವಿದ್ದು, ಊಳಿಗದ ವಾದ್ಯವಾಗುತ್ತಿತ್ತು. ವಾದ್ಯದ ಮೇಳದವರ ಸುತ್ತಾಗಿ ನಾವೆಲ್ಲರೂ ಸೇರಿದೆವು. ವಾದ್ಯದ ಗುರಿಕಾರನ ಕೈಗೆ ಬಂಗಾರದ ಬಳೆಯೊಂದು ಇದ್ದಿತು. ಅದನ್ನು ಪ್ರದರ್ಶಿಸಲಿಕ್ಕೊ ಎಂಬಂತೆ ಆತನು,ತನ್ನ ಕೈಗಳನ್ನು ಮೇಲಕ್ಕೆತ್ತಿ ಮವುರಿಯನ್ನು ಗಾಳಿಯಲ್ಲಿ ಅತ್ತಿತ್ತ ತಿರುಗಾಡಿಸಿ,ತನ್ನ ಸಂಗೀತಕ್ಕೆ ತಾನೇ ಮೆಚ್ಚುದವನಂತೆ ತಲೆಯಲ್ಲಾಡಿಸಿ ನಾನಾತರದ ವಿಕಾರಗಳನ್ನೂ ಫೇಷ್ಟೆಗಳನ್ನೂ ಮಾಡುತ್ತಿದ್ದನು. ಅಂತಹ ವಿಕಾರಗಳನ್ನು ಕಂಡೂ ಬೆದೂಗದ ನಾನು ಬೇಸರುಹೊಂದಿ,ಚೀಲದಿಂದ ಹುಣ್ಣಿಸೆಹಣ್ಣನ್ನು ಹೆಗೆದು, ಅದನ್ನು ಚೀಪಲಾರಂಭಿಸಿದೆನು. ಮವುರಿಯನ್ನು ಊದುವ ಗುರಿಕಾರನು, ನಾನು ರುಚಿಯಿಂದ ಹುಣಿಸೆಯನ್ನು ತಿನ್ನುವುದನ್ನು ನೋಡಿದೊಡನೆ, ಅವನ ಮುಖದಲ್ಲಿ ಬೇರೆ ವಿಕಾರಗಳು ತೋರಹತ್ತಿದುವು. ಮುಖವನ್ನು ಆಕುಂಚಿಸಹತ್ತಿದನು. ಮವುರಿಯನ್ನು ಮೇಲಕ್ಕೆತ್ತಿದನು. ಮವುರಿಯಲ್ಲಿ ಬಾಯನೀರು ಇಳಿಯುತೊ, ಬಾಯುಸ್ವರವು ಗಂಟಲೊಳಗೆ ಹಿಸುಕಲ್ಪಟ್ಟಿತೊ, ಏನೊ; ಮವುರಿಯನ್ನು ಬಾಯಿಂದ ತೆಗೆದುಬಿಟ್ಟನು. ನಾಗಸ್ವರವನ್ನು ಊದುವ ಮುದುಕನು ಮುಖ ಕೆಳವಾಡಿಯೆ ಊದುವುದಲ್ಲವೆ? ನಾಗಸ್ವರವು ನಿರಾತಂಕವಾಗಿ ಊದುವ ವಾದ್ಯಸಾಧನೆಯಲ್ಲವೆ? ನಾಗಸ್ವರದಲ್ಲಿಯೂ ನೀರು ಇಳಿಯಿತು; ಮುಖವನ್ನು ಮುದುಕನು ಮೇಲ್ಮಾಡಿ ಊದತೊಡಗಿದನು. ನಾಗಸ್ವರವು ಅಪಸ್ವರವಾಯಿತು. ಬಾಯನೀರು ನಾಗಸ್ವರದಿಂದ ತಿರುಗಿ ಬಾಯೊಳಗೆ ಬಂದು, ಮುದುಕನ ಉಸಿರುಕಟ್ಟಿತು. ಉಳಿದ ವಾದ್ಯಗಾರರ ಸೋಳ-ತಾಳಗಳೆಲ್ಲ ತಪ್ಪಿದುವು; ಗುರಿಕಾರನು ಬೆಪ್ಪಗಾದನು; ವಾದ್ಯದವರಿಗೇನು ಸಂಕಟ ಬಂದಿದೆಯೆಂದು ಒಳಗಿಂದ ಹೆಂಗುಸರು ಆಕ್ಷೇಪವೆತ್ತಿದಾಗ, ಹೊರಗೆ ಬಂದು ನನ್ನ ಹಿರಿಯ ಸೋದರಮಾವನು ವಾದ್ಯದವರ ಎದುರು ನಿಂತು, ಹುಣಿಸೆಯ ಅಸ್ತ್ರವನ್ನು ಬೀಸಿದ ನನ್ನನ್ನು ಕಂಡು "ಭಗಿಂಗಾ, ಪಟ್ಟಣದ ಪೋಕರಿಯನ್ನು ಇಲ್ಲಿ ತಂದೆಯಾ? ನಡೆ!" ಎಂದು ಗದರಿಸಿಬಿಟ್ಟನು.

ನಾನು ಚತುರಮತಿಯೆಂದು ಎಲ್ಲವರೂ ನನ್ನ ಮೇಲೆ ಕಣ್ಣಿಡಲು ತೊಡಗಿದರು. ನನಗಿಂತ ಚಿಕ್ಕಪ್ರಾಯದ ಹುಡುಗಿಯರು ನನ್ನನ್ನು ಕಂಡೊಡನೆ ಒಳಗೆ ನುಸುಳುತ್ತಿದ್ದರು. ನನ್ನಷ್ಟೆ ಪ್ರಾಯದ ಗಂಡುಮಕ್ಕಳು ನನ್ನೊಡನೆ ಗದ್ದೆಗದ್ದೆಗಳನ್ನು ಪುಡಿಮಾಡಿ, ನನಗೆ ಗೇರುಹಣ್ಣು,ಮಾವಿನಹಣ್ಣು ಮೊದಲಾದುವುಗಳ ಪರಿಚಯಮಾಡಿಕೊಡುತ್ತಿದ್ದರು. ನನಗಿಂತ ಹೆಚ್ಚು ಪ್ರಾಯದವರು ಇಂಗ್ಲಿಶ್ ಶಬ್ದನಿರ್ಮಾಣದ ಆಟಕ್ಕಾಗಿ ನನ್ನನ್ನು ಕರೆಯುತ್ತಿದ್ದರು. ಮುದುಕಿಯರು ನನಗೆ ಪದಹೇಳಲು ಕೇಳಿಕೊಳ್ಳುತ್ತಿದ್ದರು. ಮುದುಕರು ನನ್ನೊಡನೆ ಇಂಗ್ಲಿಶ್ ಮಾತಾಡಲು ಹೇಳುತ್ತಿದ್ದರು. ಆಳುಗಳಲ್ಲಿ ಕೆಲವರು ಮೆಲ್ಲನೆ ಬಂದು, ತಮ್ಮ ಮಕ್ಕಳಿಗೆಂದು ಶರ್ಟುಗಳನ್ನೂ ಕೋಟುಗಳನ್ನೂ ಬೇಡುತ್ತಿದ್ದರು.

ಬಂದ ಕೆಲದಿನಗಳಲ್ಲಿಯೆ ನನ್ನ ಉತ್ಸಾಹ, ನನ್ನ ಬುದ್ಧಿಚಮತ್ಕಾರ, ನನ್ನ ಚಟುವಟಿಕೆ ಎಲ್ಲ ಇಳಿದು ಬಂದಂತೆ ತೋರಿತು. ನನ್ನ ನಡತೆಯಲ್ಲಿದ್ದ ಕವಿತ್ವ ಕಡಿಮೆಯಾದಂತಾಗಿ, ದಿವಸಗಳು ನನಗೆ ಗದ್ಯಮಯವಾಗಹತ್ತಿದುವು. ನೋಡಿದ ಹಕ್ಕಿಗಳೇ ಚಿಲಿಪಿಲಿಗುಟ್ಟುತ್ತಿದ್ದುವು. ರುಚಿ ನೋಡಿದ ಕಾಯಿಪಲ್ಯಗಳೆ ತಿರು-

ಕನ್ನಡ

ಸಾರ್ಥ ಜ್ಞಾನೇಶ್ವರೀ

ಸಚಿತ್ರ

ಏನೆಯ ಭಾಗ

೧ ರಿಂದ ೯ ಅಧ್ಯಾಯಗಳು

ಶ್ರೀಮದ್ಭಗವದ್ಗೀತೆಯ ಮೇಲೆ "ಜ್ಞಾನೇಶ್ವರರು" ಮಹಾರಾಷ್ಟ್ರ ಭಾಷೆಯಲ್ಲಿ ಬರೆದ ಭಾವಾರ್ಥದೀಪಿಕೆ ಎಂಬ ಟೀಕೆಯ ಕನ್ನಡ ಅನುವಾದವು.

ಲೇಖಕರು:

ಶ್ರೀನಿವಾಸ ಕೃಷ್ಣ ಕುಲಕರ್ಣಿ, ಸುನಗ

ಬೆಲೆ ೩ ರೂಪಾಯಿಗಳು. ಅಂಚೆಯವೆಚ್ಚ ಬೇರೆ

ಪೋಕ ಮತ್ತು ಕಿರುಕುಳ ಬೇಕಾದವರು ಕೆಳಗಿನ ಪತ್ತೇಕ್ಕೆ ಪತ್ರ ಬರೆದು ಕೇಳಿಕೊಳ್ಳಬೇಕು.

ವಿಳಾಸ:—

ಮ್ಯಾನೇಜರ್

ಕರ್ನಾಟಕ ಪ್ರಿಂಟಿಂಗ್ ವರ್ಕ್ಸ್,

ಧಾರವಾಡ

ತಿರುಗಿ ಒತ್ತಾಯವಾಗಿ ಎಂಬಂತೆ ಬರುತ್ತಿದ್ದುವು. ಮೌತನಾಡುವವರ ಉತ್ಸಾಹ ಕಡಿಮೆಯಾಗಹತ್ತಿತು; ಹೊಸಬರು ಬಂದವರು ಇವನಾರೆಂದು ಕೇಳುತ್ತಿದ್ದರೂ ವಿಶೇಷ ಗಮನಕೊಡದೆ, ಪಟ್ಟಣದವನಾಗಿದ್ದರೂ ಹಳ್ಳಿಯವರ ಜೊತೆಯಲ್ಲಿದ್ದವನನ್ನು ಹಳ್ಳಿಗರ ಸಾಲಿಗೇ ಸೇರಿಸಿ, ಪಟ್ಟಣದಿಂದ ಹೊಸದಾಗಿ ಬಂದ ಮಕ್ಕಳ ಕಡೆಗೆ ಎಲ್ಲರೂ ಕೊಡುವಂತೆ ತಾವೂ ತಪ್ಪು ಗಮನ ಕೊಡುತ್ತಿದ್ದರು. ಅಂತೂ ನನ್ನ ಪ್ರತ್ಯುತ್ಪನ್ನಮತಿತ್ವದ ಜೀವನದ ಆತ್ಮಹತ್ಯೆಯೊ ಕಾಲಮರಣವೊ ಬಂದೊದಗಿದಂತಾಯಿತು.

ಹಳ್ಳಿಯ ಗದ್ದೆಗಳಲ್ಲಿ, ಗದ್ದೆಗಳ ಬದಿಯ ಮರಗಳಲ್ಲಿ, ಮರಗಳ ಮೇಲಿನ ಹಣ್ಣುಗಳಲ್ಲಿ ಧೈರ್ಯ ಶೌರ್ಯ ಉತ್ಸಾಹಗಳನ್ನೆಲ್ಲ ಒಮ್ಮೆ ತೋರಿಸಿ ಬಹಳ ಬಳಲಿದ್ದೆನು. ಮನೆ ಸೇರುತ್ತಲೆ, ವೃಣ್ಯವಶಾತ್ ಉಗ್ರಾಣದ ಬಳಿ ತೂರೂ ಇಲ್ಲದುದನ್ನು ಕಂಡು, ಒಳಕೊಕ್ಕು ಒಂದು ಡಬ್ಬೆಯ ಬೀಗನುರಿದು, ಕ್ಷಣಾರ್ಧದಲ್ಲಿ ಎಂಬಂತೆ ಅದನ್ನು ಬರಿದುಮಾಡಿ, ಅಲ್ಲಿಯೆ ಒಂದು ಮೂಲೆಯಲ್ಲಿ ಹತ್ತುನಿಮಿಷ ಅಡಗಿಕೊಂಡಿದ್ದು, ಮತ್ತೆ ಧೈರ್ಯಹೊಂದಿ ಹೊರನುಸುಳಿದೆನು. ಎಲ್ಲವೂ ನಿಶ್ಯಬ್ದವಾಗಿತ್ತು. ಉಗ್ರಾಣದ ಸಮೀಪವಾಗಲಿ ದೂರವಾಗಲಿ, ಯಾರೂ ಕಂಡಂತೆ ತೋರಲಿಲ್ಲ. ಹೆಂಗುಸರು,ಮಕ್ಕಳು,ಗಂಡುಸರು ಮೊದಲಾಗಿ ಎಲ್ಲವರೂ ಏನೋ ತಮ್ಮ ತಮ್ಮ ಕೆಲಸಕ್ಕೆ ಹೋಗಿದ್ದರು. ದೂರದಲ್ಲಿ ಒಂದು ಆಳು ಏನನ್ನೊ ಕುಟ್ಟುತ್ತಿದ್ದಾನೆ. ಒಬ್ಬಳು ಮುದಿಹೆಂಗುಸು ಗೋಡೆಯ ಬದಿಯಾಗಿಯೆ ನಡೆಯುತ್ತಿದ್ದಾಳೆ. ಕಪ್ಪಗಿನ ಮನೆಯ ಬೆಕ್ಕು ಮನೆಯ ಮಾಡಿನಲ್ಲಿ ನಡೆಯುತ್ತಿದೆ. ಕಿಟ್ಟು, ಮನೆಯೊಳಗಿಂದ ಹೊರಬಂದು, ಆಕ್ಷಿತ್ಯ ನೋಡಿ ಒಳಹೊಗುತ್ತಿದ್ದಾನೆ. ಮನೆಯ ನಾಯಿ ಮಾರ್ಗದ ಬದಿಯಲ್ಲಿ ದಾರಿಹೋಕರನ್ನು ಕಂಡೊ ಏನೊ, ಬೊಗಳುತ್ತಿದೆ. ಏನು? ನನ್ನ ಸೋದರಮಾವನು ಎಲ್ಲಿಗೆ ತೆರಳಿದ್ದಾನೆ? ಇಲ್ಲ, ಅವನು ಅಲ್ಲಿಯೆ ಬರುತ್ತಿದ್ದಾನೆ. "ಮಾವಾ, ಊರಿಗೆ ಮರಳುವಾಗ, ನನಗೆ ಒಂದು ಬಣ್ಣದ ಬೀಸಣಿಗೆ ಕೊಡುತ್ತೀಯಲ್ಲ?" ಎಂದು ಕೇಳಿದೆನು. "ಯಾವ ಬೀಸಣಿಗೆ ಬೇಕಾದರೂ ಕೊಂಡುಹೋಗು, ಆದರೆ, ಅವರನ್ನು ಮಾತ್ರ ನೋಯಿಸಬೇಡ!" ಎಂದವನು ಮುಂದಕ್ಕೆ ನಡೆದನು.

ಮರುದಿನ ಮಧ್ಯಾಹ್ನದ ಊಟ ಮುಗಿದ ನಂತರ, ಎಲ್ಲವರೂ ಹೊರಚಾವಡಿಯಲ್ಲಿ ತಾಂಬೂಲಕ್ಕಾಗಿ ಸೇರಿದ್ದರು. ಸೋದರಮಾವನು ತಾಂಬೂಲಕ್ಕೆ ಸುಣ್ಣಾಬಳಿಯುವವನು ಫಕ್ಕನೆ, "ಈವತ್ತು ಕೋದಂಡನ ಜ್ಯೋತಿಷ್ಯವಾಗಬೇಕು" ಎಂದನು. ಕಿರಿಯ ಸೋದರಮಾವನು "ಹೌದು, ಆದಾಗಲೇ ಬೇಕು" ಎಂದು, ಒಳಗೆ ಏನೋ ತರಲಿಕ್ಕೆಂದು ನಡೆದೇಬಿಟ್ಟನು.

"ನನ್ನಿಂದಾಗದು, ನಾನದನ್ನು ಕಲಿತಿಲ್ಲ!" ಎಂಬುದು ನನ್ನ ದ್ವನಿಯ ವಿನಯದ ಮಾತು. "ಎಂದರೇನು? ನೀನು ಕಲಿಯಬೇಕಲ್ಲ, ಏನು ಹೇಳಿದರೂ ಅದು ಸರಿಯಾಗುತ್ತದೆ!"

ಇಷ್ಟರೊಳಗೆ ಕಿರಿಯ ಸೋದರಮಾವನು ಒಳಗಿಂದ ಬಂದು, ಒಂದು ಕೆಂಪು ಎಲನಸ್ತ್ರದಿಂದ ನನ್ನ ತಲೆಗೆ ರುಮಾಲನ್ನು ಕಟ್ಟಿದನು. ತನ್ನ ಶಾಲನ್ನು ನನ್ನ ಭುಜದ ಮೇಲಿಟ್ಟನು. ನಾನುಟ್ಟ ವಸ್ತ್ರದ ಮೇಲೆ ಇನ್ನೊಂದು ದೊಡ್ಡ ವಸ್ತ್ರವನ್ನು ಸುತ್ತಿ, ಪಂಜೆಕಚ್ಚೆಯುಟ್ಟ ಬ್ರಾಹ್ಮಣನನ್ನಾಗಿ ಮಾಡಿದರು. ಎಲ್ಲಿಂದಲೊ ಒಂದು ಯಜ್ಞೋಪವಿತವನ್ನು ತಂದು ಕೊರಳಿಗೆ ಹಾಕಿದರು. ಹಣೆಗೆ ಬೊಟ್ಟನ್ನಿಟ್ಟು ಕಸ್ತೂರಿಯನ್ನು ಎಳೆದರು. ಮಣೆಕೊಟ್ಟು ಕುಳ್ಳಿರೆಂದರು. ಇನ್ನೊಂದು ಮಣೆಯ ಮೇಲೆ ಒಂದು ಮುಷ್ಟಿ ಬೆಳ್ತಿಗೆ ಅಕ್ಕಿಯ ಕಾಳುಗಳನ್ನು ಸುರಿದರು. ಬಲಿಗಾಗಿ ಕೊಂಡೊಯ್ಯಲ್ಪಡುವ ಕುರಿ "ಆಗದು" ಎನ್ನಲಾಗುವುದಿಲ್ಲವಾದ್ದರಿಂದ ನಾನು ಮಣೆಯನ್ನು ಸ್ವೀಕರಿಸಿದೆನು.

ಯಾರೋ ಬಂದು ಬೆಳ್ಳಿಕಾಣಿಕೆಯನ್ನು ತಾಂಬೂಲದೊಡನೆ ತಂದಿಟ್ಟು ನಮಸ್ಕರಿಸಿ 'ಒಂದು ಪ್ರಶ್ನೆಯಿದೆ, ಉದಾಹರಣೆಯಾಗಬೇಕು' ಎಂದರು. ತುಂಬ ಜನಸ್ತೋಮವಿದೆ, ಹಿರಿಯರು ಕಿರಿಯರು, ಹೆಂಗುಸರು ಗಂಡುಸರು, ಮಕ್ಕಳು ಮರಿಗಳು—ಎಲ್ಲರೂ ಸೇರಿದ್ದಾರೆ. ನಾನೇನು ಉದಾಹರಣೆ ಕೊಡಬಲ್ಲೆ? ಕೊಟ್ಟ ಉದಾಹರಣೆ ಸತ್ಯವಾಗಬೇಕು. ಇಲ್ಲದಿದ್ದರೆ ನನ್ನ ಪಟ್ಟಣಕ್ಕೆ ಅವಮಾನವಾದಂತೆ! ಒಂದು ನಿಮಿಷ ಆಲೋಚನೆ ಮಾಡಿ,ಸತ್ಯಾಂಶವನ್ನು ತಿಳಿದಿದ್ದೇನೆ ಎಂಬ ಆ ಮನಸ್ಸಿನ ದಾಷ್ಯದಿಂದಲೆ, ಅಭಿಮಾನದಿಂದಲೆ ಹೇಳಿಬಿಟ್ಟೆನು:

"ನಷ್ಟಂ, ನಷ್ಟಮಿದಂ ಜಗತ್, ಕಳವಾಗಿದೆ—ಇನ್ನೂ ಕಳವು ನಡೆಯಬಹುದು!"

"ಏನು ಕಳವು?"

"ಅದು ಗುಟ್ಟಿನಲ್ಲಿ ನಡೆದದ್ದು, ಅಮೂಲ್ಯವಾದರೂ ಬಹಿರಂಗವಾಗಿ ಬೆಲೆ ಬಾಳುವುದಿಲ್ಲ."

"ಎಂದರೆ, ಇಂದಿನ ಬೆಳಿಗ್ಗೆ ನನ್ನ ಯಜ್ಞೋಪವೀತ ಕಡಿದಂತಿತ್ತು, ಅದೇನು?"

(೪೬ನೆಯ ಪುಟದಿಂದ ಮುಂದುವರಿದುದು.)

ಪಿತ್ರಾರ್ಜಿತವಿದ್ದರೆ ಅದರಂತೆ ಬರೆಯಬೇಕು. ಅವವುಗಳ ತೂಕ, ಅಳತೆ, ಈಗಿನ ಕಿಮ್ಮತ್ತು ಇವನ್ನೆಲ್ಲ ಬರೆಯಬೇಕು.

ಸ್ಥಿರ ಆಸ್ತಿ— ಸರ್ವೇಸಂಬರು, ಯಕರೆ, ಗುಂಠೆ, ಆಕಾರ, ಹೊಲ ಇರುವ ಊರು ಇವನ್ನೆಲ್ಲ ಬರೆಯುವುದಲ್ಲದೆ, ಹೊಲಗಳಲ್ಲಿ ಇದ್ದ ಗಿಡ, ಒಡ್ಡು, ಹಳ್ಳಗಳ ವಿವರಣೆ ಬರೆದಿಡಬೇಕು. ಇದರಂತೆ ಮನೆಯ ಬಗ್ಗೆಯೂ ಬರೆಯಬೇಕು.

ಪ್ರತಿವರುಷಕ್ಕೆ ಒಂದಾವರ್ತಿಯಾದರೂ ಮನೆಯ ಎಲ್ಲ ಜನರ ತೂಕಮಾಡಿ, ಟಿಪ್ಪಣಿ ಬರೆದಿಡಬೇಕು. ಶಕ್ಯವಿದ್ದಲ್ಲಿ ೧೦ ವರುಷಕ್ಕೆ ಒಂದು ಸಲವಾದರೂ ಭಾವಚಿತ್ರಗಳನ್ನು ತೆಗಿಸಿ ಇರಿಸಬೇಕು.

ಇದಲ್ಲದೆ ಹಿಂದಿನ ನಾಣ್ಯಗಳ ಸಂಗ್ರಹ,ಟಿಕೀಟುಗಳ ಸಂಗ್ರಹ ಹಳೆಯ ವಸ್ತುಗಳ ಸಂಗ್ರಹ, ಮಹಾಪುರುಷರ ಭಾವಚಿತ್ರಗಳ ಸಂಗ್ರಹ ಇವನ್ನೆಲ್ಲ ಮಾಡುವ ಚಟಗಳಿದ್ದವರು, ಅವುಗಳ ಬಗ್ಗೆ ಅಭ್ಯಸಿಸಿ, ಅವುಗಳ ಸಂಗ್ರಹವನ್ನು ಆಸ್ಥೆಯಿಂದಲೂ ವ್ಯವಸ್ಥೆಯಿಂದಲೂ ಕಾಯ್ದಿಡುವುದು ಮತ್ತು ಜೀವಕ್ಕಿಂತಲೂ ಹೆಚ್ಚು ಜೋಪಾನದಿಂದ ಕಾಯುವುದು. ಇವಕ್ಕೆ ಒಮ್ಮೊಮ್ಮೆ ಬಹಳವಾದ ಹೆಸರು ಅಥವಾ ಬೆಲೆ ದೊರೆಯುವ ಸಂಭವವಿರುವುದು.

" ಅಲ್ಲ. ಅದು ಇಲಿಯ-ಕೆಲಸ ! " ಎಂದು ನಾನೆಂದೆ.

" ಹೌದು, ಅದು ಪಟ್ಟಣದ ಇಲಿಯ ಪೋಕರಿ !" ಎಂದು ಗಮು ಹೇಳಿದನು; ಎಲ್ಲರೂ ಜೋ ಎಂದು ನಕ್ಕರು.

" ನಿನ್ನಿಯ ತಲೆಯ ಕೂದಲು ಕತ್ತರಿಸಿದೆ. ಅದು ಯಾವ ಇಲಿಯ ಕೆಲಸ ? " ಎಂದು ಕಿರಿಯ ಸೋದರತ್ತೆಯ ಪ್ರಶ್ನೆಯಿದು.

" ಇಲಿಗಳಲ್ಲಿ ನಾನಾ ಜಾತಿಗಳಿವೆ, ದೊಡ್ಡಿಲಿ ಸಣ್ಣಿಲಿ, ಅಕ್ಕಿಲಿ ಗಂಗಿಲಿ, ಅಣ್ಣಿಲಿ ತಮ್ಮಿಲಿ,— ಇವುಗಳಲ್ಲಿ ಒಂದಾಗಿರಬೇಕು, " ಎನ್ನುತ್ತ ಪುಟ್ಟಪ್ಪನ ಶಿಷ್ಯನು ಎದ್ದು ನೆಗಾಡಿಬಿಟ್ಟನು.

" ಕಳವು ಮಾಡಿದವನು ಹಿಂದೆ ಮುಂದೆ ನೋಡಿಯೆ ಮಾಡಿದ್ದಾನೆ " ಎಂದು ಜ್ಯೋತಿಷಿಯು ವಿಷಯವನ್ನು ತಿರುಗಿ ಪ್ರಸಂಗಕ್ಕೆ ತಂದನು.

ಸಭೆಯಲ್ಲಿ ಕುಳಿತ ಕಿಟ್ಟುವಿನ ಮುಖ ವಿವರ್ಣವಾಯಿತು; ಅವನೆದ್ದು ಹೊರಕ್ಕೆ ನಡೆದನು.

ಯಾರೂ ಮಾತೆತ್ತುವುದಿಲ್ಲ. ಪ್ರಸಂಗ ಮುನ್ನಡೆಯುವುದಿಲ್ಲ.

" ತಮಾಷೆಗಾಗಿಯೆ ಇರಬಹುದು! " ಎಂದು ಪುನಃ ಉದಾಕರನೆ. ಸಭೆಯ ಮಧ್ಯದಲ್ಲಿದ್ದ ಗುಮ್ಮಾಳಿ ಲಿಲ್ಲಿಯು, " ಅಕ್ಕನ ಕಣ್ಣಿನ ಕಾಡಿಗೆಯು ರೇಖೆ ಕಳವಾಗಿದೆಯಂತೆ" ಎಂದು ನಗುತ್ತ ಸುತಿಯ ಗಂಡನ ಕಡೆಗೆ ನೋಡಿದಳು. ಎಲ್ಲವರ ಕಣ್ಣುಗಳೂ ಓಡನೆಯೆ ಆತನ ಕಡೆಗೆ ಉರುಳಿದುವು. ಆತನು ತನ್ನ ಮುಖಕಮಲವನ್ನು ಎತ್ತುವಾಗ, ಸುತಿಯೂ ಕಡೆಗಣ್ಣಿಂದ ಆತನನ್ನೇ ನೋಡುತ್ತಿದ್ದಳು. ಎಲ್ಲವರ ತುಟಿಗಳಲ್ಲಿ ಕಿರುನಗೆ! ಸುತಿಯು ಮಾತ್ರ ಮಾತೆತ್ತಳು.

" ಹಾಗಲ್ಲದಿದ್ದರೂ, ಹೊಟ್ಟೆಯ ಸಾಡಿಗಾಗಿಯೂ ಇರಬಹುದು! " ಇದು ಜ್ಯೋತಿಷಿಯ ಹೊಸಸಿದ್ಧಾಂತ.

ಸಭೆಯ ಹಿಂಬದಿಯಲ್ಲಿದ್ದ ದೇವಕಿಯು, ಕೆಮ್ಮು ಮೇಲಿಂದ ಮೇಲೆ ಬಂದವಳಾಗಿ " ಅಮ್ಮಮ್ಮಾ " ಎಂದು ಹೊರತೆರಳಿದಳು.

" ಕದ್ದವನು ಯಾರೆಂದಿಲ್ಲವೆ? " ಎಂದು ಕಿರಿಯ ಸೋದರ ಮಾವನು ತೃಪ್ತನಾಗದೆ ಕೇಳಿಯೆ ಬಿಟ್ಟನು.

ಇಷ್ಟರೊಳಗೆ ಊರ ಪಠೇಲರು ಏನೋ ಕೆಲಸದ ನಿಮಿತ್ತವಾಗಿ ಬಂದುದರಿಂದ, ನಮ್ಮ ಜ್ಯೋತಿಷ್ಯದ ತಮಾಷೆ ಮುಗಿಯಿತು.

ನನ್ನ ವೇಷಪನ್ನೆಲ್ಲ ಕಳಚಿ, ಸ್ವತಂತ್ರನಾಗಿ ಬಿಟ್ಟು ನಾನು ಹಿತ್ತಿಲಿಗೆ ಓಡಿದೆನು. ಅಲ್ಲಿ ಕಿಟ್ಟು ನಾನಿದ್ದಡೆಗೆ ಬಂದು " ಹೌದು, ಕೋದಂಡಾ, ನಾನು ಕದ್ದದ್ದೆಂದು ನಿನಗೆ ಹೇಗೆ ತಿಳಿಯಿತು ? " ಎಂದು ಕೇಳಿದನು.

" ನೀನೇನು ಕದ್ದೆ ?" ಎಂದೆ.

" ಮುದುಮಗನಿಗೆಂದು ಮಾಡಿದ ಮಿರಾಯಿ ಎಲ್ಲಾ !"

" ಎಲ್ಲಾ ನೀನೊಬ್ಬನೆ ತಿಂದೆಯಾ? ನನ್ನನ್ನು ಕರೆಯಬಹುದಿತ್ತಲ್ಲ! "

" ಕರೆಯಲಿಕ್ಕೆ ನೀನೆಲ್ಲಿದ್ದೆ? ಸಿಕ್ಕಿದ ಸಮಯ ಎಂದು ಲಗಾಯಿಸಿ ಬಿಟ್ಟೆ! "

" ಮಿರಾಯಿ ಕಳ್ಳಾ ! "

" ನನ್ನ ಹೆಸರು ನೀನು ಹೇಳಿದೆಯೇನು ? "

ಸವಿಾಪದಲ್ಲಿಯೆ, ಬಚ್ಚಲು ಕೊಟ್ಟಿಗೆಯ ಹತ್ತಿರ ಯಾರೋ ಕೇಳುವಂತೆ ತೋರಿತು. ನೋಡುವಾಗ, ಆಡುಗೆಯ ಹೆಂಗುಸು ದೇವಕಿ, ಕಿಟಕಿಯಿಂದ ನಮ್ಮ ಮಾತುಗಳನ್ನೆ ಕದಿಯುತ್ತಾಳೆ. ಕಿಟ್ಟು ಪರಾರಿಯಾದನು (ಓಡಿದನು). " ಕೋದಂಡಾ, ನಿನಗೆಲ್ಲ ಭವಿಷ್ಯಗೊತ್ತಾಗ್ತದೆ. ನೋಡು, ನನ್ನ ಕೈ ನೋಡಿ ಹೇಳ್ತೀಯಾ? ನನ್ನ ಮಗ ಈಗ ಏನು ಮಾಡ್ತಾನೆಯೆಂದು? " ಹೀಗೆಂದು ದೇವಕಿ ಕೇಳಿದಳು.

" ನಿನ್ನ ಎಡಗೈ ನೋಡಿದರೆ, ನಿನ್ನ ಮಗನ ವಿಚಾರ ತಿಳ್ಯೋದಿಲ್ಲ ದೇವಕಿ ! " ಎಂದೆ.

" ಹಾಗಾದರೆ, ಬಲಗೈ ನೋಡು. ಇನ್ನಾದರೂ ಬಳ್ಳಿ ಬುದ್ಧಿ ತುಂಬಿ, ಬಂದೀಖಾನೆಗೆ ಹೋಗಲಾರನಲ್ಲವೆ? ಇದೇ ನನ್ನ ಅವಸ್ಥೆಯೆ ! "

" ಎಂದರೆ ಅವನು ಕದಿಯುತ್ತಾನೆಯೆ ? "

" ಹೌದು, ಕಳೆದ ವರ್ಷ ಪಠೇಲರಲ್ಲಿ ಒಂದು ಕೊಡೆ ಕದ್ದಿದ್ದ. ಬಂಗಾರದ ಸರಪಣಿ ಹೋದಾಗ, ಅವನನ್ನು ಹಿಡಿದು ಕಣ್ಣಾನೂರಿಗೆ ಕಳ್ಸಿದರು. ಕದಿಯಬೇಡ ಎಂದರೆ ' ನೀನು ಕದಿಯುವುದಿಲ್ಲವೆ ?' ಎಂದು ನನಗೆ ಸವಾಲು ಮಾಡುತ್ತಾನೆ. "

" ನೀನೂ ಕದ್ದೆಯಾ ? ದೇವಕಿ ! ನೀನು ಹೆಂಗುಸು "

" ನೀನು ಆಗ ಹೇಳಿದಂತೆ ಹೊಟ್ಟೆಪಾಡಿಗಾಗಿ ಕದಿಯುವುದು. ನಾನು ದುಡಿಯುವಾಗ—ಕದ್ದಾಗಲಿ. ಬೇಡಿಯಾಗಲಿ—ಇವನೇಕೆ ದುಡುಕಬೇಕು ? ನೀನೇ ನೋಡು. ಹೌದು, ಕೋದಂಡಾ, ನೀನು ನನ್ನ ಹೆಸರು ಹೇಳಿದೆಯಾ? ನಾನು ತೆಗ್ದದ್ದನ್ನು ಅಲ್ಲೇ ಬಿಸಾಡಿದ್ದೇನೆ "

" ಏನು ತೆಗೆದೆ, ನೀನು ? "

" ಒಂದೆಂಡು ಸೇರು ತೊಗರಿ ಬೇಳೆ, ನಾಲ್ಕೈದು ಸೇರು ಉಪ್ಪು, ಸ್ವಲ್ಪ ಹುಣಿಸೆ— ಅಲ್ಲೇ ಅವುಗಳನ್ನು, ಅಲ್ಲೇ ಬಿಸುಡಿದ್ದೇನೆ—ಜಗಲೇ ! "

" ಸುರಭೀ ವೈಷ್ಣವೀ ಮೂತಾ ಪ್ರಾಣಿನಾಂ ಹಿತಕಾರಿಣೀ.. " ಪುರೋಹಿತರು ಬರುತ್ತಿದ್ದಾರೆ!

" ಏನು ಮಾಡ್ತಿ, ಕೋದಂಡಾ, ಅಲ್ಲಿ ! "

" ಏನಿಲ್ಲ; ದೇವಕಿಯ ಕೈ ನೋಡ್ತೇನೆ! "

" ನಿನ್ನಷ್ಟೆ ಚಮತ್ಕಾರ ಇರಲಿಕ್ಕಿಲ್ಲ ಅವಳ ಕೈಗೆ. ಪಟ್ಟಣದಿಂದ ಬಂದು, ಇಂದ್ರಜಾಲ ಮಹೇಂದ್ರಜಾಲ ಮಾಡ್ತೇನೆಂದು ಕೊಚ್ಚಿ, ಜಕ್ಕುಲಿ ಉಂಡೆಗಳನ್ನು ಕದ್ದುತಿಂದರೆ, ಇಲ್ಲೇನು ಮದ್ದು ಕೊಡಲಿಕ್ಕೆ ಶಾಸ್ತ್ರಿಗಳು ಇದ್ದಾರೆಂದು ಎಣಸಿದೆಯಾ ? ಇಲ್ಲಿರುವುದು ಕ್ವಿನೀನು...." ಎಂದು ಆಸಂಬದ್ಧವಾಗಿಯೆ ಎಂಬಂತೆ ನುಡಿದರು ಪುರೋಹಿತರು. ಹಿರಿಯ ಮಾವನು ಬಂದು " ಪುರೋಹಿತರ ಜ್ಯೋತಿಷ್ಯ, ಹಳ್ಳಿಯ ಜ್ಯೋತಿಷ್ಯ—ಅದು ಸುಳ್ಳಾಗದು! " ಎಂದರು. ಕಿರಿಯ ಮಾವನು ಬಂದು " ಕಳ್ಳನ ಪತ್ತೆಯಾಯಿತು. ನಾಳೆ, ಡಾಕ್ಟ್ರು—ಜಡ್ಜರ ವಿಚಾರಣೆಯಿರಬಹುದು " ಎಂದರು.

ಲಿಲ್ಲಿಯು ಬಂದು ನನ್ನ ಕಿವಿಯಲ್ಲಿ, " ಸುತಿಯ ಗಂಡನಿಗೆ ಕೈಗೆ ಕಬ್ಬಿಣದ ಬಳೆ ಹಾಕಿದ್ದಾರೆ. ಕಳವು ಪತ್ತೆಮಾಡಿದ್ದಕ್ಕೆ ನಿನಗೆ ಇನಾಮು! " ಎಂದು ನನಗೆ ಬಣ್ಣದ ಬೀಸಣಿಗೆಯೊಂದನ್ನು ಕೊಟ್ಟಳು.

ದೇಹದ ಸೌಂದರ್ಯಕ್ಕೆ

ಉಡುಪಿನ ಮುಡುಪು!

★

"ಹೊತ್ತು ಹೊತ್ತಿಗೆ ಹೊಸಪರಿಯ ಸಿಂಗರಬೇಕು
ಉತ್ತಮ ಸುಖಿಗಳಂಗವಿದು!"

—ರತ್ನಾಕರವರ್ಣಿ

ನಿಸರ್ಗಸಿದ್ಧವಾದ ಸೃಷ್ಟಿಸೌಂದರ್ಯವನ್ನು ಮನಸೋಕ್ತವಾಗಿ ಉಪಭೋಗಿಸುವವರಾದ ಭಾರತೀಯರ ಜೀವನವು, ಇಂದು ಇಷ್ಟೊಂದು ನಿರಾಶಾಜನಕವಾಗಿರುವುದಕ್ಕೆ, ಬಡತನದ ಮೂಲಕ ಉಂಟಾದ ಅವರಲ್ಲಿಯ ಸೌಂದರ್ಯಸವಿಾಕ್ಷಣ ಶಕ್ತಿಯ ಅಭಾವವೂ ಒಂದು ಕಾರಣ. ಇಂದಿನ ವರೆಗಿನ ನಮ್ಮ ಪರಂಪರೆಯನ್ನು ನೋಡಿದರೆ, ಯಾವ ಮಾತನ್ನೂ ನಾವು ಪಾರಮಾರ್ಥಿಕ ಸುಖದ ವರೆಗಲ್ಲಿಗೇ ತಿಕ್ಕಿ ನೋಡುವವರು ಎಂಬ ಮಾತು ತಾನೆತಾನಾಗಿ ವ್ಯಕ್ತವಾಗುವುದು. "ಐಹಿಕ ಸುಖಭೋಗವೆಲ್ಲ ತುಚ್ಛ; ಅದನ್ನು ತ್ಯಾಗಮಾಡುವದೇ ಶ್ರೇಷ್ಠ" ಎಂಬ ಕಲ್ಪನೆ ನಮ್ಮ ನರನರಗಳಲ್ಲಿ ಭೇದಿಸಿದೆ. ಒಂದು ದೃಷ್ಟಿಯಿಂದ ಈ ಮಾತು ನಿಜವೆಂದು ತೀರಿದರೂ, ಅದು ಏಂಥ ಅಡಚಣಿಯ ಅನೇಕ ಸಂಗತಿಗಳನ್ನು ನಾವು ಮುಂತರು ಗಣಿಸುವುದಿಲ್ಲ. ತ್ಯಾಗವಿಯು ಶ್ರೇಷ್ಠವೆಂದು ಒಪ್ಪಿದರೂ ಆ ವ್ಯಕ್ತಿಯು ಕ್ರಿಯಾಶಕ್ತಿಯು ಏನ್ನೆಲೆ ಅವನ ತ್ಯಾಗಕ್ಕೆ ಬೆಲೆ ತರುತ್ತಿರುತ್ತದೆ. ತ್ಯಾಗದಲ್ಲಿಯೂ ಎರಡೊಂದು ಬಗೆ. ಭೋಗ್ಯವಸ್ತುವನ್ನು ದೊರಕಿಸಿ, ಅವನ್ನು ತನ್ನ ಇಷ್ಟೆಯಂತೆ ಉಪಭೋಗ ಮಾಡುವ ಶಕ್ತಿ ಇದ್ದರೂ ಅದನ್ನು ತುಚ್ಛವೆಂದು ಒದೆದು ಚೆಲ್ಲುವ ತ್ಯಾಗ ಒಂದಿದ್ದರೆ, ಯಾವುದೇ ಬಗೆಯ ಭೋಗ್ಯವಸ್ತುವನ್ನೂ ದೊರಕಿಸುವ ಶಕ್ತಿ ಇಲ್ಲದೆ, ಅನಿವಾರ್ಯವಾಗಿ ಮಾಡುವ ತ್ಯಾಗ ಇನ್ನೊಂದಿದೆ. ಈ ಎರಡನೆಯ ಬಗೆಯ ತ್ಯಾಗದಿಂದ ನಮ್ಮಲ್ಲಿ ಬೆಳೆದುನಿಂತಿದೆ ಎಂಬ ಮಾತನ್ನು—ಕೊಂಚ ಬಣಹೆಮ್ಮೆಯನ್ನು ಬದಿಗಿಟ್ಟು ವಿಚಾರಿಸಿದ ಯಾವ ಸುಜ್ಞನೂ—ಒಪ್ಪತಕ್ಕುದಾಗಿದೆ. ಇಲ್ಲಿ ಒಂದು ಮಾತನ್ನು ನಾವು ಮರೆಯಕೂಡದು ಸಾಗುವಂತಿಲ್ಲ. ಈ ರೀತಿಯ ನಿರಾಶಾಜನಕ ಜೀವನವನ್ನು ಸಾಗಿಸುವ ಪರಿಸ್ಥಿತಿ ನಮಗೆ ಬಂದಿದ್ದರೂ, ಅದಕ್ಕಾಗಿ ನಮ್ಮ ಸನಾತನ ಹಿಂದೂಧರ್ಮವನ್ನಾಗಲಿ, ನಮ್ಮ ಪೂರ್ವಜರನ್ನಾಗಲಿ ಹೊಣೆಗಾರರೆಂದು ಹಿಡಿಯಬರುವುದಿಲ್ಲ. ನಮ್ಮ ಧರ್ಮಶಾಸ್ತ್ರಗಳು ಪ್ರವೃತ್ತಿಪರ, ಉತ್ಸಾಹಪೂರ್ಣ ಉಪದೇಶವನ್ನೇ ಮಾಡಿವೆಯಲ್ಲದೆ, ನಮ್ಮ ಐಹಿಕ-ಜೀವನದಲ್ಲಿ ನಿವೃತ್ತಿಪರವಾರ್ಗವನ್ನೇ ಹೆಚ್ಚಾಗಿ ಎತ್ತಿ ಎಂದೂ ಹಿಡಿದಿಲ್ಲ. ಈ ಮಾತನ್ನು ನಮ್ಮ ಮೂಲಗ್ರಂಥಗಳಿಂದ ಬೇಕಾದ ಹಾಗೆ ಸ್ಪಷ್ಟಪಡಿಸಿಕೊಳ್ಳಬಹುದು.

ಭಗವಾನ್ ಬುದ್ಧನ ನಿವೃತ್ತಿಮಾರ್ಗದ ಬೋಧನೆಯಿಂದ ಹಿಡಿದುಕೊಂಡು, ಮುಂದಿನ ಕಾಲದ ಎಲ್ಲ ಮತಾಚಾರ್ಯರ

ಸೌಂದರ್ಯಗಳಲ್ಲಿ ಎರಡು ಜಾತಿ. ಒಂದು ವಾಸ್ತವಸೌಂದರ್ಯ ಇನ್ನೊಂದು ಆದರ್ಶ ಸೌಂದರ್ಯ. ಮೊದಲನೆಯದು ಮಾನವ ಜೀವನದಲ್ಲಿ ಒಂದು ಸಂಯಮವನ್ನು ಒದವಿಸಿ, ವ್ಯವಹಾರದಲ್ಲಿ ಶಾಂತಿಯನ್ನು ತಂದೊಡ್ಡುವುದು, ಎರಡನೆಯದು ಸಂಸ್ಕೃತಿಜೀವನವನ್ನು ಹದಗೊಳಿಸಿ, ಮಾನವನ ಆತ್ಮವನ್ನು ಪರಿಪಕ್ವಗೊಳಿಸುವುದು.

ಶ್ರೀ. ಹಳಪೇಟಿ ಚಿಂತಾಮಣಿರಾಯರು

ಭೌತಿಕಸುಖದ ಅನಿಶ್ಚಿತತೆಯ ಕಲ್ಪನೆಯಿಂದಲೂ, ರಾಜಕೀಯ ಪರತಂತ್ರತೆಯಿಂದಲೂ ನಮ್ಮ ಒಲವು ಔದಾಸೀನ್ಯದ ಕಡೆಗೆ ಜಾಗಿತು. ಮಹಮ್ಮದೀಯರ ಆಳಿಕೆಯ ಕಾಲದಲ್ಲಂತೂ ನಮ್ಮ ಈ ಔದಾಸೀನ್ಯವು ಶಿಖರವನ್ನೇ ಕಂಡಿತು. ಅಲ್ಲಿಂದೀಚೆಗೆ ಅನೇಕ ಆಘಾತಗಳ ಪರಿಣಾಮದಿಂದಾಗಿ ನಮ್ಮ ಜೀವನವು ಮತ್ತೆ ಪ್ರವೃತ್ತಿಯ ಮಾರ್ಗವನ್ನು ಹಿಡಿದಿದೆ. ಕಲಾಮಯ ಜೀವನದ ಕಲ್ಪನೆಯನ್ನು ತಂದುಕೊಟ್ಟ ಸ್ವಾಮಿ ವಿವೇಕಾನಂದರಂತಹ ವಿಭೂತಿಗಳಿಂದ ನವಚೈತನ್ಯಪಡೆದು, ಉತ್ಸಾಹಪೂರ್ಣ ಜೀವನದತ್ತ ದಾರಿಹಿಡಿದಿದೆ. "ಕಲಾಮಯ ಜೀವನದ ನಿರ್ಮಲ ಆನಂದದ ಅನುಭವದಿಂದಲೇ ಪಾರಮಾರ್ಥಿಕ ಜೀವನಕ್ಕೆ ಬೇಕಾಗುವ ಮನದ ಪ್ರಸನ್ನತೆಯು ಸಾಧ್ಯ" ಎಂಬ ಮಾತನ್ನು ಅವರು ಜಗತ್ತಿಗೆ ಸಾರಿ ಹೇಳಿದ್ದಾರೆ; ಹೀಗೆ ಸಾರಿ, ಮಾನವನ ಸೌಂದರ್ಯಪ್ರೀತಿಗೆ ಕಳೆಕೊಟ್ಟಿದ್ದಾರೆ.

ಹಾಗೆ ನೋಡಿದರೆ ಮಾನವನು ಸ್ವಭಾವತಃ ಸೌಂದರ್ಯಪ್ರಿಯನು. ತಾನು ವನಚರನಿದ್ದಾಗಲೇ ಸೃಷ್ಟಿಶೋಭೆಗೆ ಮನಸೋತಿದ್ದ. ವನದಲ್ಲಿಯ ನವಿಲಿನ ಚೆದರಿದ ಗರಿಗಳ ಸೌಂದರ್ಯಕ್ಕೆ ಮುಗ್ಧನಾಗಿ, ತಾನೂ ಅದರ ಅನುಕರಣಮಾಡುತ್ತ ನವಿಲುಗರಿಗಳಿಂದಲೋ ಪತ್ರಪುಷ್ಪಗಳಿಂದಲೋ ತನ್ನನ್ನು ಸಿಂಗರಿಸಿಕೊಳ್ಳುತ್ತಲಿದ್ದ. ಕೋಕಿಲೆಯ ಕಂಠಸ್ವರಕ್ಕೆ ತನ್ನ ಕವಿಗಳನ್ನಿತ್ತಿದ್ದ. ಭಾರದಿಂದ ಬಳುಕುತ್ತಲಿದ್ದ ಮರಗಳ ಫಲಗಳಿಗೆ ತನ್ನ ನಾಲಗೆಯನ್ನು ಚಾಚಿದ್ದ. ಸೃಷ್ಟಿಯ ವಿವಿಧರೀತಿಯ ರಮಣೀಯ ದೃಶ್ಯಗಳನ್ನು ಬಿಡುಗಣ್ಣಿನಿಂದ ನೋಡುತ್ತಿದ್ದ. ಹೀಗೆಯೇ ಅನೇಕ ವಿಧವಾದ ಇಂದ್ರಿಯಗಮ್ಯ ಸೌಂದರ್ಯದ ಆಸ್ವಾದನದ ಆನಂದದಲ್ಲಿಯೇ ಧನ್ಯತೆಯ ಜೀವನ ಸಾಗಿಸಿದ್ದ. ಬರುಬರುತ್ತ ಅತ್ಯಪ್ಪ ಜೀವನದ ಆಕಾಂಕ್ಷೆಗೆ ಸುಸರಿಸಿ, ನಿಸರ್ಗದ ಅನುಕರಣದಿಂದಲೆ ಸಾಗಿ, ನಿಸರ್ಗದ ಮೇಲೆಯೇ ಪ್ರಭುತ್ವವನ್ನು ಪಡೆಯುವುದಕ್ಕಾಗಿ ತನ್ನ ಈ ಸೌಂದರ್ಯಸವಿಾಕ್ಷಣಶಕ್ತಿಯನ್ನು ಮನುಷ್ಯ ಊರುಗೋಲನ್ನಾಗಿ ಮಾಡಿಕೊಂಡ.

ಅದೇನೆ ಇರಲಿ, ಸೌಂದರ್ಯದ ಕಲ್ಪನೆಯ ವಿಶಾಲವಾದ ಕ್ಷೇತ್ರವನ್ನೆಲ್ಲ ಬಿಟ್ಟು, ಮನುಷ್ಯ ತನ್ನ ದೇಹಸೌಂದರ್ಯವನ್ನೆ

ಯಾವರೀತಿಯಲ್ಲಿ ಮಾರ್ಪಾಡುಗೊಳಿಸುತ್ತ ಸಾಗಿದ್ದಾನೆಂಬು ದನ್ನು ನೋಡೋಣ.

ಒಂದೊಂದು ದೇಶದ ಜನಾಂಗಗಳ ದೇಹಸೌಂದರ್ಯದ ಕಲ್ಪನೆ ಒಂದೊಂದು ತೆರನಾದದ್ದಿದೆ. ತೀರ ಪ್ರಾಚೀನಕಾಲದಿಂದ ಇಂದಿನ ವರೆಗೂ ನೋಡಬೇಕೆಂದರೆ, ಒಂದೊಂದು ಸಾಮ್ರಾಜ್ಯದ ಉಯಾಕಾಲದ ಶಿಲ್ಪಿಗಳನ್ನು ಮೊರೆಹೋಗಬೇಕಾಗುವುದು. ಗಿನ ಕಾಲದ ಚಿತ್ರಕಲೆಯು ಕಲ್ಲಿನಲ್ಲಿ ರೂಪುಗೊಂಡಿದ್ದುದು ಸಮ್ಮ ಸುದೈವವೆಂದೇ ಹೇಳಬೇಕು. ಇಂದಿಗೂ ನಾವು ಅವು ಗಳನ್ನು ಅಚ್ಚಳಿಯದಿರುವುದನ್ನು ನೋಡಬಹುದು; ಇಲ್ಲವೇ ಅವುಗಳ ಅವಶೇಷಗಳಿಂದ ಕಲ್ಪನೆಯನ್ನಾದರೂ ಮಾಡಿಕೊಳ್ಳ ಬಹುದಾಗಿದೆ. ಈ ವಿಚಾರದಲ್ಲಾದರೂ ತೊಂದರೆ ಇಲ್ಲದೆ ಇಲ್ಲ. ಒಂದು ವ್ಯಕ್ತಿಯ ಮೂರ್ತಿಯನ್ನು ಕಡೆಯುವ ಶಿಲ್ಪಿಯು, ಇದ್ದು ದ್ದಂತೆಯೇ ಇರಿಸದೆ ತನ್ನ ಜಾಣ್ಮೆಯನ್ನೇ ಹೆಚ್ಚಾಗಿ ತೋರಿಸುವ ಹವ್ಯಾಸಕ್ಕೆ ಬಿದ್ದಿದ್ದಾನೆ. ಆದರೂ ಸಹಜತೆಯನ್ನು ಹೊಂದಿಕೊಂಡ ಪುರಾತನ ಮೂರ್ತಿಗಳು ಗ್ರೀಸ್‌ದೇಶದಲ್ಲಿ ಸಿಕ್ಕುತ್ತಿವೆ. ಸೂರ್ಯನ ಮಗನಾದ **ಅಪೊಲೋನ** ದೇಹಸೌಂದರ್ಯ ವಲ್ಲರೀತಿಯಿಂದಲೂ ಆದರ್ಶವೆಂದು ಅಲ್ಲಿ ತಿಳಿಯಲಾಗುತ್ತಿದೆ. ಪ್ರೇಮದ ಅಧಿದೇವತೆ ಎಂದು ತಿಳಿದ **ವೀನಸಳ** ದೇಹಸೌಂದರ್ಯ ಸ್ತ್ರೀಸೌಂದರ್ಯಕ್ಕೆ ಆದರ್ಶವಾಗಿದೆ. ನಮ್ಮಲ್ಲಿಯ ಹಸ್ತಿನಿ, ಚಿತ್ರಿಣಿ ಮೊದಲಾದ ಸ್ತ್ರೀಜಾತಿಗಳಂತೆ ಅಲ್ಲಿಯಾದರೂ ಇದ್ದುದು, **ಡಯಾನಾ** (ಭಿಲ್ಲಿಣಿ), **ಜುನೋ**, **ಹಿರೋ**, **ಸಾಯ್‌ಕೆ** ಮೊದಲಾದ ಮೂರ್ತಿಗಳಿಂದ ಸ್ಪಷ್ಟವಾಗಿ ಸಿಕ್ಕುತ್ತದೆ.

ನಮ್ಮ ಭಾರತದಲ್ಲಿ ಮಾತ್ರ ಈ ಬಗೆಯ ಆಧಾರಗಳು ಸಿಕ್ಕುವುದು ಕಡಿಮೆ. ನಮ್ಮವರ ದೇಹಸೌಂದರ್ಯದ ಕಲ್ಪನೆಯನ್ನು ಕಾಣ ಬೇಕೆಂದರೆ ಸೌಂದರ್ಯವನ್ನು ಬಣ್ಣಿಸುವ ಕವಿಗಳನ್ನೂ ಮೂರ್ತಿ-ಮುತ್ತಾಗಿ ಎದುರಿಗಿಡುವ ಶಿಲ್ಪಿಗಳನ್ನೂ ಬೆನ್ನುಹತ್ತಬೇಕು. ಇಬ್ಬರನ್ನೂ ಅನುಸರಿಸಿದರೂ ಸಮಾಧಾನಕಾರಕ ಉತ್ತರ ಸಿಕ್ಕುವುದು ಕಷ್ಟವೇ. ಶಿಲ್ಪಿಗಳ ಕೆತ್ತನೆಯ ಕೆಲಸ ಜಾಣ್ಮೆಯುಳ್ಳ ದ್ದಿದ್ದರೂ, ಅವರ ಕುಸುರಿನ ಕೆಲಸ ಜಗತ್ತನ್ನೇ ದಂಗುಬಡಿಸು ವಂತಿದ್ದರೂ, ದೇಹಸೌಂದರ್ಯದ ಪ್ರದರ್ಶನದಲ್ಲಿ ಅವರ ಕಲ್ಪನೆ ಸಹಜತೆಗೆ ಹೊಂದಿಕೊಂಡಂತಿಲ್ಲ. ಅವರು ಕೆತ್ತಿದ ಕುಂಭಕುಚ, ಸಿಂಹಕಟಿ ಮೊದಲಾದುವು, ಪ್ರತ್ಯಕ್ಷವಾಗಿ ಕಾಣಲು ಸಾಧ್ಯವೇ?—ಎನ್ನುವಷ್ಟು ಸಹಜತೆಯಿಂದ ದೂರಕ್ಕಿವೆ. ಕವಿಗಳನ್ನು ಬೆನ್ನು ಹತ್ತಿದರೂ ಒಂದು ಆದರ್ಶಸೌಂದರ್ಯದ ಸಹಜಶರೀರ ನಮ್ಮೆದುರು ನಿಲ್ಲುವಂತಿಲ್ಲ. ಅವರ ಬಣ್ಣನೆಯಲ್ಲಿಯ ಶಬ್ದ-ಸೌಂದರ್ಯವನ್ನು ತೆಗೆದುಬಿಟ್ಟರೆ—ಶಾಮವರ್ಣ, ಚಂದ್ರಮುಖ, ಕಮಲನೇತ್ರಗಳಲ್ಲಿಯ ಉಪಮಾನ ಪದಗಳನ್ನು ತೆಗೆದು ಬಿಟ್ಟರೆ ಪ್ರತ್ಯಕ್ಷ ಮೂರ್ತಿಯನ್ನು ಕಣ್ಣಿದುರು ತರುವ ಬಗೆ ಹೇಗೋ? 'ಕಾಮನಾಗಿದ್ದಾನೆ' ಎಂಬ ವಾಕ್ಪ್ರಚಾರವನ್ನು ನೋಡಿದರೂ ಇದೇ ರೀತಿ. ಕಾಮನು ಅನಂಗ; ಮೇಲಾಗಿ ಅವನು ಜೀವಿಸಿರುವ ಸಂಗಾದರೂ ದೇಹದಿಂದ ಅವನು ಸುಂದರನಿದ್ದನೆಂಬ ಕಲ್ಪನೆಗೆ ಎಂಬಲವಿಲ್ಲ. ಸ್ತ್ರೀಸೌಂದರ್ಯಕ್ಕೆ ರತಿಯದಾಗಲಿ, ಗೌರಿಯ ದಾಗಲಿ ಉಪಮೆ ಸಿಕ್ಕುವುದು, ಆಯಾವ್ಯಕ್ತಿಗಳ ಸೌಂದರ್ಯವನ್ನು ಕಂಡಾಗಲೇ. ಒರೆಗೆ ಹಚ್ಚಿ ನೋಡುವುದಕ್ಕೆ ಗೌರಿಯದಾಗಲಿ, ರತಿಯದಾಗಲಿ ಮೂರ್ತಿ ನಮಗೆ ಸಿಕ್ಕುವಂತಿಲ್ಲ. ಒಟ್ಟಾರೆ ದೇಹಸೌಂದರ್ಯದ ಕಲ್ಪನೆಗಿಂತ ಕಲ್ಪನಾಮಯ ದೇಹ-ಸೌಂದರ್ಯವೇ ನಮ್ಮಲ್ಲಿ ಹೆಚ್ಚಾಗಿ ಕಂಡುಬರುವಂತಿದೆ. ಚೀನಾ ದೇಶದಲ್ಲಿಯಂತೂ ದೇಹಸೌಂದರ್ಯದ ಕಲ್ಪನೆ ಇನ್ನೂ ವಿಚಿತ್ರ.

ಈ ರೀತಿ ದೇಹಸೌಂದರ್ಯದ ಕಲ್ಪನೆ ಬೇರೆ ಬೇರೆ ಇದ್ದಂತೆಯೇ ಅವುಗಳ ಉಡುಪು-ತೊಡಪುಗಳ ವಿಷಯದಲ್ಲಿಯೂ ತೀರ ಭಿನ್ನ ಭಿನ್ನ ಕಲ್ಪನೆಗಳು ಬೆಳೆದುಬಂದಿವೆ. ವಿವಿಧ ಅನುಕೂಲತೆಗಳಿಂದ ಜನಾಂಗಗಳಲ್ಲಿ ಪರಸ್ಪರ ಬಳಕೆ ಹೆಚ್ಚಾದಂತೆ, ಉಡುಪುತೊಡಪು ಗಳಲ್ಲಿ ಸಾಮ್ಯತೆ ಬರಹತ್ತಿದೆ. ನೈಸರ್ಗಿಕವಾಗಿ ದೇಹರಚನೆ ಬೇರೆ ಇದ್ದರೂ, ಅದೆಲ್ಲವನ್ನೂ ತುಸುಮಟ್ಟಿಗಾದರೂ ಮರೆಮಾಡಿ ಏಕರೂಪತೆಯನ್ನು ತರುವುದಕ್ಕಾಗಿ, ಇಂದಿನ ಜೀವನದಲ್ಲಿ ಉಡುಪು ಅತ್ಯಂತ ಉಪಕಾರಿಯಾಗಿದೆ. ಸಂಪ್ರದಾಯದ ಸಂಕೋಲೆಯನ್ನು ಹರಿದೊಗೆದು ಅನೇಕ ಜನಾಂಗಗಳು ಉಡುಪಿನ ಈ ಶಕ್ತಿಗೆ ಮೊರೆಹೊಕ್ಕಿವೆ. ಭಾರತದಲ್ಲಿ ಇಂದು ಆರ್ಥಿಕ ಅನಾನುಕೂಲತೆ, ರಾಜಕೀಯ ಪಾರತಂತ್ರ್ಯಗಳಿದ್ದರೂ, ಜನರು ಅವುಗಳಿಂದ ಪಾರಾಗಿ ಸುಖಮಯ ಜೀವನದ ಆಶೆಹಿಡಿದು ಸಾಗಿರುವುದರಿಂದ, ಅದಕ್ಕನು ಗುಣವಾಗಿ ಅವರ ನಡತೆಯಿರುವುದು ಅತ್ಯವಶ್ಯ. ಸಮಾಜದಲ್ಲಿ ಸುಪ್ರಸನ್ನತೆ ಬೆಳೆದು, ಸಹಜಸೌಂದರ್ಯದ ನಿರ್ಮಲ ಆನಂದದ ಅನುಭವದಲ್ಲಿಯೇ ನಮ್ಮ ಇಷ್ಟದಂತೆ, ಪರಂಪರೆಯಂತೆ ಪಾರಮಾರ್ಥಿಕ ಶಾಶ್ವತ ಸುಖಪಡೆಯಲು ಸಾಧ್ಯವಿದೆ.

ಮಾರಾಟಕ್ಕೆ ತಯಾರಿದ್ದ ಪುಸ್ತಕಗಳು

ಶ್ರೀ. ಚಿಂತಾಮಣಿ ರಾಮಚಂದ್ರ ಸಹಸ್ರಬುದ್ಧೇಕೃತ

ಭಗವದ್ಗೀತಾ	ಸಂಸ್ಕೃತ	..	೦– ೮–೦
ಕಾಕಕೃತ	,,	..	೦– ೬–೦
ರಾಷ್ಟ್ರೀಯೋಪನಿಷತ್	,,	..	೦– ೨–೬
ರಾಷ್ಟ್ರೀಯ ಮೋಹಮುದ್ಗರ	,,	..	೦– ೧–೦
ಮೋಹಮುದ್ಗರ	,,	..	೦– ೧–೦
ಪ್ರತಿಕಾರ ನಾಟಕಮ್	,,	..	೧– ೦–೦
ಅಭಿಮನ್ಯು-ವಧೆನ-ನಾಟಕಮ್	,,	..	೧– ೦–೦
ರಾಷ್ಟ್ರೀಯ ಮಂಗಲಾಷ್ಟಕ	,,	..	೦– ೦–೬
ತಿಲಕ ಸೂಕ್ತಿ ಶತಕಮ್	,,	..	೦– ೪–೦
ಪನ್ಹಾಳಗಡಚಾ ಕಿಲ್ಲೇದಾರ	ಮರಾಠಿ	..	೦– ೬–೦
ಗಡ ಆಲಾ ಪಣ ಸಿಂಹ ಗೇಲಾ	,,	..	೦–೧೨–೦
ಕೇಶವ ಕುಮಾರಚೆ ಶತಕ	,,	..	೦– ೨–೦

ಕಿಮ್ಮತ್ತಿನ ಪೂರ್ತಿಗಾಗಿ ವಿ. ಪಿ. ಪೆಚ್ಚಿಗೆ ಬೀಳುವುದು.

ವಿಳಾಸ:— **ಮ್ಯಾನೇಜರ್,**

ಕರ್ನಾಟಕ ಪ್ರಿಂಟಿಂಗ್ ವರ್ಕ್ಸ್, ಧಾರವಾಡ.



೩೪. ಭಾರತದ ರಾಜಕೀಯ ಸಮಸ್ಯೆ

ಧಾರವಾಡದ ಮಿಂಚಿನಬಳ್ಳಿಯ ೩ನೆಯ ವರ್ಷದ ಮೊದಲನೆಯ ಕುಡಿ. ಬೆಲೆ ೧-೦-೦

ಅಮೇರಿಕೆಯ ಸುಪ್ರಸಿದ್ಧ ವಿಚಾರವಾದಿಗಳೂ ಬರೆಹಗಾರರೂ ಆದ **ಡಾಕ್ಟರ್ ವಿಲ್ ಡೂರಾಂಟ್** ಅವರು, ಮೂಲ ಇಂಗ್ಲಿಷಿನಲ್ಲಿ ಬರೆದ 'ದಿ ಕೇಸ್ ಫಾರ್ ಇಂಡಿಯಾ' ಎಂಬ ಗ್ರಂಥದ ಕನ್ನಡ ಅನುವಾದವಿದು. 'ಸ್ವಾತಂತ್ರ್ಯಪ್ರಿಯ' ಎಂಬ ಮುಚ್ಚುಹೆಸರಿನವರು ಅದನ್ನು ಕನ್ನಡಿಸಿದ್ದಾರೆ.

ಈ ಗ್ರಂಥವನ್ನು ತಾವೇಕೆ ಬರೆಯಬೇಕಾಯಿತೆಂಬ ವಿಷಯದಲ್ಲಿ ಮೂಲಲೇಖಕರು ಹೀಗೆ ಹೇಳಿದ್ದಾರೆ :

"..ಭಾರತದಲ್ಲಿಯ ಸಂಗತಿಗಳು ನನ್ನನ್ನು ದಿಕ್ಕುಗೆಡಿಸಿದುವು. ಮಾನವಜನಾಂಗದ ೫ನೆಯ ಒಂದು ಭಾಗದಷ್ಟು ದೊಡ್ಡ ಜನಾಂಗವು, ಪ್ರಪಂಚದ ಇನ್ನಾವ ಭಾಗದಲ್ಲಿಯೂ ಇರದಂತಹ ಭೀಕರವಾದ ದಾರಿದ್ರ್ಯದಿಂದಲೂ ದುರ್ದಮನೀಯವಾದ ದಬ್ಬಾಳಿಕೆಯಿಂದಲೂ ಬಳಲುತ್ತಿರುವುದನ್ನು ಕಂಡು ನಾನು ದಿಗ್ಭ್ರಾಂತನಾದೆ. ಭಾರತದ ಈ ಭೀಕರವಾದ ಚಿತ್ರವು ನನ್ನ ಬರೆವಣಿಗೆಯನ್ನೂ ಅಭ್ಯಾಸವನ್ನೂ ಮರೆ ಮಾಡಿತು. ತನ್ನ ಪ್ರಜೆಗಳನ್ನು ಇಷ್ಟೊಂದು ಹೀನವಾದ ದೈನ್ಯಾವಸ್ಥೆಗೀಡುಮಾಡುವ ಸರಕಾರವು, ಜಗತ್ತಿನಲ್ಲಿ ಉಂಟೆಂದು ನನ್ನ ಕಲ್ಪನೆಯಲ್ಲಿ ಕೂಡ ಎಂದೂ ಬಂದಿರಲಿಲ್ಲ.."

ತಮ್ಮ ಮಾತನ್ನು ಅವರು ಮುಂದುವರಿಸಿ ಇನ್ನೊಮ್ಮೆ ಹೀಗೆ ಹೇಳಿರುವರು :

"....ನಾನು ಅಭ್ಯಾಸನಮಾಡಿದಂತೆಲ್ಲ ಇಂಗ್ಲಂಡು, ೧೫೦ ವರ್ಷಗಳಿಂದ ಉದ್ದೇಶಪೂರ್ವಕವಾಗಿ ಅಸುರೀವೃತ್ತಿಯಿಂದ ಭಾರತದ ಶೋಷಣೆ ಮಾಡುತ್ತಿರುವ ಅನುಭವವು ಬರುತ್ತಲಿದೆ. ಇದು ತಿಳಿಯುತ್ತ ಹೋದಂತೆ ಆ ಜನಾಂಗದ ವಿಷಯಕ್ಕೆ ನನ್ನಲ್ಲಿ ಆಶ್ಚರ್ಯವೂ ಉದ್ವೇಗವೂ ಹೆಚ್ಚುತ್ತಲೆ ನಡೆದುವು. ಇತಿಹಾಸದಲ್ಲಿ ಬೊರೆಯುವ ಮಹಾಪರಾಧಗಳಲ್ಲಿಯೆ ಇದು ಭಯಂಕರವಾದುದೆಂದು ನನಗೆ ಎನಿಸುತ್ತದೆ.."

ಕೊನೆಗವರು ಹೇಳಿದುದು ಹೀಗೆ :

"..ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಒಬ್ಬನಾದರೂ ಭಾರತೀಯನಿಗೆ ನನ್ನ ಈ ಬರೆವಣಿಗೆಯಿಂದ ಸಮಾಧಾನವೆನಿಸಿದರೆ, ನನ್ನ ಅನೇಕ ತಿಂಗಳುಗಳ ಪರಿಶ್ರಮವು ಸಾರ್ಥಕವಾಯಿತೆಂದು ತಿಳಿಯುತ್ತೇನೆ. ಭಾರತಕ್ಕೆ ಒಂದಿಲ್ಲೊಂದು ರೀತಿಯಿಂದ ಉಪಯೋಗ ಬೀಳುವುದಕ್ಕಿಂತ ಹೆಚ್ಚಿನ ಆನಂದವು ಇಂದು ಪ್ರಪಂಚದಲ್ಲಿ ನನಗೆ ಮತ್ತೊಂದು ಇಲ್ಲ."

ಮೇಲಿನ ಎಲ್ಲ ಮಾತುಗಳನ್ನೂ ನೋಡಿದವರಿಗೆ, ಮೂಲಲೇಖಕರ ಹೃದಯದಲ್ಲಿರುವ ಭಾರತದ ವಿಷಯಕ ಆದರವೂ ಕಳವಳವೂ ಕಲ್ಪನೆಗೆ ಬಾರದಿರವು. ಡಾ. ವಿಲ್ ಡುರಾಂಟ್ ಅವರು, ಬಿದ್ದವರನ್ನು ಕಂಡು ಮರುಗುವ ಕೇವಲ ಭಾವನಾವಾದಿಗಳಲ್ಲ ವೆಂಬುದು ಈ ಪುಸ್ತಕವನ್ನೋದಿದ ಪ್ರತಿಯೊಬ್ಬನಿಗೂ ಕಂಡುಬರುವ ಮಾತಾಗಿದೆ. ಭಾರತೀಯರ ಪ್ರಾಚೀನ ಅರ್ವಾಚೀನ ಇತಿಹಾಸಗಳನ್ನೂ, ವರ್ತಮಾನ ಜೀವನವನ್ನೂ, ಬ್ರಿಟಿಷ್ ಸಾಮ್ರಾಜ್ಯತಂತ್ರದಲ್ಲಿಯ ವಿವಿಧ ಕುಟಿಲ ರಾಜಕಾರ್ಯಗಳನ್ನೂ ತಮ್ಮ ಬುದ್ಧಿಶಕ್ತಿಯಿಂದ ಆಳವಾಗಿ ಅಭ್ಯಸಿಸಿ ಅರಗಿಸಿಕೊಂಡವರು ಡುರಾಂಟರು. ತಾವು ಹೇಳುವ ಯಾವುದೊಂದು ಮಾತನ್ನೂ ಸಂಗತಿಯನ್ನೂ ಸಮರ್ಥವಾದ ಐತಿಹಾಸಿಕ— ಪ್ರತ್ಯಕ್ಷ— ಪ್ರಮಾಣಗಳಿಲ್ಲದೆ ಹೇಳುವುದೆ ಇಲ್ಲ. ಬ್ರಿಟಿಷ್ ಸಾಮ್ರಾಜ್ಯದ ಆಧಾರಸ್ತಂಭಗಳಂತಿದ್ದ ಸುಪ್ರಸಿದ್ಧ ಬ್ರಿಟಿಷ್ ರಾಜನೀತಿಜ್ಞರಾಡಿದ, ಬರೆದಿಟ್ಟ ಮಾತುಗಳಿಂದಲೆ ತಮ್ಮ ಸಿದ್ಧಾಂತವನ್ನು ಸಾಧಿಸುತ್ತ ಹೋಗಿದ್ದಾರೆ. ನಿರ್ದಾಕ್ಷಿಣ್ಯದಿಂದ ಮಾಡಿದ ಅವರ ಸತ್ಯಸ್ಥಿತಿಯ ವಿವೇಚನೆಯು, ಪ್ರತಿಯೊಬ್ಬ ಭಾರತೀಯನನ್ನೂ ಕರ್ತವ್ಯಮುಖನನ್ನಾಗಿ ಮಾಡಬಹುದು; ಹೃದಯವುಳ್ಳ ಯಾವ ಬ್ರಿಟಿಷನನ್ನೂ ನಾಚಿಕೆಯಿಂದ ತಲೆತಗ್ಗಿಸಹಚ್ಚಬಹುದು. ಒಂದೆಡೆಯಲ್ಲಿ ಅವರು ಬರೆದಿದ್ದಾರೆ:—

"..ಭಾರತೀಯರ ಕಂಗಾಲ ಸ್ಥಿತಿಗೆ ಅವರ ವಿಪರೀತವಾದ ಜನಸಂಖ್ಯೆ, ಅಂಧಶ್ರದ್ಧೆಗಳು ಕಾರಣವೆಂದು ಅಲ್ಲಿಯ ಆಳರಸರೇನೋ ಡಂಗುರಹೊಡೆಯುತ್ತಲಿದ್ದಾರೆ. ಆದರೆ ಅದಕ್ಕೆ ಇವಾವುವೂ ಕಾರಣವಲ್ಲ. ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರವನ್ನು ಹರಿದುತಿನ್ನುವ—ಉಪಲಬ್ಧವಿರುವ ಇತಿಹಾಸದಲ್ಲಿ ಎಲ್ಲಿಯೂ ಕಾಣದಂತಹ— ದುಷ್ಟವಾದ ರಾಕ್ಷಸವೃತ್ತಿಯೇ ಇದಕ್ಕೆ ಕಾರಣವೆಂದು, ನನ್ನ ಅಂತಃಕರಣವು ಸಾರಿ ಹೇಳುತ್ತದೆ. ಇಂಗ್ಲಂಡ್‌ದೇಶವು ಒಂದಲ್ಲ, ಎರಡಲ್ಲ, ನೂರಾರು ವರ್ಷಗಳಿಂದ ಭಾರತದ ಜೀವನವನ್ನು ಹಿಂಡಿ ಹೀರಿ, ಅದನ್ನು ಮರಣಕ್ಕೀಡುಮಾಡಿದೆ."

ಇನ್ನೊಂದೆಡೆಯಲ್ಲಿ 'ಇಂಗ್ಲಿಷರು ಜಗತ್ತಿನಲ್ಲಿಯೆ ಶ್ರೇಷ್ಠತಮ ಸದ್ಗೃಹಸ್ಥರು; ಬ್ರಿಟಿಷರು ಸಾಮ್ರಾಜ್ಯವಾದಿಗಳೆಲ್ಲೆಲ್ಲ ಅಧಮಾಧಮರು. ಇಂಗ್ಲಿಷರು ಪ್ರಪಂಚಕ್ಕೆ ಸ್ವಾತಂತ್ರ್ಯವನ್ನು ಬೀರಿದರು; ಬ್ರಿಟಿಷರು ಅದನ್ನು ಅಪಹರಿಸುತ್ತಿರುವರು..." ಎಂದು ಬರೆದಿರುವರು.

ಒಂದೇ ಎರಡೇ! ಇಡಿಯ ಪುಸ್ತಕವೂ ಪ್ರತಿಯೊಬ್ಬ ಭಾರತೀಯನ ಪಾರಾಯಣಗ್ರಂಥವಾಗಲು ತಕ್ಕುದಾಗಿದೆ. ಇಂತಹ ಅತ್ಯಾವಶ್ಯಕ ಗ್ರಂಥವನ್ನು ಹುರುಳುತಿರುಳಳೆತ್ತ ಭಾಷೆಯಲ್ಲಿ ಅನುವಾದಿಸಿ, ಕನ್ನಡಿಗರಿಗೆಲ್ಲ ಭಾರತದ ಪಾರತಂತ್ರ್ಯ

ಜೀವನದ ನಿಜವಾದ ತೊಡಕು ಎಲ್ಲಿದೆ ಯೆಂಬುದನ್ನು ತಿಳುಹಿಕೊಡಲು ಹವಣಿಸಿದ 'ಸ್ವಾತಂತ್ರ್ಯಪ್ರಿಯ'ರೂ, ಮಿಂಚಿನ ಬಳ್ಳಿಯ ಸಂಚಾಲಕರೂ ನಿಜವಾಗಿಯೂ ಅಭಿನಂದನೀಯರು. ಬರೆಹಬಲ್ಲ ಪ್ರತಿಯೊಬ್ಬ ಕನ್ನಡಿಗನೂ ಈ ಕನ್ನಡಿಯ ಮೂಲಕ ತನ್ನ ಸ್ವಸ್ವರೂಪದ ಪರಿಜ್ಞಾನವನ್ನು ಖಂಡಿತವಾಡಿಕೊಳ್ಳಬೇಕು.

—ಬಿ. ಪಿ. ಎಸ್. ರಾವ್

ಕಂಬನಿ

ಕೈ. ವಾ. ಗೌರಮ್ಮ (ಮಿಸೆಸ್. ಬಿ. ಟಿ ಜಿ. ಕೃಷ್ಣ)ನವರ ಕಥಾಸಂಗ್ರಹ. ಪ್ರಕಾಶಕರು– ಮನೋಹರ ಗ್ರಂಥಭಾಂಡಾರ, ಧಾರವಾಡ. ೧೫೬+೨೮ ಪುಟಗಳು– ೧ ರೂಪಾಯಿ.

ಶ್ರೀ. ಕುಲಕರ್ಣಿ ದತ್ತಾತ್ರೇಯರು ಜಯಂತಿಯಲ್ಲಿ ಬರೆದ 'ನಾನು ಕಂಡ ಗೌರಮ್ಮ'ಎಂಬ ಲೇಖನವನ್ನೋದಿ ನಾನು ಆನಂದಪಟ್ಟೆದ್ದೆ, ಕನಿಕರತಾಳಿದ್ದೆ, ಮುಗ್ಧನಾಗಿದ್ದೆ. ಮೊದಲಿನಿಂದ ತುದಿವರೆಗೆ ಕರುಣಾರಸದ ಗಟ್ಟಿಬಣ್ಣದಲ್ಲಿ ತಮ್ಮ ಕುಶಲಕುಂಚದಿಂದ ಗೌರಮ್ಮನವರ ಚಿತ್ರ ಬರೆದ ಶ್ರೀ. ದತ್ತಾತ್ರೇಯರ ಆ ಲೇಖನವು, ಒಂದು ಗದ್ಯಕಾವ್ಯವೆನಿಸಿತು ನನಗೆ. ಕವಿಹೃದಯವು ಅನುಭವದೊಡನೆ ನುಲಿದು, ಅನುಭವದಲ್ಲಿ ನನೆದು ತಾನೇ ಹೊರ ಹೊಮ್ಮಿಬಂದಿರುವ ಈ ಗದ್ಯಕಾವ್ಯವು, ಅವರ ಕೇವಲ ಅನುಭವದ ಆವಿರ್ಭಾವವಾಗಿದೆ.

ಕೈ. ವಾ. ಗೌರಮ್ಮನವರು ಕನ್ನಡದಲ್ಲಿ ಗೆಯ್ದ ಕೃತಿಗಳಿಗೆ ಈ ಪರಿಚಯ ಅನುರೂಪವಾಗಿದೆಯೊ, ಹೆಚ್ಚಾಗಿದೆಯೊ, ಕಡಮೆಯಾಗಿದೆಯೊ ವಿಚಾರಿಸುವುದೀಗ ಪ್ರಸ್ತುತವಾಗಿಲ್ಲ. ಶ್ರೀ. ಕುಲಕರ್ಣಿಯವರು ಗೌರಮ್ಮನವರ ಸ್ತುತಿಮಾಡಬೇಕೆಂದು ಆ ಲೇಖನ ಬರೆದಿಲ್ಲ. ಹೃದಯದ ಮಿಡಿತವನ್ನು ಕೊಂಚವಾದರೂ ಸಡಿಲಿಸಿಕೊಳ್ಳುವುದಕ್ಕಾಗಿ ಅದನ್ನು ಬರೆದಂತಿದೆ. ಅವರು ಬರೆದ ಲೇಖನವನ್ನು ಗೌರಮ್ಮನವರ ಜೀವನಚಿತ್ರವೆಂದೋದುವುದಕ್ಕಿಂತ ಕಣ್ಮರೆಯಾದ ಒಬ್ಬ ಕನ್ನಡಿತಿಯ ದುರಂತಜೀವನವೆಂದೋದಬೇಕು–ಎಂದರೆ ಆ ನಾಯಿಕೆಯ ಯೋಗ್ಯಾಯೋಗ್ಯತೆಯ ಪ್ರಶ್ನೆ ದೂರಾಗಿ


ಉಷ್ಣ ಪ್ರಕೃತಿ, ಸದಾ ಉಫಚನ
ಮಲಬಂಧನ
ನಿಮ್ಮವೂ ಇಂಥವೇ
ತೊಂದರೆಗಳು
ಇದ್ದರೆ
ಪರ್ಲಕಾಢೆ ತೆಗೆದುಕೊಳ್ಳಹತ್ತಿರಿ. ಮೈಯಲ್ಲಿ ಉಷ್ಣತೆ ಹೆಚ್ಚಾಗಿದ್ದುದರಿಂದ ಆಂಗೈ, ಆಂಗಾಲು, ಕಣ್ಣು, ಮೂಶ್ರ ಮುಂತಾದುವು ಉರಿಯುವುದು ಪರ್ಲಕಾಢೆಯಿಂದ ನಿಂತುಹೋಗುವುದು. ಪರ್ಲಕಾಢೆಯಿಂದ ಹಸಿವೆ ಹೆಚ್ಚಾಗುವುದು, ಕೆಟ್ಟುಹೋದ ಪಚನಕ್ರಿಯೆಯು ನೆಟ್ಟಗಾಗುವುದು, ಊಟದ ತರುವಾಯ ಹೊಟ್ಟೆಯಲ್ಲಿ ಜಡವನಿಸುವುದು, ಹುಳಿ ಢೇಳರಿಕೆ, ಎದೆ ಸುಡುವುದು ಮುಂತಾದ ತೊಂದರೆಗಳಿಗೆ ಪರ್ಲಕಾಢೆ ಯಿಂದ ಗುಣವಾಗುವುದು. ಪರ್ಲಕಾಢೆಯಿಂದ ಶೌಚಶುದ್ಧಿ ಯಾಗುವುದರಿಂದ, ಮೇಲಿಂದ ಮೇಲೆ ಹೊಟ್ಟೆ ಹರಿಯುವಂಥ ರೇಚಕ ಔಷಧ ತೆಗೆದುಕೊಳ್ಳುವ ಆವಶ್ಯಕತೆಯೇ ಉಳಿಯುವುದಿಲ್ಲ. ಪರ್ಲಕಾಢೆಯು ಮೈಯಲ್ಲಿಯ ಆಲಸ್ಯ, ನಿರುತ್ಸಾಹಗಳನ್ನು ಹೊಡೆದೋಡಿಸಿ, ಹೊಸಉತ್ಸಾಹ, ಹೊಸಶಕ್ತಿ, ಚುರುಕುತನಗಳನ್ನು ಹುಟ್ಟಿಸುತ್ತದೆ ಪ್ರತಿ ಆರು ತಿಂಗಳಲ್ಲಿ ಒಂದು ತಿಂಗಳು ಪರ್ಲಕಾಢೆ ತೆಗೆದುಕೊಳ್ಳುವ ಜಟಿವೇ ಹತ್ತಲಿ. ಎಂದರೆಉಷ್ಣತೆಯಿಂದ ಆಗುವ ಆಪಚನ, ಮಲಬಂಧ ರೋಧಗಳಂಥ ತೊಂದರೆಗಳೇ ನಿಮಗೆ ಬಡಿಯವು. ಪರ್ಲಕಾಢೆಯು ನಿಮ್ಮ ನೆರೆಯ ಔಷಧದ ಅಂಗಡಿಗಳಲ್ಲಿ ಸಿಗುವುದು. ಸ್ವತಃ ಉಪಯೋಗಿಸಿ ಮನವರಿಕೆಮಾಡಿಕೊಳ್ಳಿರಿ.
ಪರ್ಲಕಾಢೆ ತೆಗೆದು ಕೊಳ್ಳಿರಿ

ಅವಳ ಬಗ್ಗೆ ನಮ್ಮ ಸಹಾನುಭೂತಿ ಕುದುರುತ್ತದೆ.

ಶ್ರೀ. ಕುಲಕರ್ಣಿ ದತ್ತಾತ್ರೇಯರು ಹದಿನಾಲ್ಕು ಪುಟಕ್ಕೆ ಮಿಕ್ಕಿ ಹೇಳಿದ ಮಾತುಗಳನ್ನೆ 'ಅಂಬಿಕಾತನಯದತ್ತ'ರು ಹದಿನಾಲ್ಕು ಸಾಲುಗಳಲ್ಲಿ ಹೇಳಿದ್ದಾರೆ. ಉದಾಹರಣೆಗಾಗಿ ಎತ್ತಿ ತೋರಿಸಬೇಕು ಎಂದರೆ ಎಲ್ಲ ಸಾಲುಗಳನ್ನೂ ಎತ್ತಿ ತೋರಿಸಬೇಕಾಗುವುದು.

ಕೈ. ವಾ. ಗೌರಮ್ಮನವರ ಕೃತಿಗಳಿಗಿಂತ ಆವರ ಜೀವನವೆ ನಮಗೆ ಹೆಚ್ಚು ಮಹತ್ವವಾದವೆಂಬುದನ್ನು ನೆನೆದರೆ ಅಂತಹ ಶ್ರೇಷ್ಠ ಜೀವನಕ್ಕೆ ಆವರ ಸಮಷ್ಟಿ ಕೃತಿಗಳು ಸಲ್ಲುವಂತಾಗಿವೆಯೆಂಬುದು ತಾನಾಗಿಯೆ ಹೊಳೆಯತ್ತದೆ. ಕೈ.ವಾ. ಗೌರಮ್ಮನವರದು ಕಾವ್ಯಜೀವನ. ಆವರ ಜೀವನವೆ ಒಂದು ಕರುಣಾರಸದ ಕಾವ್ಯವಾಗಿದೆ. ಜಕ್ಕವಕ್ಕಿಗಳಂತೆ ಸೊಗಸಾದ ದಾಂಪತ್ಯ-

ಜೀವನ; ಅದಕ್ಕೆ ಒಪ್ಪುವ ರಸಿಕತೆ; ಜೀವನದ ಸುಖಕ್ಕೆ ಅಡ್ಡಬಾರದಷ್ಟು ಸಂಪತ್ತು; ಅದಕ್ಕೆ ಒಪ್ಪುವಷ್ಟು ಶಿಕ್ಷಣ. ನಡೆ, ನುಡಿ, ನೀತಿ, ರೀತಿಗಳೆಲ್ಲವೂ ಅವರ ಬಾಳಕಬ್ಬದ ಅಲಂಕಾರಗಳಂತಿದ್ದುವು. ಕೃತಿಗಳಲ್ಲಿ ಹೇಗೊ ಮಾತಿನಲ್ಲಿಯೂ ಹಾಗೆಯೆ ಗೌರಮ್ಮನವರು — ಅಷ್ಟೇ ರಸಿಕತೆ. 'ನಾಯಿಗೆ ಇಂಗ್ಲಿಷ್ ಹೆಸರೇಕೆ?' ಎಂದು ಕೇಳಿದರೆ 'ಇಂಗ್ಲಿಷ್ ಹೆಸರು ನಮ್ಮ ನಾಯಿಗಳಿಗೂ ಒಪ್ಪುವುದಿಲ್ಲವೊ?' ಎಂಬ ಮೊನೆಯಾದ ಉತ್ತರ ಕೊಡುವಂತಹ ಜಾಣ್ಮೆಯುಳ್ಳ ಮಾತಿರವರವರು. ಈ ಜೊಕ್ಕಟ ಜೀವನವೆ ಗೌರಮ್ಮನವರಿಗೆ ಸಾಹಿತ್ಯದ ಸ್ಫೂರ್ತಿಭೂಮಿಕೆಯಾಗಿದ್ದಿತು. ಈ ಚಿರಂತನ ಸ್ಫೂರ್ತಿ ಸಾಹಿತ್ಯಕ್ಷೇತ್ರದಲ್ಲಿ ಅವರಿಗಾಗಿ ಉತ್ತಮ ಭವಿಷ್ಯವನ್ನು ಬರೆದಿಟ್ಟಿತ್ತು. ಆದರೆ.. ಕಾವೇರಿ ತನ್ನ ಮಗುವನ್ನು ತನ್ನೊಡಲಲ್ಲಿ ತೆಗೆದುಕೊಂಡಳು. ಅವರನ್ನು 'ಪತಿಯೊಲವಿನ, ಸುತನೊಲವಿನ ಕೆಳೆಯೊಲವಿನ ತಂತು' ಅವರನ್ನು ಮೇಲಕ್ಕೆತ್ತಲಿಲ್ಲ. 'ಉಷೆ ಸುರಿಸುವ ಇಬ್ಬನಿಯೊಲು' ಅವರ ಜೀವನದ ಕಂಬನಿಯೆ ಈ ಹೊತ್ತಗೆಯಾಗಿ ಹೊರಬಿದ್ದಿತು. 'ಬಾಳ್-ಬಳ್ಳಿಗೆ ಬೀರಿದ' ಈ ಮಧುಪಾಸ್ಯದ ಹನಿ, ಅವರ ಕೀರ್ತಿಯನ್ನು ಕೊನೆದಾಡಿತು.

'ಕಂಬನಿ' ಯೊಳಗಿನ ಕತೆಗಳೆಲ್ಲವನ್ನೂ ಓದಿದ ಮೇಲೆ, ಗೌರಮ್ಮನವರು ಉತ್ತಮ ಕತೆಗಾರರಲ್ಲಿ ಒಬ್ಬರು ಎಂದು ಯಾರೂ ಮನಗಾಣದೆ ಇರಲಾರರು. 'ವಾಣಿಯ ಸಮಸ್ಯೆ' 'ಕೌಸಲ್ಯಾನಂದನ' 'ಯಾರು?' ಇವಿಷ್ಟೆ ಸಾಕು..ಅವರ ಕೈವಾಡವನ್ನರಿತು ಕೊಳ್ಳುವುದಕ್ಕೆ. ಎಲ್ಲ ಕತೆಗಳೂ ಅಪೂರ್ವವಾದ ಕಥಾವಸ್ತುವಿನಿಂದ ನಮ್ಮನ್ನು ಬೆರಗುಗೊಳಿಸದಿದ್ದರೂ, ಇದ್ದ ಸಂಗತಿಯೆ ಎದ್ದು ಕಾಣುವಂತೆ ಅದನ್ನು ನಿರೂಪಿಸುವ ನವೀನ ರೀತಿ ನಮ್ಮನ್ನು ತಲೆದೂಗಿಸುತ್ತದೆ. ಪೊದಲು ಹಾಸ್ಯದಿಂದ ಪೊದಲಾಗಿ ನಮ್ಮ ಹೃದಯವನ್ನು ಅರಳಿಸಿ, ಕೊನೆಗೆ ಗಂಭೀರ-ಕರುಣೆಯಿಂದ ಅದೇ ಹೃದಯವನ್ನು ನಿಟ್ಟುವಂತೆ ಚಿತ್ರಿಸಿದ 'ಅವಳ ಭಾಗ್ಯ' ದೊಳಗಿನ ಸಾರುವಿನ ಚಿತ್ರ, ಪ್ರಣಯ-ಕಾರನು ಮುಂದೆ ಅಜ್ಞಾತವಾಸಿಯಾಗಿ 'ಕೌಸಲ್ಯಾನಂದನ' ನಾಗಿ ಬೆಳಕಿಗೆ ಬಂದ ರಾಮುವಿನ ಹೃದ್ಯವಾದ ಚಿತ್ರಗಳು, ನಮ್ಮ ಹೃದಯದಲ್ಲಿ ನೆಲೆಯೂರಿ ನಿಲ್ಲುವಂತಹವಾಗಿವೆ. 'ಹೋಗಿಯೆ ಬಿಟ್ಟಿದ್ದ ಎಂಬ ಕತೆ ಮುಗಿತಾಯ ಮತ್ತು ನಿರೂಪಣ ಕ್ರಮಗಳಿಂದ ಹೊಸತೆನಿಸಿಕೊಳ್ಳುತ್ತದೆ, ರೀತಿಯಲ್ಲಿ.

ಒಂದೊಂದು ಕತೆಯನ್ನೂ ಒಂದೊಂದು ವಿಧವಾದ ಕಥನರೀತಿಯಲ್ಲಿ ನಿರೂಪಿಸಲು ಗೌರಮ್ಮನವರು ಪಟ್ಟ ಪ್ರಯತ್ನವು ಯಥಾಯೋಗ್ಯವಾಗಿದೆ. ಆದರೂ ನಾಲ್ಕು ರೀತಿಯ ಸಾಮಾಜಿಕ ಸಮಸ್ಯೆಗಳನ್ನು ವಾಚಕರೆದುರಿಗೊಡ್ಡುವ 'ನಾಲ್ಕು ಘಟನೆ



ಗಳು' ನಮ್ಮ ಬಗೆಯನ್ನು ಸೆರೆಹಿಡಿಯುವಂತಾಗಿಲ್ಲ. 'ಸಂನ್ಯಾಸಿ ರತ್ನ' ಗೌರಮ್ಮನವರ ಕಥನ ಚಾತುರಿ ಒಂದು ಮಟ್ಟದಿಂದ ಹೇಗೆ ಮುಂದುವರಿಯಿತೆಂಬುದನ್ನರಿತುಕೊಳ್ಳಲು ತಕ್ಕ ದೃಷ್ಟಾಂತವಾಗಿದೆ. 'ಪ್ರಾಯಶ್ಚಿತ್ತ' ದ ಕೊನೆಯ ಭಾಗ ಅವಸರದಲ್ಲಿಯೆ ಮುಕ್ತಾಯ ಹೊಂದಿ, ಪ್ರಥೆಯ ಪಾತ್ರಕ್ಕೆ ಅನಾವಶ್ಯಕವಾಗಿ ಮಹತ್ವ ತಂದಂತಿದೆ.

ಪತ್ರಲೇಖನ ರೀತಿಯಲ್ಲಿ ಬಹು ಸೊಗಸಾಗಿ ಅರಳಿದ ಕತೆಗಳೆಂದರೆ 'ಸುಳ್ಳು ಸ್ವಪ್ನ' 'ಯಾರು?' 'ಒಂದು ಪುಟ್ಟ ಚಿತ್ರ' ಇನ್ನೆಲ್ಲವುಗಳಲ್ಲಿ ಸಾಮಾಜಿಕ ಸಮಸ್ಯೆಯೆ ಮುಖ್ಯ ಉದ್ದೇಶವಾಗಿದೆ.

ಸಮಾಜಚಿತ್ರಣವೆ ಗೌರಮ್ಮನವರ ಕತೆಗಳ ಜೀವಾಳ. ಕತೆಗಳ ಬಹುಭಾಗ ಸಾಮಾಜಿಕ ಸಮಸ್ಯೆಯನ್ನು ವಾಚಕರಿಗೆ ಒಡ್ಡುವಂತಹವಿವೆ. ಕಥೆಯ ಗಾಂಭೀರ್ಯಕ್ಕೆಅನುರೂಪವಾದ ಮಾರ್ಮಿಕ ಶೈಲಿ ಇವರ ಲೇಖನದಿದೆ. ಆ ಶೈಲಿಯಲ್ಲಿ ಹೃದ್ಯತೆಯಿದೆ, ಸೊಗಸಿದೆ, ಮೊನೆಯಿದೆ, ಕಾವ್ಯವಿದೆ.

'ಕಂಬನಿ'ಯಿಂದ ಕೈ. ವಾ. ಗೌರಮ್ಮನವರ ಯೋಗ್ಯತೆಯ ಸಮರ್ಪಕವಾದ ಕಲ್ಪನೆ ಸಮಗಾಗುತ್ತದೆ. ಅವರ ಯೋಗ್ಯತೆಯನ್ನು ಬೀರುವಂತೆ ಈ ಪ್ರಕಟನವನ್ನು ಕನ್ನಡಿಗರ ಕೈಗೆ ನೀಡಿದ ಶ್ರೀ ದ. ಬಾ. ಕುಲಕರ್ಣಿಯವರು ಅಭಿನಂದನೀಯರು. ಈ ಪ್ರಕಟನೆಗೆ ಮೆರುಗು ಬರುವಂತೆ ತಮ್ಮ ಲೇಖನದ ಚೌಕಟ್ಟು ಹಾಕಿದ ದತ್ತಾತ್ರೆಯರು ಇದಕ್ಕೂ ಹೆಚ್ಚಿಗೆ ಅಭಿನಂದನೀಯರು. 'ಕಂಬನಿ' ಯನ್ನೋದುವವರೆಗಾದರೂ ಗೌರಮ್ಮನವರು ಬದುಕಿರಲೇಬೇಕಾಗಿತ್ತು.

—ಎನ್ಕೆ

೪೬ ಸುಬೋಧಸಾರ

ಶ್ರೀಮುಪ್ಪಿನ ಷಡಕ್ಷರಿ ಸ್ವಾಮಿಗಳು ರಚಿಸಿದುದು. ಸಂಗ್ರಾಹಕರು ಶ್ರೀ. ಹಡೇರ್ಕರ್ ಮಂಜಪ್ಪನವರು.

ವೀರಶೈವಭಕ್ತಕವಿಗಳಲ್ಲಿ ಮುಪ್ಪಿನ ಷಡಕ್ಷರಿಸ್ವಾಮಿಗೆ ಕೊಡಬೇಕಾದ ಸ್ಥಾನವು ಅದೊಂದು ವಿಶಿಷ್ಟ ಬಗೆಯದು. ಭಕ್ತಿ-ಪಂಥಕ್ಕೆ ಆವಶ್ಯಕವೆನಿಸುವಂತಹ ಗೀತಗಳನ್ನು ರಚಿಸಿದ ಶೈವಕವಿಗಳು ಅನೇಕ ಜನರು; ಆದರೆ ಮುಪ್ಪಿನ ಷಡಕ್ಷರಿಯ ಭಕ್ತಿಗೀತಗಳಲ್ಲಿ ಕಂಡುಬರುವ ಪ್ರಸಾದ-ಗುಣ, ಸಹಜಶೈಲಿ, ಭಾವಾರ್ಥಗಳೆ ಮಾತುಗಳಾಗಿ ಹರಿದ ಬಗೆ, ರಸಪುಷ್ಟಿಗಾಗಿ ಅನುಸರಿಸಿದ ಜಾನಪದಕವಿತ್ವದ ದೇಸಿಯ ದಾರಿ ಇವೆಲ್ಲ, ಎಲ್ಲಕ್ಕವರಲ್ಲಿ ಕ್ವಚಿತ್ತಾಗಿ ಕಾಣುವಂತಹವು. ಇಂತಹ ಅಸಾಮಾನ್ಯ ಭಕ್ತಕವಿಯ ಪ್ರಾಸಾದಿಕಗೀತಗಳು ಸರ್ವಜನ ಸುಲಭವಾಗುವಂತೆ, ಸಾಮಾನ್ಯಜನ ಸೇದ್ಯವಾಗುವಂತೆ, ಒಂದೆಡೆಯಲ್ಲಿ ಅಂದವಾಗಿ ಜಿಚ್ಚುಗೊಂಡು ಇದುವರೆಗೆ ಪ್ರಕಟ-

ವಾಗಿರಲಿಲ್ಲ. ಬೀದಿಯ ಸೆಟ್ಟರು ಪ್ರಕಟಿಸಿದ್ದ ಪ್ರತಿಯಲ್ಲಿಯ ಈ ಗೀತಗಳು, ಅನೇಕ ದೋಷಗಳಿಂದ ಕೂಡಿ ದುರ್ಬೋಧವಾಗಿ ಪರಿಣಮಿಸಿದ್ದುವು. ಈಗ ಅವನ್ನೆಲ್ಲ ಶ್ರೀಮಾನ್ ಮಂಜಪ್ಪನವರು ಒಟ್ಟುಗೂಡಿಸಿ, ಸುಬೋಧವಾಗುವಂತೆ ಸರಿಗೊಳಿಸಿ, ಉತ್ತಮರೀತಿಯಲ್ಲಿ ಅಚ್ಚು ಹಾಕಿಸಿ ಪ್ರಕಟಿಸಿ, ಕನ್ನಡ ಸಾಹಿತ್ಯಕ್ಕೊಂದು ಒಳ್ಳೆಯ ಕಾಣಿಕೆಯನ್ನು ಒದಗಿಸಿ ಕೊಟ್ಟಿದ್ದಾರೆ. 'ಕನ್ನಡದ ಕಂದ–ಕಾವ್ಯಾನಂದ' ಎಂಬ ಹೆಸರಿನ ತರುಣ ಲೇಖಕರು, ಈ ಸಂಗ್ರಹಕ್ಕೆ ಒಪ್ಪುವಂತಹ ಸೊಂದು ಮುನ್ನುಡಿ ಬರೆದು, ಮುಪ್ಪಿನ ಷಡಕ್ಷರಿಯ ಕವನ, ರಸ, ಭಾವ, ಭಾಷೆ, ಶೈಲಿಗಳನ್ನು ಕುರಿತು ವಿವೇಚನೆ ಮಾಡಿದ್ದಾರೆ. ತನ್ನ ಗೀತಗಳಿಗೆ ಹೆಚ್ಚಾಗಿ ಈ ಕವಿ ಉಪಯೋಗಿಸಿದ ಕುಸುಮ-ಭೋಗ ಛಂದಸ್ಸು, ಭಾವಲಾಸ್ಯಕ್ಕೆ ತುಂಬ ಸಹಕಾರಿಯಾಗಿದೆ. ಭಕ್ತನ ಸಾಕ್ಷಾತ್ಕಾರದ ಅವಸ್ಥೆಯನ್ನು ಇಲ್ಲಿಯ ಹಲವು ಗೀತಗಳು ಚೆನ್ನಾಗಿ ಚಿತ್ರಿಸುತ್ತಿರುವುವು. ಸಂಸಾರದಿನುದಿಂದ ದಣಿದ ಸರ್ವಸಾಮಾನ್ಯರ ಮನಸ್ಸನ್ನು, ಇಲ್ಲಿಯ ಗೀತಗಳನ್ನು ಏಕತಾನದ ಧ್ವನಿಯೊಂದಿಗೆ ಬೆರಸಿ ಹೇಳುತ್ತಿರುವಾಗ, ಖಂಡಿತವಾಗಿಯೂ ತನ್ನ ದಣಿವನ್ನು ಕಳೆದುಕೊಂಡು ತಣಿವಿನಿಂದ ಮೈಮರೆಯಬಹುದಾಗಿದೆ.

೩ನೆಯ ಗೀತವಾದ 'ಧರೆಯ ಭೋಗಸ್ಥರ' ಎಂಬ ತಿರುಕನ ಕನಸಿನ ಕತೆಯು ಹೊಳಗೊಂಡ ಕವನವೂ, ೩೭ನೆಯದಾದ ದಿಂಭದೊಳಗೆ ಒಂದು ವ್ಯಾಣ' ಎಂಬ ಕೃತಿಯೂ ಕನಕದಾಸರ ಅಂಕಿತವನ್ನೊಳಗೊಂಡೂ ಪ್ರಚಾರದಲ್ಲಿರುವುದನ್ನು ಕೆಲವರು ಕೇಳಿರಬಹುದಾಗಿದೆ. ಹೀಗೇಕೆ ಆಗಿರಬಹುದೆಂಬುದನ್ನೂ ನಾವು ವಿಚಾರಿಸಬೇಕಾಗಿದೆ. ಅವೇ ಅವೇ ಹಾಡು ಇಬ್ಬರ ಅಂಕಿತದಲ್ಲಿ ಇರುವುದೆಂದರೆ, ಒಬ್ಬ ಕವಿ ತನ್ನೊಬ್ಬನದನ್ನು ಸ್ವೀಕರಿಸಿರಬೇಕು ಅಂದು; ಇಲ್ಲವೆ ಅನುಯಾಯಿ ವರ್ಗದವರು ಆ ಹಾಡುಗಳ ಮೇಲಿನ ಪ್ರೀತಿಯಿಂದ ಹೀಗೆ ಅಂಕಿತವನ್ನು ಮಾರ್ಪಸಿಕೊಂಡಿರಬೇಕು ಒಂದು. ಅಂತೂ ಹೀಗೆ ಇಬ್ಬರ ಹೆಸರಿನಲ್ಲಿಯೂ ಆ ಹಾಡುಗಳು ಹಾಡಿಸಿಕೊಳ್ಳುತ್ತಿರುವುದಂತೂ ಸರಿ. ವಿಷಯ-ಶೈಲಿ-ಭಾಷೆಗಳ ಮೇಲಿಂದ ಹೇಳಬಹುದಾದರೆ, ಅವೆರಡೂ ಗೀತಗಳು ಮುಪ್ಪಿನ ಷಡಕ್ಷರಿಯಿಂದಲೆ ರಚಿತವಾದುವೆಂದು ಹೇಳಬೇಕಾಗುವುದು.

—ಬೆಟಗೇರಿ ಕೃಷ್ಣಶರ್ಮ

೪೨ ಕಂದನ ಹಾಡುಗಳು

ಸಂಪಾದಕರು :
ಡಾ. ದೊಡ್ಡೇರಿ ವೆಂಕಟಗಿರಿರಾಯರು

ಬೇರೆ ಬೇರೆ ಕವಿಗಳು ಬರೆದ ಶಿಶುಗೀತಗಳು ಕೆಲವೂ ಹಳೆಯ ಜೋಗುಳಗಳು ಕೆಲವೂ ಇದರಲ್ಲಿ ಸಂಗ್ರಹಿತವಾಗಿವೆ. ಮಕ್ಕಳಿಗಾಗಿ ಪದ್ಯಗಳನ್ನು ಬರೆಯುವವರು ತಮ್ಮ ಪದ್ಯಗಳನ್ನು ಓದುವವರ ವಯಸ್ಸಿನಷ್ಟು, ಅವರ ಅನುಭವದ ಆಳತೆಯಷ್ಟು, ಗೊತ್ತಿರಬಹುದಾದ ಶಬ್ದಗಳಷ್ಟು, ಪರಿಚಯವಿರಬಹುದಾದ ಪದಾರ್ಥಗಳಷ್ಟು— ಎಂಬುದರ ತಿಳಿವಳಿಕೆಯುಳ್ಳವರಿರಬೇಕು. ಹಾಗಿರದಿದ್ದರೆ 'ದೊಡ್ಡವರಿಗಾಗಿ ಬರೆಯಲು ಬಾರದುದರಿಂದ ಚಿಕ್ಕವರಿಗಾಗಿ ಪದ್ಯ ಬರೆದಿದ್ದಾರೆ' ಎಂದು ಹೇಳುವಂತಹ ಸಂದರ್ಭ ಹೊದಗುವುದು. ಚಿಕ್ಕ ಮಕ್ಕಳಿಗೆಂದು ಬರೆಯಬೇಕಾದ ಪದ್ಯಗಳಲ್ಲಿ, ಭಾವ–ಭಾಷೆಗಳ ಕುಣಿದಾಟ ಹಾರಾಟಗಳಿರಬೇಕು. ಅರ್ಥವು ಸುಲಭವಿದ್ದು ವಿಷಯಜಗಮತ್ಕೃತಿಯಿಂದ ಕೂಡಿದುದಿರಬೇಕು. ಕೇಳಿದೊಡನೆಯೆ ಕವಿಗಳನ್ನು ಹಿಡಿದುಕೊಳ್ಳುವಂತಹ ಅನುಪ್ರಾಸಯುಕ್ತ ಪದವಿನ್ಯಾಸವಿರಬೇಕು. ಕೇಳಿದೊಡನೆಯೆ ಮಕ್ಕಳಲ್ಲಿ ಒಂದು ಬಗೆಯ ವಿಸ್ಮಯವನ್ನುಂಟು ಮಾಡುವಂತಹ ಗೀತಗಳೆ ನಿಜವಾದ ಶಿಶುಗೀತಗಳು. ಅಂತಹ ಗೀತಗಳ ಕೊರತೆ ಈ ಸಂಗ್ರಹದಲ್ಲಿ ವಿಶೇಷವಾಗಿದೆ.

—ಸಂ. ಕ.

೫೫ ಕಂದನ ಕೂಗು
(ಶಿಶುಗೀತ ಸಂಗ್ರಹ)

ಬರೆದವರು :
ಶ್ರೀ. ಯೋಗ, ವಿಶಾರದ (ಅಲಹಾಬಾದ್)

ಚಿಕ್ಕಮಕ್ಕಳು ಪ್ರೀತಿಯಿಂದ ಹೇಳಬಹುದಾದ ೨೦ ಕವಿತೆಗಳು ಇದರಲ್ಲಿ ಸಂಗ್ರಹಗೊಂಡಿವೆ. ಇವುಗಳಲ್ಲಿಯ 'ಕಾಗೆ ಕೃಷ್ಣಸರ್ಪ' 'ಸರಿಯ ಯುಕ್ತಿ' 'ಮೂಢ' 'ಆನೆ ಮತ್ತು ಮಗು' ಈ ನಾಲ್ಕುಕೃತಿಗಳು ಕಥನ ಪದ್ಯಗಳು. ಹೆಚ್ಚಾಗಿ ಪ್ರಚಾರದಲ್ಲಿರುವ ನೀತಿಯ ಕಥೆಗಳನ್ನು ಈ ಪದ್ಯದಲ್ಲಿ ಪವಣಿಸಲಾಗಿದೆ. 'ದೀವಳಿಗೆ' 'ಮೆಣಸಿನ ಕಾಯಿ' 'ಮಿಠಾಯಿ' 'ನನ್ನ ಕೆಲಸ' 'ಮಾತಿನ ಮಂಗ' 'ನಮ್ಮ ಕುದ್ರೆ' ಈ ಕವಿತೆಗಳು ಮಕ್ಕಳ ಮನಸ್ಸನ್ನು ಚೆನ್ನಾಗಿ ಸೆಳೆದುಕೊಳ್ಳಬಲ್ಲುವು. ಮಿಕ್ಕ ಕವನಗಳಲ್ಲಿಯ ಭಾವ–ಭಾಷೆಗಳ ವಿಷಮಪಾಕವು ಚಿಕ್ಕವರಿಗೆ ರುಚಿಸದು, ದೊಡ್ಡವರಿಗೆ ಸೇರದು–ಹೀಗಾಗಿದೆ. ಇದರಲ್ಲಿಯ ಒಳ್ಳೆಯ ಕವನಗಳನ್ನು ನೋಡಿದರೆ ಶ್ರೀ. ಯೋಗ ಅವರು ಶಿಶುಗೀತೆಯೆಂದರೇನೆಂಬುದನ್ನು ಚೆನ್ನಾಗಿ ಬಲ್ಲರೆಂಬುದು ಯಾರಿಗೂ ಗೊತ್ತಾಗುವುದು. ತಾವು ಬರೆದ ಕವನಗಳನ್ನೆಲ್ಲ ಮಕ್ಕಳು ಓದಬೇಕೆನ್ನುವುದಕ್ಕಿಂತ, ಮಕ್ಕಳಿಗಾಗಿಯೆಂದೇ ಬರೆದ ಕವನಗಳನ್ನು ಸೇರಿಸಿ ಮುದ್ರಿಸುವುದು ಶ್ರೇಯಸ್ಕರ. ಇದರಲ್ಲಿಯ

"ಹಾಕಿದೆಡೆಗೆ ಬದ್ದು ಕೊಂಡು
ಶಾಲೆಯಿಂದ ನಮ್ಮ ಬರವ
ಕಾದು ಕುಳಿತುಕೊಳ್ಳುತಿರುವ,

ಜಾಣಕುದುರೆಯು, ಯಾವ ಪಂಗುವಿನ ಮನಸ್ಸನ್ನೂ ಹಿಡಿದು, ಆ ಕುದುರೆಯನ್ನೇರಿ ಕುಣಿಸಬಹುದಾಗಿದೆ. ಇಂತಹ ಕವನಗಳ ಸಂಗ್ರಹ ಬಹಳ ಚೆನ್ನ. —ಸಂ. ಕ.

ಸೇಫ್ಟಿ ರೇಝರ್ ೨ ಬ್ಲೇಡು ಸನೇತ,
೬ ಆಣೆಗೆ ಒಂದು ಸೆಟ್ಟು.

೧ ಬ್ಲೇಡಿಗೆ ೬ ಉತ್ತಮ ಕ್ಷೌರ !
೫ ಬ್ಲೇಡಿಗೆ ೬ ಆಣೆಗಳು.

ಸಾದರ ಸ್ವೀಕಾರ

೬೫. **ಮಂದುವೆ** (ವಿಚಾರಪ್ರಚೋದಕ ಗ್ರಂಥ). ಶ್ರೀಮಾನ್ ನೆಗಳೂರು ರಂಗನಾಥರಾವ್ ಬಿ. ಎ. ಅವರು ಬರೆದು, ಧಾರವಾಡದ ಮಿಂಚಿನ ಬಳ್ಳಿಯ ೩ನೆಯ ವರ್ಷದ ೨ನೆಯ ಕುಡಿಯೆಂದು ಪ್ರಕಟವಾಗಿದೆ. ಕ್ರೌ. ಅ. ೧೬+೧೪೪ ಪುಟಗಳು; ಬೆಲೆ ೧–೦–೦.

೬೬. **ಬೆಳ್ಳಿಯ ಹಬ್ಬ** (ಏಕಾಂಕ ನಾಟಕ ಸಂಗ್ರಹ): ಶ್ರೀಮಾನ್ ಎನ್. ಕೆ. ಕುಲಕರ್ಣಿ ಎಂ. ಎ., ಬಿ. ಟಿ. ಅವರು ಬರೆದು ಪ್ರಕಟಿಸುವು. ಸಿಕ್ಕುವ ಸ್ಥಳ: ಮನೋಹರ ಗ್ರಂಥಭಾಂಡಾರ, ಧಾರವಾಡ. ಕ್ರೌ. ಅ. ೮+೭೮ ಪುಟ. ಬೆಲೆ ೦–೮–೦.

೬೭. **ತಾಪತ್ರಯ** (ಸಣ್ಣಕತೆಗಳ ಸಂಗ್ರಹ), ಶ್ರೀ. 'ಜೋಕೆ' ಬರೆದುದನ್ನು, ಧಾರವಾಡದ ರಂಗ-ಮಂಗ ರಂಜನೋದ್ಯಾನದವರು, ತಮ್ಮ ೩ನೆಯ ಹೂಗೊಂಚಲಾಗಿ ಹೊರಕ್ಕೆ ಕಳುಹಿರುವರು. ಫೂ. ಕ್ಯಾ. ಅ. ೩೪ ಪುಟ; ಬೆಲೆ ೦–೪–೦.

೬೮. **ನನ್ನ ಜೀವನಸ್ಮೃತಿಗಳು** (ಆತ್ಮಚರಿತ್ರೆ). ಶ್ರೀಮಾನ್ ಅಲೂರ ವೆಂಕಟರಾಯರು ಬರೆದುದನ್ನು ಜಯಕರ್ನಾಟಕದ ಸಂಪಾದಕರಾದ ಶ್ರೀ. ಬೆಳಗಾವಿ ರಾಮಚಂದ್ರರಾಯರು ಪ್ರಕಟಿಸಿರುವರು. ಫೂ. ಕ್ಯಾ. ಅ. ೧೬೨ ಪುಟ; ಬೆಲೆ ೦–೧೬–೦.

೬೯. **ಆಕ್ಸ್‌ಫರ್ಡ್ ವಿದ್ಯಾರ್ಥಿಯ ಇಂಡಿಯಾದೇಶದ ಚರಿತ್ರೆ** (ಸಚಿತ್ರ ಇತಿಹಾಸ ಗ್ರಂಥ) ಮೂಲಲೇಖಕರು ಮಿ. ವಿ. ಎ. ಸ್ಮಿಥ್ ಸಿ. ಐ. ಇ. ಅವರು. ಅನುವಾದಕರು ಶ್ರೀಮಾನ್ ಎಂ. ಎಸ್. ರಾಮಸ್ವಾಮಿ ಎಂ. ಎ. ಹೆಡ್‌ಮಾಸ್ಟರ್ ಶಾರದಾವಿಲಾಸ ಹೈಸ್ಕೂಲು, ಮೈಸೂರು. ಕ್ರೌ. ಅ. ೧೨+೩೮೨ ಪುಟ; ಬೆಲೆ ೨–೪–೦.

೭೦. **ಇಂಗ್ಲೆಂಡಿನ ರಾಜಕೀಯ ಬೆಳೆವಣಿಗೆ** (ಪರಿಚಯಾತ್ಮಕ) ಶ್ರೀ. ಸಿ. ಜಿ. ಸತ್ಯಗಿರಿನಾಥನ್ ಎಂ. ಎ. ಮೈಸೂರು ಅವರು ಬರೆದುದು; ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕ ಮಾಲೆಯ ೧೯ನೆಯ ಪ್ರಕಟನೆಯಾಗಿ ಬಂದಿದೆ. ಫೂ. ಕ್ಯಾ. ಅ. ೪+೬೪ ಪುಟ; ಬೆಲೆ ೦–೨–೦.

೭೧. **ಪ್ರಭಾತ** (ವಾರಪತ್ರಿಕೆಯ ದಸರಾ ಸಂಚಿಕ). ಸಂಪಾದಕರು ಶ್ರೀಮಾನ್ ಕುಡ್ಪಿ ವಾಸುದೇವ ಶೆಣೈ, ಮಂಗಳೂರು ಅವರು. ಕ್ರೌ. ೫೮ ಪುಟಗಳು. ಬೆಲೆ ೦–೧–೦. ಪ್ರಕಾಶಕರು ಶ್ರೀಮಾನ್ ಎಂ. ಬಾಬೂರಾಯ ಪ್ರಭು ಬಿ. ಎ. ಮಂಗಳೂರು.

೭೨. **ದ್ವಿತೀಯ ಮಹಾಯುದ್ಧ** (ಸಚಿತ್ರ–ಪರಿಚಯಾತ್ಮಕ ಗ್ರಂಥ) ಶ್ರೀ. 'ಹರಿದಾಸ' ಅವರು ಬರೆದುದು. ಮಂಗಳೂರಿನ ತ್ರಿವೇಣಿ ಪ್ರಕಟನಾಲಯದಲ್ಲಿ ೪ನೆಯ ಪುಷ್ಪವಾಗಿ ಪ್ರಕಟಗೊಂಡಿದೆ. ಕ್ರೌ. ಅ. ೧೪೪ ಪುಟ; ಬೆಲೆ ೦–೮–೦.

೭೩. **ಬಾಸಿಗ** (ಕವನಸಂಗ್ರಹ) ಶ್ರೀಮಾನ್ ರಂ. ಶ್ರೀ. ಮುಗಳಿ ಎಂ. ಎ., ಬಿ. ಟಿ. ಅವರು ಬರೆದುದು. ಪ್ರಕಾಶಕರು ಶ್ರೀ. ಜಿ.ಬಿ. ಜೋಶಿ, ಮನೋಹರ ಗ್ರಂಥಮಾಲಾ ಕಾರ್ಯಾಲಯ ಧಾರವಾಡ. ಕ್ರೌ. ೧೨+೧೦೬+೨೦ ಪುಟಗಳು; ಬೆಲೆ ೧–೦–೦.

೭೪. **ಗದ್ಯಪದ್ಯಾತ್ಮಕ ಶ್ರೀಮದ್ಭಗವದ್ಗೀತಾ ಸಂಗ್ರಹ**: ಲೇಖಕರು ಕರ್ನಾಟಕ ನಾಟಕ ಭೂಷಣ ರಾವಬಹದ್ದೂರ್ ಸಿ. ಹನುಮಂತಗೌಡರು, ಹೊಸಪೇಟೆ. ಅವರೇ ಪ್ರಕಟಿಸಿರುವರು. ಡೆ. ಅ. ೫೪ ಪುಟ. ಬೆಲೆ ?

೭೫. **ಕಣ್ಣು ಮತ್ತು ಅದರ ರಕ್ಷಣೆ** (ವಿಜ್ಞಾನ ಪರಿಚಯ) ಶ್ರೀ. ಡಿ. ಶಾಮಣ್ಣ ಬಿ. ಎ., ಎಂ. ಬಿ. ಎಸ್. ಅವರು ಬರೆದುದು; ಮೈಸೂರು ವಿ. ವಿ. ನಿಲಯದ ಪ್ರಚಾರ-ಪುಸ್ತಕ ಮಾಲೆಯ ೨೦ನೆಯ ಪ್ರಕಟನೆ. ಫೂ. ಕ್ಯಾ. ಅ. ೪೨ ಪುಟ; ಬೆಲೆ ೦–೨–೦.

೭೬. **ರಾಜನೀತಿ** (ವಿವೇಚನಾತ್ಮಕ ಗ್ರಂಥ) ಶ್ರೀಮಾನ್ ಎಚ್. ಕೃಷ್ಣರಾವ್ ಎಂ. ಎ. ಮೈಸೂರು ಅವರು ಬರೆದುದು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯ ೧೩ನೆಯ ಗ್ರಂಥ. ಕ್ರೌ. ಅ. ೧೬+೨೭೮ ಪುಟ; ಬೆಲೆ ೦–೧೨–೦.

೭೭. **ದೀಪಮಾಲೆ** (ಜೀವನ ಪರಿಚಯ) ಶ್ರೀಮಾನ್ ಸಿದ್ದಪ್ಪನ ಹಳ್ಳಿ ಕೃಷ್ಣಶರ್ಮರು ಬರೆದುದು. ಧಾರವಾಡದ ಮಿಂಚಿನಬಳ್ಳಿಯ ೩ನೆಯ ವರ್ಷದ ೩ನೆಯ ಕುಡಿಯಿದು. ಕ್ರೌ. ಅ. ೧೨+೧೪೪ ಪುಟಗಳು; ಬೆಲೆ ೧–೦–೦.

೭೮. **ಕನ್ನಡಿ** (ಹರಟೆಗಳು) ಶ್ರೀ. 'ಅನಿರುದ್ಧ' ಅವರು ಬರೆದುವು. ಧಾರವಾಡದ ರಂಗ-ಮಂಗ ರಂಜನೋದ್ಯಾನದ ೪ನೆಯ ಹೂಗೊಂಚಲು. ಫೂ. ಕ್ಯಾ. ಅ. ೬೨ ಪುಟ; ಬೆಲೆ ೦–೪–೦.

೭೯. **ಜಯಚಾಮರಾಜ ಚಂದ್ರೋದಯ** (ಲಾವಣಿ). ಲೇಖಕರು ಮತ್ತು ಪ್ರಕಾಶಕರು ಶ್ರೀಮಾನ್ ಎನ್. ವಿಷಕಂಠರಾವ್ ಮೈಸೂರು. ಕ್ರೌ. ಅ. ೮ ಪುಟ.

೮೦. **ರಾಗಿಣಿ** (ಕವನ ಸಂಗ್ರಹ) ಶ್ರೀಮಾನ್ ಎಸ್. ವಿ. ಪರಮೇಶ್ವರ ಭಟ್ಟ ಎಂ. ಎ. ಕನ್ನಡ ಅಧ್ಯಾಪಕರು ಇಂಟರ್ ವಿಶಾಖಪಟ್ಟಣಂ ಕಾಲೇಜ್ ತುಮಕೂರು ಅವರು ಬರೆದು ಪ್ರಕಟಿಸಿದ್ದಾರೆ. ಕ್ರೌ. ಅ. ೧೨+೭೬ ಪುಟಗಳು; ಬೆಲೆ ೦–೮–೦.

೮೧. **ಸ್ವಾಮಿ ವಿವೇಕಾನಂದರ ಭಕ್ತಿಯೋಗ.** ಅನುವಾದಕರು ಶ್ರೀಮಾನ್ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು. ಪ್ರಕಾಶಕರು ಮನೋಹರ ಗ್ರಂಥಭಾಂಡಾರ, ಧಾರವಾಡ. ಕ್ರೌ. ಅ. ೧೪೮ ಪುಟಗಳು; ಬೆಲೆ ೦–೧೦–೦.

———o———



ಬುದ್ಧಿವಂತ ವಿದ್ಯಾರ್ಥಿ

ಗೋಪಾಲ:— ಪಾಂಡವರಿಗೆ 'ಪಾಂಡವರು' ಅಂತ ಹೆಸರು ಯಾಕೆ ಬಂತರೀ ಮಾಸ್ತರ್ ?

ಮಾಸ್ತರ್ :— ಅವರು ಪಂಡುರಾಯನ ಮಕ್ಕಳು ; ಆದಕ್ಕೆ ಅವರಿಗೆ 'ಪಾಂಡವರು' ಅಂತಾರೆ.

ಗೋಪಾಲ:—ಹಾಂಗಾದರ ಮಾಸ್ತರ್, ನಮ್ಮ ಪಂಡುರಾಯನ ಮಕ್ಕಳನ್ನ 'ಪಾಂಡವರು' ಅಂತ ಕರೀಬಹುದೇನ್ರಿ ?

* * *

ಒಬ್ಬರು ಇಬ್ಬರು ನೋಡ್ರಿ !

"ಯಾವನಿಗೆ ಮಾಡಿಕೊಂಡ ಹೆಂಡತಿನ್ನ ಸಂತುಷ್ಟಳಾಗಿ ಇರಿಸಲಿಕ್ಕೆ ಬರೂದಿಲ್ಲ ; ಅಂಥಾ ಗಂಡಸಿನ ಯೋಗ್ಯತಾ, ಒಂದು ಎಂಡೆಗಲ್ಲಿಗಿಂತಾ ಹೆಚ್ಚೇನೂ ಅಲ್ಲಾ.. ಅಂತ ಖಾರಿ ಹೇಳತೇನಿ ನಾನು !"

"ತನ್ನಕಿಮ್ಮತ್ತು ತನಗೆ ತಿಳಿದರೂ ಅದನ್ನ ಒಪ್ಪಿಕೊಂಡು, ಬಾಯಿಂದಽ ಸಾರಿ ಹೇಳುವ ನಮ್ಮಂಥಾ ಮನುಷ್ಯರು ಸಿಕ್ಕೂದೆಂದರೆ ಎಲ್ಲಾರೆ ಒಬ್ಬರು ಇಬ್ಬರು ನೋಡ್ರಿ !"

* * *

'ಮಾಸ್ತರ್' ಅಂತ ಕರೀಬೇಕ್ರೀ!

ಅಧ್ಯಾಪಕ :— ತಮಗಿಂತಾ ಚಿಕ್ಕವರ ವಿಷಯಕ್ಕೆ ಅಂತಃಕರಣ ತೋರಿಸುವವರಿಗೆ ನಿನಂತಾರಪ್ಪು ಗುಂಡಾ ?

ಗುಂಡ:—ಸಜ್ಜನ ಅಂತಾರ್ರೀ ಮಾಸ್ತರ್!

ಅಧ್ಯಾಪಕ :— ಮತ್ತೆ ತಮ್ಮಗಿಂತಾ ಚಿಕ್ಕವರನ್ನ ಪಿಡಿಸತೀರೂವವರನ್ನ ನಿನಂತ ಕರೀಬೇಕು ಹೇಳು ಹಾಂಗಾದರ ?

ಗುಂಡ:— 'ಮಾಸ್ತರ್' ಅಂತ ಕರೀಬೇಕ್ರೀ ಮಾಸ್ತರ್ !

* * *

ಹಿಡಿದೇ ಬಿಡತೀನಿ !

ಗಂಡ:— ಯಾಕ? ಹ್ಯಾಂಗ ಅನಸತಽದ ಈ ಬಂಗಲೆ ನಿನಗ ?

ಹೆಂಡತಿ :— ಭಾಳೀ ಛೆಲೋ ಅದ ! ಈ ಉಪ್ಪರಿಗೀ ಮ್ಯಾಲ ನಿಂತು, ಆ ಸರೋವರದ ಸೌಂದರ್ಯ ನೋಡಿಕೋತಽ ಇದ್ದರ, ಒಂದು ಮಾತು ಬ್ಯಾಡಾ, ಕಥೀ ಬ್ಯಾಡಾ ಅನಿಸಿ ಬಿಡತಽದ !

ಗಂಡ :— ಹೀಂಗಽ? ಕುಂಬಾ ಸಂತೋಷ! ನೂರು ರೂಪಾಯಿ ಬಾಡಿಗೀ ಹೇಳಿದರೂ ಬಿಡೂದಿಲ್ಲ....ಬಿಡು ; ಹಿಡಿದೇ ಬೀಡತೀನಿ ಈ ಬಂಗಲೇನ !

* * *

ಒಳ್ಳೆಯದೋ ಕೆಟ್ಟದೋ ?

ಮದ್ಯಪಾನ ನಿರೋಧವನ್ನು ಕುರಿತು ಪ್ರಚಾರಕನೊಬ್ಬ ಉಪನ್ಯಾಸ ಕೊಡುತ್ತಲಿದ್ದ:

"ಗೆಳೆಯರೆ, ಸೆರೆ ಕುಡಿಯೂದರಿಂದಽ ಉಂಟಾಗೂ ದುಷ್ಪರಿಣಾಮಗಳನ್ನ ಎಷ್ಟಂತ ಹೇಳಬೇಕು ನಿಮಗ ? ಸೆರೆಯೆಂದರೆ ಇದೊಂದು ಮನುಷ್ಯಪ್ರಾಣಿಗೆ ದೊರೆತ ಶಾಪ ಇದ್ದಾಂಗ ಅದಽ! ನೆರೆಹೊರೆಯವರ ಜೋಡೀ ಅಷ್ಟೇ ಅಲ್ಲ; ಅಣ್ಣ-ತಮ್ಮಂದಿರೊಳಗ ಸುದ್ದಾ ಇದು ಝಗಳಾಡಲಿಕ್ಕೆ ಹಚ್ಚಿ ಬಿಡತಽದ ! ನಮಗೆಲ್ಲರಿಗೂ ಮಾನ್ಯನಾಗಿ ಇರುವ ಯಜಮಾನನ ಮ್ಯಾಲ ಸುದ್ದಾ ಗುಂಡು ಹಾರಿಸಲಿಕ್ಕೆ ಈ ಸೆರೆ ಕಲಿಸತಽದ....."

ನೆರೆದವರಲ್ಲಿ ಒಬ್ಬ ಕೂಲಿಕಾರ ಕೂಗಿ ಹೇಳಿದ :

"ಹೊಡೀಬೇಕಂತ ಎತ್ತಿದ ಗುಂಡಿನ ಗುರೀ ಸುದ್ದಾ ಈ ಸೆರೇದಿಂದನಽ ತಪ್ಪಿ ಹೋಗತಽದ !"

* * *

ಇದಕ್ಕೇನು ಮಾಡಂತೀರಿ ?

"ನೋಡ್ರೀ, ಆ ವಾಸೂ ಇದ್ದಾನಲಾ ; ಅಂವಾ ಕವೀ ಆಗೂದಕ್ಕಿಂತಾ ಸಂಗೀತಗಾರ ಆಗಿದ್ದರ ಒಳ್ಳೇದಾಗತಿತ್ತು ನೋಡ್ರಿ !"

"ಛೇ ಛೇ ಬಿಡ್ರೀ ; ಅಂವ ಯಾವಾಗ ಯಾವಾಗಽರೆ ಹಾಡತಿರೂದನ್ನ ನಾನು ಕೇಳೀನಿ; ವಾಸೂ ಹಾಡಲಿಕ್ಕೆ ಹತ್ತಿದನಂದರೆ ಕೇಳವರಿಗೆ ತಮ್ಮ ಜೀವ ಸುದ್ದಾ ಬ್ಯಾಡಾಗಿ ಹೋಗತಽದ !"

"ಇದಿನ್ನೂ ಒಳ್ಳೇದರೀ ? ವಾಸೂ ತನ್ನ ಕವಿತಾ ಹೇಳಲಿಕ್ಕೆ ಸುರೂಮಾಡಿದನಂದರ, ಕೇಳವರಿಗೆ ಅಂವ ಜೀವದಿಂದಿರೂದಽ ಬ್ಯಾಡಂತ ಅನಿಸಿ ಹೋಗತಽದಲ್ಲಾ; ಇದಕ್ಕೇನು ಮಾಡಂತೀರಿ ?

* * *

ಬೇಕೇನು ನಿಮಗೇ ?

"ಇಂಧಾ ಒಳ್ಳೇ ಕವಿತಾ ಓದಿಬಿಟ್ಟರೆ ಮೊದಲಿನ ನಮ್ಮ ಅರಸರು ಅರ್ಧ ರಾಜ್ಯಾ ಕೊಟ್ಟು ಬಿಡತಿದ್ರು; ಹೇಳ್ರಿ ಹೇಳ್ರಿ; ನೀವೇನು ಕೊಡತೀರಿ ಸಂಪಾದಕರೆ !

"ಅವರು ಅರ್ಧರಾಜ್ಯಾ ಕೊಟ್ಟರೆ ನಾವು ಅರ್ಧಚಂದ್ರಾ ಕೊಡೋಣ ! ಬೇಕೇನು ನಿಮಗೆ ?

* * *

ಬಡಬಡಿಸದೆ ಇದ್ದರೆ ಸರಿ !

ಆಕೆ:— ಅಲ್ರೀ ಡಾಕ್ಟರ್‌ಸಾಹೇಬ್ ! 'ನಾನು ಶಹಾಜಹಾನ್ ಬಾದಶಹಾ ಇದ್ದೇನೆ' ಅಂತ ಬಡಬಡಿಸತಾ ಇದ್ದಾರ ಇವರು. ಹೀಂಗೆಲ್ಲಾ ಸಿಕ್ಕಸಿಕ್ಕ ಹಾಂಗ ಭ್ರಮೆಯಿಂದ ಬಡಬಡಿಸೂದಂದರ ಇನ್ನೇನೂ ಆಗಲಿಕ್ಕಿಲ್ಲ ಅಲ್ಲವೇ ಇವರಿಗೆ ?

ಡಾಕ್ಟರ್:— 'ನಾನು ನೂರಜಹಾನ್ ಇದ್ದೀನಿ' ಅಂಬೂ ಭ್ರಮೆಯಿಂದ ನೀವು ಬಡಿಬಡಿಸದೆ ಇದ್ದರೆ ಸರಿ; ನಿಮ್ಮ ಯಜಮಾನರಿಗೆ ಏನೂ ಆಗೂದಿಲ್ಲ !

* * *



ಹಳೆಯ ಹಾಡಿಗೆ ಹೊಸ ರಾಗ

ಕಳೆದ ತಿಂಗಳ ಕೊನೆಗೆ ಹಿಂದುಸ್ತಾನದಲ್ಲಿ ವೈಸ್‌ರಾಯರೂ, ಇಂಗ್ಲಂಡಿನಲ್ಲಿ ಭಾರತಮಂತ್ರಿಗಳೂ ಹಿಂದುಸ್ತಾನದ ರಾಜಕೀಯ ಪರಿಸ್ಥಿತಿಯ ವಿಷಯವಾಗಿ ಭಾಷಣಗಳನ್ನು ಮಾಡಿದರು. ರಾಜಕಾರಣಧುರೀಣರಲ್ಲಿ ಕೆಲವರು ಈ ಭಾಷಣಗಳು ಮಹತ್ವದ ಘೋಷಣೆಗಳಾಗಬಹುದೆಂದು ನಿರೀಕ್ಷಿಸಿದ್ದರು. ಮುತ್ಸದ್ದಿತನದ ದೃಷ್ಟಿಯಿಂದ ಈ ಮೇಲಧಿಕಾರಿಗಳಿಗೆ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಇದೊಂದು ಪ್ರಸಂಗ ಒದಗಿತ್ತು. ಆದರೆ ಎಲ್ಲ ರೀತಿಯಿಂದ ಈ ಭಾಷಣಗಳು ನಿರಾಶಾಜನಕವಾದುವೆಂದು ಹೇಳಬೇಕಾಗಿದೆ. ಸ್ಟೇಟ್ ಸೆಕ್ರೆಟರಿಯವರು ಎರಡು ಸಲ ಮಾತನಾಡಿದರೂ ಅವನ್ನೇ ಹೇಳಿದರು, ವೈಸರಾಯರೂ ಅವನ್ನೆ ಹೇಳಿದರು, ಇವರಿಬ್ಬರೂ ೪-೬ ತಿಂಗಳುಗಳಿಂದ ಅವನ್ನೆ ಹೇಳುತ್ತಲಿದ್ದಾರೆ. ಇನ್ನೇ ವೈತಕ್ಯಾಸ:— ಈ ಸಲ ಪೂರ್ತಿಯಾಗಿ ಪ್ರಚಾರದೃಷ್ಟಿಯಿಂದಲೆ ಇಬ್ಬರೂ ಮಾತನಾಡಿದರು. (೧) ಭಾರತದ ಪಕ್ಷಗಳಲ್ಲಿ ಏಕಮತ್ಯವಿಲ್ಲ, ಅತ್ಯಂತ ವಿರೋಧವೂ ಇದೆ. (೨) ನಾವು ದಯೆಮಾಡಿಸಿರುವ (ವೈಸರಾಯರ ಕೌನ್ಸಿಲ್ ಸಂಖ್ಯೆಯನ್ನು ಹೆಚ್ಚಿಸುವ) ಸುಧಾರಣೆ ಇವರೆ ಒಕ್ಕಡ್ಡಿದ್ದರೂ ಇವರಿಗೆ ಅದನ್ನು ಸ್ವೀಕರಿಸುವ ಉತ್ಸಾಹವಿಲ್ಲ. (೩) ಇದಲ್ಲದೆ ಇವರ ವಿರೋಧಕ್ಕೆ ರಾಷ್ಟ್ರದ ಬೆಂಬಲವಿಲ್ಲ ಎಂಬುದು ಯುದ್ಧಸಹಾಯಕ್ಕೆ ದೊರೆಯುವ ಅಪಾರ ಧನ-ಜನ-ಸಾಮಗ್ರಿಗಳಿಂದ ಸ್ಪಷ್ಟವಾಗುವುದು. (೪) ಕೊನೆಯದಾಗಿ ನಮ್ಮದು ಬೇಡವಾಗಿದ್ದರೆ ತಮಗೆ ಯಾವುದು ಬೇಕೆಂಬುದನ್ನೂ ಅದಕ್ಕಾಗಿ ಐಕಮತ್ಯದ ಬೇಡಿಕೆಯನ್ನೂ ಇವರು ತೋರಿಸಿಕೊಡಬೇಕು. ಹೀಗೆ ನಾಲ್ಕು ಮಾತುಗಳು ಆ ಭಾಷಣಗಳಲ್ಲಿಯು ಮಹತ್ವದ ಸಂಗತಿಗಳಾಗಿವೆ.

ಭಿನ್ನಾಭಿಪ್ರಾಯ ಮತ್ತು 'ಜಿನ್ನಾಭಿಪ್ರಾಯ'

'ಭಾರತದ ಪಕ್ಷಗಳಲ್ಲಿ ಐಕಮತ್ಯವಿಲ್ಲ, ಅತ್ಯಂತ ವಿರೋಧವೂ ಇದೆ' ಎಂಬ ಮಾತಿನಲ್ಲಿ ತೋರಿಕೆಯ ಸತ್ಯವಿದೆ; ಆದರೆ ಇದರಲ್ಲಿ ಕಾರಣಗಳಿಲ್ಲದ ಸಂಗತಿಗಳೂ ಸೇರಿವೆ. ಯಾವ ದೇಶದ ರಾಜಕೀಯ ಪಕ್ಷಗಳಲ್ಲೂ ಐಕಮತ್ಯವಿದ್ದುದು ಇತಿಹಾಸದಲ್ಲಿ ಕಂಡುಬರುವುದಿಲ್ಲ, ಹಾಗೆ ಇರಬೇಕಾದುದೂ ಇಲ್ಲ (ಇರುವುದಾದರೆ, ಪ್ರಜಾಪ್ರಭುತ್ವಪದ್ಧತಿಯ ಶತ್ರುವಾದ ಸರ್ವಾಧಿಕಾರಿತ್ವ ವಿದ್ದಲ್ಲಿ ಕಂಡುಬರುವುದು). ಧ್ಯೇಯವು ಹಿಂದುಸ್ತಾನದ ಸ್ವಾತಂತ್ರ್ಯ ಎಂಬುದಕ್ಕೆ ಗಾಂಧಿ – ಜಿನ್ನಾ – ಸಾವರಕರರಲ್ಲಿ ಭಿನ್ನಾಭಿಪ್ರಾಯವಿಲ್ಲ. ಇದಲ್ಲದೆ ಗಾಂಧಿ–ಜಿನ್ನಾ–ಸಾವರಕರರ ಪಕ್ಷಗಳನ್ನು ಒಂದಕ್ಕೊಂದು ಹೋಲಿಸುವುದೆ ಸರಿಯಲ್ಲ ಎಂದು ನಮ್ಮ ಸೂಚನೆ. ಗಾಂಧಿಯವರದು ರಾಜಕೀಯ ಪಕ್ಷ; ಜಿನ್ನಾ–ಸಾವರಕರರದು ಇಂದಿನ ಜೀವನಕ್ಕೆ, ವ್ಯವಹಾರ ವಿಭಾಗಕ್ಕೆ ಹೊಂದದ ಧರ್ಮದ ಸಂರಕ್ಷಣೆಯ ಮತ್ತು ಪೋಷಣೆಯ ಪಕ್ಷಗಳು. ಯಾವ ಧರ್ಮಕ್ಕಾಗಲಿ ಜಾತಿಗಾಗಲಿ ಮುಖದ ಸುಣ್ಣ-ಬಣ್ಣಗಳಿಗಾಗಲಿ ಮಹತ್ವವನ್ನು ಕೊಡುವುದಿಲ್ಲವೆಂದು ವಚನಕೊಟ್ಟ ಪಾರ್ಲಮೆಂಟು, ಜಿನ್ನಾ-ಸಾವರಕರರ ಪಕ್ಷಗಳನ್ನೆ ಮನ್ನಿಸಬಾರದಾಗಿತ್ತು, ಮೊದಲಿನಿಂದಲೂ ಆ ಧೈರ್ಯವನ್ನೂ ಧೋರಣೆಯನ್ನೂ ತೋರಿಸಬೇಕಾಗಿತ್ತು; ಆದೂ ಹೋಗಲಿ, ಹಿಂದುಸ್ತಾನವನ್ನು ಒಂದುಗೂಡಿಸಿರುವೆವು, 'ಅಖಿಲ-ಭಾರತ'ವೆ ನಮ್ಮ ನೀತಿಯ ಗುರಿ ಎಂದು ಹೆಮ್ಮೆಪಡುವ ಬ್ರಿಟಿಶ್ ಸರಕಾರವು, ಹಿಂದುಸ್ತಾನವನ್ನು ನಿರಂತರವಾಗಿ ಕಡಿದು ತುಂಡು ಮಾಡಬೇಕೆನ್ನುವ 'ಪಾಕಿಸ್ತಾನದ ಪೈಗಂಬರ'ರಿಗೆ ಅನುಮತಿ ಕೊಡಬಾರದು. ಪ್ರಾಮಾಣಿಕ ಭಿನ್ನಾಭಿಪ್ರಾಯಕ್ಕೂ ಈ ಪ್ರಗತಿವಿರೋಧ 'ಜಿನ್ನಾಭಿಪ್ರಾಯ'ಕ್ಕೂ ಅತ್ಯಂತ ವ್ಯತ್ಯಾಸವಿದೆ. ಪ್ರಜಾಪ್ರಭುತ್ವದ ಪುರಸ್ಕರ್ತರಾದವರು ಈ ವ್ಯತ್ಯಾಸವನ್ನು ಅರಿಯಬೇಕಲ್ಲದೆ, ಮರೆಯಬೇಕಿಲ್ಲ.

ಸ್ವಾತಂತ್ರ್ಯ ಬೇರೆ, ಅಧಿಕಾರ ಬೇರೆ!

ವೈಸ್‌ರಾಯರು ತಮ್ಮ ಕೌನ್ಸಿಲಿನ ಸಂಖ್ಯೆಯನ್ನು ಹೆಚ್ಚಿಸಿ, ಅದರಲ್ಲಿ ಲೋಕನಿಯುಕ್ತ ಸಭಾಸದರನ್ನು ಸೇರಿಸಲು ಮತ್ತು ಯುದ್ಧಸಹಾಯಕ್ಕಾಗಿ ಒಂದು ಸಲಹೆಗಾರಮಂಡಳವನ್ನು ನಿರ್ಮಿಸಲು ಸೂಚನೆ ಮಾಡಿರುವರಷ್ಟೆ. ಈ ಸೂಚನೆಯನ್ನು ಯಾವ ಪಕ್ಷವೂ ಒಪ್ಪಲಿಲ್ಲ ಎಂದಮೇಲೆ ಅದರಲ್ಲಿಯೆ ಏನಾದರೂ ಕೊರತೆ ಇದೆ ಎಂದು ಊಹಿಸಬಹುದಲ್ಲವೆ? ಅಥವಾ, ಊಹೆ ಯಾದರೂ ಯಾಕೆ? ಈ ಲೋಕನಿಯುಕ್ತ ಕೌನ್ಸಿಲರರಿಗಾಗಲಿ

ಸಲಕೆಗಾರಮುಂಡಳಕ್ಕಾಗಲಿ ಕಾರ್ಯದ ಅಧಿಕಾರಮಾತ್ರವಿದೆ, ನಿರ್ಣಯಸ್ವಾತಂತ್ರ್ಯವಿಲ್ಲ. ಇಂದು ಕಾಂಗ್ರೆಸಿನ ಬೇಡಿಕೆ ಸ್ವಾತಂತ್ರ್ಯಕ್ಕಾಗಿ ಇದೆ ಅಲ್ಲದೆ, ಕೆಲವು ಅಧಿಕಾರಸ್ಥಾನಗಳಿಗಾಗಿ ಇಲ್ಲ. 'ಆರ್ಥಿಕ ಧೋರಣೆ, ಪರರಾಷ್ಟ್ರಸಂಬಂಧ, ಯುದ್ಧಸಿದ್ಧತೆ ಮೊದಲಾದ ಕೆಲಸಗಳೆಲ್ಲ ಸರಕಾರನಿಯುಕ್ತ ಮಂತ್ರಿಗಳ ಕ್ಷೇತ್ರ, ಮಿಕ್ಕದ್ದು ಲೋಕನಿಯುಕ್ತರ ಕ್ಷೇತ್ರ' ಎಂಬ ಪರಿಸ್ಥಿತಿಯೆ ಮತ್ತೆ ಪ್ರಾಪ್ತವಾಗುವುದು ಖಂಡಿತ. ಹೀಗೆ ಧೈರ್ಯದಿಂದ ಹೇಳಲು ಎರಡು ತೀರ ಇತ್ತೀಚಿನ ಉದಾಹರಣೆಗಳು ನಮ್ಮ ಕಣ್ಣ ಮುಂದಿವೆ: ಒಂದು, ಸಾಮ್ರಾಜ್ಯ ಪ್ರಾಚ್ಯಪ್ರದೇಶಗಳ ಪರಿಷತ್ತಿನಲ್ಲಿ ಭಾರತೀಯ ಪ್ರತಿನಿಧಿಗಳಿಗೆ ದೊರೆಯುತ್ತಿರುವ ಸ್ಥಾನಮಾನ; ಇನ್ನೊಂದು, ಆರ್ಥಿಕ ಮಸೂದೆಗೆ ವೈಸ್‌ರಾಯರು ಆಪ್ಯತವಾನ (certify) ಮಾಡಿದ್ದು. ಇದಲ್ಲದೆ ವೈಸ್‌ರಾಯರ ಹೊಸ ಸೂಜನೆಯಲ್ಲಿ ಕೊನೆಯ ನಿರ್ಣಯದ ಅಧಿಕಾರವು ವೈಸ್‌ರಾಯರಿಗೇ ಇದೆ. ಇನ್ನೊಂದು ದೃಷ್ಟಿಯಿಂದಲೂ ಈ ಸೂಜನೆ ಯಾಕೆ ಅಗ್ರಾಹ್ಯವಾಯಿತೆಂಬುದನ್ನು ತೋರಿಸಬಹುದು: ಈ ಸೂಚನೆಗೆ ಸಹಾಯಕಾರಕವಾದ ಮನೋವೃತ್ತಿ, ಸೂಚಕರಲ್ಲಿ ಕಂಡುಬರುವಂತಿಲ್ಲ. 'ನಿಮ್ಮಲ್ಲಿ ಐಕ್ಯವಿಲ್ಲ, ಅನುಭವವಿಲ್ಲ, ಯೋಗ್ಯತೆ ಇಲ್ಲ; ಆದಕಾಗಿ ಈ ಮಾದರಿ ಪದ್ಧತಿಯನ್ನು ನಿಮಗೆ ಹಾಕಿಕೊಡುತ್ತಲಿದ್ದೇವೆ. ಈ ಪದ್ಧತಿಯಿಂದ ನೀವು ಆ ಮೂರನ್ನೂ ಕಲಿತುಕೊಳ್ಳಬಹುದು 'ಎಂಬ ಹಿರಿತನದ ಧ್ವನಿ ಇದೆ. ಈ ಹಿರಿತನದ ಸೃಷ್ಟಿ ಭಾರತೀಯರ ಸ್ವಾಭಿಮಾನಕ್ಕೆ ಚುಚ್ಚುವಂತಾಗಿದೆ. ಈ ಸೃಷ್ಟಿಯಿಂದ ಹೇಳಿದ ಯಾವ ಮಾತಿಗೂ ಒಪ್ಪಬಾರದೆಂಬ ಹುಡುಗಾಟದ ಹಟ ನಮ್ಮ ಮುಂದಾಳುಗಳಲ್ಲಿ ಸೇರಿದ್ದರೆ ಅದರಲ್ಲಿ ಆಶ್ಚರ್ಯವಿಲ್ಲ— ಎನಬೇಕಾಗಿದೆ.

ಸಹಾಯ ಬೇಕೆ, ಸಹಕಾರ ಬೇಕೆ?

'ಸದ್ಯಕ್ಕೆ ಹಿಂದುಸ್ಥಾನವು ಯುದ್ಧಕ್ಕೆ ಅತ್ಯಂತವಾಗಿ ಸಹಾಯ ಮಾಡುತ್ತಲಿದೆ; ಇದರಿಂದ, ಭಾರತದ ಬೇರೆ ಬೇರೆ ಮುಂದಾಳುಗಳಿಗೆ ಜನತೆಯ ಬೆಂಬಲವಿಲ್ಲ ಎಂಬುದು ಸ್ಪಷ್ಟವಿದೆ' ಎಂದು ವೈಸ್‌ರಾಯರೂ ಭಾರತಮಂತ್ರಿಗಳೂ ಪ್ರಚಾರಮಾಡಿದ್ದಾರೆ. ಈ ಮಾತನ್ನು ಅಲ್ಲಗಳೆಯುವಂತಿಲ್ಲವಾದರೂ ಅದು ಸತ್ಯವೆಂದೂ ಹೇಳುವಂತಿಲ್ಲ. ಯಾಕೆಂದರೆ, ಸದ್ಯಕ್ಕೆ ಭಾರತದಿಂದ ಸಹಾಯ ದೊರಕುತ್ತಿದೆ, ಆದರೆ ಸಹಕಾರ ಮಾತ್ರವಿಲ್ಲ ಎಂಬ ಅಲಂಕಾರಿಕ ಸ್ಥಿತಿ ಇದೆ. ಸರಕಾರೀ ಅಧಿಕಾರಿಗಳು, ಸಂಸ್ಥಾಪಕರು ಇವರೇ ಹೆಚ್ಚಾಗಿ ಸಹಾಯ ಮಾಡುತ್ತಲಿದ್ದಾರೆ; ಇದಲ್ಲದೆ ಬ್ರಿಟಿಶ್ ರಾಜನೀತಿಯೆ ಇಂದು ಅಧಿಕಾರಾರೂಢವಿದೆ ಎಂಬ ಸಂಗತಿಯನ್ನು ಮರೆಯುವಂತಿಲ್ಲ. ಇಂದಿನ ಸಹಾಯವು ಹಿಂದುಸ್ಥಾನದ ಜನಸಂಖ್ಯೆಯ ಮತ್ತು ಸಂಪತ್ತಿನ ದೃಷ್ಟಿಯಿಂದ ಬಹಳೇ ಅಲ್ಪ ಪ್ರಮಾಣದ್ದಾಗಿದೆ. ಇದಲ್ಲದೆ, ಕಾಂಗ್ರೆಸು ಎಂದಿನಿಂದಲೂ ಹುಟ್ಟಿರ್‌ಪದ್ಧತಿಯ ವಿರೋಧಕವಾಗಿದೆ. ಒಂದು ವೇಳೆ ಇಷ್ಟೊಂದು ಸಹಾಯ ದೊರೆತು ಮುಂದಾಳುಗಳಿಗೆ ಭಾರತೀಯ ಜನತೆಯ ಬೆಂಬಲವಿದ್ದಿಲ್ಲವಾದರೆ, ಕಾಂಗ್ರೆಸಿನ ವಿರೋಧಕ್ಕೆ ಸರಕಾರವು ಇಷ್ಟೊಂದು ಮಹತ್ವವನ್ನು ಕೊಡಬೇಕಾಗಿಲ್ಲ; ಸಾವಿರಗಟ್ಟಿಲೆ ಮುಂದಾಳುಗಳನ್ನು ಸೆರೆಮನೆಗೆ ಕಳುಹಿಸಲು ಸಿದ್ಧವಾಗಬೇಕಾಗಿದ್ದಿಲ್ಲ. ಹೀಗಾಗಿ ಸರಕಾರದ ಸವ್ಯದ ಧೋರಣೆಯೆ ಅವರ ಮಾತಿನ ಅಪೂರ್ಣತೆಯನ್ನು ತೋರಿಸುತ್ತಿದೆ.

ಭಾರತೀಯ ಐಕಮತ್ಯ

ಕೊನೆಯದಾಗಿ 'ಭಾರತೀಯರು ಒಂದಾಗಿ, ತಾವೇ ಮುಂದಾಗಿ ತಮ್ಮ ಬೇಡಿಕೆಯನ್ನಿಡಬೇಕು' ಎಂಬ ಮಾತನ್ನು ನೋಡೋಣ. ಇದರಲ್ಲಿ 'ಒಂದಾಗಿ' ಎಂಬುದಕ್ಕೆ 'ಒಂದು ನೊಣವೂ ವಿರೋಧಿಸದಂತೆ' ಎಂಬ ಅರ್ಥವಿದ್ದರೆ ಆ ಮಾತಿನ ಪ್ರಾಮಾಣಿಕತೆಯೆ ಇಳಿಯುವುದು; ಯಾಕೆಂದರೆ, ರಾಜಕಾರಣದ ರಂಗದಲ್ಲಿ ಅತ್ಯಂತ ಐಕಮತ್ಯವು ಎಂದಿಗೂ ಎಲ್ಲಿಯೂ ಕಾಣದ ವಸ್ತು. ಹಾಗೆಂಬ ಅರ್ಥವಿಲ್ಲ ಎಂದು ತಾತ್ಪರ್ತಿಕವಾಗಿ ತಿಳಿದು ಮುಂದೆ ಸಾಗೋಣ. ರಾಜಕೀಯ ಐಕಮತ್ಯದಿಂದ ಒಂದು ಸ್ವಾತಂತ್ರ್ಯದ ಯೋಜನೆ ಸಿದ್ಧವಾಯಿತೆಂದು ತಿಳಿಯೋಣ. ಹಾಗೆ ಯೋಜನೆ ಸಿದ್ಧವಾದರೆ ಅದನ್ನು ಒಪ್ಪಿ ನಡೆಯಿಸಲು ತನ್ನಸಿದ್ಧತೆ ಇದೆ ಎಂದು ಪಾರ್ಲಮೆಂಟು ಅಧಿಕೃತವಾಗಿ ಎಂದಾದರೂ ಹೇಳಿದೆಯೆ? ಭಾರತಕ್ಕೆ ಸ್ವಾತಂತ್ರ್ಯ ಬೇಕು— ಎಂಬ ಮಾತಿಗೆ ಎಲ್ಲ ಪಕ್ಷಗಳಲ್ಲಿ ಐಕಮತ್ಯವಿದೆ. ರಾಜ್ಯಪದ್ಧತಿಗಾಗಿ ಭಿನ್ನಾಭಿಪ್ರಾಯವಿದೆ; ಆ ಭಿನ್ನಾಭಿಪ್ರಾಯಕ್ಕೆ ಕೆಲವು ಭೀತಿ-ಸಂದೇಹಗಳು ಕಾರಣವಾಗಿವೆ.

ವೈ. ರಾ. ಸಾ. ಭೀಮರಾವ ಕಲಕೋಟಿ,
ರಿಟಾಯರ್ಡ್ ಇನ್ಸ್‌ಪೆಕ್ಟರ್ ಇವರು ತಯಾರಿಸಿದ

ಮರಾಠಿ ಪೋಲೀಸ ಗೈಡ

ಸುಧಾರುನ ಬಾಡವಿಲೆಲಿ ಮರಾಠಿ ಆವೃತ್ತಿ

★

ಡಿಸ್ಟ್ರಿಕ್ಟ, ರೆಲ್ವೆ ಪೋಲೀಸ, ಅಬಕಾರಿ ಪೋಲೀಸ ವ
ಪೋಲೀಸ ಪಾಟೀಲ ಯಾಂನಾ

ಅತ್ಯಂತ ಉಪಯುಕ್ತ

ರೌಯಲ ಅಷ್ಟಪತ್ರಿ ಪೃಷ್ಠ ೪೨೯.

ಕಿಂಮತ ಫಕ್ತ ೨॥ ರುಪಯೆ.

★

ಕಿಮ್ಮತ್ತಿನ ಹೊರತಾಗಿ ವ್ಹಿ. ಪಿ. ಮತ್ತು ಟಿ. ಖ. ಪ್ರತ್ಯೇಕ.

ಪುಸ್ತಕ ಸಿಕ್ಕತಕ್ಕ ಸ್ಥಳ:
ಮ್ಯಾನೇಜರ್,
ಕರ್ನಾಟಕ ಪ್ರಿಂಟಿಂಗ್ ವರ್ಕ್ಸ್, ಧಾರವಾಡ.

ಅವುಗಳಲ್ಲಿ ಸಯುಕ್ತಿಕವಾದುವುಗಳನ್ನು ಮಾತ್ರ ಸರಿಪಡಿಸಿ ಕೊಳ್ಳುವ ಹೊಣೆಗಾರಿಕೆ ಬಹುಮತದ ಪ್ರತಿನಿಧಿಯಾದ ಕಾಂಗ್ರೆಸ್ಸಿಗಿದೆ ಎಂದೂ, ಕಾಂಗ್ರೆಸು ತನಗಿದ್ದ ವಿರೋಧವನ್ನು ಅದಷ್ಟು ಕಡಮೆ ಮಾಡಿಕೊಳ್ಳಬೇಕೆಂದೂ, ಹಾಗೆ ಮಾಡಿದರೆ, 'ತನ್ನ ಸಹಕಾರ-ಸಹಾನುಭೂತಿ-ಸಮ್ಮತಿಗಳಿವೆ ಎಂದೂ ಪಾರ್ಲಮೆಂಟು ಅಧಿಕೃತವಾಗಿ ಹೇಳಿದರೆ, ಬ್ರಿಟಿಶ್ ನೀತಿಯ ಪ್ರಾಮಾಣಿಕತೆಗಾಗಿ ಯಾರಿಗೂ ಸಂದೇಹ ಉಂಟಾಗುವಂತಿಲ್ಲ.

ಇನ್ನೊಂದು ದೃಷ್ಟಿ

ಭಾರತೀಯರ ದೃಷ್ಟಿಯಿಂದ ಬ್ರಿಟಿಶ್ ಅಧಿಕಾರಿಗಳ ಹೇಳಿಕೆಗಾಗಿ ಮೇಲಿನಂತೆ ವಿರೋಧವು ಸಹಜವೆನಿಸುವುದು. ಆದರೆ ಕೇವಲ ಆ ವಿರೋಧದಿಂದ ಇಂದಿನ ಪರಿಸ್ಥಿತಿ ಸುಧಾರಿಸುವಂತಿಲ್ಲ. ಬ್ರಿಟಿಶರಿಗೆ ಕೇಳುವ ಪ್ರಶ್ನೆಗಳಿಗಿಂತ ಹೆಚ್ಚಾಗಿ ಮತ್ತು ಹೆಚ್ಚು ಹಟದಿಂದ ಕಾಂಗ್ರೆಸು ತನಗೆಯೆ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಾಗಿದೆ. ಪ್ರಾಂತಿಕ ಸರಕಾರ ಪದ್ಧತಿಯಲ್ಲಿ ಕಾಂಗ್ರೆಸು ಅಧಿಕಾರಾರೂಢವಾದಂದಿನಿಂದ, ಮುಸಲ್ಮಾನರ ವಿರೋಧ ಕಾಂಗ್ರೆಸಿಗೆ ಹೆಚ್ಚಾಗಿದೆ, ಮುಸ್ಲಿಂ ಲೀಗಿನ ಶಕ್ತಿ-ಸಂಖ್ಯೆಗಳೂ ಬೆಳೆಯುತ್ತಲಿವೆ. ಈ ಮಾತನ್ನು ಕಾಂಗ್ರೆಸು ಇತ್ತಿತ್ತಲಾಗಿ ಪೂರ್ತಿಯಾಗಿಯೆ ಅಲಕ್ಷ್ಯ ಮಾಡಿದಂತಿದೆ; ಅದನ್ನು ಸರಿಪಡಿಸಿಕೊಳ್ಳಲು ಸಾಕಷ್ಟು ಯತ್ನಗಳನ್ನು ಮಾಡಲಿಲ್ಲ. ಇದಲ್ಲದೆ ಕಾಂಗ್ರೆಸು ರಾಜಕೀಯ ದೃಷ್ಟಿಗಿಂತ ನೈತಿಕದೃಷ್ಟಿಯನ್ನೆ ತನ್ನ ಒಂದು ಧ್ಯೇಯವನ್ನಾಗಿ ಮಾಡಿಕೊಳ್ಳುತ್ತಲಿದೆ; ಈ ನೈತಿಕದೃಷ್ಟಿಗೆ ಧಾರ್ಮಿಕ ಸಂಪ್ರದಾಯವು ಅನಿವಾರ್ಯವಾಗಿ ತಳಹದಿ ಎನಿಸುವುದು. ಒಂದು ಧರ್ಮದ ಸಂಪ್ರದಾಯದಂತೆ ಆ ಪಕ್ಷದ ರಾಜನೀತಿ ನಡೆದರೆ, ಇನ್ನೊಂದು ಧರ್ಮಕ್ಕೆ ಸಹನೆ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಕಾಂಗ್ರೆಸು ಕೇವಲ ಆರ್ಥಿಕ, ಮತ್ತು ರಾಜಕೀಯ ದೃಷ್ಟಿಗಳಿಂದಲೆ ತನ್ನ ಧೋರಣೆಯನ್ನಿಟ್ಟುಕೊಳ್ಳಬೇಕು; ಇಲ್ಲವಾದರೆ, ಆರ್ಥಿಕ ಮಸೂದೆಗೆ ವಿರೋಧಹೂಡಲು ಶಾಸನಸಭೆಗೆ ಹೋದಂತೆ ಆಚಾತುರವಾಗಬಹುದು. ಆಚಾತುರವಲ್ಲದೆ ಮತ್ತೇನು? ಕೇವಲ ತಮ್ಮನ್ನೂ ತಮ್ಮ ನೀತಿಯನ್ನೂ ತೋರಿಸುವ ಆಡಂಬರ ಕಾಂಗ್ರೆಸ್ ಮಾಡಿದಂತೆ, ಜಿನಾ ಅವರೂ ಅದೇ ಸಂಧಿಯ ಲಾಭವನ್ನು ಪಡೆದು ಪಾಕಿಸ್ತಾನವೇ ನಮ್ಮ ಧ್ಯೇಯ. ಅದಕಾಗಿ ಮುಡಿಯುವೆವು, ಆದಕಾಗಿ ಮುಡಿಯೆಲೂ ಸಿದ್ಧರಿರುವೆವು' ಎಂದು ಸಾರಿದರು. ಆಖಿಲ ಭಾರತ ರಾಜಕಾರಣದ ದೃಷ್ಟಿಯಿಂದ ನಮ್ಮವರದೆ ಜರ್ಜೆ ಪ್ರಾರಂಭವಾಗಲಿಲ್ಲ!

ಅಸಮಾಧಾನದ ಅವಸ್ಥೆ

ಇತ್ತ ಕಾಂಗ್ರೆಸಿನ ಸದಸ್ಯರು ಕೇಂದ್ರ ಶಾಸನಸಭೆಯಲ್ಲಿ ತಮ್ಮ ವಿರೋಧವನ್ನು ಪ್ರಕಟಿಸುತ್ತಿರುವಾಗ, ಇತ್ತ ದೇಶದ ತುಂಬ ವೈಯಕ್ತಿಕ ಸತ್ಯಾಗ್ರಹವನ್ನು ಮಹಾತ್ಮಾ ಗಾಂಧಿಯವರು ಹರಿಬಿಟ್ಟಿದ್ದಾರೆ. ಒಂದು ಕಡೆ ಪಂಡಿತ ಜವಾಹರರು ಬಂಧಿತರಾದುದ್ದು, ಇನ್ನೊಂದು ಕಡೆ ಇಂಗ್ಲಂಡ್ ಅಮೇರಿಕೆಗಳ ಸ್ವಾತಂತ್ರ್ಯಸಂಘಗಳು ಅದನ್ನು ನಿಷೇಧಿಸಿದ್ದು— ಇವುಗಳಿಂದ ಸತ್ಯಾಗ್ರಹದ ಪ್ರಾರಂಭವು ಉದ್ದೀಪಿತವಾಯಿತು, ಉತ್ತೇಜಿತವಾಯಿತು. ಮುಂದೇನಾಗುವುದೆಂಬುದರಲ್ಲಿ ಕತ್ತಲೆಯೆ ಕಾಣುತ್ತಲಿದೆ. ಯುದ್ಧ ಕಾಲದಲ್ಲಿ ಹೆರ್‌ತ್ಸಾಗ (ದಕ್ಷಿಣ ಆಫ್ರಿಕ), ಡಿವಲೇರಾ (ಐರ್ಲಂಡ್) ಇವರಿಗೆ ವಿರೋಧ ವ್ಯಕ್ತಮಾಡಲು ಇದ್ದಷ್ಟೆ ಸ್ವಾತಂತ್ರ್ಯ ಹಿಂದುಸ್ತಾನದಲ್ಲೂ ಯಾಕಿರಬಾರದು—ಎಂದು ಅನೇಕ ರಾಷ್ಟ್ರಾಭಿಮಾನಿಗಳು ಸರಕಾರಕ್ಕೆ ಕೇಳುತ್ತಲಿದ್ದಾರೆ. ಅದರಲ್ಲೂ ಮಹಾತ್ಮಾಗಾಂಧಿ, ಪಂಡಿತ ಜವಾಹರರಂತಹ ಸರ್ವಾಧಿಕಾರಿತ್ವ ವಿರೋಧಕರಿಗೆ ಇಂತಹ ಸ್ವಾತಂತ್ರ್ಯವಿಲ್ಲದ್ದು ವಿಷಾದಾಸ್ಪದವಾಗಿದೆ ಎಂದು ಇಂಗ್ಲಂಡಿನಲ್ಲಿಯೆ ಅನೇಕ ವಿದ್ವಾಂಸರೂ ಪತ್ರಿಕೆಗಳೂ ಅಭಿಪ್ರಾಯಪಟ್ಟಿವೆ. ಮಿಕ್ಕ ವಸಾಹತುಗಳಲ್ಲಿ ಮತ್ತು ಭಾರತದಲ್ಲಿ ಕಂಡು ಬರುವ ಈ ಭಿನ್ನ ನೀತಿಯಿಂದ ಅಸಮಾಧಾನವೂ ಅವಿಶ್ವಾಸವೂ ಹೆಚ್ಚುವುವು. ಹೀಗಾಗಿ ಎಲ್ಲ ದೃಷ್ಟಿಯಿಂದ ಸದ್ಯದ ನಮ್ಮ ರಾಜಕೀಯ ಪರಿಸ್ಥಿತಿಯು ಅತ್ಯಂತ ಅಸಮಾಧಾನಕಾರಕವಾಗಿದೆ ಎಂದು ಹೇಳುವಷ್ಟು ಸ್ವಾತಂತ್ರ್ಯ ನಮಗಿದೆ.

ಯುರೋಪದ ಯುದ್ಧ

ಅಮೇರಿಕೆಯಲ್ಲಿ ಮಿ. ರೂಜವೆಲ್ಟರೇ ಮತ್ತೆ ಅಧ್ಯಕ್ಷರಾಗಿ ಆರಿಸಿ ಬಂದಂದಿನಿಂದ, ಜರ್ಮನಿಯ 'ಒಪ್ಪಂದ ಸನ್ನಾಹ (Peace Offensive)' ವು ರಭಸದಿಂದ ನಡೆದಿದೆ. ಯುರೋಪದ ತುದಿಯಿಂದ ತುದಿಯವರೆಗೆ ಮುತ್ಸದ್ದಿಗಳು ಯಾತ್ರೆಯನ್ನು ನಡೆಯಿಸಿದ್ದಾರೆ. ರುಮಾನಿಯಾ, ಜರ್ಮನಿ-ಇಟಲಿ-ಜಪಾನ ಕೂಟವನ್ನು ಸಹಿಕೊಟ್ಟು ಸೇರಿದೆ. ಆದರೆ ಹಿಟ್ಲರನಿಗೆ ಅದರ ಆವಶ್ಯಕತೆ ಅಷ್ಟಿಲ್ಲ ಎನುವಂತಿದೆ. ಯಾಕೆಂದರೆ ಅವನು ರಶಿಯಾ ಮತ್ತು ಸ್ಪೇನಗಳೊಡನೆ ಸ್ನೇಹ ಬೆಳೆಯಿಸುವ ಜ್ವರಾಬಾಧೆಯಲ್ಲಿದ್ದಾನೆ. ಮುಖ್ಯವಾಗಿ, ಇಟಲಿಯ ಮೂರ್ಖತನವನ್ನು ಮುಚ್ಚಿ, ತಮ್ಮ ಗೌರವವನ್ನು ಉಳಿಸಿಕೊಳ್ಳುವುದು ಹಿಟ್ಲರನಿಗೆ ಅಗತ್ಯವಾಗಿದೆ. ಭೂಮಧ್ಯಸಮುದ್ರದಲ್ಲಿ ಬ್ರಿಟಿಶರಿಂದ, ಆಲ್ಬೇನಿಯಾದಲ್ಲಿ ಗ್ರೀಕರಿಂದ ಪೆಟ್ಟುತಿಂದು ಪಲಾಯನ ಹೇಳುತ್ತಿರುವ ಇಟಲಿಯ ಸೈನ್ಯಕ್ಕೆ ಜರ್ಮನಿಯ ಸಹಾಯಬೇಕು. ಒಂದುಕಡೆ ಜಿಬ್ರಾಲ್ಟರದ ಆತಂಕವಿದೆ, ಇನ್ನೊಂದು ಕಡೆ ತುರ್ಕಸ್ತಾನ ತಡೆಹಾಕಿದೆ. ಜಿಬ್ರಾಲ್ಟರವನ್ನು ಕೆಡಹುವ ಆಶೆಯಿಂದ ಸ್ಪೇನಡೊಡನೆ, ತುರ್ಕಸ್ತಾನವನ್ನು ತಡೆಯುವುದಕ್ಕೆ ರಶಿಯಾದೊಡನೆ ಸಂಧಿಯನ್ನು ಮಾಡಿಕೊಳ್ಳಬೇಕಾಗಿದೆ ಹಿಟ್ಲರನಿಗೆ. ಎರಡು ತಿಂಗಳಿಂದಲೂ ಕೈಮುಗಿದ ಹಿಟ್ಲರನೊಡನೆ ಈ ದೇಶಗಳು ಇನ್ನೂ ಸಂಧಿಯನ್ನು ಮಾಡಿಲ್ಲ ಎಂಬುದರಿಂದಲೆ ಇವನ ಇಭ್ರತ್ತು ಇಳಿದದ್ದು ಸ್ಪಷ್ಟವಾಗುವುದು. ಇಂಗ್ಲಂಡು ತನಗೆ ಜಯ ಖಂಡಿತ ಎಂಬುದಕ್ಕೆ ಈ ಪರಿಸ್ಥಿತಿಯೂ ಸಹಾಯಕವಾದ ಕಾರಣವಾಗಿದೆ.

ಕ. ಸಾ. ಸಮ್ಮೇಳನದ ಪರಂಪರೆಯ ರಕ್ಷಣೆ

ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗುವವರು ಸಾಹಿತ್ಯಿಕರಾಗಿಯೆ ಇರಬೇಕೆಂಬ ಸಂಪ್ರದಾಯ ಮಿಕ್ಕ ಭಾಷಾಪ್ರಾಂತ್ಯ

ಗಳಲ್ಲಿ ಇರಬಹುದು; ಕರ್ನಾಟಕದಲ್ಲಿ ಮಾತ್ರ ಸಂಪ್ರದಾಯವಾಗಿ ಪರಿಣಮಿಸುವಂತೆ, ಅಧ್ಯಕ್ಷಸ್ಥಾನಗಳಿಗೆ ಸಾಹಿತ್ಯಕರಿದ್ದವರ ಆಯ್ಕೆಯೆ ಇದುವರೆಗೆ ಆದಂತಿಲ್ಲ. ದೊಡ್ಡ ಅಧಿಕಾರಸ್ಥಾನದಲ್ಲಿ ಇದ್ದವರೆಂದು ಕೆಲವರು ಅಧ್ಯಕ್ಷರಾಗಿ ಬಂದರು. ಕರ್ನಾಟಕದ ಏಳಿಗೆಯ ಬಗೆಗೆ ಕಾರ್ಯಮಾಡಿದವರೆಂದು ಇನ್ನು ಕೆಲವರು ಅಧ್ಯಕ್ಷರಾದರು. 'ಈ ಸಲ ಈ ಜಾತಿಯವರನ್ನು ಆರಿಸಬೇಕು' ಎಂಬ ಭಾವನೆಯ ಮೂಲಕ ಮತ್ತೆ ಕೆಲವರು ಅಧ್ಯಕ್ಷಸ್ಥಾನ ಏರಿದರು. ಪರಿಷತ್ತಿನ ಕಾರ್ಯದರ್ಶಿಗಳಾಗಿ ಬಹುಕಾಲ ಕಾರ್ಯ ಮಾಡಿದವರೂ ಅಧ್ಯಕ್ಷರಾದರು. ಬಹಳ ದಿನ ವರ್ತಮಾನಪತ್ರ ನಡೆಯಿಸಿದವರೆಂಬ ಪ್ರಶಸ್ತಿಯಿಂದಲೂ ಅಧ್ಯಕ್ಷಪದವಿ ಪಡೆದರು. ಕಳೆದ ೨೪ ವರ್ಷಗಳ ಸಮ್ಮೇಳನಗಳ ಇತಿಹಾಸ ನೋಡುತ್ತ ಬಂದರೆ, ಕೇವಲ ಸಾಹಿತ್ಯಕರು ಎಂಬ ಭಾವನೆಯಿಂದ ಅಧ್ಯಕ್ಷ ಸ್ಥಾನದ ಸನ್ಮಾನ ಪಡೆದವರು ಇಬ್ಬರೊ, ಮೂವರೊ! ಈ ೨೪ ವರ್ಷದ ಪರಂಪರೆಯೆ ಈ ವರ್ಷದ ಅಧ್ಯಕ್ಷರ ಆಯ್ಕೆಯಲ್ಲಿಯೂ ನಡೆದಿದೆ ಹೊರತು, ಈ ಸಲವೇನಾದರೂ ವಿಶೇಷರೀತಿಯಲ್ಲಿ—ಗಾಬರಿಗೊಳ್ಳುವಂತಹ ಬಗೆಯಲ್ಲಿ—ಅಧ್ಯಕ್ಷರ ಆಯ್ಕೆಯೇನೂ ಆಗಿಲ್ಲವೆಂದು ನಮಗೆ ಎನಿಸುತ್ತದೆ. ಈ ಸಲದ ಅಧ್ಯಕ್ಷರ ಆಯ್ಕೆಯ ವಿಚಾರದಲ್ಲಿ, ಸಾಹಿತ್ಯ ಸಮ್ಮೇಳನದ ೨೪ ವರ್ಷಗಳ ಚರಿತ್ರೆಯೆ ಸರಿಯಾದ ಸಮಾಧಾನ ಹೇಳುತ್ತಿರುವಾಗ, ಯಾರು ಆಸಮಾಧಾನವನ್ನು ಏತಕ್ಕಾಗಿ ಪಡಬೇಕು?

ದಾರಿ ಬದಲಾಗಬೇಕು!

ಇದುವರೆಗೆ ನಮ್ಮ ಸಾಹಿತ್ಯಪರಿಷತ್ತಿನ ಕಾರ್ಯ ಒಂದು ವಿಶೇಷ ಬಗೆಯದಾಗಿದ್ದಿತು. ಕನ್ನಡ ಸಾಹಿತ್ಯನಿರ್ಮಿತಿಯ ಕಾರ್ಯಕ್ಕಿಂತ ಹೆಚ್ಚಾಗಿ ಕನ್ನಡಭಾಷೆಯ ಸಂರಕ್ಷಣೆಯ ಹೊಣೆಯನ್ನು ಹೊತ್ತು ಅದು ಹೆಚ್ಚಾಗಿ ಕೆಲಸಮಾಡಬೇಕಾಗಿದ್ದಿತು. ಸಂರಕ್ಷಣೆಯ ಕೆಲಸ ಎಂದೊಡನೆ ಅದಕ್ಕೊಂದು ರಾಜಕಾರ್ಯದ ಸ್ವರೂಪವೆ ಬಂದುಬಿಡುವುದು. ಎಂತಲೆ ಇದುವರೆಗೂ ಕ. ಸಾ. ಪರಿಷತ್ತು ಒಂದುಬಗೆಯ ರಾಜಕಾರ್ಯದ ಧೋರಣೆಯನ್ನು ಇಟ್ಟುಕೊಂಡೇ ಸಾಹಿತ್ಯದ ಚಟುವಟಿಕೆ ನಡೆಯಿಸಿದ್ದಿತೆಂದು ಹೇಳಬಹುದು. ಎಂತಲೇ ಅದು ಇದುವರೆಗಿನ ಅಧ್ಯಕ್ಷಸ್ಥಾನದ ಮರ್ಯಾದೆಯನ್ನು ಸರಕಾರಿ ಅಧಿಕಾರಿಗಳಿಗೆ ಕೊಟ್ಟಿತು; ಬೇರೆ ಬೇರೆ ಸಮಾಜದ ಮುಂದಾಳುಗಳಿಗೆ ಕೊಟ್ಟಿತು; ರಾಷ್ಟ್ರೀಯ ಸಭೆಯ ಅಡಳಿತವಿರುವಾಗ ಅದರ ಪ್ರತಿನಿಧಿಗೂ ಮನ್ನಣೆ ಸಲ್ಲಿಸಿತು; ಕನ್ನಡನಾಡಿನ ಆ ಭಾಗದವರು ಈ ಭಾಗದವರು ಎಂಬ ಭಾವನೆಯಿಂದಲೂ ಅಧ್ಯಕ್ಷರನ್ನು ಆರಿಸಿತು. ಪರಿಷತ್ತು ಇದುವರೆಗೆ ಅನುಸರಿಸಿದ ರಾಜಕಾರ್ಯವೇನೊ ಸಂದರ್ಭಕ್ಕೆ ಉಚಿತವಾಗಿಯೆ ಇದ್ದಿತೆಂದು ಯಾರೂ ಹೇಳಬಹುದು. ಈಗ ನಾಡು ಜಾಗೃತವಾಗಿದೆ. ಕನ್ನಡನುಡಿಯ ಸಂರಕ್ಷಣೆಯ ಹೊಣೆಯನ್ನು ಕೆ.ಪಿ.ಸಿ.ಸಿ., ಕರ್ನಾಟಕ ಏಕೀಕರಣ ಸಂಘ, ಅಲ್ಲಲ್ಲಿಯ ಕರ್ನಾಟಕ ಸಂಘಗಳು, ಬೇರೆ ಬೇರೆ ಪ್ರಮುಖ ವ್ಯಕ್ತಿಗಳು ಇವರೆಲ್ಲ ಹೊತ್ತುನಿಂತಿದ್ದಾರೆ. ಪರಿಷತ್ತು ಮೊದಲಿನಂತೆ ಈಗ ಕನ್ನಡ

WANTED

Capable Agents and Dealers for very useful product on handsome commission

○ *Write for :* ○

FREE samplas and particulars.

ಸ್ಯಾಂಪಲ್ ಪುಕ್ಕಟೆ

ಸರ್ವರಿಗೂ ಬೇಕಾಗುವ ಹೊಸ ವಸ್ತು

● **ಬಿಲಾಸವನ್ನು** ●

ಮಾರಲಿಕ್ಕೆ ಉತ್ಸಾಹಿ ಏಜಂಟರು ಬೇಕು. ಸ್ಯಾಂಪಲ್ ಮತ್ತು ಮಾಹಿತಿಯ ಸಲುವಾಗಿ ಕೂಡಲೆ ಬರೆಯಿರಿ. ಹಣ ಸಂಪಾದಿಸುವ ಸಂಧಿಯನ್ನು ಕಳೆದುಕೊಳ್ಳಬೇಡಿರಿ!

K. V. Hegde, & Co., (J)
Dwijvihar, Mangalwadi, BOMBAY 2.

ನುಡಿಯ ಸಂರಕ್ಷಣೆಯನ್ನು ಕುರಿತು ಹೆಚ್ಚಿನ ಕೆಲಸಮಾಡಬೇಕಾಗಿಲ್ಲ. ಅದು ರಭಸದಿಂದ ಇಂದು ಮುಂದುವರಿಸಬೇಕಾಗಿರುವ ಹೆಚ್ಚಿನ ಕೆಲಸವೆಂದರೆ ಕನ್ನಡ ಸಾಹಿತ್ಯದ ನಿರ್ಮಿತಿ, ಪ್ರಚಾರ, ಪ್ರಸಾರ. ಅದರಂತೆಯೆ ಸಾಹಿತ್ಯದಲ್ಲಿ ಸದಭಿರುಚಿ, ಸಂಯಮ, ಸ್ವಾತಂತ್ರ್ಯಗಳು ನೆಲೆಗೊಳ್ಳುವುದನ್ನು ಕುರಿತ ಚರ್ಚೆ-ಚಟುವಟಿಕೆಗಳು. ಆದುದರಿಂದ ಪರಿಷತ್ತು ನೆರೆಯಿಸಬೇಕಾದ ಸಾಹಿತ್ಯ ಸಮ್ಮೇಳನಗಳು ಇನ್ನು ಮೇಲೆ, ಈ ಮೊದಲಿನ ಕೇವಲ ರಾಜಕೀಯ ಸಭೆಗಳಂತಹವಾಗದೆ ನಿಜವಾದ ಸಾಹಿತ್ಯ ಸಮ್ಮೇಳನಗಳಾಗಬೇಕು. ಅಂತಹ ಸಮ್ಮೇಳನಗಳಿಗೆ ಆರಿಸಬೇಕಾದ ಅಧ್ಯಕ್ಷರು ಸರ್ವಜನಮಾನ್ಯರಾದ ಸಾಹಿತ್ಯಕರೆ ಇರಬೇಕು. ಸಾಹಿತ್ಯಸಮ್ಮೇಳನವೂ ಒಂದು ಏಕೀಕರಣ ಸಭೆಯಂತಹ ಸಭೆಯೆಂಬ ಭಾವನೆ ಇನ್ನು ಹೋಗಬೇಕು. ಅಲ್ಲಿ ಗೊತ್ತುಪಡಿಸುವ ನಿರ್ಣಯಗಳ ರೀತಿ ಇನ್ನು ಬೇರೆಯ ದಾರಿಯನ್ನು ಹಿಡಿಯಬೇಕು.

ಅಧ್ಯಕ್ಷರ ಆಯ್ಕೆ ಹೇಗಾಗಬೇಕು?

ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರನ್ನು ಆರಿಸುವುದರ ಬಗೆಗೆ ಈಗ ಇರುವ ಕ. ಸಾ. ಪರಿಷತ್ತಿನ ನಿಯಮಾವಳಿಯು ಏಷ್ಟೊಂದು ನಿರ್ದೋಷವಾದುದಿಲ್ಲವೆಂದು ವಿಷಾದದಿಂದ ಹೇಳಬೇಕಾಗುತ್ತಲಿದೆ. ಈಗಿರುವ ನಿಯಮದಂತೆ ಎಲ್ಲ ಪ್ರಾಂತಸಮಿತಿಗಳೂ, ಪರಿಷತ್ತಿನ ಕಾರ್ಯಸಮಿತಿಯೂ, ಸಮ್ಮೇಳನದ ಸ್ವಾಗತಸಮಿತಿಯೂ ಅಧ್ಯಕ್ಷ ಸ್ಥಾನಕ್ಕೆಂದು ಎರಡೆರಡು ಹೆಸರುಗಳನ್ನು ಸೂಚಿಸಬೇಕು. ಎಲ್ಲ ಹೆಸರುಗಳೂ ಬಂದಮೇಲೆ, ಬ್ಯಾಲೆಟ್ ಪದ್ಧತಿಯಂತೆ ಪರಿಷತ್ತಿನ ಎಲ್ಲ ಸದಸ್ಯರಿಂದಲೂ ಒಬ್ಬ ಅಧ್ಯಕ್ಷರನ್ನಾರಿಸುವಂತೆ ಮತಗಳನ್ನು ಕಾರ್ಯಸಮಿತಿಯವರು ಕೇಳುವರು. ಎಲ್ಲ ಮತಗಳೂ ಬಂದ ಮೇಲೆ ಬಹುಮತದ ಅನುಕ್ರಮದಂತೆ, ಕಾರ್ಯಸಮಿತಿಯವರು ಎಲ್ಲರಿಗಿಂತ ಹೆಚ್ಚು ಮತ ಪಡೆದವರನ್ನು ಅಧ್ಯಕ್ಷರಾಗಲು ಸಮ್ಮತಿ ಕೇಳುವರು. ಅವರು ಒಪ್ಪಿದರೆ ಸರಿ; ಒಪ್ಪದಿದ್ದಲ್ಲಿ ಅವರಿಂದ



ಕೆಳಗಿನ ಕ್ರಮಸಂಖ್ಯೆಯವರನ್ನು ಕೇಳುವರು. ಅವರೂ ಒಪ್ಪದಿದ್ದರೆ ಸರಿ, ಮುಂದೆ ಮೂರನೆಯವರು; ಅವರೂ ಒಪ್ಪದಿದ್ದರೆ ನಾಲ್ಕನೆಯವರು. ಹೀಗೆ ಅಧ್ಯಕ್ಷರನ್ನು ಆರಿಸುವ ರೀತಿಯಿದೆ. ಹೀಗಾಗುವುದರಿಂದ ಬಹುಜನರು ನಿರಾಶರಾಗುವ ಸಂಭವ ಹೆಚ್ಚು. ಒಬ್ಬೊಬ್ಬ ಸದಸ್ಯನಿಗೂ ಒಂದೊಂದೇ ಮತಗಳಿರುವುದರಿಂದ, ಒಂದು ಮತಕೊಟ್ಟು ಕೈಮುಚ್ಚಿ ಕುಳಿತುಕೊಳ್ಳಬೇಕಾಗುವುದು. 'ಅವರು ಒಪ್ಪದಿದ್ದರೆ ಎರಡನೆಯವರನ್ನಾಗಿ ಇವರನ್ನು ಕೇಳಬೇಕು, ಮೂರನೆಯವರನ್ನಾಗಿ ಇವರನ್ನು ಕೇಳಬೇಕು' ಎಂದು ಹೇಳುವ ಹಕ್ಕು ಮತದಾರರಿಗಿಲ್ಲವೆ ಇಲ್ಲ. ಬಹುಮತದಿಂದ ಆಯ್ಕೆ ಹೊಂದಿದವರು ಒಪ್ಪದೆ ಹೋದರೆ—ಈಗಿರುವ ಪದ್ಧತಿಯಂತೆ—ಇನ್ನೊಬ್ಬರನ್ನು ಕೇಳಿ ಒಪ್ಪಿಸುವುದೆಂದರೆ ಅವರು ಬಹುಮತದಿಂದ ಆಯ್ಕೆ ಹೊಂದಿದಂತೇನೂ ಆಗುವುದಿಲ್ಲ. ಸಾಹಿತ್ಯ ಸಮ್ಮೇಳನದ ಆಯ್ಕೆಗೆ ಬಹುಜನಮತಪದ್ಧತಿ ಇರಬೇಕೇ ಎಂಬುದು ಚರ್ಚೆಯ ವಿಷಯ. ಈಗಿದೆಯೆಂದಮೇಲೆ ಅದನ್ನಾದರೂ ನಾವು ನಿರ್ದುಷ್ಟ ರೀತಿಯಿಂದ ನಡೆಯಿಸಬೇಕಲ್ಲವೆ? ಹಾಗಾಗಾಗ ಬೇಕಾದರೆ ಈಗಿದ್ದ ನಿಯಮದಲ್ಲಿ ಸ್ವಲ್ಪ ಹೆಚ್ಚುಕಡಿಮೆ ಯಾಗಬೇಕಾದುದು ತುಂಬ ಅವಶ್ಯಕ. ಆ ಹೆಚ್ಚುಕಡಿಮೆ ಹೇಗಿರಬೇಕೆಂದರೆ :—

ಈಗಿನಂತೆ ಪ್ರಾಂತಸಮಿತಿಗಳೂ ಕಾರ್ಯಸಮಿತಿ-ಸ್ವಾಗತ ಸಮಿತಿಗಳೂ ಎರಡೆರಡು ಹೆಸರುಗಳನ್ನು ಸೂಚಿಸಿದ ಮೇಲೆ, ಒಮ್ಮೆಲೆ ಆ ಹೆಸರುಗಳನ್ನು ಮತಗಳಿಗೆ ಹಾಕುವುದಕ್ಕಿಂತ, ಕಾರ್ಯ ಸಮಿತಿಯವರು ಮೊದಲೆ ಆ ಮಹನೀಯರಿಗೆಲ್ಲ ಕಾಗದ ಬರೆದು ಸಮ್ಮತಿ-ಅಸಮ್ಮತಿಗಳನ್ನು ಕೇಳಿಕೊಳ್ಳಬೇಕು; ಬಳಿಕ ಅಸಮ್ಮತಿಸಿದವರ ಹೆಸರುಗಳನ್ನು ಒಟ್ಟು ಪಟ್ಟಿಯಿಂದ ತೆಗೆದು ಹಾಕಿ ಮಿಕ್ಕ ಮಹನೀಯರ ಬಗೆಗಷ್ಟೇ ಮತ ಕೇಳಬೇಕು. ಹೀಗೆ ಮಾಡುವುದರಿಂದ ಈಗಿನಂತೆ ಬಹುಜನ ಮತದ ಅವಹೇಲನೆ ಆಗುವ ಸಂಭವವಿಲ್ಲ. ಈ ಸಲ ಸೇರಿದ ಪರಿಷತ್ತಿನ ಸಾಮಾನ್ಯ ಸಭೆಯಲ್ಲಿ ಇದರ ಬಗೆಗೆ ವಿಚಾರವಾಗಬೇಕೆಂದು ನಮ್ಮ ಅಭಿಪ್ರಾಯ.

ರೇಡಿಯೊ ಮತ್ತು ಕರ್ನಾಟಕ

ಅಖಿಲಭಾರತ ಆಕಾಶವಾಣಿ (ರೇಡಿಯೊ) ಇಲಾಖೆಯವರು ಕನ್ನಡಕ್ಕೆ ಮಾಡಿರುವ ಮಾಡುತ್ತಿರುವ ಅವಮಾನವು ಸಹಿಸದಷ್ಟಾಯಿತು. ನೇಪಾಳಿ, ಪರಾಣಿ ಮೊದಲಾದ ಮುಷ್ಟಿತುಂಬ ಜನರ ಭಾಷೆಗೆ ರೇಡಿಯೋದಲ್ಲಿ ಸ್ಥಾನವಿದೆ. ಆದರೆ ಒಂದುವರೆ ಕೋಟಿ ಜನರ ಬಳಕೆಯಲ್ಲಿರುವ, ಎರಡು ಸಾವಿರ ವರ್ಷಗಳ ಇತಿಹಾಸವಿರುವ, ಪ್ರಾಚೀನ ಅರ್ವಾಚೀನ ಸಾಹಿತ್ಯ ಸುಸಂಪನ್ನತೆಯಿಂದ ಕೂಡಿದ ಕನ್ನಡವೂ ಅದನ್ನು ಬಳಸುವ ಕನ್ನಡಿಗರೂ ರೇಡಿಯೋ ಅಧಿಕಾರಿಗಳ ಲೆಕ್ಕದಲ್ಲಿಯೆ ಇಲ್ಲದಂತಾಗಿದ್ದಾರೆ. ಇದುವರೆಗೆ ರೇಡಿಯೊದಲ್ಲಿ ಕನ್ನಡಕ್ಕೆ ತಕ್ಕ ಸ್ಥಾನ-ಮಾನಗಳು ದೊರೆಯುವಂತೆ ಕನ್ನಡಿಗರು ವಿಧಾಯಕರೀತಿಯಿಂದ ಹಲವು ಪ್ರಯತ್ನಗಳನ್ನು ಮಾಡಿದರು. ವೃತ್ತಪತ್ರಗಳಲ್ಲಿ ಲೇಖನ ಬರೆದಾಯಿತು; ಸಭೆ-ಸಮ್ಮೇಳನ, ಸ್ಥಳೀಯಸಂಸ್ಥೆಗಳಲ್ಲಿ ಗೊತ್ತುವಳಿಗಳನ್ನು ಮಾಡಿ ಆಯಿತು; ಅಲ್ಲಲ್ಲಿ ಶಿಷ್ಟಮಂಡಲಿಗಳನ್ನು ಕಳುಹಿಸಿ ಆಯಿತು. ಮುಂಬಯಿ ಗವರ್ನರರು ಈ ಭಾಗಕ್ಕೆ ಬಂದಾಗ ಕೆಲವು ಅಧಿಕೃತ ಮುಂದಾಳುಗಳಿಂದ ಅವರಿಗೆ ಪ್ರತ್ಯಕ್ಷವಾಗಿ ಹೇಳಿಸಿ ಆಯಿತು. ಆದರೆ ಎಲ್ಲವೂ ಹೊಳೆಯಲ್ಲಿ ತೊಳೆದ ಹುಣಿಸೆ ಹಣ್ಣು. ಪ್ರತ್ಯಕ್ಷ ಮಾತನಾಡುವಾಗ ಸಹಾನುಭೂತಿಯ ಸಕ್ಕರೆಯ ಮಳೆ ಸುರಿಸಲಾಗುತ್ತದೆ; ಕೃತಿಯಲ್ಲಿ ಮಾತ್ರ ಕನ್ನಡಿಗರ ಕೈಯಲ್ಲಿ ಜುರುಮರಿ ಕೊಡುವುದೇ ನಡೆದಿದೆ. ಇದು ಕನ್ನಡಿಗರೆಲ್ಲರಿಗೂ ಸಾಮೂಹಿಕರೀತಿಯಿಂದ ರೇಡಿಯೊ ಇಲಾಖೆಯವರು ಮಾಡುತ್ತಿರುವ ಅಪಮಾನ. ಈ ಅಪಮಾನ ಕ್ಷುದ್ರವಾದುದೆಂದು ಭಾವಿಸಿ ಕರ್ನಾಟಕ ಉದಾಸೀನ ಮಾಡುತ್ತ ನಡೆದರೆ ಇಂತಹ ಇನ್ನೂ ಎಷ್ಟೆಷ್ಟೊ ಹಕ್ಕುಗಳನ್ನು ಕನ್ನಡಿಗರು ಕಳೆದುಕೊಳ್ಳುವ ಸಂದರ್ಭ ಬಾರದೆ ಇರದು. ಇನ್ನೊಮ್ಮೆ ಇದರ ಬಗೆಗೆ ಕೂನೆಯದಾಗಿ ಸಾಮೋಪಾಯದಿಂದ ಪ್ರಯತ್ನಮಾಡಿ, ಆದರಿಂದ ಫಲವಾಗದಿದ್ದಲ್ಲಿ ಕನ್ನಡಿಗರೆಲ್ಲರೂ ರೇಡಿಯೊ ಇಲಾಖೆಯ ಕೂಡ ಅಸಹಕಾರವನ್ನಾರಂಭಿಸುವ ತೀಕ್ಷ್ಣೋಪಾಯವನ್ನು ಕೈಕೊಳ್ಳಬೇಕು. ರೇಡಿಯೊ ಅಧಿಕಾರಿಗಳಿಗೆ ಕನ್ನಡಿಗರ ಅಸ್ತಿತ್ವ ಜೆನ್ನಾಗಿ ಅವಗತವಾಗಬೇಕಾದರೆ ಹಾಗೆ ಮಾಡಿದ ಹೊರತು ಬೇರೆ ಗತಿಯಿಲ್ಲ.

ಅಭಿನಂದನೆಗಳು

★

ಡಾ. ಬಿಂದುಮಾಧವ ಕಮಲಾಪುರ ಎಂ. ಡಿ.

ಇವರು ಧಾರವಾಡದಲ್ಲಿ ಉಷ್ಟೇ ಅಲ್ಲ, ಉತ್ತರ ಕರ್ನಾಟಕದಲ್ಲೆಲ್ಲ ಸರ್ವಶ್ರುತವಾದ ಕಮಲಾಪುರ ಕುಟುಂಬಕ್ಕೆ ಸೇರಿದವರು, ನಿವೃತ್ತ ಮಾಮಲೇದಾರರಾದ ಶ್ರೀ ಮಾನ್ ಕಮಲಾಪುರ ಹನುಮಂತರಾಯರ ಏಕಮಾತ್ರ ಪುತ್ರರು. ಇವರು ಹುಟ್ಟಿದೂರು ಬೆಳಗಾಂವಿಯಾದರೂ ಬಳಿದು ಪ್ರಾಥಮಿಕ ಮಾಧ್ಯಮಿಕ ಶಿಕ್ಷಣ ಪಡೆದದ್ದು ಧಾರವಾಡದಲ್ಲಿ. ಕಾಲೇಜಿನ ಶಿಕ್ಷಣವು ಕೂಡ ಇಂಟರ್ ಸೈನ್ಸ್ ವರೆಗೆ ಧಾರವಾಡದಲ್ಲಿಯೆ ಆಯಿತು. ಆಮೇಲೆ ಮುಂಬಯಿಯ ಗ್ರ್ಯಾಂಟ್ ಮೆಡಿಕಲ್ ಕಾಲೇಜಿಗೆ ಸೇರಿ, ೧೯೩೭ ನೆಯ ಇಸ್ವಿಯಲ್ಲಿ ಎಂ. ಬಿ. ಬಿ. ಎಸ್. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಮುಂದೆ ಎರಡು ವರ್ಷ ಜೆ. ಜೆ. ಹಾಸ್ಪಿಟಲಿನಲ್ಲಿ 'ಹೌಸ್ ಫಿಜೀಸಿಯನ್' ಆಗಿದ್ದು, ಅಲ್ಲಿಯೆ ಪ್ರಸೂತಿ ವಿಜ್ಞಾನದ ಅಧ್ಯಯನಮಾಡಿ, ಎಂ. ಡಿ. ಪರೀಕ್ಷೆಯಲ್ಲಿ ಇದೇ ವರ್ಷ ತೇರ್ಗಡೆಹೊಂದಿದ್ದಾರೆ. ಇವರು ಹದಿನಾರಾಣೆ ಕನ್ನಡದ ಅಭಿಮಾನಿಗಳು. ಧಾರವಾಡದಲ್ಲಿಯೆ ಇವರು ವಾಸಿಸಿ, ಇಲ್ಲಿಯೆ ವೈದ್ಯಶಾಲೆಯನ್ನು ಪ್ರಾರಂಭಿಸಲಿರುವುದರಿಂದ, ಧಾರವಾಡದ ಕನ್ನಡ ಜಟುಪಟಿಕೆಗೊಂದು ಹೊಸ ತರುಣಜೈತ್ರಸ್ಯದ ಸಹಕಾರ ದೊರೆತಂತಾಯಿತು. ಮುಂಬಯಿ ವಿ. ವಿ. ನಿಲಯದಲ್ಲಿ, ಉತ್ತರಕರ್ನಾಟಕದಿಂದ ಎಂ. ಡಿ. ಪದವಿ ಪಡೆದ ಕನ್ನಡಿಗರಲ್ಲಿ ಶ್ರೀ. ಬಿಂದುಮಾಧವರೆ ಮೊದಲನೆಯವರು. ಅವರಿಗೆ ನಮ್ಮ ಅಭಿಮಾನ-ವಿಶ್ವಾಸಗಳ ಅಭಿನಂದನೆಗಳು.

ದೀಪಾವಳಿ ಸಂಚಿಕೆ!

★

ಜಯಂತಿಯ ಸರ್ವಾಂಗಸುಂದರವಾದ ದೀಪಾವಳಿ ಸಂಚಿಕೆಯ ಪ್ರತಿಗಳು ತೀರ ಸ್ವಲ್ಪ ಉಳಿದಿವೆ. ಬೇಕಾದವರು ೦-೬-೬ಗಳ ಅಂಚೆಯ ಟಿಕೀಟು ಕಳಿಸಿ ತರಿಸಿ ಕೊಳ್ಳಬೇಕು.

ಕರ್ನಾಟಕದ ವಿವಿಧಭಾಗದ ಸುಪ್ರಸಿದ್ಧ ಲೇಖಕರ ಸ್ವಾರಸ್ಯಪೂರ್ಣವಾದ ಲೇಖನಗಳಿಂದಿದು ತುಂಬಿ ತುಂಬಿ ತುಳುಕುತ್ತಲಿದೆ.

ಬೇಕಾದವರು ಬೇಗನೆ ಕಾಗದ ಬರೆಯಿರಿ!

ವ್ಯವಸ್ಥಾಪಕರು ಜಯಂತಿ ಧಾರವಾಡ.

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾ ರ ವಾ ಡ.

★ ನಿಮ್ಮ ಮೂಡುವ ಅನುಕೂಲವುಳ್ಳ ಕರ್ನಾಟಕಸ್ಥರು ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಪೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಲಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡನಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲಿ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು:— ಎಮ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWAR.

TRADE MARK

ಜೋಧಚಿಹ್ನ

ಧೂತಪಾಪೇಶ್ವರ ★ ★ ಅರವಿಂದಾಸವ



ಚಿಕ್ಕಮಕ್ಕಳ ವಿಕಾರಗಳ ಮೇಲೆ ರತ್ನದಂತಹ ಔಷಧ!

ಕಡಿಗೇಡಿ ಮುಕ್ಕಳಿಂದ ತಾಯಿತಂದೆಗಳ ಆನಂದ ಹೆಚ್ಚುವುದು.
ಮನೆಯಲ್ಲಿ ಸುಖ-ಶೃಂಗಾರ ನೆಲೆಗೊಳ್ಳುವುದು.
ಮುಕ್ಕಳ ತುಂಟತನ ಅವರ ಆರೋಗ್ಯದ ಸ್ಪಷ್ಟಚಿಹ್ನ;

ಆದುದರಿಂದ

ನಿಮ್ಮ ಮುಕ್ಕಳ ಆರೋಗ್ಯ ಚೆನ್ನಾಗಿರಬೇಕಾದಲ್ಲಿ

ಅರವಿಂದಾಸವವನ್ನು ಕೊಡಿರಿ!

ಶ್ರೀಧೂತಪಾಪೇಶ್ವರ ಪನವೇಲ, ಲಿಮಿಟೆಡ್
ಪನವೇಲ–ಕುಲಾಬಾ.

ಎಲ್ಲಾ ಏಜಂಟರಲ್ಲಿಯೂ ಸ್ವಾಕಿಸ್ಟರಲ್ಲಿಯೂ ದೊರೆಯುವುದು.

Printed by V. Y. Jathar, B. Sc. Karnatak Printing Works, Dwr. Edited and published by M. G. Patil at Jayanti Office Dharwar